# ಸಾರ-ವಿಸ್ತಾರ

ಕನ್ನಡ ವಿಶ್ವವಿದ್ಯಾಲಯದ

ಪ್ರಕಟಣೆಗಳ ವಿವರಣಾತ್ಮಕ ಗ್ರಂಥಸೂಚಿ

೧೯೯೨-೨೦೧೦

**ಡಾ. ಎಚ್. ನಾಗವೇಣಿ**

ಪ್ರಸಾರಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**SAARA-VISTAARA**

**by**
**Dr. H. Nagaveni**
Deputy Librarian
Kannada University, Hampi

*Published by*
**Dr. A. Subbanna Rai**
Director, Prasaranga
Kannada University, Hampi
Vidyaranya-583 276

Pages: x+೩೮೦, Rs. 100/-

First Impression: 2011

www. kavihampi.org

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

*ಪ್ರಕಾಶನ*
**ಡಾ. ಎ. ಸುಬ್ಬಣ್ಣ ರೈ**
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

**ಬೆಲೆ ರೂ. ೦೦/-**

ಮುಖಪುಟ : **ಬಿ. ಸುಜ್ಞಾನಮೂರ್ತಿ**

**ಡಿ.ಟಿ.ಪಿ.**
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಮುದ್ರಣ**
ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

# ಶಬ್ದ ಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. *ಈ* ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' *ಈ* ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ *ಈ* ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ *ಈ* ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ *ಈ* ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ *ಈ* ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನೇಳು ವರ್ಷಗಳಿಂದ *ಈ* ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

*ಈ* ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

# ನನ್ನ ಮಾತು

ಕನ್ನಡ ಮನಸ್ಸುಗಳ ಕನಸಿನ ಕೂಸಾದ ಕನ್ನಡ ವಿಶ್ವವಿದ್ಯಾಲಯವು, ಕನ್ನಡದ ವಿವಿಧ ಕ್ಷೇತ್ರಗಳ ವಿದ್ವಾಂಸರ ಸಲಹೆ, ಸಹಕಾರ, ಮಾರ್ಗದರ್ಶನಗಳ ಬಲದಿಂದ ತನ್ನ ಬಾಲ್ಯಾವಸ್ಥೆ, ಕಿಶೋರಾವಸ್ಥೆಯನ್ನು ಆರೋಗ್ಯಪೂರ್ಣ ಹಾಗೂ ಅರ್ಥಪೂರ್ಣವಾಗಿ ಕಳೆದು ಇದೀಗ... ೧೮ರ ಹರೆಯದ ಷೋಡಶಿಯ ಪ್ರೌಢತೆಯಲ್ಲಿ ಚೈತನ್ಯ ತುಂಬಿ ನಿಂತಿರುವ ಹೊತ್ತು.

*ಈ* ಹದಿನೆಂಟು ವರ್ಷಗಳ ಅವಧಿಯಲ್ಲಿ ಕನ್ನಡ ವಿಶ್ವವಿದ್ಯಾಲಯವು, ಕನ್ನಡ ಜನಾಂಗದ ಚಿಂತನಾಶಕ್ತಿಯನ್ನು ಮತ್ತು ತನ್ನ ಅಧ್ಯಾಪಕರ ಬೌದ್ಧಿಕ ಶಕ್ತಿಯನ್ನು ಪುಸ್ತಕ ಶಕ್ತಿಯನ್ನಾಗಿ ಮಾರ್ಪಡಿಸಿ, ಕನ್ನಡದ ನೆಲ, ಜಲ, ನುಡಿ, ಕಲೆ, ಸಂಸ್ಕೃತಿ, ಸಾಹಿತ್ಯ, ರಾಜಕೀಯ, ಆರ್ಥಿಕತೆ, ಕೃಷಿ, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ... ಇತ್ಯಾದಿ ಹಲವು ಜ್ಞಾನಶಿಸ್ತುಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಮಹತ್ವಪೂರ್ಣ ಕೃತಿಗಳನ್ನು ಹೊರತಂದಿದೆ.

ಕನ್ನಡ ವಿಶ್ವವಿದ್ಯಾಲಯವು ತನ್ನ ಬೌದ್ಧಿಕ ಸಾಧನೆ ಮತ್ತು ಪುಸ್ತಕ ಸಂಸ್ಕೃತಿ-ಪುಸ್ತಕ ಪ್ರೀತಿಯ ದ್ಯೋತಕವಾಗಿ ಹೊರತಂದಿರುವ *ಈ* ವೈವಿಧ್ಯಮಯ ಕೃತಿಗಳ ಹೂರಣವನ್ನು ಸಮಸ್ತ ಕನ್ನಡಿಗರಿಗೆ ಪರಿಚಯಾತ್ಮಕವಾಗಿ ತಿಳಿಸಬೇಕೆನ್ನುವ ಇರಾದೆ ನಮಗೆ ಒಂದೆಡೆ. ಹಾಗೆಯೇ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನದ ತುರ್ತು ಇರುವ ಇಂದಿನ *ಈ* ಸಂದರ್ಭದಲ್ಲಿ, ಇಂತಹ ಅಧ್ಯಯನದಲ್ಲಿ ತೊಡಗಿರುವವರಿಗೆಲ್ಲ *ಈ* ಮಹತ್ವದ ಕೃತಿಗಳು ಪರಿಣಾಮಕಾರಿಯಾಗಿ ಉಪಯುಕ್ತವಾಗಬೇಕು ಎಂಬ ಮಹತ್ತರವಾದ ಉದ್ದೇಶ ಇನ್ನೊಂದೆಡೆ. *ಈ* ಮುಖ್ಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನೆಂಟು ವರ್ಷಗಳಿಂದ ಪ್ರಕಟಿಸಿರುವ ಎಲ್ಲ ಕೃತಿಗಳ ತಿರುಳನ್ನಷ್ಟೇ ಜೋಪಾನವಾಗಿ ಆಯ್ದು, ಪರಿವಿಡಿಯ ಜೊತೆಗೆ ವಿವರಣಾತ್ಮಕ ಗ್ರಂಥಸೂಚಿ 'ಸಾರ-ವಿಸ್ತಾರ'ವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಪ್ರತೀ ಕೃತಿಗೆ ಪರಿವಿಡಿಯನ್ನು ದಾಖಲಿಸುವಾಗ, ಎಲ್ಲಾ ಗ್ರಂಥಸೂಚಿಗಳಿಗೂ ಇರಬೇಕಾದ ಶಿಸ್ತನ್ನು ಇಲ್ಲಿಯೂ ಅಳವಡಿಸಿಕೊಳ್ಳಲಾಗಿದೆ. *ಈ* ಹಿನ್ನೆಲೆಯಲ್ಲಿ ೧೦ಕ್ಕಿಂತ ಹೆಚ್ಚು ಪರಿವಿಡಿಯುಳ್ಳ ಕೃತಿಗಳ ಪರಿವಿಡಿಗಳನ್ನು ಇಲ್ಲಿ ದಾಖಲಿಸುವ ಸಂದರ್ಭದಲ್ಲಿ ಕೃತಿಯ ಹೂರಣ ಸೋರಿಹೋಗದಂತೆ ಸೂಕ್ಷ್ಮವಾಗಿ ಪರಿಷ್ಕರಿಸಿ ೧೦ ಪರಿವಿಡಿಗಳನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ. ಹಾಗೆಯೇ ೪೦ ಪುಟಗಳಿಗಿಂತ ಕಮ್ಮಿ ಪುಟಗಳಿರುವ ಮಂಟಪಮಾಲೆ, ನವಸಾಕ್ಷರಮಾಲೆ, ನಮ್ಮವರು ಪುಸ್ತಕಮಾಲೆ ಹಾಗೂ ಸ್ವತಃ ಲೇಖಕರಿಂದ ಪರಿವಿಡಿ ನೀಡಲ್ಪಡದ ಪುಸ್ತಕಗಳ ಪರಿವಿಡಿಯನ್ನು *ಈ* ಕೃತಿಯಲ್ಲಿ ದಾಖಲಿಸಿಲ್ಲ.

*ಈ* ‘ಸಾರ-ವಿಸ್ತಾರ’ ಕೃತಿ ಕೇವಲ ಕನ್ನಡ ವಿಶ್ವವಿದ್ಯಾಲಯದ ಪುಸ್ತಕ ಸಂಸ್ಕೃತಿ-ಪುಸ್ತಕ ಪ್ರೀತಿಯನ್ನು ಪ್ರತಿಬಿಂಬಿಸುವ ‘ಪುಟ್ಟ ಕನ್ನಡಿ’ ಮಾತ್ರವೇ ಅಲ್ಲ, ಇದು ಇಡೀಯ ಕನ್ನಡ ಜನಾಂಗದ ಪುಸ್ತಕ ಪ್ರೀತಿ-ಸಂಸ್ಕೃತಿಯ ಪ್ರತೀಕವೂ ಹೌದು.

ಕನ್ನಡ ವಿಶ್ವವಿದ್ಯಾಲಯವು ನವೆಂಬರ್ ೧೯೯೨- ನವೆಂಬರ್ ೨೦೧೦ರ ಕಾಲಾವಧಿಯಲ್ಲಿ ಪ್ರಕಟಿಸಿರುವ ಎಲ್ಲ ಕೃತಿಗಳನ್ನು ಅವುಗಳ ವಿಷಯಗಳಿಗೆ ಅನುಗುಣವಾಗಿ ೪೧ ಜ್ಞಾನಶಿಸ್ತುಗಳನ್ನಾಗಿ *ಈ* ‘ಸಾರ-ವಿಸ್ತಾರ’ದಲ್ಲಿ ವಿಭಾಗಿಸಲಾಗಿದೆ. ಪ್ರತಿಯೊಂದು ಕೃತಿಯ ವಿಷಯ, ವ್ಯಾಪ್ತಿ, ಆಳ-ಹರವನ್ನು ಅಳೆದು ಓದುಗರ ಹಿಡಿತಕ್ಕೆ ಮತ್ತು ಅರಿವಿಗೆ ದಕ್ಕುವಂತೆ ಅದರ ಕೃತಿಸಾರವನ್ನು ಇಲ್ಲಿ ‘ಸಾರ-ವಿಸ್ತಾರ’ದಲ್ಲಿ ಬಳಸಿಕೊಳ್ಳಲಾಗಿದೆ.

*ಈ* ಕೃತಿಯನ್ನು ಸಿದ್ಧಪಡಿಸುವಾಗ ನನಗೆ ಸಹಕರಿಸಿದ ಮನಸ್ಸುಗಳು ಹಲವು. ಪ್ರಥಮವಾಗಿ ನಾನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳಬೇಕಾದುದು ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಮತ್ತು ಕುಲಸಚಿವರಾದ ಪ್ರೊ. ಮಂಜುನಾಥ ಬೇವಿನಕಟ್ಟಿ ಅವರನ್ನು. ಕೃತಿಯ ರಚನಾ ಸಂದರ್ಭದಲ್ಲಿ ನನಗೆ ಸಾಕಷ್ಟು ಸಲಹೆ ನೀಡಿ, ತಿದ್ದಿ ಸಹಕರಿಸಿದ ಹಿಂದಿನ ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯ, ಹಿರಿಯ ಪ್ರಾಧ್ಯಾಪಕರಾದ ಡಾ. ಟಿ.ಆರ್. ಚಂದ್ರಶೇಖರ್, ಡಾ. ರಹಮತ್ ತರೀಕೆರೆ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ ಇವರನ್ನೂ ಅತ್ಯಂತ ಗೌರವಪೂರ್ವಕವಾಗಿ ಇಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ.

*ಈ* ಶ್ರಮದಾಯಕ ಕಾರ್ಯದಲ್ಲಿ ನನ್ನೊಂದಿಗೆ ಅತ್ಯಂತ ಕಾಳಜಿ-ಶ್ರಮ-ಸಹನೆಯಿಂದ ಸಹಕರಿಸಿದ ನನ್ನ ಸಹೋದ್ಯೋಗಿಗಳಾದ ಶ್ರೀ ಬಾಲಚಂದ್ರ ವಿ, ಶ್ರೀ ಎಚ್. ಶರಣಬಸಪ್ಪ, ಕೆ. ಸತ್ಯನಾರಾಯಣ ಹಾಗೂ ಶ್ರೀ ಎಚ್. ಖಾದರ್ ಭಾಷಾ ಇವರನ್ನು *ಈ* ಸಂದರ್ಭದಲ್ಲಿ ಅತ್ಯಂತ ಪ್ರೀತಿಯಿಂದ ಸ್ಮರಿಸಿಕೊಳ್ಳುವುದು ನನ್ನ ಕರ್ತವ್ಯ.

ಹಾಗೆಯೇ *ಈ* ಕೃತಿಗೆ ಒಂದು ಶಿಸ್ತು ಮತ್ತು ಶೃಂಗಾರವನ್ನು ಪ್ರಾಪ್ತಿ ಮಾಡುವಲ್ಲಿ ಸೂಕ್ತ ಸಲಹೆ ನೀಡಿದ ಶ್ರೀ ಬಿ. ಸುಜ್ಞಾನಮೂರ್ತಿ, ಶ್ರೀ ಎಚ್.ಬಿ.ರವೀಂದ್ರ, ಶ್ರೀ ಎಸ್.ಕೆ. ವಿಜಯೇಂದ್ರ, ಶ್ರೀ ಕೆ.ಎಲ್.ರಾಜಶೇಖರ್, ಶ್ರೀ ಎಸ್.ಪೂವಯ್ಯ ಮತ್ತು ಶ್ರೀ ಕೆ.ಕೆ.ಮಕಾಳಿ ಅವರನ್ನೂ *ಈ* ಸಂದರ್ಭದಲ್ಲಿ ಬಹಳ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದೇನೆ.

ಹಾಗೆಯೇ *ಈ* ‘ಸಾರ-ವಿಸ್ತಾರ’ವನ್ನು ಅತ್ಯಂತ ತಾಳ್ಮೆ, ಸಹನೆ, ಜೋಪಾನದಿಂದ ಡಿ.ಟಿ.ಪಿ ಯಲ್ಲಿ ಹೆಣೆದುಕೊಟ್ಟ ಕಿರಿಯ ಗೆಳೆಯ ಜೆ. ಶಿವಕುಮಾರ ಅವರಿಗೂ ನನ್ನ ಪ್ರೀತಿಯ ಕೃತಜ್ಞತೆಗಳು.

**೧೦.೧೨.೨೦೧೦** — **ಡಾ. ಎಚ್.ನಾಗವೇಣಿ**

# ಸಾರ-ವಿಸ್ತಾರ

# ವಿಷಯ ಸೂಚಿ


೧. ಅರ್ಥಶಾಸ್ತ್ರ-ಅಭಿವೃದ್ಧಿ ಅಧ್ಯಯನ ೧

೨. ಇತಿಹಾಸ-ಪುರಾತತ್ವ-ನಾಣ್ಯಶಾಸ್ತ್ರ ೧೨

೩. ಕನ್ನಡ ಕಾವ್ಯ ೪೮

೪. ಕನ್ನಡ ನಾಟಕ ೬೪

೫. ಕನ್ನಡ ಕಥೆ-ಕಾದಂಬರಿಗಳು ೬೬

೬. ಕನ್ನಡ ಸಂಶೋಧನ ಪ್ರಬಂಧಗಳು ೭೦

೭. ಕನ್ನಡ ಸಾಹಿತ್ಯ ವಿಮರ್ಶೆ ೮೫

೮. ಕನ್ನಡೇತರ ಸಾಹಿತ್ಯ-ಸಾಹಿತ್ಯ ವಿಮರ್ಶೆ ೧೨೧

೯. ಕಲೆಗಳು ೧೩೧

೧೦. ಕೃಷಿ-ಕೃಷಿ ಸಮಸ್ಯೆ ೧೪೦

೧೧. ಕಾನೂನು ೧೪೩

೧೨. ಕಾವ್ಯಮೀಮಾಂಸೆ-ಛಂದಸ್ಸು ೧೪೬

೧೩. ಕೈಗಾರಿಕೆ-ಕೈಗಾರಿಕಾ ಉತ್ಪನ್ನಗಳು ೧೪೮

೧೪. ಗ್ರಂಥಾಲಯ-ಮಾಹಿತಿ ತಂತ್ರಜ್ಞಾನ ೧೪೯

೧೫. ಜನಪದ-ಜಾನಪದ ನಂಬಿಕೆ, ಆಚರಣೆ, ಸಂಸ್ಕಾರ ೧೫೦

೧೬. ಜನಾಂಗ-ಜನಾಂಗೀಯ ಅಧ್ಯಯನ-ಸಂಸ್ಕೃತಿ ಮತ್ತು ಚಳುವಳಿ ೧೬೯

೧೭. ಜಾನಪದ ಕಲೆ, ಕಾವ್ಯ, ಕಥನ ೧೭೯

೧೮. ಜ್ಞಾನಶಾಸ್ತ್ರ ೧೮೫

೧೯. ಧರ್ಮ-ಧಾರ್ಮಿಕ ನಂಬಿಕೆಗಳು ೧೮೬

೨೦. ನಾಡು-ನುಡಿ ಚಿಂತನೆ ೨೦೦

೨೧. ನ್ಯಾಯಶಾಸ್ತ್ರ ೨೦೬

೨೨. ಪತ್ರಿಕೆ-ಪತ್ರಿಕೋದ್ಯಮ-ಸಂವಹನ ಮಾಧ್ಯಮ ೨೦೮

೨೩. ಪರಿಸರ-ನೀರು-ನೀರಾವರಿ ೨೧೦

೨೪. ಬುಡಕಟ್ಟು ಅಧ್ಯಯನ ಮತ್ತು ಬುಡಕಟ್ಟು ಕಾವ್ಯ-ಕಥನ ೨೧೬

೨೫. ಭಾರತೀಯ ತತ್ತ್ವಶಾಸ್ತ್ರ ೨೨೮

೨೬. ಭಾಷೆ-ಭಾಷಾಧ್ಯಯನ-ಭಾಷಾಂತರ ೨೩೦

೨೭. ಮಹಿಳೆ-ಮಹಿಳಾ ಅಧ್ಯಯನ ೨೫೩

೨೮. ವ್ಯಕ್ತಿ-ಬದುಕು-ಸಾಧನೆ ೨೬೭

೨೯. ವಾಸ್ತುಶಾಸ್ತ್ರ-ವಾಸ್ತುಶಿಲ್ಪ ೨೮೦

೩೦. ವಿಜ್ಞಾನ ಮತ್ತು ಖಗೋಳಶಾಸ್ತ್ರ ೨೮೮

೩೧. ವಿಶ್ವಕೋಶ-ವಾರ್ಷಿಕಗಳು ೨೯೭

೩೨. ವೈದ್ಯಕೀಯ ವಿಜ್ಞಾನ-ಆರೋಗ್ಯಶಾಸ್ತ್ರ ೩೦೮

೩೩. ಶಾಸನಶಾಸ್ತ್ರ, ಪುರಾತತ್ವ ೩೧೩

೩೪. ಶಿಕ್ಷಣ-ಶಿಕ್ಷಣ ಸಂಸ್ಥೆ-ಸಾಕ್ಷರತೆ ೩೨೬

೩೫. ಸಂಚಾರ-ಸಂಪರ್ಕ-ವಲಸೆ ೩೫೧

೩೬. ಸಂಶೋಧನೆ ೩೫೩

೩೭. ಸಮಾಜಶಾಸ್ತ್ರ-ಸಮಾಜವಾದಿ ಚಿಂತನೆ ೩೫೭

೩೮. ಸಾಮಾಜಿಕ ಸಮಸ್ಯೆ ೩೬೦

೩೯. ಸಾರ್ವಜನಿಕ ಆಡಳಿತ-ಆಡಳಿತ ವಿಕೇಂದ್ರೀಕರಣ ೩೬೨

೪೦. ಸ್ಥಳ ವಿಶೇಷ-ಕರ್ನಾಟಕ, ಕರ್ನಾಟಕೇತರ ೩೬೫

೪೧. ಹಸ್ತಪ್ರತಿಶಾಸ್ತ್ರ ೩೬೭

## ೧

# ಅರ್ಥಶಾಸ್ತ್ರ-ಅಭಿವೃದ್ಧಿ ಅಧ್ಯಯನ



**೧. ಅರ್ಥನೋಟ**

ಲೇ : ಶೈಲೇಶಚಂದ್ರ

ಪುಟ: xvi+೫೦೬, ವರ್ಷ: ೨೦೦೫, ರೂ: ೨೦೦.೦೦

ಪರಿವಿಡಿ

೧. ಬಳಕೆದಾರ

೨. ಮಳೆ-ಜೀವನಾಧಾರ

೩. ಕೃಷಿರಂಗ

೪. ರೇಷ್ಮೆ

೫. ಜಾಗತೀಕರಣ

೬. ಐ.ಟಿ-ಹೊಸ ಸಂಪನ್ಮೂಲ

೭. ಟೆಲಿಕಾಂ

೮. ಹಣ-ಬಂಡವಾಳ ಪೇಟೆ

೯. ವಿದೇಶಿ ವ್ಯವಹಾರ-ಪ್ರವಾಸೋದ್ಯಮ

೧೦. ವಿಮೆ-ಸಣ್ಣಕೈಗಾರಿಕೆ

*ಈ* ಕೃತಿಯಲ್ಲಿ ನಮ್ಮ ದಿನಬಳಕೆಯ ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ೧೧೬ ಲೇಖನಗಳಿವೆ. *ಈ* ಲೇಖನಗಳಲ್ಲಿ ಬರುವ ಬಳಕೆದಾರ, ಮಾರುಕಟ್ಟೆ ಪ್ರಭು, ಮಳೆ ಜೀವನಾಧಾರ, ವಿಮೆ ವ್ಯಾಪಾರದ ಆಸೆ ಇತ್ಯಾದಿ ಅರ್ಥಲೋಕಕ್ಕೆ ಸಂಬಂಧಿಸಿದ ಹಲವಾರು ಲೇಖನಗಳು ನಮ್ಮ ದೈನಂದಿನ ಅರ್ಥಶಾಸ್ತ್ರವನ್ನು ಸಾಮಾನ್ಯರಿಗೆ ಅರ್ಥಮಾಡುವ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಅರ್ಥಶಾಸ್ತ್ರದ ಪರಿಜ್ಞಾನವಿಲ್ಲದವರಿಗೂ, ಅವರನ್ನು ಆವರಿಸಿಕೊಳ್ಳಬಹುದಾದ ವ್ಯಾಪಾರದ ಸೋಗುಗಳನ್ನು *ಈ* ಕೃತಿಯಲ್ಲಿ ವಿವರಿಸಲಾಗಿದೆ.

**೨. ಅಭಿವೃದ್ಧಿ ಮೀಮಾಂಸೆ**

ಲೇ: ಟಿ.ಆರ್.ಚಂದ್ರಶೇಖರ್

ಪುಟ: ii+೩೬, ವರ್ಷ: ೧೯೯೩, ರೂ: ೧.೦೦




ಅಭಿವೃದ್ಧಿಯನ್ನು ಕುರಿತಂತೆ ಸೈದ್ಧಾಂತಿಕ ಸಂಗತಿಗಳನ್ನು ವಿಮರ್ಶಾತ್ಮಕವಾಗಿ ಮಂಡಿಸುವ ಕೃತಿಯಿದು. ವಂಚಿತ ವರ್ಗದ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ. ಅರ್ಥಶಾಸ್ತ್ರದ ಚೌಕಟ್ಟನ್ನು ಮೀರಿ ಸಾಮಾಜಿಕ ವ್ಯಾಪ್ತಿಯಲ್ಲಿ ಅಭಿವೃದ್ಧಿಯನ್ನು ಇಲ್ಲಿ ಪೃಥಕ್ಕರಿಸಲಾಗಿದೆ.




**೩. ಅಮರ್ತ್ಯಸೇನ್‌ರ ಅಭಿವೃದ್ಧಿ ಕಥನ**

ಲೇ: ಟಿ.ಆರ್.ಚಂದ್ರಶೇಖರ್

ಪುಟ: ii+೩೦, ವರ್ಷ: ೧೯೯೯, ರೂ: ೫.೦೦

ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಪ್ರತಿಷ್ಠಿತ ನೋಬಲ್ ಪ್ರಶಸ್ತಿಯನ್ನು ಪಡೆದಿರುವ ಪ್ರಥಮ ಭಾರತೀಯ ಹಾಗು ಪ್ರಥಮ ಏಶಿಯನ್ ಎಂಬ ಕೀರ್ತಿಗೆ ಪಾತ್ರರಾದ ವಿಶ್ವದ ಖ್ಯಾತ ಚಿಂತಕ ಅಮರ್ತ್ಯಸೇನ್ ಅವರ 'ಅಭಿವೃದ್ಧಿ ಕಥನ'ವನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಅಮರ್ತ್ಯಸೇನರು ಬರೆದಿರುವ ಹಾಗು ಚಿಂತಿಸಿರುವ ವಿಚಾರಧಾರೆಯ ಸೂಕ್ಷ್ಮ ಒಳನೋಟ ಇಲ್ಲಿದೆ.




**೪. ಕನ್ನಡ ಅಧ್ಯಯನ (ಕರ್ನಾಟಕದ ಆರ್ಥಿಕತೆ)**

ಸಂ: ಪ್ರೊ. ಅಬ್ದುಲ್ ಅಜೀಜ್ ಮತ್ತು ಕೆ.ಜಿ.ವಾಸುಕಿ

ಪುಟ: xxiv+೩೨೨, ವರ್ಷ: ೧೯೯೭, ರೂ: ೫೦.೦೦

ಪರಿವಿಡಿ

೧. ಅಭಿವೃದ್ಧಿ - ಸಂಪನ್ಮೂಲಗಳು - ಜನಸಂಖ್ಯೆ - ಬಡತನ

೨. ಕೃಷಿ - ನೀರಾವರಿ - ಗ್ರಾಮೀಣಾಭಿವೃದ್ಧಿ - ರೇಷ್ಮೆ ಮತ್ತು ವಿಕೇಂದ್ರಿಕರಣ

೩. ಕೈಗಾರಿಕೆ - ಕಾರ್ಮಿಕ ಸಂಬಂಧ ಮತ್ತು ಮಾಲಿನ್ಯ

೪. ಕರ್ನಾಟಕ ಆರ್ಥಿಕ ವಿಚಾರ ಸಂಕೀರಣದ ವರದಿಗಳು

ಕರ್ನಾಟಕದ ಆರ್ಥಿಕತೆ-ಅಭಿವೃದ್ಧಿಯ ಬಗ್ಗೆ ಸ್ಥೂಲ ನೋಟವನ್ನು ಹಾಗು ಸಮಗ್ರ ಚಿತ್ರಣವನ್ನು ನೀಡುವ ೧೬ ವಿಚಾರಪೂರ್ಣ ಪ್ರಬಂಧಗಳ ಸಂಕಲನವಿದು. ಇಲ್ಲಿನ ಪ್ರಬಂಧಗಳು ಕರ್ನಾಟಕ ಆರ್ಥಿಕತೆಯ ಬೇರೆ ಬೇರೆ ಮುಖಗಳನ್ನು ಪರಿಚಯ ಮಾಡಿಕೊಡುವುದಲ್ಲದೆ ಆರ್ಥಿಕತೆ ಮತ್ತು ಅಭಿವೃದ್ಧಿಯಲ್ಲಿ ನಿರ್ದಿಷ್ಟವಾದ ಕ್ಷೇತ್ರಗಳನ್ನು ಹಾಗೂ ಸಮಸ್ಯೆಗಳನ್ನು ಬಿಚ್ಚಿಡುತ್ತವೆ.






**೫. ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ**

ಸಂ: ಟಿ.ಆರ್.ಚಂದ್ರಶೇಖರ್ ಮತ್ತು ಇತರರು

ಪುಟ: xxii+೧೦೪, ವರ್ಷ: ೧೯೯೯, ರೂ: ೧೨೦.೦೦

ಪರಿವಿಡಿ

೧. ಜನಸಂಖ್ಯೆ, ವಿಸ್ತೀರ್ಣ ಮುಂತಾದವು

೨. ಪರಿಶಿಷ್ಟರ ವಿವರಗಳು

೩. ಸಾಕ್ಷರತೆ ವಿವರಗಳು

೪. ದುಡಿಮೆಗಾರರ ವರ್ಗದ ವಿವರಗಳು

೫. ಮಕ್ಕಳ ಶಾಲಾ ದಾಖಲಾತಿ

೬. ರಸ್ತೆಗಳ ವಿವರ

೭. ೨೦ ಜಿಲ್ಲೆಗಳಿಗೆ ಸಂಬಂಧಿಸಿದ ಮಾಹಿತಿ

ಜನಗಣತಿ ವರದಿಗಳಲ್ಲಿನ ಮಾಹಿತಿಯನ್ನು ವರ್ಗೀಕರಿಸಿ, ಅದನ್ನು ಪ್ರಾದೇಶಿಕವಾಗಿ ಇಲ್ಲಿ ದಾಖಲಿಸಲಾಗಿದೆ. ಜಿಲ್ಲೆ, ವಿಭಾಗ, ಪ್ರದೇಶ, ಮತ್ತು ರಾಜ್ಯ ಹೀಗೆ ೪ ಹಂತಗಳಲ್ಲಿ ಅಂಕಿ ಅಂಶಗಳನ್ನು ಒಪ್ಪಮಾಡಿ ಇಡಲಾಗಿದೆ. ಸಾಕ್ಷರತೆ ಹಾಗೂ ದುಡಿಮೆಗಾರ ವರ್ಗದ ವಿವಿಧ ಆಯಾಮಗಳನ್ನೂ ಇಲ್ಲಿ ಪ್ರಾದೇಶಿಕವಾಗಿ ಗುರುತಿಸಲಾಗಿದೆ.




**೬. ಕರ್ನಾಟಕ ಜಿಲ್ಲಾ ಅಭಿವೃದ್ಧಿ ಅಧ್ಯಯನ : ಕೊಪ್ಪಳ**

ಸಂ: ಟಿ.ಆರ್. ಚಂದ್ರಶೇಖರ್ ಮತ್ತು ಇತರರು

ಪುಟ: xiv+೧೨೯, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಕೊಪ್ಪಳ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨. ಜನಸಂಖ್ಯಾ ಬೆಳವಣಿಗೆಯ ಗತಿಶೀಲನೆಗಳು

೩. ಅಭಿವೃದ್ಧಿ ಮತ್ತು ದುಡಿಮೆ

೪. ವಲಯವಾರು ಆರ್ಥಿಕ ರಚನೆ

೫. ಸಾಕ್ಷರತೆ ಮತ್ತು ಶಿಕ್ಷಣ

೬. ಕೃಷಿ ಮತ್ತು ಭೂಮಿಯ ಬಳಕೆ

೭. ಕೈಗಾರೀಕರಣ

೮. ಕೊಪ್ಪಳ ಜಿಲ್ಲೆಯಲ್ಲಿ ಸಾರಿಗೆ ಸೌಲಭ್ಯ ಮತ್ತು ಬ್ಯಾಂಕಿಂಗ್ ವ್ಯವಸ್ಥೆ

೯. ಕೊಪ್ಪಳ ಜಿಲ್ಲೆಯ ಅಭಿವೃದ್ಧಿ-ಒಂದು ಮುನ್ನೋಟ

೧೯೯೭ಕ್ಕೆ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ಜಿಲ್ಲೆಗಳ ಪೈಕಿ ಒಂದಾಗಿರುವ ಕೊಪ್ಪಳ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಇಲ್ಲಿ ಅಂಕಿ ಅಂಶಗಳ ಮೂಲಕ ಅಧ್ಯಯನ ನಡೆಸಲಾಗಿದೆ. ಜಿಲ್ಲೆಯನ್ನು ಅಭಿವೃದ್ಧಿಯ ಘಟಕವನ್ನಾಗಿ ಮಾಡಿಕೊಂಡು ಒಂದು ಮಾದರಿಯನ್ನು ಇಲ್ಲಿ ರೂಪಿಸಲಾಗಿದೆ.




**೭. ಕರ್ನಾಟಕ ಜಿಲ್ಲಾ ಅಭಿವೃದ್ಧಿ ಅಧ್ಯಯನ : ಗದಗ**

ಸಂ: ಟಿ.ಆರ್.ಚಂದ್ರಶೇಖರ್

ಪುಟ: xii+೧೨೬, ವರ್ಷ: ೨೦೦೦, ರೂ: ೫೦.೦೦

ಪರಿವಿಡಿ

೧. ಗದಗ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ
೨. ಜನಸಂಖ್ಯಾ ಬೆಳವಣಿಗೆಯ ಗತಿಶೀಲ
೩. ಅಭಿವೃದ್ಧಿ ಮತ್ತು ದುಡಿಮೆಗಾರ ವರ್ಗ
೪. ಜಿಲ್ಲೆಯ ಆರ್ಥಿಕ ರಚನೆ
೫. ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣ
೬. ಕೃಷಿ ವ್ಯವಸ್ಥೆ
೭. ಕೈಗಾರಿಕಾಭಿವೃದ್ಧಿ
೮. ಗದಗ ಜಿಲ್ಲೆಯ ಬ್ಯಾಂಕಿಗ್ ವ್ಯವಸ್ಥೆ
೯. ಗದಗ ಜಿಲ್ಲೆಯ ಅಭಿವೃದ್ಧಿ-ಒಂದು ಮುನ್ನೋಟ

೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದ ಗದಗ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಅಂಕಿ ಅಂಶ ದಾಖಲೆಗಳೊಂದಿಗೆ ಅಧ್ಯಯನ ನಡೆಸಿ ಬರೆದ ಕೃತಿಯಿದು. ಜಿಲ್ಲೆಯನ್ನು ಅಭಿವೃದ್ಧಿಯ ಘಟಕವನ್ನಾಗಿ ಮಾಡಿಕೊಂಡು ಒಂದು ಮಾದರಿಯನ್ನು ಇಲ್ಲಿ ರೂಪಿಸಲಾಗಿದೆ.



**೮. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ**

ಲೇ: ಟಿ.ಆರ್.ಚಂದ್ರಶೇಖರ್

ಪುಟ: iv+೩೨, ವರ್ಷ: ೨೦೦೮, ರೂ: ೧೦.೦೦

ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಎಂಬುದು ಕರ್ನಾಟಕವನ್ನು ೧೯೫೬ರಿಂದಲೂ ಕಾಡುತ್ತಿರುವ ಒಂದು ಸಮಸ್ಯೆ. ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆ ಇರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಪ್ರಾದೇಶಿಕ ಅಸಮಾನತೆ ಕುರಿತಂತೆ ಅಧ್ಯಯನ ನಡೆಸಲು ಸರ್ಕಾರವು ೨೦೦೦ರಲ್ಲಿ ನೇಮಿಸಿದ್ದ ನಂಜುಂಡಪ್ಪ ಸಮಿತಿಯೂ ಇದನ್ನು ದೃಢಪಡಿಸಿದೆ. *ಈ* ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಹೇಗೆ? ವರದಿಯು ಪರಿಹಾರಕ್ಕೆ ಸೂಚಿಸಿರುವ ಕಾಯಕಲ್ಪ ಯಾವುದು ಎಂಬುದನ್ನು *ಈ* ಕೃತಿಯು ವಿಶ್ಲೇಷಿಸುತ್ತದೆ.




**೯. ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ : ರಾಜಕೀಯ ವೈಫಲ್ಯದ ಒಂದು ಸಂಕಥನ**

ಲೇ: ಟಿ.ಆರ್.ಚಂದ್ರಶೇಖರ್

ಪುಟ: VIII+೭೦, ವರ್ಷ: ೨೦೦೪, ರೂ: ೪೦.೦೦

ಪರಿವಿಡಿ

೧. ವಿಕೇಂದ್ರೀಕರಣ ಪ್ರಯೋಗ ಗ್ರಾಮೀಣ ಅಭಿವೃದ್ಧಿ : ಕರ್ನಾಟಕದ ಅನುಭವಗಳು
೨. ಗ್ರಾಮ ಪಂಚಾಯತಿಗಳ ವಿಕೇಂದ್ರೀಕರಣ ಅಡಿಪಾಯ
೩. ರಾಜಕೀಯ ವೈಫಲ್ಯದ ಸಂಕಥನ

ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣಗಳನ್ನು ರಾಜಕೀಯ ವೈಫಲ್ಯದ ಸಂಕಥನವಾಗಿ ಪರಿಭಾವಿಸಿಕೊಂಡು, ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಮಾಹಿತಿ ಹಾಗೂ ಅಲ್ಲಿ ಪಡೆದ ಅನುಭವಗಳ ಆಧಾರದ ಮೇಲೆ ಅಧ್ಯಯನ ನಡೆಸಿ *ಈ* ಕೃತಿಯನ್ನು ರಚಿಸಲಾಗಿದೆ.




**೧೦. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ**

ಲೇ: ಸಿದ್ದಗಂಗಮ್ಮ

ಪುಟ: VIII+೫೮, ವರ್ಷ: ೨೦೦೪, ರೂ: ೨೦.೦೦

ಪರಿವಿಡಿ

೧. ಕುಡಿಯುವ ನೀರಿನ ಮೂಲಗಳು ಮತ್ತು ಅವುಗಳ ಗುಣಮಟ್ಟ
೨. ಕರ್ನಾಟಕದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳ ಸ್ಥಿತಿಗತಿ
೪. ಕೃಷ್ಣನಗರ ಗ್ರಾಮಪಂಚಾಯ್ತಿ ಜನಜೀವನದ ಚಿತ್ರಣ
೫. ಮಾಹಿತಿ ವಿಶ್ಲೇಷಣೆ; ಅಧ್ಯಯನದ ಫಲಿತಗಳು ಮತ್ತು ಸಲಹೆ ಸೂಚನೆಗಳು

ಸಂಡೂರು ತಾಲೂಕಿನ ಕೃಷ್ಣನಗರ ಗ್ರಾಮಪಂಚಾಯ್ತಿಯ ವ್ಯಾಪ್ತಿಯಲ್ಲಿನ ಹಳ್ಳಿಗಳಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯದ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿ ಬರೆದ ಕೃತಿ ಇದು.

## ೧೧. ಜಂಟೀ ಅರಣ್ಯ ನಿರ್ವಹಣೆ

ಲೇ: ಎಂ. ಚಂದ್ರ ಪೂಜಾರಿ

ಪುಟ: VIII+೨೮, ವರ್ಷ: ೨೦೦೫, ರೂ: ೫೦.೦೦

ಪರಿವಿಡಿ

೧. ಅರಣ್ಯ ನೀತಿ ಹಾಗೂ ಜಂಟೀ ಅರಣ್ಯ ಯೋಜನೆ

೨. ಗ್ರಾಮ ಅರಣ್ಯ ಸಮಿತಿ

೩. ಗ್ರಾಮ ಅರಣ್ಯ ನಿರ್ವಹಣಾ ಸಮಿತಿ

೪. ಗ್ರಾಮ ಅರಣ್ಯ ಸಮಿತಿಗಳ ಕಾರ್ಯಕ್ಷಮತೆ

೫. ಕೆಲವೊಂದು ತೀರ್ಮಾನಗಳು

ಅರಣ್ಯ ನಿರ್ವಹಣೆಗೆ ಸಂಬಂಧಿಸಿದ ಕೆಲವು ಮುಖ್ಯ ಚರ್ಚೆಗಳನ್ನು ಗಮನದಲ್ಲಿಟ್ಟುಕೊಂಡು ನಡೆಸಿದ ಸಂಶೋಧನಾ ಕೃತಿ ಇದು. ಸರಕಾರದ ಅರಣ್ಯ ಸಂರಕ್ಷಣೆ ಮತ್ತು ವಾಸ್ತವದಲ್ಲಿರುವ ನಿರ್ಮಾಣ ಸಮಸ್ಯೆಗಳನ್ನು ಮುಖಾಮುಖಿಯಾಗಿಸುತ್ತ ಜನರ ಪಾಲ್ಗೊಳ್ಳುವಿಕೆ ಎನ್ನುವ ಒಂದು ಆದರ್ಶವು ವಾಸ್ತವಿಕೆಯ ನೆಲೆಯಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಜಂಟೀ ಅರಣ್ಯ ಯೋಜನೆಯಲ್ಲಿ ಜನರ ಮತ್ತು ಸರಕಾರದ ಇಲಾಖೆ ಪರಸ್ಪರ ತಮ್ಮ ತಮ್ಮ ಜವಾಬ್ದಾರಿಗಳನ್ನು ಗುರುತಿಸಿಕೊಂಡು ಹೇಗೆ ಅರಣ್ಯವನ್ನು ನಿರ್ವಹಿಸಬೇಕು ಎಂಬುದನ್ನೂ *ಈ* ಕೃತಿಯಲ್ಲಿ ವಿವರಿಸಲಾಗಿದೆ.

## ೧೨. ಜನರ ಯೋಜನೆ : ಕರ್ನಾಟಕದ ಅನುಭವಗಳು

ಸಂ : ಟಿ.ಆರ್. ಚಂದ್ರಶೇಖರ್

ಪುಟ: vi+೩೨, ವರ್ಷ: ೨೦೦೫, ರೂ: ೧೦.೦೦

ಪ್ರಸ್ತುತ ಕಿರುಕೃತಿಯಲ್ಲಿ ಗ್ರಾಮೀಣ ಅಭಿವೃದ್ಧಿಯನ್ನು ನಿರ್ವಹಿಸುವ ಹಾಗೂ ಅಭಿವೃದ್ಧಿ ಯೋಜನೆಯನ್ನು ರೂಪಿಸುವ ಕ್ರಮದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಜನರಿಗಾಗಿ ಯೋಜನೆ ಎಂಬುದು ಜನರ ಯೋಜನೆಯಾಗಿ ಪರಿವರ್ತನೆಯಾಗ ಬೇಕಾಗಿರುವ ಅಗತ್ಯವನ್ನು *ಈ* ಕೃತಿಯಲ್ಲಿ ಗುರುತಿಸಲಾಗಿದೆ. ತಳಮಟ್ಟದ ಅಥವಾ ನೆಲಮಟ್ಟದ ಯೋಜನೆಯನ್ನು ಪರಿಚಯಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

## ೧೩.ಜನಾಯೋಜನೆ : ಹೈದರಾಬಾದ್ ಕರ್ನಾಟಕದ ಅನುಭವಗಳು

ಲೇ: ಎಂ. ಚಂದ್ರ ಪೂಜಾರಿ

ಪುಟ: X+೧೭೬, ವರ್ಷ: ೨೦೦೪, ರೂ: ೬೦.೦೦




ಪರಿವಿಡಿ

೧. ಕೃಷ್ಣನಗರ ಪಂಚಾಯತ್

೨. ಯರೆಹಂಚಿನಾಳ ಪಂಚಾಯತ್

೩. ಸಹಬಾಗಿತ್ವ ಯೋಜನೆ ಸಮಸ್ಯೆಗಳು

೪. ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳು

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಕೃಷ್ಣನಗರ ಗ್ರಾಮ ಪಂಚಾಯತಿ ಹಾಗೂ ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕು ಯರೆಹಂಚಿನಾಳ ಗ್ರಾಮಪಂಚಾಯತಿಗಳಿಗೆ ಸಹಭಾಗಿತ್ವ ವಾದ ಕ್ರಮದಲ್ಲಿ ಯೋಜನೆಗಳನ್ನು ರೂಪಿಸಿ ಕೊಡಲಾಗಿದೆ. *ಈ* ಯೋಜನೆಗಳನ್ನು 'ಜನಾಯೋಜನೆ' ಎಂದು ಕರೆಯಲಾಗಿದ್ದು, ಅದಕ್ಕೆ ಸಂಬಂಧಿಸಿದ ಅಧ್ಯಯನ ಕೃತಿಯು ಇದಾಗಿದೆ.



## ೧೪. ನಗರೀಕರಣ

ಲೇ: ಕೆ. ಮೋಹನ್‌ಕೃಷ್ಣ ರೈ

ಪುಟ: ii+೨೬, ವರ್ಷ: ೧೯೯೭, ರೂ: ೨.೦೦

ನಗರೀಕರಣದ ಅನಿವಾರ್ಯತೆ ಹಾಗೂ ಆ ಪ್ರಕ್ರಿಯೆಯ ಅತಿರೇಕ ಮತ್ತು ಅದರಿಂದಾಗುವ ಅಸ್ತವ್ಯಸ್ತತೆ, ಅಸಮತೋಲನದ ಬಗ್ಗೆ *ಈ* ಪುಸ್ತಕದಲ್ಲಿ ಚರ್ಚಿಸಲಾಗಿದೆ.




## ೧೫. ಬಜೆಟ್ ಅಧ್ಯಯನ ೨೦೦೦-೨೦೦೧

ಸಂ: ಟಿ.ಆರ್.ಚಂದ್ರಶೇಖರ್

ಪುಟ: x+೮೮, ವರ್ಷ: ೨೦೦೦, ರೂ: ೪೫.೦೦

ಕೇಂದ್ರ ಬಜೆಟನ್ನು ಸಾಮಾಜಿಕ ನೆಲೆಯಿಂದ ವಿಶ್ಲೇಷಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ೧೯೯೧-೯೨ರಿಂದ ೨೦೦೦-೦೧ರ ಅವಧಿಯಲ್ಲಿ ಜಾರಿಯಲ್ಲಿದ್ದ ಉದಾರವಾದಿ ಆರ್ಥಿಕ ನೀತಿಯ ಮೌಲ್ಯಮಾಪನವನ್ನೂ ಇಲ್ಲಿ ಮಾಡಲಾಗಿದೆ. ಪ್ರಸ್ತುತ ಗ್ರಂಥದಲ್ಲಿರುವ ಲೇಖನಗಳು ೨೦೦೦-೨೦೦೧ನೆಯ ಸಾಲಿನ ಕೇಂದ್ರ ಬಜೆಟನ್ನು ವಿಮರ್ಶಿಸುವುದರೊಂದಿಗೆ ಕಳೆದ ೧೦ ವರ್ಷಗಳ ಆರ್ಥಿಕ ನೀತಿಯ ನೆಲೆ-ಸೆಲೆ-ಬೆಲೆಗಳನ್ನು ಗುರುತಿಸುವ ಕೆಲಸವನ್ನೂ ನಡೆಸಿವೆ. ಉದಾರವಾದಿ ಪರ್ವದಲ್ಲಿ ಅಭಿವೃದ್ಧಿ ಅರ್ಥಿಕ ನೀತಿ, ಹಣಕಾಸು ನೀತಿ, ಸ್ವದೇಶಿ ಮುಂತಾದ ಸಂಗತಿಗಳಿಗೆ

ಸಂಬಂಧಿಸಿದಂತೆ ರೂಪಗೊಂಡ ಸೈದ್ಧಾಂತಿಕ ಚರ್ಚೆಗೆ ಒಂದು ಚೌಕಟ್ಟು *ಈ* ಗ್ರಂಥದಲ್ಲಿ ಪ್ರಾಪ್ತವಾಗಿದೆ.




**೧೬. ಬತ್ತದ ಚಿಲುಮೆ**

ಆಂಗ್ಲಮೂಲ : ವಂದನಾ ಶಿವ

ಕನ್ನಡಕ್ಕೆ ಅನು : ಮಾಧವ ಐತಾಳ

ಪುಟ: 34+೧೯೬, ವರ್ಷ: ೨೦೦೫, ರೂ: ೧೦೦.೦೦

ಪರಿವಿಡಿ

೧. ಅಭಿವೃದ್ಧಿ, ಇಕಾಲಜಿ ಮತ್ತು ಮಹಿಳೆ
೨. ವಿಜ್ಞಾನ, ಪ್ರಕೃತಿ ಮತ್ತು ಲಿಂಗ
೩. ಪ್ರಕೃತಿಯಲ್ಲಿ ಮಹಿಳೆ
೪. ಅರಣ್ಯ ಮತ್ತು ಮಹಿಳೆ
೫. ಆಹಾರ ಸರಪಳಿಯಲ್ಲಿ ಮಹಿಳೆಯರು
೬. ಮಹಿಳೆ ಮತ್ತು ಬತ್ತುತ್ತಿರುವ ಜಲಮೂಲ
೭. ತಾಯಿ ಭೂಮಿ : ಸ್ತ್ರೀತ್ವದ ಮರುಗಳಿಕೆ

ಭಾರತದಲ್ಲಿ ಮಹಿಳೆ, ಅಭಿವೃದ್ಧಿ ಮತ್ತು ಇಕಾಲಜಿ ಕುರಿತ ಆಂಗ್ಲ ಭಾಷೆಯ ಗ್ರಂಥದ ಅನುವಾದವಿದು. ಅಭಿವೃದ್ಧಿ ಮತ್ತು ಪರಿಸರ ಸಂಬಂಧವನ್ನು ಮಹಿಳೆ ಒಳಗೊಳ್ಳುವಿಕೆಯ ಮೂಲಕ ಪುರುಷ ನಿರ್ಮಿತ ಅಭಿವೃದ್ಧಿಯ ಪರಿಕಲ್ಪನೆಗಿಂತ ಭಿನ್ನವಾಗಿ ಮತ್ತು ಅದಕ್ಕೆ ಪರ್ಯಾಯವಾಗಿ ಮಹಿಳಾ ದೃಷ್ಟಿಕೋನದಿಂದ-ಪ್ರಕೃತಿ, ಅರಣ್ಯ ಮತ್ತು ಅಭಿವೃದ್ಧಿಯ ಸಂಬಂಧವನ್ನು ಇಲ್ಲಿ ನಿರ್ವಚನ ಮಾಡಲಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕೆಲಸಗಳು ಎಂತಹ ಮಿಥ್ಯೆಗಳನ್ನು ನಿರ್ಮಿಸುತ್ತವೆ ಎನ್ನುವುದನ್ನು *ಈ* ಕೃತಿಯಲ್ಲಿ ಅನಾವರಣ ಮಾಡಲಾಗಿದೆ. ಬಂಡವಾಳಶಾಹಿ ಸಮಾಜದ ಚಿಂತನೆಗಳನ್ನು ಭಾರತವು ಅಂಧಾನುಕರಣೆಯ ರೂಪದಲ್ಲಿ ಅಳವಡಿಸುವುದರ ಮೂಲಕ ಸಂಭವಿಸಬಹುದಾದ ದುರಂತದ ಚಿತ್ರಣವೂ *ಈ* ಗ್ರಂಥದಲ್ಲಿದೆ.

**೧೭. ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ**

ಲೇ: ಬಿ.ಶೇಷಾದ್ರಿ

ಪುಟ: iv+೩೦, ವರ್ಷ: ೧೯೯೮, ರೂ: ೫.೦೦

ಬಳ್ಳಾರಿ ಜಿಲ್ಲೆಯಲ್ಲಿ *ಈಗ* ಸಂಭವಿಸುತ್ತಿರುವ ಔದ್ಯಮೀಕರಣ ಪ್ರಕ್ರಿಯೆ ಹಾಗೂ ಜಾಗತೀಕರಣ ಸಂಕರ್ಷಣ ಮತ್ತು ಅವುಗಳ ಪರಿಣಾಮ – ಗತಿಶೀಲತೆಯ ಬಗ್ಗೆ *ಈ* ಪುಟ್ಟ ಕೃತಿ ಚರ್ಚಿಸುತ್ತದೆ.

**೧೮. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಣ ಹಣಕಾಸು ಸಂಬಂಧ**

ಲೇ: ಹೇಮಲತಾ ರಾವ್

ಅನು: ಟಿ.ಆರ್.ಚಂದ್ರಶೇಖರ್

ಪುಟ: viii+೬೨, ವರ್ಷ: ೧೯೯೭, ರೂ: ೩೦.೦೦

ಪ್ರಸ್ತುತ ಅಧ್ಯಯನವು ಭಾರತದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಹಣಕಾಸು ಸಂಬಂಧಗಳ ಸ್ವರೂಪ ಹಾಗೂ ಆ ಸಂಬಂಧಗಳು ಬದಲಾಗುತ್ತಿರುವ ಪರಿಯನ್ನು ವಿವರಿಸುತ್ತದೆ.




**೧೯. ಮಹಾನಗರಪಾಲಿಕೆಯ ಅರ್ಥವ್ಯವಸ್ಥೆ**

ಲೇ: ಪಂಚಪ್ಪ

ಪುಟ: iv+೨೨, ವರ್ಷ: ೨೦೦೧, ರೂ: ೧೦.೦೦

ಕರ್ನಾಟಕದ ಮಹಾನಗರ ಪಾಲಿಕೆಯ ಕಾನೂನು, ಅರ್ಥ ವ್ಯವಸ್ಥೆಯ ಬಗ್ಗೆ *ಈ* ಕಿರುಪುಸ್ತಕ ಸಾಕಷ್ಟು ಮಾಹಿತಿ ನೀಡುತ್ತದೆ. ಪ್ರಜಾಪ್ರಭುತ್ವದ ಮೊದಲನೆಯ ಹಂತವಾದ *ಈ* ಸ್ಥಳೀಯ ಸ್ವ-ಆಡಳಿತ ಸಂಸ್ಥೆಯ ಆಡಳಿತ ವ್ಯವಸ್ಥೆ, ಕಾರ್ಯವೈಖರಿಯ ಬಗ್ಗೆಯೂ ಇಲ್ಲಿ ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

**೨೦. ಲಿಂಗ ಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು**

ಲೇ: ಟಿ.ಆರ್.ಚಂದ್ರಶೇಖರ್

ಪುಟ: iv+೪೮, ವರ್ಷ: ೨೦೦೮, ರೂ: ೧೦.೦೦

ಅರ್ಥಶಾಸ್ತ್ರದ ಪುರುಷಶಾಹಿ ನೆಲೆಗಳನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಹಾಗೆಯೇ ಅರ್ಥಶಾಸ್ತ್ರವನ್ನು ಹೇಗೆ ಲಿಂಗ ಸಂಬಂಧಿ ಮೀಮಾಂಸೆಗೆ ಒಳಪಡಿಸಬೇಕು. ಸಂಗೋಪನಾ ಅರ್ಥಶಾಸ್ತ್ರವೆನ್ನುವ ಶೀರ್ಷಿಕೆಯಲ್ಲಿ ಅರ್ಥಶಾಸ್ತ್ರವನ್ನು ಲಿಂಗ ಸಂಬಂಧಿ ನೆಲೆಯಲ್ಲಿ ನಿರ್ವಚಿಸಿ ಕೊಳ್ಳುವ ಪರಿ ಯಾವುದು ಎಂಬುದನ್ನು ಕುರಿತಂತೆಯೂ ಇಲ್ಲಿ ಅನುಸಂಧಾನ ನಡೆಸಲಾಗಿದೆ. ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮಗಳನ್ನು ಅನಾವರಣ ಮಾಡುತ್ತಲೇ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ನೆಲೆಯಲ್ಲಿ ಇಲ್ಲಿ ಪ್ರಬಂಧಗಳನ್ನು ಕಟ್ಟಲಾಗಿದೆ.

**೨೧. ವಾಣಿಜ್ಯಶಾಸ್ತ್ರ**

ಲೇ: ಉದಯಕುಮಾರ ಇರ್ವತ್ತೂರು

ಪುಟ: vii+೭೦, ವರ್ಷ: ೨೦೦೭, ರೂ: ೬೦.೦೦




ಪರಿವಿಡಿ

೧. ಉತ್ಪಾದನೆ-ವಿನಿಮಯ-ವಾಣಿಜ್ಯ

೨. ವಾಣಿಜ್ಯ ವ್ಯವಸ್ಥೆಯ ವಿಕಸನ

೩. ವಾಣಿಜ್ಯ ಸಂಸ್ಥೆಗಳ ಸ್ವರೂಪ

೪. ಕೈಗಾರಿಕೆಗಳು

೫. ವಾಣಿಜ್ಯ ಜಗತ್ತಿನ ವೇಗವರ್ಧಕಗಳು

*ಈ* ಕೃತಿಯಲ್ಲಿ ವಾಣಿಜ್ಯಶಾಸ್ತ್ರ ವಿಷಯ ಪ್ರವೇಶಿಕೆಯೇ ಮುಖ್ಯ ಗುರಿಯಾಗಿದ್ದು, *ಈ* ಜ್ಞಾನಶಾಖೆಯ ಬಗ್ಗೆ ಒಂದು ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ. ವಾಣಿಜ್ಯಶಾಸ್ತ್ರದ ಕೆಲವು ಮೂಲಭೂತ ಸಂಗತಿಗಳನ್ನು ವಿಶ್ಲೇಷಣಾತ್ಮಕವಾಗಿ ಮಂಡಿಸಲಾಗಿದೆ.

**೨೨. ಶಾಲಾ ಬಿಸಿಯೂಟ ಅಧ್ಯಯನ ವರದಿ**

ಲೇ: ಎಚ್.ಡಿ. ಪ್ರಶಾಂತ್

ಪುಟ: IV+೫೨, ವರ್ಷ: ೨೦೦೪, ರೂ: ೧೦.೦೦

ಶಾಲಾ ಬಿಸಿಯೂಟ ಕಾರ್ಯಕ್ರಮದ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧಿತವಾಗಿದೆ ಎಂಬ ಅಧ್ಯಯನದ ಫಲಿತವೇ *ಈ* ಕಿರುಕೃತಿಯಾಗಿದೆ. ನಾಲ್ಕು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಒಟ್ಟು ೧೮ ಗ್ರಾಮಗಳ ಇಪ್ಪತ್ತು ಶಾಲೆ ಮತ್ತು ಶೇಕಡಾ ೧೦ರಷ್ಟು ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿ *ಈ* ವರದಿ ತಯಾರಿಸಲಾಗಿದೆ.




**೨೩. ಸಮುದಾಯ ಮತ್ತು ಸಹಭಾಗಿತ್ವ**

ಸಂ: ಎಂ. ಚಂದ್ರ ಪೂಜಾರಿ

ಪುಟ: xiv+೧೮೬, ವರ್ಷ: ೨೦೦೨, ರೂ: ೭೦.೦೦

ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಇದುವರೆಗೆ ವ್ಯಕ್ತಿ ಮತ್ತು ಆತನ ಅಭಿವೃದ್ಧಿ, ಕುಟುಂಬ ಮತ್ತು ಸಮುದಾಯದ ಅಭಿವೃದ್ಧಿಗೆ ದಾರಿ ಎನ್ನುವ ನಿಲುವಿತ್ತು. ಆದರೆ ಕ್ರಮೇಣ ಆ ನಿಲುವು ಮಹತ್ತ್ವ ಕಳಕೊಳ್ಳುತ್ತ ಬಂತು. *ಈಗ* ಸಮುದಾಯದಿಂದ ವ್ಯಕ್ತಿ ಮತ್ತು ಕುಟುಂಬದ ಕಡೆಗೆ ಅಭಿವೃದ್ಧಿ ಹರಿಯಬೇಕೆಂಬ ನಿಲುವು ಬಲ ಗೊಳ್ಳುತ್ತಿದೆ. ಇದು ಸಹಭಾಗಿತ್ವ ಮಾದರಿ. ಅಂದರೆ ಜನರ ಪಾಲುಗೊಳ್ಳುವಿಕೆ ಆಧಾರಿತ ಅಭಿವೃದ್ಧಿ. ಪ್ರಸ್ತುತ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವದ ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಎಂಟು ಅಧ್ಯಯನಾತ್ಮಕ ಲೇಖನಗಳಿವೆ.

**೨೪. ಸ್ವದೇಶಿ : ಒಂದು ವಿಶ್ಲೇಷಣೆ**

ಲೇ: ಎಂ. ಚಂದ್ರ ಪೂಜಾರಿ

ಪುಟ: ii+೩೪, ವರ್ಷ: ೧೯೯೯, ರೂ: ೫.೦೦

ಜಾಗತೀಕರಣದ ಸಂದರ್ಭದಲ್ಲಿ ಅಭಿವೃದ್ಧಿಯ ಹೊಸ ಮಾದರಿ ಆಗಿರುವ 'ಸ್ವದೇಶಿ'ಯ ವ್ಯಾಖ್ಯಾನ, ಅದರ ಇತಿಮಿತಿ ಹಾಗೂ ವಿಫಲತೆಯ ಬಗ್ಗೆ *ಈ* ಕಿರುಗ್ರಂಥದ ಮೊದಲ ಭಾಗದಲ್ಲಿ ಚರ್ಚಿಸಿದ್ದರೆ ಎರಡನೇ ಭಾಗದಲ್ಲಿ ನಮ್ಮ ಪರಿಸರ ಚಳುವಳಿ, ನಮ್ಮ ಸಂಸ್ಕೃತಿ, ಸಂಪ್ರದಾಯ, ಸ್ಥಳೀಯ ಜ್ಞಾನ ಪರಂಪರೆ 'ಸ್ವದೇಶಿ' ಚಿಂತನೆಯೊಂದಿಗೆ ಹೊಂದಿರುವ ಸಂಬಂಧದ ಬಗ್ಗೆ ಪ್ರಸ್ತಾಪಿಸಲಾಗಿದೆ.

# ೨

# ಇತಿಹಾಸ-ಪುರಾತತ್ವ-ನಾಣ್ಯಶಾಸ್ತ್ರ

**೨೫. ಅವ್ಯಕ್ತ ಚರಿತ್ರೆ**

ಸಂ : ಮೊಗಳ್ಳಿ ಗಣೇಶ್

ಪುಟ : x + ೨೨೪, ವರ್ಷ : ೨೦೦೯, ರೂ. ೧೦೦.೦೦

ಪರಿವಿಡಿ

೧. ಅವ್ಯಕ್ತ ಚರಿತ್ರೆಯ ಜೈವಿಕತೆ
೨. ಅವ್ಯಕ್ತ ಚರಿತ್ರೆಯ ಸುಪ್ತ ಪ್ರಜ್ಞೆ
೩. ಅವ್ಯಕ್ತ ಪಶುಪಾಲಕ ನೆಲೆ
೪. ಅಲಕ್ಷಿತ ಸಮಾಜಗಳ ನೈಸರ್ಗಿಕ ಸಂಘರ್ಷ
೫. ಹಂಪಿಯ ನಿಸರ್ಗ ಸಂಸ್ಕೃತಿ ಚರಿತ್ರೆ
೬. ಅಲಕ್ಷಿತರ ಜೀವಜಾಲ ಸರಪಳಿ
೭. ದಲಿತ ಇತಿಹಾಸದ ಅವ್ಯಕ್ತಮುಖ
೮. ಸ್ತ್ರೀ ಕಥನದ ಅವ್ಯಕ್ತ ದನಿಗಳು; ಜನಪದ ಕಥನದ ಅವ್ಯಕ್ತ ಕೊಂಡಿಗಳು
೯. ಮೌಖಿಕ ಇತಿಹಾಸದ ತಾತ್ವಿಕತೆ : ಮೌಖಿಕ ಕಥನದ ಚಾರಿತ್ರಿಕ ಅರಿವು
೧೦. ಮೌಖಿಕ ಚರಿತ್ರೆಯ ಅವ್ಯಕ್ತ ಸಂಬಂಧ

ಭಾಷೆ, ಸಂಸ್ಕೃತಿ, ಚರಿತ್ರೆ, ನಿಸರ್ಗ ಸಮುದಾಯ ಹಾಗೂ ಸಮಾಜಗಳ ಅಂತರ್ಗತ ಸಾವಯವ ಸಂಬಂಧವನ್ನು ಗಾಢವಾದ ಸೃಜನಶೀಲ ಧ್ಯಾನದಿಂದ ನಿರ್ವಚಿಸುವ *ಈ* ಕೃತಿಯು *ಈ*ವರೆಗಿನ ಕನ್ನಡದ ಚರಿತ್ರೆಗಳ ವೈಧಾನಿಕತೆಯನ್ನು ಅರ್ಥವ್ಯಾಪ್ತಿಯನ್ನು ವಿಶ್ಲೇಷಿಸುವ ಕ್ರಮವನ್ನು ಒಮ್ಮೆಗೇ ಮೀರುವ ಸಾಹಸವನ್ನು ಮಾಡುತ್ತದೆ. ಚರಿತ್ರೆ ರಚನಾ ವಿಧಾನವನ್ನು, ಮೌಖಿಕ ಚರಿತ್ರೆಯ ವಿನ್ಯಾಸವನ್ನು, ದಲಿತ ಹಾಗೂ ಮಹಿಳಾ ಚರಿತ್ರೆಗಳ ಎಲ್ಲೆಗಳನ್ನು ವ್ಯಾಪಿಸಿಕೊಂಡು ಮನುಷ್ಯ ಸಂಬಂಧಗಳ ಇತಿಹಾಸವನ್ನು ಹುಡುಕುವ *ಈ* ಕೃತಿ ಹಂಪಿಯ ನೈಸರ್ಗಿಕ ಪರಂಪರೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಅವುಗಳ ಅವ್ಯಕ್ತ ಧಾರೆಗಳನ್ನು ಶೋಧಿಸುವ ಪರಿಯಂತು ಚರಿತ್ರೆಯ ಜ್ಞಾನ ಪರಿಧಿಗಳನ್ನು ವಿಸ್ತರಿಸುವಂತಿವೆ.






**೨೬. ಆಧುನಿಕ ಕೊಡಗು**

ಲೇ: ತಂಬಂಡ ವಿಜಯ್ ಪೂಣಚ್ಚ

ಪುಟ: x+೯೮, ವರ್ಷ: ೨೦೦೦, ರೂ: ೪೫.೦೦

ಪರಿವಿಡಿ

೧. ಮೊದಲ ಪರಿಚಯ
೨. ಕೊಡಗು ಮತ್ತು ಕೊಡವೇತರ ಸಮುದಾಯಗಳ ಚರಿತ್ರೆ : ಒಂದು ಚರ್ಚೆ
೩. ಒಕ್ಕ ಮತ್ತು ಕೊಡವರು : ಅವನತಿ ಮತ್ತು ಚಾರಿತ್ರಿಕ ಬದಲಾವಣೆಯ ವಿಶ್ಲೇಷಣೆ
೪. ಮಿಲಿಟರಿ ಸೇವೆ : ಒಂದು ಬದಲೀ ಪರಂಪರೆಯ ಚರಿತ್ರೆ

ಕರ್ನಾಟಕ ಸಂಸ್ಕೃತಿಯ ಬಹು ಮುಖ್ಯ ಘಟಕವಾಗಿರುವ 'ಕೊಡಗು' *ಈ* ಶತಮಾನದಲ್ಲಿ ಪಾಶ್ಚಾತ್ಯೀಕರಣಗೊಳ್ಳುತ್ತ ನಡೆದುದರ ಕಾರಣ, ಸಂಭವಿಸಿದ ಆಧುನೀಕರಣದ ಚಿತ್ರವನ್ನು *ಈ* ಕೃತಿಯಲ್ಲಿ ನೀಡಲಾಗಿದೆ. ಅಲ್ಲಿನ ಭೂ ಹಂಚಿಕೆ ಪದ್ಧತಿಗಳು, ಬಿಟ್ಟಿ ದುಡಿಮೆ, ಕೃಷಿ ಕೂಲಿಕಾರರ ಸಮುದಾಯಗಳು, ದಲಿತರ ಪ್ರಶ್ನೆಗಳು, ಅವಿಭಕ್ತ ಕುಟುಂಬ ಪದ್ಧತಿ, ಆಧುನಿಕತೆಗೆ ಸಂಬಂಧಿಸಿದ ಅಂಶಗಳು, ಪ್ರಾಬಲ್ಯದಲ್ಲಿರುವ ವರ್ಗಗಳು, ಯಜಮಾನಿಕ ಸಂಸ್ಕೃತಿ, ಮೂಲೆ ಗೊತ್ತಲ್ಪಟ್ಟ ಸಮುದಾಯಗಳು, 'ಜನಾಂಗೀಯ' ಪ್ರಜ್ಞೆ ಮತ್ತು ಜಾತಿವಾದ ಮುಂತಾದ ವಿಚಾರಗಳ ವಿಮರ್ಶೆ ಮತ್ತು ಅಧ್ಯಯನವನ್ನು ಪ್ರಸ್ತುತ ಕೃತಿಯು ಒಳಗೊಂಡಿದೆ. ಕೊಡಗಿನ ರಾಜಕೀಯ ಮತ್ತು ಸಮಾಜದ ಸಂಕೀರ್ಣ ಸಂಬಂಧಗಳ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗಿ ಪತ್ರಾಗಾರಗಳ ದಾಖಲೆಗಳ ಮೂಲಕ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

**೨೭. ಇತಿಹಾಸ ಮತ್ತು ಸಮಾಜ**

ಲೇ : ಬಿ. ಸುರೇಂದ್ರರಾವ್

ಪುಟ: IV+೫೦, ವರ್ಷ: ೨೦೦೫, ರೂ: ೧೦.೦೦

ಇತಿಹಾಸ ಮತ್ತು ಸಮಾಜಗಳ ಜೊತೆ ಇರುವ ಸಂಬಂಧವನ್ನು ಇಲ್ಲಿ ವ್ಯಾಖ್ಯಾನಿಸಲಾಗಿದೆ. ಸಮಾಜವನ್ನು ಪ್ರತಿನಿಧಿಸುವ ಮತ್ತು ಪ್ರತಿಬಿಂಬಿಸುವ ಇತಿಹಾಸ ಅಥವ ತನ್ನ ಅವಶ್ಯಕತೆಗಳನ್ನು ಪೂರೈಸಲು ಕಾಲಕಾಲಕ್ಕೆ ಸಮಾಜವು ರೂಪಿಸಿಕೊಳ್ಳುವ ಇತಿಹಾಸ, ಅದರಲ್ಲಿ ಇತಿಹಾಸಕಾರರ ನೆಲೆ, ಬೆಲೆ ಮೊದಲಾದ ವಿಚಾರಗಳು ಹಾಗೂ ಸದಾ ಬದಲಾಗುತ್ತಿರುವ ಸಮಾಜ ಹಾಗೂ ಅದರ ಸಂವೇದನಾ ಸ್ವರೂಪವನ್ನು ತಾಳಬಲ್ಲ ಇತಿಹಾಸ, ಇವುಗಳ ಒಳಗಿನ ಸಂಬಂಧಗಳ ಜಟಿಲತೆಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.



**೨೮. ಎಡೆದೊರೆ ನಾಡು**

ಲೇ: ಚೆನ್ನಬಸವ ಹಿರೇಮಠ

ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಪ್ರಾಚೀನ ಶಾಸನಗಳಲ್ಲಿ ಉಲ್ಲೇಖವಾಗಿರುವ ಎಡೆದೊರೆ ನಾಡಿನ ಬಗ್ಗೆ ಅಧ್ಯಯನ ನಡೆಸಿ ಬರೆದ ಕಿರುಪುಸ್ತಕವಿದು.



**೨೯. ಕರ್ನಾಟಕ ಕೋಟೆಗಳು : ಸಂಪುಟ ೧**

ಲೇ: ಚನ್ನಬಸಪ್ಪ ಎಸ್.ಪಾಟೀಲ

ಪುಟ: x+೨೮೫, ವರ್ಷ: ೧೯೯೭, ರೂ: ೨೦೦.೦೦

ಪರಿವಿಡಿ

೧. ಸನ್ನತಿ; ಬನವಾಸಿ; ಬದಾಮಿ; ಮಳಖೇಡ; ಉಚ್ಚಂಗಿದುರ್ಗ; ಹಳೆಬೀಡು; ಹಾನಗಲ್ಲು; ರಾಯಚೂರು

೨. ದೊರವಡಿ; ಹೊಸಮಲೆದುರ್ಗ; ಕುಮ್ಮಟದುರ್ಗ; ಕೊಪ್ಪಳ; ಆನೆಗೊಂದಿ; ವಿಜಯನಗರ

೩. ಮುದಗಲ್; ಸಗರ; ಶಹಾಪುರ; ಯಾದಗಿರಿ; ಬಸವಕಲ್ಯಾಣ

೪. ಚಿತ್ರದುರ್ಗ; ಮೊಳಕಾಲ್ಮೂರು; ರಾಮದುರ್ಗ; ಶ್ರೀರಂಗ ಪಟ್ಟಣ; ಮೈಸೂರು; ಬೇವನಹಳ್ಳಿ

೫. ಸಿದ್ಧಾಪುರ; ಮಧುಗಿರಿ; ಚನ್ನರಾಯದುರ್ಗ; ಮಿಡಿಗೇಶಿ; ಕೋಡಗದಾಲ; ಕಬ್ಬಾಳದುರ್ಗ; ಸಾವನದುರ್ಗ; ಮಾಗಡಿ; ಹುತ್ರಿದುರ್ಗ

೬. ಹುಲಿಯೂರುದುರ್ಗ; ದೇವರಾಯನದುರ್ಗ; ಚೆನ್ನಗಿರಿ; ವಾಗಣಗೇರಿ; ಸುರಪುರ; ವನದುರ್ಗ

೭. ಇಜೇರಿ; ಚಿನ್ಮಳ್ಳಿ; ಬೇಗೂರು; ಕೃಷ್ಣನಗರ; ಮಂಜರಾಬಾದ್

ಒಂದು ಕಾಲದಲ್ಲಿ ಆಳರಸರನ್ನು ಮತ್ತು ಪ್ರಜೆಗಳನ್ನು ರಕ್ಷಿಸುತ್ತಿದ್ದ ಕೋಟೆಗಳು *ಈಗ* ಪ್ರಾಚೀನ ಸ್ಮಾರಕಗಳಾಗಿ ಉಳಿದಿವೆ. ಬದಲಾದ ರಾಜಕೀಯ ಸನ್ನಿವೇಶ ಮತ್ತು ಯುದ್ಧನೀತಿಗಳಿಂದ *ಈಗ* ಇವು ತಮ್ಮ ಮಹತ್ತ್ವವನ್ನು ಕಳೆದುಕೊಂಡಿವೆ. ಐತಿಹಾಸಿಕವಾಗಿ ಮಹತ್ತ್ವವಾಗಿರುವ *ಈ* ಕೋಟೆಗಳು ಕರ್ನಾಟಕದಾದ್ಯಂತ ನೂರಾರು ಸಂಖ್ಯೆಯಲ್ಲಿವೆ. ಇಂತಹ ಪ್ರಮುಖ ಐವತ್ತು ಕೋಟೆಗಳ ಅಧ್ಯಯನ *ಈ* ಸಂಪುಟದಲ್ಲಿದೆ. ಕೋಟೆಗಳ ವಾಸ್ತುವಿವರಗಳ ಜತೆ ಐತಿಹಾಸಿಕ ವಿವರವೂ ಇಲ್ಲಿ ಲಭ್ಯವಿದೆ.



**೩೦. ಕರ್ನಾಟಕ ಚರಿತ್ರೆ : ಸಂಪುಟ ೧**

ಸಂಪುಟ ಸಂ: ಅ.ಸುಂದರ

ಪುಟ: xxxxviii+೫೯೨, ವರ್ಷ: ೧೯೯೭, ರೂ: ೩೫೦.೦೦

ಪರಿವಿಡಿ

೧. ನೆಲ ಮತ್ತು ಜನಸಮುದಾಯ

೨. ಮೂಲ ಆಕರಗಳು

೩. ಪರಿಸರ ಮತ್ತು ಸಂಸ್ಕೃತಿ

೪. ಪ್ರಾಚೀನತಮ ಮಾನವ ಸಂಸ್ಕೃತಿಗಳು : ವಿಕಸನದ ಹಂತಗಳು

೫. ಪೂರ್ವಭಾವಿ ಇತಿಹಾಸ ಹಂತದ ಸಂಸ್ಕೃತಿಗಳು

೬. ಪ್ರಾಗಿತಿಹಾಸ ಕಾಲದ ನಿರ್ಮಿತ ಮತ್ತು ಚಿತ್ರಕಲೆ

೭. ಸಾಮ್ರಾಜ್ಯ ಪ್ರಭಾವ : ಮೌರ್ಯರು

*ಈ* ಸಂಪುಟವು ಪ್ರಾಗೈತಿಹಾಸ ಕಾಲದಿಂದ ಕ್ರಿ.ಶ.೭ನೆಯ ಶತಮಾನದವರೆಗಿನ ಶೋಧನೆ, ಸಂಸ್ಕೃತಿ, ಕಲೆ, ವಾಸ್ತು ಇವೇ ಮೊದಲಾದ ಅಂಶಗಳನ್ನು ಒಳಗೊಂಡಿದೆ. ಪ್ರಾಗೈತಿಹಾಸ ಕಾಲದ ಪರಿಸರ ಮತ್ತು ಸಂಸ್ಕೃತಿ ಹಾಗು ಪುರಾತತ್ತ್ವ ಅನ್ವೇಷಣೆಯ ನಂತರದ ಸಾಂಸ್ಕೃತಿಕತೆಯನ್ನು *ಈ* ಕೃತಿ ಒಳಗೊಳ್ಳುತ್ತದೆ.

**೩೧. ಕರ್ನಾಟಕ ಚರಿತ್ರೆ : ಸಂಪುಟ ೨**

ಸಂಪುಟ ಸಂ : ಬಿ.ಸುರೇಂದ್ರರಾವ್

ಪುಟ: xxxii+೩೨೮, ವರ್ಷ: ೧೯೯೭, ರೂ: ೨೦೦.೦೦

ಪರಿವಿಡಿ

೧. ರಾಷ್ಟ್ರಕೂಟ ಪ್ರಾಬಲ್ಯದ ಸಮಯದಲ್ಲಿ ಕರ್ನಾಟಕದ ರಾಜಕೀಯ ಸ್ವರೂಪ
೨. ರಾಷ್ಟ್ರಕೂಟರು : ರಾಜಕೀಯ ಚರಿತ್ರೆ
೩. ಕಲ್ಯಾಣದ ಚಾಳುಕ್ಯರು
೪. ಕರ್ನಾಟಕದಲ್ಲಿ ಕಳಚೂರಿಗಳು
೫. ಸೇವಣರು
೬. ವರಂಗಲ್ಲಿನ ಕಾಕತೀಯರು; ಹೊಯ್ಸಳರು
೭. ಹೊಯ್ಸಳ ರಾಜ್ಯಾಡಳಿತ ಮತ್ತು ಆರ್ಥಿಕತೆ
೮. ಹೊಯ್ಸಳ ಯುಗದಲ್ಲಿ ನಗರಕೇಂದ್ರಗಳ ಹುಟ್ಟು ಬೆಳವಣಿಗೆಗಳ ಹಿಂದಿನ ಶಕ್ತಿಗಳಾಗಿ ವಾಣಿಜ್ಯ ಸಂಸ್ಕೃತಿ ಮತ್ತು ರಾಜ್ಯತಂತ್ರ
೯. ಸಾಮಾಜಿಕ ಪ್ರಕ್ರಿಯೆಗಳು ಮತ್ತು ಧಾರ್ಮಿಕ ಆಂದೋಲನಗಳು
೧೦. ಕಲೆ ಮತ್ತು ವಾಸ್ತುಶಿಲ್ಪ : ಸಾಹಿತ್ಯ

*ಈ* ಸಂಪುಟವು ೭ರಿಂದ ೧೪ನೆಯ ಶತಮಾನದವರೆಗಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡಿದೆ. ಇದು ರಾಷ್ಟ್ರಕೂಟರ ಉದಯ ಮತ್ತು ಹೊಯ್ಸಳರ ಅವನತಿಯವರೆಗಿನ ಅವಧಿಯನ್ನು ಒಳಗೊಳ್ಳುತ್ತದೆ.

### ೩೨. ಕರ್ನಾಟಕ ಚರಿತ್ರೆ : ಸಂಪುಟ ೩

ಸಂಪುಟ ಸಂ : ಕೆ.ಎಸ್.ಶಿವಣ್ಣ

ಪುಟ: xxxvi+೫೧೨, ವರ್ಷ: ೧೯೯೭, ರೂ: ೩೫೦.೦೦

ಪರಿವಿಡಿ

೧. ವಿಜಯನಗರ ಸ್ಥಾಪನೆ; ವಿಜಯನಗರ ಇತಿಹಾಸ; ವಿಜಯನಗರ ರಾಜ್ಯಾಡಳಿತದಲ್ಲಿ ಅಮರನಾಯಕರು
೨. ಕೃಷಿ ವ್ಯವಸ್ಥೆ
೩. ವಿಜಯನಗರದಲ್ಲಿ ಕೃಷಿಯೇತರ ತೆರಿಗೆ; ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ
೪. ವಿಜಯನಗರ ಕಾಲದ ಸಮಾಜ
೫. ಮೈಸೂರು ಒಡೆಯರ ಇತಿಹಾಸ
೬. ವಿಜಯನಗರೋತ್ತರ ಕಾಲದ ರಾಜ್ಯಾಡಳಿತ; ವಿಜಯನಗರೋತ್ತರ ಕಾಲದ ಸಾಮಾಜಿಕ ಒಲವುಗಳು
೭. ವಿಜಯನಗರ ಕಾಲದ ಧಾರ್ಮಿಕ ಸ್ಥಿತಿಗತಿಗಳು; ಕಲೆ ಮತ್ತು ವಾಸ್ತುಶಿಲ್ಪ; ಕನ್ನಡ ಸಾಹಿತ್ಯ; ಸಂಸ್ಕೃತ ಸಾಹಿತ್ಯ
೮. ಮೈಸೂರಿನ ಕಿರಿಯ ರಾಜವಂಶಗಳು

*ಈ* ಸಂಪುಟವು ೧೩೩೬-೧೭೬೦ರವರೆಗಿನ ಕನ್ನಡ ನಾಡಿನ ಚರಿತ್ರೆಯನ್ನು ಒಳಗೊಂಡಿದೆ. ಆ ಕಾಲಾವಧಿಯಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ವಿಜಯನಗರ ಸಾಮ್ರಾಜ್ಯಾಧಿಪತಿಗಳು, ಪಾಳೆಯಗಾರರು, ಪ್ರಭುಗಳು ಸಾಮಂತ ರಾಜರಾಗಿ ಆಡಳಿತ ನಡೆಸಿದ ಬಗೆಯನ್ನು ಚರ್ಚಿಸಲಾಗಿದೆ.

### ೩೩. ಕರ್ನಾಟಕ ಚರಿತ್ರೆ : ಸಂಪುಟ ೪

ಸಂಪುಟ ಸಂ: ಬಿ.ಷೇಕ್ ಅಲಿ

ಪುಟ: xxxiv+೩೪೮, ವರ್ಷ: ೧೯೯೭, ರೂ: ೨೫೦.೦೦

ಪರಿವಿಡಿ

೧. ಬಹುಮನಿಗಳ ಉದಯ ಗುಲ್ಬರ್ಗ ಹಂತ
೨. ಬೀದರ ಹಂತ
೩. ಬಿಜಾಪುರದ ಆದಿಲ್‌ಶಾಹಿಗಳ ಉದಯ; ಏಳಿಗೆಗೆ ಕಾಲ (ಕ್ರಿ.ಶ. ೧೫೮೦-೧೬೫೬); ಅಂತಿಮ ಹಂತ (ಕ್ರಿ.ಶ. ೧೬೫೬-೧೬೮೬)
೪. ಬಹುಮನಿ ರಾಜ್ಯಾಡಳಿತ
೫. ರಾಜನೀತಿ (ಬಿಜಾಪುರ ಹಂತ)
೬. ಬಿಜಾಪುರದ ಆಡಳಿತ
೭. ಬಿಜಾಪುರದ ಆಡಳಿತ ಆರ್ಥಿಕ ಸ್ಥಿತಿಗತಿಗಳು; ಸಾಮಾಜಿಕ ಸ್ಥಿತಿಗತಿಗಳು; ಧಾರ್ಮಿಕ ಜೀವನ ಭಾಷೆ ಮತ್ತು ಸಾಹಿತ್ಯ; ಕಲೆ ಮತ್ತು ವಾಸ್ತುಶಿಲ್ಪ

ಕ್ರಿ.ಶ. ೧೩೪೭ರಿಂದ ೧೭೬೦ರವರೆಗಿನ ಕರ್ನಾಟಕದ ಇತಿಹಾಸವನ್ನು *ಈ* ಸಂಪುಟದಲ್ಲಿ ದಾಖಲಿಸಲಾಗಿದೆ. *ಈ* ಸಂಪುಟವು ಮುಖ್ಯವಾಗಿ ಬಹುಮನಿ ಸುಲ್ತಾನರು ಹಾಗೂ ಆದಿಲ್ ಶಾಹಿಗಳ ಉದಯದಿಂದ ಹಿಡಿದು ಪತನದವರೆಗಿನ ಇತಿಹಾಸವನ್ನು ಬಿಚ್ಚಿಡುತ್ತದೆ.

### ೩೪. ಕರ್ನಾಟಕ ಚರಿತ್ರೆ : ಸಂಪುಟ ೫

ಸಂಪುಟ ಸಂ : ಬಿ. ಷೇಕ್ ಅಲಿ

ಪುಟ: xviii+೫೮೮, ವರ್ಷ: ೧೯೯೭, ರೂ: ೨೦೦.೦೦

ಪರಿವಿಡಿ

೧. ೧೮ನೇ ಶತಮಾನದ ರಾಜಕಾರಣದ ಒಲವುಗಳು
೨. ಹೈದರಾಲಿಯು ಅಧಿಕಾರಕ್ಕೆ ಬಂದದ್ದು; ವಿಜಯಗಳು ಮತ್ತು ಸಂಘಟನೆ; ಮರಾಠರೊಂದಿಗೆ ಸಂಬಂಧಗಳು

೩. ಇಂಗ್ಲಿಷರೊಂದಿಗೆ ಸಂಬಂಧಗಳು ಮೊದಲ ಹಂತ; ಇಂಗ್ಲಿಷರೊಂದಿಗೆ ಸಂಬಂಧಗಳು ಎರಡನೆ ಹಂತ

೪. ಟಿಪ್ಪು ಸುಲ್ತಾನ; ನೆರೆಯರೊಂದಿಗೆ ಯುದ್ಧ ಮತ್ತು ಹೊರಜಗತ್ತಿನೊಂದಿಗೆ ಸಂಬಂಧಗಳು (೧೭೧೮-೯೦);

೫. ಟಿಪ್ಪುವಿನ ಮೂರನೇ ಮೈಸೂರು ಯುದ್ಧ (೧೭೯೦-೯೨); ಟಿಪ್ಪುವಿನ ಯುದ್ಧಾನಂತರದ ರಾಜಕಾರಣ (೧೭೯೨-೯೭)

೬. ಟಿಪ್ಪುವಿನ ಅಂತಿಮ ಹಂತ

೭. ಹೈದರ್ ಟಿಪ್ಪು ಆಡಳಿತ; ರಾಜಕೀಯ ಅರ್ಥವ್ಯವಸ್ಥೆ; ಸಾಮಾಜಿಕ ಮತ್ತು ಸಂಸ್ಕೃತಿ; ಸಾಹಿತ್ಯ

*ಈ* ಸಂಪುಟವು ಕ್ರಿ.ಶ. ೧೭೬೦ರಿಂದ ೧೮೦೦ರವರೆಗಿನ ಕರ್ನಾಟಕದ ಇತಿಹಾಸವನ್ನು ವಿಶದ ಪಡಿಸುತ್ತದೆ. ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಮಹತ್ತ್ವದ ಆಡಳಿತಗಾರರಾದ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಆಡಳಿತದ ಬಗ್ಗೆ *ಈ* ಸಂಪುಟದಲ್ಲಿ ಚರ್ಚಿಸಲಾಗಿದೆ. ಆ ಕಾಲದ ರಾಜಕೀಯ ಸ್ಥಿತಿ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಸ್ಥಿತಿಯ ಬಗ್ಗೆಯೂ *ಈ* ಸಂಪುಟ ಬೆಳಕು ಚೆಲ್ಲುತ್ತದೆ.

**೩೫. ಕರ್ನಾಟಕ ಚರಿತ್ರೆ : ಸಂಪುಟ ೬**

ಸಂಪುಟ ಸಂ : ಸೆಬಾಸ್ಟಿಯನ್ ಜೋಸೆಫ್

ಪುಟ: xxxvi+೩೪೦, ವರ್ಷ: ೧೯೯೭, ರೂ: ೨೦೦.೦೦

ಪರಿವಿಡಿ

೧. ವಸಾಹತುಶಾಹಿಯ ಆಗಮನ; ವಸಾಹತು ಸರಕಾರಕ್ಕೆ ವಿರುದ್ಧವಾಗಿ ಸ್ಥಳೀಯ ನಾಯಕರು

೨. ರೈತಬಂಡಾಯ; ಹತ್ತೊಂಬತ್ತನೇ ಶತಮಾನದ ದಕ್ಷಿಣ ಕನ್ನಡದಲ್ಲಿ ರೈತ ಬಂಡಾಯಗಳು; ರೈತರಲ್ಲಿ ಒಗ್ಗಟ್ಟು ಪ್ರತಿಭಟನೆ-ಮೈಸೂರು

೩. ಭೂ ಸ್ವಾಮ್ಯ ಮತ್ತು ಸಾಮಾಜಿಕ ಬದಲಾವಣೆ: ವಸಾಹತುಶಾಹಿ ಸಂದರ್ಭದಲ್ಲಿ ದಕ್ಷಿಣ ಕನ್ನಡ

೪. ರಾಜನೀತಿ ಸಮಾಜ ಮತ್ತು ಆರ್ಥಿಕತೆ-ಮುಂಬಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ,

೫. ಬ್ರಿಟಿಷ್ ಕಂದಾಯ ವ್ಯವಸ್ಥೆ

೬. ವಸಾಹತುಶಾಹಿ ಮತ್ತು ಮೈಸೂರಿನಲ್ಲಿ ಕ್ಷಾಮ

೭. ಕರ್ನಾಟಕ ಒಳನಾಡ ಮತ್ತು ಹೊರನಾಡ ವ್ಯಾಪಾರ

೮. ಶಿಕ್ಷಣ ಸಾಂಪ್ರದಾಯಿಕ ರೂಪದಿಂದ ಆಧುನಿಕ ರೂಪದವರೆಗೆ

೯. ಸಾಂಸ್ಕೃತಿಕ ದೃಶ್ಯ: ೧೯ನೇ ಶತಮಾನದ ಅನುಭವ

೧೦. ಸಾಮ್ರಾಜ್ಯಶಾಹಿಯೊಂದಿಗೆ ಮುಖಾಮುಖಿ: ೧೯ನೇ ಶತಮಾನದ ಕರ್ನಾಟಕ

*ಈ* ಸಂಪುಟವು ಕ್ರಿ.ಶ. ೧೮೦೦ರಿಂದ ಕ್ರಿ.ಶ. ೧೯೦೦ರವರೆಗಿನ ಕರ್ನಾಟಕದ ಇತಿಹಾಸವನ್ನು ಒಳಗೊಂಡಿದೆ. ಕರ್ನಾಟಕಕ್ಕೆ ಮೈಸೂರು ವಸಾಹತುಶಾಹಿಯ ಆಗಮನದಿಂದ ಹಿಡಿದು, ವಸಾಹತು ಸರಕಾರದ ವಿರುದ್ಧ ಸೆಟೆದು ನಿಂತ ಸ್ಥಳೀಯ ನಾಯಕರು ನಡೆಸಿದ ರಾಜಕೀಯ, ಆ ಕಾಲದಲ್ಲಿ ನಡೆದ ರೈತ ಬಂಡಾಯ, ಸಾಮಾಜಿಕ ಬದಲಾವಣೆ, ಆರ್ಥಿಕತೆ, ರಾಜನೀತಿ, ಒಳನಾಡ-ಹೊರನಾಡ ವ್ಯಾಪಾರ, ಶಿಕ್ಷಣ, ಸಾಹಿತ್ಯ ಇತ್ಯಾದಿ ಹಲವು ವಿಷಯಗಳು *ಈ* ಸಂಪುಟದಲ್ಲಿ ವಿಸ್ತರಿಸಿಕೊಂಡಿವೆ. *ಈ* ಸಂಪುಟವು ಮುಖ್ಯವಾಗಿ ಆ ಕಾಲದ ಕರ್ನಾಟಕದ ಆರ್ಥಿಕತೆ ಮತ್ತು ಸಾಮಾಜಿಕ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ.

**೩೬. ಕರ್ನಾಟಕ ಚರಿತ್ರೆ : ಸಂಪುಟ ೭**

ಸಂಪುಟ ಸಂ: ಎಸ್. ಚಂದ್ರಶೇಖರ್

ಪುಟ: xxxii+೨೮೦, ವರ್ಷ: ೧೯೯೭, ರೂ: ೨೦೦.೦೦

ಪರಿವಿಡಿ

೧. ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಅಧ್ಯಯನಗಳು; ರಾಷ್ಟ್ರವಾದದ ಉಗಮ: ಸಮಾಜ ಸುಧಾರಣಾ ಚಳವಳಿಗಳು

೨. ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಆರ್ಥಿಕ ಹಿನ್ನೆಲೆ; ಕರ್ನಾಟಕದಲ್ಲಿ ಕ್ಷೋಭೆ

೩. ಸಾಹಿತ್ಯ ಮತ್ತು ರಾಷ್ಟ್ರವಾದ: ಕನ್ನಡ ಸಾಹಿತ್ಯದಲ್ಲಿ ಕಂಡಂತೆ

೪. ಬ್ರಾಹ್ಮಣೇತರರು, ರಾಷ್ಟ್ರವಾದ ಮತ್ತು ಕಾಂಗ್ರೆಸ್

೫. ಗಾಂಧೀಜಿ ಆಗಮನ

೬. ರಾಷ್ಟ್ರೀಯ ಚಳವಳಿಯಲ್ಲಿ ಪತ್ರಿಕೆಗಳ ಪಾತ್ರ; ರೈತರ ಪಾತ್ರ; ಕರ್ನಾಟಕದ ಸಂದರ್ಭ

೭. ಸ್ವಾತಂತ್ರ್ಯ ಚಳವಳಿಯಲ್ಲಿ ಮಹಿಳೆಯರು; ವಿದ್ಯಾರ್ಥಿಗಳು; ದಲಿತವರ್ಗಗಳು

೮. ಪ್ರಾಂತೀಯ ಸ್ವಾಯತ್ತತೆಯಿಂದ ಕ್ವಿಟ್ ಇಂಡಿಯಾ ಚಳವಳಿವರೆಗೆ

೯. ಸ್ವಾತಂತ್ರ್ಯದೆಡೆಗೆ

೧೦. ಕರ್ನಾಟಕ ಏಕೀಕರಣ ಚಳವಳಿ

*ಈ* ಸಂಪುಟವು ಕ್ರಿ.ಶ. ೧೯೦೦ರಿಂದ ೧೯೫೬ರವರೆಗಿನ ಕರ್ನಾಟಕದ ಇತಿಹಾಸವನ್ನು ಒಳ ಗೊಂಡಿದೆ. ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಿಂದ ಹಿಡಿದು ಕರ್ನಾಟಕ ಏಕೀಕರಣದ ವರೆಗಿನ ಹಲವು ಐತಿಹಾಸಿಕ ವಿಷಯಗಳು *ಈ* ಸಂಪುಟದಲ್ಲಿ ವಿಸ್ತರಿಸಿಕೊಂಡಿವೆ. ಆ ಕಾಲಘಟ್ಟದ ಕರ್ನಾಟಕ ಚರಿತೆಯನ್ನು *ಈ* ಸಂಪುಟ ಆಳವಾದ ಹಾಗೂ ವಿಸ್ತಾರವಾದ ಅಧ್ಯಯನದ ಮೂಲಕ ತೆರೆದಿಟ್ಟಿದೆ.

**೩೭. ಕರ್ನಾಟಕ-ನೇಪಾಳ : ಸಾಂಸ್ಕೃತಿಕ ಸಂಬಂಧ**

ಲೇ: ಎಂ. ಚಿದಾನಂದಮೂರ್ತಿ

ಪುಟ: XVI+೭೦, ವರ್ಷ: ೨೦೦೩, ರೂ: ೭೫.೦೦

ಪರಿವಿಡಿ

೧. ರಾಜಕೀಯ ಸಂಬಂಧ

೨. ಧಾರ್ಮಿಕ ಸಂಬಂಧ ೧ : ಶ್ರೀ ಪಶುಪತಿ ಮಹಾದೇವ

೩. ಧಾರ್ಮಿಕ ಸಂಬಂಧ ೨ : "ಕುಮಾರಿ" ಮತ್ತು "ತಲೇಜ" (ತುಳಜಾ ಭವಾನಿ)

೪. ಧಾರ್ಮಿಕ ಸಂಬಂಧ ೩ : "ಜಂಗಂ" ಮಠಗಳು "ಜಂಗಂ" ವೀರಶೈವರು

೫. ಸಾಮಾಜಿಕ ಸಂಬಂಧಗಳು

ಕರ್ನಾಟಕದ ರಾಜಮನೆತನವೊಂದು ನೇಪಾಳವನ್ನು ಗೆದ್ದು ಕರ್ನಾಟಕದ ವೈವಿಧ್ಯಮಯ ಸಂಸ್ಕೃತಿಯನ್ನು, ಅಲ್ಲಿ ನಾಟಿ ಹಾಕಿ ಅಧಿಕಾರ ಪಸರಿಸಿದ ಬಗೆಯನ್ನು *ಈ* ಕೃತಿ ಬಿಚ್ಚಿಡುತ್ತಿದೆ. ಕರ್ನಾಟಕ ಮತ್ತು ನೇಪಾಳಗಳ ರಾಜಕೀಯ ಸಂಬಂಧ, ಧಾರ್ಮಿಕ ಸಂಬಂಧ, ಸಾಮಾಜಿಕ ಸಂಬಂಧಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.




**೩೮. ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ**

ಸಂ: ರಮೇಶ ನಾಯಕ

ಪುಟ: viii+೧೬೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಕರ್ನಾಟಕದ ಬೃಹತ್ ಶಿಲಾಸಂಸ್ಕೃತಿ-ಒಂದು ಮರುಚಿಂತನೆ

೨. ಶಾಸನಾಧ್ಯಯನದ ಸಾಧ್ಯತೆಗಳು

೩. ಕರ್ನಾಟಕದಲ್ಲಿ ನಾಣ್ಯಶಾಸ್ತ್ರ ಅಧ್ಯಯನದ ವಿಮರ್ಶೆ

೪. ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಆಕರಗಳಾಗಿ ಹಸ್ತಪ್ರತಿ ಪ್ರಶಸ್ತಿಗಳು

೫. ಮೌಖಿಕ ಆಕರಗಳು : ಕ್ರಿಯಾತ್ಮಕ ಅನುಸಂಧಾನ

೬. ದೇವಾಲಯ ಹಾಗೂ ರಕ್ಷಣಾ ವಾಸ್ತುಶಿಲ್ಪ

೭. ಶಿಲ್ಪಕಲಾ ಅಧ್ಯಯನ : ವಿಧಾನ ಹೊಸ ಆಯಾಮಗಳು- ಅಲೋಚನೆಗಳು

೮. ಸಾಹಿತ್ಯ ಕಟ್ಟಿಕೊಡಬಹುದಾದ ಇತಿಹಾಸ

೯. ಪ್ರಾಚ್ಯವಸ್ತು ಸಂಗ್ರಹ ಮತ್ತು ಪ್ರದರ್ಶನ

೧೦. ಪ್ರಾಚೀನ ಕೃಷಿ, ನೀರಾವರಿ, ಸಂಸ್ಕೃತಿ, ವಿಜ್ಞಾನ ತಂತ್ರಜ್ಞಾನ, ವ್ಯಾಪಾರ ವಾಣಿಜ್ಯ, ಯುದ್ಧಕಲೆ, ವರ್ಣಚಿತ್ರಕಲೆ

ವಿಚಾರ ಸಂಕಿರಣದ ಸಂಪ್ರಬಂಧಗಳ *ಈ* ಸಂಕಲನವು ಕರ್ನಾಟಕ ಸಂಸ್ಕೃತಿ ಅಧ್ಯಯನಕ್ಕೆ ಬಹುಮುಖ್ಯ ಕೊಡುಗೆ. ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಆಕರ ಮತ್ತು ಅಧ್ಯಯನ ವಿಧಾನ ಕುರಿತು ನಡೆದ ವಿಶೇಷವಾದ ಚರ್ಚೆಗಳು ಇಲ್ಲಿವೆ. ಶಾಸನ, ನಾಣ್ಯಶಾಸ್ತ್ರ, ಹಸ್ತಪ್ರತಿ, ಮೌಖಿಕ ಆಕರಗಳು, ಶಿಲ್ಪ, ವಾಸ್ತುಶಿಲ್ಪ, ವರ್ಣಚಿತ್ರ ಕಲೆ, ಸಾಹಿತ್ಯದಂತಹ ಕ್ಷೇತ್ರಗಳು ಪ್ರಾಚೀನ ಇತಿಹಾಸದ ಆಕರಗಳಾಗಿ ಬಳಕೆಯಾಗಬೇಕಾದ ಅಧ್ಯಯನ ವಿಧಾನಗಳು ಇಲ್ಲಿ ವಿಶೇಷವಾದ ಮರು ವಿವೇಚನೆಗೆ ಒಳಗಾಗಿವೆ.

**೩೯. ಕರ್ನಾಟಕದಲ್ಲಿ ತಳವಾರಿಕೆ**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: x+೯೪, ವರ್ಷ: ೨೦೦೬, ರೂ: ೬೦

ಪರಿವಿಡಿ

೧. ಕರ್ನಾಟಕದ ವಾಲ್ಮೀಕಿ, ನಾಯಕ, ತಳವಾರ ಸಮುದಾಯದ ಸಂಕ್ಷಿಪ್ತ ಪರಿಚಯ

೨. ತಳವಾರಿಕೆಯ ಚಾರಿತ್ರಿಕ ಹಿನ್ನೆಲೆ

೩. ಪ್ರಾಚೀನ ಕರ್ನಾಟಕದಲ್ಲಿ ತಳವಾರಿಕೆ

೪. ಮಧ್ಯಕಾಲೀನ ಕರ್ನಾಟಕದಲ್ಲಿ ತಳವಾರಿಕೆ

೫. ವಿಜಯನಗರ ಕಾಲದ ತಳವಾರಿಕೆ

೬. ವಿಜಯನಗರೋತ್ತರ ಕಾಲದ ತಳವಾರಿಕೆ

೭. ಬ್ರಿಟೀಷರ ಕಾಲದಲ್ಲಿ ತಳವಾರಿಕೆ

ತಳವಾರ ಎನ್ನುವ ಹೆಸರು ಮತ್ತು ವೃತ್ತಿಯ ವಿವರವಾದ ಅಧ್ಯಯನದಿಂದ ತೊಡಗಿ ಇತಿಹಾಸದ ಬೇರೆ ಬೇರೆ ಸಂದರ್ಭಗಳಲ್ಲಿ ತಳವಾರರ ಪಾಲ್ಗೊಳ್ಳುವಿಕೆಯನ್ನು *ಈ* ಕೃತಿಯಲ್ಲಿ ವಿವೇಚಿಸಲಾಗಿದೆ. ಕರ್ನಾಟಕದ ಸಂಸ್ಕೃತಿಯಲ್ಲಿ ತಳವಾರಿಕೆ ಪದದ ಪ್ರಸ್ತಾವ ಮತ್ತು ಅದಕ್ಕೆ ಸಮನಾರ್ಥಕ ಪದಗಳ ವಿವರಣೆ ಕೊಡುತ್ತ, ಹೇಗೆ ವೃತ್ತಿಗನುಗುಣವಾಗಿ ಜಾತಿಯ ಪದಗಳು ನಿರ್ಮಾಣವಾಗಿವೆ ಎನ್ನುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.




**೪೦. ಕೃಷ್ಣದೇವರಾಯ (ಆಯ್ದ ಲೇಖನ ಸಂಪುಟ)**

ಸಂ: ಡಿ.ವಿ.ಪರಮಶಿವಮೂರ್ತಿ ಮತ್ತು ಇತರರು

ಪುಟ: XX+೩೯೦ ವರ್ಷ: ೨೦೦೮ ರೂ: ೧೫೦

ಪರಿವಿಡಿ

೧. ತುಳುವಂಶ, ತುಳುಮನೆತನದ ವಿಚಾರ

೨. ಕೃಷ್ಣದೇವರಾಯನ ಆಡಳಿತ; ಆಳ್ವಿಕೆಯ ಗುರಿ

೩. ಕೃಷ್ಣದೇವರಾಯ ರಾಣಿಯರ ವಿಗ್ರಹ, ಪಟ್ಟಣಗಳು

೪. ನಾಗಲಾದೇವಿ, ತಿರುಮಲಾದೇವಿ, ಕಳಿಂಗ ರಾಜಪುತ್ರಿಯ ಚಾರಿತ್ರಿಕ ಹಿನ್ನೋಟ
೫. ಕೃಷ್ಣದೇವರಾಯನು ಹಸ್ತಪ್ರತಿ ಶಾಸನಗಳು, ಕಟ್ಟಡಗಳು ಮತ್ತು ನಿರ್ಮಾಣಗಳು
೬. ಕೃಷ್ಣದೇವರಾಯನ ಹಸ್ತಪ್ರತಿ ಸಾಹಿತ್ಯ
೭. ಕೃಷ್ಣದೇವರಾಯನ ಆಡಳಿತ, ರಾಜನೀತಿ, ಸಾಂಸ್ಕೃತಿಕ ವೈಭವ
೮. ಕೃಷ್ಣದೇವರಾಯನ ದಿನಚರಿ
೯. ಕೃಷ್ಣದೇವರಾಯನ ಧಾರ್ಮಿಕ ಬದುಕು-ತೀರ್ಥಯಾತ್ರೆಗಳು
೧೦. ಕೃಷ್ಣದೇವರಾಯನ ದಂಡೆಯಾತ್ರೆ, ಯುದ್ಧಗಳು.

ಕೃಷ್ಣದೇವರಾಯನ ಸಾಧನೆ, ರಾಜಕೀಯ ಮತ್ತು ಜನಹಿತ ಸೇವೆಗಳನ್ನು ಗುರುತಿಸುವ ಆಯ್ದ ಐವತ್ತು ಲೇಖನಗಳನ್ನು ಇಲ್ಲಿ ಕ್ರಮಬದ್ಧವಾಗಿ ವಿಂಗಡಿಸಿ ನೀಡಲಾಗಿದೆ. ತುಳುವಂಶದ ಮೂಲ, ಕೃಷ್ಣದೇವರಾಯನ ಶಾಸನಗಳು, ರಾಜನೀತಿ, ಆಡಳಿತ ಅಂಶಗಳು, ಸಾಹಿತ್ಯ ರಚನೆ, ಪ್ರೇರಣೆ ಹಾಗು ಅವನ ಅಂತ್ಯಕ್ಕೆ ಸಂಬಂಧಿಸಿದ ಇಲ್ಲಿನ ಎಲ್ಲ ಬರಹಗಳು ಸಂಶೋಧನಾತ್ಮಕ ಗುಣದಿಂದ ಕೂಡಿವೆ. ಬಿಡಿ ಬಿಡಿ ಲೇಖನಗಳ ಮೂಲಕ ಕೃಷ್ಣದೇವರಾಯನ ವ್ಯಕ್ತಿತ್ವವನ್ನು ಇಡಿಯಾಗಿ ಅಧ್ಯಯನಕ್ಕೊಳಪಡಿಸುವ ಕೃತಿ ಇದು.

### ೪೧. ಕುಮ್ಮಟದುರ್ಗದ ಅರಸರು

ಸಿ. ಮಹದೇವ

ಪುಟ : xii + ೪೮ + ೧೨, ವರ್ಷ : ೨೦೦೯, ರೂ. ೮೦.೦೦

ಪರಿವಿಡಿ

೧. ಮೂಲ ಮತ್ತು ವಂಶಾವಳಿ
೨. ಮುಮ್ಮಡಿ ಸಿಂಗೆಯನಾಯಕ
೩. ಕಂಪಿಲದೇವ ೪. ರಾಮನಾಥ
೫. ಕುಮ್ಮಟದುರ್ಗದ ಪ್ರಾಚ್ಯಾವಶೇಷಗಳು

ಮಧ್ಯಕಾಲೀನ ಕರ್ನಾಟಕದಲ್ಲಿ ಹೊಯ್ಸಳ ಮತ್ತು ಸೇವುಣ ರಾಜ್ಯ ಶಕ್ತಿಗಳ ನಡುವೆ ಹುಟ್ಟಿಕೊಂಡ ಕುಮ್ಮಟದುರ್ಗ ರಾಜ್ಯವು ತನ್ನ ಅಸ್ತಿತ್ವಕ್ಕಾಗಿ ಆರಂಭದಿಂದಲೂ ಹೋರಾಟದ ಹಾದಿಯಲ್ಲಿ ಸಾಗಿ ಬಂದ ರಾಜ್ಯ. ಕುಮ್ಮಟದುರ್ಗವನ್ನು ಆಳಿದ ಮುಮ್ಮಡಿ ಸಿಂಗೆಯನಾಯಕ, ಕಂಪಿಲದೇವ ಮತ್ತು ರಾಮನಾಥ ಶೌರ್ಯ ಸಾಹಸಗಳಿಗೆ ಹೆಸರಾದವರು. ಜನಪದರಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಕುಮಾರರಾಮನೆಂದು ಪ್ರಸಿದ್ಧನಾಗಿರುವ ರಾಮನಾಥನು ಶೌರ್ಯ ಮತ್ತು ಸದ್ಗುಣಗಳ ಗಣಿ. ಪ್ರಸ್ತುತ ಕೃತಿಯಲ್ಲಿ ವಿದೇಶಿಯರ ಬರಹಗಳು, ದೇಸಿ ಸಾಹಿತ್ಯ ಕೃತಿಗಳು, ಕೈಫಿಯತ್ತುಗಳು, ಪುರಾತತ್ವ ಆಕರಗಳು ಮತ್ತು ಮೌಖಿಕ ಆಕರಗಳನ್ನು ಬಳಸಿಕೊಂಡು ಕುಮ್ಮಟದುರ್ಗದ ಅರಸರ ಆಳ್ವಿಕೆಯನ್ನು ಕಟ್ಟಿಕೊಡಲಾಗಿದೆ.





### ೪೨. ಕುರುಗೋಡು

ಸಂ: ಬಾಲಸುಬ್ರಹ್ಮಣ್ಯ

ಪುಟ: XVI+೧೬೪, ವರ್ಷ: ೨೦೦೪, ರೂ: ೮೦.೦೦

ಪರಿವಿಡಿ

೧. ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ
೨. ಪ್ರಾಕ್ಚಾರಿತ್ರಿಕ ಚಿತ್ರಕಲೆ
೩. ಚರಿತ್ರೆ
೪. ಶಾಸನಗಳು
೫. ವಾಸ್ತು ಮತ್ತು ಮೂರ್ತಿಶಿಲ್ಪ
೬. ರಕ್ಷಣಾ ವಾಸ್ತು
೭. ಮೌಖಿಕ ಆಕರಗಳು
೮. ನಂಬಿಕೆ ಮತ್ತು ಆಚರಣೆ

ಬಳ್ಳಾರಿ ಜಿಲ್ಲೆಯ ಪ್ರಸಿದ್ಧ ಪುರಾತತ್ವ ಕ್ಷೇತ್ರವಾದ ಕುರುಗೋಡಿನ ಪ್ರಾಕೃತಿಕ ಪರಿಸರ, ಪ್ರಾಗಿತಿಹಾಸ, ಚಿತ್ರಕಲೆ, ವಾಸ್ತು ಮತ್ತು ಮೂರ್ತಿಶಿಲ್ಪ, ಶಾಸನಗಳು, ರಕ್ಷಣಾ ವಾಸ್ತು, ಮೌಖಿಕ ಆಕರಗಳು, ನಂಬಿಕೆಗಳು ಮತ್ತು ಆಚರಣೆಗಳು ಇಲ್ಲಿ ಸೋಪಜ್ಞಶೀಲ ವಿಶ್ಲೇಷಣೆಗೆ ಒಳಗಾಗಿವೆ.




### ೪೩. ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ

ಸಂ : ವಿಜಯ್ ಪೂಣಚ್ಚ ತಂಬಂಡ

ಪುಟ : x + ೮೮, ವರ್ಷ : ೨೦೦೯, ರೂ. ೬೦.೦೦

೧. ಆ್ಯಂಟೋನಿಯೊ ಗ್ರಾಂಸಿ ಜೀವನ, ರಾಜಕೀಯ ಮತ್ತು ಸಿದ್ಧಾಂತ
೨. ದಕ್ಷಿಣ ಏಷ್ಯಾದಲ್ಲಿ ಸಬಾಲ್ಟರ್ನ್ ಅಧ್ಯಯನದ ಹುಟ್ಟು ಮತ್ತು ವಿಕಾಸ
೩. ಸಬಾಲ್ಟರ್ನ್ ಅಧ್ಯಯನ ಕ್ರಮದ ಮೇಲಿನ ವಿಮರ್ಶೆಗಳು

*ಈ* ಕೃತಿಯಲ್ಲಿ ಸಬಾಲ್ಟರ್ನ್ ಅಧ್ಯಯನದ ಸೈದ್ಧಾಂತಿಕತೆ, ಹುಟ್ಟು, ಬೆಳವಣಿಗೆ ಮತ್ತು ಪರಿಣಾಮಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಇತ್ತೀಚಿನ ದಶಕಗಳಲ್ಲಿ ಬಹು ಸಂಸ್ಕೃತಿ ನೆಲೆಗಳು, ಮೌಖಿಕ ಚರಿತ್ರೆಯ ನೆಲೆಗಳು, ಕೆಳಸ್ತರದ ಸಮುದಾಯದ ಧ್ವನಿಗಳು ಹಾಗೂ ದಲಿತ ಕಾರ್ಮಿಕ ರೈತಮಹಿಳೆ ಇತ್ಯಾದಿ ಚಳುವಳಿಗಳ ಸೈದಾಂತಿಕತೆಗಳು ಸಬಾಲ್ಟರ್ನ್ ಅಧ್ಯಯನ ಕ್ರಮದ ಪ್ರಭಾವಕ್ಕೆ ಒಳಗಾಗಿವೆ. *ಈ* ಹಿನ್ನೆಲೆಯಲ್ಲಿ ಸಬಾಲ್ಟರ್ನ್ ಅಧ್ಯಯನ ಕ್ರಮದ ಮತ್ತು ಸಿದ್ಧಾಂತದ ವಿವಿಧ ನೆಲೆಗಳನ್ನು ಮತ್ತು ವಿಮರ್ಶೆಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.



## ೪೪. ಕೊಡಗು ವಿವರಣೆ

ಆಂಗ್ಲಮೂಲ ಲೇ : ಇ. ಮಾರ್ಸ್‌ಡೆನ್

ಸಂ : ವಿಜಯ್ ಪೂಣಚ್ಚ ತಂಬಂಡ

ಪುಟ: xii+೬೦, ವರ್ಷ: ೨೦೦೫, ರೂ: ೫೦.೦೦

ಪರಿವಿಡಿ

೧. ಭೂ ಸ್ವರೂಪಾದಿಗಳ ವರ್ಣನೆ

೨. ಚರಿತ್ರೆ

೩. ವಿಭಾಗಗಳು ಇತ್ಯಾದಿ

೧೯ನೇ ಶತಮಾನದ ಅಂತ್ಯದಲ್ಲಿ ನಿಂತು ಕೊಡಗಿನ ಭೌಗೋಳಿಕತೆ, ಅಲ್ಲಿನ ನದಿ, ಉತ್ಪನ್ನಗಳು, ವನ್ಯಜೀವಿಗಳು, ರಾಜಕೀಯ ಚರಿತ್ರೆ, ಕೃಷಿ ವಿಭಿನ್ನತೆಗಳು ಮುಂತಾದ ವಿಚಾರಗಳನ್ನು ಸಾಂಸ್ಕೃತಿಕ ಸಂಭ್ರಮದಿಂದ ಹಾಗೂ ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಮನಮುಟ್ಟುವ ಹಾಗೆ *ಈ* ಗ್ರಂಥದಲ್ಲಿ ವಿವರಿಸಲಾಗಿದೆ. ಕೊಡಗಿನ ಜನಪದ ಹಾಡುಗಳನ್ನು ಯಥಾವತ್ತಾಗಿ ಕೊಡಗು ಭಾಷೆಯಲ್ಲಿಯೇ *ಈ* ಕೃತಿಯಲ್ಲಿ ಸಂಗ್ರಹಿಸಲಾಗಿದೆ. ಇದು ಕೊಡಗಿನ ಚರಿತ್ರೆಗೆ ಸಂಬಂಧಿಸಿದಂತೆ ಕನ್ನಡ ಭಾಷೆಯಲ್ಲಿ ಬಂದಿರುವ ಮೊದಲ ಗ್ರಂಥ. *ಈ* ಗ್ರಂಥ ಕೊಡಗಿನ ಚರಿತ್ರೆ, ಸಾಹಿತ್ಯ ಹಾಗೂ ಜಾನಪದೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೂಲ ಆಕರವಾಗಬಲ್ಲದು.



## ೪೫. ಕೋರೆಗಾಂವ

ಲೇ: ಸರಜೂ ಕಾಟ್ಕರ್

ಪುಟ: iv+೨೦, ವರ್ಷ: ೨೦೦೧, ರೂ: ೧೦.೦೦

ಜನವರಿ ೧, ೧೮೧೮ರಲ್ಲಿ ಕೋರೆಗಾಂವದಲ್ಲಿ ಬ್ರಿಟಿಷ್ ಮತ್ತು ಪೇಶ್ವೆಗಳ ಮಧ್ಯೆ ನಡೆದ ಯುದ್ಧ ಹಾಗೂ ಆ ಯುದ್ಧದಲ್ಲಿ ಬ್ರಿಟಿಷ್ ಸೈನ್ಯದಲ್ಲಿದ್ದ ಮಹಾರ್ ಎಂಬ ಅಸ್ಪೃಶ್ಯಕುಲಕ್ಕೆ ಸೇರಿದ ಸೈನಿಕರು ಪೇಶ್ವೆಗಳ ವಿರುದ್ಧ ವೀರಾವೇಶದಿಂದ ಹೋರಾಡಿ ಬ್ರಿಟಿಷರಿಗೆ ಅದ್ಭುತ ಗೆಲುವು ತಂದುಕೊಟ್ಟ ಬಗೆ ಮತ್ತು ಆ ಯುದ್ಧದಲ್ಲಿ ಮಡಿದ ಅಸ್ಪೃಶ್ಯ ಜನಾಂಗದ ಸೇನಾನಿಗಳ ನೆನಪಿಗಾಗಿ ಬ್ರಿಟಿಷರಿಂದ ಕೋರೆಗಾಂವದಲ್ಲಿ ನಿರ್ಮಿತವಾದ ವೀರ ಸ್ಮಾರಕವೊಂದರ ಬಗ್ಗೆ *ಈ* ಕಿರುಪುಸ್ತಕದಲ್ಲಿ ಸಂಕ್ಷಿಪ್ತ ಮಾಹಿತಿಗಳಿವೆ.



## ೪೬. ಚಂಗಾಳ್ವರು

ಲೇ: ಎಚ್.ಎಸ್.ಗೋಪಾಲರಾವ್

ಪುಟ: viii+೧೧೨, ವರ್ಷ: ೨೦೦೦, ರೂ: ೬೦.೦೦

ಪರಿವಿಡಿ

೧. ಮೊದಲ ಚಂಗಾಳ್ವರು

೨. ನಂತರದ ಚಂಗಾಳ್ವರು

೩. ಚಂಗಾಳ್ವರ ಪತನ

೪. ಚಂಗಾಳ್ವರ ಸಾಂಸ್ಕೃತಿಕ ಕೊಡುಗೆ

ಕರ್ನಾಟಕ ಇತಿಹಾಸದಲ್ಲಿ ಇದುವರೆಗೂ ಉಪೇಕ್ಷಿತ ಅರಸು ಮನೆತನಗಳಲ್ಲಿ ಒಂದಾಗಿದ್ದ ಚಂಗಾಳ್ವ ಅರಸುಮನೆತನದ ಬಗ್ಗೆ ಸಂಶೋಧನಾತ್ಮಕವಾಗಿ ಬರೆದ ಅಧ್ಯಯನ ಕೃತಿಯಿದು.



## ೪೭. ಜೀರ್ಣವಿಜಯನಗರಾದರ್ಶಂ

ಲೇ: ಕೆ.ರಾಮಸ್ವಾಮಯ್ಯಂಗಾರ್

ಸಂ: ಲಕ್ಷ್ಮಣ್ ತೆಲಗಾವಿ

ಪುಟ: x+೫೮, ವರ್ಷ: ೨೦೦೬, ರೂ: ೪೦

ಪರಿವಿಡಿ

---

೧೯೧೬ರಲ್ಲಿ ಪ್ರಕಟಗೊಂಡ ಕೆ.ರಾಮಸ್ವಾಮಯ್ಯಂಗಾರ್ ಅವರ *ಈ* ಕೃತಿ ಅವರ ಪ್ರವಾಸಕಥನವಷ್ಟೇ ಆಗದೆ, ಐತಿಹಾಸಿಕವಾಗಿ ವಿಶಿಷ್ಟವಾಗಿದೆ. ಆಕರಗ್ರಂಥವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಉತ್ತಮ ವಾದ ಒಂದು ಕೈಪಿಡಿ. ಚಾರಿತ್ರಿಕ ಬರಹವೂ ಸಾಂಸ್ಕೃತಿಕ ಕೈಪಿಡಿಯೂ ಆಗಿರುವ *ಈ* ಕೃತಿ ತೌಲನಿಕ ಅಧ್ಯಯನದ ದೃಷ್ಟಿಯಿಂದ ಕರ್ನಾಟಕತ್ವದ ಸಂಶೋಧಕರಿಗೆ ಅತ್ಯಂತ ಮಹತ್ವದ ಕೃತಿ.

## ೪೮. ಡೊಮಿಂಗೋಸ್ ಪಿಯಾಸ್ ಕಂಡ ವಿಜಯನಗರ

ಲೇ: ಎಂ.ಪಿ.ಪ್ರಕಾಶ್

ಪುಟ: ii+೩೪, ವರ್ಷ: ೨೦೦೦, ರೂ: ೧೦.೦೦

ವಿಜಯನಗರ ಸಾಮ್ರಾಜ್ಯಾಧಿಪತಿ ಕೃಷ್ಣದೇವರಾಯನನ್ನು ಖುದ್ದು ಭೇಟಿ ಮಾಡಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೋಸ್ ಪಿಯಾಸ್, ತನ್ನ ಆ ಭೇಟಿ ಪ್ರವಾಸದಲ್ಲಿ ತಾನು ಕಂಡ ಮತ್ತು ಕೇಳಿದ ಸಂಗತಿಗಳನ್ನು ವಿವರವಾಗಿ ಬರೆದಿಟ್ಟಿದ್ದಾನೆ. ಇತಿಹಾಸಕಾರರಿಗೆ ಅಮೂಲ್ಯ ಆಕರವಾಗಿರುವ ಆ ಬರಹವನ್ನು ಇಲ್ಲಿ ಸಂಕ್ಷಿಪ್ತವಾಗಿ ಕನ್ನಡಿಸಿ ನೀಡಲಾಗಿದೆ.

ಒಟ್ಟಿನಲ್ಲಿ ಡೊಮಿಂಗೋಸ್ ಪಿಯಾಸ್ ಕಂಡ ವಿಜಯನಗರದ ಚಿತ್ರಣವನ್ನು *ಈ* ಕಿರುಕೃತಿಯಲ್ಲಿ ಸಂಕ್ಷಿಪ್ತವಾಗಿ ಕಟ್ಟಿಕೊಡಲಾಗಿದೆ.




**೪೯. ನಮ್ಮ ಗ್ರಾಮಗಳು : ಅಂದು ಇಂದು**

ಲೇ: ಎನ್. ಚಿನ್ನಸ್ವಾಮಿ ಸೋಸಲೆ

ಪುಟ: XVI+೧೪೮, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ

೧. ಗ್ರಾಮದ ಹಿಂದಿನ ಸ್ಥಿಗತಿ
೨. ಗ್ರಾಮದ ಇಂದಿನ ಸ್ಥಿತಿಗತಿ
೩. ಕೃಷಿ ಮತ್ತು ಗ್ರಾಮಗಳು
೪. ಗ್ರಾಮೀಣ ಪ್ರದೇಶದ ನಿರುದ್ಯೋಗ ಸಮಸ್ಯೆ
೫. ಗ್ರಾಮೀಣ ಶಿಕ್ಷಣ, ಬಡತನ, ಸಾಲ, ಪರಿಹಾರ
೬. ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನೀತಿ
೭. ಗ್ರಾಮೀಣ ಸಂತೆಗಳು

ಕರ್ನಾಟಕದ ಪ್ರಾಚೀನ ಗ್ರಾಮಜೀವನಕ್ಕೂ, ವರ್ತಮಾನದ ಗ್ರಾಮಜೀವನಕ್ಕೂ ಇರುವ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಅವುಗಳ ಸ್ವರೂಪ, ಕಾರಣ ಮತ್ತು ಉದ್ದೇಶಗಳನ್ನು ಮುಂದಿಟ್ಟುಕೊಂಡು ತೌಲನಿಕವಾಗಿ ಶೋಧಿಸಲು *ಈ* ಕೃತಿಯಲ್ಲಿ ಪ್ರಯತ್ನಿಸಲಾಗಿದೆ.




**೫೦. ನಾಲ್ವಡಿ ಕೃಷ್ಣನ ಮೈಸೂರು (ಸಾಮಾಜಿಕ, ಶೈಕ್ಷಣಿಕ ಹಾಗೂ ಅಭಿವೃದ್ಧಿ ನೆಲೆಯ ಅಧ್ಯಯನ)**

ಲೇ : ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಪುಟ: x+೧೧೦, ವರ್ಷ: ೨೦೦೫, ರೂ: ೭೫.೦೦

ಪರಿವಿಡಿ

೧. ಬಾಲ್ಯ ಹಾಗೂ ಬೆಳವಣಿಗೆ
೨. ಸಮಾಜಿಕ ಸುಧಾರಣಾ ಕ್ರಮಗಳು
೩. ಶೈಕ್ಷಣಿಕ ಸುಧಾರಣಾ ಕ್ರಮಗಳು
೪. ಅಭಿವೃದ್ಧಿ ಹಾದಿಯಲ್ಲಿ ಮೈಸೂರು

ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ದಲಿತರು, ಶೋಷಿತರು, ಕೆಳವರ್ಗದವರು, ಮಹಿಳೆಯರು ಹಾಗೂ ಬುಡಕಟ್ಟು ಸಮುದಾಯದವರು ಬದಲಾವಣೆಗೆ ತೆರೆದುಕೊಂಡ ಸನ್ನಿವೇಶಗಳನ್ನು ಇಲ್ಲಿ ವಿವರಿಸಲಾಗಿದೆ. ಅರಮನೆ, ಸಂಸ್ಕೃತಿ ಮತ್ತು ಅರಸ ವೈಭವಗಳಿಗಿಂತ ಭಿನ್ನವಾದ ಒಳನೋಟಗಳನ್ನು *ಈ* ಕೃತಿ ದೊರಕಿಸುತ್ತದೆ. ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದಲ್ಲಿ ಒಂದು ಸಾಮಾಜಿಕ ಆಂದೋಲನವನ್ನು ಹುಟ್ಟು ಹಾಕಿದ ರೀತಿ ಹಾಗೂ ರಾಜತ್ವಕ್ಕಿಂತ ಹೆಚ್ಚಾಗಿ ಸಾಮಾಜಿಕ ಹಿಂದುಳಿದ ವರ್ಗದವರ ಪರವಾಗಿ ಕೆಲಸ ಮಾಡಿದ ಪರಿಯನ್ನು *ಈ* ಕೃತಿಯಲ್ಲಿ ಅನಾವರಣಗೊಳಿಸಲಾಗಿದೆ.



**೫೧. ತಾರೀಖೆ-ಇಸ್ಕಂದರಿ**

ಲೇ: ಮು.ಮ.ಜಗತಾಪ್ (ಮರಾಠಿ ಮೂಲ)

ಅನು : ವಿಠಲರಾವ್ ಗಾಯಕ್ವಾಡ್

ಪುಟ: xii+೯೬, ವರ್ಷ: ೨೦೦೦, ರೂ: ೬೦.೦೦

ಪರಿವಿಡಿ

........

ಆದಿಲ್‌ಶಾಹಿ ಮನೆತನದ ಎಂಟನೆಯ ರಾಜ ಸಿಕಂದರ್ ಆದಿಲ್‌ಶಾಹಿಯನ್ನು ಕುರಿತ *ಈ* ಕಾವ್ಯಕೃತಿಯನ್ನು ರಚಿಸಿದಾತ ಆ ಕಾಲದ ಕವಿ ನುಸ್ರತಿ. ಕವಿಯೂ, ಕಲಿಯಾ ಆಗಿದ್ದ ನುಸ್ರತಿ ಆದಿಲ್ ಶಾಹಿ ಮತ್ತು ಮರಾಠರ ನಡುವಣ ಭೀಕರ ಯುದ್ಧವನ್ನು ಕಣ್ಣಾರೆ ಕಂಡಿದ್ದವನಾದ ಕಾರಣ *ಈ* ತನ್ನ ಕಾವ್ಯ 'ತಾರೀಖೆ ಇಸ್ಕಂದರಿ' ಯಲ್ಲಿ ಆ ಯುದ್ಧದ ಚಿತ್ರಣವನ್ನು ಅತ್ಯಂತ ವಾಸ್ತವವಾಗಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಪ್ರಸ್ತುತ ಕೃತಿಯನ್ನು ಮರಾಠಿ ಮೂಲದಿಂದ ಅನುವಾದ ಮಾಡಲಾಗಿದೆ.




**೫೨. ತುಳು ಕರ್ನಾಟಕ ಅರಸು ಮನೆತನಗಳು (ಕರ್ನಾಟಕ ರಾಜ ಸಂಸ್ಥಾನಗಳು : ೧)**

ಸಂ: ಹೆರಂಜೆ ಕೃಷ್ಣಭಟ್ಟ ಮತ್ತು ಎಸ್.ಡಿ ಭಟ್ಟ

ಪುಟ: xiv+೨೫೨, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ಆಳುಪರು-ಒಂದು ಸಂಕ್ಷಿಪ್ತ ಅವಲೋಕನ
೨. ಸೂರಾಲಿನ ತೊಳಹರು
೩. ಗೇರುಸೊಪ್ಪೆ ಮತ್ತು ಹಾಡುವಳ್ಳಿಯ ಸಾಳುವರು
೪. ಕಾರ್ಕಳದ ಭೈರರಸ ಒಡೆಯರು
೫. ಬಂಗಾಡಿಯ ಬಂಗರು
೬. ಕುಂಬಳೆ ಅರಸು ಮನೆತನ
೭. ಹೊಸಂಗಡಿಯ ಹೊನ್ನೆಯ ಕಂಬಳಿಯರಸರು
೮. ಪುತ್ತಿಗೆ ಮೂಡಬಿದಿರೆಯ ಚೌಟರು

೯. ವಿಟ್ಲದ ಡೊಂಬ ಹೆಗ್ಗಡೆ ಅರಸರು
೧೦. ಮೂಲಿಕಿ ಸಾವಂತರಸರು-ಐತಿಹಾಸಿಕ ವಿಶ್ಲೇಷಣೆ
೧೧. ವೇಣೂರಿನ ಅಜಿಲರು

ತುಳುನಾಡನ್ನು ಆಳಿದ ಚೌಟರಸರು, ಬಂಗರಸರು, ನಗಿರೆ-ಹಾಡುಹಳ್ಳಿಯ ಸಾಳುವರು, ಅಜಿಲರು, ಹೆಗ್ಗಡೆಯರು, ಸಾಮಂತರಸರು ಇತ್ಯಾದಿ ಅನೇಕ ತುಳು ಅರಸು ಮನೆತನಗಳ ಬಗ್ಗೆ ಅಧ್ಯಯನ ಲೇಖನಗಳು *ಈ* ಗ್ರಂಥದಲ್ಲಿವೆ.




**೫೩. ತೊಣ್ಣೂರು**
ಸಂ : ಸಿ. ಮಹದೇವ
ಪುಟ : xx+೨೦೪+೩೨, ವರ್ಷ : ೨೦೦೯, ರೂ. ೧೨೦.೦೦
ಪರಿವಿಡಿ
೧. ತೊಣ್ಣೂರು ಹೆಸರಿನ ನಿಷ್ಪತ್ತಿ, ಭೌಗೋಳಿಕತೆ ಮತ್ತು ಇತಿಹಾಸ ಐತಿಹ್ಯ
೨. ತೊಣ್ಣೂರಿನ ವೀರಗಲ್ಲು, ಮಾಸ್ತಿಗಲ್ಲು, ಶಾಸನಗಳು
೩. ತೊಣ್ಣೂರು ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕೆರೆಕಟ್ಟೆಗಳು
೪. ತೊಣ್ಣೂರಿನ ಕಣ್ಮರೆಯಾದ ಸ್ಮಾರಕಗಳು
೫. ತೊಣ್ಣೂರು ಮತಪಂಥ, ಜಾನಪದ ಸಾಹಿತ್ಯ
೬. ತೊಣ್ಣೂರು ಗ್ರಾಮದೇವತೆಗಳು, ನಂಬಿಕೆ ಮತ್ತು ಆಚರಣೆ

ತೊಣ್ಣೂರಿನ ಸ್ಥಳೀಯ ಶಾಸನಗಳು, ಮೌಖಿಕ ಆಕರಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಸ್ಮಾರಕಶಿಲ್ಪಗಳು, ಕೆರೆಕಟ್ಟೆಗಳು ಮೊದಲಾದ ಪ್ರಾಚ್ಯಾವಶೇಷಗಳನ್ನು ಕುರಿತ ಸಂಶೋಧನಾ ಲೇಖನಗಳು *ಈ* ಕೃತಿಯಲ್ಲಿವೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ತೊಣ್ಣೂರು, ಹೊಯ್ಸಳರ ಕಾಲಕ್ಕೆ ಶ್ರೀ ವೈಷ್ಣವ ಪಂಥದ ಪ್ರಮುಖ ಅಗ್ರಹಾರ ಹಾಗೂ ತಮಿಳು ಸಂಸ್ಕೃತಿಯ ನೆಲೆಯೂ ಆಗಿತ್ತು. ಊರಿನ ಪ್ರಾಚ್ಯಾವಶೇಷಗಳ ಶೋಧನೆ ಮತ್ತು ಅಧ್ಯಯನ ಮೊದಲ ಬಾರಿಗೆ ಸಂಶೋಧಿತಗೊಂಡು ಪ್ರಸ್ತುತ ತೊಣ್ಣೂರು ಕೃತಿಯಲ್ಲಿ ಪ್ರಕಟಗೊಂಡಿದೆ.

**೫೪. ದಕ್ಷಿಣ ಕರ್ನಾಟಕದ ಅರಸು ಮನೆತನಗಳು (ಕರ್ನಾಟಕ ರಾಜ ಸಂಸ್ಥಾನಗಳು:೨)**
ಸಂ: ವಸು ಎಂ.ವಿ
ಪುಟ: xxiv+೪೩೬, ವರ್ಷ: ೨೦೦೧, ರೂ: ೨೦೦.೦೦




ಪರಿವಿಡಿ
೧. ನೊಳಂಬ ಅರಸರು
೨. ನಿಡಗಲ್ಲು ಚೋಳರು
೩. ಪಾವಗಡ, ನಾಯಕನಹಟ್ಟಿಯ ಪಾಳೆಯಗಾರರು
೪. ಚಿತ್ರದುರ್ಗ ನಾಯಕರ ಸಾಂಸ್ಕೃತಿಕ, ರಾಜಕೀಯ ಇತಿಹಾಸ
೫. ಬೂದಿಹಾಳು, ಹರತಿ, ಮತ್ತೋಡು, ಸಿರಾದ ಪಾಳೆಯಗಾರರು, ಸುಬೇದಾರರು
೬. ಹಾಗಲವಾಡಿ ಅಮರನಾಯಕರು; ರತ್ನಗಿರಿ ನಾಯಕರು ಗುಬ್ಬಿಹೊಸಹಳ್ಳಿ ಸಂಸ್ಥಾನದ ಪಾಳೆಯಗಾರರು
೭. ಬಿಜ್ಜಾವರ, ಯಲಹಂಕ ನಾಡಪ್ರಭುಗಳು
೮. ಮಿಡಿಗೇಶಿ, ಚನ್ನಪಟ್ಟಣ, ಆನೇಕಲ್ ಪಾಳೆಯಗಾರರು
೯. ಗುಮ್ಮನಾಯಕನ ಹಳ್ಳಿ, ಮಾಸ್ತಿನಾಡು, ಉಮ್ಮತ್ತೂರು ಪಾಳೆಯಗಾರರು
೧೦. ನಾಗಮಂಡಲ, ಸುಗಟೂರು, ಮುಳಬಾಗಿಲು, ಆವತಿನಾಡ ಪ್ರಭುಗಳು

೧೦-೧೮ನೆಯ ಶತಮಾನದವರೆಗಿನ ನಡುವಿನ ಅವಧಿಯಲ್ಲಿ ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರಗಳನ್ನು ಆಳಿದ ರಾಜ ಮನೆತನಗಳ ಅಧ್ಯಯನವನ್ನು *ಈ* ಕೃತಿ ಒಳಗೊಂಡಿದೆ. *ಈ* ಕೃತಿಯಲ್ಲಿ ಒಟ್ಟು ೨೯ ರಾಜ ಮನೆತನಗಳ ಇತಿಹಾಸವನ್ನು ನೀಡಲಾಗಿದೆ.



**೫೫. ದಕ್ಷಿಣ-ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**
ಲೇ: ಎಸ್.ಚಂದ್ರಶೇಖರ್
ಅನು: ಸಿ.ನಾಗಣ್ಣ
ಪುಟ: x+೨೨೬, ವರ್ಷ: ೨೦೦೦, ರೂ: ೧೨೦.೦೦
ಪರಿವಿಡಿ
೧. ವಸಾಹತು ಆಡಳಿತ ಹಾಗೂ ಹೊಸ ಸಾಮಾಜಿಕ ವರ್ಗಗಳ ಉದಯ
೨. ಕೋಮುವಾದಿ ಹಾಗೂ ಜಾತಿವಾದಿ ರಾಜಕಾರಣ ಹಾಗೂ ರಾಷ್ಟ್ರೀಯವಾದದ ಹುಟ್ಟು ಮತ್ತು ಬೆಳವಣಿಗೆ
೩. ರಾಷ್ಟ್ರೀಯವಾದ, ಗಾಂಧಿಯುಗ ಮತ್ತು ದಕ್ಷಿಣ ಭಾರತ
೪. ನಿಮ್ನ ವರ್ಗಗಳು
೫. ರೈತವರ್ಗ ಹಾಗೂ ರಾಷ್ಟ್ರೀಯ ಚಳವಳಿ
೬. ಕಾರ್ಮಿಕ ವರ್ಗ ಮತ್ತು ರಾಷ್ಟ್ರೀಯ ಚಳವಳಿ

೭. ರಾಷ್ಟ್ರೀಯವಾದಿ ಚಳವಳಿಯಲ್ಲಿ ಎಡಪಂಥ

೮. ಸಾಹಿತ್ಯ ಮತ್ತು ರಾಷ್ಟ್ರೀಯ ಚಳವಳಿ

೯. ಪ್ರಮುಖ ಜೀವನ ಚರಿತ್ರೆಗಳು

ಭಾರತದ ಸ್ವಾತಂತ್ರ್ಯ ಚಳುವಳಿ ದೇಶವನ್ನು ಕ್ರಮೇಣ ವ್ಯಾಪಿಸುತ್ತಲಿದ್ದ ಸಂದರ್ಭದಲ್ಲಿ ದಕ್ಷಿಣ ಭಾರತ ಆ ಚಳುವಳಿಗೆ ಸ್ಪಂದಿಸುತ್ತ ಬಂದ ಬಗೆಯನ್ನು ತುಂಬ ಆಳವಾಗಿ ಶೋಧಿಸಿ ಬರೆದ ಕೃತಿಯಿದು. ದೇಶಿ ಸಂಸ್ಥಾನಿಗರಾಗಲಿ ಬ್ರಿಟಿಷ್ ಪ್ರಾಂತ್ಯದವರಾಗಲಿ, ವಸಾಹತು ವಿರೋಧಿ ರಾಷ್ಟ್ರೀಯ ಸಂಗ್ರಾಮದಲ್ಲಿ ವಹಿಸಿದ ಪಾತ್ರ ಮತ್ತು ಅದಕ್ಕೆ ಕಾರಣವನ್ನು ಗುರುತಿಸುವ ಪ್ರಯತ್ನ ಇಲ್ಲಿನ ಬರವಣಿಗೆಯಲ್ಲಿದೆ.



**೫೬. ಪಳಮೆ**

ಲೇ: ವಿಜಯ್ ಪೂಣಚ್ಚ ತಂಬಂಡ

ಪುಟ: XII+೧೬೨, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ

೧. ಕನ್ನಡ ಜನಪದ ನಾಯಕರು : ಸಾಂಸ್ಕೃತಿಕ ಚರಿತ್ರೆಯ ಬದಲೀ ಮುಖ

೨. ಜನಪದ ಕಾವ್ಯಗಳು : ಕೊಡಗಿನ ಸಾಂಸ್ಕೃತಿಕ ಚರಿತ್ರೆಯ ಭಿನ್ನನೋಟ

೩. ತುಳುನಾಡಿನ ಸಾಂಸ್ಕೃತಿಕ ಇತಿಹಾಸ : ಭೂತಾರಾಧನೆ ಮತ್ತು ಸಮಾಜ

ಕನ್ನಡದ ಮೌಖಿಕ ಆಕರಗಳಲ್ಲಿ ಪ್ರಮುಖವಾದ ಜನಪದ ಕಾವ್ಯ, ಪಾಡ್ದನಗಳು ಸೃಷ್ಟಿಸಿರುವ ಸಾಂಸ್ಕೃತಿಕವೀರರನ್ನು ಕುರಿತಂತೆ ಬಹುಮುಖಿ ಅಧ್ಯಯನ ನಡೆಸಿ, ಆ ಮೂಲಕ ವ್ಯಕ್ತವಾಗುವ ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯ ವಿಶಿಷ್ಟ ಮುಖಗಳ ವಿನ್ಯಾಸಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಇದುವರೆಗೆ ಕೊಡಗಿನ ಬಗ್ಗೆ ಚಾರಿತ್ರಿಕ ಆಕರಗಳಿಂದ ಲಭ್ಯವಾಗಿರುವ ಸಾಂಸ್ಕೃತಿಕ ಒಳನೋಟಗಳಿಗಿಂತ ಭಿನ್ನವಾದ ಒಳನೋಟಗಳನ್ನು *ಈ* ಕೃತಿಯಲ್ಲಿ ಕಾಣಿಸಲಾಗಿದೆ.

**೫೭. ಪ್ರತ್ಯೇಕ ಕೊಡಗು ರಾಜ್ಯ : ಮೂಲನಿವಾಸಿಗಳು ಮತ್ತು ವಲಸೆಗಾರರು**

ಲೇ: ತಂಬಂಡ ವಿಜಯ್ ಪೂಣಚ್ಚ

ಪುಟ: ii+೨೭, ವರ್ಷ: ೧೯೯೮, ರೂ: ೩.೦೦

ಕೊಡಗು ಜಿಲ್ಲೆಯಲ್ಲಿನ ಪ್ರತ್ಯೇಕ ರಾಜ್ಯದ ಬೇಡಿಕೆ ಹಾಗೂ ಪ್ರತ್ಯೇಕ ಕೊಡಗು ರಾಜ್ಯದ ಸಿದ್ಧಾಂತಗಳು ಹೇಗೆ ಕೊಡಗಿನ ಎಲ್ಲ ಸಮುದಾಯಗಳ ಶೋಷಿತರ, ಹಿಂದುಳಿದ ವರ್ಗಗಳ, ದಲಿತರ ಹಾಗೂ ದುಡಿಯುವ ಸಮುದಾಯಕ್ಕೆ ಮಾರಕವಾಗಿವೆ ಎಂಬುದನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.







**೫೮. ಪ್ರಭುತ್ವ ಮತ್ತು ಜನತೆ**

ಲೇ: ಕೆ. ಮೋಹನ್‌ಕೃಷ್ಣ ರೈ

ಪುಟ: X+೨೩೦, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ

೧. ಕೃಷಿ ವ್ಯವಸ್ಥೆ

೨. ಉತ್ಪಾದನಾ ವ್ಯವಸ್ಥೆ

೩. ಸಮಾಜದ ರಚನೆ; ನಗರ ವ್ಯವಸ್ಥೆ

೪. ಅರ್ಪಣಾ ಮರಣ

೫. ಧಾರ್ಮಿಕ ಪ್ರಭುತ್ವ; ಧಾರ್ಮಿಕ ಸಿದ್ಧಾಂತಗಳು

೬. ಸ್ಮಾರಕಗಳು

೭. ಕೊನೆಯ ಮಾತು

ರಾಷ್ಟ್ರಕೂಟರಿಂದ ಹೊಯ್ಸಳರವರೆಗೆ ಕರ್ನಾಟಕದಲ್ಲಿದ್ದ ಸಾಮಾಜಿಕ ಪರಿಸರ, ಸಾಂಸ್ಕೃತಿಕ ಪರಿಸರ ಹಾಗೂ ಆರ್ಥಿಕ ಪರಿಸರದ ಚಿತ್ರಣ ಮತ್ತು ವಿವರಗಳನ್ನು *ಈ* ಗ್ರಂಥದಲ್ಲಿ ಕಟ್ಟಿ ಕೊಡಲಾಗಿದೆ. ಅರಸಕೇಂದ್ರಿತ ಚರಿತ್ರೆ ನಿರೂಪಣೆಯ ಮಾರ್ಗದಲ್ಲೇ ಸಾಗಿದ ಸಾಂಪ್ರದಾಯಿಕ ಚರಿತ್ರೆಕಾರರನ್ನು ವಿಮರ್ಶೆಗೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**೫೯. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು : ಭಾಗ ೧**

ಸಂ: ಎಂ.ಎಂ.ಕಲಬುರ್ಗಿ

ಪುಟ: xii+೨೩೬, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧. ಅಂಧಾಸುರ ಪನ್ನೆರಡು; ಎಡೆನಾಡು; ಎಲಹಂಕ ನಾಡು; ಕದಂಬಳಿಗೆ ಸಾಸಿರ

೨. ಕಲಿಸೆನಾಡು; ಕಿಟಲೆನಾಡು ಮತ್ತು ಕೆಟ್ಟಲಿನಾಡು; ಕುಕ್ಕಲನಾಡು; ಕುಣಿಗಲ್ ನಾಡು

೩. ಕೈವಾರ ನಾಡು; ಕೋಳಾಲ ನಾಡು; ದಡಿಗಾವಳಿ; ನಾಗರಖಂಡ ಎಪ್ಪತ್ತು

೪. ಪಾನುಂಗಲ್ ಐನೂರು; ಪುಲಿಗೆರೆ ಮೂನೂರು; ಪುಲಿನಾಡು; ಬಲ್ಲಕುಂದೆ ನಾಡು; ಬೆಮ್ಮತ್ತನೂರು ನಾಡು

೫. ಬೆಳ್ವೊಲ ಮೂನೂರು; ಮೊರಸು ನಾಡು; ಸಿಗಲ್ ನಾಡು; ಹುಲುಗಡಿ ನಾಡು; ಹೊಮ್ಮಳಿಗೆ ನಾಡು ಮತ್ತು ಬನ್ನೇರುಘಟ್ಟ

೬. ಹೊಸಗುಂದ ನಾಡ; ಹೊಳೆಹೊನ್ನೂರು ನಾಡು

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗ ಉಪವಿಭಾಗಗಳ ವ್ಯಾಪ್ತಿಯನ್ನು ಶೋಧಿಸುವುದು ಯಾವ ವಿಭಾಗದಲ್ಲಿ ಯಾವ ಉಪವಿಭಾಗ ಅಂತರ್ಗತಗೊಳ್ಳುವುದೆಂಬುದನ್ನು *ಈ* ಕೃತಿಯಲ್ಲಿ

ಶೋಧಿಸಲಾಗಿದೆ. ಒಂದು ಜಿಲ್ಲೆಗೆ ಒಳಪಟ್ಟ ನಾಡು, ಸೀಮೆ, ಅಂತರ್ಗತ ಗ್ರಾಮ, ಅಲ್ಲಿರುವ ರಾಜವಂಶದ ಆಡಳಿತಕ್ಕೆ ಒಳಪಟ್ಟ ಸೀಮೆಗಳ ಕುರಿತು ಹಲವು ಲೇಖನಗಳ ಗುಚ್ಛ ಇಲ್ಲಿದೆ.




**೬೦. ಪ್ರವಾಸಿ ಕಂಡ ವಿಜಯನಗರ**

ಸಂ : ಬಿ.ಎ. ವಿವೇಕ ರೈ

ಪುಟ: xiv+೩೦೬, ವರ್ಷ: ೨೦೦೫, ರೂ: ೧೫೦.೦೦

ಪರಿವಿಡಿ

೧. ಇಬ್-ನೆ-ಬತೂತಾ
೨. ನಿಕೊಲೊ-ದೆ-ಕೊಂತಿ
೩. ಅಬ್ದುಲ್ ರಜಾಕ್
೪. ಅಥನೇಷಿಯಸ್ ನಿಕಿಟಿನ್
೫. ದುಅರ್ತೆ ಬಾರ್ಬೋಸಾ
೬. ಡೊಮಿಂಗೊಪ್ಯಾಸ್; ಫರ್ನಾಒ ನೂನಿಜ್
೭. ಸೀಜರ್ ಫ್ರೆಡೆರಿಕ್; ಲೊಡೊವಿಕೊ ದಿ ವರ್ತೆಮಾ
೮. ಟೊಮ್ ಪೀರೆಸ್; ಬ್ಯಾರಡಸ್
೯. ಲೆಫ್ಟಿನೆಂಟ್ ಎಮಿಟ್

*ಈ* ಕೃತಿಯು ವಿಜಯನಗರ ಸಾಮ್ರಾಜ್ಯದ ಒಂದು ಮಹಾದರ್ಶನ ವನ್ನು ಕಟ್ಟಿಕೊಡುತ್ತದೆ. ವಿಜಯನಗರ ಸಾಮ್ರಾಜ್ಯದ ಯುಗದಲ್ಲಿ ಅಲ್ಲಿಗೆ ಭೇಟ್ಟಿ ಕೊಟ್ಟಿರುವ ಪ್ರವಾಸಿಗಳು ತಾವು ಅಲ್ಲಿ ಕಂಡಿರುವ ಸಮಾಜ, ಸಂಭ್ರಮ, ಆಶ್ಚರ್ಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ವಿವರಗಳನ್ನು ತಮ್ಮ ಪ್ರವಾಸ ಕಥನಗಳಲ್ಲಿ ಒಂದೆಡೆ ದಾಖಲಿಸಿದ್ದನ್ನು ಇಲ್ಲಿ ಮರುಸಂಪಾದಿಸಿ ನೀಡಲಾಗಿದೆ. *ಈ* ಕೃತಿ ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಜೀವನದ ಚಿತ್ರಣವನ್ನು ನೀಡುವುದರ ಜೊತೆಗೆ ವಿಜಯನಗರದ ಪೂರ್ವೋತ್ತರ ಇತಿಹಾಸವನ್ನೂ ಕಟ್ಟಿಕೊಡುತ್ತದೆ. *ಈ* ಕೃತಿಯು ಕರ್ನಾಟಕದ ಹಾಗೂ ಹಂಪಿ ವಿಜಯನಗರದ ಚರಿತ್ರೆಯನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ.

**೬೧. ಪ್ರೌಢದೇವರಾಯ ವಿಜಯಕಲ್ಯಾಣ**

ಸಂ: ಬಿ.ವ್ಹಿ.ಮಲ್ಲಾಪುರ

ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಸಂಗಮವಂಶದ ಪ್ರಸಿದ್ಧ ದೊರೆ ಪ್ರೌಢದೇವರಾಯನ ರಾಜಕೀಯ ದೂರದೃಷ್ಟಿ, ಆಡಳಿತ ಸಾಧನೆಯ ಬಗ್ಗೆ *ಈ* ಕಿರುಪುಸ್ತಕದಲ್ಲಿ ಸಂಕ್ಷಿಪ್ತ ಮಾಹಿತಿಗಳಿವೆ.




**೬೨. ಬಯಕಾರ ರಾಮಪ್ಪ**

ಲೇ: ಎಸ್.ಎನ್.ಶಿವರುದ್ರಸ್ವಾಮಿ

ಪುಟ: ii+೨೪, ವರ್ಷ: ೨೦೦೦, ರೂ: ೧೦.೦೦

ವಿಜಯನಗರ ಸಾಮ್ರಾಜ್ಯದಲ್ಲಿ ಕಿರಿಯ ಹುದ್ದೆಯಲ್ಲಿದ್ದರೂ ದಕ್ಷ ಆಡಳಿತಗಾರ, ಬಹುಪ್ರತಿಭಾವಂತ, ಸಂಗೀತಕಾರ, ವಾಗ್ಗೇಯಕಾರ, ವಾಸ್ತುಕಾರ ಹಾಗೂ ಅತ್ಯಂತ ಬುದ್ಧಿವಂತ ಸೂಕ್ಷ್ಮಜ್ಞ ವ್ಯಕ್ತಿ ಯೆಂದು ರಾಜಪ್ರಶಂಸೆ ಮನ್ನಣೆಗೊಳಗಾಗಿದ್ದ ಐತಿಹಾಸಿಕ ವ್ಯಕ್ತಿ ಬಯಕಾರ ರಾಮಪ್ಪನ ವ್ಯಕ್ತಿತ್ವ ಸಾಧನೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕೃತಿಯಲ್ಲಿದೆ.




**೬೩. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ**

ಸಂ: ಬಿ.ಶೇಷಾದ್ರಿ ಮತ್ತು ಟಿ.ಆರ್.ಚಂದ್ರಶೇಖರ

ಪುಟ: xvi+೫೪, ವರ್ಷ: ೧೯೯೮, ರೂ: ೫೦.೦೦

ಪರಿವಿಡಿ

೧. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಭೌಗೋಳಿಕ - ಸಾಮಾಜಿಕ ಸ್ವರೂಪ
೨. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ನೆಲೆಗಳು
೩. ಸ್ವಾತಂತ್ರ್ಯ ಹೋರಾಟದಲ್ಲಿ ಸಂಘ-ಸಂಸ್ಥೆಗಳು
೪. ಸ್ವಾತಂತ್ರ್ಯ ಹೋರಾಟ ಮತ್ತು ಸರ್ಕಾರಿ ನೌಕರರು
೫. ಬಳ್ಳಾರಿ ಜಿಲ್ಲೆಯ ಗಡಿಯ ಒಳಹೊರಗೆ ಹೋರಾಟ
೬. ಸ್ವಾತಂತ್ರ್ಯೋತ್ತರ ಭಾರತ

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸೂಕ್ಷ್ಮ ಹಾಗೂ ಸಮಗ್ರ ಚರಿತ್ರೆಯನ್ನು ಪ್ರಮಾಣಭೂತವಾಗಿ ನೀಡುವಂತಹ ಅಧ್ಯಯನ ಕೃತಿಯಿದು.




**೬೪. ಬಳ್ಳಾರಿ ಜಿಲ್ಲೆಯ ಪಾಳೆಯಗಾರರು**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: XII+೧೧೬, ವರ್ಷ: ೨೦೦೪, ರೂ: ೫೦.೦೦

ಪರಿವಿಡಿ

೧. ಗುಡೇಕೋಟೆ ಪಾಳೆಯಗಾರರು
೨. ಜರಿಮಲೆ ಪಾಳೆಯಗಾರರು
೩. ಉಜ್ಜನಿ ಪಾಳೆಯಗಾರರು

೪. ವಡ್ಡು ದರೋಜಿ ಪಾಳೆಯಗಾರರು

೫. ಕುಡಿತಿನಿ ಪಾಳೆಯಗಾರರು

೬. ಹರಪನಹಳ್ಳಿ ಪಾಳೆಯಗಾರರು

೭. ವೀರನದುರ್ಗ ಪಾಳೆಯಗಾರರು

ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ನಿರ್ಲಕ್ಷಿತ ಸಮುದಾಯಗಳಿಗೆ ಚೈತನ್ಯ ನೀಡುವಂತೆ ಹಲವು ಸ್ವತಂತ್ರ ಪಾಳೆಯಗಾರ ಸಂಸ್ಥಾನಗಳು ರಾಜಾಳ್ವಿಕೆ ಮಾಡಿದವು. ಬಳ್ಳಾರಿ ಜಿಲ್ಲೆಯಲ್ಲಿದ್ದ *ಈ* ಪಾಳೆಯಗಾರರ ಬಗ್ಗೆ ಸಮಗ್ರ ವಿವರ *ಈ* ಕೃತಿಯಲ್ಲಿದೆ.




**೬೫. ಬಾದಾಮಿ : ಸಾಂಸ್ಕೃತಿಕ ಅಧ್ಯಯನ**

ಲೇ: ಶೀಲಾಕಾಂತ ಪತ್ತಾರ

ಪುಟ: x+೩೬೪, ವರ್ಷ: ೨೦೦೦, ರೂ: ೧೫೦.೦೦

ಚಾಲುಕ್ಯರ ರಾಜಧಾನಿಯಾಗಿದ್ದು ಕರ್ನಾಟಕ ಸಂಸ್ಕೃತಿ ಹಿರಿಮೆಯನ್ನು ಮೆರೆದ ಪ್ರಮುಖ ಐತಿಹಾಸಿಕ ಪಟ್ಟಣವಾದ ಬಾದಾಮಿಯ ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ಜೀವನದ ಬಗ್ಗೆ *ಈ* ಗ್ರಂಥ ವಿಪುಲ ಮಾಹಿತಿ ನೀಡುತ್ತದೆ. ಚಾಲುಕ್ಯ ಅರಸರ ಸಾಂಸ್ಕೃತಿಕ ನೆಲೆಯಾಗಿದ್ದ ಬಾದಾಮಿ ಅನುಭವಿಸಿದ ರಾಜಕೀಯ ಏರಿಳಿತ, ಹಾಗೆಯೇ ತನ್ನ ಸಾಂಸ್ಕೃತಿಕ ಕ್ಷಿತಿಜವನ್ನು ಹಿಗ್ಗಿಸಿದ ರೀತಿ, ಸಾಮಾಜಿಕ ಜೀವನವನ್ನು ವಿಕಸನಗೊಳಿಸಿದ ಪರಿ, ಅಲ್ಲಿ ಧಾರ್ಮಿಕ ಬೆಳಕು ಪಸರಿಸಿದ ವಿಧಾನ ಇವೆಲ್ಲವೂ *ಈ* ಅಧ್ಯಯನ ಗ್ರಂಥದಲ್ಲಿವೆ.




**೬೬. ಬುಸಾತಿನೆ-ಸಲಾತೀನ**

ಪರ್ಶಿಯನ್ ಮೂಲ: ಮಹಮ್ಮದ್ ಇಬ್ರಾಹಿಮ್ ಜುಬೇರಿ

ಮರಾಠಿಯಿಂದ ಕನ್ನಡಕ್ಕೆ ಅನು : ಕೃಷ್ಣಕೊಲ್ಹಾರ ಕುಲಕರ್ಣಿ

ಪುಟ: xxxiv+೫೬೦, ವರ್ಷ: ೧೯೯೯, ರೂ: ೩೦೦.೦೦

ಪರಿವಿಡಿ

೧. ಯೂಸುಫ್ ಆದಿಲಶಾಹಿ

೨. ಇಸ್ಮಾಯಿಲ ಆದಿಲ್‌ಶಾಹಿ

೩. ಇಬ್ರಾಹಿಮ ಆದಿಲಶಾಹಿ - 1

೪. ಅಲಿ ಆದಿಲಶಾಹಿ - I

೫. ಎರಡನೆಯ ಇಬ್ರಾಹಿಮ ಆದಿಲಶಾಹಿ

೬. ಮಹಮ್ಮದ್ ಆದಿಲಶಾಹಿ

೭. ಎರಡನೇ ಅಲಿ ಆದಿಲಶಾಹಿ

೮. ಸಿಕಂದರ್ ಆದಿಲಶಾಹಿ

ಮೂಲತಃ ಪರ್ಶಿಯನ್ ಗ್ರಂಥವಾಗಿರುವ 'ಬುಸಾತಿನೆ-ಸಲಾತಿನ' ಇದರ ಕರ್ತೃ ಮಹಮ್ಮದ್ ಇಬ್ರಾಹಿಮ ಜುಬೇರಿಯು ವಿಜಾಪುರದ ಜಿಲ್ಲೆಯವನು. ಸುಮಾರು ಇನ್ನೂರು ವರ್ಷಗಳ ಕಾಲ ವಿಜಾಪುರವನ್ನು ಆಳಿದ ಆದಿಲ್‌ಶಾಹಿಗಳ ಚರಿತ್ರೆಯನ್ನು ಒಂದೆಡೆ ದಾಖಲಿಸಲು 'ಬುಸಾತಿನೆ-ಸಲಾತಿನ' ಕೃತಿಯನ್ನು ೧೮೨೪-೩೦ರ ಮಧ್ಯದಲ್ಲಿ ಜುಬೇರಿಯು ಕೈಗೆತ್ತಿಕೊಂಡು ಬರೆದು ಮುಗಿಸಿದೊಡನೆ ಅದನ್ನು ನರಸಿಂಹ ವಿಠಲ ಪಾರಸನೀಸ ಎಂಬಾತ ಮರಾಠಿಗೆ ಅನುವಾದ ಮಾಡಿದ. *ಈ* ಮರಾಠಿ ಅನುವಾದವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ.




**೬೭. ಭಗ್ನ ವಿಜಯನಗರ ಚರಿತ್ರೆ**

ತೆಲುಗು ಮೂಲ : ಕುಂದೂರಿ *ಈ*ಶ್ವರದತ್ತ

ಕನ್ನಡಕ್ಕೆ ಅನು : ಗುರುಮೂರ್ತಿ ಪೆಂಡಕೂರು

ಪುಟ : XX + ೧೩೬, ವರ್ಷ : ೨೦೧೦, ರೂ. ೮೦.೦೦

ಕರ್ನಾಟಕ ಸಾಹಿತ್ಯಸಂಸ್ಕೃತಿ ಚರಿತ್ರೆಯಲ್ಲಿ ಮಹತ್ತರ ಪಾತ್ರವಹಿಸಿದ ವಿಜಯನಗರ ಸಾಮ್ರಾಜ್ಯದ ಕುರಿತು ತೆಲುಗಿನ ಪ್ರಕಾಂಡ ಪಂಡಿತ ಕುಂದೂರಿಯವರು ಸಮಸ್ತ ಆಕರಗಳನ್ನು ಪರಿಶೀಲಿಸಿ ಬರೆದಿರುವ ಜೀರ್ಣ ವಿಜಯನಗರ ಚರಿತಮು ಎಂಬ ಗ್ರಂಥದ ಕನ್ನಡ ಅವತರಣಿಕೆಯಿದು. ರಾಜಧರ್ಮವನ್ನು ನಿಷ್ಠೆಯಿಂದ ಪರಿಪಾಲಿಸಿದ ವಿಜಯನಗರ ಸಾಮ್ರಾಜ್ಯದ ಕಾರ್ಯಭಾರ ಕ್ರಮ, ಆ ಸಮಾಜದ ಸಂಸ್ಕೃತಿ, ಕಲೆ, ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ *ಈ* ಕೃತಿ ಸಾಕಷ್ಟು ಹೊಸ ಮಾಹಿತಿಗಳನ್ನು ನೀಡುತ್ತದೆ. ಭಗ್ನ ವಿಜಯನಗರ ಅವಶೇಷಗಳ ಬಗ್ಗೆಯೂ *ಈ* ಕೃತಿಯಲ್ಲಿ ಆಸಕ್ತಿಪೂರ್ಣ ವಿಷಯಗಳನ್ನು ದಾಖಲಿಸಲಾಗಿದೆ.

**೬೮. ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ**

ಆಂಗ್ಲಮೂಲ : ರಾಬರ್ಟ್ ಸಿವೆಲ್

ಕನ್ನಡಕ್ಕೆ ಅನು : ಸದಾನಂದ ಕನವಳ್ಳಿ

ಪುಟ: viii+೪೪೨, ವರ್ಷ: ೧೯೯೨, ರೂ: ೧೨೦.೦೦

ಪರಿವಿಡಿ

೧. ಸಾಮ್ರಾಜ್ಯದ ಮೂಲ; ಪ್ರಥಮ ರಾಜರು

೨. ಸಾಮ್ರಾಜ್ಯದ ಬೆಳವಣಿಗೆ; ಪ್ರಥಮ ರಾಜವಂಶದ ಮುಕ್ತಾಯ
೩. ಎರಡನೇ ರಾಜವಂಶದ ಪ್ರಥಮ ರಾಜರು
೪. ಕೃಷ್ಣದೇವರಾಯರ ಆಳ್ವಿಕೆ, ಕೃಷ್ಣನ ಆಳ್ವಿಕೆ ಕೊನೆ
೫. ಕೃಷ್ಣದೇವನ ಕಟ್ಟಡ, ನಿರ್ಮಾಣ, ಶಾಸನಗಳು
೬. ಅಚ್ಯುತದೇವರಾಯನ ಆಳ್ವಿಕೆ
೭. ವಿಜಯನಗರ ವಿನಾಶ
೮. ಮೂರನೆಯ ರಾಜವಂಶ
೯. ಪ್ರವಾಸಿಗಳ ದಿನಚರಿ

ಇಸವಿ ೧೩೩೬ರಿಂದ ೧೬೧೬ರ ವರೆಗಿನ ವಿಜಯನಗರದ ಇತಿಹಾಸದ ಜತೆಗೆ ಆ ಕಾಲದ ಪ್ರವಾಸಿಗಳಾದ ಡೊಮಿಂಗೊ ಪಿಯಸ್‌ನ ದಿನಚರಿ, ದಾಖಲೆಗಳ ಇಂಗ್ಲಿಷ್ ಅನುವಾದ ಮತ್ತು ಫೆರ್ನಾವೋ ನ್ಯೂನಿಝ್‌ನ ದಿನಚರಿ ಕಡತಗಳ ಅನುವಾದವನ್ನು *ಈ* ಆಂಗ್ಲ ಭಾಷೆಯ ಇತಿಹಾಸ ಗ್ರಂಥದಲ್ಲಿ ಅಳವಡಿಸಲಾಗಿದೆ. ವಿಜಯನಗರ ಚರಿತ್ರೆಯನ್ನು ಕಾವ್ಯಮಯ ಭಾಷೆಯಲ್ಲಿ, ಆ ಕಾಲದ ಪ್ರವಾಸಿಗರ ದಾಖಲೆಗಳನ್ನು ಹಾಗು ಲಭ್ಯ ಇತಿಹಾಸ ಗ್ರಂಥ ಶಾಸನಗಳನ್ನು ಅನುಸರಿಸಿ ರಾಬರ್ಟ್ ಸಿವೆಲ್ ಅವರು ಪುನರ್‌ರೂಪಿಸಿದ್ದು, ಸದಾನಂದ ಕನವಳ್ಳಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.




**೧೯. ಮರೆಯಲಾಗದ ಮಹಾಸಾಮ್ರಾಜ್ಯ**
ಮೂಲ: ಬಿ.ಸೂರ್ಯನಾರಾಯಣರಾವ್
ಕನ್ನಡಕ್ಕೆ: ಬಾಲಸುಬ್ರಹ್ಮಣ್ಯ
ಪುಟ: xxxii+೪೯೨, ವರ್ಷ: ೨೦೦೦, ರೂ: ೨೦೦.೦೦
ಪರಿವಿಡಿ
೧. ವಿಜಯನಗರದ ಮೂಲ: ಆನೆಗೊಂದಿ ಪ್ರಾಚೀನ ಇತಿಹಾಸ
೨. ವಿಜಯನಗರ-ವಿದ್ಯಾನಗರ: ಪ್ರಾಚೀನ ಇತಿಹಾಸ
೩. ವಿಜಯನಗರ ಪೂರ್ವದ ಇತಿಹಾಸ; ದಕ್ಷಿಣ ಭಾರತದ
೪. ವಿಜಯನಗರ ಪೂರ್ವದ ಇತಿಹಾಸ ಓರಿಸ್ಸಾ, ವಾರಂಗಲ್
೫. ಪ್ರಾಚೀನ ಕಾಲದ ನಾಗರಿಕತೆಯ ಸ್ಥಿತಿಗತಿಗಳು
೬. ವಿಜಯನಗರ ಪೂರ್ವದ ಭಾರತ-ಮಹಮ್ಮದೀಯರ ಪ್ರಾಬಲ್ಯ
೭. ವಿಜಯನಗರದ ಅರಸರು-ಸಂಗಮ ವಂಶದಿಂದ ಪತನದವರೆಗೆ

"ಎ ಹಿಸ್ಟರಿ ಆಫ್ ವಿಜಯನಗರ ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್" ಎಂಬ ಕೃತಿಯ ಅನುವಾದವಿದು. *ಈ* ಕೃತಿಯಲ್ಲಿ ಇತಿಹಾಸದ ಹಲವು ಘಟನೆಗಳು, ದೇಶೀಯ ಸಾಹಿತ್ಯ, ಸಂಸ್ಕೃತಿಯ ಮಾಹಿತಿ, ಶಾಸನ, ಸಮಕಾಲೀನ ಪ್ರವಾಸ ಕಥನ, ಕ್ಷೇತ್ರಕಾರ್ಯಗಳ ಸವಿಸ್ತಾರ ಮಾಹಿತಿ ಇದೆ. ಇದು ಐತಿಹಾಸಿಕ ಆದರಲ್ಲೂ ವಿಜಯನಗರ ಸಾಮ್ರಾಜ್ಯದ ಬಗೆಗಿನ ಮಹತ್ವದ ಆಕರ ಗ್ರಂಥವಾಗಿದೆ.



**೨೦. ಮಲೆಕರ್ನಾಟಕದ ಅರಸು ಮನೆತನಗಳು**
ಸಂ: ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್
ಪುಟ: xiv+೩೫೬, ವರ್ಷ: ೨೦೦೦, ರೂ: ೧೨೫.೦೦
ಪರಿವಿಡಿ
೧. ರಾಜ್ಯ ಸಂಸ್ಕೃತಿಯ ನಿರ್ಮಾಣ : ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳು
೨. ಹೆಚ್ಚೆಯ ಅರಸರು; ಹೊಂಬುಜದ ಸಾಂತರರು; ಬಂದಳಿಕೆ ಅರಸರು
೩. ಉದ್ರಿಯ ಅರಸರು; ಬೆಳಗುತ್ತಿ ಸಿಂದರು; ಹೊಸಗುಂದದ ಅರಸರು
೪. ಆಸಂದಿಯ ಅರಸರು; ಹಾರುವ ಬೆಲುಹೂರು ಕದಂಬರು; ಕೊಂಗಾಳ್ವರು
೫. ಚಂಗಾಳ್ವರು; ಆರಗದ ಅರಸರು; ಸಂತೇಬೆನ್ನೂರು ನಾಯಕರು
೬. ದಾನಿವಾಸ ಒಡೆಯರು; ಬೇಲೂರು ನಾಯಕರು; ಹಾಲೇರಿ ಅರಸರು
೮. ಪ್ರಾದೇಶಿಕ ಕಿರು ಅರಸುಮನೆತನಗಳ ಅಧ್ಯಯನ ಪ್ರಸ್ತುತತೆ

ಚರ್ಚೆ ಹಾಗೂ ಅಧ್ಯಯನದ ಕಣ್ಣಿಗೆ ಬೀಳದೆ ಸುಪ್ತವಾಗಿ ಉಳಿದುಬಿಟ್ಟಿರುವ ಅಥವ ವಿದ್ವಾಂಸರ ಅವಜ್ಞೆಗೆ ಗುರಿಯಾಗಿ ನಿಜವಾದ ನೆಲೆಯನ್ನು ಮತ್ತು ಪ್ರಚಾರವನ್ನು ಕಾಣದ ಮಲೆಕರ್ನಾಟಕದ ಹದಿನೈದು ಅರಸು ಮನೆತನಗಳ ಬಗ್ಗೆ ಕೂಲಂಕಷವಾಗಿ, ಆಳವಾದ ಸಂಶೋಧನೆ ನಡೆಸಿರುವ ಕೃತಿಯಿದು. ಪ್ರಾದೇಶಿಕ ಇತಿಹಾಸದ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುವ ಮೂಲಕ ಮಲೆನಾಡಿನ ಕೆಲವು ಪ್ರಸಿದ್ಧ ಕಿರು ಅರಸರ ಸಾಧನೆ, ವೈಶಿಷ್ಟ್ಯ ಮತ್ತು ಪಾತ್ರವನ್ನು *ಈ* ಕೃತಿಯಲ್ಲಿ ವಿವರಿಸಲಾಗಿದೆ.




**೨೧. ಮೌರ್ಯ ಮತ್ತು ಶಾತವಾಹನ ಯುಗ**
ಲೇ: ಲಕ್ಷ್ಮಣ್ ತೆಲಗಾವಿ
ಪುಟ: XVIII+೨೭೦, ವರ್ಷ: ೨೦೦೪, ರೂ: ೧೦೦.೦೦
ಪರಿವಿಡಿ
೧. ಕರ್ನಾಟಕ ಸಂಸ್ಕೃತಿ ಪುರಾತಾತ್ವಿಕ ಚಾರಿತ್ರಿಕ ಆಯಾಮಗಳು
೨. ಮೌರ್ಯಕಾಲೀನ ಸಂಸ್ಕೃತಿ (ಕಿ.ಪೂ.೩-ಕಿ.ಪೂ. ೨)
೩. ಶಾತವಾಹನಕಾಲೀನ ಸಂಸ್ಕೃತಿ (ಕಿ.ಪೂ.೧-ಕ್ರಿ.ಶ.೩)

ಮೌರ್ಯ ಮತ್ತು ಶಾತವಾಹನ ಕಾಲದ ಕರ್ನಾಟಕದಲ್ಲಿನ ಸಾಂಸ್ಕೃತಿಕ ಪರಿಸರದ ಸಮಗ್ರ ವಿವರ ಚಿತ್ರಣವನ್ನು ಇಲ್ಲಿ ಸಮರ್ಥವಾಗಿ ಕಟ್ಟಿಕೊಡಲಾಗಿದೆ. ಚರಿತ್ರಾರಂಭ ಕಾಲದ ಕರ್ನಾಟಕದ ಸಾಂಸ್ಕೃತಿಕ ಪರಿಸರದ ಚಿತ್ರಣವನ್ನೂ *ಈ* ಗ್ರಂಥದಲ್ಲಿ ಸ್ಪಷ್ಟವಾಗಿ ದಾಖಲಿಸಲಾಗಿದೆ.

**೭೨. ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದು ಕರ್ನಾಟಕ ವಿಮೋಚನಾ ಚಳುವಳಿ**

ಲೇ: ಅಮರೇಶ ನುಗಡೋಣಿ

ಪುಟ: ii+೩೨, ವರ್ಷ: ೨೦೦೦, ರೂ: ೧೦.೦೦

ನಿಜಾಮರ ಆಳ್ವಿಕೆಯಲ್ಲಿ ಸೋತು ಹೈರಾಣಾದ ಕನ್ನಡಿಗರು ಅವರ ಆಡಳಿತದ ವಿರುದ್ಧ ಬಂಡೆದ್ದು ನಡೆಸಿದ ಹೋರಾಟ, ಅನುಭವಿಸಿದ ನೋವು *ಈ* ಪುಟ್ಟ ಕೃತಿಯಲ್ಲಿ ಪ್ರತಿಫಲಿತಗೊಂಡಿದೆ. ವಿಶೇಷವಾಗಿ ರಾಯಚೂರು ಜಿಲ್ಲೆಯಲ್ಲಿ ನಡೆದ ಹೈದರಾಬಾದ್ ವಿಮೋಚನಾ ಚಳುವಳಿಯ ಚಿತ್ರಣದ ಜತೆಗೆ, ಸೂಕ್ಷ್ಮ ವಿವರಗಳು ಸಂಕ್ಷಿಪ್ತವಾಗಿ *ಈ* ಕಿರುಹೊತ್ತಿಗೆಯಲ್ಲಿ ದಾಖಲಾಗಿವೆ.



**೭೩. ವಸಾಹತುಕಾಲೀನ ಬಳ್ಳಾರಿ ಜಿಲ್ಲೆ**

ಸಂ : ವಿರೂಪಾಕ್ಷಿ ಪೂಜಾರಹಳ್ಳಿ

ಪುಟ : xii + ೨೩೮+೨೦, ವರ್ಷ : ೨೦೦೯, ರೂ. ೧೨೦.೦೦

ಪರಿವಿಡಿ

೧. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ
೨. ವಸಾಹತುಕಾಲೀನ ಬಳ್ಳಾರಿ ಜಿಲ್ಲೆ (೧೮೦೦-೧೯೪೭)
೩. ವಸಾಹತುಶಾಹಿಯ ಪ್ರಭಾವ ಮತ್ತು ಪರಿಣಾಮಗಳು (ಪ್ರಗತಿ ಮತ್ತು ಪರಿವರ್ತನೆ)
೪. ಅಭಿವೃದ್ಧಿಯ ವಿವಿಧ ಆಯಾಮಗಳು
೫. ವಸಾಹತು ಕಾಲದ ಹಂಪಿ ಸ್ಮಾರಕಗಳ ರಕ್ಷಣಾ ಕಾರ್ಯ
೬. ವಸಾಹತುಶಾಹಿ ವಿರುದ್ಧ ಪ್ರತಿರೋಧ ಹಾಗೂ ಸ್ವಾತಂತ್ರ್ಯ ಹೋರಾಟ
೭. ಆಧುನಿಕ (ಏಕೀಕರಣೋತ್ತರ) ಬಳ್ಳಾರಿ ಜಿಲ್ಲೆ.

ವಸಾಹತು ಸಂದರ್ಭದಲ್ಲಿ ಕರ್ನಾಟಕದ ಸಂಸ್ಕೃತಿ, ಭಾಷೆ, ಸಾಹಿತ್ಯ ಆಡಳಿತ ಇತ್ಯಾದಿಗಳನ್ನು ಪರಿಗಣಿಸಿ ಒಂದು ಆಡಳಿತ ನೆಲೆಯನ್ನು ಸ್ಥಾಪಿಸುವಲ್ಲಿ ಬ್ರಿಟಿಷರ ಕೊಡುಗೆ ಅಪಾರವಾಗಿದೆ. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಸುಮಾರು ೧೫೦ ವರ್ಷಗಳ ಕಾಲ ಆಡಳಿತ ನಡೆಸಿದ ೧೧೨ ಕಲೆಕ್ಟರ್‌ಗಳು, ಮದ್ರಾಸ್ ಆಧಿಪತ್ಯಕ್ಕೆ ಸೇರಿದ ಬಳ್ಳಾರಿ ಜಿಲ್ಲೆಯ ಪ್ರಗತಿಯನ್ನು ವಿವಿಧ ಆಯಾಮಗಳ ಮೂಲಕ ಸಾಧಿಸಿದ್ದು *ಈಗ* ಇತಿಹಾಸ. ಹೀಗಾಗಿ ಬಳ್ಳಾರಿ ಜಿಲ್ಲೆಯ ವಸಾಹತು ಕಾಲದ ಸಂದರ್ಭದಲ್ಲಿನ ಪೂರ್ವಸ್ಥಿತಿ ಹಾಗೂ ಬೆಳವಣಿಗೆ ಅಲ್ಲದೆ, ಪರಿಣಾಮ ಮತ್ತು ದುಷ್ಪರಿಣಾಮಗಳನ್ನು *ಈ* ಗ್ರಂಥದಲ್ಲಿ ದಾಖಲಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಬ್ರಿಟಿಷರ ಆಳ್ವಿಕೆಯ ಬಗ್ಗೆ ಸಮಗ್ರ ವಿವರ ನೀಡುವ *ಈ* ಕೃತಿಯ ಮುಖಾಂತರ ಇಡೀ ಭಾರತದ ವಸಾಹತು ಸಂದರ್ಭದ ರಾಷ್ಟ್ರೀಯ ವಿಷಯಗಳು, ಆಡಳಿತ ರೂಪುರೇಷೆಗಳು, ಪ್ರತಿಭಟನೆ ಪ್ರತಿರೋಧದ ವಿವರಗಳನ್ನು ಇಲ್ಲಿ ಸೂಕ್ಷ್ಮವಾಗಿ ದಾಖಲಿಸಿರುವುದು *ಈ* ಕೃತಿಯ ವಿಶೇಷ.



**೭೪. ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ**

ಲೇ: ಕೆ.ಮೋಹನ್‌ಕೃಷ್ಣ ರೈ

ಪುಟ: x+೭೪, ವರ್ಷ: ೨೦೦೬, ರೂ: ೬೦.೦೦

ಪರಿವಿಡಿ

೧. ಪ್ರಮುಖ ನಗರ ಕೇಂದ್ರಗಳು
೨. ನಗರ ಕೇಂದ್ರಗಳ ಸ್ಥಿತ್ಯಂತರ
೩. ನಗರ ಅರ್ಥ ವ್ಯವಸ್ಥೆ
೪. ನಗರ ಆಡಳಿತ
೫. ತಳೆದ ತೀರ್ಮಾನಗಳು

*ಈ* ಕೃತಿಯಲ್ಲಿ ಮೌರ್ಯರಿಂದ ಮೈಸೂರು ಸುಲ್ತಾನರವರೆಗಿನ ಬೇರೆ ಬೇರೆ ರಾಜಮನೆತನಗಳ ಆಳ್ವಿಕೆಯಲ್ಲಿ ಪಟ್ಟಣಗಳು ಮತ್ತು ನಗರಗಳು ನಿರ್ಮಾಣಗೊಂಡ ಹಾಗೂ ಕ್ರಿಯಾಶೀಲವಾದ ಬಗೆಗಳನ್ನು ಅಧ್ಯಯನ ಮಾಡಲಾಗಿದೆ. ನಗರ ಅಥವಾ ಪಟ್ಟಣ ಎನ್ನುವ ಪರಿಕಲ್ಪನೆಯನ್ನೂ ಇಲ್ಲಿ ಚರ್ಚಿಸಲಾಗಿದೆ. ರಾಜಧಾನಿ ಪಟ್ಟಣಗಳು, ವ್ಯಾಪಾರಿ ಕೇಂದ್ರಗಳಂತಹ ಬಂದರು ಪಟ್ಟಣಗಳು, ಧಾರ್ಮಿಕ ಕೇಂದ್ರಗಳು ಹೇಗೆ ನಗರಗಳ ಆಕಾರವನ್ನು ಪಡೆದವು ಎನ್ನುವುದನ್ನು ನಿದರ್ಶನಗಳ ಮೂಲಕ ಇಲ್ಲಿ ವಿವರಿಸಲಾಗಿದೆ. ಕೃಷಿಯೇತರ ಚಟುವಟಿಕೆಗಳು ಸಂಘಟಿತ ಆರ್ಥಿಕ ಚಟುವಟಿಕೆಗಳಾಗಿ ಕಾಣಿಸಿಕೊಂಡಾಗ ನಗರಗಳು ಹೇಗೆ ರೂಪು ತಾಳುತ್ತವೆ ಹಾಗೂ ಉತ್ಪಾದನೆ ಮತ್ತು ಆರ್ಥಿಕತೆಯ ಸಂಬಂಧಗಳು ನಗರಗಳ ಸ್ವರೂಪವನ್ನು ಹೇಗೆ ನಿರ್ಧರಿಸುತ್ತವೆ ಎನ್ನುವ ಸಂಗತಿಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

**೭೫. ವಸಾಹತುಪೂರ್ವ ಕರ್ನಾಟಕದ ರಾಜ್ಯಪದ್ಧತಿ**

ಲೇ. ರಾಜಾರಾಮ ಹೆಗಡೆ

ಪುಟ: vi+೩೬, ವರ್ಷ :೨೦೦೮, ರೂ: ೧೦

ವಸಾಹತುಪೂರ್ವ ಕರ್ನಾಟಕದ ರಾಜ್ಯಪದ್ಧತಿಯ ಕುರಿತು ಇರುವ ಪರಿಕಲ್ಪನೆಗಳು ಹಾಗೂ ವಾಗ್ವಾದಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.




**೭೬. ವಸಾಹತುಶಾಹಿ ಮತ್ತು ನಗರೀಕರಣ**

ಲೇ: ಕೆ. ಮೋಹನ್‌ಕೃಷ್ಣ ರೈ

ಪುಟ: viii+೧೩೦, ವರ್ಷ: ೨೦೦೭, ರೂ: ೬೦.೦೦

ಪರಿವಿಡಿ

೧. ವಸಾಹತು ಕರ್ನಾಟಕದ ಭೌಗೋಳಿಕ ಎಲ್ಲೆಕಟ್ಟುಗಳು
೨. ಕೃಷಿಯ ವಾಣಿಜ್ಯೀಕರಣ ಮತ್ತು ಮಾರುಕಟ್ಟೆಯ ಪ್ರವೇಶ
೩. ವ್ಯಾಪಾರ ಮತ್ತು ವಾಣಿಜ್ಯ
೪. ಕೈಗಾರಿಕೆ ಮತ್ತು ಕೈಗಾರೀಕರಣ
೫. ಸಾರಿಗೆ ವ್ಯವಸ್ಥೆ
೬. ಮುನಿಸಿಪಾಲಿಟಿಗಳು ಮತ್ತು ನಗರಾಡಳಿತ
೭. ಕೆಲವು ತೀರ್ಮಾನಗಳು

ವಸಾಹತು ಕರ್ನಾಟಕ ಭೌಗೋಳಿಕ ಎಲ್ಲೆಕಟ್ಟುಗಳನ್ನು ಶೋಧಿಸಿ, ವಾಣಿಜ್ಯೀಕರಣ ಮತ್ತು ಮಾರುಕಟ್ಟೆಯ ಪ್ರವೇಶ, ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಕೈಗಾರಿಕೀಕರಣ, ಸಾರಿಗೆ ವ್ಯವಸ್ಥೆ, ಮುನಿಸಿಪಾಲಿಟಿಗಳು ಮತ್ತು ನಗರಾಡಳಿತ ಅಧಿಕಾರ ಹೀಗೆ ಆರ್ಥಿಕ ಸಾಮಾಜಿಕ ಮತ್ತು ಆಡಳಿತದ ನೆಲೆಗಳಲ್ಲಿ ವಸಾಹತು ಕರ್ನಾಟಕವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹಾಗೂ ವಸಾಹತುಶಾಹಿ ಕರ್ನಾಟಕದ ನಗರಗಳ ನಿರ್ಮಾಣದ ಹಿಂದಿನ ಉದ್ದೇಶಗಳು ಮತ್ತು ನಗರಗಳ ಸಂರಚನೆಯ ಅಧ್ಯಯನ ಇದಾಗಿದೆ.

**೭೭. ವಿಜಯನಗರ ಕಾಲದ ರಾಮಾನುಜಕೂಟಗಳು**

ಸಂ : ಲಕ್ಷ್ಮಣ್ ತೆಲಗಾವಿ

ಪುಟ : iv + ೩೨, ವರ್ಷ : ೨೦೦೯, ರೂ. ೧೦.೦೦

ರಾಮಾನುಜಾಚಾರ್ಯರ ಶಿಷ್ಯಂದಿರು ಗುರುಗಳ ಬಗೆಗೆ ಪೂಜ್ಯಭಾವನೆಯಿಂದ ನಿರ್ಮಿಸಿದ ರಾಮಾನುಜಕೂಟಗಳ ಬಗ್ಗೆ *ಈ* ಕೃತಿ ವಿವೇಚಿಸುತ್ತದೆ. ರಾಮಾನುಜ ಪಂಥವು ವಿಜಯನಗರ ದರಸರ ಮೇಲೆ ಬೀರಿದ ಪ್ರಭಾವ ಹಾಗೂ ರಾಮಾನುಜರ ತತ್ವ ಸಿದ್ಧಾಂತಗಳಿಗೆ ಅನುಸಾರವಾಗಿ ವಿಜಯನಗರದಲ್ಲಿ ಅಸ್ತಿತ್ವಕ್ಕೆ ಬಂದ ರಾಮಾನುಜಕೂಟಗಳ ಬಗ್ಗೆಯೂ *ಈ* ಕಿರುಪುಸ್ತಿಕೆಯಲ್ಲಿ ಮಹತ್ವದ ಅಧ್ಯಯನ ಮಾಹಿತಿಗಳಿವೆ.

**೭೮. ವಿಜಯನಗರ ಕಾಲದ ಸಂಸ್ಕೃತಿ**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: xii+೧೫೪, ವರ್ಷ: ೨೦೦೮, ರೂ: ೬೦.೦೦




ಪರಿವಿಡಿ

೧. ಸಂಸ್ಕೃತಿ ಕುರಿತ ಚಿಂತನೆಗಳು
೨. ಬೇಟೆ
೩. ಪಶುಪಾಲನೆ
೪. ಕೃಷಿ

ವಿಜಯನಗರ ಅರಸರು ತಮ್ಮ ವೈಯಕ್ತಿಕ ಜೀವನದ ಜೊತೆ ಜೊತೆಗೆ ಸಮುದಾಯ ಜೀವನಾಂಶದ ವಿವರಗಳಿಗೆ ವಿಶೇಷ ಗಮನ ಹರಿಸಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬೇಟೆ, ಪಶುಪಾಲನೆ ಮತ್ತು ಕೃಷಿವ್ಯವಸ್ಥೆಗಳನ್ನು ಸಾಹಿತ್ಯ, ಚರಿತ್ರೆ, ವಾಸ್ತುಶಿಲ್ಪ, ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳ ಮೂಲಕವೂ ಇಲ್ಲಿ ವಿಶ್ಲೇಷಿಸಲಾಗಿದೆ.

**೭೯. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ**

ಲೇ: ಸಿ.ಟಿ.ಎಂ.ಕೊಟ್ರಯ್ಯ

ಅನು: ಎಂ.ಧ್ರುವನಾರಾಯಣ

ಪುಟ: xii+೨೫೮, ವರ್ಷ: ೨೦೦೧, ರೂ: ೧೨೫.೦೦

ಪರಿವಿಡಿ

೧. ಪುರಾತನ ಭಾರತದಲ್ಲಿಯ ನೀರಾವರಿ ಕಾಮಗಾರಿಗಳು; ದಕ್ಷಿಣ ಭಾರತದಲ್ಲಿ ನೀರಾವರಿ ಕಾಮಗಾರಿಗಳು
೨. ವಿಜಯನಗರ ಆಡಳಿತಾವಧಿಯಲ್ಲಿ ವಿಸ್ತೃತ ಕಾಮಗಾರಿಗಳು
೩. ನದಿನೀರಾವರಿ : ಅಣೆಕಟ್ಟುಗಳು ಹಾಗೂ ಕಾಲುವೆಗಳು
೪. ಕೆರೆ ನೀರಾವರಿ
೫. ಬಾವಿ ಮತ್ತು ಊಟಿ ಬಾವಿ ನೀರಾವರಿ
೬. ಸಹಾಯಕ ಕಾಮಗಾರಿಗಳು

ವಿಜಯನಗರ ಆಡಳಿತಾವಧಿಯಲ್ಲಿ ಜನಸಾಮಾನ್ಯರು ಅಧಿಕಾರಿಗಳು ಹಾಗೂ ಆಳರಸರು ಸಂದರ್ಭಗಳಿಗನುಗುಣವಾಗಿ ಸಾಮ್ರಾಜ್ಯದ ಮತ್ತು ಪ್ರಜೆಗಳ ಕ್ಷೇಮಾಭಿವೃದ್ಧಿ ಸದುದ್ದೇಶಕ್ಕಾಗಿ ನೀರಾವರಿ ಕಾಮಗಾರಿಗಳ ಮೂಲಕ ಶ್ರಮಿಸಿದ ಪರಿಯನ್ನು *ಈ* ಗ್ರಂಥದಲ್ಲಿ ಪ್ರಸ್ತುತ ಪಡಿಸಲಾಗಿದೆ. 'ಇರಿಗೇಷನ್ ಸಿಸ್ಟಮ್ಸ್ ಅಂಡರ್ ವಿಜಯನಗರ ಎಂಪೈರ್' ಎಂಬ ಪುಸ್ತಕದ ಕನ್ನಡಾನುವಾದವಿದು. ವಿಜಯನಗರದ ಅರಸರು ರಾಜಕಾರಣದ ಜತೆಗೆ ಆರ್ಥಿಕ ಸಂಪನ್ಮೂಲ ಗಳನ್ನು ವೃದ್ಧಿಸಿಕೊಳ್ಳುವ ತವಕದಲ್ಲಿ ಬಾವಿ, ಕೆರೆಕಟ್ಟೆಗಳನ್ನು ನಿರ್ಮಿಸಿದ ಬಗೆ ಹಾಗೂ

ಆ ಕಾಲದ ತಂತ್ರಜ್ಞಾನದ ಮಟ್ಟ ಯಾವ ಹಂತದಲ್ಲಿತ್ತು ಎಂಬುದನ್ನು *ಈ* ಕೃತಿಯಲ್ಲಿ ವಿವರಿಸಲಾಗಿದೆ.

### ೮೦. ಶ್ರೀ ಕೃಷ್ಣದೇವರಾಯ

ಲೇ: ಕುಂ.ವೀರಭದ್ರಪ್ಪ

ಪುಟ: iv+೪೨, ವರ್ಷ: ೨೦೦೧, ರೂ: ೧೦.೦೦

ವಿಜಯನಗರ ಸಾಮ್ರಾಜ್ಯದ ಸಂಕ್ಷಿಪ್ತ ಇತಿಹಾಸ ಹಾಗೂ ಶ್ರೀ ಕೃಷ್ಣದೇವರಾಯನ ಆಳ್ವಿಕೆ, ಆತನ ಕೌಟುಂಬಿಕ ವಿವರಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕೃತಿಯಲ್ಲಿ ಲಭ್ಯವಿದೆ.




### ೮೧. ಸವಣೂರು ನವಾಬರು

ಲೇ: ಗೋವಿಂದಮೂರ್ತಿ ದೇಸಾಯಿ

ಪುಟ: vi+೧೮೮, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧. ಅಬ್ದುಲ್ ರವೂಫ್‌ಖಾನ್ (೧೬೮೬-೧೭೧೯)
೨. ಅಬ್ದುಲ್ ಗಫಾರ್‌ಖಾನ್ ನವಾಬ (೧೭೨೦-೧೭೨೫)
೩. ಅಬ್ದುಲ್ ಮಜೀದ್‌ಖಾನ್ (೧೭೨೫-೧೭೫೪)
೪. ಅಬ್ದುಲ್ ಹಕೀಮಖಾನ್ (೧೭೫೪-೧೭೯೫)
೫. ಅಬ್ದುಲ್ ಖೈರಖಾನ್ ನವಾಬ (೧೭೯೬-೧೮೨೭)
೬. ಅಬ್ದುಲ್ ಫಯಾಜಖಾನ್ ಎರಡು ತಿಂಗಳ ಪಟ್ಟಿ
೭. ಅಬ್ದುಲ್ ಮುನವರ್‌ಖಾನ್ ನವಾಬ (೧೮೨೮-೧೮೩೪)
೮. ಅಬ್ದುಲ್ ದಿಲೇರಖಾನ (೧೮೩೪-೧೮೬೨)
೯. ದಿಲೇರಖಾನನಿಂದ ೧೯೪೮ರವರೆಗಿನ ಆಡಳಿತ

ತುಂಗಭದ್ರೆಯಿಂದ ಕೃಷ್ಣೆಯವರೆಗೆ ಚಾಚಿದ ಕರ್ನಾಟಕ ಪ್ರದೇಶವನ್ನು ೧೦೮ ವರ್ಷಗಳ ಕಾಲ ಆಳಿದ, ಇದುವರೆಗೂ ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಮಿಂಚದೆ ಉಪೇಕ್ಷಿತ ಅರಸು ಮನೆತನವಾಗಿದ್ದ ಸವಣೂರು ನವಾಬರ ಸಮಗ್ರ ಇತಿಹಾಸವನ್ನು *ಈ* ಪುಸ್ತಕ ತೆರೆದಿಡುತ್ತದೆ.

### ೮೨. ಸ್ಥಳೀಯ ಚರಿತ್ರೆ : ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ

ಲೇ: ಲಕ್ಷ್ಮಣ್ ತೆಲಗಾವಿ

ಪುಟ: X+೮೬, ವರ್ಷ: ೨೦೦೪, ರೂ: ೫೦.೦೦

ಪರಿವಿಡಿ

೧. ಸ್ಥಳೀಯ ಚರಿತ್ರೆ : ಆಕರಗಳ ಸ್ವರೂಪ ಮತ್ತು ಅಧ್ಯಯನ ವಿಧಾನ
೨. ಸ್ಥಳೀಯ ಚರಿತ್ರೆ ಮತ್ತು ಮೌಖಿಕ ಆಕರಗಳು
೩. ಸ್ಥಳೀಯ ಚರಿತ್ರೆ ಅಧ್ಯಯನ: ಕೆಲವು ವಿಚಾರಗಳು
೪. ಸ್ಥಳೀಯ ಚರಿತ್ರೆ ಅಧ್ಯಯನ: ಕೆಲವು ಸಮಸ್ಯೆಗಳು
೫. ಚರಿತ್ರೆ ರಚನಾಶಾಸ್ತ್ರದ ನೆಲೆಯಲ್ಲಿ ಸ್ಥಳೀಯ ಚರಿತ್ರೆ ಅಧ್ಯಯನಗಳು

ನಮ್ಮ ಆಧುನಿಕ ಚರಿತ್ರೆಕಾರರ ಹೊಸ ಹುಡುಕಾಟಗಳ, ಸೂಕ್ಷ್ಮ ಚಿಂತನೆಗಳ ಹಾಗೂ ವಿಶಿಷ್ಟ ಇತಿಹಾಸಪ್ರಜ್ಞೆಯ ಫಲಿತವಾಗಿ ಸ್ಥಳೀಯ ಚರಿತ್ರೆಯನ್ನು ಕುರಿತಂತೆ ಇಲ್ಲಿ ಆರು ಮಹತ್ವದ ಪ್ರಬಂಧಗಳಿವೆ.




### ೮೩. ಸಾಮ್ರಾಜ್ಯ ಮತ್ತು ಸಂಸ್ಥಾನ

ಲೇ: ಎನ್. ಚಿನ್ನಸ್ವಾಮಿ ಸೋಸಲೆ

ಪುಟ: XVI+೩೪೦, ವರ್ಷ: ೨೦೦೪, ರೂ: ೧೨೦.೦೦

ಪರಿವಿಡಿ

೧. ವಿಜಯನಗರ ಸಂಸ್ಕೃತಿ ಚರಿತ್ರೆ
೨. ಕೆಳದಿ ನಾಯಕರ ಸಂಸ್ಕೃತಿ ಚರಿತ್ರೆ
೩. ಮೈಸೂರು ಒಡೆಯರು ಸಂಸ್ಕೃತಿ ಚರಿತ್ರೆ

ವಿಜಯನಗರ, ಇಕ್ಕೇರಿ ಮತ್ತು ಮೈಸೂರು ಅರಸರ ಕಾಲದ ಕರ್ನಾಟಕದ ಸಾಂಸ್ಕೃತಿಕ ಪರಿಸರದ ಚಿತ್ರಣವನ್ನು *ಈ* ಕೃತಿಯಲ್ಲಿ ಇತಿಹಾಸದ ಬೆಳಕಿನಲ್ಲಿ ಕಟ್ಟಿಕೊಡಲಾಗಿದೆ. ಕರ್ನಾಟಕದ *ಈ* ಮೂರು ಪ್ರಸಿದ್ಧ ರಾಜವಂಶಗಳ ಆಳ್ವಿಕೆಯ ರಾಜಧಾನಿ, ಕೋಟೆ ಕೊತ್ತಲಗಳು, ಅಂದಿನ ಸಾಮಾಜಿಕ ಸ್ಥಿತಿಗತಿ, ಆಡಳಿತ ಪದ್ಧತಿ, ಆರ್ಥಿಕ ಜೀವನ, ಸಾಹಿತ್ಯ, ಶಿಲ್ಪ ಮತ್ತು ಚಿತ್ರಕಲೆಗಳ ಕುರಿತ ಸಮಗ್ರ ವಿವರ *ಈ* ಕೃತಿಯಲ್ಲಿದೆ.

### ೮೪. ಸ್ವಾತಂತ್ರ್ಯೋತ್ತರ ಮಲೆನಾಡು

ಲೇ: ಕೆ.ಜಿ.ಎನ್.ಶಾಸ್ತ್ರಿ

ಪುಟ: iv+೪೦, ವರ್ಷ: ೨೦೦೬, ರೂ: ೧೦.೦೦

ಮಲೆನಾಡಿನ ಘಟ್ಟ ಮಾರ್ಗಗಳನ್ನು ಹೊಂದಿರುವ ಭೂಭಾಗದಲ್ಲಿ ಕಳೆದ ಐದು ದಶಕಗಳಲ್ಲಿ ಆಗಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಮಾನಸಿಕ ಬದಲಾವಣೆಗಳ ಸ್ಥೂಲ ವಿಶ್ಲೇಷಣೆ *ಈ* ಕಿರುಪುಸ್ತಕದಲ್ಲಿದೆ.




## ೮೫. ಹಂಪಿ ಅಂದು-ಇಂದು

ಸಂ: ಸಿ.ಮಹದೇವ ಮತ್ತು ಎನ್.ಚಿನ್ನಸ್ವಾಮಿ ಸೋಸಲೆ

ಪುಟ: xvi+೧೧೪, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಪ್ರಾಚೀನ ಹಂಪಿ

೨. ಹಂಪಿ ಪರಿಸರದ ಶಾಸನಗಳು

೩. ಹಂಪಿ ಮೌಖಿಕ ಚರಿತ್ರೆ

೪. ವಿಜಯನಗರ: ದೇಶಿ ಮತ್ತು ವಿದೇಶಿ ಸಂಕಥನ

೫. ಹಂಪೆ ವಿಜಯನಗರ ಕುರಿತ ಇತ್ತೀಚಿನ ಸಂಶೋಧನೆಗಳು

೬. ವಿಶ್ವಪರಂಪರೆ ಪಟ್ಟಿಯಲ್ಲಿ ಹಂಪಿ

೭. ಹಂಪಿ ಸ್ಮಾರಕಗಳ ಸಂರಕ್ಷಣೆ: ಅಭಿವೃದ್ಧಿ ಮತ್ತು ವೈರುಧ್ಯಗಳು

೮. ಕರ್ನಾಟಕ ಪ್ರವಾಸೋದ್ಯಮದಲ್ಲಿ ಹಂಪಿ

ಹಂಪಿಯನ್ನು ಭಿನ್ನ ಅಧ್ಯಯನ ಶಿಸ್ತುಗಳ ಹಿನ್ನೆಲೆಯಲ್ಲಿ ಹಾಗೂ ಬಹು ಆಯಾಮಗಳ ನೆಲೆಯಲ್ಲಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತಿಹಾಸಪೂರ್ವ ಹಂಪಿಯಿಂದ ತೊಡಗಿ ಯುನೆಸ್ಕೋದ ವಿಶ್ವಪರಂಪರೆ ಹಂಪಿಯವರೆಗೆ ಹಂಪಿಯ ಭೂತ, ವರ್ತಮಾನ, ಭವಿಷ್ಯಗಳು ಇಲ್ಲಿ ಅಧ್ಯಯನಕ್ಕೆ ಒಳಗಾಗಿವೆ. ಪುರಾತತ್ವ, ಶಾಸನಶಾಸ್ತ್ರ, ಚರಿತ್ರೆ, ಜಾನಪದ, ಅಭಿವೃದ್ಧಿ ಮತ್ತು ಪ್ರವಾಸೋದ್ಯಮಗಳ ನೆಲೆಗಳಿಂದ ಹಂಪಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ.




## ೮೬. ಹಂಪಿ ಸಂಪುಟ : ಕಲೆ, ಕ್ರೀಡೆ ಮತ್ತು ಕೌಶಲ

ಸಂ: ದೇವರಕೊಂಡಾರೆಡ್ಡಿ

ಪುಟ: xx+೫೦೮+೨೪, ವರ್ಷ: ೨೦೦೬, ರೂ: ೧೫೦.೦೦

ಪರಿವಿಡಿ

೧. ಕಲೆ : ಹಂಪಿಯ ಪ್ರಾಗಿತಿಹಾಸ ಕಾಲದ ಕಲೆ ದೇವಾಲಯದ ಭಿತ್ತಿಚಿತ್ರಗಳು, ವರ್ಣಚಿತ್ರಗಳು, ಗಾರೆ ಕಲೆ, ರೇಖಾಚಿತ್ರಗಳು, ಗಾರೆಶಿಲ್ಪ, ಸಂಗೀತ ನೃತ್ಯ ಕಲೆಗಳು

೨. ಕ್ರೀಡೆ : ಕುಸ್ತಿ, ಬೇಟೆಹಬ್ಬ, ಬಡಿಗೆ ಹಬ್ಬ, ಜನಪದ ಆಟಗಳು, ಪ್ರದರ್ಶನಾತ್ಮಕ ಕಲೆಗಳು

೩. ಕೌಶಲ್ಯ : ಕೋಟೆ, ಸ್ಮಾರಕ, ಸೌಧೆ, ಕಟ್ಟಡ, ಬಜಾರು, ದಾರಿ, ಕೆರೆ, ಬಾವಿ, ಪುಷ್ಕರಣಿ, ಸಾರಿಗೆ, ನೀರಾವರಿ ವ್ಯವಸ್ಥೆ

*ಈ* ಸಂಪುಟವು ಹಂಪಿಗೆ ಸಂಬಂಧಿಸಿದ ಕಲೆ, ಕ್ರೀಡೆ ಮತ್ತು ಕೌಶಲ ಕ್ಷೇತ್ರಗಳಲ್ಲಿ *ಈ*ಗಾಗಲೇ ಪ್ರಕಟಗೊಂಡಿರುವ ಆಯ್ದ ಲೇಖನಗಳ ಸಂಕಲನವಾಗಿದೆ. ಹಂಪಿಯು ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರವಾಗಿ ಇತಿಹಾಸದಲ್ಲಿ ಮತ್ತು ವರ್ತಮಾನದಲ್ಲಿ ಬಹುರೂಪಿ ಆಯಾಮಗಳನ್ನು ಹೊಂದಿದೆ. ಹೀಗಾಗಿ 'ಕಲೆ' ಎನ್ನುವುದು ಪರಂಪರಾಗತ ಕಟ್ಟಡ ನಿರ್ಮಾಣದಿಂದ ತೊಡಗಿ, ದೇಸಿ ತಂತ್ರಜ್ಞಾನ ವನ್ನು ಒಳಗೊಂಡ ತಾಂತ್ರಿಕ ಪರಿಣತಿಯ ನೀರಾವರಿ ಕಾಲುವೆಗಳು, ವಸತಿಗೃಹ ಗಳು, ಸ್ನಾನಗೃಹಗಳು, ದಿಬ್ಬಗಳು ಮುಂತಾದ ಅನೇಕ ರಚನೆಗಳನ್ನು ಒಳಗೊಂಡಿದೆ. ಚಿತ್ರಕಲೆಗೆ ಸಂಬಂಧಿದಂತೆ ಪ್ರಾಗೈತಿಹಾಸಿಕ ರೇಖಾಚಿತ್ರಗಳು ದೊರೆಯುವ ಒಂದು ಅಪೂರ್ವ ಕೇಂದ್ರವಾಗಿ ಹಂಪಿಗೆ ವಿಶೇಷ ಮಹತ್ವವಿದೆ. ದೇಸಿ ತಂತ್ರಜ್ಞಾನ ಎಂದು ಕರೆಯಲಾಗುವ ಸ್ಥಳೀಯ ಕೌಶಲಗಳಿಗೆ ಸಂಬಂಧಿಸಿದ ಅಧ್ಯಯನಾತ್ಮಕ ಲೇಖನಗಳು ಇಲ್ಲಿ ಸೇರ್ಪಡೆಯಾಗಿವೆ. ನೀರಾವರಿ, ನಗರರಚನೆ, ಸಾರಿಗೆ ವ್ಯವಸ್ಥೆ, ರಕ್ಷಣಾವಾಸ್ತು ಹೀಗೆ ಆಧುನಿಕ ತಾಂತ್ರಿಕ ಪರಿಣತಿಗೆ ಪೂರ್ವ ದಲ್ಲಿಯೇ ಕರ್ನಾಟಕದಲ್ಲಿ ಕ್ರಿಯಾಶೀಲವಾಗಿದ್ದ ಕೌಶಲಗಳು ಇಲ್ಲಿಯ ಲೇಖನಗಳಲ್ಲಿ ಅನಾವರಣಗೊಂಡಿವೆ. ವಿಜಯನಗರ ಪೂರ್ವದಲ್ಲಿ ಮತ್ತು ಸಮಕಾಲೀನ ಸಂದರ್ಭದ ಹಂಪಿ ಪರಿಸರದಲ್ಲಿ ಕ್ರಿಯಾತ್ಮಕವಾಗಿದ್ದ ಅನೇಕ ಜನಪದ ಕ್ರೀಡೆಗಳಿಗೆ ಸಂಬಂಧಿಸಿದ ಲೇಖನಗಳು ಇಲ್ಲಿ ಸಂಕಲನಗೊಂಡಿವೆ.




## ೮೭. ಹಂಪೆಯ ಬಜಾರುಗಳು

ಲೇ: ಎಸ್.ವೈ.ಸೋಮಶೇಖರ್

ಪುಟ: xviii+೫೪, ವರ್ಷ: ೧೯೯೭, ರೂ: ೩೦.೦೦

ಪರಿವಿಡಿ

೧. ಅಧ್ಯಯನದ ಸ್ವರೂಪ, ವ್ಯಾಪ್ತಿ

೨. ಹಿನ್ನೆಲೆ

೩. ಹಂಪೆಯ ಬಜಾರುಗಳು

೪. ಬಜಾರುಗಳ ಕಾರ್ಯವೈಖರಿ

ಒಂದು ಕಾಲದಲ್ಲಿ ಜಗತ್ತಿನ ಗಮನ ಸೆಳೆದಿದ್ದ ವಿಜಯನಗರ ಸಾಮ್ರಾಜ್ಯ ವೈಭವದ ಪ್ರತೀಕ ವಾದ ಬಜಾರುಗಳ ಅಧ್ಯಯನವನ್ನು *ಈ* ಕೃತಿ ಒಳಗೊಂಡಿದೆ. ವಿಜಯನಗರ ಸಾಮ್ರಾಜ್ಯದ ಆದಾಯ ಮೂಲಗಳಲ್ಲಿ ಬಜಾರುಗಳೇ ಮುಖ್ಯ ಪಾತ್ರವಹಿಸಿದ್ದವು. ಅಂದಿನ ವಿಜಯನಗರ ದಲ್ಲಿ ಒಟ್ಟು ೭ ಪ್ರಮುಖ ಬಜಾರುಗಳಿದ್ದವು. ಆಗ ಅವುಗಳಿಗಿದ್ದ ಮಹತ್ವ, ಅವು ನಿರ್ವಹಿಸಿದ್ದ ಪಾತ್ರಗಳನ್ನು ಅಂದಿನ ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಇಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ವೈಶಿಷ್ಟ್ಯಪೂರ್ಣ ಬಜಾರುಗಳ ಬಗ್ಗೆ ಸಮಗ್ರ ಮಾಹಿತಿ *ಈ* ಕೃತಿಯಲ್ಲಿದೆ.




**೮೮. ಹಾಗಲವಾಡಿ ನಾಯಕರು**

ಲೇ: ಡಿ.ಎನ್.ಯೋಗೀಶ್ವರಪ್ಪ

ಪುಟ: xii+೮+೨೮೮, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧. ರಾಜಕೀಯ ಚರಿತ್ರೆ
೨. ರಾಜಕೀಯ ಸ್ವರೂಪ
೩. ಆರ್ಥಿಕ ನೆಲೆಗಳು
೪. ಸಾಮಾಜಿಕ ಸ್ಥಿತಿ ಗತಿ
೫. ಧಾರ್ಮಿಕ ಸ್ವರೂಪ
೬. ಸಾಹಿತ್ಯ, ವಾಸ್ತು ಮತ್ತು ಶಿಲ್ಪ

ಕರ್ನಾಟಕ ಇತಿಹಾಸದಲ್ಲಿ ಹಾದು ಹೋಗಿರುವ ಪುಟ್ಟ ಸಾಮ್ರಾಜ್ಯವಾದ ಹಾಗಲವಾಡಿ ನಾಯಕರ ಇತಿಹಾಸದ ಬಗ್ಗೆ ಸವಿವರವಾಗಿ ಬೆಳಕು ಚೆಲ್ಲುವ ವಿವರಗಳು *ಈ* ಕೃತಿಯಲ್ಲಿವೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ತುಮಕೂರು ಜಿಲ್ಲೆಯ ಬಹು ಭಾಗವನ್ನಾಳಿದ ಪ್ರಮುಖ ಅರಸು ಮನೆತನವಾದ ಹಾಗಲವಾಡಿ ಸಂಸ್ಥಾನದ ರಾಜಕೀಯ ಚರಿತ್ರೆ, ಅವರ ಆಡಳಿತ, ಆರ್ಥಿಕ ನೆಲೆಗಟ್ಟು, ಸಾಮಾಜಿಕ-ಧಾರ್ಮಿಕ ಸ್ವರೂಪ, ಸಾಹಿತ್ಯ ವಾಸ್ತು-ಶಿಲ್ಪಗಳ ಬಗ್ಗೆ *ಈ* ಕೃತಿ ಚರ್ಚಿಸುತ್ತದೆ.

**೮೯. ಹೈದ್ರಾಬಾದ್ ಕರ್ನಾಟಕ : ಹಾಡು-ಪಾಡು**

ಲೇ: ಅಮರೇಶ ನುಗಡೋಣಿ

ಪುಟ: XII+೧೪೪, ವರ್ಷ: ೨೦೦೪, ರೂ: ೬೦.೦೦

ಪರಿವಿಡಿ

೧. ಪ್ರಭುತ್ವ ಸಾಹಿತ್ಯ: ಹೆಜ್ಜೆ ಗುರುತುಗಳು
೨. ಸಂಕರ ಸಂಸ್ಕೃತಿಯ ಬೆಳವಣಿಗೆಗಳು
೩. ನಿಜಾಮ ಆಳ್ವಿಕೆ : ದೇಶಿ ಭಾಷಿಗರ ಬಿಕ್ಕಟ್ಟುಗಳು
೪. ಸ್ವಾತಂತ್ರ್ಯೋತ್ತರ ಕಾಲದ ಸಾಹಿತ್ಯ, ಶಿಕ್ಷಣ ಮತ್ತು ಸಮಾಜ
೫. ಸಾಹಿತ್ಯ : ಸಮೃದ್ಧ ಕನ್ಯೆ ನೆಲೆ, ಬಿತ್ತಿ ಬೆಳೆದದ್ದು ಎಷ್ಟು?
೬. ಅಪಾರ ಜಲಸಂಪತ್ತೂ, ಬಡತನವೂ
೭. ಅಂತ್ಯವಿಲ್ಲದ ಹಾಡು ಪಾಡಿಗೊಂದು ಮುಕ್ತಾಯ

ಹೈದರಾಬಾದ್ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಆ ಭೌಗೋಳಿಕ ಪರಿಸರದ ಸಾಂಸ್ಕೃತಿಕ ಚರಿತ್ರೆಯನ್ನು, ಆ ಪ್ರದೇಶದ ದಾರಿದ್ರ್ಯವನ್ನು, ಇಚ್ಛಾಶಕ್ತಿಯ ಕೊರತೆಯನ್ನು ಅವಲೋಕಿಸುವ ಪ್ರಯತ್ನ *ಈ* ಕೃತಿಯಲ್ಲಿದೆ. ಚರಿತ್ರೆಯನ್ನು ಸೃಜನಾತ್ಮಕ ಪ್ರತಿಕ್ರಿಯೆಯ ಮಾದರಿಯಲ್ಲಿ ಇಲ್ಲಿ ಮರುಗ್ರಹಿಸಲಾಗಿದೆ.




**೯೦. Conflicting Identities in Karnataka : Separate State and Anti Separate State Movements in Coorg**

Author : Vijay Poonacha Thambanda

Pages : XII+102, Year: 2004, Price: 50.00

Contents

1. Introduction and Historical Background
2. The Rise of Separate Movements
3. The Nature and Emergence of Anti-Separate State Movements
4. Kodava Fundamentalism and the Split in the Separate State Movement
5. Conclusion

The present study proposes to analyse the nature, objects and limitations of these separate state movements in South India, Particularly in Coorg of Karnataka. This study intends to discuss two aspects, the internal conflict and complexity of the separate and antiseparate state organisations, mainly Banglore-based Kannada organizations on the other. This study focuses on postcolonial history by emphasizing the social, economic and political aspects of the Coorg region.




**೯೧. Movement For United Karnataka**

Ed: C.R. Govindaraju

Page : VIII + 102, Year : 2009, Rs. 80.00

**Contents**

1. Concept, language and culture
2. Identity, polity and organisation
3. Unity, conflict and commission
4. Divide, unite and divide

Many participants, thinkers, literautes and artists contributed for the purpose of unification of Karnataka in 1956. It has been fifty years since the splitted parts of this land and people brought under one rule. In this context this book Movement for United Karnataka : Cultural Dimensions is a remarkable work.

೩

# ಕನ್ನಡ ಕಾವ್ಯ

**೯೨. *ಈಸಬೇಕು* ಇದ್ದು ಜಯಿಸಬೇಕು : ಸಮಾಜಮುಖಿ ಕೀರ್ತನೆಗಳು**

ಸಂ: ಎ.ವಿ.ನಾವಡ

ಪುಟ: xx+೧೦೮, ವರ್ಷ: ೨೦೦೨, ರೂ: ೬೦.೦೦

ಹರಿಪಾದಾರ್ಪಿತ ಮನಸ್ಸಿನ ದಾಸರು ರಚಿಸಿದ ಕೀರ್ತನೆಗಳಲ್ಲಿ ಸಮಾಜಮುಖಿಯಾದ ಕೀರ್ತನೆಗಳನ್ನು ಆಯ್ದು ಸೂಕ್ತ ಟಿಪ್ಪಣಿಗಳೊಡನೆ ಇಲ್ಲಿ ಸಂಕಲಿಸಲಾಗಿದೆ.




**೯೩. ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ**

ಸಂ: ಎಫ್.ಟಿ.ಹಳ್ಳಿಕೇರಿ

ಪುಟ: xxiv+೭೩, ವರ್ಷ: ೧೯೯೯, ರೂ: ೪೦.೦೦

ವಿಜಯನಗರ ಸಾಮ್ರಾಜ್ಯವಿದ್ದ ಕಾಲದ ಕವಿ ಎಮ್ಮೆ ಬಸವ. ಆತನ ಕಾವ್ಯಪ್ರಕಾರವಾಗಿರುವ *ಈ* ಕಾಲಜ್ಞಾನದಲ್ಲಿನ ನುಡಿಗಳು ಮಾನವ ಬದುಕಿನ ವೈವಿಧ್ಯಮಯ ಜೀವನದ ಹಲವು ಸಂಗತಿಗಳನ್ನು ಮನೋಜ್ಞವಾಗಿ ಚಿತ್ರಿಸುತ್ತವೆ. ಅಪ್ರಸಿದ್ಧ ಕವಿಯಾಗಿರುವ ಎಮ್ಮೆ ಬಸವ ಹಾಗೂ ಆತನ ಅಪ್ರಸಿದ್ಧ ಕಾವ್ಯ ಪ್ರಕಾರದ ಬಗ್ಗೆ ವಿಶೇಷ ಅಧ್ಯಯನ ನಡೆಸಿ *ಈ* ಕೃತಿಯನ್ನು ಸಂಪಾದಿಸಿ ಕೊಡಲಾಗಿದೆ.

**೯೪. ಕನ್ನಡ ಜೈನಹಾಡುಗಳು**

ಸಂ: ಎಫ್.ಟಿ.ಹಳ್ಳಿಕೇರಿ ಮತ್ತು ಕೆ.ರವೀಂದ್ರನಾಥ

ಪುಟ: xxxvi+೪೩೦, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ರತ್ನಾಕರನ ಹಾಡುಗಳು

೨. ತೀರ್ಥಂಕರ ಹಾಡುಗಳು




೩. ಯಕ್ಷಿಣಿಯರ ಹಾಡುಗಳು

೪. ಜೋಗುಳ ಹಾಡುಗಳು

೫. ಶೋಭಾನದ ಹಾಡುಗಳು

೬. ಮಂಗಳಾರತಿಯ ಹಾಡುಗಳು

೭. ಸಂಕೀರ್ಣ ಹಾಡುಗಳು

ಕನ್ನಡ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಅದರ ಧಾರ್ಮಿಕ, ಸಾಂಸ್ಕೃತಿಕ ಮತ್ತು ಜೀವನ ಮೌಲ್ಯವನ್ನು ಎತ್ತಿ ಹಿಡಿದವರು ಮುಖ್ಯವಾಗಿ ಜೈನಕವಿಗಳು. ವಚನಕಾರ, ಕೀರ್ತನಕಾರರಿಗಿಂತ ಪೂರ್ವದಲ್ಲೇ ಜನಸಾಮಾನ್ಯರಲ್ಲಿ ಧರ್ಮಜಾಗೃತಿ ಮತ್ತು ಜೀವನ ಮೌಲ್ಯ ಪ್ರಸಾರಕ್ಕಾಗಿ ಜೈನಕವಿಗಳು ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಇಂತಹ ಸರಳ ಹಾಗೂ ಜನಪ್ರಿಯ ಮಾದರಿಯ ಸಾಂಸ್ಕೃತಿಕ ಆಶಯಗಳನ್ನು ಗರ್ಭೀಕರಿಸಿಕೊಂಡಿರುವ ಜೈನ ಹಾಡುಗಳನ್ನು ಆಯ್ದು *ಈ* ಗ್ರಂಥದಲ್ಲಿ ಸಂಪಾದಿಸಿ ಕೊಡಲಾಗಿದೆ. ಪ್ರಸಿದ್ಧ ಕವಿ ರತ್ನಾಕರನ ಹಾಡಿನಿಂದ ಹಿಡಿದು ತೀರ್ಥಂಕರ ಹಾಡುಗಳು, ಯಕ್ಷಿಣಿಯರ ಹಾಡುಗಳು, ಜೋಗುಳ ಹಾಡುಗಳು, ಶೋಭಾನೆ ಹಾಡುಗಳು *ಈ* ಕೃತಿಯಲ್ಲಿ ಸೇರ್ಪಡೆಗೊಂಡಿವೆ.

**೯೫. ಕನ್ನಡ ತಾಯಿಗೆ ನುಡಿನಮನ**

ಸಂ: ಎಲ್.ಎಸ್.ಶೇಷಗಿರಿರಾವ್

ಪುಟ: xvi+೧೩೬, ವರ್ಷ: ೧೯೯೩, ರೂ: ೨೦.೦೦

ಪರಿವಿಡಿ

೧. ಪೂರ್ವ ಕವಿಗಳು

೨. ಆಧುನಿಕ ಕವಿಗಳು

ಆದಿ ಕವಿ ಪಂಪನಿಂದ ಪ್ರಾರಂಭಿಸಿ ಒಂದು ಸಾವಿರ ವರ್ಷಗಳಿಂದ ಕನ್ನಡ ಕವಿಗಳು ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಕಂಡು ರೋಮಾಂಚನಗೊಂಡು ಹಾಡಿದ್ದಾರೆ, ಹೊಗಳಿದ್ದಾರೆ. ಕನ್ನಡ ಸಂಸ್ಕೃತಿಯ ಸತ್ವವನ್ನು ಇಲ್ಲಿ ಕಾವ್ಯ ಭಾಷೆಯಲ್ಲಿ ಕಡೆದಿಟ್ಟು ಹಿಡಿದಿಡಲಾಗಿದೆ.

**೯೬. ಕನ್ನಡ ಭಾರತ**

ಸಂ: ಎ.ವಿ.ಪ್ರಸನ್ನ

ಪುಟ: xxxx+೧೧೦೨, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ಆದಿಪರ್ವ; ಸಭಾಪರ್ವ




೨. ಅರಣ್ಯಪರ್ವ; ವಿರಾಟಪರ್ವ

೩. ಉದ್ಯೋಗಪರ್ವ

೪. ಭೀಷ್ಮಪರ್ವ

೫. ದ್ರೋಣಪರ್ವ; ಕರ್ಣಪರ್ವ

೬. ಶಲ್ಯಪರ್ವ; ಗಧಾಪರ್ವ

೭. ಸ್ತ್ರೀಪರ್ವ; ಶಾಂತಿಪರ್ವ

೮. ಅನುಶಾಸನಪರ್ವ; ಅಶ್ವಮೇಧಪರ್ವ; ಆಶ್ರಮವಾಸಪರ್ವ

೯. ಮೌಸಲಪರ್ವ; ಮಹಾಪ್ರಸ್ಥಾನಪರ್ವ

೧೦. ಸ್ವರ್ಗಾರೋಹಣಪರ್ವ

ಕೃಷ್ಣದೇವರಾಯನ ರಾಜಾಶ್ರಯದಲ್ಲಿದ್ದ ತಿಮ್ಮಣ್ಣ ಕವಿ ಹಾಗೂ ರೂಪಕ ಸಾಮ್ರಾಜ್ಯ ಚಕ್ರವರ್ತಿ ಕುಮಾರವ್ಯಾಸನ ಭಾರತಗಳ ಸಮಗ್ರರೂಪ *ಈ* ಕನ್ನಡ ಭಾರತ ಗ್ರಂಥವಾಗಿದೆ. ಇದು ೧೮ ಪರ್ವಗಳನ್ನು ಒಳಗೊಂಡಿದೆ ಹಾಗೂ ಭಾಮಿನಿ ಷಟ್ಪದಿಯ ೧೯೨೮ ಪದಗಳು *ಈ* ಸಂಪುಟದಲ್ಲಿ ಸಂಯೋಜನೆಗೊಂಡಿದೆ.




**೯೭. ಕನ್ನೀರಾಂಬೆಯ ಕಥೆ**

ಸಂ: ಎಂ. ಧ್ರುವನಾರಾಯಣ

ಪುಟ: XVIII+೬೪, ವರ್ಷ: ೨೦೦೪, ರೂ: ೪೦.೦೦

ಇದೊಂದು ಪುಟ್ಟ ಸಾಂಗತ್ಯ ಕೃತಿ. ಜನಪದ ಮತ್ತು ಇತಿಹಾಸಗಳ ಸಂಗಮದಿಂದ ಹುಟ್ಟಿದ ಕಾವ್ಯ. ಜನಪ್ರಿಯವಾದ ಸಾಂಗತ್ಯದ ಛಂದಸ್ಸಿನಲ್ಲಿ ಮೂಡಿಬಂದಿರುವ *ಈ* ಕಾವ್ಯ ತನ್ನ ರಸಾರ್ದ್ರತೆಯಿಂದ, ಮೌಲಿಕ ಜೀವನ ಪ್ರತಿಪಾದನೆಯಿಂದ ಹಾಗೂ ಭಾಷೆಯ ಸಹಜ ಸೊಗಡಿನಿಂದ ಕಂಗೊಳಿಸುತ್ತದೆ.

**೯೮. ಕರಸ್ಥಲ ಸಾಹಿತ್ಯ**

ಸಂ: ಎಫ್.ಟಿ.ಹಳ್ಳಿಕೇರಿ

ಪುಟ: viii+೪೦೪, ವರ್ಷ: ೨೦೦೦, ರೂ: ೧೫೦.೦೦

ಪರಿವಿಡಿ

೧. ಕರಸ್ಥಲ ವೀರಣ್ಣೊಡೆಯನ ಸಾಹಿತ್ಯ



೨. ಕರಸ್ಥಲ ನಾಗಿದೇವನ ಸಾಹಿತ್ಯ

೩. ಕರಸ್ಥಲ ಮಲ್ಲಿಕಾರ್ಜುನೊಡೆಯನ ಸಾಹಿತ್ಯ

ಕರಸ್ಥಲದ ಮಹತ್ತ್ವವನ್ನು ತಮ್ಮ ಕೃತಿಗಳ ಮುಖಾಂತರ ಹೆಚ್ಚು ಪ್ರಚಾರ ಪಡಿಸಿದ ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗಿದೇವ, ಕರಸ್ಥಲ ಮಲ್ಲಿಕಾರ್ಜುನರ ಸಾಹಿತ್ಯವನ್ನು ಇಲ್ಲಿ ಒಟ್ಟಾಗಿ ಕರಸ್ಥಲ ಸಾಹಿತ್ಯವೆಂದು ಕರೆಯಲಾಗಿದ್ದು *ಈ* ಕರಸ್ಥಲ ಸಾಹಿತ್ಯವನ್ನು *ಈ* ಗ್ರಂಥದಲ್ಲಿ ಸಂಗ್ರಹಿಸಲಾಗಿದೆ.




**೯೯. ಕುವೆಂಪು ಸಮಗ್ರಕಾವ್ಯ : ಸಂಪುಟ ೧**

ಸಂ: ಕೆ.ಸಿ.ಶಿವಾರೆಡ್ಡಿ

ಸಂಪುಟ ೧: ಪುಟ: xxxxv+೧೦೫೪, ವರ್ಷ: ೨೦೦೦, (೨ ಸಂಪುಟಗಳ ಒಟ್ಟು ಬೆಲೆ ರೂ : ೧,೦೦೦.೦೦)

ಪರಿವಿಡಿ

೧. ಕೊಳಲು; ಪಾಂಚಜನ್ಯ; ಕಲಾಸುಂದರಿ

೨. ನವಿಲು; ಕೋಗಿಲೆ ಮತ್ತು ಸೋವಿಯಟ್ ರಷ್ಯಾ

೩. ಕೃತ್ತಿಕೆ; ಅಗ್ನಿಹಂಸ; ಪಕ್ಷಿಕಾಶಿ; ಕಿಂಕಿಣಿ

೪. ಪ್ರೇಮಕಾಶ್ಮೀರ; ಷೋಡಶಿ

೫. ಜೇನಾಗುವಾ

ಕುವೆಂಪು ಸಮಗ್ರ ಸಂಪುಟ ೧ರಲ್ಲಿ, ೧೯೩೦ರಿಂದ ೧೯೫೨ರವರೆಗೆ ಪ್ರಕಟಗೊಂಡಿರುವ ಕವನಸಂಕಲನಗಳಾದ ಕೊಳಲು, ಪಾಂಚಜನ್ಯ, ಕಲಾಸುಂದರಿ, ಕೃತ್ತಿಕೆ, ಅಗ್ನಿಹಂಸ, ಪಕ್ಷಿಕಾಶಿ, ಕಿಂಕಿಣಿ, ಪ್ರೇಮಕಾಶ್ಮೀರ, ಷೋಡಶಿ, ಜೇನಾಗುವಾ-ಇವು ಅಡಕಗೊಂಡಿವೆ. ಅಮಾನವೀಯ ಮೌಲ್ಯಗಳನ್ನು ವಿಮರ್ಶಿಸಿ, ಮಾನವೀಯ ಮೌಲ್ಯಗಳ ಶೋಧನೆಗೆ ತೊಡಗುವುದು ಕುವೆಂಪು ಅವರ ಸಂವೇದನೆಯ ವೈಶಿಷ್ಟ್ಯವಾಗಿದೆ. *ಈ* ಕುವೆಂಪು ಸಮಗ್ರಕಾವ್ಯದಲ್ಲಿ ಇದು ಪ್ರಖರವಾಗಿ ಅಭಿವ್ಯಕ್ತಿಗೊಂಡಿದೆ.

**೧೦೦. ಕುವೆಂಪು ಸಮಗ್ರಕಾವ್ಯ : ಸಂಪುಟ ೨**

ಲೇ: ಕುವೆಂಪು, ಸಂ: ಕೆ.ಸಿ.ಶಿವಾರೆಡ್ಡಿ

ಸಂಪುಟ ೨: ಪುಟ: xxxxv+೧೧೦೬, ವರ್ಷ: ೨೦೦೦, (೨ ಸಂಪುಟಗಳ ಒಟ್ಟು ಬೆಲೆ ರೂ: ೧,೦೦೦.೦೦)

ಪರಿವಿಡಿ

೧. ಚಂದ್ರಮಂಚಕೆ ಬಾ, ಚಕೋರಿ!
೨. ಇಕ್ಷುಗಂಗೋತ್ರಿ; ಅನಿಕೇತನ
೩. ಪ್ರೇತ-ಕ್ಯೂ; ಮಂತ್ರಾಕ್ಷತೆ; ಕದರಡಕೆ
೪. ಅನುತ್ತರಾ; ಕುಟೀಚಕ
೫. ಹೊನ್ನ ಹೊತ್ತಾರೆ; ಕಥನಕವನಗಳು; ಅಮಲನಕಥೆ
೬. ಬೊಮ್ಮನಹಳ್ಳಿಯ ಕಿಂದರಿ ಜೋಗಿ; ಹಾಳೂರು
೭. ನನ್ನ ಮನೆ; ಮರಿವಿಜ್ಞಾನಿ; ಮೇಘಪುರ
೮. ಸಮುದ್ರಲಂಘನ; ಮಹಾದರ್ಶನ ಮತ್ತು ಪ್ರಾಯಶ್ಚಿತ್ತ
೯. ಕೊನೆಯ ತೆನೆ ಮತ್ತು ವಿಶ್ವಮಾನವಗೀತೆ

*ಈ* ಸಂಪುಟದಲ್ಲಿ ೧೯೫೪ರ ನಂತರ ಪ್ರಕಟಗೊಂಡಿರುವ ಪ್ರಮುಖ ಕವನ ಸಂಕಲನಗಳಾದ ಚಂದ್ರಮಂಚಕ್ಕೆ ಬಾ, ಚಕೋರಿ !, ಇಕ್ಷುಗಂಗೋತ್ರಿ, ಅನಿಕೇತನ, ಪ್ರೇತ-ಕ್ಯೂ, ಮಂತ್ರಾಕ್ಷತೆ, ಕದರಡಕೆ, ಅನುತ್ತರಾ, ಕುಟೀಚಕ, ಹೊನ್ನ ಹೊತ್ತಾರೆ ಇತ್ಯಾದಿ ಕವನ ಸಂಕಲನಗಳಿವೆ. ಹೊಸಪೀಳಿಗೆಗೆ ಹೊಸವಿವೇಚನೆ, ಹೊಸ ಸಂವೇದನೆಯ ವಿಕಾಸಕ್ಕೆ *ಈ* ಕಾವ್ಯಸಂಪುಟಗಳು ಉಪಯುಕ್ತವಾದುವು.

**೧೦೧. ಕೊಡೇಕಲ್ಲ ವಚನವಾಕ್ಯ : ಸಂಪುಟ ೧ : ಕೊಡೇಕಲ್ಲ ಬಸವಣ್ಣನವರ ಸಮಗ್ರ ಸಾಹಿತ್ಯ**

ಸಂ: ಬಸವಲಿಂಗ ಸೊಪ್ಪಿಮಠ

ಪುಟ: xxxii+೬೨೭, ವರ್ಷ: ೧೯೯೮, ರೂ: ೨೦೦.೦೦



ಪರಿವಿಡಿ

೧. ಖಂಡಜ್ಞಾನ
೨. ಕಾಲಜ್ಞಾನ
೩. ನೀತಿಜ್ಞಾನ
೪. ಬೋಧಜ್ಞಾನ

ಕೊಡೇಕಲ್ಲ ಬಸವಣ್ಣನವರ ಸಮಗ್ರ ಸಾಹಿತ್ಯವನ್ನು ವಚನವೆಂದು ಕರೆದಿದ್ದು ಅವರ ಎಲ್ಲ ವಚನಗಳನ್ನು *ಈ* ಸಂಪುಟದಲ್ಲಿ ಸಂಕಲಿಸಲಾಗಿದೆ. ಇಲ್ಲಿರುವ ವಚನಕಾವ್ಯಗಳನ್ನು ಖಂಡಜ್ಞಾನ, ನೀತಿಜ್ಞಾನ, ಬೋಧಜ್ಞಾನ, ಕಾಲಜ್ಞಾನವೆಂದು ವರ್ಗೀಕರಿಸ ಲಾಗಿದ್ದು ಒಟ್ಟು ೧೧೦ ವಚನವಾಕ್ಯಗಳು ಇವುಗಳೊಳಗೆ ಹರಡಿಕೊಂಡಿವೆ.

**೧೦೨. ಕೊಡೇಕಲ್ಲ ವಚನವಾಕ್ಯ : ಸಂಪುಟ ೨ : ರಾಚಪ್ಪಯ್ಯನ ಕೃತಿಗಳು**

ಸಂ: ಶಿವಾನಂದ ಎಸ್.ವಿರಕ್ತಮಠ

ಪುಟ: vi+೪೫೮, ವರ್ಷ: ೧೯೯೯, ರೂ: ೧೫೦.೦೦

ಪರಿವಿಡಿ

೧. ಗಿರಿಜಾಕಲ್ಯಾಣ
೨. ಮಾಯಾ ಸಾಂಗತ್ಯ
೩. ಪ್ರಭುಚರಿತೆ
೪. ಮಹಾದೇವಿಯಕ್ಕನ ಸಾಂಗತ್ಯ
೫. ಸೌಂದರ ನಂಬಿಯಣ್ಣನ ಚರಿತೆ
೬. ಕಾಯ ಸಾಂಗತ್ಯ
೭. ಸ್ವರ್ಗಾರೋಹಣ
೮. ಪಿಟ್ಟವ್ವೆ ಸಾಂಗತ್ಯ
೯. ಸಂಧಿ ವಚನ
೧೦. ಸುವ್ವಿ ವಚನ ತತ್ವಪದಗಳು

ಕೊಡೇಕಲ್ಲ ಬಸವಣ್ಣನ ಹಿರಿಯ ಮಗನಾದ ರಾಚಪ್ಪಯ್ಯ ಕೊಡೇಕಲ್ಲ ಬಸವಣ್ಣ ಧಾರ್ಮಿಕ ಸಂಪ್ರದಾಯದ ಸಮರ್ಥ ವಾರಸುದಾರ. ರಾಚಪ್ಪಯ್ಯನಿಂದ ರಚಿತವಾದ ಎಲ್ಲ ಕೃತಿಗಳ ಪಾಠವನ್ನು *ಈ* ಸಂಪುಟದಲ್ಲಿ ಸಂಕಲಿಸಲಾಗಿದೆ. ಗಿರಿಜಾಕಲ್ಯಾಣ, ಮಾಯಾ ಸಾಂಗತ್ಯ, ಪ್ರಭುಚರಿತೆ, ಮಹಾದೇವಿಯಕ್ಕನ ಸಾಂಗತ್ಯ, ಸೌಂದರ ನಂಬಿಯಣ್ಣನ ಚರಿತೆ, ಕಾಯಸಾಂಗತ್ಯ, ಸ್ವರ್ಗಾರೋಹಣ, ಪಿಟ್ಟವ್ವೆಸಾಂಗತ್ಯ, ಸಂಧಿವಚನ, ಸುವ್ವಿವಚನ ಹಾಗು ೪೬ ತತ್ವಪದಗಳು *ಈ* ಸಂಪುಟದಲ್ಲಿ ಅಡಕಗೊಂಡಿವೆ.



## ೧೦೩. ಕೊಮಾರ ರಾಮಯ್ಯನ ಚರಿತ್ರೆ

ಸಂ: ಎಂ.ಎಂ.ಕಲಬುರ್ಗಿ

ಪುಟ: viii+೪೧೨, ವರ್ಷ: ೨೦೦೧, ರೂ: ೨೦೦.೦೦

ಕಂಪಿಲರಾಜ್ಯದ ಕುಮ್ಮಟದುರ್ಗದ ಮಹಾವೀರ ಕುಮಾರರಾಮನ ಬಗ್ಗೆ ಅನಾಮಧೇಯ ಕವಿಯೊಬ್ಬನಿಂದ ರಚಿಸಲ್ಪಟ್ಟ 'ಕೊಮಾರ ರಾಮಯ್ಯನ ಚರಿತ್ರೆ'ಯನ್ನು ಇಲ್ಲಿ ಸಂಪಾದಿಸಲಾಗಿದೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ವೀರನ ಬದುಕು-ಸಾಹಸದ ಬಗ್ಗೆ *ಈ* ಕಾವ್ಯ ಸಾಕಷ್ಟು ಮಾಹಿತಿಗಳನ್ನು ಬಿಚ್ಚಿಡುತ್ತದೆ.



## ೧೦೪. ಗುಂಡಬ್ರಹ್ಮಯ್ಯಗಳ ಸಾಹಿತ್ಯ

ಸಂ: ಕೆ. ರವೀಂದ್ರನಾಥ

ಪುಟ: x+೪೭೮, ವರ್ಷ: ೨೦೦೬, ರೂ: ೧೨೦.೦೦

ಪರಿವಿಡಿ

೧. ಸಮಾಲೋಚನೆ: ಕಥಾಸಾರ, ಕವಿಗಳ ಇತಿವೃತ್ತ

೨. ಸಂಪಾದನೆ ಗುಂಡಬ್ರಹ್ಮಯ್ಯಗಳ ತ್ರಿಪದಿ; ಗುಂಡಬ್ರಹ್ಮಯ್ಯಗಳ ಚೌಪದಿ; ಗುಂಡಬ್ರಹ್ಮಯ್ಯಗಳ ಸಾಂಗತ್ಯ; ಗುಂಡಬ್ರಹ್ಮಯ್ಯಗಳ ಗದ್ಯ; ಶರಣರಿಗೆ ಶರಣಾರ್ಥಿನಾಂದ್ಯ ಘನಪತಿರಾಯನ ಕಥೆ

೩. ಕನ್ನಡ ಕಾವ್ಯ ಪುರಾಣಗಳಲ್ಲಿ ಗುಂಡಬ್ರಹ್ಮಯ್ಯಗಳ ಉಲ್ಲೇಖಿತ ಪಠ್ಯ

ಮಧ್ಯಕಾಲೀನ ಕರ್ನಾಟಕದ ವೀರಪರಂಪರೆಯಲ್ಲಿ ಪ್ರಮುಖರಾದ ಗುಂಡಬ್ರಹ್ಮಯ್ಯ ಅವರು ತಮ್ಮ ವೀರವ್ರತ ಮತ್ತು ನಿಷ್ಠೆಗಳ ಮೂಲಕ ಜನಮಾನಸದಲ್ಲಿ ಅಮರರಾಗಿದ್ದಾರೆ. *ಈ*ಗಲೂ ಅವರ ನೆಲೆಗಳಲ್ಲಿ ನಡೆಯುವ ಆಚರಣೆ, ಸಂಪ್ರದಾಯಗಳನ್ನು ಕಾವ್ಯ, ಪುರಾಣ, ಚರಿತ್ರೆಗಳು ಚಿತ್ರಿಸಿವೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯ ಸಂಪುಟ ಸಮಾಲೋಚನೆ, ಸಂಪಾದನೆ ಮತ್ತು ಅನುಬಂಧಗಳು ಎಂಬ ಮೂರು ಭಾಗಗಳಲ್ಲಿ ಗುಂಡಬ್ರಹ್ಮಯ್ಯರ ಸಾಹಿತ್ಯ ಸಂಪತ್ತು, ಶಿಲ್ಪಸಂಪತ್ತು ಮತ್ತು ಅವುಗಳ ಸಾಂಸ್ಕೃತಿಕ ಚಹರೆಗಳನ್ನು ಇಲ್ಲಿ ಗುರುತಿಸಲಾಗಿದೆ.

## ೧೦೫. Golden flock :

Raama Dhaanya Charite and Other Works of Kanakadaasa.

Ed and Tr: D.A. Shankar

Pages: xx+284, Year: 2007, Rs: 150




Contents

1. Raama Dhaanya charite
2. Keertanes
3. Other words of Kanakadaasa.

The production of keerthanes in Kannada coincides with the popularisation of vaishnavite tradition in Karnataka. Especially Kanakadaasas compositions attack caste distinction, which not only divided people on castes but also the gods. The epic Raama Dhaanya Charite of Kanakadaasa is dialogue between subaltern cereal Raagi and Rice, reflects is concerns about the hierarchies that characterise the society of that times. Though at the end he manages to put both Raagi and Rice on the same platform, his concern for the status of Raagi and his zeal to elevate his posotion by ascribing its origin to Lord Sri Raama is unmistakable. In this volume has given a complete translation of Raama Dhaanya Charite, which is in Bhamini Shatpadi apart from 53 selected Keerthanes of Kanakadaasa.



## ೧೦೬. ಚಿದಾನಂದಾವಧೂತ ಚಾರಿತ್ರ

ಸಂ: ಎಫ್.ಟಿ ಹಳ್ಳಿಕೇರಿ

ಪುಟ: ೨೦+೧೭೨, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಬಾಲ್ಯ ವಿವರ

೨. ಕ್ಷೇತ್ರ ಸಂಚಾರ

೩. ಸದ್ಗುರು ಕಟಾಕ್ಷ

೪. ಹಠಯೋಗ

೫. ರಾಜಯೋಗ

೬. ಕಾಶಿಯಾತ್ರೆ

೭. ಅವಧೂತ ಚಾರಿತ್ರ

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಹಿರಿಯಹಟ್ಟಿ ಊರಿನ ಅಯ್ಯಪ್ಪ ಕವಿ ತನ್ನ ಗುರುವಾಗಿದ್ದ ಮತ್ತು *ಈ* ಪ್ರದೇಶದ ಬಹಳ ಪ್ರಸಿದ್ಧ ಅವಧೂತ ಆಗಿದ್ದ ಚಿದಾನಂದಾವಧೂತರನ್ನು ಕುರಿತು ರಚಿಸಿದ ಕಾವ್ಯ ಇದಾಗಿದೆ. *ಈ* ಕೃತಿಯ ಕರ್ತೃ ಅಯ್ಯಪ್ಪಕವಿ ಚಿದಾನಂದಾವಧೂತನ ಶಿಷ್ಯ ಮತ್ತು ಅವರ ಪರಿಸರದಲ್ಲಯೇ ಹುಟ್ಟಿ ಬೆಳೆದವನು. ಹೀಗಾಗಿಯೇ ಹೆಚ್ಚು

ಅಧಿಕೃತವಾಗಿ ಚಿದಾನಂದಾವಧೂತರ ಬಾಲ್ಯ, ಕ್ಷೇತ್ರಸಂಚಾರ, ಸದ್ಗುರು ಕಟಾಕ್ಷ, ಹಠಯೋಗ, ರಾಜಯೋಗ ಹಾಗೂ ಕಾಶೀ ಯಾತ್ರೆಗಳನ್ನು ಇಲ್ಲಿ ಚಿತ್ರಿಸಲಾಗಿದೆ. ವೇದಾಂತ ವಿಷಯಗಳ ನ್ನೊಳಗೊಂಡ ಕೃತಿ ರಚನೆ ಮಾಡಿದ ಚಿದಾನಂದಾವಧೂತರ ಜೀವನ ಚರಿತ್ರೆಯ ಹಿಂದೆ ಅನುಭವ ಮತ್ತು ಅನುಭಾವಗಳು ಸಮಪ್ರಮಾಣದಲ್ಲಿ ಬೆರೆತುಕೊಂಡಿವೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅವಧೂತ ಪರಂಪರೆಯ ದೃಷ್ಟಿಯಿಂದ 'ಚಿದಾನಂದಾವಧೂತರ ಚಾರಿತ್ರ' ಕೃತಿಗೆ ಸಾಂಸ್ಕೃತಿಕ ಮಹತ್ವವಿದೆ.

### ೧೦೭. ನಮ್ಮ ಕನ್ನಡ ಕಾವ್ಯ

ಸಂ: ಓ.ಎಲ್.ನಾಗಭೂಷಣಸ್ವಾಮಿ

ಪುಟ: xiv+೪೫೪, ವರ್ಷ: ೧೯೯೭, ರೂ: ೧೭೫.೦೦

*ಈ* ಕಾವ್ಯ ಸಂಕಲನದಲ್ಲಿ ಸಮಕಾಲೀನ ಕವಿತೆಗಳ ಜತೆಗೆ ಹಳೆಗನ್ನಡ, ನಡುಗನ್ನಡ, ಜಾನಪದ ಹಾಗು ಯಕ್ಷಗಾನ ಕಾವ್ಯ ಪ್ರಕಾರಗಳೂ ಸೇರಿವೆ. ಪಂಪನ ವಿಕ್ರಮಾರ್ಜುನ ವಿಜಯ, ಪಾರ್ತಿಸುಬ್ಬನ ಪೂತನಾಮೋಕ್ಷದಿಂದ ಹಿಡಿದು ಶ್ರೀಕೃಷ್ಣ ಆಲನಹಳ್ಳಿಯ ಕವನದವರೆಗಿನ ವಿಸ್ತಾರವಾದ ಕಾಲವ್ಯಾಪ್ತಿಯ ಕಾವ್ಯ ಸಂಗ್ರಹ ಇದರಲ್ಲಿದೆ. ಇಲ್ಲಿ ಒಟ್ಟು ೯೫ ಕವಿತೆಗಳಿದ್ದು ಆಯಾ ಕವಿತೆ ಕಾವ್ಯಗಳನ್ನು ಸಂಗ್ರಹಿಸಿದವರು ಆ ಕವಿತೆಗಳನ್ನು ಗ್ರಹಿಸಿದ ರೀತಿಯಲ್ಲಿ ಕವಿತೆಯ ಜತೆ ಟಿಪ್ಪಣಿಗಳನ್ನು ನೀಡಿದ್ದಾರೆ.



### ೧೦೮. ನಾಗಲಿಂಗಸ್ವಾಮಿ ತತ್ತ್ವಪದಗಳು

ಸಂ: ಎಸ್.ಆರ್.ಚನ್ನವೀರಪ್ಪ

ಪುಟ: xviii+೭೬, ವರ್ಷ: ೨೦೦೦, ರೂ: ೫೦.೦೦

ವೃತ್ತಿನಿರತ ಪಾಂಚಾಳ ವರ್ಗದಿಂದ ಬಂದ ಶ್ರೀ ನಾಗಲಿಂಗ ಸ್ವಾಮಿಗಳು ವ್ಯವಸ್ಥೆಯಿಂದ ನಿರ್ಲಕ್ಷ್ಯಕ್ಕೆ ಒಳಗಾದರೂ ವೈಚಾರಿಕ ಕ್ರಾಂತಿಯ ಮೂಲಕ ಸಮಾಜದ ಗಮನ ಸೆಳೆದವರು. ಇಲ್ಲಿನ ೫೦ಕ್ಕೂ ಹೆಚ್ಚಿನ ಪದಗಳ ಕಾಯದ ಅಸ್ಥಿರತೆ, ಚಾತುರ್ವರ್ಣದ ಮೇಲಾಟ, ಸಂಸಾರದ ಜಂಜಾಟ, ವೈರಾಗ್ಯ, ಮೋಕ್ಷದಂತಹ ಪಾರಮಾರ್ಥಿಕ ಪರಿಕಲ್ಪನೆಗಳನ್ನು ಕುರಿತು ಚರ್ಚಿಸುತ್ತವೆ.

### ೧೦೯. ಬಸವಯುಗದ ವಚನೇತರ ಸಾಹಿತ್ಯ

ಸಂ: ಕೆ.ರವೀಂದ್ರನಾಥ

ಪುಟ: viii+೫೭೦, ವರ್ಷ: ೨೦೦೦, ರೂ: ೨೦೦.೦೦




ಪರಿವಿಡಿ

೧. ಬಸವಣ್ಣನವರ ವಚನೇತರ ಸಾಹಿತ್ಯ
೨. ಚನ್ನಬಸವಣ್ಣನವರ ವಚನೇತರ ಸಾಹಿತ್ಯ
೩. ಅಲ್ಲಮ ಪ್ರಭುದೇವರ ವಚನೇತರ ಸಾಹಿತ್ಯ
೪. ಸಿದ್ಧರಾಮೇಶ್ವರ ದೇವರ ವಚನೇತರ ಸಾಹಿತ್ಯ
೫. ಅಧ್ಯಯನಗಳ ವಚನೇತರ ಸಾಹಿತ್ಯ
೬. ಅಕ್ಕಮಹಾದೇವಿಯ ವಚನೇತರ ಸಾಹಿತ್ಯ
೭. ಇತರ ವಚನಕಾರರ ವಚನೇತರ ಸಾಹಿತ್ಯ
೮. ಇತರ ವಚನಕಾರ್ತಿಯರ ವಚನೇತರ ಸಾಹಿತ್ಯ

ಶರಣ ಸಾಹಿತ್ಯದ ಇನ್ನೊಂದು ಮುಖವಾದ ಕರುಣಹಸಿಗೆ, ಮಂತ್ರಗೋಪ್ಯ, ಮಿಶ್ರಾರ್ಪಣ, ದೀಕ್ಷಾವಿಧಾನ, ಕಾಲಜ್ಞಾನ ಮುಂತಾದ ಪ್ರಕಾರಗಳನ್ನು ಪರಿಚಯಿಸುವ *ಈ* ಗ್ರಂಥ ತಾತ್ತ್ವಿಕ, ವೈಜ್ಞಾನಿಕ, ಸಾಂಸ್ಕೃತಿಕ ಐತಿಹಾಸಿಕ ಮಹತ್ತ್ವವನ್ನೊಳಗೊಂಡಿರುವ ವಿಶಿಷ್ಟ ಸಾಹಿತ್ಯ ಪ್ರಕಾರ. ಸಾಹಿತ್ಯ ಮತ್ತು ತತ್ತ್ವಶಾಸ್ತ್ರ ವಿಚಾರಗಳೆರಡನ್ನೂ ಒಳಗೊಂಡ ವಚನೇತರ ಸಾಹಿತ್ಯ ಕೃತಿಗಳ ಮೂಲಕ ಲಘುಸಾಹಿತ್ಯ ಪ್ರಕಾರಗಳನ್ನು ಪುನಶ್ಚೇತನಗೊಳಿಸುವ ಹಾಗೂ ಪ್ರಚುರಗೊಳಿಸುವುದು ವೀರಶೈವ ಶರಣರ ಬಹುಮುಖ್ಯ ಪ್ರಯತ್ನವಾಗಿದೆ. *ಈ* ಪ್ರಯತ್ನದ ಹಿಂದಿರುವ ಶರಣರ ಉದ್ದೇಶ, ಸಾಹಿತ್ಯದ ಸೃಷ್ಟಿ, ಬೆಳವಣಿಗೆ, ಮಹತ್ತ್ವ ಪ್ರಯೋಜನಗಳನ್ನು ಕುರಿತು ಶಾಸ್ತ್ರೀಯ ವಾದ ಹಾಗೂ ಸಮಗ್ರವಾದ ಅಧ್ಯಯನ ಫಲವೇ *ಈ* ಗ್ರಂಥ.




### ೧೧೦. ಬಾರಮಾಸ

ಮೂಲಕವಿ: ಕಲ್ಲೂರ ಲಿಂಗಣ್ಣೊಡೆಯ

ಸಂ: ಶಾಂತರಸ

ಪುಟ: xx+೧೨೦, ವರ್ಷ: ೧೯೯೩, ರೂ: ೪೫.೦೦

'ಬಾರಮಾಸ' ಒಂದು ಕಾವ್ಯಪ್ರಕಾರ. *ಈ* ಕಾವ್ಯಪ್ರಸಾರ ಬಹುಮಟ್ಟಿಗೆ ಎಲ್ಲ ಭಾರತೀಯ ಭಾಷೆಗಳಲ್ಲಿದೆ. ೧೭ನೆಯ ಶತಮಾನದ ಪೂರ್ವಾರ್ಧವಾದ ೧೬೪೦ರಲ್ಲಿ ರಚಿಸಲ್ಪಟ್ಟ *ಈ* ಬಾರಮಾಸವನ್ನು ಒಂದು ಜನಪದ ಕಾವ್ಯವೆಂದೂ ಅನ್ನಬಹುದು. ಇದರಲ್ಲಿ ಲೋಕಗೀತೆ, ವಿರಹ ವರ್ಣನೆ, ಪರಿಸರ, ಸಾಮಾಜಿಕ ಜೀವನ, ಋತುವರ್ಣನೆ ಮತ್ತು ಶೃಂಗಾರ ರಸಗಳ ಜೊತೆಗೆ ಪರಿಸರ, ನೆರೆಹೊರೆಯ ಸಾಮಾಜಿಕ ಜೀವನದ ಸುಂದರ ಚಿತ್ರಣವನ್ನು ಕಾಣಬಹುದು.




**೧೧೧. ರಾಘವಾಂಕನ ಸಮಗ್ರ ಕಾವ್ಯ**

ಸಂ: ಬಿ.ಎ. ವಿವೇಕ ರೈ

ಪುಟ: XII+೪೨೨, ವರ್ಷ: ೨೦೦೪, ರೂ: ೧೫೦.೦೦

ಪರಿವಿಡಿ

೧. ಹರಿಶ್ಚಂದ್ರ ಕಾವ್ಯ

೨. ಸಿದ್ಧರಾಮ ಚಾರಿತ್ರ

೩. ಸೋಮನಾಥ ಚಾರಿತ್ರ

೪. ವೀರೇಶ ಚರಿತೆ

ಎನ್. ಬಸವಾರಾಧ್ಯ ಮತ್ತು ಎಸ್. ಬಸಪ್ಪ ಇವರು ಸಂಪಾದನೆಯ ಹರಿಶ್ಚಂದ್ರ ಕಾವ್ಯ, ಎಂ.ಬಿ. ನೇಗಿನಹಾಳ ಇವರ ಸಂಪಾದನೆಯ ಸಿದ್ಧರಾಮ ಚಾರಿತ್ರ್ಯ, ಆರ್.ಎಸ್. ಹಿರೇಮಠ ಮತ್ತು ಎಂ.ಎಸ್. ಸುಂಕಾಪುರ ಸಂಪಾದನೆಯ ಸೋಮನಾಥ ಚಾರಿತ್ರ್ಯ ಮತ್ತು ಎಸ್.ಎಸ್. ಹಿರೇಮಠ ಇವರ ಸಂಪಾದನೆಯ ವೀರೇಶ ಚರಿತೆ ಕಾವ್ಯಗಳನ್ನು *ಈ* ಜನಪ್ರಿಯ ಆವೃತ್ತಿಯಲ್ಲಿ ಬಳಸಿಕೊಳ್ಳಲಾಗಿದೆ.




**೧೧೨. ವಚನ-ಸ್ವರವಚನ**

ಲೇ: ಶಿವಾನಂದ ಎಸ್.ವಿರಕ್ತಮಠ

ಪುಟ: xiv+೨೮+೪೪೬, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ಕೊಡೇಕಲ್ಲ ಬಸವಣ್ಣನವರ ಸಾಹಿತ್ಯ

೨. ರಗಳೆ ವಚನ

೩. ಕಾಲಜ್ಞಾನ; ಖಂಡಜ್ಞಾನ; ನೀತಿಜ್ಞಾನ; ಲೀಲೆ ಸ್ವರವಚನಗಳು

೪. ಇತರರ ಸಾಹಿತ್ಯ

೫. ಮಂಟೇಸ್ವಾಮಿ; ನೀಲಮ್ಮ; ಗುಹೇಶ್ವರನ ಸ್ವರವಚನ

೬. ಸಂಗಪ್ಪಯ್ಯನ; *ಈ*ರಪ್ಪಯ್ಯನ ಸ್ವರವಚನಗಳು

೭. ಬಿರುದಾವಳಿ, ಸೊಡ್ಡು ಸ್ವರವಚನಗಳು

ಮಧ್ಯಯುಗೀನ ಕಾಲದ ಅನೇಕ ಪರಂಪರೆಗಳಂತೆ ಕೊಡೇಕಲ್ಲು ಬಸವಣ್ಣನದೂ ಒಂದು ಪರಂಪರೆ. ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಒಂದಾಗದೇ ಉಳಿದಿರುವ *ಈ* ಪರಂಪರೆಯ ಕುರಿತಾದ ಸಾಹಿತ್ಯವನ್ನು *ಈ* ಕೃತಿ ಒಳಗೊಂಡಿದೆ.

**೧೧೩. ವಚನ ಸಾವಿರ**

ಸಂ: ಓ.ಎಲ್. ನಾಗಭೂಷಣಸ್ವಾಮಿ

ಪುಟ: VIII+೧೪+೩೬೦, ವರ್ಷ: ೨೦೦೪, ರೂ: ೧೫೦.೦೦




ಪರಿವಿಡಿ

೧. ವಚನಕಾರರು ಆಯ್ದ ವಚನಗಳ ಸೂಚಿ

೨. ವಚನಕಾರರು ಅಂಕಿತಗಳು

೩. ಅಂಕಿತಗಳು, ವಚನಕಾರರು

*ಈ* ವಚನ ಸಂಕಲನದಲ್ಲಿ ೯೮ ವಚನಕಾರರ ೧೦೬೮ ವಚನಗಳನ್ನು ಸಂಕಲಿಸಲಾಗಿದೆ. ಅನುಭವ ಪ್ರಧಾನ, ವಿಚಾರ ಪ್ರಧಾನವಾದ ವಚನ ವೈವಿಧ್ಯವನ್ನು *ಈ* ಸಂಕಲನದಲ್ಲಿ ಕಾಣಬಹುದಾಗಿದೆ.




**೧೧೪. ವಿರೂಪಾಕ್ಷ ವಸಂತೋತ್ಸವ ಚಂಪೂ**

ಲೇ: ಅಹೋಬಲ

ಅನು: ಕೆ.ಎಸ್.ಕಣ್ಣನ್

ಪುಟ: xxiv+೬೧೬, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ಪೀಠಿಕೆ, ಪರಿಚಯ, ನಿರೂಪಿತ ವಿಷಯ, ಭೌಗೋಳಿಕ ಐತಿಹಾಸಿಕ ವಿಷಯಗಳು

೨. ಮೂಲ ಮತ್ತು ಅನುವಾದ ರಥೋತ್ಸಾಹ ಕಾಂಡ, ಉತ್ತರುತ್ಸುರಕಾಂಡ

೩. ಟಿಪ್ಪಣಿಗಳು - ರಥೋತ್ಸಾಹಕಾಂಡ, ಉತ್ತರುತ್ಸುರಕಾಂಡ

೪. ಅನುಬಂಧಗಳು

ಪುರಾಣ, ಇತಿಹಾಸ ಮತ್ತು ಜಾನಪದ *ಈ* ಮೂರು ಕ್ಷೇತ್ರಗಳು ಏಕೀಭವಿಸಿರುವ ಕೃತಿಯಿದು. ವಸಂತೋತ್ಸವನ್ನು ನೆನಪಿಸುತ್ತಲೇ ಆ ಕಾಲದ ಸಾಂಸ್ಕೃತಿಕ ಪರಿಸರ ಜಗತ್ತನ್ನು ಇದು ನೆನಪಿಸಿ ಕೊಡುತ್ತದೆ.




**೧೧೫. ಸ್ವರವಚನ ತರಂಗ, ಸಂಪುಟ. ೧**

ಸಂ: ಎಸ್.ಆರ್.ಚನ್ನವೀರಪ್ಪ

ಪುಟ: xii+೧೪೦, ವರ್ಷ: ೨೦೦೦, ರೂ: ೭೫.೦೦

ಇಲ್ಲಿ ಸಂಪಾದಿಸಲಾದ ಸ್ವರವಚನಗಳು ಬೇರೆ ಬೇರೆ ಮುದ್ರಿಕೆ ಹೊಂದಿದ್ದರೂ ಸಾಮುದಾಯಿಕವಾಗಿ ತಾತ್ವಿಕತೆಯಲ್ಲಿ ಏಕಸೂತ್ರ ಹೊಂದಿದೆ. ೧೫೫ ಸ್ವರವಚನಗಳನ್ನು ಇಲ್ಲಿ ಸಂಕಲಿಸಲಾಗಿದ್ದು, ಭಾಷೆ, ವಸ್ತುನಿರೂಪಣೆಯಲ್ಲಿ ಭಿನ್ನತೆಯಿದ್ದರೂ ಒಂದೇ ತಾತ್ವಿಕ

ಚೌಕಟ್ಟಿನಲ್ಲಿ ಅವು ಇಲ್ಲಿ ಬಂಧಿತವಾಗಿವೆ. ಅನುಭಾವದ ಶ್ರವಣ ಪಾತಳಿಯಾಗಿ ಹಸ್ತಪ್ರತಿ ನೆಲೆಯಿಂದ *ಈ* ಕೃತಿಯನ್ನು ಸಂಪಾದಿಸಲಾಗಿದೆ.




### ೧೧೬. ಸಾವಳಗಿ ಶ್ರೀ ಶಿವಲಿಂಗೇಶ್ವರ ಪುರಾಣ

ಮೂಲ ಲೇ: ಸಿದ್ಧಲಿಂಗ ಕವಿ

ಸಂ: ಸಿದ್ಧರಾಮ ಶಿವಯೋಗಿಗಳು

ಪುಟ: XI+VIII+೨೦೮, ವರ್ಷ: ೨೦೦೮, ರೂ: ೮೦.೦೦

ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ಅವರ ಬದುಕಿನ ಸುತ್ತ ನೇಯ್ಗೆಗೊಂಡಿರುವ ಪುರಾಣ ಇತಿಹಾಸಗಳೆರಡೂ *ಈ* ಕೃತಿಯಲ್ಲಿದೆ.

### ೧೧೭. ಸಾವಿರ ಕೀರ್ತನೆಗಳು

ಸಂ: ಎ.ವಿ.ನಾವಡ ಮತ್ತು ಗಾಯತ್ರಿ ನಾವಡ

ಪುಟ: XV+೭೭೮, ವರ್ಷ: ೨೦೦೦, ರೂ: ೧೫೦.೦೦

ಕನ್ನಡ ದಾಸಪರಂಪರೆಯಲ್ಲಿದ್ದ ನೂರಾರು ಕೀರ್ತನಕಾರರಲ್ಲಿ ಮೂವತ್ತಮೂರು ಮಂದಿ ಕೀರ್ತನಕಾರರ ಸಾವಿರ ಕೀರ್ತನೆಗಳನ್ನು ಸಂಗ್ರಹಿಸಿ ಇಲ್ಲಿ ಸಂಕಲಿಸಲಾಗಿದೆ.




### ೧೧೮. ಹರಿದಾಸರ ಪಾಂಡುರಂಗ ವಿಠ್ಠಲ

ಸಂ: ಎ.ವಿ.ನಾವಡ

ಪುಟ: VIII+೧೦೦, ವರ್ಷ: ೨೦೦೫, ರೂ: ೬೦.೦೦

ಪರಿವಿಡಿ

೧. ವಿಜಯವಿಠಲ, ಭೂಪತಿವಿಠಲ, ಜಗನ್ನಾಥ ವಿಠಲ ಅಂಕಿತ ನಾಮವುಳ್ಳ ರಚನೆ

೨. ಗುರುಗೋವಿಂದ ವಿಠಲ, ಗೋಪಾಲ ವಿಠಲ, ಗೋಪಾಲಕೃಷ್ಣ ವಿಠಲ, ಪುರಂದರ ವಿಠಲ ಅಂಕಿತ ನಾಮವುಳ್ಳ ರಚನೆ

೩. ಶ್ರೀಶಕೇಶವ, ಭೀಮೇಶಕೃಷ್ಣ, ಶ್ರೀಪತಿ ವಿಠಲ, ಶ್ರೀಪ್ರಾಣೇಶ ವಿಠಲ ಅಂಕಿತ ನಾಮವುಳ್ಳ ರಚನೆ

೪. ಪ್ರಸನ್ನ ಶ್ರೀನಿವಾಸ, ಕಮಲನಾಭ ವಿಠಲ ಅಂಕಿತ ನಾಮವುಳ್ಳ ರಚನೆ

ಮಹಾರಾಷ್ಟ್ರದಲ್ಲಿ ನೆಲೆಸಿದ ಕನ್ನಡ ವಿಠಲನಿಗೆ ಸಂಬಂಧಿಸಿದ ಬಹಳ ಅಪೂರ್ವವಾದ ೫೮ ರಚನೆಗಳನ್ನು ಇಲ್ಲಿ ಕಲೆಹಾಕಲಾಗಿದೆ. ಕನ್ನಡದ ಕವಿಗಳು ಪಾಂಡುರಂಗನ ವಿಠಲನನ್ನು ಪರಿಕಲ್ಪಿಸಿದ ಬಗೆಗಳು ಇಲ್ಲಿ ಅನಾವರಣಗೊಂಡಿವೆ. ಮಹಾರಾಷ್ಟ್ರದಲ್ಲಿರುವ ಕನ್ನಡ ವಿಠ್ಠಲನ ಅನನ್ಯತೆಯನ್ನು ಕನ್ನಡದಲ್ಲಿ ಕಂಡುಕೊಳ್ಳುವ ಒಂದು ಮುಖ್ಯವಾದ ಪ್ರಯತ್ನವು ಇಲ್ಲಿ ನಡೆದಿದೆ.




### ೧೧೯. ಹರಿಹರನ ರಗಳೆಗಳು

ಸಂ: ಎಂ.ಎಂ.ಕಲಬುರ್ಗಿ

ಪುಟ: xxv+೫೧೬, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧. ತಮಿಳುನಾಡಿನ ಪುರಾತನದ ರಗಳೆಗಳು

೨. ಕನ್ನಡ ನಾಡಿನ ಶರಣರ ರಗಳೆಗಳು

೩. ಸಂಕೀರ್ಣ ರಗಳೆಗಳು

ಹರಿಹರನ ಹೆಸರಿನಲ್ಲಿ ಸಿಗುವ ಎಲ್ಲ ರಗಳೆಗಳನ್ನು *ಈ* ಗ್ರಂಥದಲ್ಲಿ ಸಂಗ್ರಹಿಸಲಾಗಿದ್ದು ೩ ಕಾಂಡಗಳಲ್ಲಿ ಅವುಗಳನ್ನು ಹಂಚಲಾಗಿದೆ. ಅವುಗಳಲ್ಲಿ ಕಾಂಡ ೧. ತಮಿಳುನಾಡಿನ ಪುರಾತನರ ರಗಳೆಗಳು, ಕಾಂಡ ೨. ಕನ್ನಡ ನಾಡಿನ ಶರಣರ ರಗಳೆಗಳು, ಕಾಂಡ ೩.ಸಂಕೀರ್ಣ ರಗಳೆಗಳು.

### ೧೨೦. ಹರಿಹರನ ಲಿಂಗಭೇದ ನಿರಸನ ರಗಳೆಗಳು

ಸಂ: ಗುರುಪಾದ ಮರಿಗುದ್ದಿ

ಪುಟ: 36+೧೮೮, ವರ್ಷ: ೨೦೦೮, ರೂ: ೮೦

ಪರಿವಿಡಿ

೧. ಕಾರಿಕಾಲಮ್ಮೆಯರ ರಗಳೆ

೨. ತಿರುನೀಲನಕ್ಕರ ರಗಳೆ

೩. ಪಾಂಡ್ಯಮಹಾದೇವಿಯರ ರಗಳೆ

೪. ಕೋಳೂರು ಕೊಡಗೂಸಿನ ರಗಳೆ

೫. ಅಮ್ಮವ್ವೆಯ ರಗಳೆ

೬. ವೈಜಕವ್ವೆಯ ರಗಳೆ

೭. ಹೇರೂರ ಹೆಣ್ಣಿನ ರಗಳೆ

೮. ಮಹಾದೇವಿಯಕ್ಕನ ರಗಳೆ

ಶರಣರು ಕಟ್ಟಬಯಸಿದ ವರ್ಗ, ವರ್ಣ ಹಾಗೂ ಲಿಂಗಬೇಧ ನಿರಸನ ಸಮಾಜದ ಆಶಯವನ್ನು ಹರಿಹರ ಇಲ್ಲಿ ತನ್ನ ರಗಳೆಗಳಲ್ಲಿ ಚಿತ್ರಿಸಿದ್ದಾನೆ. ಹರಿಹರನ *ಈ* ವಚನ ಚಳುವಳಿಯ

ಆಶಯವನ್ನು ಹೊತ್ತ ರಗಳೆಗಳನ್ನು ಒಂದೆಡೆ ಅಧ್ಯಯನಕ್ಕೆ ಒಳಪಡಿಸಿರುವುದು *ಈ* ಕೃತಿಯ ವಿಶೇಷ.

### ೧೨೧. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ

ಲೇ: ಎಫ್.ಟಿ. ಹಳ್ಳಿಕೇರಿ

ಪುಟ: XII+೪೪, ವರ್ಷ: ೨೦೦೩, ರೂ: ೩೦.೦೦

ಪರಿವಿಡಿ

೧. ಸಂಧಿ-ದುರ್ಲಕ್ಷಣ ವಿಚಾರ
೨. ಸಂಧಿ-ಶುಭಲಕ್ಷಣ
೩. ಸಂಧಿ-ಅಶ್ವಗಳ ಜನನ
೪. ಸಂಧಿ-ನಾನಾ ವಿಧದ ರೋಗ
೫. ಸಂಧಿ-ವಾಯು ಮುಖ ರೋಗಾವಳಿ ವಿವರ
೬. ಸಂಧಿ-ರೋಗಗಳಿಗೆ ಚಿಕಿತ್ಸೆ
೭. ಸಂಧಿ-ವೈದ್ಯೋಪಚಾರದ ವಿಚಾರ

ಅಶ್ವಶಾಸ್ತ್ರಕ್ಕೆ ಸಂಬಂಧಪಟ್ಟ ಕಾವ್ಯ 'ಹಯರತ್ನ ಶ್ರೇಣಿ'ಯು ೭ ಸಂಧಿ, ೧೫೨ ಪದ್ಯಗಳನ್ನೊಳಗೊಂಡ ಒಂದು ಕಿರುಕೃತಿ. ಹಿರಿಯಣ್ಣ ಕವಿಯು ಕುದುರೆಗಳ ಗುಣಲಕ್ಷಣ, ಸ್ವರೂಪ, ಪ್ರಕಾರ, ಅವುಗಳಿಗೆ ಬರುವ ಕಾಯಿಲೆಗಳು, ಔಷಧಿಗಳು ಇತ್ಯಾದಿ ಸಂಗತಿಗಳನ್ನು *ಈ* ಕಾವ್ಯದ ಮೂಲಕ ವಿಶದಪಡಿಸಿದ್ದಾನೆ.




### ೧೨೨. ಹೈದರಾಬಾದ ಕರ್ನಾಟಕದ ತತ್ತ್ವಪದಗಳು

ಸಂ: ಬಸವರಾಜ ಸಬರದ

ಪುಟ: xxxii+೨೫೨, ವರ್ಷ: ೨೦೦೦, ರೂ: ೧೫೦.೦೦

ಪರಿವಿಡಿ

೧. ಗುಲ್ಬರ್ಗಾ ಜಿಲ್ಲೆಯ ತತ್ವಪದಗಳು
೨. ರಾಯಚೂರು ಜಿಲ್ಲೆಯ ತತ್ವಪದಗಳು
೩. ಬೀದರ ಜಿಲ್ಲೆಯ ತತ್ವಪದಗಳು
೪. ಕೊಪ್ಪಳ ಜಿಲ್ಲೆಯ ತತ್ವಪದಗಳು

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಗುಲ್ಬರ್ಗ, ರಾಯಚೂರ, ಬೀದರ, ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಮುದಾಯದಿಂದ ಸಂಪಾದಿಸಲ್ಪಟ್ಟ ಪ್ರಾತಿನಿಧಿಕ ತತ್ತ್ವಪದಗಳ ಸಂಕಲನವಿದು. ತತ್ತ್ವಪದ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದಾದ ೧೮೯ನೇ ಶತಮಾನದ ತತ್ತ್ವಪದಕಾರರ ಹಾಗೂ ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದ ಕೆಲವು ತತ್ತ್ವಪದಕಾರರ ತತ್ತ್ವಪದಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿ ಒಟ್ಟು ೬೪ ಪದಗಳಿವೆ.




### ೧೨೩. ಹೊಸ ಕುಮಾರರಾಮನ ಸಾಂಗತ್ಯ

ಸಂ: ಎಂ.ಎಂ.ಕಲಬುರ್ಗಿ ಮತ್ತು ವೀರಣ್ಣ ರಾಜೂರ

ಪುಟ: xxxii+೩೬೨, ವರ್ಷ: ೨೦೦೦, ರೂ: ೧೫೦.೦೦

ಪರಿವಿಡಿ

೧. ದೇವಗಿರಿಯಲ್ಲಿ ಮುಮ್ಮಡಿಸಿಂಗನಿಂದ ರಾಜಸೇವೆ
೨. ರಾಯದುರ್ಗದಲ್ಲಿ ಮುಮ್ಮಡಿಸಿಂಗ - ಕಂಪಿಲ
೩. ಹೊಸಮಲೆಯಲ್ಲಿ ಕಂಪಿಲ ರಾಜ್ಯಭಾರ
೪. ಗುತ್ತಿಯ ಜಗದಪ್ಪನೊಡನೆ ಯುದ್ಧ
೫. ಕುಮಾರರಾಮ ಓರುಗಲ್ಲ ಪ್ರವೇಶಿಸಿದುದು
೬. ಓರುಗಲ್ಲ ಯುದ್ಧ ಬೊಲ್ಲನನ್ನು ತಂದುದು
೭. ಶೂಲದ ಹಬ್ಬ-ರತ್ನಾಜಿ ವ್ಯಾಮೋಹ; ಕುಮ್ಮಟ ದುರ್ಗ ನಿರ್ಮಾಣ
೮. ನೀರಾಟ-ಚೆಂಡಿನಾಟ-ರತ್ನಿಯ ಮೋಹ
೯. ನೆಲಮಾಳಿಗೆಯಲ್ಲಿ ಕುಮಾರರಾಮ; ನೇಮಿಯ ಕಾಳಗ-ಸೋಲು; ಮಾದಗತ್ತಿಯ ಕಾಳಗ - ರಾಮನ ವೀರಮರಣ

ವೀರನಾಗಿ ಹುಟ್ಟಿ, ವೀರನಾಗಿ ಬೆಳೆದು, ವೀರನಾಗಿ ಸತ್ತ ಐತಿಹಾಸಿಕ ವ್ಯಕ್ತಿ ಕುಮಾರರಾಮ ಕನ್ನಡಿಗರ ಮನಸ್ಸಿನಲ್ಲಿ ವೀರನಾಗಿ ಇಂದೂ ಬದುಕಿದ್ದಾನೆ. *ಈ*ತನ ಬಗ್ಗೆ *ಈ*ವರೆಗೆ ೫ ಕೃತಿಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಒಂದಾಗಿರುವ *ಈ* 'ಹೊಸ ಕುಮಾರರಾಮನ ಸಾಂಗತ್ಯ'ವನ್ನು ಸಂಪಾದಿಸಿ ಇಲ್ಲಿ ಸಂಕಲಿಸಲಾಗಿದೆ. *ಈ* ಕೃತಿಯ ಮೂಲಕರ್ತೃ ಯಾರೆಂಬುದು ಇನ್ನೂ ತಿಳಿದಿಲ್ಲ. 'ಹೊಸ ಕುಮಾರರಾಮನ ಸಾಂಗತ್ಯ' ಕಾವ್ಯವು ತನ್ನ ಆಳಕ್ಕೆ ಸಿಕ್ಕಷ್ಟು, ನಿಲುವಿಗೆ ತಕ್ಕಷ್ಟು ವೀರಕುಮಾರ ರಾಮನ 'ಜೀವನ-ಸಾಹಸವ'ನ್ನು ಸೆರೆಹಿಡಿದಿದೆ. ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ತ್ವದ ಕೃತಿ ಇದಾಗಿದೆ.

## ೪

## ಕನ್ನಡ ನಾಟಕ




### ೧೨೪. ಕುವೆಂಪು ಸಮಗ್ರ ನಾಟಕ

ಸಂ: ಕೆ.ಸಿ. ಶಿವಾರೆಡ್ಡಿ

ಪುಟ: XXXII+೭೬೦, ವರ್ಷ: ೨೦೦೪, ರೂ: ೩೦೦.೦೦

ಪರಿವಿಡಿ

೧. ಜಲಗಾರ
೨. ಯಮನ ಸೋಲು
೩. ಶ್ಮಶಾನ ಕುರುಕ್ಷೇತ್ರಂ
೪. ಮಹಾರಾತ್ರಿ
೫. ವಾಲ್ಮೀಕಿಯ ಭಾಗ್ಯ
೬. ಶೂದ್ರತಪಸ್ವಿ
೭. ಬೆರಳ್‌ಗೆಕೊರಳ್
೮. ಬಲಿದಾನ
೯. ಚಂದ್ರಹಾಸ
೧೦. ಕಾನೀನ
೧೧. ಬಿರುಗಾಳಿ
೧೨. ರಕ್ತಾಕ್ಷಿ
೧೩. ಮೋಡಣ್ಣನ ತಮ್ಮ
೧೪. ನನ್ನ ಗೋಪಾಲ

ಕುವೆಂಪು ಅವರ ನಾಟಕಗಳು *ಈ* ಶತಮಾನದುದ್ದಕ್ಕೂ ಅನೇಕ ಸಾಂಸ್ಕೃತಿಕ ವಾಗ್ವಾದಗಳಿಗೆ ಎಡೆಮಾಡಿಕೊಟ್ಟಿವೆ. ಕುವೆಂಪು ಅವರಿಂದ ರಚಿತವಾದ ಎಲ್ಲ ನಾಟಕಗಳು *ಈ* ಸಂಕಲನದಲ್ಲಿವೆ. ಅವರ ಎಲ್ಲ ನಾಟಕಗಳನ್ನು ಒಂದೆಡೆ ಸಂಕಲಿಸುವ ಮೂಲಕ ಅವುಗಳನ್ನು ಮರುಓದಿಗೆ, ಮರುಚಿಂತನೆಗೆ ಒಳಪಡಿಸಿ ಕುವೆಂಪು ಅವರ ಮನೋರಂಗಭೂಮಿ, ರಂಗಭೂಮಿಯ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ ಗ್ರಹಿಸಲು ಅನುವಾಗುವಂತಹ ಉದ್ದೇಶವನ್ನಿರಿಸಿಕೊಂಡು *ಈ* ಸಂಪುಟವನ್ನು ಹೊರತರಲಾಗಿದೆ.

### ೧೨೫. ಶ್ರೀರಂಗ ಸಂಪುಟ ೧ : ಆಯ್ದ ನಾಟಕಗಳು

ಸಂ: ಟಿ.ಪಿ.ಅಶೋಕ

ಪುಟ: xxiv+೫೫೦, ವರ್ಷ: ೧೯೯೪, ರೂ: ೧೨೦.೦೦

ಪರಿವಿಡಿ

೧. ಹರಿಜನ್ವಾರ
೨. ಪ್ರಪಂಚ ಪಾಣಿಪತ್ತು
೩. ಪರಮೇಶ್ವರ ಪುಲಿಕೇಶಿ
೪. ಸಂಧ್ಯಾಕಾಲ
೫. ಶೋಕಚಕ್ರ
೬. ಕತ್ತಲೆಯ ಬೆಳಕು
೭. ಕೇಳು ಜನಮೇಜಯ
೮. ಸಂಜಿವನೀ
೯. ರಂಗಭಾರತ
೧೦. ಸ್ವರ್ಗಕ್ಕೆ ಮೂರೇ ಬಾಗಿಲು

ಕನ್ನಡದ ಅತ್ಯಂತ ಪ್ರತಿಭಾವಂತ ಲೇಖಕರಲ್ಲಿ ಒಬ್ಬರಾದ ಶ್ರೀರಂಗರ ಆಯ್ದ ನಾಟಕಗಳ ಸಂಕಲನವಿದು. ಶ್ರೀರಂಗರ ಹತ್ತು ನಾಟಕಗಳ ಮತ್ತು ಅವುಗಳ ರಂಗ ಪ್ರಯೋಗಗಳ ಬಹುಮುಖಿ ಸಾಧ್ಯತೆಗಳ ಶೋಧನೆಗೆ *ಈ* ಸಂಕಲನವು ಇಂಬು ಕೊಡುವಂತಹದ್ದು. ಶ್ರೀರಂಗರ ಇತರ ನಾಟಕ ಹಾಗೂ ಅವರ ಕೃತಿಗಳ ಮೇಲಿನ ವಿಮರ್ಶಾ ಬರಹಗಳ ಆಯ್ದ ಸೂಚಿಯೂ *ಈ* ಅನುಬಂಧದಲ್ಲಿದೆ.

೫

## ಕನ್ನಡ ಕಥೆ-ಕಾದಂಬರಿಗಳು




**೧೨೬. ಗಳಗನಾಥ ಕಾದಂಬರಿ ಸಂಪುಟ : ೧**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೫೫೨, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. ಮಾಧವ ಕರುಣಾ ವಿಲಾಸ

ಕನ್ನಡಿಗರಿಗೆ ಸಂಬಂಧಿಸಿದ 'ಮಾಧವ ಕರುಣಾ ವಿಲಾಸ' ಕಾದಂಬರಿ *ಈ* ಸಂಪುಟದಲ್ಲಿದೆ. *ಈ* ಕಾದಂಬರಿಯನ್ನು ಬರೆದ ಕಾಲ ೧೯೨೩.



**೧೨೭. ಗಳಗನಾಥ ಕಾದಂಬರಿ ಸಂಪುಟ : ೨**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೫೫೨, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. ಕನ್ನಡಿಗರ ಕರ್ಮಕಥೆ

೨. ಕುಮುದಿನಿ

೩. ದುರ್ಗದ ಬಿಚ್ಚುಗತ್ತಿ

*ಈ* ಸಂಪುಟದಲ್ಲಿ ಕನ್ನಡಿಗರ ಕರ್ಮಕಥೆ, ಕುಮುದಿನಿ, ದುರ್ಗದ ಬಿಚ್ಚುಗತ್ತಿ ಕಾದಂಬರಿಗಳಿವೆ. ಗಳಗನಾಥರು ೧೯೧೬ರಿಂದ ೧೯೩೮ರವರೆಗೆ ಬರೆದ ಕಾದಂಬರಿಗಳು ಇಲ್ಲಿವೆ.

**೧೨೮. ಗಳಗನಾಥ ಕಾದಂಬರಿ ಸಂಪುಟ : ೩**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೭೮೨, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. *ಈ*ಶ್ವರೀ ಸೂತ್ರ

೨. ಮರಾಠರ ಅಭ್ಯುದಯ

೩. ಕಮಲಕುಮಾರಿ

೪. ಛತ್ರಪತಿ

ಮರಾಠರಿಗೆ ಸಂಬಂಧಿಸಿದ ಕಾದಂಬರಿಗಳಾದ *ಈ*ಶ್ವರೀ ಸೂತ್ರ, ಮರಾಠರ ಅಭ್ಯುದಯ, ಕಮಲಕುಮಾರಿ, ಛತ್ರಪತಿ ಇವು *ಈ* ಸಂಪುಟದಲ್ಲಿವೆ. ಇವುಗಳು ೧೯೧೩ ರಿಂದ ೧೯೧೯ರ ಅಂತರದಲ್ಲಿ ಪ್ರಕಟಗೊಂಡವು.

**೧೨೯. ಗಳಗನಾಥ ಕಾದಂಬರಿ ಸಂಪುಟ : ೪**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೬೬೦, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. ಗೃಹ ಕಲಹ

೨. ಶಿವಪ್ರಭುವಿನ ಪುಣ್ಯ

೩. ಸ್ವರಾಜ್ಯ ಸುಗಂಧ

೪. ಕುರುಕ್ಷೇತ್ರ

ಮರಾಠರಿಗೆ ಸಂಬಂಧಿಸಿದ ಕಾದಂಬರಿಗಳಾದ ಗೃಹ ಕಲಹ, ಶಿವಪ್ರಭುವಿನ ಪುಣ್ಯ, ಸ್ವರಾಜ್ಯ ಸುಗಂಧ, ಕುರುಕ್ಷೇತ್ರ ಕಾದಂಬರಿಗಳು *ಈ* ಸಂಪುಟದಲ್ಲಿವೆ. ಗಳಗನಾಥರು ೧೯೧೮ರಿಂದ ೧೯೩೮ರವರೆಗೆ *ಈ* ಕೃತಿಗಳನ್ನು ರಚಿಸಿದ್ದಾರೆ.

**೧೩೦. ಗಳಗನಾಥ ಕಾದಂಬರಿ ಸಂಪುಟ : ೫**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೭೦೬, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. ಕ್ಷಾತ್ರತೇಜ

೨. ತತ್ವಸಾರ

೩. ತಿಲೋತ್ತಮ

೪. ಧಾರ್ಮಿಕ ತೇಜ

೫. ರಾಣಾ ರಾಜಸಿಂಹ

ರಜಪೂತರಿಗೆ ಸಂಬಂಧಿಸಿದ ೫ ಕಾದಂಬರಿಗಳು *ಈ* ಸಂಪುಟದಲ್ಲಿವೆ. ಇಲ್ಲಿರುವ ಕ್ಷಾತ್ರತೇಜ, ಸತ್ಯಸಾರ, ತಿಲೋತ್ತಮೆ, ಧಾರ್ಮಿಕ ತೇಜ, ರಾಣಾ ರಾಜಾಸಿಂಹ ಕಾದಂಬರಿಗಳು ೧೯೧೪ ರಿಂದ ೧೯೨೮ರ ಅವಧಿಯಲ್ಲಿ ಬರೆಯಲ್ಪಟ್ಟವು.

**೧೩೧. ಗಳಗನಾಥ ಕಾದಂಬರಿ ಸಂಪುಟ : ೬**

ಸಂ: ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

ಪುಟ: XV+೭೮೨, ವರ್ಷ: ೧೯೯೯, ರೂ: ೬೦೦.೦೦ (೬ ಸಂಪುಟಗಳಿಗೆ)

ಪರಿವಿಡಿ

೧. ಪ್ರಬುದ್ಧ ಪದ್ಮನಯನೆ

೨. ರಾಣಿ ಮೃಣಾಲಿನಿ

೩. ವೈಭವ

೪. ಧರ್ಮರಹಸ್ಯ

೫. ಸಂಸಾರ ಸುಖ

೫ ಸಂಕೀರ್ಣ ಕಾದಂಬರಿಗಳು *ಈ* ಸಂಪುಟದಲ್ಲಿದೆ. ಇಲ್ಲಿ ಪ್ರಬುದ್ಧ ಪದ್ಮನಯನೆ, ರಾಣೀ - ಮೃಣಾಲಿನಿ, ವೈಭವ, ಧರ್ಮರಹಸ್ಯ, ಸಂಸಾರಸುಖ ಎಂಬ ೫ ಕಾದಂಬರಿಗಳು ೧೮೯೮ ರಿಂದ ೧೯೨೬ರ ನಡುವೆ ಪ್ರಕಟವಾದವು.

**೧೩೨. ಜೈನ ಕಥಾಕೋಶ**

ಸಂ: ಹಂಪ ನಾಗರಾಜಯ್ಯ

ಪುಟ: xiv+೮೦೮, ವರ್ಷ: ೧೯೯೭, ರೂ: ೪೫೦.೦೦

ಪರಿವಿಡಿ

೧. ಜೈನ ಕಥಾಕೋಶ : ಪ್ರೇರಣೆ - ಪ್ರಭಾವ

೨. ಉತ್ತರಾಧ್ಯಯನ ಕಥೆಗಳು; ಉವಾಸದ ದಸಾಓ; ಕರಕಂಡು ಚರಿಉ ಕಥೆಗಳು; ಮಣಿಪತಿ ಚರಿತ ಕಥೆಗಳು; ಧಮ್ಮ ಪರಿಕ್ಖಾದ ಕಥೆಗಳು

೩. ಅಂತಗಡ ದಸಾಓ ಕಥೆಗಳು; ಭಗವತೀ ಸೂತ್ರ ಶತಕ; ಆರಾಧನಾ ಸಾರ; ಮಹಾವೀರ ಯುಗ ಪ್ರಾತಿನಿಧಿಕ ಕಥೆಗಳು; ಉತ್ತರಾಧ್ಯಯನ ಸೂತ್ರ ಪ್ರಿಯದರ್ಶಿನಿ ಟೀಕೆ

೪. ವಸುದೇವ ಹಿಂಡಿ ಕಥೆಗಳು; ನಾಯಾ ಧಮ್ಮ ಕಹಾಓ; ಉವಾಸಗ ದಸಾಓ; ಪುಣ್ಯಾಸ್ರವ ಕಥೆಗಳು; ಧರ್ಮಾಮೃತ ಕಥೆಗಳು; ಧರ್ಮಪರೀಕ್ಷೆ ಕಥೆಗಳು; ವಡ್ಡಾರಾಧನೆ ಕಥೆಗಳು

೫. ಜೀವಸಂಬೋಧನೆ ಕಥೆಗಳು; ನೋಂಪಿಯ ಕಥೆಗಳು; ಮಹಾಪುರಾಣದ ಕಥೆಗಳು; ನಂದಿಸೂತ್ರದ ಕಥೆಗಳು

ಇದು ಅರ್ಧಮಾಗದಿ, ಅಪಭ್ರಂಶ, ಜೈನ-ಮಹಾರಾಷ್ಟ್ರ, ಶೌರಸೇನಿ, ಪ್ರಾಕೃತ ಭಾಷೆಗಳಲ್ಲಿರುವ ಆಗಮ ಮತ್ತು ಆಗಮೇತರ ಕೃತಿಗಳಿಂದ ಅನುವಾದಿತ ಕೃತಿಗಳಾಗಿವೆ. ಇಂಗ್ಲಿಷ್-ಹಿಂದಿ ಅನುವಾದಕರ ಅನುವಾದಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಹಳೆಗನ್ನಡದಲ್ಲಿನ ಕಥೆಗಳನ್ನು ಹೊಸಗನ್ನಡಕ್ಕೆ ಕೊಡಲಾಗಿದೆ. *ಈ* ಕಥೆಗಳು ಆ ಕಾಲದ ಜನರ ಸಾಂಸ್ಕೃತಿಕ ಪರಿಸರವನ್ನು ಪಡಿಮೂಡಿಸುತ್ತದೆ. *ಈ* ಸಂಕಲನದಲ್ಲಿ ಒಟ್ಟು ೩೮೩ ಜೈನ ಕಥೆಗಳಿವೆ.

**೧೩೩. ನೋಂಪಿಯ ಕಥೆಗಳು**

ಸಂ: ಹಂಪ ನಾಗರಾಜಯ್ಯ

ಪುಟ: xx+೭೬+೪೨೮, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ೮೪ ನೋಂಪಿಯ ಕಥೆಗಳು

ಜೈನಧರ್ಮೀಯರ ಸಾಂಸ್ಕೃತಿಕ ಪ್ರಜ್ಞೆಯಿಂದ ಹೊರಹೊಮ್ಮಿದ ೮೪ ಕಥೆಗಳನ್ನು *ಈ* 'ನೋಂಪಿಯ ಕಥೆಗಳು' ಕೃತಿಯಲ್ಲಿ ಸಂಕಲಿಸಲಾಗಿದೆ. ಕನ್ನಡದ ಕವಿಗಳು ಸಂಗ್ರಹಿಸಿ ಕೊಟ್ಟಿರುವ ಇಲ್ಲಿನ ಕಥೆಗಳಿಗೆ ಕಥನ ಸಾಹಿತ್ಯದ ಪರಿಪ್ರೇಕ್ಷವನ್ನು ಕಟ್ಟಲು ಇಲ್ಲಿ ಪ್ರಯತ್ನಿಸಲಾಗಿದೆ. *ಈ* ಕೃತಿಯಲ್ಲಿರುವ ಕೆಲವು *ಈ*ಗಾಗಲೇ ಬೇರೆಡೆ ಪ್ರಕಟವಾಗಿದ್ದರೂ ಉಳಿದ ೬೫ ನೋಂಪಿ ಕತೆಗಳು *ಈ* ಗ್ರಂಥದ ಮೂಲಕವೇ ಬೆಳಕು ಕಾಣಿತ್ತಿರುವುದು ಇಲ್ಲಿನ ವಿಶೇಷ.

೬

# ಕನ್ನಡ ಸಂಶೋಧನ ಪ್ರಬಂಧಗಳು




## ೧೩೪. ಉಲಿವ ಮರ

ಲೇ: ಶಾಂತರಸ ಹೆಂಬೇರಾಳು

ಪುಟ: 10+೩೪೬, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಬಸವಪೂರ್ವಯುಗ

೨. ಶಿವಶರಣರಲ್ಲಿ 'ಮಾರಯ್ಯ'ಗಳು

೩. ಬಹುರೂಪಿ ಚೌಡಯ್ಯ; ಮರುಳ ಶಂಕರದೇವರು; ವಚನಕಾರ ಮಾದಾರಚನ್ನಯ್ಯ

೪. ನಾಡವರ ಭಾವಶುದ್ಧಗೈದ ಮಹಂತ; ಸತ್ಯನಿಷ್ಠ ವೀರಭಕ್ತ ತೆಲುಗು ಜೊಮ್ಮಯ್ಯ; ಡಕ್ಕೆಯ ಬೊಮ್ಮಣ್ಣ; ನಗೆಯ ಮಾರಿತಂದೆ; ಲಿಂಗಮ್ಮ

೫. ಶರಣರ ಧರ್ಮಕ್ಕೆ ಮೊದಲಿಗೆ ರಾಜಾಶ್ರಯವಿತ್ತ ಸುಗ್ಗಲೆ; ಶರಣ ಧರ್ಮಕ್ಕೆ ಉಸಿರಿತ್ತ ದುಗ್ಗಳೆ

೬. ಹರಿಹರನ ಗದ್ಯ; ಹರಿಹರನ ಕಾವ್ಯಗಳಲ್ಲಿ ಕಂಡುಬರುವ ಭಕ್ತಿ ಮತ್ತು ಕಾಯಕ

೭. ಶರಣ ಸತಿ ಲಿಂಗ ಪತಿ; ಶೂನ್ಯಸಂಪಾದನೆಯ ಪಾತ್ರ ವೈಶಿಷ್ಟ್ಯ; ಶರಣರೂ ಕಲೆಗಳು

ಬಸವಪೂರ್ವ ಯುಗದ ಶರಣರನ್ನು ಕುರಿತು ಇಲ್ಲಿನ ಲೇಖನಗಳಲ್ಲಿರುವ ವೈಚಾರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗಳು ಮಹತ್ವಪೂರ್ಣವಾದವು. ಶರಣೆಯರ ಸಾಹಿತ್ಯದ ಕೊಡುಗೆಯನ್ನು ಅವರ ಸಾಂಸ್ಕೃತಿಕ ಕಾಣಿಕೆಯನ್ನು ಇಲ್ಲಿನ ಹಲವು ಲೇಖನಗಳಲ್ಲಿ ಪ್ರಸ್ತಾಪಿಸಲಾಗಿದೆ. ಆಳವಾದ ಚಿಂತನೆ, ಸೂಕ್ಷ್ಮ ಅವಲೋಕನ ಮತ್ತು ತೌಲನಿಕ ಗುಣಗಳಿಂದ ಇಲ್ಲಿಯ ಬರಹಗಳು ಮಧ್ಯಕಾಲೀನ ಸಾಹಿತ್ಯ ವಿಮರ್ಶಾ ಲೋಕಕ್ಕೆ ಹೊಸತಾದ ನೆಲೆ ಬೆಲೆಯನ್ನು ಒದಗಿಸುತ್ತವೆ.




## ೧೩೫. ಕಡೆಗೋಲು

ಲೇ: ಹಂಪ ನಾಗರಾಜಯ್ಯ

ಪುಟ: x+೨೬೬, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಲಕ್ಷಣಗ್ರಂಥಗಳು ವಿವೇಚನೆ

೨. ಗ್ರಂಥಸಂಪಾದನೆ ಭಾಷೆ, ವ್ಯಾಕರಣ ನಿಘಂಟು ಕುರಿತ ಲೇಖನಗಳು

೩. ಪಂಪ, ದಿನಕರ ದೇಸಾಯಿ, ಕಾರಂತ, ಪ್ರೇಮಚಂದರ ಬಗ್ಗೆ

೪. ಕೆಲವು ಪುಸ್ತಕ ವಿಮರ್ಶೆ

೫. ಕನ್ನಡ ಶಿಕ್ಷಣ, ಭಾಷೆ ಸಂಬಂಧಿ ಬರಹಗಳು

೬. ಭಾರತೀಯ ಸಾಹಿತ್ಯ ಸಂಕಲನ

೭. ಕನ್ನಡ ಸಾಹಿತ್ಯ ಸಂಸ್ಕೃತಿ ಕುರಿತು

ಲಕ್ಷಣ ಗ್ರಂಥಗಳ ವಿವೇಚನೆಯಿಂದ ತೊಡಗಿ, ಗ್ರಂಥಸಂಪಾದನೆ ವ್ಯಾಕರಣ ನಿಘಂಟುಗಳಿಂದ ಮುಂದುವರೆದು ಕಾದಂಬರಿ ಹಾಗೂ ಕಾದಂಬರಿಕಾರರ ಚರ್ಚೆಯನ್ನು ನಡೆಸಿ, ಕೊನೆಗೆ ಆಧುನಿಕ ಸನ್ನಿವೇಶದಲ್ಲಿ ಕನ್ನಡವನ್ನು ಕುರಿತಂತೆ ಬಹುಬಗೆಯಲ್ಲಿ ಚಿಂತನೆಯುಳ್ಳ *ಈ* ಕೃತಿಯಲ್ಲಿ, ಕರ್ನಾಟಕದ ವರ್ತಮಾನ ಮತ್ತು ಭವಿಷ್ಯಗಳಿಗೆ ಸಂಬಂಧಿಸಿದಂತೆ ಇರುವ ಅಡ್ಡಿ ಆತಂಕಗಳನ್ನು, ತವಕ-ತಲ್ಲಣಗಳನ್ನು ವಿವರವಾಗಿ ಇಲ್ಲಿ ಪರಾಮರ್ಶಿಸಲಾಗಿದೆ.




## ೧೩೬. ಕನ್ನಡ ಕಾವ್ಯತತ್ತ್ವ ಚಿಂತನೆ

ಲೇ: ಜಿ.ಎಸ್.ಶಿವರುದ್ರಪ್ಪ

ಪುಟ: xii+೨೭೨, ವರ್ಷ: ೨೦೦೭, ರೂ: ೮೦

ಪರಿವಿಡಿ

೧. ಸಾಹಿತ್ಯದ ಮೂಲ ಪ್ರೇರಣೆ; ಸಾಹಿತ್ಯ ಜೀವನದ ಗತಿಬಿಂಬ

೨. ಕವಿ ಸಹೃದಯ; ಕವಿಯಲ್ಲಿ ವಿಶಿಷ್ಟತೆ

೩. ಕಾವ್ಯ ಮತ್ತು ಹಾಡುಗಾರಿಕೆ; ಕವಿಗೋಷ್ಠಿ ಒಂದು ಚಿಂತನೆ

೪. ಕವಿ ಮತ್ತು ಕಾಲಧರ್ಮ

೫. ಕನ್ನಡ ಕವಿಗಳ ಭಾಷಾಪ್ರಜ್ಞೆ; ಕನ್ನಡ ಕವಿಗಳ ಕಾವ್ಯಕಲ್ಪನೆ

೬. ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನೆ; ಪು.ತಿ.ನ ಅವರ ಕಾವ್ಯಜಿಜ್ಞಾಸೆ

೭. ಕಾವ್ಯ ಸೃಷ್ಟಿ : ಬೇಂದ್ರೆಯವರ ಸೃಷ್ಟಿ

೮. ಕಾವ್ಯ ಮೀಮಾಂಸೆ

೯. ಶ್ರವಣಬೆಳಗೊಳದ ಶಾಸನಗಳಲ್ಲಿ ಕಾವ್ಯಗುಣ

೧೦. ವಚನಗಳಲ್ಲಿ ಕಾವ್ಯತತ್ವ; ಬಸವಣ್ಣನವರ ವಚನಗಳಲ್ಲಿ ಕಾವ್ಯಸೌಂದರ್ಯ; ದಾಸರು ಶರಣರು ದರ್ಶಿಸಿದ ದಿವ್ಯಸೌಂದರ್ಯ

ಇದು ಬಹುರೂಪಿ ಚಿಂತನೆಗಳನ್ನು ಒಳಗೊಂಡ ಮಹತ್ವದ ಕೃತಿ. ಕನ್ನಡ ಕವಿಗಳ ಹೇಳಿಕೆಗಳಿಂದ ತೊಡಗಿ, ಕಾವ್ಯಗಳಲ್ಲಿ ಅಂತರ್ಗತವಾದ ಚಿಂತನೆಗಳಿಂದ ಮುಂದುವರೆದು, ಓದುಗರನ್ನು ದಿವ್ಯಪರಿಣಾಮೀಯತೆಯ ಕಡೆಗೆ ಕೊಂಡೊಯ್ಯುವ ಕನ್ನಡ ಕಾವ್ಯದ ಚಿಂತನೆಯ ವಿನ್ಯಾಸಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಕೃತಿಕಾರರು ಇಲ್ಲಿ ಕಾವ್ಯವನ್ನು ಕುರಿತು ನಡೆಸಿರುವ ಚರ್ಚೆಗಳು ಕನ್ನಡ ಕಾವ್ಯ ಮೀಮಾಂಸೆಗೆ ಸೃಜನಶೀಲ ಆಯಾಮವನ್ನು ತಂದುಕೊಟ್ಟಿವೆ.



**೧೩೭. ಕನ್ನಡ ಪ್ರಜ್ಞೆ**

ಲೇ: ಬರಗೂರು ರಾಮಚಂದ್ರಪ್ಪ

ಪುಟ: xii+೩೨೦, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಕನ್ನಡಾಭಿಮಾನ, ಕನ್ನಡ ಮನಸ್ಸು

೨. ಭಾಷೆ ಮತ್ತು ತಂತ್ರಜ್ಞಾನ

೩. ಪ್ರಾಥಮಿಕ ಶಿಕ್ಷಣ : ಭಾಷೆ ಮತ್ತು ಮಾಧ್ಯಮ

೪. ಆಡಳಿತದಲ್ಲಿ ಕನ್ನಡ; ಉದ್ಯಮ ಉದ್ಯೋಗದಲ್ಲಿ ಕನ್ನಡ

೫. ಕನ್ನಡ, ಸಂಸ್ಕೃತಿ ಮತ್ತು ಸ್ವಾಯತ್ತತೆ

೬. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಬೇಡಿಕೆ ಮತ್ತು ರಾಜಕೀಯ

೭. ಕನ್ನಡಕ್ಕೊಂದು ಕಾರ್ಯಸೂಚಿ

೮. ಇಂಗ್ಲಿಷ್ ಕಲಿಕೆ ಮತ್ತು ಕನ್ನಡ ಚಳುವಳಿಗಳು

೯. ಕನ್ನಡ ಚಿತ್ರರಂಗ ಕನ್ನಡಪರ ಸಿನಿಮಾ ನೀತಿ

೧೦. ಮೂಕ ಮಹಾಕಾವ್ಯ ಮತ್ತು ಭಾಷೆ

ಕನ್ನಡ ಭಾಷೆಯು ಶಿಕ್ಷಣ, ಆಡಳಿತ, ಉದ್ಯೋಗ, ರಂಗಭೂಮಿ, ಚಲನಚಿತ್ರದಂತಹ ರಂಗಗಳಲ್ಲಿ ಬಲಿಷ್ಠ ಶಕ್ತಿಯಾಗಿ ರೂಪುಗೊಳ್ಳಬೇಕಾದ ಬಗೆಗಳನ್ನು ಚಿಂತನೆ ಮತ್ತು ಪ್ರಯೋಗಗಳ ದೃಷ್ಟಿಯಿಂದ ಇಲ್ಲಿ ವಿವೇಚಿಸಲಾಗಿದೆ. ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ಸೂಕ್ಷ್ಮ ಸಂಗತಿಗಳನ್ನೂ ಚರ್ಚಿಸಲಾಗಿದೆ.

**೧೩೮. ಕನ್ನಡ ಸಂಶೋಧನೆ : ತಾತ್ವಿಕ ವಿಚಾರ**

ಲೇ: ರಹಮತ್ ತರೀಕೆರೆ

ಪುಟ: x+೧೭೮, ವರ್ಷ: ೨೦೦೭, ರೂ: ೬೦.೦೦



ಪರಿವಿಡಿ

೧. 'ಸಂಸ್ಕೃತಿ': ಹಾಗೆಂದರೇನು?; ಜಾಗತೀಕರಣದ ಚರ್ಚೆ ಸಂಸ್ಕೃತಿ ನುಡಿಗಟ್ಟಿನಲ್ಲಿ; ಕರ್ನಾಟಕ: ಸಂಸ್ಕೃತಿಯೊ ಸಂಸ್ಕೃತಿಗಳೊ?

೨. 'ಸೃಜನಶೀಲ' ಮತ್ತು 'ಸೃಜನೇತರ'; ಸಂಶೋಧನೆಯಲ್ಲಿ ಬದ್ಧತೆಯ ಪ್ರಶ್ನೆ; ಕನ್ನಡ ಮನಸ್ಸು : ಒಂದು ಟಿಪ್ಪಣಿ

೩. ಭಾಷೆಯ ಪಾವಿತ್ರ್ಯ ರಕ್ಷಣಾ ಸಮಸ್ಯೆ; ಸಮಸ್ಯೀಕರಣ ಹಾಗೂ ತಾತ್ವೀಕರಣ

೪. ಸಂಶೋಧನೆಯ 'ಸತ್ಯ'ದ ಅಭಿವ್ಯಕ್ತಿ ಮಾಹಿತಿ ಹಾಗೂ ವಿಶ್ಲೇಷಣೆಯ ರಾಜಕಾರಣ

೫. ಅಧ್ಯಯನ ವಿಧಾನ ಕಂಡುಕೊಳ್ಳುವ ಕಷ್ಟ; ಅನುಭಾವಿಗಳ ಅಧ್ಯಯನದಲ್ಲಿ ತೊಡಕು

೬. 'ವೈದಿಕ' ವಿರೋಧದ ಸಮಸ್ಯೆ

೭. 'ಪ್ರಾಚೀನ' ಕೃತಿಗಳ ಸಾಂಸ್ಕೃತಿಕ ಮುಖಾಮುಖಿ

೮. ಸಮುದಾಯ ಅಧ್ಯಯನದ ಸವಾಲುಗಳು; ಧರ್ಮಗಳ ಅಧ್ಯಯನ: ಹಾದಿ ಯಾವುದು; ಕರ್ನಾಟಕ ಸಮಾಜಶಾಸ್ತ್ರ : ಸಾಹಿತ್ಯದ ಕಣ್ಣಲ್ಲಿ

೯. ಸಂಶೋಧನೆ ಮತ್ತು 'ಪರಧನ' ಸಹಾಯ; ಶಾಸ್ತ್ರದ ಋಣಭಾರ: ಇಳಿಸುವ ಬಗೆ; ಆದರ್ಶ ಅಧ್ಯಯನ ವಿಧಾನಗಳು ಇವೆಯೇ?

*ಈ* ಕೃತಿಯಲ್ಲಿ ಕನ್ನಡ ಸಂಶೋಧನೆಯನ್ನು ಕುರಿತ ಮುಕ್ತ ಹಾಗೂ ಬಹು ಸಾಧ್ಯತೆಗಳ ನೋಟಗಳು ದೊರೆಯುತ್ತವೆ. ಸಾಹಿತ್ಯ, ಸಂಸ್ಕೃತಿ ಅಧ್ಯಯನದ ವಿಧಾನ, ಸತ್ಯ-ಇವುಗಳನ್ನು ಬದ್ಧ ಆಕೃತಿಗಳಲ್ಲಿ ಪ್ರಭುತ್ವಾತ್ಮಕ ನೆಲೆಯಲ್ಲಿ ಕಾಣುವ ಸಂಪ್ರದಾಯವಾದಿ ದೃಷ್ಟಿಕೋನಕ್ಕೆ ಭಿನ್ನವಾಗಿ ಅದನ್ನು ನಿರಂತರ ಶೋಧದ ಚಲನಶೀಲ ಪ್ರಕ್ರಿಯೆ ಎಂದು ನೋಡುವ ಅನುಭಾವಿ ದೃಷ್ಟಿ ಇಲ್ಲಿ ಪ್ರಧಾನವಾಗಿದೆ. ಹೀಗಾಗಿ ಸಂಸ್ಕೃತಿ ಹಾಗೂ ಕರ್ನಾಟಕತ್ವದ ಬಗ್ಗೆ ಹೊಸ ಚಿಂತನೆಗಳು ಇಲ್ಲಿ ದೊರೆಯುತ್ತವೆ. ಮಾಹಿತಿ ಸಂಗ್ರಹ, ಅಧ್ಯಯನ ವಿಶ್ಲೇಷಣೆ, ಫಲಿತ ಎನ್ನುವ ಸಂಶೋಧನಾ ನೆಲೆಗಳನ್ನು ಇಲ್ಲಿ ಮರು ವಿಮರ್ಶೆಗೆ ಒಳಪಡಿಸಲಾಗಿದೆ. *ಈ* ದೃಷ್ಟಿಯಿಂದ ಕನ್ನಡ ಅಧ್ಯಯನವನ್ನು ಹೆಚ್ಚು ಸೂಕ್ಷ್ಮವಾಗಿ ಸೃಜನಶೀಲವಾಗಿ ನೋಡಿದ ಲೇಖನಗಳು ಇಲ್ಲಿ ಒಟ್ಟು ಸೇರಿವೆ. ಕನ್ನಡ ಅಧ್ಯಯನಕ್ಕೆ ಹೊಸ ತಾತ್ವಿಕತೆಯ ದಾರಿಯನ್ನು ತೋರಿಸಿ ಕೊಟ್ಟಿರುವ ಕೃತಿ ಇದು.

**೧೩೯. ಕನ್ನಡ ಸಂಶೋಧನೆಯ ವೈಧಾನಿಕತೆಗಳು**

ಸಂ: ಅಮರೇಶ ನುಗಡೋಣಿ

ಪುಟ: xii+೨೪೨, ವರ್ಷ: ೨೦೦೮, ರೂ: ೧೨೦.೦೦




ಪರಿವಿಡಿ

೧. ಸಂಶೋಧನೆ : ಪರಿಕಲ್ಪನೆ, ಸ್ವರೂಪ

೨. ಸಾಹಿತ್ಯ ಸಂಶೋಧನೆಯ ವೈಧಾನಿಕತೆ

೩. ಸ್ತ್ರೀವಾದಿ ಸಂಶೋಧನಾ ವಿಧಾನಗಳು

೪. ಸಂಶೋಧನೆ-ಅಧ್ಯಯನ ಮತ್ತು ಆಕರಗಳ ಅರ್ಥಕಲ್ಪನೆ

೫. ಸಂಶೋಧನೆಯಲ್ಲಿ ಸಮಸ್ಯೆ, ಸಮಸ್ಯೀಕರಣ ಹಾಗೂ ತಾತ್ವೀಕರಣ

೬. ಅಧ್ಯಯನದ ತಾತ್ವಿಕ ನೆಲೆಗಳು, ಧೋರಣೆಗಳು ಮತ್ತು ಸಿದ್ಧತೆಗಳು

೭. ನಿರಚನಾವಾದಿ ಓದು, ಸಂರಚನಾವಾದ

೮. ವಿರಚನೆ, ನಿರಚನೆ ಸಿದ್ಧಾಂತ, ರಚನೋತ್ತರವಾದ, ಆಧುನೀಕೋತ್ತರವಾದ

೯. ಕರ್ನಾಟಕ ಸಂಸ್ಕೃತಿ : ಅಧ್ಯಯನದ ಸಮಸ್ಯೆಗಳು

*ಈ* ಕೃತಿಯಲ್ಲಿ ಸಂಕಲನಗೊಂಡಿರುವ ಲೇಖನಗಳು ಕನ್ನಡ ಸಂಶೋಧನ ವೈಧಾನಿಕತೆಯ ಹಲವು ಮಗ್ಗುಲುಗಳನ್ನು ವಿಭಿನ್ನ ದೃಷ್ಟಿಕೋನಗಳ ಮೂಲಕ ಗಂಭೀರ ಚರ್ಚೆಗೆ ಒಳಪಡಿಸಿವೆ. ಸಂಶೋಧನೆ ಕಾಲಕಾಲಕ್ಕೆ ತನ್ನ ವಸ್ತುವನ್ನು, ಆಕರವನ್ನು, ದೃಷ್ಟಿಕೋನವನ್ನು, ತಾತ್ವಿಕತೆಯನ್ನು, ವೈಧಾನಿಕತೆಯನ್ನು ನಿರಂತರವಾಗಿ ಬದಲಾಯಿಸಿಕೊಳ್ಳುತ್ತಲೇ ಮುನ್ನಡೆಯುತ್ತದೆ. ಸಂಶೋಧನೆಯಲ್ಲಿ ತೊಡಗಿರುವವರು ಮತ್ತು ಸಂಶೋಧನೆಗೆ ತೊಡಗುವವರು ವರ್ತಮಾನದಲ್ಲಿ ಸಂಶೋಧನೆಯ ವಲಯದಲ್ಲಿ ಕ್ರಿಯಾಶೀಲವಾಗಿರುವ ಧೋರಣೆಗಳನ್ನು ತಿಳಿಯಲು ಆಸಕ್ತರಾಗಿದ್ದಾರೆ. ಪ್ರಸ್ತುತ *ಈ* ಸಂಕಲನದ ಲೇಖನಗಳು *ಈ* ಕೊರತೆಯನ್ನು ನೀಗಿಸುವ ದಾರಿಯಲ್ಲಿವೆ.




**೧೪೦. ಕೃತಿಶೀಲ**

ಲೇ: ಪ್ರಭುಶಂಕರ

ಪುಟ: xii+೪೩೦, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಸಾಹಿತ್ಯ ಕಥನ

೨. ಕೃತಿ ಕಥನ

೩. ಕುವೆಂಪು ಕಥನ

*ಈ* ವಿಮರ್ಶೆ ಸಂಕಲನದ ಬರಹಗಳಲ್ಲಿ ತುಂಬ ವೈವಿಧ್ಯಮಯ ಬರಹಗಳಿವೆ. ಆಳವಾದ ಅಧ್ಯಯನ, ಸೂಕ್ಷ್ಮವಾದ ಅವಲೋಕನ ಮತ್ತು ಆಪ್ತಸಂಬಂಧಿ ಗುಣಗಳಿಂದ ಇಲ್ಲಿಯ ಬರೆಹಗಳು ವಿಮರ್ಶೆ ಲೋಕಕ್ಕೆ ಹೊಸ ನೆಲೆ ಬೆಲೆಯನ್ನು ಒದಗಿಸುತ್ತವೆ.



**೧೪೧. ಕಾವ್ಯಕಾರಣ**

ಲೇ: ಕೆ.ವಿ. ತಿರುಮಲೇಶ್

ಪುಟ: 322+೧೩, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಕವಿತೆ ಕೆಲವು ವಿಚಾರಗಳು

೨. ರಾಜಕೀಯವು ಕಾವ್ಯಶೀಲತೆಯೂ; ಓದಿಗೊಂದು ಕವನ ಕಾರಣ

೩. ಟಿ.ಎಸ್.ಎಲಿಯಟ್ ಪ್ರಭಾವ

೪. ನವೋದಯ ಕಾವ್ಯ: ಮಂಗಳೂರು ಕೇಂದ್ರ; ಗೋವಿಂದ ಪೈ ಕಾವ್ಯ ದೃಷ್ಟಿ

೫. ನವ್ಯಕಾವ್ಯದ ಸ್ಥಿರಚಿತ್ರಗಳು; ನವ್ಯದಿಂದ ಬಂಡಾಯದತ್ತ

೬. ಬೇಂದ್ರೆಯವರ ಕಾವ್ಯಶೈಲಿ; ಕನ್ನಡ ಕಾವ್ಯಕ್ಕೆ ಅಡಿಗರ ಕೊಡುಗೆ

೭. ಶಿವರುದ್ರಪ್ಪನವರ ಕಾವ್ಯ: ಒಂದು ಪ್ರವೇಶಿಕೆ; ಕವಿಯಾಗಿ ಅನಂತಮೂರ್ತಿ

೮. ಕವಿತೆಯ ಓದಿಗೆ ಮಾತೃತಾ ರೂಪ; ಕಾವ್ಯ ಭಾಷೆ ಇತ್ಯಾದಿ; ಕಾವ್ಯ ಜೈವಿಕ ಕ್ರಿಯೆ ಅಲ್ಲ

೯. ಕವಿಗೆ ಸಂದರ್ಭದ ಸೃಜನಶೀಲ ಸವಾಲು; ಜಗಲಿಗೆ ತಾಗಿ ಹಿತ್ತಲ ಮೌಲ್ಯ

೧೦. ನಿಸಾರರ ಕವಿತೆಗಳಲ್ಲಿ ಉನ್ನತ ಜೀವನ ಮೌಲ್ಯಗಳ ತುಡಿತದ ಅಭಿವ್ಯಕ್ತಿ; ಕಾವ್ಯದ ಕಸುಬಿನಲ್ಲಿ ಅನನ್ಯ ಕಾಳಜಿ: ಶರ್ಮರ ಸಮಗ್ರಕಾವ್ಯ

*ಈ* ಸಂಕಲನದಲ್ಲಿ ಕವಿತೆಯನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದ ಕವಿಗಳನ್ನು ಮಾದರಿಗಳನ್ನಾಗಿಟ್ಟುಕೊಂಡು ವಿಶಿಷ್ಟ ಮಾದರಿಯ ಚರ್ಚೆಗಳನ್ನು ನಡೆಸಲಾಗಿದೆ. ಕವಿತೆಯನ್ನು ಒಂದು ವ್ಯಾಪಕ ಸಾಂಸ್ಕೃತಿಕ ವಿದ್ಯಮಾನದ ಭಾಗವಾಗಿ ಪರಿಶೀಲಿಸುವ ಕೃತಿಕಾರರಿಗೆ ಎಲ್ಲ ಉತ್ತಮ ಕವನಗಳು ಹೊಸ ಆವಿಷ್ಕಾರದ ಹಾದಿಗಳಾಗಿ ಕಾಣಿಸುತ್ತವೆ. ಇಲ್ಲಿ ಕಾವ್ಯವನ್ನು ಕುರಿತ ಧ್ಯಾನ, ಹರಳುಗಟ್ಟಿ 'ಕಾವ್ಯಕಾರಣ'ದ ಅಪೂರ್ವ ಆಕಾರವನ್ನು ತಾಳಿದೆ.

**೧೪೨. ಜನಸಂಸ್ಕೃತಿ**

ಲೇ: ಸಿದ್ಧಲಿಂಗಯ್ಯ

ಪುಟ: xii+೨೫೬, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಸಮಾಜ

೨. ಸಂಸ್ಕೃತಿ

೩. ಸಾಹಿತ್ಯ

ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯ ಎನ್ನುವ ೩ ನೆಲೆಗಳಲ್ಲಿರುವ ಇಲ್ಲಿನ ಲೇಖನಗಳು ಪರಸ್ಪರ ಅಂತರ್‌ಸಂಬಂಧಿಯಾಗಿರುವುದರ ಜೊತೆಗೆ ಸಮಗ್ರ ಕ್ರಾಂತಿಗೆ ತಳಹದಿಯಾಗಿದೆ. ದಲಿತ, ವಚನ, ಬಂಡಾಯ ಮತ್ತು ಜನಪದ ಸಾಹಿತ್ಯಗಳನ್ನು ಒಂದೆಡೆ ಸೇರಿಸಿ ಸಾಹಿತ್ಯ

ಎನ್ನುವ ಪರಿಕಲ್ಪನೆಯನ್ನು ಇಲ್ಲಿ ವಿಸ್ತರಿಸಲಾಗಿದೆ. ಆರಾಧನೆಗಳು ಮತ್ತು ಆಚರಣೆಗಳು ದಲಿತರ ಸಂಸ್ಕೃತಿಯ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದು, ಅದರೊಳಗಿನ ಮಾನವೀಯ ಮೌಲ್ಯಗಳ ಕುರಿತು *ಈ* ಕೃತಿಯಲ್ಲಿ ಚಿಂತನೆ ನಡೆಸಲಾಗಿದೆ.

**೧೪೩. ನಾನೇಕೆ ಬರೆಯುತ್ತೇನೆ?**

ಸಂ : ಅಮರೇಶ ನುಗಡೋಣಿ

ಪುಟ : X +೧೮೮, ವರ್ಷ : ೨೦೦೯, ರೂ. ೧೦೦.೦೦

ಕನ್ನಡದ ಇಪ್ಪತ್ತೇಳು ಸಾಹಿತಿಗಳು ತಮ್ಮ ಸಾಹಿತ್ಯ ಸೃಷ್ಟಿಯ ಹಿಂದಿರುವ ಪ್ರಭಾವಪ್ರೇರಣೆಗಳನ್ನು ತಾವೇ ಗುರುತಿಸಿಕೊಂಡು ಬರೆದಿರುವ ಇಲ್ಲಿನ ಬರಹಗಳು, ಓದುಗರನ್ನು ಮತ್ತು ಹೊಸ ಬರಹಗಾರರನ್ನು ಚಿಂತನೆಗೆ ಹಚ್ಚಿ ಅವರನ್ನು ಪ್ರಭಾವಿಸಬಲ್ಲಂಥವು. ಕನ್ನಡ ಸಾಹಿತ್ಯ ಚಿಂತನೆಗಳನ್ನು ಅಡಗಿಸಿಕೊಂಡಿರುವ *ಈ* ಕೃತಿ ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಕಾರವನ್ನು ಹುಟ್ಟು ಹಾಕುವಷ್ಟು ಮಹತ್ವದ್ದಾಗಿದೆ.



**೧೪೪. ನಿತ್ಯವರ್ತಮಾನ**

ಲೇ: ಚಂದ್ರಶೇಖರ ಪಾಟೀಲ

ಪುಟ: ೧೨+೨೮೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಸಾಹಿತ್ಯ

೨. ವಿಚಾರ

೩. ವ್ಯಕ್ತಿ

ನಿತ್ಯವರ್ತಮಾನದ ಲೇಖನಗಳು, ಸಾಹಿತ್ಯ, ವಿಚಾರ ಮತ್ತು ವ್ಯಕ್ತಿ ಎಂಬ ಮೂರು ನೆಲೆಗಳಲ್ಲಿ ಚಲಿಸುತ್ತ ಕನ್ನಡ ಸಾಹಿತ್ಯದ ಗ್ರಹಿಕೆಯನ್ನು ವೈಚಾರಿಕ ನೆಲೆಯಲ್ಲಿ ವಿಶ್ಲೇಷಿಸುತ್ತವೆ. *ಈ* ಮೂರು ಬಗೆಯ ಲೇಖನಗಳಲ್ಲಿರುವ ಇರುವ ವೈಚಾರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗಳು ಆಳವಾದ ಶೋಧನೆ, ವೈಚಾರಿಕ ದೃಷ್ಟಿಕೋನಗಳು ನಿಜದ ನೆಲೆಯನ್ನು ವರ್ತಮಾನದಲ್ಲಿ ಕಾಣುವ ಹಂಬಲವನ್ನು ಹೊತ್ತಿವೆ. ಇಲ್ಲಿಯ ಬರಹಗಳು ಆಧುನಿಕ ಸಾಹಿತ್ಯದ ಸಂಸ್ಕೃತಿ ವಿಮರ್ಶಾಲೋಕಕ್ಕೆ ಹೊಸತಾದ ನೆಲೆಬೆಲೆಯನ್ನು ಒದಗಿಸುತ್ತವೆ.

**೧೪೫. ನೇಗಿನಹಾಳ ಪ್ರಬಂಧಗಳು**

ಸಂ: ಎಂ.ಬಿ.ನೇಗಿನಹಾಳ

ಪುಟ: xii+೫೦೬, ವರ್ಷ: ೧೯೯೯, ರೂ: ೨೦೦.೦೦



ಡಾ. ಎಂ.ಬಿ.ನೇಗಿನಹಾಳರು ೧೯೭೦ರಿಂದ ೧೯೯೯ರವರೆಗೆ ಬರೆದ ಒಟ್ಟು ೬೦ ಸಂಶೋಧನಾ ಸಂಪ್ರಬಂಧಗಳ ಸಂಕಲನವಿದು. ಇಲ್ಲಿನ ಬಹುತೇಕ ಲೇಖನಗಳು ಕರ್ನಾಟಕತ್ವದ ವಿಕಾಸ, ಕನ್ನಡ ನಾಡು ನುಡಿಗಳ ಅಸ್ತಿತ್ವ ಮತ್ತು ಪ್ರಾಚೀನತೆಗಳನ್ನು ವಿವರಿಸುತ್ತವೆ.



**೧೪೬. ಪರಿಕಲ್ಪನೆ**

ಲೇ: ಎಂ.ಎಂ.ಕಲಬುರ್ಗಿ

ಪುಟ: xvi+೨೯೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಪ್ರಾಚೀನ ಸಾಹಿತ್ಯ

೨. ಆಧುನಿಕ ಸಾಹಿತ್ಯ

*ಈ* ಸಂಶೋಧನಾ ಸಂಕಲನದಲ್ಲಿ ಪ್ರಾಚೀನ ಮತ್ತು ಆಧುನಿಕ ಎನ್ನುವ ವರ್ಗಗಳಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ವಿಶಿಷ್ಟ ಶೋಧಗಳು ಮಂಡಿತವಾಗಿವೆ ಹಾಗೂ ಚರ್ಚಿತವಾಗಿವೆ. *ಈ* ಸ್ಥಾಪಿತ ಶೋಧಗಳನ್ನು ಪಲ್ಲಟ ಮಾಡುವ ಧೈರ್ಯದ ಮಾರ್ಗವನ್ನು ಅನುಸರಿಸುತ್ತ ಅವುಗಳಿಗೆ ಹೊಸ ಪರಿಭಾಷೆಗಳನ್ನು ನಿರ್ಮಿಸಿ ಅವುಗಳ ಅರ್ಥಪ್ರಭೇದವನ್ನು ಇಲ್ಲಿ ಖಚಿತ ಪಡಿಸಲಾಗಿದೆ.



**೧೪೭. ಪ್ರಮಾಣು**

ಲೇ: ಗಿರಡ್ಡಿ ಗೋವಿಂದರಾಜು

ಪುಟ: x+೩೦೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. "ಅವಳ ತೊಡಿಗೆ ಇವಳಿಗಿಟ್ಟು": ಶ್ರೀಯವರ "ಇಂಗ್ಲಿಷ್ ಗೀತಗಳು"

೨. ನವೋದಯ ಕಾವ್ಯ: ಮಂಗಳೂರು ಕೇಂದ್ರ

೩. ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ

೪. ಕುರ್ತಕೋಟಿಯವರ "ನಾವು ಬರಿಗೈಯವರು"

೫. "ಶೂನ್ಯಸಂಪಾದನೆ" ಕೆಲವು ಸಮಸ್ಯೆಗಳು. ಕೆಲವು ಪ್ರಶ್ನೆಗಳು

೬. ಆಧುನಿಕತೆ ಮತ್ತು ಕನ್ನಡ ಕಾದಂಬರಿ

೭. ಕಾರಂತ ಪ್ರಪಂಚಕ್ಕೊಂದು ಪ್ರವೇಶ

೮. ಶಾಂತಾದೇವಿ, ಶಾಂತಿನಾಥ ದೇಸಾಯಿ, ಕಾಯ್ಕಿಣಿ, ಅವರ ಸಣ್ಣಕತೆಗಳು

೯. ಜಡಭರತರ ಕನಸುಗಳು; ಜಡಭರತರ ನಾಟಕಗಳು

೧೦. ವಿಮರ್ಶಾಶಾಸ್ತ್ರ; ಮಾರ್ಗ ಮತ್ತು ದೇಸಿ

ಇಲ್ಲಿನ ಬರಹಗಳಲ್ಲಿ ಸಮಪ್ರಮಾಣದ ಚಿಂತನೆ ಮತ್ತು ನಿಖರ ಅಭಿವ್ಯಕ್ತಿ ಇದೆ. ನಮ್ಮ ವಿಮರ್ಶೆಯ ಸೂಕ್ಷ್ಮ ಅವಲೋಕನ ಶಕ್ತಿ, ಸಂಸ್ಕೃತಿ ವಿಮರ್ಶೆಯ ಆಯಾಮ ಮತ್ತು ಕೃತಿಕಾರ ಕೃತಿ ಸಂಬಂಧಗಳ ಅನ್ವೇಷಣೆಗಳ ಜೊತೆಗೆ ಕನ್ನಡ ಸಂಸ್ಕೃತಿಯ ವಿಶಿಷ್ಟತೆಗಳನ್ನು ಗುರುತಿಸುವ ವಿಶೇಷ ಅಧ್ಯಯನ ಮಾದರಿಯೊಂದು ಇಲ್ಲಿ ದೊರೆಯುತ್ತದೆ.

### ೧೪೮. ಬಣ್ಣದ ಚಿತ್ತ

ಸಂ : ಮೊಗಳ್ಳಿ ಗಣೇಶ್

ಪುಟ : xiv + ೯೨, ವರ್ಷ : ೨೦೦೯, ರೂ. ೮೦.೦೦

ಅಲ್ಲಮ ಕಾವ್ಯ ಸ್ಪರ್ಧೆಯಲ್ಲಿ ಪಾಲ್ಗೊಂಡ ೫೪ ಕವಿತೆಗಳನ್ನು ಇಲ್ಲಿ 'ಬಣ್ಣದ ಚಿತ್ತ'ದಲ್ಲಿ ಹೆಣೆಯಲಾಗಿದೆ. *ಈ* ವಿದ್ಯಾರ್ಥಿ ಕಾವ್ಯಮಾಲೆ ಯುವ ವಿದ್ಯಾರ್ಥಿಗಳ ಅಂತರಂಗದರಿವಿನ ಸ್ಫೋಟವೂ ಹೌದು.



### ೧೪೯. ಬೊಂಬಾಳ

ಲೇ: ಕಮಲಾ ಹಂಪನಾ

ಪುಟ: xii+೩೨೮, ವರ್ಷ: ೨೦೦೯, ರೂ: ೮೦.೦೦

ಪರಿವಿಡಿ

೧. ಸಂಶೋಧನೆ

೨. ವಿಚಾರ

೩. ವಿಮರ್ಶೆ

೪. ಸಂಕೀರ್ಣ

*ಈ* ಕೃತಿಯಲ್ಲಿ ಸಂಶೋಧನೆ ವಿಮರ್ಶೆಗಳ ಜೊತೆಗೆ ಅವರ ವಿಶಿಷ್ಟ ವಿಚಾರಗಳು ಹಾಗೂ ಸಂಕೀರ್ಣ ಬರಹಗಳಿವೆ. ವಿದ್ವತ್ ಮತ್ತು ಜನಪರ ಧೋರಣೆಗಳು ಒಂದುಗೂಡಿರುವ ಬರಹದ ಅನೇಕ ಮಾದರಿಗಳು ಇಲ್ಲಿ ದೊರೆಯುತ್ತವೆ. ಜೈನ ಸಾಹಿತ್ಯ, ಮಹಿಳಾ ಸಾಹಿತ್ಯ, ದಲಿತ ಸಾಹಿತ್ಯ, ಕುವೆಂಪು ಸಾಹಿತ್ಯದ ನೆಲೆಗಳಲ್ಲಿ ಇವರ ಇಲ್ಲಿನ ಬರಹಗಳು ಬಹಳ ಮುಖ್ಯವಾಗಿವೆ.

### ೧೫೦. ರಕ್ತಿ-ರೂಪಣೆ

ಲೇ: ಸಿ.ಎನ್.ರಾಮಚಂದ್ರನ್

ಪುಟ: x+೨೨೦, ವರ್ಷ: ೨೦೦೭, ರೂ: ೮೦.೦೦





ಪರಿವಿಡಿ

೧. ತೌಲನಿಕ ಅಧ್ಯಯನ ಇಂಗ್ಲಿಷ್ ಲೇಖಕರು

೨. ತೌಲನಿಕ ಅಧ್ಯಯನ ಕನ್ನಡ ಲೇಖಕರು

೩. ತೌಲನಿಕ ಅಧ್ಯಯನ ಮೌಖಿಕ ರಾಮಾಯಣ, ಮಹಾಭಾರತ

*ಈ* ಕೃತಿಯಲ್ಲಿ ಇಂಗ್ಲಿಷ್ ಲೇಖಕರು ಎನ್ನುವ ಭಾಗದಲ್ಲಿ ಭಾರತ ಮತ್ತು ಕರ್ನಾಟಕದ ಲೇಖಕರು ಹಾಗೂ ಕೃತಿಗಳ ಬಗ್ಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕನ್ನಡ ಲೇಖಕರು ಎನ್ನುವ ಭಾಗದಲ್ಲಿ ತೀನಂಶ್ರೀ, ಪುತಿನ, ಕಾರ್ನಾಡ್ ಅವರ ಸಾಹಿತ್ಯದ ವಿಶಿಷ್ಟವಾದ ಒಳನೋಟಗಳ ವಿವೇಚನೆ ದೊರೆಯುತ್ತದೆ. ಮೌಖಿಕ ರಾಮಾಯಣ, ಮಹಾಭಾರತ ಕುರಿತ ಅಪೂರ್ವ ಮಾಹಿತಿ ಹಾಗೂ ಅಧ್ಯಯನದ ವಿಶಿಷ್ಟ ನೋಟಗಳೂ ಇಲ್ಲಿ ದೊರೆಯುತ್ತವೆ. ಇಲ್ಲಿನ ಎಲ್ಲ ಬರವಣಿಗೆಗಳು ಕನ್ನಡದಲ್ಲಿ ತುಂಬ ಹೊಸ ಚಿಂತನೆಗಳನ್ನು ಉಳ್ಳವು. ಕನ್ನಡ ವಿಮರ್ಶೆಯ ಶಿಸ್ತು ಮತ್ತು ರಚನೆಯನ್ನು ಬದಲಾಯಿಸಲು ಇವು ಸಶಕ್ತವಾದವು.



### ೧೫೧. ಲಯವೂ ಅದರ ಪರಿವಾರವೂ

ಲೇ: ಜಿ.ಎಸ್.ಸಿದ್ಧಲಿಂಗಯ್ಯ

ಪುಟ: xii+೨೬೦, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಲಯ

೨. ಛಂದಸ್ಸು

೩. ಗುರು ಲಘುಗಳು

೪. ಗಣ; ಯತಿ

೫. ಛಂದಸ್ಸು ಅದರ ನಿಯಮ ಹಾಗೂ ಸ್ವಾತಂತ್ರ್ಯ

೬. ಮಾತ್ರಾಗಣಗಳತ್ತ ಇತರ ಗಮನಗಳು

೭. ಕುಮಾರವ್ಯಾಸನ ಸಾಧನೆ ಭಾಮಿನಿ ಷಟ್ಪದಿಯಲ್ಲಿ

೮. ಷಟ್ಪದಿ ಛಂದಸ್ಸಿನಲ್ಲಿ ಲಕ್ಷ್ಮೀಶ ಕವಿಯ ಸಾಧನೆ

೯. ನವೋದಯ ಕಾಲದ ಛಂದಸ್ಸು

೧೦. ಛಂದಸ್ಸು : ನವ್ಯಕಾವ್ಯದಲ್ಲಿ

*ಈ* ಕೃತಿಯು ಪ್ರಧಾನವಾಗಿ 'ಲಯ'ವನ್ನು ಕುರಿತಿದೆ. ಲಯವು ಛಂದಸ್ಸಿನ ಚರಿತ್ರೆಯಲ್ಲಿ ವಹಿಸಿರುವ ಪಾತ್ರವನ್ನು ಮತ್ತು ಅದರ ಮಹತ್ವವನ್ನು ನೂರಾರು ಉದಾಹರಣೆಗಳ ಮೂಲಕ ನಮ್ಮ ಮುಂದಿರಿಸಲಾಗಿದೆ. ಲಯದ ವಿಶ್ವವಿಸ್ತಾರವನ್ನು ತೋರಿಸುವ ಮೊತ್ತಮೊದಲ ವಿದಗ್ಧ

ಕೃತಿ ಇದಾಗಿದೆ. ಕವಿತೆಯ ತ್ರಾಣ 'ಲಯ'. ಕೃತಿಯು ಒಂದು ಸಾವಧಾನದ ರಚನೆ ಆಗಿರುವುದು ಇದೇ ಕಾರಣಕ್ಕೆ. ಆಚಾರ್ಯ ಬಿ.ಎಂ.ಶ್ರೀಯವರು ತೋರಿಸಿಕೊಟ್ಟ ಸೂತ್ರರೂಪಿ ಮಾತುಗಳನ್ನು ಎದುರಿಗಿಟ್ಟುಕೊಂಡು ಲಯದ ವೈವಿಧ್ಯತೆಯನ್ನು ಅದರ ಗಣ್ಯತೆಯನ್ನೂ ರಮ್ಯತೆಯನ್ನೂ ಇಲ್ಲಿ ನಿರೂಪಿಸಲಾಗಿದೆ.




**೧೫೨. ಸಮುಚ್ಚಯ**

ಲೇ: ಎಂ.ರಾಮಚಂದ್ರ

ಪುಟ: xii+೧೯೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಪಂಜೆ ಮತ್ತು ಪಡುಕೋಣೆ ಪ್ರಬಂಧ ಸಾಹಿತ್ಯ; ಗೋವಿಂದ ಪೈಯವರ ಕಾವ್ಯಲೋಕ
೨. ಡಿ.ವಿ.ಜಿ. ವಾಙ್ಮಯ: ಧರ್ಮ, ತತ್ವ; ಬೇಂದ್ರೆ ಕಾವ್ಯದಲ್ಲಿ ಹಾಸ್ಯ
೩. ವಿ.ಸೀ ಎರಡು ಸ್ಮೃತಿಚಿತ್ರಗಳು
೪. ಕಾರಂತರ 'ಚೋಮನ ದುಡಿ'; ಇನಾಂದಾರರ ಕಾದಂಬರಿಗಳು: ಜೀವನ ದೃಷ್ಟಿ
೫. ಕೊಳಂಬೆಯವರ ಕಾವ್ಯ; 'ಗುಣಕ್ಕೆ ಕೈ ಮುಗಿದ' ಕವಿ ನಿಸಾರ್
೬. ನೆಹರೂಜಿಯವರ ಬರವಣಿಗೆ
೭. ಮಹಾಭಾರತದಲ್ಲಿ ಪರಿಭ್ರಮಣ
೮. ಕಾವ್ಯ ಕನ್ನಿಕೆಯ ಅಲಂಕಾರ
೯. ದೇಸಿ ಸಾಹಿತ್ಯದಲ್ಲಿ ವಿನೋದ
೧೦. ದೀಪಾವಳಿ: ಕನ್ನಡ ಕವಿಗಳ ಕಣ್ಣಲ್ಲಿ

ಪಡುಕೋಣೆ, ಡಿ.ವಿ.ಜಿ, ಬೇಂದ್ರೆ, ವಿಸೀ, ಕಾರಂತ, ಕೊಳಂಬೆ, ಇನಾಂದಾರ್, ನಿಸಾರ್, ಇವರ ಕೃತಿಗಳನ್ನು ಕುರಿತು ಹೊಸ ಸನ್ನಿವೇಶವೊಂದನ್ನು ಇಲ್ಲಿನ ಬರಹಗಳು ನಿರ್ಮಾಣ ಮಾಡಿವೆ. ಕವಿ ಮತ್ತು ಕಾವ್ಯ ಕುರಿತು ಸೂಕ್ಷ್ಮ ಅವಲೋಕನದ ಬರಹಗಳು ಸಮುಚ್ಚಯದ ಸೊಗಸನ್ನು ಹೆಚ್ಚಿಸಿವೆ. ಪದ್ಯಗದ್ಯಗಳ ಸರಸ ದಾಂಪತ್ಯದ ಸೊಗಸಿನ ಪ್ರಬಂಧದ ವಿಶಿಷ್ಟ ಶೈಲಿಯು ಈ ಕೃತಿಯಲ್ಲಿದೆ.

**೧೫೩. ಸಾಹಿತ್ಯಶೀಲನ**

ಲೇ: ಸಿ.ವಿ.ಕೃಷ್ಣಕುಮಾರ್

ಪುಟ: x+೨೯೬, ವರ್ಷ: ೨೦೦೭, ರೂ: ೮೦.೦೦




ಪರಿವಿಡಿ

೧. 'ಕವಿರಾಜಮಾರ್ಗ'ದಲ್ಲಿ ಕವಿಸ್ತರಗಳು
೨. ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ನಾಟಕಗಳ ಪ್ರಭಾವ
೩. ಪಂಪಭಾರತ ಮತ್ತು ವ್ಯಾಸಭಾರತ: ವಸ್ತುವಿನ್ಯಾಸ
೪. ಪಂಪ ಮತ್ತು ಜೀನಸೇನ: ಕೆಲವು ಟಿಪ್ಪಣಿಗಳು; 'ಆದಿಪುರಾಣ' ದಲ್ಲಿ ವೈರಾಗ್ಯ ನಿರೂಪಣೆ
೫. ನಾಗವರ್ಮನ ಕರ್ಣಾಟಕ 'ಕಾದಂಬರಿ'; ದುರ್ಗಸಿಂಹನ ಪಂಚತಂತ್ರ; ನಾಗಚಂದ್ರನ ಕಾವ್ಯಗಳು
೬. ವಚನಸಾಹಿತ್ಯ: ಮೌಲ್ಯವಿವೇಚನೆ; ಬಸವಣ್ಣನವರ ಕಾವ್ಯಶಕ್ತಿ
೭. ಜೇಡರ ದಾಸಿಮಯ್ಯ ವಚನಗಳು; ಅಲ್ಲಮಪ್ರಭುವಿನ ವಚನಗಳು; ಅಕ್ಕಮಹಾದೇವಿ ವಚನಗಳು-ಕಾವ್ಯದೃಷ್ಟಿಯಿಂದ
೮. ಹರಿಹರನ 'ಗಿರಿಜಾಕಲ್ಯಾಣ'; ಹರಿಹರನ 'ಪುಷ್ಪರಗಳೆ'; ನೇಮಿಚಂದ್ರನ ಕೆಲವು ವರ್ಣನೆಗಳು
೯. ಜನಸಾಮಾನ್ಯರ ವೇದ: ದಾಸಸಾಹಿತ್ಯ; ಕನಕದಾಸರ ಅನನ್ಯತೆ
೧೦. 'ಜೀನಶರೀರೂಪಮಾತ್ಮೋಪಮಂ'; 'ಭರತೇಶ' ವೈಭವದ ಬಾಹುಬಲಿ

ಕವಿರಾಜಮಾರ್ಗ, ಪಂಪ, ನಾಗಚಂದ್ರ, ವಚನಕಾರರು, ಹರಿಹರ, ನೇಮಿಚಂದ್ರ, ಕುಮಾರವ್ಯಾಸ, ಕನಕದಾಸ, ರತ್ನಾಕರ ಹೀಗೆ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದ ಮಹತ್ವದ ಕವಿಗಳ ಕೃತಿಗಳನ್ನು ಒಳಹೊಕ್ಕು ನೋಡಿ ತಾವು ಕಂಡುಕೊಂಡ ಹೊಸ ನೋಟಗಳನ್ನು ಕೃತಿಕಾರರು ಇಲ್ಲಿನ ವಿಮರ್ಶಾ ಲೇಖನಗಳ ಮೂಲಕ ಅನಾವರಣ ಮಾಡಿದ್ದಾರೆ. ಪ್ರಾಚೀನ ಕಾವ್ಯಗಳ ಅಧ್ಯಯನ ವಿರಳವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಲ್ಲಿನ ಲೇಖನಗಳು ಮೂಲ ಕಾವ್ಯಗಳನ್ನು ಓದುವ ಆಸಕ್ತಿಯನ್ನು ಉದ್ದೀಪನಗೊಳಿಸುತ್ತವೆ.




**೧೫೪. ಸಾಹಿತ್ಯ ಶೋಧನ**

ಲೇ: ಎಚ್.ಜೆ.ಲಕ್ಕಪ್ಪಗೌಡ

ಪುಟ: x+೩೩೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಕನ್ನಡನಾಡು, ನುಡಿ, ಜನತೆ
೨. ಪ್ರಾಚೀನ ಗ್ರೀಕ್ ಸಾಹಿತ್ಯ
೩. ಕನ್ನಡದಲ್ಲಿ ಚಂಪೂ ಸಂಪ್ರದಾಯ
೪. ಶೂನ್ಯಸಂಪಾದನೆ-ಒಂದು ಮೌಲ್ಯ ಯೋಚನೆ
೫. ಕನ್ನಡ ಜೀವನ ಚರಿತ್ರೆಗಳ ಇತಿಹಾಸ
೬. ಸರ್ವಜ್ಞನ ತ್ರಿಪದಿಗಳಲ್ಲಿ ತ್ರಿಕಾಲ ಪ್ರಜ್ಞೆ

೭. ಮಾಸ್ತಿ-ಬಸವರಾಜ ಕಟ್ಟೀಮನಿಯವರ ಕಥೆಗಳು
೮. ಕನಕದಾಸರ ಕೀರ್ತನೆಗಳು: ಕಾವ್ಯಮೌಲ್ಯ
೯. ನಿಸಾರ್ ಅವರ ಕಾವ್ಯಶೈಲಿಯ ಅನನ್ಯತೆ
೧೦. ಶ್ರೀರಾಮಾಯಣದರ್ಶನದ ದರ್ಶನ ಮತ್ತು ಸಂದೇಶ; ಶ್ರೀರಾಮಾಯಣದರ್ಶನಂ ಮತ್ತು ವಿಶ್ವ ಮಹಾಕಾವ್ಯಗಳು

ಪ್ರಾಚೀನ ಸಾಹಿತ್ಯದಿಂದ ತೊಡಗಿ ಕುವೆಂಪು ಅವರ ಶ್ರೀರಾಮಾಯಣದರ್ಶನಂವರೆಗೆ ಪರಂಪರೆಯ ನೆಲೆಯಲ್ಲಿ ಕನ್ನಡ ಸಾಹಿತ್ಯದ ವಿಭಿನ್ನ ಮಗ್ಗಲುಗಳನ್ನು ಇಲ್ಲಿ ಅವಲೋಕಿಸಲಾಗಿದೆ. *ಈ* ಲೇಖನಗಳ ಸಂಕಲನದಲ್ಲಿ ಸಂಶೋಧನೆ ಮತ್ತು ವಿಮರ್ಶೆಗಳು ಒಂದುಗೂಡಿವೆ. ಕನ್ನಡ ನಾಡು ಮತ್ತುಸಾಹಿತ್ಯದ ಪ್ರಾಚೀನತೆಯ ಕುರಿತ ಅಧ್ಯಯನಗಳು, ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿ, ಕಥೆ, ವಿಮರ್ಶೆ, ವಿಶ್ವದ ಮಹಾಕಾವ್ಯಗಳ ಜತೆ ಶ್ರೀರಾಮಾಯಣದರ್ಶನಂ ಕಾವ್ಯದ ತೌಲನಿಕ ಅಧ್ಯಯನದಂತಹ ಬರಹಗಳು ಇಲ್ಲಿ ಮುಖ್ಯವಾಗಿವೆ.




**೧೫೫. ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ**
ಲೇ: ಸಾರಾ ಅಬೂಬಕ್ಕರ್
ಪುಟ: x+೩೦೨, ವರ್ಷ: ೨೦೦೭, ರೂ: ೮೦
ಪರಿವಿಡಿ
೧. ಸಾಹಿತ್ಯ
೨. ಸಮಾಜ
೩. ಧರ್ಮ
೪. ಸಂಕೀರ್ಣ

ಸಾಹಿತ್ಯ, ಮಹಿಳೆ, ಮುಸ್ಲಿಂ ಸಂವೇದನೆ, ಧರ್ಮ, ಶಿಕ್ಷಣ, ಕಾನೂನು, ಮತಾಂಧತೆ ಹೀಗೆ ಬಹುನೆಲೆಗಳಲ್ಲಿ ಕನ್ನಡ ನಾಡಿನ ಮತ್ತು ಕನ್ನಡ ಸಾಹಿತ್ಯದ ವೈಚಾರಿಕ ವಿಸ್ತರಣೆಯನ್ನು ಮಾಡಿರುವ ಲೇಖನಗಳು ಇಲ್ಲಿ ಒಟ್ಟು ಸೇರಿವೆ. ಅಧ್ಯಯನ, ಅನುಭವ ಮತ್ತು ಆಂದೋಲನದ ಮೂಲಕ ಸಾಹಿತ್ಯ ಮತ್ತು ಸಮಾಜದ ಸಂಕೀರ್ಣ ಸನ್ನಿವೇಶದಲ್ಲಿ ಲೇಖಕಿ ಕನಸಿನ ಕರ್ನಾಟಕ ವೊಂದನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಕನ್ನಡ ನಾಡಿನ ಸಾಂಸ್ಕೃತಿ ರೂಪಕದ ಅನನ್ಯ ಮಾದರಿಯೂ ಹೌದು.

**೧೫೬. ಸಾಹಿತ್ಯ ಸಮಾಹಿತ**
ಲೇ: ಚನ್ನವೀರ ಕಣವಿ
ಪುಟ: xiv+೩೬೪, ವರ್ಷ: ೨೦೦೭, ರೂ: ೮೦.೦೦
ಪರಿವಿಡಿ
೧. ಸಹಚರ್ಯ
೨. ಸಮಾಲೋಚನೆ
೩. ಸಂಬೋಧನೆ

*ಈ* ಸಂಕಲನದಲ್ಲಿ ಸಹಚರ್ಯ, ಸಮಾಲೋಚನೆ ಮತ್ತು ಸಂಬೋಧನೆ ಎಂಬ ಮೂರು ಭಾಗಗಳಾಗಿ ಕಣವಿಯವರ ಲೇಖನಗಳು ಮತ್ತು ಉಪನ್ಯಾಸಗಳು ಹರಡಿಕೊಂಡಿವೆ. ಕನ್ನಡ ಹಿರಿಯ ಕಿರಿಯ ಲೇಖಕರೊಂದಿಗೆ ಪ್ರೀತಿಯ ಸಂಬಂಧವನ್ನಿಟ್ಟುಕೊಂಡ ಕೃತಿಕಾರರು ಆ ನೆನಪು ಗಳನ್ನು ತಮ್ಮ ನುಡಿಚಿತ್ರಗಳಲ್ಲಿ ಬಹು ಬಗೆಗಳಲ್ಲಿ ವರ್ಣಿಸಿದ್ದಾರೆ. ಸಮಾಲೋಚನೆಯ ಭಾಗದಲ್ಲಿ ಆಧುನಿಕ ಕಾವ್ಯದ ಮೇರು ಕವಿಗಳಾದ ಕುವೆಂಪು, ಬೇಂದ್ರೆ ಮುಂತಾದವರ ಕಾವ್ಯಗಳ ಒಳಹೊಕ್ಕು ಅನುಭವಿಸಿದ ಅಪೂರ್ವ ನೋಟಗಳಿವೆ. ಸಂಬೋಧನದಲ್ಲಿ ಕವಿ ವಿಮರ್ಶಕ ಕಣವಿಯವರ ಭಾಷಣಗಳು ಚಿಂತನೆಗಳು ಕವನಗಳು ಹರಳುಗಟ್ಟಿವೆ.




**೧೫೭. ಸ್ಥಿತಿ ಪ್ರಜ್ಞೆ**
ಲೇ: ಜಿ.ಎಚ್. ನಾಯಕ
ಪುಟ: xvi+೩೯೬, ವರ್ಷ: ೨೦೦೭, ರೂ: ೮೦.೦೦
ಪರಿವಿಡಿ
೧. ಕನ್ನಡದ ಹಳೆಯ ತಲೆಮಾರು-ಹೊಸ ತಲೆಮಾರಿನ ಲೇಖಕರ ಸಾಹಿತ್ಯ ವಿಮರ್ಶೆ
೨. ನಾಡಿನ ಸಾಂಸ್ಕೃತಿಕ ರಾಜಕೀಯ ಚಿಂತನೆ
೩. ಸಾಹಿತ್ಯ ಸಂಸ್ಕೃತಿಗಳ ಸಮಾಗಮ ಸನ್ನಿವೇಶಗಳ ಚರ್ಚೆ.

*ಈ* ಗ್ರಂಥದಲ್ಲಿ ಕನ್ನಡದ ಹಿರಿಯ ಹಾಗೂ ತರುಣ ಲೇಖಕರ ಬರಹಗಳ ಅಧ್ಯಯನದ ಮೊದಲನೆ ಭಾಗ, ಸಾಂಸ್ಕೃತಿಕ ರಾಜಕೀಯ ಚಿಂತನೆಯ ಎರಡನೆಯ ಭಾಗ ಮತ್ತು ಸಾಹಿತ್ಯ ಸಂಸ್ಕೃತಿಗಳ ಸಮಾಗಮ ಸನ್ನಿವೇಶ ಚರ್ಚೆಯ ಮೂರನೆಯ ಭಾಗ ಹೀಗೆ ಸ್ಥಿತಿಗಳನ್ನು ಮತ್ತು ಪ್ರಜ್ಞೆಗಳನ್ನು ಒಂದೆಡೆ ಸೇರಿಸಿ ಸಾಹಿತ್ಯ ವಿಮರ್ಶೆಯ ಆಕೃತಿಯನ್ನು ಕಟ್ಟಿಕೊಡಲಾಗಿದೆ.

**೧೫೮. ಹಣತೆಗೆ ಹನಿ ಎಣ್ಣೆ**
ಲೇ: ತಾಳ್ತಜೆ ವಸಂತಕುಮಾರ
ಪುಟ: x+೨೯೦, ವರ್ಷ: ೨೦೦೭, ರೂ: ೮೦.೦೦
ಪರಿವಿಡಿ
೧. ವಿಮರ್ಶೆ




೨. ಚಿಂತನೆ

೩. ಸಂಕೀರ್ಣ

*ಈ* ಕೃತಿಯಲ್ಲಿ ವಿಮರ್ಶೆ, ಚಿಂತನೆ, ಸಂಕೀರ್ಣ ಎನ್ನುವ ೩ ಭಾಗಗಳಿವೆ. ವಿಮರ್ಶೆಯ ಭಾಗದಲ್ಲಿ ಕನ್ನಡ ಹಿರಿಯ ಲೇಖಕರ ಕೃತಿಗಳನ್ನು ವಿಶಿಷ್ಟ ಒಳನೋಟಗಳಿಂದ ಅವಲೋಕಿಸಲಾಗಿದೆ. ಚಿಂತನೆಯ ಭಾಗದಲ್ಲಿ, ಕನ್ನಡ ಚಿಂತನಾ ಸಾಹಿತ್ಯ ಕುರಿತ ವಿಶೇಷವಾದ ಚರ್ಚೆ ಇದೆ. ಸಂಕೀರ್ಣಭಾಗದಲ್ಲಿ ಸಂಶೋಧನೆ, ಸಂಸ್ಕೃತಿ ಮತ್ತು ಬೌದ್ಧ ಧರ್ಮದ ಕುರಿತ ವಿಶೇಷ ಅಧ್ಯಯನಗಳಿವೆ.

**೧೫೫. ಹೊಸತು ಹೊಸತು**

ಲೇ: ಎಂ.ಚಿದಾನಂದಮೂರ್ತಿ

ಪುಟ: xiv+೪೮೪, ವರ್ಷ: ೧೯೯೩, ರೂ: ೮೦.೦೦

ಪರಿವಿಡಿ

೧. ಕವಿರಾಜಮಾರ್ಗಕ್ಕೆ ಹಿಂದಿನ ಕನ್ನಡ ಸಾಹಿತ್ಯ

೨. ಮಾರ್ಗಕವಿ ಪರಂಪರೆ

೩. ಹಳೆಗನ್ನಡ ಕವಿ-ಕಾವ್ಯಗಳ ವಿಮರ್ಶೆ

೪. ಗ್ರಾಮದೇವತೆಗಳು-ಗ್ರಾಮದೇವತೆ

೫. ಗ್ರಂಥಸಂಪಾದನೆ; ಸಂಶೋಧನೆ ಮತ್ತು ವಿಮರ್ಶೆ

೬. ಕರ್ನಾಟಕ ಇತಿಹಾಸ ಸಂಬಂಧಿ ವಿಚಾರಗಳು

೭. ಹಂಪಿ ಇತಿಹಾಸಸಂಬಂಧಿ ಲೇಖನಗಳು

೮. ಇತರ ವೈಚಾರಿಕ ಲೇಖನಗಳು

ನಾಡಿನ ಖ್ಯಾತ ಸಂಶೋಧಕರಲ್ಲಿ ಒಬ್ಬರಾದ ಡಾ. ಎಂ.ಚಿದಾನಂದಮೂರ್ತಿ ಅವರ ಸಂಶೋಧನಾ ಲೇಖನಗಳ ಸಂಕಲನವಿದು. ಇಲ್ಲಿರುವ ೫೦ ಲೇಖನಗಳು ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸಲು ಅವಕಾಶ ಮಾಡಿಕೊಡುತ್ತವೆ. ಸಂಶೋಧಕರು ವಿವಿಧ ಜ್ಞಾನಶಿಸ್ತುಗಳ ಆಕರಗಳನ್ನು ವಿವರಣೆಗಳನ್ನು ವಿಷಯ ವಿಶ್ಲೇಷಣೆಗಾಗಿ ಬಳಸಿಕೊಂಡಿದ್ದಾರೆ. ಕನ್ನಡ ಅಧ್ಯಯನ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ಪುನಾರಚನೆಯ ಮಾದರಿಗೆ ಇಲ್ಲಿನ ಸಂಪ್ರಬಂಧಗಳು ಉತ್ತಮ ನಿದರ್ಶನವಾಗಿವೆ.





## ೭

# ಕನ್ನಡ ಸಾಹಿತ್ಯ ವಿಮರ್ಶೆ

**೧೬೦. ಅಕ್ಕಮಹಾದೇವಿ ವಚನಗಳು : ಸಾಂಸ್ಕೃತಿಕ ಮುಖಾಮುಖಿ**

ಸಂ : ರಹಮತ್ ತರೀಕೆರೆ

ಪುಟ: xvi+೨೧೨, ವರ್ಷ: ೨೦೦೫, ರೂ: ೮೦.೦೦

ಪರಿವಿಡಿ

೧. ಅಕ್ಕನಿಗೇ ಯಾಕೆ *ಈ* ಒರೆಗಲ್ಲು?; ಮುಳುಗಿ ಮೀರುವ ಪರಿ

೨. ಅಕ್ಕನ ಸಂವೇದನೆ; ಸ್ತ್ರೀವಾದಿ ಸಂವೇದನೆ

೩. ಹರನ ಕೂಡೆ ಹಾದರ

೪. ಅಕ್ಕ: ದ್ವಂದ್ವಗಳ ಸಮನ್ವಯಕ್ಕೊಂದು ಹೆಸರು; ಅಕ್ಕನ ಅಕ್ರಮ ಸಂಗಾತದ ಸೌಂದರ್ಯ

೫. ಅಕ್ಕ ಹಾಗೂ ಸಮಕಾಲೀನ ಮಹಿಳಾ ಕಾವ್ಯ ಸಂದರ್ಭ

೬. ಅಕ್ಕನ ವಚನಗಳ ಓದು : ಮರುಪರಿಶೀಲನೆ; ಅಕ್ಕಮಹಾ ದೇವಿಯ ಅಧ್ಯಯನಗಳ ಸಮೀಕ್ಷೆ

೭. ಅಕ್ಕ ಹಾಗೂ ಮಹಿಳೆಯರ ಅಸಾಂಪ್ರದಾಯಿಕ ಸಾಹಸಗಳು

೮. ಕದಳಿಯ ಜ್ಯೋತಿ; ಅಮರತೆಯ ಇತಿಹಾಸದಲ್ಲಿ ಅಕ್ಕಮಹಾದೇವಿ; ಸಾವಿಲ್ಲದ ಸಂಗಾತಿಯನ್ನರಸುವ ಅಕ್ಕ

೯. ಅಕ್ಕ ಮತ್ತು ಇತರ ಶರಣೆಯರು; ಅಕ್ಕಮಹಾದೇವಿ ವಚನಗಳ ಪ್ರತಿಮಾ ವಿಧಾನ; 'ಅಕ್ಕಗಳ ಸಂಪಾದನೆ'ಗಳು : ಒಂದು ಪರಿಶೀಲನೆ

೧೦. ಅಕ್ಕ ಹಟಮಾರಿ; ಅಕ್ಕನ ವಚನಗಳ ಕುರಿತು ಇಂಗ್ಲಿಷಿನ ಅಧ್ಯಯನಗಳು; ಭಕ್ತಿಯಿಂದ ಬಂಡಾಯದವರೆಗೆ

*ಈ* ಕೃತಿ ಅಕ್ಕಮಹಾದೇವಿಯನ್ನು ಬಹುನೆಲೆಯಿಂದ ಪರಿಭಾವಿಸಿದ ಕನ್ನಡದ ಒಂದು ಅಪೂರ್ವ ಸಂಕಥನ. ಅಕ್ಕನ ಬದುಕಿನ ಐತಿಹ್ಯಗಳು ಎಷ್ಟು ರಮ್ಯ ಮತ್ತು ಘೋರವೋ, ಅಕ್ಕನ ವಚನಗಳು ಎಷ್ಟು ಭಾವನಾತ್ಮಕ ಮತ್ತು ತೀಕ್ಷ್ಣವೋ ಅಷ್ಟೇ ವೈರುಧ್ಯದ ಮತ್ತು ವೈವಿಧ್ಯದ ನೆಲೆಗಳಿಂದ ಅಕ್ಕನನ್ನು ಕಾಣುವ ಪ್ರಕ್ರಿಯೆಯನ್ನು *ಈ* ಕೃತಿಯಲ್ಲಿ ಕಾಣಬಹುದು.




### ೧೬೧. ಅಂಬಿಕಾತನಯನ ನಂಬಿಕೆಯ ಹಾಡು

ಸಂ: ಕೆ.ಸಿ.ಶಿವಾರೆಡ್ಡಿ

ಪುಟ: xxiv+೧೦೪, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಅಂಬಿಕಾತನಯದತ್ತರ ಕವನ ಸಂಕಲನಗಳ ಅಕಾರಾದಿ

೨. ಕವನ ಸಂಕಲನಗಳ ಪ್ರಥಮ ಆವೃತ್ತಿ ಮುಖಪುಟಗಳು

೩. ಮೊದಲ ಚರಣಗಳ ಅಕಾರಾದಿ

೪. ಕವನ ಶೀರ್ಷಿಕೆಗಳ ಅಕಾರಾದಿ

ಇದೊಂದು ಆಕರ ಸೂಚಿ. ಬೇಂದ್ರೆಯವರ ೩೦ ಕವನಗಳಲ್ಲಿನ ಕವನದ ಮೊದಲ ಚರಣ, ಕವನ ಶೀರ್ಷಿಕೆ, ಕವನ ಸಂಖ್ಯೆ ಹಾಗೂ ಸಂಕಲನಗಳ ಮಾದರಿಗಳನ್ನು ಅಕಾರಾದಿಯಲ್ಲಿ ಕೊಡುವ ಕೈಪಿಡಿ. ಇದು ಬೇಂದ್ರೆಯವರ ಒಟ್ಟು ಕವನಸಂಕಲನಗಳು, ಪ್ರತೀ ಸಂಕಲನದಲ್ಲಿನ ಕವನಗಳ ಸಂಖ್ಯೆ, ಬದುಕಿನ ಮಹತ್ತ್ವದ ಘಟನೆಗಳು ಹಾಗೂ ಒಟ್ಟು ಅಕರ ಕೃತಿಗಳ ವಿವರಗಳನ್ನು ನೋಡಬಯಸುವವರಿಗೆ *ಈ* ಕೈಪಿಡಿ ಬಲು ಸಹಕಾರಿ.

### ೧೬೨. ಅಲಕ್ಷಿತ ವಚನಕಾರರ ಲೋಕದೃಷ್ಟಿ

ಲೇ: ಬಿ.ಎಂ.ಪುಟ್ಟಯ್ಯ

ಪುಟ: ii+೩೨, ವರ್ಷ: ೧೯೯೯, ರೂ: ೫.೦೦

ಕನ್ನಡ ವಚನಸಾಹಿತ್ಯದ ಚರಿತ್ರೆಯನ್ನು ಗಮನಿಸಿದರೆ ಕೆಲವೇ ವಚನಕಾರರನ್ನು ಸಾಹಿತ್ಯದ ಮುಖ್ಯವಾಹಿನಿಗೆ ತಂದು ಅವರ ಬಗ್ಗೆ ಚರ್ಚಿಸುವುದು ಹಾಗು ಅವರ ವಚನಗಳನ್ನೇ ವಿಮರ್ಶಿಸುತ್ತ ಚಿಂತನೆ ನಡೆಸುತ್ತಿದ್ದುದು ಕಂಡುಬರುತ್ತದೆ. ಹೀಗೆ ಅಲಕ್ಷಿತರಾದ ವಚನಕಾರರ ಬಗ್ಗೆ ಹಾಗು ಆ ಅಲಕ್ಷಿತ ವಚನಗಾರರ ವಚನಗಳಿಂದಲೇ ಅವರ ಚಿಂತನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ವಿಶ್ಲೇಷಣೆಗೆ ಒಳಗು ಮಾಡಲಾಗಿದೆ.

### ೧೬೩. ಆತ್ಮಕತೆಗಳಲ್ಲಿ ಕರ್ನಾಟಕದ ಕತೆ

ಲೇ: ಬಿ.ಎಂ.ಪುಟ್ಟಯ್ಯ

ಪುಟ: x+೯೦, ವರ್ಷ: ೧೯೯೯, ರೂ: ೪೦.೦೦

ಪರಿವಿಡಿ

೧. ಆತ್ಮಕಥೆಗಳ ಅಧ್ಯಯನದ ಸುತ್ತಮುತ್ತ



೨. ಆತ್ಮಕಥೆ ಬರವಣಿಗೆಯ ಹಿಂದಿರುವ ಆಶಯ

೩. ಬಡತನದ ನಿರೂಪಣೆ : ಆತ್ಮಕಥೆಗಳ ಮೀಟುಗೋಲು

೪. ಜಾತಿಯ ಸಮಸ್ಯೆ : ಒಳ ವಿನ್ಯಾಸಗಳ ಆಸಹನೆ

೫. ಭಾಷೆ, ಭಾಷಾಮಾಧ್ಯಮ, ಶಿಕ್ಷಣ ಸವಾಲುಗಳು ಸಾಧ್ಯತೆಗಳು

೬. ಸ್ವಾತಂತ್ರ್ಯ ಹೋರಾಟ : ರೂಪಗಳು, ಸ್ವರೂಪಗಳು

ಇದು ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕತೆಗಳ ಅಧ್ಯಯನ ಕೃತಿ. ಆತ್ಮಕಥನಕಾರರು ತಮ್ಮ ಅನುಭವ ಜಗತ್ತಿನಿಂದ ಬೇರ್ಪಟ್ಟು ಬರೆಯುವಂತಹ ಚಾರಿತ್ರಿಕ ಒತ್ತಡಗಳನ್ನು ಆಮೂಲಾಗ್ರವಾಗಿ ಇಲ್ಲಿ ಚರ್ಚಿಸಲಾಗಿದೆ. ಆತ್ಮಕತೆಗಳು ನಿರೂಪಕರ ಕತೆಯಾಗಿರುವುದರ ಜತೆಗೆ ನಾಡಿನ ಕತೆಯೂ ಆಗಿರುವ ರೀತಿ ಹಾಗು ಆ ಮೂಲಕ ಇಡೀ ಸಮಾಜದ ಸ್ಥಿತಿಗತಿಗಳು ಅನಾಯಾಸವಾಗಿ ಅನಾವರಣವಾಗುವ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.




### ೧೬೪. ಆದಿಪುರಾಣ : ಸಾಂಸ್ಕೃತಿಕ ಮುಖಾಮುಖಿ

ಲೇ: ಬಿ.ಎಂ. ಪುಟ್ಟಯ್ಯ

ಪುಟ: xii+೧೫೮, ವರ್ಷ: ೨೦೦೬, ರೂ: ೮೦.೦೦

ಪರಿವಿಡಿ

೧. ಸಾಂಸ್ಕೃತಿಕ ಮುಖಾಮುಖಿ : ಸೃಜನಶೀಲ ಸ್ವಾತಂತ್ರ್ಯ ಹೋರಾಟ

೨. ಸಿದ್ಧ ಮಾದರಿಯ ಆಲೋಚನೆಗಳಿಗೆ ಆದಿಪುರಾಣದ ಭಿನ್ನಮತ

೩. ಆದಿಪುರಾಣ : ಓದಿನ ಆಯಾಮಗಳು

೪. ಆದಿಪುರಾಣ : ಅನೇಕತೆಯ ಸಾಂಸ್ಕೃತಿಕ ಘಟಕ

೫. ಆದಿಪುರಾಣದಲ್ಲಿ ಸ್ತ್ರೀ ಪ್ರಪಂಚದ ಬಳಕೆ ಒಂದು ಟಿಪ್ಪಣಿ

೬. ಅಂತರ್ಜಾಲ ಅನ್ವೇಷಣೆಯಲ್ಲಿ ಪಂಪ

೭. ಆದಿಪುರಾಣ : ಅನುಭವದ ವಿಭಿನ್ನ ನೆಲೆಗಳನ್ನು ತೆರೆಯುತ್ತ....

೮. ಆದಿಪುರಾಣ : ಭಿನ್ನವಾದಗಳೊಡನೆ ಮುಖಾಮುಖಿ

೯. ಆದಿಪುರಾಣ : ಒಂದು ಓದು ಮತ್ತು ಅಧ್ಯಯನ

೧೦. ಆದಿಪುರಾಣಗಳ ಅಧ್ಯಯನಗಳ ಸಮೀಕ್ಷೆ

ಆದಿಪುರಾಣವನ್ನು ೧೦ನೇ ಶತಮಾನದಲ್ಲಿ ಹಾಗೂ ನಮ್ಮ ಕಾಲದಲ್ಲೂ ಏಕಕಾಲಕ್ಕೆ ಇಟ್ಟು ಗ್ರಹಿಸುವ ವಿಧಾನ, ಸಾಹಿತ್ಯ ಅಧ್ಯಯನದ ದೃಷ್ಟಿಯಿಂದ ತುಂಬ ಉಪಯುಕ್ತವಾದುದು. ಪಂಪನನ್ನು ಜೈನ ಕವಿ ಎಂತಲೂ, ಅವನ ಎರಡು ಕೃತಿಗಳಲ್ಲಿ ಒಂದು ಲೌಕಿಕ ಮತ್ತೊಂದು ಧಾರ್ಮಿಕ ಎಂತಲೂ ಸಾಂಪ್ರದಾಯಿಕವಾಗಿ ತೀರ್ಮಾನಿಸಲಾಗಿದೆ. *ಈ* ಹಿನ್ನೆಲೆಯಲ್ಲಿ

ಪಂಪನನ್ನು ಮತ್ತು ಆತನ ಕೃತಿಗಳನ್ನು ಇಂದು ಅಧ್ಯಯನ ಮಾಡಬೇಕಾದ ಸವಾಲುಗಳು ಹಾಗೂ ದಾರಿಗಳು ಯಾವುವು ಎಂಬುದನ್ನು ಇಲ್ಲಿಯ ಪ್ರಬಂಧಗಳು ಹೇಳುತ್ತವೆ.

**೧೬೫. ಆಧುನಿಕ ಕನ್ನಡ ಸಣ್ಣ ಕಥೆಗಳು : ಒಂದು ಸ್ತ್ರೀವಾದಿ ಅಧ್ಯಯನ**

ಲೇ: ಗಿರಿಜಾಶಾಸ್ತ್ರಿ

ಪುಟ: ii+೩೮, ವರ್ಷ: ೨೦೦೦, ರೂ: ೧೦.೦೦

ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ವಸ್ತುವಿನ ವೈವಿಧ್ಯತೆಯಲ್ಲಿ ಆದ ವಿಸ್ತಾರ, ವೇಶ್ಯೆಯರು, ವಿಧವೆಯರು, ಭಿಕ್ಷುಕಿಯರು, ಹೆಣ್ಣು ಜೀತದಾಳು, ಸ್ತ್ರೀ ಕಾರ್ಮಿಕರು, ವೈವಾಹಿಕ ಚೌಕಟ್ಟಿ ನಾಚೆಗೆ ಬರಲೆತ್ನಿಸುವ ಅತೃಪ್ತ ಗೃಹಿಣಿಯರ ಸಂವೇದನೆಯ ವಿವಿಧ ಮಗ್ಗಲುಗಳನ್ನು ಪ್ರತಿಬಿಂಬಿಸುವ ಪ್ರಯತ್ನವನ್ನು ಇಲ್ಲಿ ವಿವೇಚಿಸಲಾಗಿದೆ. ಇಲ್ಲಿ ನವೋದಯದಿಂದ ಹಿಡಿದು ನವ್ಯೋತ್ತರದವರೆಗಿನ ಕಥೆಗಳ ಸಮೀಕ್ಷೆ ನಡೆಸಿ, ಸ್ತ್ರೀ ಪರಿಕಲ್ಪನೆಯಲ್ಲಿ ಆದ ವಿಕಾಸವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ ಪ್ರಯತ್ನವಿದೆ.



**೧೬೬. ಆ ಪೂರ್ವ *ಈ* ಪಶ್ಚಿಮ**

ಲೇ: ಸುಚೇತನ ಸ್ವರೂಪ

ಪುಟ: XII+೪೫೨, ವರ್ಷ: ೨೦೦೩, ರೂ: ೨೦೦.೦೦

ಪರಿವಿಡಿ

೧. ಸಾಹಿತ್ಯ ಸಂಬಂಧಿ ಲೇಖನಗಳು

೨. ಸಂಸ್ಕೃತಿ ಸಂಬಂಧಿ ಲೇಖನಗಳು

೩. ಚಿಂತನಾಲೋಕ ಸಂಬಂಧಿ ಲೇಖನಗಳು

೪. ದಾರ್ಶನಿಕತೆ, ವಿಜ್ಞಾನ, ಚರಿತ್ರೆ, ಸಂಸ್ಕೃತಿ ಶೋಧನೆಗೆ ಸಂಬಂಧಿಸಿದ್ದು.

ಸಾಹಿತ್ಯ, ಸಂಸ್ಕೃತಿ ಮತ್ತು ಚಿಂತನಲೋಕಕ್ಕೆ ಸಂಬಂಧಿಸಿದ ಲೇಖನಗಳು *ಈ* ಕೃತಿಯಲ್ಲಿವೆ. ನಮ್ಮ ಸೃಜನಶೀಲತೆಯ ಬಗ್ಗೆ, ದರ್ಶನದ ಬಗ್ಗೆ, ಜೀವನ ಪ್ರಜ್ಞೆಯ ಬಗ್ಗೆ, ಲೋಕ ಶೋಧನೆಯ ಬಗ್ಗೆ ಸ್ಥಾಪಿತವಾಗಿರುವ ಇತಿಹಾಸದ ಬುನಾದಿಗಳನ್ನು ಕೀಳುತ್ತ ಹೊಸ ಸತ್ಯಗಳನ್ನು ಕೆದಕುತ್ತ, ಮಂಡಿಸುತ್ತ *ಈ* ಕೃತಿ ಸಾಗುತ್ತದೆ.

**೧೬೭. ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ ತೌಲನಿಕ ಅಧ್ಯಯನ**

ಲೇ: ನಟರಾಜ್ ಹುಳಿಯಾರ್

ಪುಟ: XVI+೩೧೦, ವರ್ಷ: ೨೦೦೪, ರೂ: ೧೫೦.೦೦



ಪರಿವಿಡಿ

೧. ಆಫ್ರಿಕನ್ ಹಾಗೂ ಭಾರತೀಯ ಸಮಾಜಗಳ ವಸಾಹತು ಸನ್ನಿವೇಶ ವಸಾಹತೀಕರಣ ಹಾಗೂ ನಿರ್ವಸಾಹತೀಕರಣ ಸಿದ್ಧಾಂತಗಳ ಪರಿಶೀಲನೆ

೨. ಆಫ್ರಿಕನ್ ಹಾಗೂ ಕನ್ನಡ ಕಾದಂಬರಿಯ ರೂಪೀಕರಣ

೩. ಆಫ್ರಿಕನ್ ಹಾಗೂ ಕನ್ನಡ ಕಾದಂಬರಿಯ ದೇಶೀ ಪ್ರೇರಣೆಗಳು

೪. ಯುರೋಪ್, ಪಶ್ಚಿಮ ಮತ್ತು ಆಫ್ರಿಕಾ : ಸಂಕಥನಗಳ ಮುಖಾಮುಖಿ; ಅಥೆಂಟಿಕ್ ಆಫ್ರಿಕಾದ ಹುಡುಕಾಟ

೫. 'ನಿಜ' ಭಾರತದ ಕಲ್ಪನೆ; ಅಖಿಲ ಭಾರತೀಯ ಮಾದರಿಗಳು; ಕನ್ನಡ ಕಾದಂಬರಿಯ ಮಾದರಿಗಳು

೬. ಆಧುನಿಕತೆ ಮತ್ತು ಪರಂಪರೆಗಳ ಮುಖಾಮುಖಿ

೭. ಪರಂಪರೆ ಮತ್ತು ಹಿಂಸೆದ ಮನದ ಮಾದರಿಗಳು

೮. ಆಧುನಿಕ ವ್ಯಕ್ತಿ ವಿಶಿಷ್ಟತಾವಾದಿ ಮಾದರಿಗಳು : ಬಂಡುಕೋರ, ಪರದೇಶಿ, ಪರಕೀಯ ಹಾಗೂ ಸಮಾಜವಾದಿ

೯. ವಸಾಹತ್ತೋತ್ತರ ಆಫ್ರಿಕಾ ಮತ್ತು ಭಾರತ : ಅವನತಿ; ಭ್ರಮಾನಿರಸನ, ಕನಸು ಮತ್ತು ನವ ವ್ಯಕ್ತಿತ್ವ ನಿರ್ಮಾಣ

೧೦. ಪೌರಾಣಿಕ ಪ್ರತೀಕಗಳು, ಪಾರಂಪರಿಕ ರೂಪಗಳು ಹಾಗೂ ದೇಶಿ ರಂಗಭೂಮಿ

ಆಧುನಿಕತೆ ಮತ್ತು ಪರಂಪರೆಗಳೆರಡು ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಪ್ರತಿಫಲಿತ ವಾಗಿರುವ ಬಗೆಯನ್ನು ವಿವರಣಾತ್ಮಕವಾಗಿ ವಿಮರ್ಶಾತ್ಮಕವಾಗಿ ಸೈದ್ಧಾಂತಿಕವಾಗಿ *ಈ* ಕೃತಿಯಲ್ಲಿ ಪ್ರತಿಪಾದಿಸಲಾಗಿದೆ.

**೧೬೮. ಆದಿಲಶಾಹಿ ಆಸ್ಥಾನ ಸಾಹಿತ್ಯ**

ಲೇ: ಕೃಷ್ಣ ಕೊಲ್ಹಾರ ಕುಲಕರ್ಣಿ

ಪುಟ: vi+೪೮, ವರ್ಷ: ೧೯೯೮, ರೂ: ೪೦.೦೦

ಪರಿವಿಡಿ

೧. ಪ್ರಚಲಿತ ಭಾಷೆಗಳು

೨. ಕನ್ನಡೇತರ ಕೃತಿಗಳು

೩. ಕನ್ನಡ ಸಾಹಿತ್ಯ

ಆದಿಲಶಾಹಿಗಳ ಸಾಮ್ರಾಜ್ಯದಲ್ಲಿ, ಆದಿಲಶಾಹಿ ಬಾದಶಹರ ಪ್ರೋತ್ಸಾಹದಿಂದ ಹುಟ್ಟಿಕೊಂಡ ಸಾಹಿತ್ಯ ಕೃತಿಗಳು, ಚರಿತ್ರಗ್ರಂಥಗಳ ಬಗ್ಗೆ *ಈ* ಕೃತಿಯಲ್ಲಿ ವಿವರಗಳಿವೆ.




**೧೭೯. ಇಂಗ್ಲಿಷ್ ಗೀತಗಳು : ಸಾಂಸ್ಕೃತಿಕ ಮುಖಾಮುಖಿ**

ಸಂ: ರಹಮತ್ ತರೀಕೆರೆ

ಪುಟ: xii+೨೪೪, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಸಾಂಸ್ಕೃತಿಕ ಪಠ್ಯವಾಗಿ ಇಂಗ್ಲಿಷ್ ಗೀತಗಳು
೨. ವಸಾಹತುಶಾಹಿ ಆಧುನಿಕತೆ ಹಾಗೂ ಇಂಗ್ಲಿಷ್ ಗೀತಗಳು
೩. ಬಿ.ಎಂ.ಶ್ರೀ ಮತ್ತು ವಸಾಹತುಶಾಹಿ : ಕೆಲವು ಟಿಪ್ಪಣಿಗಳು
೪. ಇಂಗ್ಲಿಷ್ ಗೀತಗಳು ರೂಪುಗೊಂಡ ಚಾರಿತ್ರಿಕ ಸಂದರ್ಭ
೫. ಇಂಗ್ಲಿಷ್ ಗೀತಗಳು ಶ್ರೀಯವರ ಭಾಷಣದ ರಾಜಕಾರಣ
೬. ಇಂಗ್ಲಿಷ್ ಗೀತಗಳು ಕನ್ನಡ ಕಾವ್ಯ ಪರಂಪರೆ
೭. ಮಹಿಳಾ ದೃಷ್ಟಿಕೋನದಲ್ಲಿ ಇಂಗ್ಲಿಷ್ ಗೀತಗಳು
೮. ಇಂಗ್ಲಿಷ್ ಗೀತಗಳು ಹಾಗೂ ಶ್ರೀಯವರ ಸ್ವತಂತ್ರ ಕವನಗಳು
೯. ಇಂಗ್ಲಿಷ್ ಗೀತಗಳು : ಅಧ್ಯಯನಗಳ ವಿಮರ್ಶೆ

ಹೊಸಗನ್ನಡ ಸಾಹಿತ್ಯದಲ್ಲಿ ಭಾಷೆ, ಛಂದಸ್ಸು, ಚಿಂತನಕ್ರಮ ಮತ್ತು ಸಾಂಸ್ಕೃತಿಕ ತಲ್ಲಣಗಳ ಮುಖಾಮುಖಿಗಳ ದೃಷ್ಟಿಯಿಂದ 'ಇಂಗ್ಲಿಷ್ ಗೀತಗಳು' ಕೃತಿಯು ಹೊಸ ದಾರಿಯ ಅನ್ವೇಷಣೆಗೆ ನಾಂದಿಯಾಯಿತು. *ಈ* ವಿಶಿಷ್ಟ ವಿದ್ಯಮಾನವನ್ನು ಇಲ್ಲಿನ ಎಲ್ಲ ಚಿಂತಕರು ಬಹು ಬಗೆಗಳಲ್ಲಿ ಚರ್ಚಿಸಿ ಭಿನ್ನ ನೆಲೆಗಳಿಂದ 'ಇಂಗ್ಲಿಷ್ ಗೀತ'ಗಳನ್ನು ಪರಿಭಾವಿಸುತ್ತಲೇ, ಅದು ಕನ್ನಡ ಭಾಷೆ, ಸಾಹಿತ್ಯ ಹಾಗು ಬದುಕಿನ ಶರೀರದೊಳಗೆ ಹೇಗೆ ಸಂಚಲನ ಉಂಟುಮಾಡಿತ್ತು ಎನ್ನುವುದನ್ನು ಇಲ್ಲಿ ವಿವರಿಸಿದ್ದಾರೆ. ಹೊಸಗನ್ನಡ ಚಿಂತನೆಯ ಹಿಂದಿನ ಒತ್ತಡ ಮತ್ತು ಅಪೇಕ್ಷೆಗಳನ್ನು ಹಾಗೂ ಕನ್ನಡ ಓದುಗ ವರ್ಗ ಕಾಲಕಾಲಕ್ಕೆ ಅದನ್ನು ಸ್ವೀಕರಿಸಿದ ಬಗೆಗಳನ್ನು ಇಲ್ಲಿ ಚರ್ಚಿಸಲಾಗಿದೆ.




**೧೮೦. ಇಲ್ಲಿ ಯಾರೂ ಮುಖ್ಯರಲ್ಲ**

(ಕನ್ನಡ ಸಾಹಿತ್ಯ ಮೀಮಾಂಸೆ, ಸಂ.೨)

ಸಂ : ರಹಮತ್ ತರೀಕೆರೆ

ಪುಟ: x+೩೨೮, ವರ್ಷ: ೨೦೦೫, ರೂ: ೧೫೦.೦೦

ಪರಿವಿಡಿ

೧. ತನ್ನತನದ ಹುಡುಕಾಟ
೨. ಕರ್ತೃ ಮೀಮಾಂಸೆ; ಸೃಷ್ಟಿ ಮೀಮಾಂಸೆ
೩. ವಸ್ತು ಮೀಮಾಂಸೆ; ಪ್ರಕಾರ ಮೀಮಾಂಸೆ
೪. ಪ್ರೇರಣೆ ಮೀಮಾಂಸೆ; ವಿಧಾನ ಮೀಮಾಂಸೆ
೫. ಭಾಷಾ ಮೀಮಾಂಸೆ
೬. ದೃಷ್ಟಿ ಮೀಮಾಂಸೆ
೭. ಕೃತಿ ಮೀಮಾಂಸೆ
೮. ಓದುಗ ಮೀಮಾಂಸೆ
೯. ಪರಿಣಾಮ ಮೀಮಾಂಸೆ
೧೦. ವಿಶಿಷ್ಟ ಲಕ್ಷಣಗಳು

ಕನ್ನಡ ಸಾಹಿತ್ಯ ಮೀಮಾಂಸೆಯ ಎರಡನೇ ಸಂಪುಟವನ್ನು *ಈ* ಶೀರ್ಷಿಕೆಯಲ್ಲಿ ಅನಾವರಣ ಮಾಡಲಾಗಿದೆ. ಕನ್ನಡದ ಸೃಜನಶೀಲ ಲೇಖಕರ ಸಾಹಿತ್ಯ ಕೃತಿಗಳ ಒಳಗಿನಿಂದ ಕನ್ನಡ ಸಾಹಿತ್ಯ ಮೀಮಾಂಸೆಯ ವಿನ್ಯಾಸಗಳನ್ನು ರೂಪಿಸುವ ಪ್ರಯತ್ನ *ಈ* ಕೃತಿಯಲ್ಲಿದೆ. ಇಲ್ಲಿನ ಒಟ್ಟು ಮೀಮಾಂಸೆಯ ಹರಹಿನಲ್ಲಿ ಕರ್ತೃ, ಸೃಷ್ಟಿ, ವಸ್ತು, ಪ್ರಕಾರ, ಪ್ರೇರಣೆ, ಪ್ರಭಾವ, ವಿಧಾನ, ಭಾಷೆ, ದೃಷ್ಟಿ, ಕೃತಿ, ಓದುಗ ಮತ್ತು ಪರಿಣಾಮ ಎನ್ನುವ ಪರಿಮಾಣಗಳನ್ನು ಇಟ್ಟುಕೊಂಡು ಮೀಮಾಂಸೆಗಳನ್ನು ಕಟ್ಟುವ ಕೆಲಸವನ್ನು ಇಲ್ಲಿ ನಿರ್ವಹಿಸಲಾಗಿದೆ.

**೧೮೧. ಎಂ.ಎಸ್.ಪುಟ್ಟಣ್ಣನವರ ಕಾದಂಬರಿಗಳು**

ಲೇ: ಎಚ್.ಎಸ್.ಸುಜಾತ

ಪುಟ: vi+೩೬, ವರ್ಷ: ೨೦೦೭, ರೂ: ೧೦.೦೦

ಆಧುನಿಕ ಕನ್ನಡ ಗದ್ಯ ಸಾಹಿತ್ಯ ನಿರ್ಮಾಪಕರಲ್ಲಿ ಮುಖ್ಯರಾದ ಎಂ.ಎಸ್.ಪುಟ್ಟಣ್ಣನವರ ಬದುಕು ಬರಹ ಸಾಧನೆಗಳ ಕಿರು ಚಿತ್ರ *ಈ* ಕೃತಿಯಲ್ಲಿದೆ.

**೧೮೨. ಕನಕದಾಸರು**

ಲೇ: ಎಸ್.ಎಫ್. ಜಕಬಾಳ

ಪುಟ: X+೭೨, ವರ್ಷ: ೨೦೦೪, ರೂ: ೪೦.೦೦

ಪರಿವಿಡಿ

೧. ಜೀವನ ವಿಚಾರ
೨. ಕೀರ್ತನೆಗಳು
೩. ಕಾವ್ಯಗಳು
೪. ಆಯ್ದ ಪದಗಳು

ಹರಿದಾಸ ಪರಂಪರೆಯ ಕವಿಗಳೂ ವಾಗ್ಗೇಯಕಾರರೂ ಆದ ಕನಕದಾಸರ ವ್ಯಕ್ತಿತ್ವ, ಬದುಕು, ಸಾಹಿತ್ಯ ಸಾಧನೆಗಳ ಒಳನೋಟವನ್ನು *ಈ* ಕೃತಿಯಲ್ಲಿ ಕಾಣಬಹುದು.

## ೧೭೩. ಕನ್ನಡ ಅಧ್ಯಯನ - ೧೯೯೪

ಸಂ: ಎಚ್.ಎಸ್.ರಾಘವೇಂದ್ರರಾವ್

ಪುಟ: viii+೧೯೪, ವರ್ಷ: ೧೯೯೪

ಪರಿವಿಡಿ

೧. ಮೆದುಳಿನ ಕೈಗಾರೀಕರಣ

೨. ಸಂವಹನ: ಜಾನಪದ ಮಾದರಿ

೩. ಸಂಸ್ಕೃತಿ-ವಿದ್ಯುನ್ಮಾನ ಮಾಧ್ಯಮ; ಪತ್ರಿಕೋದ್ಯಮ ಮತ್ತು ಸಂಸ್ಕೃತಿ

೪. ದೂರದರ್ಶನ; ಪ್ರಾದೇಶಿಕ ಭಾಷಾ ಪತ್ರಿಕೋದ್ಯಮ

೫. ರಂಗಭೂಮಿ- ಸಂವಹನ

೬. ಜಾಹೀರಾತು-ಭಾಷಿಕ ಸಂವಹನದ ಭ್ರಷ್ಟತೆ ಕತೆಯ ಗ್ರಹಿಕೆ

೭. ಶಿಕ್ಷಣ ಮಾಧ್ಯಮ-ಕನ್ನಡ; ಅನ್ಯ ಭಾಷಾ ಮಾಧ್ಯಮ

೮. ಭಾರತದಲ್ಲಿ ಭಾಷಾ ಯೋಜನೆ; ಪ್ರಾಯೋಗಿಕ ಭಾಷೆಗಳು

ಕನ್ನಡ ಜನಸಮುದಾಯದ ಬದುಕು ಮತ್ತು ಆಲೋಚನೆಗಳ ಮೇಲೆ ತೀವ್ರ ಪ್ರಭಾವವನ್ನು ಬೀರುತ್ತಿರುವ ಎರಡು ಪ್ರಮುಖ ವಲಯಗಳಾದ 'ಸಂವಹನ' ಮತ್ತು 'ಮಾಧ್ಯಮ'ಗಳ ವಿವರವಾದ ಅಧ್ಯಯನ *ಈ* ಕೃತಿಯಲ್ಲಿದೆ.

## ೧೭೪. ಕನ್ನಡ ಅಧ್ಯಯನ - ೧೯೯೫

ಸಂ: ಕರೀಗೌಡ ಬೀಚನಹಳ್ಳಿ

ಪುಟ: x+೧೦೨, ವರ್ಷ: ೧೯೯೫

ಪರಿವಿಡಿ

೧. ವಿಜ್ಞಾನ ಮತ್ತು ತಂತ್ರಜ್ಞಾನ

೨. ಕರ್ನಾಟಕದ ಆರ್ಥಿಕತೆಯ ಭವಿಷ್ಯ

೩. ಭವಿಷ್ಯದ ಕರ್ನಾಟಕದ ಆರ್ಥಿಕ ಸ್ವರೂಪ

೪. ಭವಿಷ್ಯದ ಕರ್ನಾಟಕದಲ್ಲಿ ಕೈಗಾರಿಕೆ

೫. ಕರ್ನಾಟಕ ಸಾಂಸ್ಕೃತಿಕ ಸ್ವರೂಪ

೬. ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ

೭. ಕನ್ನಡ ಸಾಹಿತ್ಯ : ಬೇರು, ಕಾಂಡ ಮತ್ತು ಚಿಗುರು

೮. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಜನಾಂಗಗಳ ಅಭಿವೃದ್ಧಿ

೯. ಕರ್ನಾಟಕದ ರಾಜಕೀಯ ಸ್ವರೂಪ

ಸಮಗ್ರ ಕರ್ನಾಟಕ ರೂಪುಗೊಳ್ಳಬೇಕಾದರೆ ನಾವು ಎದುರಿಸಬೇಕಾದ ಸಮಸ್ಯೆಗಳು ಹಾಗೂ ಸವಾಲುಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯ ಸಂಯೋಜಿಸಿದ್ದ ಭವಿಷ್ಯದ ಕರ್ನಾಟಕ ಎಂಬ ವಿಚಾರ ಸಂಕಿರಣದಲ್ಲಿ ಹಲವು ವಿದ್ವಾಂಸರು ಮಂಡಿಸಿದ ವಿದ್ವತ್ಪೂರ್ಣ ಲೇಖನಗಳು *ಈ* ಕೃತಿಯಲ್ಲಿವೆ.




## ೧೭೫. ಕನ್ನಡ ಅಭಿಜಾತ ಸಾಹಿತ್ಯ : ಅಧ್ಯಯನದ ಅವಕಾಶಗಳು, ಆಹ್ವಾನಗಳು

ಸಂ : ಟಿ.ವಿ. ವೆಂಕಟಾಚಲ ಶಾಸ್ತ್ರೀ

ಪುಟ : xxx ii + ೧೧೦, ವರ್ಷ : ೨೦೦೯, ರೂ. ೮೦.೦೦

ಪರಿವಿಡಿ

೧. ಗ್ರಾಂಥಿಕ ಸಾಹಿತ್ಯ

೨. ಶಾಸನ ಸಾಹಿತ್ಯ

ಕನ್ನಡ ಶಾಸ್ತ್ರೀಯ ಭಾಷೆಯಾದ ಸಂದರ್ಭದಲ್ಲಿ ಕನ್ನಡ ಅಧ್ಯಯನವನ್ನು ಕುರಿತಂತೆ ಕನ್ನಡ ಸಾಹಿತ್ಯಸಂಸ್ಕೃತಿಯನ್ನು ಭಿನ್ನ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಬೇಕಾಗಿರುವ ಹಿನ್ನೆಲೆಯಲ್ಲಿ, ನಮ್ಮ ಕನ್ನಡ ಕಾವ್ಯಶಾಸ್ತ್ರ, ಶಾಸನಸಾಹಿತ್ಯವನ್ನು ಒಳಗೊಂಡಂತೆ, *ಈ*ವರೆಗೆ ನಡೆದ ಅಧ್ಯಯನ, ಸಂಪಾದನೆಗಳು ಹಾಗೂ ಮುಂದೆ ಆಗಬೇಕಾಗಿರುವ ಸಂಶೋಧನೆಗಳು ಹೇಗೆ ಇರಬೇಕು ಎಂಬುದರ ಬಗ್ಗೆ *ಈ* ಕೃತಿ ಮಾಹಿತಿ ನೀಡುವುದಲ್ಲದೆ ಸಾಹಿತ್ಯ ಅಧ್ಯಯನ ಯೋಜನೆಗೆ ದಿಕ್ಕಾಗಬಹುದಾದ ಎಲ್ಲಾ ಸಾಧ್ಯತೆಗಳನ್ನು *ಈ* ಕೃತಿ ಒಳಗೊಂಡಿದೆ.

## ೧೭೬. ಕನ್ನಡ ದಾಖಲು ಸಾಹಿತ್ಯ

ಸಂ: ಕೆ. ರವೀಂದ್ರನಾಥ

ಪುಟ: x+೧೮೨, ವರ್ಷ: ೨೦೦೦, ರೂ: ೯೦.೦೦

ಪರಿವಿಡಿ

೧. ದಾಖಲು ಸಾಹಿತ್ಯ

೨. ದಾಖಲು ಸಾಹಿತ್ಯ ಪ್ರಕಾರಗಳು; ಕಡತಗಳು

೩. ನಿರೂಪಗಳು

೪. ಬಿನ್ನವತ್ತಳೆಗಳು

೫. ದಿನಚರಿಗಳು

೬. ಕೈಫಿಯತ್ತುಗಳು

೭. ಬಖೈರುಗಳು; ನಾಮೆಗಳು; ಸ್ಥಳಪುರಾಣ/ಮಹಾತ್ಮ್ಯೆಗಳು

ನಮ್ಮ ಜೀವನ ಪದ್ಧತಿಯ ದಾಖಲಾತ್ಮಕ ಅಭಿವ್ಯಕ್ತಿಯಾಗಿರುವ ದಾಖಲು ಸಾಹಿತ್ಯದ ಬಗ್ಗೆ *ಈ* ಗ್ರಂಥ ವಿವೇಚಿಸುತ್ತದೆ. ಚಾರಿತ್ರಿಕ ಮಹತ್ವ ಪಡೆದ ಶಾಸನ, ಕಡತ, ನಿರೂಪ, ಬಿನ್ನವತ್ತಳೆ, ದಿನಚರಿ, ಕೈಫಿಯತ್ತು, ಬಖೈರು, ನಾಮೆ, ಸ್ಥಳಪುರಾಣ-ಮಹಾತ್ಮೆಗಳು ದಾಖಲು ಸಾಹಿತ್ಯವೆಂದು ವರ್ಗೀಕೃತಕೊಂಡು ಇಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಕ್ಕೊಳಪಟ್ಟಿವೆ. ವಿಶೇಷವಾಗಿ ವಿಜಯನಗರ ಉತ್ತರಾರ್ಧದ ಚರಿತ್ರೆಗೆ ಸಹಕಾರಿಯಾಗುವ ಕಾಗದ ಪತ್ರಗಳ ದಾಖಲೆಯನ್ನು ಕುರಿತು *ಈ* ಕೃತಿ ಪರಿಚಯಿಸುತ್ತದೆ.

**೧೭೭. ಕನ್ನಡ ಪೌರಾಣಿಕ ಕಾದಂಬರಿಗಾರರು**

ಲೇ: ಜಿ.ಕೆ. ರಮೇಶ

ಪುಟ: IV+೨೮, ವರ್ಷ: ೨೦೦೩, ರೂ: ೧೦.೦೦

ಕನ್ನಡದ ಪೌರಾಣಿಕ ಕಾದಂಬರಿಗಳು ಮತ್ತು ಆ ಪ್ರಕಾರದ ಕಾದಂಬರಿಕಾರರ ಬಗ್ಗೆ *ಈ* ಕಿರುಕೃತಿಯಲ್ಲಿ ಚರ್ಚಿಸಲಾಗಿದೆ.

**೧೭೮. ಕನ್ನಡ ಸಾಹಿತ್ಯ ಕೋಮು ಸೌಹಾರ್ದತೆ**

ಲೇ: ವ್ಹಿ.ಜಿ.ಪೂಜಾರ

ಪುಟ: iv+೩೨, ವರ್ಷ: ೨೦೦೬, ರೂ: ೧೦.೦೦

ಕನ್ನಡ ಸಾಹಿತ್ಯದುದ್ದಕ್ಕೂ ಅಭಿವ್ಯಕ್ತಗೊಂಡಿರುವ ಧರ್ಮಸಹಿಷ್ಣುತೆ, ಧರ್ಮ ಸಮನ್ವಯತೆಯನ್ನು *ಈ* ಕೃತಿಯಲ್ಲಿ ಪ್ರಸ್ತಾಪಿಸುತ ಪ್ರಸ್ತುತ ಸಮಾಜದಲ್ಲಿ ಹರಡಿರುವ ಕೋಮು ವಿಷಜ್ವಾಲೆಯನ್ನು ತಣಿಸಲು ಕನ್ನಡ ಸಾಹಿತ್ಯ ಹೇಗೆ ಪೂರಕವಾಗಿ ಸ್ಪಂದಿಸಬಲ್ಲದು ಎಂಬುದನ್ನು *ಈ* ಕಿರುಕೃತಿಯಲ್ಲಿ ವಿಶ್ಲೇಷಿಸಲಾಗಿದೆ.

**೧೭೯. ಕನ್ನಡ ಸಾಹಿತ್ಯ ಮೀಮಾಂಸೆ : ೧**

ಸಂ: ರಹಮತ್ ತರೀಕೆರೆ

ಪುಟ: xxiv+೨೫೨, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ನವೋದಯ ಕಾಲಘಟ್ಟದ ಸಾಹಿತಿಗಳ ಪ್ರಮುಖ ವಿಚಾರ ಲೇಖನಗಳು

೨. ಪ್ರಗತಿಶೀಲ ಕಾಲಘಟ್ಟದ ಸಾಹಿತಿಗಳ ಪ್ರಮುಖ ವಿಚಾರ ಲೇಖನಗಳು

೩. ನವ್ಯ ಬಂಡಾಯ ಕಾಲಘಟ್ಟದ ಸಾಹಿತಿಗಳ ಪ್ರಮುಖ ವಿಚಾರ ಲೇಖನಗಳು

ಇದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚದುರಿದಂತೆ ಇರುವ ಸಾಹಿತ್ಯ ಚಿಂತನೆಯನ್ನು ವ್ಯವಸ್ಥಿತವಾಗಿ ಪುನಾರಚಿಸಿ ನೋಡುವ ಒಂದು ಪ್ರಯತ್ನ. ಬಿ ಎಂ ಶ್ರೀ ಅವರಿಂದ ಹಿಡಿದು ದೇವನೂರರ ತನಕ ಕನ್ನಡ ಬರಹಗಾರರು ಬರೆದಿರುವ ೫೦ ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕನ್ನಡ ಸಾಹಿತ್ಯ ಮೀಮಾಂಸೆಯನ್ನು ಹುಡುಕಿಕೊಳ್ಳಬೇಕಾದ ಅಗತ್ಯ ವಿಧಾನ ಹಾಗೂ ಸಮಸ್ಯೆಗಳನ್ನು ವಿವೇಚಿಸುವ ಪ್ರಸ್ತಾವನೆಯೂ *ಈ* ಕೃತಿಯಲ್ಲಿದೆ.

**೧೮೦. ಕನ್ನಡ ಸಾಹಿತ್ಯ ಸಂಗಾತಿ**

ಸಂ: ಕೀರ್ತಿನಾಥ ಕುರ್ತಕೋಟಿ

ಪುಟ: ೩೬೮, ವರ್ಷ: ೧೯೯೫, ರೂ: ೧೨೦.೦೦

ಪರಿವಿಡಿ

೧. ಹಲ್ಮಿಡಿ ಶಾಸನ

೨. ಕವಿರಾಜಮಾರ್ಗ

೩. ಮಾರ್ಗ ಮತ್ತು ದೇಸಿ

೪. ವಡ್ಡಾರಾಧನೆ

೫. ಹಳೆಗನ್ನಡ ಕವಿ-ಕಾವ್ಯ ವಿಮರ್ಶೆ

೬. ವಚನ ಸಾಹಿತ್ಯ ವಿಮರ್ಶೆ

೭. ದಾಸರು - ದಾಸ ಸಾಹಿತ್ಯ ವಿಮರ್ಶೆ, ಜನಪದ ಕಾವ್ಯ

೮. ಕ್ರಿ.ಶ. ೧೭೦೦ರ ನಂತರದ ಕಾವ್ಯ-ನಾಟಕ ವಿಮರ್ಶೆ

ಹಳಗನ್ನಡದ ಕವಿಗಳು ಮತ್ತವರ ಕೃತಿಗಳ ಬಗ್ಗೆ *ಈ* ಗ್ರಂಥದಲ್ಲಿ ಅಪೂರ್ವ ಒಳನೋಟಗಳಿವೆ. ಕನ್ನಡದ ಪ್ರಥಮ ಶಾಸನವಾದ 'ಹಲ್ಮಿಡಿ ಶಾಸನ' ಹಾಗು ಕನ್ನಡದಲ್ಲಿ ಮೊದಲು ಉಪಲಬ್ಧವಾಗಿರುವ ನೃಪತುಂಗನ 'ಕವಿರಾಜಮಾರ್ಗ'ದಿಂದ ಹಿಡಿದು ಶಾಂತಕವಿ, ಮುದ್ದಣ್ಣನ ಕಾವ್ಯಕೃತಿವರೆಗಿನ ವಿಮರ್ಶಾತ್ಮಕ ಬರಹಗಳು ಇಲ್ಲಿವೆ.



**೧೮೧. ಕರ್ನಾಟಕ ಕನ್ನಡಿ**

ಸಂ: ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗದ ಸದಸ್ಯರು

ಪುಟ: xii+೧೮೪, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧ ನಾಡು

೨. ಜನ-ಸಮಾಜ

೩. ಭಾಷೆ ಮತ್ತು ಸಾಹಿತ್ಯ

೪. ಇತಿಹಾಸ

೫. ಧರ್ಮ

೬. ಅಭಿವೃದ್ಧಿ

೭. ಕಲೆ

ಜಾಗತೀಕರಣ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಕನ್ನಡತನ ಕಾಣೆಯಾಗುತ್ತಿರುವುದರ ಜತೆಗೆ ಕರ್ನಾಟಕದ ಕಲೆ ಸಂಸ್ಕೃತಿ ಭಾಷೆಯೂ ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಕರ್ನಾಟಕದ ಕುರಿತಾದ ಸಮಗ್ರ ಮಾಹಿತಿಗಳನ್ನು *ಈ* ಕೃತಿ ಒಳಗೊಂಡಿದೆ.

**೧೮೨. ಕವಿರಾಜಮಾರ್ಗ : ಸಾಂಸ್ಕೃತಿಕ ಮುಖಾಮುಖಿ**

ಸಂ: ರಹಮತ್ ತರೀಕೆರೆ

ಪುಟ: xii+೮೮, ವರ್ಷ: ೨೦೦೦, ರೂ: ೪೦.೦೦

ಪರಿವಿಡಿ

೧. ಕವಿರಾಜಮಾರ್ಗ : ಹೊಸ ಓದು

೨. ದೇಸೀ ಚಹರೆಗಳ ಕ್ರಿಯಾಶೀಲತೆ

೩. ಕವಿರಾಜ ಮಾರ್ಗ: ಏನಿದರ ಹೆಚ್ಚಳ

೪. ಹೊಸ ಭಾಷೆಯೊಂದರ ನಿರ್ಮಾಣ

೫. ಕವಿರಾಜಮಾರ್ಗ : ಸಂಸ್ಕೃತ ಪರಂಪರೆ ಹಿನ್ನೆಲೆಯಲ್ಲಿ

೬. ಕವಿರಾಜಮಾರ್ಗ : ಭಾಷಿಕ ರಾಜಕೀಯ ಅಂಶಗಳು

೭. ಕವಿರಾಜಮಾರ್ಗ : ಮತ್ತು ದೇಸೀಯತೆ

೮. ಕವಿರಾಜಮಾರ್ಗ : ಕೆಲವು ಪ್ರತಿಕ್ರಿಯೆಗಳು

೯. ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಸಂವೇದನೆಯ ಸ್ವರೂಪ

ಕವಿರಾಜಮಾರ್ಗವು ಕೇವಲ ಒಂದು ಅಲಂಕಾರ ಗ್ರಂಥವಲ್ಲ. *ಈ* ಪ್ರಾಚೀನ ಸಾಹಿತ್ಯವನ್ನು ಸಾಂಸ್ಕೃತಿಕವಾದ ಹೊಸ ದೃಷ್ಟಿಯಿಂದ ನೋಡುವ ಪ್ರಯತ್ನ ಇಲ್ಲಿನ ಲೇಖನಗಳಲ್ಲಿವೆ. ಕನ್ನಡವು ಅಧಿಕಾರಸ್ಥ ಭಾಷೆಗಳ ಎದುರು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಮಾಡಿದ ಹೋರಾಟವನ್ನು ದಾಖಲಿಸುವ ಕೃತಿ *ಈ* ಕವಿರಾಜಮಾರ್ಗ ಎಂಬ ಅಂಶದ ಮೇಲೆ ನಡೆಸಿರುವ ಚರ್ಚೆಯನ್ನು *ಈ* ಪುಸ್ತಕ ಒಳಗೊಂಡಿದೆ.

**೧೮೩. ಕುಮಾರವ್ಯಾಸ ಭಾರತ : ಸಾಂಸ್ಕೃತಿಕ ಮುಖಾಮುಖಿ**

ಸಂ: ರಹಮತ್ ತರೀಕೆರೆ

ಪುಟ: XX+೨೮೪, ವರ್ಷ: ೨೦೦೪, ರೂ: ೮೦.೦೦

ಪರಿವಿಡಿ

೧. ಕುಮಾರವ್ಯಾಸನ ಕಾವ್ಯ ಕಲ್ಪನೆ; ಕುಮಾರವ್ಯಾಸನ ನಿರೂಪಣ ತಂತ್ರಗಳು

೨. ಕುಮಾರವ್ಯಾಸ ಭಾರತ ಹಾಗೂ ಜನಪದ ಮಹಾಭಾರತಗಳು

೩. ಕುಮಾರವ್ಯಾಸ ಭಾರತ : ವ್ಯಾಸಭಾರತ ಹಿನ್ನೆಲೆಯಲ್ಲಿ

೪. ಕುಮಾರವ್ಯಾಸ ಭಾರತ: ಜನಪದ ಪರಂಪರೆಗಳು

೫. ಕುಮಾರವ್ಯಾಸ ಮತ್ತು ಶೂದ್ರ ಸಮುದಾಯಗಳು: ಒಂದು ಟಿಪ್ಪಣಿ

೬. ಕುಮಾರವ್ಯಾಸ ಭಾರತ: ಸ್ತ್ರೀಮತವನ್ನುತ್ತರಿಸಲಾರದೆ?

೭. ಕುಮಾರವ್ಯಾಸ ಭಾರತ: ಅಧ್ಯಯನ, ಅಭಿವ್ಯಕ್ತಿ

೮. ಕುಮಾರವ್ಯಾಸ ಭಾರತ ಮತ್ತು ಯಕ್ಷಗಾನ ತಾಳಮದ್ದಲೆ; ಕುಮಾರವ್ಯಾಸ ಭಾರತ: ಗಮಕ ಕಲೆಯಲ್ಲಿ

೯. ಕುಮಾರವ್ಯಾಸ ವಿಮರ್ಶೆಯ ವಿಮರ್ಶೆ

೧೦. ದೇಶಿ ಪರಂಪರೆಯ ಕಾವ್ಯ; ಕುಮಾರವ್ಯಾಸ ಅಧ್ಯಯನಗಳ ಸಮೀಕ್ಷೆ

'ಕುಮಾರವ್ಯಾಸ ಭಾರತ'ವನ್ನು ಬೆಳೆಯುತ್ತಿರುವ ಭಾಷೆಯ-ವಿಚಾರಶೀಲತೆಯ ಸಾಮಾಜಿಕ, ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕವಾದ ಹೊಸ ಹೊಸ ದೃಷ್ಟಿಕೋನಗಳಿಂದ ಮತ್ತೆ ಮರುಚರ್ಚೆಗೆ ಒಳಗು ಮಾಡಿ, ಅದರಲ್ಲಿ ಇದುವರೆಗೆ ಕಾಣದಿದ್ದ ಹೊಸ ಹೊಸ ಸತ್ವ ತತ್ವವನ್ನು ಹೊರ ತೆಗೆಯುವ ಪ್ರಯತ್ನ *ಈ* ಕೃತಿಯಲ್ಲಿದೆ.

**೧೮೪. ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ**

ಲೇ: ವಿ.ಚಂದ್ರಶೇಖರ ನಂಗಲಿ

ಪುಟ: iv+೩೮, ವರ್ಷ: ೨೦೦೧, ರೂ: ೧೦.೦೦

ರಾಷ್ಟ್ರಕವಿ ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ಹೆಣೆದಿರುವ ಜೈವಿಕ ಜಾಲದ ಬಗ್ಗೆ ಅಧ್ಯಯನಾತ್ಮಕವಾಗಿ ಬರೆದ ಪುಟ್ಟ ಕೃತಿಯಿದು.

**೧೮೫. ಕುವೆಂಪು ಕಾದಂಬರಿಗಳಲ್ಲಿ ಪರಿಸರ**

ಲೇ: ಗುರುಪಾದ ಮರಿಗುದ್ದಿ

ಪುಟ: ii+೨೨, ವರ್ಷ: ೧೯೯೯, ರೂ: ೫.೦೦

ಮನುಷ್ಯನ ಬದುಕು ಮತ್ತು ಪರಿಸರಗಳ ನಡುವಿನ ಸಂಘರ್ಷ ಸಾಮರಸ್ಯಗಳನ್ನು ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ ಬಗೆಯನ್ನು *ಈ* ಕೃತಿ ವಿವೇಚಿಸುತ್ತದೆ.

**೧೮೬. ಕುವೆಂಪು ಕಾವ್ಯಮೀಮಾಂಸೆ**

ಲೇ: ಸಿ.ಪಿ.ಕೃಷ್ಣಕುಮಾರ್

ಪುಟ: ii+೩೦, ವರ್ಷ: ೧೯೯೯, ರೂ: ೫.೦೦

ರಾಷ್ಟ್ರಕವಿ ಕುವೆಂಪು ಅವರು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಸಮಗ್ರ ತತ್ತ್ವಗಳನ್ನು ಅರಗಿಸಿಕೊಂಡಿದ್ದರು. ಅವರ *ಈ* ತಿಳುವಳಿಕೆ ಮತ್ತು ತಮ್ಮ ಕಾವ್ಯದ ಮೂಲಕ

ಕನ್ನಡಕ್ಕೆ ವಿಶಿಷ್ಟ್ಯವೂ ಅನನ್ಯವೂ ಆದ ಕಾವ್ಯಮೀಮಾಂಸೆಯನ್ನು ಸೃಷ್ಟಿಸಿರುವ ವಿಚಾರವೇ *ಈ* ಪುಟ್ಟ ಗ್ರಂಥದ ಸಾರ.

### ೧೮೭. ಕುವೆಂಪು ವಿಚಾರಧಾರೆಯ ಪ್ರಸ್ತುತತೆ

ಸಂ: ಕೆ.ಸಿ. ಶಿವಾರೆಡ್ಡಿ ಮತ್ತು ಎಸ್.ವೈ. ಸೋಮಶೇಖರ್

ಪುಟ: X+೧೦೮, ವರ್ಷ: ೨೦೦೪, ರೂ: ೬೦.೦೦

ಪರಿವಿಡಿ

೧. ಧರ್ಮ

೨. ಭಾಷೆ

೩. ಶಿಕ್ಷಣ

೪. ಸಮಕಾಲೀನ ಚರಿತ್ರೆ

೫. ಕುವೆಂಪುರವರ 'ನೆನಪಿನ ದೋಣಿ'ಯಲ್ಲಿ ಸಾಂಸ್ಕೃತಿಕ ಆಯಾಮಗಳು

೬. ಕುವೆಂಪು ಕೃತಿಗಳಲ್ಲಿ ಬ್ರಾಹ್ಮಣತ್ವದ ವಿರೋಧ ಹಾಗೂ ದೇಸೀ ಚಿಂತನ

೭. ಸಂವಾದ

ಕುವೆಂಪು ಸಾಹಿತ್ಯದ ವಿವಿಧ ಆಯಾಮಗಳನ್ನು ವಸ್ತುನಿಷ್ಠವಾಗಿ, ನಿಷ್ಪಕ್ಷಪಾತವಾಗಿ ಮತ್ತು ಗಂಭೀರವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. *ಈ* ಕೃತಿಯಲ್ಲಿರುವ ಎಲ್ಲ ಪ್ರಬಂಧಗಳು ಕುವೆಂಪು ವಿಚಾರಧಾರೆಯ ವಿಮರ್ಶಾತ್ಮಕ ಅಧ್ಯಯನಗಳೇ ಆಗಿದ್ದು, ಕುವೆಂಪು ವಿಚಾರದಲ್ಲಿ ಅಡಗಿರುವ ಧರ್ಮ, ಶಿಕ್ಷಣ, ಚರಿತ್ರೆ, ಸಂಸ್ಕೃತಿ ಹಾಗೂ ದೇಸಿಯತೆಗಳನ್ನು ಇಲ್ಲಿನ ಪ್ರಬಂಧಗಳಲ್ಲಿ ಸಾಧಾರವಾಗಿ ಸ್ಪಷ್ಟಪಡಿಸಲಾಗಿದೆ.

### ೧೮೮. ಕುವೆಂಪು ದರ್ಶನ : ಸಂಪುಟ ೧

ಲೇ: ದೇಜಗೌ

ಪುಟ: x+೬೭೪, ವರ್ಷ: ೨೦೦೬, ರೂ: ೩೦೦

ಪರಿವಿಡಿ

೧. ರಾಷ್ಟ್ರಕವಿ ಕುವೆಂಪು

೨. ಕುವೆಂಪು ದರ್ಶನ ಮತ್ತು ಸಂದೇಶ

೩. ರಾಷ್ಟ್ರಕವಿ ಸಂದರ್ಶನ

೪. ಕುವೆಂಪು ಅವರ ಕೊನೆಯ ದಿನಗಳು

ಕನ್ನಡ ಸಾಹಿತ್ಯ ಮತ್ತು ಕುವೆಂಪು ಅವಿನಾಭಾವದ ರೂಪಕವಾಗಿದೆ. ಕುವೆಂಪು ಮತ್ತು ಕನ್ನಡವನ್ನು ದಿವ್ಯಮಂತ್ರವನ್ನಾಗಿ ಸ್ವೀಕರಿಸಿಕೊಂಡು ಇಂದಿಗೂ ಕನ್ನಡಪರ ಆಂದೋಲನಗಳ ಮುಂಚೂಣಿಯಲ್ಲಿರುವ ಪ್ರೊ. ದೇಜಗೌ ಅವರು ಕುವೆಂಪು ಕುರಿತ ಇಲ್ಲಿನ ಬರಹಗಳ ಮೂಲಕ *ಈ* ರೂಪಕವನ್ನು ಅನಾವರಣ ಮಾಡಿದ್ದಾರೆ. ಕುವೆಂಪು ಸಾಹಿತ್ಯದ ಹಿರಿಮೆ ಗರಿಮೆಗಳನ್ನು ತಮ್ಮ ಬರಹಗಳ ಮೂಲಕ ವ್ಯಾಖ್ಯಾನಿಸಿ ನಿರೂಪಿಸಿದ್ದಾರೆ. ಇಲ್ಲಿಯ ಬರಹಗಳಲ್ಲಿ ಕುವೆಂಪು ಅವರ ವೈಚಾರಿಕದೃಷ್ಟಿ, ಲೋಕಾನುಭವ, ವೈಜ್ಞಾನಿಕ ದೃಷ್ಟಿಕೋನ ಮತ್ತು ಸೃಜನಶೀಲ ಪ್ರತಿಭೆಗಳನ್ನು ಕನ್ನಡದ ಕನ್ನಡಿಯಾಗಿ ಹಿಡಿದು ನೋಡಿರುವುದು *ಈ* ಕೃತಿಯ ವಿಶೇಷ.

### ೧೮೯. ಕುವೆಂಪು ದರ್ಶನ : ಸಂಪುಟ ೨

ಲೇ: ದೇಜಗೌ

ಪುಟ: x+೮೦೨, ವರ್ಷ: ೨೦೦೭, ರೂ: ೩೦೦

ಪರಿವಿಡಿ

೧. ವ್ಯಕ್ತಿತ್ವ

೨. ಶ್ರೀರಾಮಾಯಣದರ್ಶನಂ : ಪಾತ್ರ ವಿಮರ್ಶೆ

೩. ಸಂಕೀರ್ಣ: ಕುವೆಂಪು ಅವರ ಇವರ ಕೃತಿಗಳ ಅಧ್ಯಯನ

೪. ಕುವೆಂಪು ಅವರ ವೈಚಾರಿಕತೆ, ಲೋಕಾನುಭವ

೫. ಕುವೆಂಪು ಅವರ ಸೃಜನಶೀಲತೆ, ವೈಜ್ಞಾನಿಕ ದೃಷ್ಟಿಕೋನ

ಇಲ್ಲಿನ ಬರಹಗಳು ಕುವೆಂಪು ಸಾಹಿತ್ಯದ ಅಧ್ಯಯನಗಳನ್ನು ಒಳಗೊಂಡಿವೆ. ಕುವೆಂಪು ಅವರ ವ್ಯಕ್ತಿತ್ವ, ರಾಮಾಯಣದರ್ಶನಂ ಮಹಾಕಾವ್ಯದ ಪಾತ್ರಗಳ ಚರ್ಚೆ, ವೈಚಾರಿಕತೆ, ಸಾಮಾಜಿಕತೆ ಮುಂತಾದ ವಿಷಯಗಳನ್ನೊಳಗೊಂಡಿರುವ ೪ ಭಾಗಗಳು ವಿಷಯದ ಸಮಗ್ರತೆಗೆ ಕನ್ನಡಿಯನ್ನು ಹಿಡಿದಿವೆ. ಕುವೆಂಪು ಸಾಹಿತ್ಯದ ಅನನ್ಯತೆಯನ್ನು ಹಲವು ಬಗೆಗಳಲ್ಲಿ ವಿಶ್ಲೇಷಿಸಿ ವ್ಯಾಖ್ಯಾನಿಸಿರುವ *ಈ* ಕ್ರಮ ವಿಶಿಷ್ಟವಾಗಿದೆ. ಇಲ್ಲಿಯ ಬರಹಗಳಲ್ಲಿ ಕುವೆಂಪು ಅವರ ವೈಚಾರಿಕ ದೃಷ್ಟಿ, ಲೋಕಾನುಭವ, ವೈಜ್ಞಾನಿಕ ದೃಷ್ಟಿಕೋನ ಮತ್ತು ಸೃಜನಶೀಲ ಪ್ರತಿಭೆಗಳನ್ನು ಕನ್ನಡದ ಕನ್ನಡಿಯಾಗಿ ಹಿಡಿದು ನೋಡಲಾಗಿದೆ.




### ೧೯೦. ಕುವೆಂಪು ದರ್ಶನ : ಸಂಪುಟ ೩

ಲೇ: ದೇಜಗೌ

ಪುಟ: xiv+೮೬೨, ವರ್ಷ: ೨೦೦೮, ರೂ: ೪೦೦

ಪರಿವಿಡಿ

೧. ಕುವೆಂಪು ಅವರ ದೃಷ್ಟಿಯಲ್ಲಿ ಶ್ರೀಬಸವೇಶ್ವರರು

೨. ಕುವೆಂಪು ಕಂಡಂತೆ ಗಾಂಧೀಜಿ

೩. ಬಸವೇಶ್ವರ ಮತ್ತು ಕುವೆಂಪು

೪. ಮಹಾಕವಿಯೊಡನೆ ಮಾತುಕತೆ
೫. ಕುವೆಂಪು ಸಾಹಿತ್ಯದಲ್ಲಿ ರೈತ
೬. ಕುವೆಂಪು ಮತ್ತು ವಿಭೂತಿ ಪುರುಷರು
೭. ಕವಿ ವಿಭೂತಿ ಮತ್ತು ಇತರ ಲೇಖನಗಳು
೮. ಪತ್ರಿಕಾ ಮಾಧ್ಯಮದಲ್ಲಿ ಕುವೆಂಪು

ಕುವೆಂಪು ಅವರ ವೈಚಾರಿಕ ಚಿಂತನೆಗಳನ್ನು ಹಾಗೂ ಅವರ ಪ್ರಜ್ಞೆಗೆ ಗೋಚರಿಸಿದ ಹಲವು ವಿಚಾರಗಳ ಬಗೆಗೆ ಅವರು ಪ್ರತಿಕ್ರಿಯಿಸಿ ದ್ದನ್ನು *ಈ* ಗ್ರಂಥದಲ್ಲಿ ಚರ್ಚಿಸಲಾಗಿದೆ. ಕುವೆಂಪು ಅವರ ವೈಚಾರಿಕ ನೆಲೆಗಳ ವಿಶ್ಲೇಷಣೆಯು ಅಪೂರ್ವವೂ ಅನನ್ಯವೂ ಗಾಢವೂ ಆದ ಸೂಕ್ಷ್ಮತೆ ಗಳಿಂದ *ಈ* ಕೃತಿಯಲ್ಲಿ ದಾಖಲಾಗಿದ್ದು ಅವರ ವೈಚಾರಿಕ ದೃಷ್ಟಿ, ಲೋಕಾನುಭವ, ವೈಚಾರಿಕ ದೃಷ್ಟಿಕೋನ ಮತ್ತು ಸೃಜನಶೀಲ ಪ್ರತಿಭೆಗಳನ್ನು ಬಹುವಿಸ್ತಾರವಾಗಿ *ಈ* ಗ್ರಂಥದಲ್ಲಿ ಬಿಡಿಸಿಡಲಾಗಿದೆ.




**೧೯೧. ಕುವೆಂಪು ಸಮಗ್ರ ಗದ್ಯ ಸಂಪುಟ-೧**
ಲೇ: ಕುವೆಂಪು, ಸಂ: ಕೆ.ಸಿ. ಶಿವಾರೆಡ್ಡಿ
ಪುಟ: XXVI+೯೩೬, ವರ್ಷ: ೨೦೦೩, ರೂ: ೨೦೦.೦೦

ಪರಿವಿಡಿ
೧. ಸಾಹಿತ್ಯ ಪ್ರಚಾರ
೨. ಕಾವ್ಯ ವಿಹಾರ
೩. ತಪೋನಂದನ
೪. ವಿಭೂತಿಪೂಜೆ
೫. ದ್ರೌಪದಿಯ ಶ್ರೀಮುಡಿ
೬. ರಸೋ ವೈ ಸಃ; ಇತ್ಯಾದಿ
೭. ಮುನ್ನುಡಿ, ಮಾರ್ನುಡಿ ಮತ್ತು ಟಿಪ್ಪಣಿ
೮. ವಿವೇಕವಾಣಿ

*ಈ* ಸಂಪುಟದಲ್ಲಿ ಕುವೆಂಪು ಅವರ ಸಾಹಿತ್ಯ ವಿಮರ್ಶೆ ಮತ್ತು ಕನ್ನಡ ಕಾವ್ಯಮೀಮಾಂಸೆಯ ಸಮಗ್ರ ಬರಹಗಳು ಹಾಗೂ ಕೆಲವು ರೂಪಾಂತರ ಕೃತಿಗಳು ಸೇರಿವೆ. ಕುವೆಂಪು ಅವರ ವಿಮರ್ಶೆಯ ಮಾದರಿಗಳ ಜೊತೆಗೆ ಸಾಂಸ್ಕೃತಿಕ ವಿಮರ್ಶೆಯ ಜವಾಬ್ದಾರಿ ಗಳನ್ನು *ಈ* ಸಂಪುಟ ಬರಹಗಳಲ್ಲಿ ಕಾಣಬಹುದಾಗಿದೆ.

**೧೯೨. ಕುವೆಂಪು ಸಮಗ್ರ ಗದ್ಯ ಸಂಪುಟ-೨**
ಲೇ: ಕುವೆಂಪು ಸಂ: ಕೆ.ಸಿ. ಶಿವಾರೆಡ್ಡಿ
ಪುಟ: XXVIII+೧೨೮೦, ವರ್ಷ: ೨೦೦೪, ರೂ: ೨೦೦.೦೦




ಪರಿವಿಡಿ
೧. ಋಷಿವಾಣಿ, ವೇದಾಂತ
೨. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ
೩. ಪ್ರಸಾರಾಂಗ; ಷಷ್ಟಿನಮನ
೪. ಮನುಜಮತ ವಿಶ್ವಪಥ
೫. ವಿಚಾರಕ್ರಾಂತಿಗೆ ಆಹ್ವಾನ
೬. ಶ್ರೀಕುವೆಂಪು ಭಾಷಣಗಳು ಭಾಗ ೧
೭. ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ
೮. ಹೊನ್ನುಡಿ ಮುನ್ನುಡಿ; ಸಂದರ್ಶನಗಳು
೯. ಅಭಿನಂದನೆ; ಮಂತ್ರಮಾಂಗಲ್ಯ
೧೦. ಅನುಬಂಧಗಳು

*ಈ* ಸಂಪುಟದಲ್ಲಿ ಕುವೆಂಪು ಅವರ ಅಮೂಲ್ಯವಾದ ಹಾಗೂ ಅಲಭ್ಯವಾಗಿರುವ ಎಲ್ಲ ವೈಚಾರಿಕ ಬರಹಗಳನ್ನು ಸಂಗ್ರಹಿಸಲಾಗಿದೆ. ಕುವೆಂಪು ಅವರು ಬರೆದಿರುವ ಮುನ್ನುಡಿ, ಭಾಷಣ, ಸಂದರ್ಶನಗಳನ್ನು *ಈ* ಸಂಪುಟದಲ್ಲಿ ಸೇರಿಸಿಕೊಳ್ಳಲಾಗಿದೆ. ಸಾಂಸ್ಕೃತಿಕ ವಾಗ್ವಾದಗಳ ಬಗೆಗೆ ಕಳಕಳಿ, ಆಸ್ಥೆ ಇರುವವರಿಗೆ, ಅನ್ಯ ಜ್ಞಾನಶಿಸ್ತುಗಳ ಜ್ಞಾನದಾಹಿಗಳಿಗೆ *ಈ* ಸಂಪುಟ ಅತ್ಯಂತ ಉಪಯುಕ್ತವಾದುದು.




**೧೯೩. ಕೆ ವಿ ಸುಬ್ಬಣ್ಣ ಅವರ ಆಯ್ದ ಬರಹಗಳು**
ಸಂ: ಟಿ.ಪಿ.ಅಶೋಕ
ಪುಟ: xx+೩೧೦, ವರ್ಷ: ೧೯೯೨, ರೂ: ೧೦೦.೦೦

ಪರಿವಿಡಿ
೧. ನಾಟಕ ರಂಗದ ಬಗ್ಗೆ
೨. ಸಿನೆಮಾರಂಗದ ಬಗ್ಗೆ
೩. ಸಾಹಿತ್ಯ-ಸಂಸ್ಕೃತಿ ವಿಚಾರಗಳು
೪. ವೈಚಾರಿಕ ಲೇಖನಗಳು

ಕನ್ನಡದ ಪ್ರಮುಖ ಚಿಂತಕ, ಲೇಖಕ, ರಂಗಕರ್ಮಿ ಕೆ.ವಿ.ಸುಬ್ಬಣ್ಣ ಅವರ ಕೆಲವು ಪ್ರಾತಿನಿಧಿಕ ಬರಹಗಳನ್ನು ಸಂಪಾದಿಸಿ, ಆಯ್ದು, ಪ್ರಸ್ತುತ ಸಂಪುಟದಲ್ಲಿ ಸಂಕಲಿಸಲಾಗಿದೆ.

**೧೯೪. ಗತಿಪ್ರಜ್ಞೆ**
ಲೇ: ಜಿ. ವೆಂಕಟಸುಬ್ಬಯ್ಯ
ಪುಟ: x+೩೬೦, ವರ್ಷ: ೨೦೦೭ ರೂ: ೮೦.೦೦

ಪರಿವಿಡಿ




೧. ಪ್ರಾಚೀನ ಕಾವ್ಯ ವಿಮರ್ಶೆ

೨. ಆಧುನಿಕ ಸಾಹಿತ್ಯ ವಿಮರ್ಶೆ

ಈ ಸಂಕಲನದಲ್ಲಿ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯ ಕುರಿತು ಲೇಖಕರು ತಮ್ಮ ಸಂಶೋಧನೆಯ ಚಿಂತನೆಗಳನ್ನು ದಾಖಲಿಸಿದ್ದಾರೆ. ಕವಿರಾಜಮಾರ್ಗದಿಂದ ತೊಡಗಿ ರಾಮಚಂದ್ರ ಶರ್ಮರ ಕಾವ್ಯದ ವರೆಗೆ ಕನ್ನಡ ಸಾಹಿತ್ಯದ ಮಹತ್ವದ ಹೆಜ್ಜೆ ಗುರುತುಗಳನ್ನು ತಮ್ಮ ಅಧ್ಯಯನದ ಫಲವತ್ತಾದ ನೆಲದಲ್ಲಿ ಮೂಡಿಸಿದ್ದಾರೆ. ಈ ಬರಹಗಳು ವಿಷಯ, ವೈವಿಧ್ಯ ಮತ್ತು ಅಧ್ಯಯನದ ಹರಹಿನ ದೃಷ್ಟಿಯಿಂದ ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಬಹುಮುಖ್ಯವಾದ ಕೊಡುಗೆಗಳಾಗಿವೆ.



**೧೯೫. ಡಿ. ಗೋವಿಂದಾಸ್ ಸಮಗ್ರ ಸಾಹಿತ್ಯ**

ಸಂ ಎಂ.ಎಸ್.ಶೇಖರ್

ಪುಟ xxxvi+೨೧೬, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಹರಿಜನಾಭ್ಯುದಯ

೨. ಆತ್ಮಕಥನ : ನನ್ನ ಆತ್ಮಚರಿತ್ರೆ

೩. ನಾಯಕ : ನಡುನೀರ ಹಡಗು

೪. ಜೀವನ ಚರಿತ್ರೆ : ಕಲಿಯುಗ ಮನು ಡಾ. ಅಂಬೇಡ್ಕರ್

ಡಿ. ಗೋವಿಂದದಾಸ್ ಅವರು ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಕವಿ, ನಾಟಕಕಾರ ಹಾಗೂ ಅಪ್ಪಟ ಗಾಂಧೀವಾದಿಗಳು. ಗಾಂಧೀವಾದದ ಹಿನ್ನೆಲೆಯಲ್ಲಿ ಸಾಮಾಜಿಕ ಆಂದೋಲನದ ಎಲ್ಲ ನೆಲೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅವರ ಕಾವ್ಯವು ನವೋದಯ ಕಾವ್ಯದ ಲಕ್ಷಣಗಳನ್ನು ಇಟ್ಟುಕೊಂಡು ದಲಿತ ಸಂವೇದನೆಯನ್ನು ಒಳಗೊಂಡಿರುವಂತಹದ್ದು. ಗೋವಿಂದದಾಸರು ಕನ್ನಡ ಭಾಷೆಯನ್ನು ಒಂದು ನಿರ್ದಿಷ್ಟವಾದ ಸಾಮಾಜಿಕ ಚಳವಳಿಯ ಭಾಗವಾಗಿ ಬಳಸಿಕೊಂಡಿರುವುದನ್ನು ಈ ಕೃತಿಯಲ್ಲಿ ಕಾಣಬಹುದು.

**೧೯೬. ಮಾತು ತಲೆಯೆತ್ತುವ ಬಗೆ**

(ಕನ್ನಡ ಸಾಹಿತ್ಯ ಮೀಮಾಂಸೆ, ಸಂ. ೧)

ಸಂ : ರಹಮತ್ ತರೀಕೆರೆ

ಪುಟ: xxvi+೩೩೦, ವರ್ಷ: ೨೦೦೫, ರೂ: ೧೫೦.೦೦




ಪರಿವಿಡಿ

೧. ಬಿ.ಎಂ.ಶ್ರೀಕಂಠಯ್ಯ; ದ.ರಾ.ಬೇಂದ್ರೆ; ಸೇಡಿಯಾಪು ಕೃಷ್ಣಭಟ್ಟ; ಕುವೆಂಪು; ಮಾಸ್ತಿ; ಅನಕೃ; ಪುತಿನ ಇವರ ವಿಚಾರಗಳು

೨. ಕೀರ್ತಿನಾಥ ಕುರ್ತುಕೋಟಿ; ಯು.ಆರ್.ಅನಂತಮೂರ್ತಿ; ಎಂ.ಗೋಪಾಲಕೃಷ್ಣ ಅಡಿಗ; ಜಿ.ಎಸ್.ಶಿವರುದ್ರಪ್ಪ; ಪೂರ್ಣಚಂದ್ರ ತೇಜಸ್ವಿ; ಎಚ್.ಎಂ.ಚನ್ನಯ್ಯ ಇವರ ವಿಚಾರಗಳು

೩. ದೇವನೂರು ಮಹಾದೇವ; ಜಿ.ಎಚ್.ನಾಯಕ; ಎಸ್.ಎಲ್.ಭೈರಪ್ಪ; ಬಿ.ಕೃಷ್ಣಪ್ಪ; ಡಿ.ಆರ್.ನಾಗರಾಜ್; ಕೆ.ವಿ.ತಿರುಮಲೇಶ್ ಇವರ ವಿಚಾರಗಳು

೪. ಪಿ.ಲಂಕೇಶ್; ವಿಜಯಾ ದಬ್ಬೆ; ರಾಜೇಂದ್ರ ಚೆನ್ನಿ; ಚಂದ್ರಶೇಖರ ಪಾಟೀಲ; ಕೆ.ವಿ.ಸುಬ್ಬಣ್ಣ ಇವರ ವಿಚಾರಗಳು

೫. ಬರಗೂರು ರಾಮಚಂದ್ರಪ್ಪ; ಸಾರಾ ಅಬೂಬಕ್ಕರ್; ಎಸ್.ಶಿವಾನಂದ; ಓ.ಎಲ್.ನಾಗಭೂಷಣಸ್ವಾಮಿ; ಜಿ.ರಾಜಶೇಖರ್; ಕುಂ ವೀರಭದ್ರಪ್ಪ ಇವರ ವಿಚಾರಗಳು

ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ 'ಕನ್ನಡ ಮೀಮಾಂಸೆ, ಸಂಪುಟ ೧'ರ ಪರಿಷ್ಕೃತ ಹಾಗೂ ಸಂಗ್ರಹಿತ ರೂಪವಿದು. ಸಾಹಿತ್ಯ ತತ್ವಕ್ಕೆ ಸಂಬಂಧಿಸಿದಂತೆ ಕನ್ನಡದ ಅನನ್ಯತೆಯನ್ನು ಸಾರುವ ಮಹತ್ವದ ಗ್ರಂಥವಿದು. ಬಿ.ಎಂ. ಶ್ರೀಕಂಠಯ್ಯನವರಿಂದ ತೊಡಗಿ ಕುಂ. ವೀರಭದ್ರಪ್ಪರವರೆಗೆ ಬೇರೆ ಬೇರೆ ಕಾಲಘಟ್ಟಗಳ, ಸಾಮಾಜಿಕ ಹಿನ್ನೆಲೆಗಳ, ಭಿನ್ನ ವೈಚಾರಿಕ ನೆಲೆಗಳ ಕನ್ನಡದ ಮಹತ್ವದ ಲೇಖಕರು ಭಿನ್ನ ಭಿನ್ನ ಸಾಂಸ್ಕೃತಿಕ ಸಂದರ್ಭದಲ್ಲಿ ಮಂಡಿಸಿದ ೩೦ ಲೇಖನಗಳನ್ನು ಇಲ್ಲಿ ಸಂಕಲಿಸಿ, ಕನ್ನಡ ಸಾಹಿತ್ಯ ಮೀಮಾಂಸೆಯ ವೈಚಾರಿಕ ವಿನ್ಯಾಸವನ್ನು ಕಟ್ಟುವ ಕೆಲಸವನ್ನು ಇಲ್ಲಿ ಮಾಡಲಾಗಿದೆ.

**೧೯೭. ಗುಲ್ಬರ್ಗ ಜಿಲ್ಲೆಯ ಅನುಭಾವಿ ಕವಿಗಳು**

ಲೇ: ಬಸವರಾಜ ಸಬರದ

ಪುಟ: ii+೪೨, ವರ್ಷ: ೧೯೯೬, ರೂ: ೨.೦೦

೧೭ನೇಯ ಶತಮಾನದ ಆದಿಯಿಂದ ೨೦ನೇ ಶತಮಾನದ ಆದಿಯವರೆಗೂ ಗುಲ್ಬರ್ಗ ಜಿಲ್ಲೆಯಲ್ಲಿದ್ದ ಅನುಭಾವಿ ಕವಿಗಳ ಬದುಕಿನ ವಿವರ ಈ ಕಿರುಪುಸ್ತಿಕೆಯಲ್ಲಿದೆ.

**೧೯೮. ಗೆಳೆಯರ ಗುಂಪು**

ಲೇ: ವಾಮನ ಬೇಂದ್ರೆ

ಪುಟ: ii+೨೯, ವರ್ಷ: ೧೯೯೯, ರೂ: ೫.೦೦

ಕನ್ನಡದ ಗಾರುಡಿಗ ಕವಿ, ದ.ರಾ.ಬೇಂದ್ರೆಯವರ ಸಾಹಿತ್ಯ ಬದುಕಿನಲ್ಲಿ ಅವರ ಜತೆ ತೀರಾ ಒಡನಾಟದಲ್ಲಿದ್ದ ಸಾಹಿತ್ಯದ ಗೆಳೆಯರ ಬಗ್ಗೆ ಹಾಗೂ ಆ ಗೆಳೆಯರ ಗುಂಪಿನ ಕಾವ್ಯಮನಸ್ಸಿನ ಬಗ್ಗೆ *ಈ* ಕಿರುಪುಸ್ತಕದಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ.



**೧೯೯. ಚಂದ್ರಕೊಡೆ**

ಲೇ: ಹಂಪ ನಾಗರಾಜಯ್ಯ

ಪುಟ: xiv+೬೭೬, ವರ್ಷ: ೧೯೯೭, ರೂ: ೨೫೦.೦೦

ಪರಿವಿಡಿ

೧. ಶಾಸನಗಳಲ್ಲಿ ಊರಹೆಸರು: ಜೈನ ಪಳೆಯುಳಿಕೆ; ಕಸಲಗೆರೆ ಶಾಸನ: ಯಾಪನೀಯ ದಾಖಲೆ; ಖಂಡಕ-ಖಂಡಿಅ-ಕಂಡುಗ

೨. ಛಂದೋಂಬುದಿ- ನಾಗವರ್ಮ: ಮರುಚಿಂತನೆ; ದಂಪತಿಗಳ ಹೆಸರಿನಲ್ಲಿ ಅಳತೆಗೋಲು; ದಡಗ: ಯಾಪನೀಯ ಕೇಂದ್ರ; ಪಂಪನ ಪೂರ್ವಜರ ಜಾತಿ

೩. ಮೈಳಾಪತೀರ್ಥ: ಶಾಸನಗಳ ಆಧಾರ; ಮೊ(ೞ)ರಕಕುಲ: ರಣಮೂರ್ಖಕುಲ: ಒಂದು ಚಿಂತನೆ; ಯಮ್ಮಿಗನೂರು ಶಾಸನ ಪದ್ಯ : ಪರಾಮರ್ಶೆ; ಯಲ್ಲಾದಹಳ್ಳಿ (ಪಾರ್ಶ್ವಪುರ) ಶಾಸನ; ವಸುಧೈಕ ಬಾಂಧವ ರೇಚಣದಂಡನಾಥ; ವಾದೀಭಸಿಂಹನ ಇತಿವೃತ್ತ: ಶಾಸನಗಳ ಬೆಳಕಿನಲ್ಲಿ

೪. ಶಾಸನಗಳಲ್ಲಿ ಕಡಿತಲೆ ಗೋತ್ರ; ಶಾಸನಗಳಲ್ಲಿ ಕತ್ತಲೆಕುಲ; ಶಾಸನಗಳಲ್ಲಿ ಗಂಗರ ಪ್ರಾಚೀನ ಬಸದಿಗಳು: ಅವಲೋಕನ; ಶಾಸನಗಳಲ್ಲಿ 'ಚಂದ್ರಕೊಡೆ' ವಿವರಣೆ; ಶಾಸನಗಳಲ್ಲಿ 'ಚತುರ್ಥಕುಳ': ಪರಿಶೀಲನೆ; ಶಾಸನಗಳಲ್ಲಿ ಜೈನತೀರ್ಥಗಳು

೫. ಶಾಸನಗಳಲ್ಲಿ ಬಸದಿಗಳು : ಪಕ್ಷಿನೋಟ; ಶಾಸನಗಳಲ್ಲಿ ಮಹೋಗ್ರವಂಶ : ಸಣ್ಣ ಟಿಪ್ಪಣೆ; ಶಾಸನಗಳಲ್ಲಿ 'ಮೇಘಡಂಬರ' ಕೊಡೆ

೬. ಶಾಸನಗಳಲ್ಲಿ ಬಿಟ್ಟಿಕುಲ : ಪರಿಶೀಲನೆ; ಶಾಸನಗಳಲ್ಲಿ ಯಾಪನೀಯ ಗಣಗಳು; ಶಾಸನಗಳಲ್ಲಿ ಶಾಪಾಶಯ : ಮರೆಯಾದ ಮಾತು; ಶಾಸನಗಳಲ್ಲಿ ಸಾದಕುಲ; ಸುಳಗೋಡು ಸೋಮವಾರ: ಯಾಪನೀಯ ಕೇಂದ್ರ; ಶಾಸನಗಳಲ್ಲಿ 'ಸೀಗುರಿ' ಕೊಡೆ : ವ್ಯಾಖ್ಯಾನ; ಗಂಗರ ಒಂದು ಹೊಸ ಶಾಸನ

೭. ಭಟ್ಟಾರಕ ದಿವಾಕರಣ(ನ)ಂದಿ; ದಿವಾಕರಣಂದಿ ಮತ್ತು ವಡ್ಡಾರಾಧನೆ; ಒಂದು ಹೊಸ ಶಾಸನ, ಹೊಸ ವಿಗ್ರಹ; ಚಾಳುಕ್ಯ ಕುಲ ಮತ್ತು ಪು(ಪೊ)ಲಕೇಸಿ(ನ್); ನಂದವಾಡಿಗೆ ಮಹಾ ಮಂಡಲೇಶ್ವರ

೮. ಕನಕದಾಸರ ಕೀರ್ತನೆಗಳ ಕಳವು; ನೇರಿಲಗೆಯ ಶಾಸನ : ಕೆಲವು ಟಿಪ್ಪಣಿಗಳು; ವಡ್ಡಾರಾಧನೆ ಮೂರು ಶ್ಲೋಕಗಳು; ಚಾರುದತ್ತನ ಕಥೆ : ಮೂಲ-ಚೂಲ; ಮಹಾಪುರಾಣದ ಮಹತ್ವ; ದುರ್ಗಸಿಂಹನ ಮತ್ತು ಪಂಚತಂತ್ರ : ಪರಿಶೀಲನೆ

೯. ಆರಾಧನಾ ಕರ್ನಾಟ ಟೀಕಾ : ಸಾಹಿತ್ಯ ಸಂಪತ್ತು; ಜೈನ ಪ್ರತಿಸಂಸ್ಕೃತಿಯ ನಿರ್ಮಾಣ ಅಸ್ಪೃಶ್ಯತೆ; ಮಹಾಸಾಮಂತ ಗೂಳಿಯ ಬಾಚಿದೇವ; ಶಾಸನಗಳಲ್ಲಿ ವಾಜಿವಂಶ ವಲ್ಲರಿ; ಗಾವರವಾಡ ಶಾಸನದ ಆಯಾಮಗಳು

೧೦. ಶಾಸನಗಳಲ್ಲಿ ಯಕ್ಷಿ ಜ್ವಾಲಾಮಾಲಿನಿ ಮಹಿಮೆ; ಜೈನ ಶಾಸನಗಳ ಪ್ರಾರ್ಥನಾ ಪದ್ಯಗಳು; ಕೊಪ್ಪಳ ಶಾಸನದಲ್ಲಿ ಕವಡೆಯ ಬೊಪ್ಪ : ಹೊಸ ಸಾಮಗ್ರಿ; ಗಂಗರ ಹೊಸ ಶಾಸನಗಳು; ಬೂತುಗ : ಹೊಸ ಶಾಸನಗಳು ಮತ್ತು ಇತರ

*ಈ* ಗ್ರಂಥದಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆ, ಇತಿಹಾಸ, ವಾಸ್ತು, ಶಿಲ್ಪ, ಧರ್ಮ, ಆಚಾರ್ಯ ಪರಂಪರೆ, ಕವಿಕಾವ್ಯ ಜಿಜ್ಞಾಸೆ, ಶಾಸನಗಳ ಮಹತ್ತ್ವ, ಸ್ಥಳನಾಮ ಅಧ್ಯಯನ ಹೀಗೆ ಹಲವು ವಿಷಯಗಳನ್ನು ಗರ್ಭೀಕರಿಸಿ, ಇತರ ಅಜ್ಞಾತ ವಿಷಯಗಳಿಗೆ ಸಂಶೋಧನೆಯ ಹೊನಲು ಬೆಳಕು ಹಾಯಿಸುವ ಸಂಶೋಧನಾತ್ಮಕ ಲೇಖನಗಳಿವೆ. ಒಂದು ಸಾವಿರ ವರ್ಷದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿನ ಲೇಖನಗಳಲ್ಲಿ ಗುರುತಿಸಲಾಗಿದೆ.




**೨೦೦. ಜೈಮಿನಿ ಭಾರತ : ಸಾಂಸ್ಕೃತಿಕ ಮುಖಾಮುಖಿ**

ಸಂ : ಅಮರೇಶ ನುಗಡೋಣಿ

ಪುಟ : xii + ೧೪೪, ವರ್ಷ : ೨೦೦೯, ರೂ. ೮೦.೦೦

ಪರಿವಿಡಿ

೧. ಜೈಮಿನಿ ಭಾರತದ ಅಧ್ಯಯನಗಳು

೨. ಆಧುನಿಕ ಪೂರ್ವ ಶೈಕ್ಷಣಿಕ ಪಠ್ಯವಾಗಿ

೩. ಕಥೆ ಉಪಕಥೆಗಳ ಅಂತರ್ ಸಂಬಂಧಗಳು

೪. ಪ್ರಭುತ್ವನಗರಗಳ ಅಂತರ್ ಸಂಬಂಧ ಸ್ವರೂಪ

೫. ಪ್ರಭುತ್ವ ಮತ್ತು ಯುದ್ಧಗಳ ತಾತ್ವಿಕ ಸ್ವರೂಪ

೬. ಸ್ತ್ರೀಲೋಕ ಸ್ತ್ರೀವಾದಿ ಅಧ್ಯಯನ ಮುಖೇನ

೭. ಜೈಮಿನಿ ಭಾರತ ಮತ್ತು ಯಕ್ಷಗಾನ ಅಂತಃಸಂಬಂಧ

೮. ಜೈಮಿನಿ ಭಾರತ ಬೇಂದ್ರೆ ಮತ್ತು ಕುವೆಂಪು ಅವರ ಮೇಲಾದ ಪ್ರಭಾವ

೯. "ಪರಿಭ್ರಮಣ" ಮತ್ತು "ಶೋಧ" ಕನ್ನಡ ಜೈಮಿನಿ ಭಾರತದ ಒಂದು ಅಧ್ಯಯನ

೧೦. ಜೈಮಿನಿ ಭಾರತದ ಅಧ್ಯಯನಗಳ ಸಮೀಕ್ಷೆ

ಜೈಮಿನಿ ಭಾರತವನ್ನು ಹೊಸ ಸೈದ್ಧಾಂತಿಕ ನೆಲೆಯಲ್ಲಿ ಗ್ರಹಿಸಿರುವ ಸಂಪಾದಿತ ಲೇಖನಗಳ ಗುಚ್ಛವೇ *ಈ* ಕೃತಿ. ಜೈಮಿನಿ ಭಾರತದ ನಿರ್ಮಾಣ, ವಸ್ತು, ನಿರೂಪಣ ಕ್ರಮ, ಸಂವಹನ, ಅದರ ಓದು, ಅದರ ಪ್ರಕಾರಪಲ್ಲಟ, ಅದರ ಶ್ರೋತ್ರ ವರ್ಗ ಹಾಗೂ ಅದರ ಕುರಿತ ವಿವಿಧ ಅಧ್ಯಯನಗಳ ಬಗ್ಗೆ *ಈ* ಸಂವಾದದಲ್ಲಿ ಮಹತ್ವದ ಚರ್ಚೆಗಳಾಗಿವೆ. 'ಜೈಮಿನಿ ಭಾರತ' ಕಾವ್ಯವು ಗಮಕ ಪ್ರಕಾರಕ್ಕೆ ಯಕ್ಷಗಾನ ಆಟಗಳ ಸೃಷ್ಟಿಗೆ ಹಾಗೂ ಆಧುನಿಕ ಕಾವ್ಯಗಳ ಮೇಲೆ

ಹೇಗೆ ಪ್ರಭಾವ ಬೀರಿದೆ ಎಂಬ ಅಂತರ್‌ಸಂಬಂಧ ಶೋಧನೆಯು *ಈ* ಕೃತಿಯಲ್ಲಿ ಫಲಿತಗೊಂಡಿದೆ.

**೨೦೧. ತೇಜಸ್ವಿ ಕಥೆಗಳ ಕುರಿತು**

ಲೇ: ಕರೀಗೌಡ ಬೀಚನಹಳ್ಳಿ

ಪುಟ: iv+೨೮, ವರ್ಷ: ೧೯೯೮, ರೂ: ೫.೦೦

ಕನ್ನಡದ ಖ್ಯಾತ ಬರಹಗಾರರಾಗಿರುವ ತೇಜಸ್ವಿ ಅವರ ಒಟ್ಟು ಸಣ್ಣ ಕಥಾ ಸಾಹಿತ್ಯವನ್ನು ಅಧ್ಯಯನ ಮಾಡಿ ಇಲ್ಲಿ ವಿಮರ್ಶಿಸಲಾಗಿದೆ.




**೨೦೨. ದಲಿತ ಸಾಹಿತಿ ಕುಮಾರ ಕಕ್ಕಯ್ಯ ಪೋಳ**

ಲೇ: ಎಚ್.ಟಿ.ಪೋತೆ

ಪುಟ: iv+೩೮, ವರ್ಷ: ೨೦೦೮, ರೂ: ೧೦.೦೦

ಆಧುನಿಕ ವಚನಕಾರರಲ್ಲಿ ಒಬ್ಬರಾದ ಮೊದಲ ತಲೆಮಾರಿನ ದಲಿತ ಸಾಹಿತಿ ಕುಮಾರ ಕಕ್ಕಯ್ಯಪೋಳ ಅವರ ಬದುಕು, ಸಾಹಿತ್ಯ ಸಾಧನೆಯ ಬಗ್ಗೆ *ಈ* ಕೃತಿಯಲ್ಲಿ ಸಾಕಷ್ಟು ಮಹತ್ವಪೂರ್ಣ ಮಾಹಿತಿಗಳಿವೆ.




**೨೦೩. ದಶಕದ ಕನ್ನಡ ಸಾಹಿತ್ಯ**

ಸಂ: ಎಫ್.ಟಿ.ಹಳ್ಳಿಕೇರಿ ಮತ್ತು ಕೆ.ರವೀಂದ್ರನಾಥ

ಪುಟ: xvi+೩೨೮, ವರ್ಷ: ೨೦೦೨, ರೂ: ೧೫೦.೦೦

ಪರಿವಿಡಿ

೧. ಕಾವ್ಯ; ಸಣ್ಣಕಥೆ; ಕಾದಂಬರಿ
೨. ಆತ್ಮಕಥೆ; ಜೀವನ ಚರಿತ್ರೆ
೩. ಲಲಿತ ಪ್ರಬಂಧ; ಸಾಹಿತ್ಯ ವಿಮರ್ಶೆ
೪. ಮಕ್ಕಳ ಸಾಹಿತ್ಯ; ಪ್ರವಾಸ ಸಾಹಿತ್ಯ; ಅಂಕಣ ಸಾಹಿತ್ಯ
೫. ಗ್ರಂಥ ಸಂಪಾದನೆ; ಸಂಶೋಧನೆ
೬. ಅನುವಾದ
೭. ಜಾನಪದ
೮. ಭಾಷೆ, ಕೋಶ ರಚನೆ, ಛಂದಸ್ಸು
೯. ನಾಟಕ; ಅಭಿನಂದನಾ ಗ್ರಂಥಗಳು; ವಿಚಾರ ಸಾಹಿತ್ಯ
೧೦. ಸಾಂಸ್ಕೃತಿಕ ಚಿಂತನೆ; ಮಾನವಿಕ ವಿಜ್ಞಾನ; ಸಾಹಿತ್ಯ ಲಲಿತ ಕಲೆಗಳು

*ಈ* ದಶಕದಲ್ಲಿ (೧೯೯೧-೨೦೦೦) ಪ್ರಕಟವಾದ ಸೃಜನ ಮತ್ತು ಸೃಜನೇತರ ಸಾಹಿತ್ಯ ಪ್ರಕಾರಗಳ ಸಮೀಕ್ಷಾ ಬರಹಗಳು ಇಲ್ಲಿವೆ. *ಈ* ಸಮೀಕ್ಷಾ ಬರಹಗಳು ವಿಮರ್ಶಾ ಬರಹಗಳಾಗಿಯೂ ರೂಪುಗೊಂಡಿರುವುದು ಇಲ್ಲಿನ ವೈಶಿಷ್ಟ್ಯ.




**೨೦೪. ದೇವಚಂದ್ರನ ರಾಜಾವಳಿ ಕಥೆ**

ಸಂ: ವೆಂಕಟೇಶ ಇಂದ್ವಾಡಿ

ಪುಟ: XX+೧೫೪, ವರ್ಷ: ೨೦೦೩, ರೂ: ೭೦.೦೦

ಪರಿವಿಡಿ

೧. ರಾಜಾವಳಿ ಕಥೆ : ಮತ ಪ್ರಪಂಚ
೨. ರಾಜಾವಳಿ ಕಥೆ ಕಾಣಿಸುವ ಕರ್ನಾಟಕದ 'ಪ್ರಪಂಚು'ಗಳು
೩. ಜಾನಪದ ಪಠ್ಯವಾಗಿ ರಾಜಾವಳಿ ಕಥೆ
೪. ರಾಜಾವಳಿಯಲ್ಲಿ ಕನಕಗಿರಿ
೫. ರಾಜವಳಿ ಕಥೆ : ಹಲವರ ಅಧ್ಯಯನ-ಅಭಿಪ್ರಾಯಗಳು

ಕರ್ನಾಟಕ ಚರಿತ್ರೆಯ ಒಂದು ಸಂಘರ್ಷ ಗಳಿಗೆಯಲ್ಲಿ ಹುಟ್ಟಿದ ಸಂಕೀರ್ಣ ಕೃತಿ 'ರಾಜಾವಳಿ ಕಥೆ'ಯನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ಹೊಸ ಬಗೆಯ ಓದಿಗೆ, ಚರ್ಚೆಗೆ ಒಳಪಡಿಸಿ *ಈ* ಕಾಲದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ದೇವಚಂದ್ರನ *ಈ* ಕೃತಿ ಎಷ್ಟು ಪ್ರಸ್ತುತ ಎಂದು ನೋಡಲು ಪ್ರಯತ್ನಿಸಲಾಗಿದೆ.




**೨೦೫. ನಾಗಾರ್ಜುನನ ಮಧ್ಯಮಮಾರ್ಗ**

ಲೇ: ಎಸ್. ನಟರಾಜ ಬೂದಾಳು

ಪುಟ: iv+೩೪, ವರ್ಷ: ೨೦೦೭, ರೂ: ೧೦.೦೦

ಕ್ರಿ.ಶ. ಎರಡನೆಯ ಶತಮಾನದಲ್ಲಿದ್ದ ನಾಗಾರ್ಜುನ ಕನ್ನಡದ ನೆಲದವನು. *ಈತ* ಬುದ್ಧನ ಕೇಂದ್ರ ತಾತ್ವಿಕತೆಯಾದ ಮಧ್ಯಮ ಮಾರ್ಗವನ್ನು ಚಿಂತನಾ ಪ್ರಸ್ಥಾನದ ರೂಪದಲ್ಲಿ ವಿಶ್ವಕ್ಕೆ ಒದಗಿಸಿ ಕೊಟ್ಟವನು. ನಾಗಾರ್ಜುನನ ಪ್ರಧಾನ ಕೃತಿ 'ಮಧ್ಯಮಕಾರಿಕಾವು'; ಇದರಲ್ಲಿ ಒಟ್ಟು ೪೪೯ ಕಾರಿಕೆಗಳಿಂದ ಕೂಡಿದ ೨೭ ಅಧ್ಯಾಯಗಳಿವೆ. ಇದರ ಕುರಿತು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.

**೨೦೬. ನುಡಿವ ಬೆಡಗು**

ಸಂ: ಅಮರೇಶ ನುಗಡೋಣಿ

ಪುಟ: x+೧೦೦, ವರ್ಷ: ೧೯೯೯, ರೂ: ೪೦.೦೦



ಪರಿವಿಡಿ

೧. ಹೈದರಾಬಾದು ಕರ್ನಾಟಕದ ಒಡಲಲ್ಲಿ

೨. 'ಕವಿರಾಜಮಾರ್ಗ'ಕಾರನ ಆದರ್ಶ

೩. ಚರಿತ್ರೆಯಲ್ಲಿ ಪ್ರಭುತ್ವವಾದಿಗಳು, ಸಂತರು ಮತ್ತು ಜನ ಸಮುದಾಯಗಳು

೪. ಅನುಭಾವದ ನೆಲೆಗಾಗಿ ಹುಡುಕಾಟ; ಅನುಭಾವದ ನೆಲೆಯಲ್ಲಿ ಲೌಕಿಕವನ್ನು ಗ್ರಹಿಸುವುದು

೫. ಮಾನಗೇಡಿ ಮಂದಿಹುಟ್ಟಿ ಮರ್ತ್ಯಾ ಕೆಡಿಸ್ಯಾರೊ

೬. ಆಧುನಿಕತೆ ಮತ್ತು ತತ್ವಪದಕಾರರು

೭. ಮುಸ್ಲಿಮ್ ತತ್ವಪದಕಾರರು

೮. ತಂಗಿ ನಿನಗೇನು ಖೂನ; ನೆಲಮೂಲ ನುಡಿಗಟ್ಟಿನಲ್ಲಿ ಮೂಡಿದ ತತ್ವಪದಗಳು

೯. ಗುರುಮಾರ್ಗದವರ ಇನ್ನೊಂದು ಕವಲು: ಒಂದು ಮುಕ್ತಾಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತತ್ತ್ವಪದ ಸಾಹಿತ್ಯವು ತನ್ನದೇ ಆದ ಸ್ಥಾನವನ್ನು ಪಡೆದಿದೆ. ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನದಲ್ಲಿ ಹೈದರಾಬಾದು ಕರ್ನಾಟಕದಲ್ಲಿ ಪ್ರಧಾನ ಪ್ರಕಾರವಾಗಿ ಬೆಳೆದ ತತ್ತ್ವಪದ ಸಾಹಿತ್ಯವನ್ನು ಹೊಸ ಆಲೋಚನೆಗಳ ಬೆಳಕಿನಲ್ಲಿಟ್ಟು ಶೋಧಿಸುವ ಕೆಲಸವನ್ನಿಲ್ಲಿ ಮಾಡಲಾಗಿದೆ. *ಈ* ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿ ಬರೆದಿರುವ ೧೫ ಲೇಖನಗಳು *ಈ* ಗ್ರಂಥದಲ್ಲಿವೆ.

**೨೦೭. ನೂರು ಮರ ನೂರು ಸ್ವರ**

ಲೇ: ಕೀರ್ತಿನಾಥ ಕುರ್ತಕೋಟಿ

ಪುಟ: viii+೪೧೨, ವರ್ಷ: ೧೯೯೮, ರೂ: ೧೨೦.೦೦

ಪರಿವಿಡಿ

೧. ಹಳೆಗನ್ನಡ ಕವಿ ಕಾವ್ಯ ವಿಮರ್ಶೆ

೨. ಪ್ರಾಚೀನ ಕವಿ ಕಾವ್ಯ ವಿಮರ್ಶೆ

೩. ನವೋದಯ ಸಾಹಿತ್ಯ ವಿಮರ್ಶೆ

೪. ಪ್ರಗತಿಶೀಲ ನವ್ಯ ಬಂಡಾಯ ಸಾಹಿತ್ಯ ಕಾಲಘಟ್ಟದ ಸಾಹಿತ್ಯ ವಿಮರ್ಶೆ

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆ ಮತ್ತು ವಿವಿಧ ಪ್ರಯೋಗಗಳ ಬಗ್ಗೆ ಹಾಗೂ ಅದರ ಆಶೋತ್ತರಗಳ ಬಗ್ಗೆ ವಿವರವಾಗಿ *ಈ* ಗ್ರಂಥದಲ್ಲಿ ಬರೆಯಲಾಗಿದೆ. ಆಧುನಿಕ ಕನ್ನಡ ಲೇಖಕರ ಹಾಗೂ ಕೆಲವು ಮಹತ್ವದ ಕೃತಿಗಳ ಬಗ್ಗೆ ಆಳವಾದ ವಿಶ್ಲೇಷಣೆಯನ್ನು *ಈ* ಗ್ರಂಥದಲ್ಲಿ ಕಾಣಬಹುದು.

**೨೦೮. ಪತ್ರ ಸಾಹಿತ್ಯ**

ಲೇ: ಡಿ.ವಿ.ಗುರುಪ್ರಸಾದ್

ಪುಟ: iv+೨೮, ವರ್ಷ: ೨೦೦೧, ರೂ: ೧೦.೦೦

ಪತ್ರಗಳನ್ನು ಸಾಹಿತ್ಯ ಪ್ರಕಾರಕ್ಕೆ ಯಾಕೆ ಸೇರಿಸಬಾರದು, ಅವುಗಳನ್ನು ಒಂದು ಸಾಹಿತ್ಯ ಪ್ರಕಾರವೆಂದು ಹೇಗೆ ಪರಿಗಣಿಸಬಹುದು ಎಂಬ ಬಗ್ಗೆ ಸಕಾರಣಗಳನ್ನು ನೀಡಿ ಇಲ್ಲಿ ಚರ್ಚಿಸಲಾಗಿದೆ.




**೨೦೯. ಪದಗತಿ ಪಾದಗತಿ**

ಲೇ: ತುಳಸಿ ರಾಮಚಂದ್ರ

ಪುಟ: xiv+೪೨೮, ವರ್ಷ: ೨೦೦೧, ರೂ: ೨೦೦.೦೦

ಪರಿವಿಡಿ

೧. ನೃತ್ಯದ ಸ್ವರೂಪ

೨. ನೃತ್ಯದ ಪರಿಕರಗಳು ಮತ್ತು ಭೂಮಿಕೆ

೩. ಕನ್ನಡ ಕಾವ್ಯಗಳಲ್ಲಿನ ನೃತ್ಯ ಪ್ರಸಂಗಗಳ ವಿಶ್ಲೇಷಣೆ

ಸಾವಿರ ವರ್ಷಗಳ ಕನ್ನಡ ಕಾವ್ಯ ಪರಂಪರೆಯ ಎಲ್ಲ ಮಜಲುಗಳನ್ನು ಆಳವಾಗಿ ಮತ್ತು ಸೂಕ್ಷ್ಮವಾಗಿ ಅಭ್ಯಸಿಸಿ ಸಮುದ್ರ ವಿಸ್ತಾರವುಳ್ಳ ಸಾಹಿತ್ಯ ಗರ್ಭದಿಂದ ಸಾಂದರ್ಭಿಕ ನೃತ್ಯ ಚಿತ್ರಗಳನ್ನು ಮತ್ತು ಅವುಗಳ ವಿವಿಧ ರೂಪ ಸ್ವರೂಪಗಳನ್ನು ಆರಿಸಿ *ಈ* ಗ್ರಂಥದಲ್ಲಿ ವಿಶ್ಲೇಷಿಸಲಾಗಿದೆ. ಕನ್ನಡ ಕಾವ್ಯಗಳಲ್ಲಿ ನೃತ್ಯಕಲೆಯ ಉಗಮ ಮತ್ತು ವಿಕಾಸಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

**೨೧೦. ಪಾಂಡಿತ್ಯರಸ**

ಲೇ: ಎಂ.ಚಿದಾನಂದಮೂರ್ತಿ

ಪುಟ: ೧೦೦, ವರ್ಷ: ೨೦೦೦, ರೂ: ೨೦.೦೦

ಡಾ. ಎಂ.ಚಿದಾನಂದಮೂರ್ತಿಯವರ ನಲವತ್ತು ವರ್ಷಗಳ (೧೯೬೦-೨೦೦೦) ತಮ್ಮ ಸಂಶೋಧನ ಜೀವನದಲ್ಲಿ ಅವರಿಗಾದ ಸಂತೋಷ, ಆನಂದ, ಹತಾಶೆ, ನಿರಾಶೆ, ಶ್ರಮ, ಹೊಳಹುಗಳ ಕಥನವೇ *ಈ* ಕೃತಿಸಾರ.

**೨೧೧. ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ**

ಸಂ: ಸಿ.ಆರ್. ಯರವಿನತೆಲಿಮಠ

ಪುಟ: x+೨೭೨, ವರ್ಷ: ೨೦೦೦, ರೂ: ೧೫೦.೦೦



ಪರಿವಿಡಿ

೧. ಅಭಿಜಾತವಾದ, ರಮ್ಯವಾದ
೨. ವಾಸ್ತವವಾದ, ಪ್ರಗತಿಶೀಲತೆ
೩. ಭಾವಮುದ್ರಾವಾದ, ಮನೋಮುದ್ರಾವಾದ
೪. ಪ್ರತಿಮಾವಾದ, ಸಂಕೇತವಾದ
೫. ಅಸ್ತಿತ್ವವಾದ, ನವ್ಯವಾದ
೬. ನವ್ಯೋತ್ತರವಾದ

ಪಾಶ್ಚಾತ್ಯ ಸಾಹಿತ್ಯವಾದಗಳನ್ನು ಕನ್ನಡ ಸಾಹಿತ್ಯದೊಂದಿಗೆ ಅನ್ವಯಿಸಿ ಅಧ್ಯಯನ ನಡೆಸಿದ ಮಾದರಿ ಇಲ್ಲಿದೆ. ಒಂದು ಬಗೆಯಲ್ಲಿ ಆಧುನಿಕ ಮೀಮಾಂಸಾ ಶಾಸ್ತ್ರವಾಗಿ ರೂಪಿಸುವ ಪ್ರಯತ್ನವಿದು. ಕನ್ನಡ ನವೋದಯ ಮತ್ತು ನವ್ಯಸಾಹಿತ್ಯಗಳ ಮೇಲೆ ಪಾಶ್ಚಾತ್ಯ ಸಾಹಿತ್ಯವಾದಗಳ ಪ್ರಭಾವದ ಕುರಿತು ಇಲ್ಲಿ ಚರ್ಚಿಸಲಾಗಿದೆ.

**೨೧೨. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಚಿತ್ರಗಳು**

ಲೇ: ಎಚ್.ಜಿ. ಶ್ರೀಧರ್

ಪುಟ: ii+೩೮, ವರ್ಷ: ೨೦೦೦, ರೂ: ೧೦.೦೦

ಕ್ರಿ.ಶ. ೧೩೫೦ರವರೆಗಿನ ಪ್ರಾಚೀನ ಕನ್ನಡ ಸಾಹಿತ್ಯಗಳನ್ನು ವಿಶ್ಲೇಷಿಸಿ, ಅಲ್ಲಿ ದಾಖಲಾದ ಪ್ರಾಚೀನ ಭಾರತದ ಯುದ್ಧವರ್ಣನೆ, ಯುದ್ಧ ಚಿತ್ರಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಆ ಕಾಲದ ಯುದ್ಧಗಳಿಗೆ ಸಂಬಂಧಿಸಿದಂತೆ ಸೈನ್ಯ ಬಲ, ಗಜ ಬಲ, ಅಶ್ವ ಬಲ, ವಿವಿಧ ಆಯುಧಗಳು, ಕೋಟೆಯ ರಚನೆ, ಕೋಟೆ ಕಾಳಗ ಇತ್ಯಾದಿಗಳ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ದಾಖಲಾಗಿರುವುದನ್ನು *ಈ* ಕಿರುಪುಸ್ತಕದಲ್ಲಿ ವಿವೇಚಿಸಲಾಗಿದೆ.

**೨೧೩. ಬಂಡಾಯ ಸಾಹಿತ್ಯ**

ಲೇ: ಬಸವರಾಜ ಸಬರದ

ಪುಟ: iv+೫೨, ವರ್ಷ: ೨೦೦೧, ರೂ: ೧೦.೦೦

ಕನ್ನಡ ಬಂಡಾಯ ಸಾಹಿತ್ಯ ಹಾಗು ಬಂಡಾಯ ಸಾಹಿತ್ಯ ಚಳುವಳಿ ಸಂಘಟನೆ ಬಗ್ಗೆ *ಈ* ಕೃತಿ ವಿವರಗಳನ್ನು ನೀಡುತ್ತದೆ.

**೨೧೪. ಬಯಲು ಆಲಯ**

ಲೇ: ಕೀರ್ತಿನಾಥ ಕುರ್ತಕೋಟಿ

ಪುಟ: viii+೧೨೪, ವರ್ಷ: ೧೯೯೨, ರೂ: ೨೫.೦೦

ನಮ್ಮ ನವೋದಯ ಸಾಹಿತ್ಯದ ಹಿಂದಿರುವ ಪ್ರೇರಣೆ, ಆಶಯ ಮತ್ತು ಉದ್ದೇಶಗಳನ್ನು ವಿವರವಾಗಿ ಚರ್ಚಿಸುವ ಒಂದು ವಿಮರ್ಶಾತ್ಮಕ ಗ್ರಂಥವಿದು. ಕುರ್ತಕೋಟಿಯವರ ಸಾಹಿತ್ಯ ವಿಮರ್ಶೆ ನಮ್ಮ ಕಾಲದ ಅಪರೂಪದ ಚಿಂತನೆಗಳನ್ನು ಒಳಗೊಂಡಿರುವುದರಿಂದ ಇಲ್ಲಿನ ಬರವಣಿಗೆ ಬಹಳ ಮಹತ್ತ್ವದ್ದಾಗಿದೆ.



**೨೧೫. ಬಸವತತ್ವ : ಸಾಮಾಜಿಕ ಬದಲಾವಣೆ**

ಸಂ: ಮಹೇಶ ತಿಪ್ಪಶೆಟ್ಟಿ

ಪುಟ: X+೧೫೮, ವರ್ಷ: ೨೦೦೩, ರೂ: ೬೦.೦೦

ಪರಿವಿಡಿ

೧. ಸೋಹಂ ಎನಿಸದೆ ದಾಸೋಹಂ ಎನಿಸಯ್ಯ
೨. ಬಸತತ್ವಗಳ ಸಮಾಜಶಾಸ್ತ್ರೀಯ ವಿಶ್ಲೇಷಣೆ: ಒಂದು ಅವಶ್ಯಕತೆ
೩. ಮಹಿಳಾ ನಿರಂಜನ ಗುರುವಿಗೆ ಹುಡುಕಾಟ : 'ಇಹ'ಕ್ಕೆ ಹೊಸ ಅರ್ಥ ನೀಡಿದ ಬಸವ
೪. ಬಸವಯುಗ : ಕರ್ನಾಟಕದಲ್ಲಿ ಪ್ರತಿಭಟನೆಯ ಪೀಠಿಕೆ
೫. ಬಸವತತ್ವ : ಒಂದು ಪ್ರತಿಭಟನೆಯ ಚಳುವಳಿಯಾಗಿ
೬. ಮಠಗಳು ಹಾಗೂ ಆಧುನೀಕರಣ
೭. ವಚನ ಸಂಸ್ಕೃತಿ : *ಈಚಿನ* ಒಲವುಗಳು
೮. ಬಸವತತ್ವ : ಇತ್ತೀಚಿನ ಒಲವುಗಳು; ಬಸವತತ್ವ: ತಳವರ್ಗದ ದೃಷ್ಟಿಯಲ್ಲಿ
೯. ಬಸವತತ್ವ : ಮಹಿಳೆ
೧೦. ಸಂಗಮ : ಬಿಕ್ಕಟ್ಟಿನ ಪರಿಹಾರ

ಬಸವತತ್ವ ಸಮಕಾಲೀನ, ಸಾಮಾಜಿಕ ಬದಲಾವಣೆಗೆ ಎಷ್ಟು ಪರಿಣಾಮಕಾರಿಯಾಗಿ ಮಿಡಿಯುತ್ತಿದೆ, ತುಡಿಯುತ್ತಿದೆ ಎಂಬುದನ್ನು ವಿವಿಧ ದೃಷ್ಟಿಕೋನಗಳಿಂದ ಇಲ್ಲಿ ವಿಶ್ಲೇಷಿಸ ಲಾಗಿದೆ. ಧರ್ಮದ ಬಗ್ಗೆ, ತಳವರ್ಗದ ಜನಮನಸ್ಸಿನ ಅನಿಸಿಕೆಗಳ ಬಗ್ಗೆ, ಮಹಿಳೆಯರು ಮತ್ತು ತಳವರ್ಗದವರಿಗೆ ಬಸವತತ್ವ ತನ್ನ ಅಂತ್ಯದಲ್ಲಿ ಇಟ್ಟುಕೊಂಡಿರುವ ವಿಧಾನಗಳ ಬಗ್ಗೆ, ಸಮಾಜ ಮತ್ತು ಜೀವನ ವಿರುದ್ಧ ಪ್ರವೃತ್ತಿಗಳನ್ನು ವಿರೋಧಿಸಿದ್ದ ಬಗ್ಗೆ, ಸಮಾಜ ಶಾಸ್ತ್ರೀಯ ಪರಿಕಲ್ಪನೆಗಳ ಬಗ್ಗೆ, ಬಸವತತ್ವ ಹೇಗೆ ಪ್ರತಿಕ್ರಿಯಿಸಿದೆ ಎಂಬ ಮುಕ್ತಚಿಂತನೆ *ಈ* ಕೃತಿಯಲ್ಲಿದೆ.

**೨೧೬. ಬಸವಣ್ಣನ ವಚನಗಳು : ಸಾಂಸ್ಕೃತಿಕ ಮುಖಾಮುಖಿ**

ಸಂ: ಅಮರೇಶ ನುಗಡೋಣಿ

ಪುಟ: XVI+೨೪೨, ವರ್ಷ: ೨೦೦೪, ರೂ: ೧೦೦.೦೦



ಪರಿವಿಡಿ
೧. ವೀರಶೈವ ಚಳವಳಿಯ ಹುಟ್ಟು
೨. ವಚನ ಚಳವಳಿ ಮತ್ತು ಬಸವಣ್ಣ
೩. ಪ್ರಭುತ್ವ, ದಲಿತರು ಮಹಿಳೆ; ಬಸವಣ್ಣನ ನಿಲುವು
೪. ಆಧುನಿಕಪೂರ್ವ ಪಠ್ಯ; ಜನಪದ ಪಠ್ಯಗಳು: ಬಸವಣ್ಣನನ್ನು ಕುರಿತ ಗ್ರಹಿಕೆಗಳು
೫. ಆಧುನಿಕ ಪಠ್ಯಗಳು : ಬಸವಣ್ಣನ ಕುರಿತ ಗ್ರಹಿಕೆಗಳು
೬. ಬಸವಣ್ಣನ ವಚನಗಳಲ್ಲಿ ಸಾಹಿತ್ಯ ತತ್ವಗಳು
೭. ಬಸವಣ್ಣನವರ ವಚನಗಳ ಶಿಲ್ಪವಿಧಾನ
೮. ಬಸವಣ್ಣನ ಪ್ರತಿನಿಧೀಕರಣದ ಅನುಸಂಧಾನಗಳು

ಆಧುನಿಕಪೂರ್ವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಾಗೂ ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ವಚನ ಸಾಹಿತ್ಯದ ಮೂಲಕ ಮುಂಚೂಣಿಯ ಸ್ಥಾನ ಪಡೆದುಕೊಂಡಿರುವ ಬಸವಣ್ಣನವರ ಚಿಂತನೆಗಳನ್ನು, ಮರು ಓದಿಗೆ ಒಳಪಡಿಸಿ ಇಂದಿಗೂ ಪ್ರಸ್ತುತವಾಗಿರುವ ಆ ಚಿಂತನೆಗಳನ್ನು ಹಲವು ದೃಷ್ಟಿಕೋನಗಳಲ್ಲಿ ವಿಮರ್ಶಾತ್ಮಕವಾಗಿ ಚರ್ಚಿಸಿರುವುದನ್ನು *ಈ* ಕೃತಿಯಲ್ಲಿ ಕಾಣಬಹುದು.

### ೨೧೭. ಬೇಂದ್ರೆ ಕಾವ್ಯದಲ್ಲಿ ಸ್ತ್ರೀ

ಲೇ: ಶೇಷ ನವರತ್ನ
ಪುಟ: iv+೩೦, ವರ್ಷ: ೨೦೦೧, ರೂ: ೧೦.೦೦

ಆಧುನಿಕ ಕನ್ನಡ ಕಾವ್ಯದ ಆಚಾರ್ಯ ಪುರುಷರಲ್ಲಿ ಒಬ್ಬರಾದ ಬೇಂದ್ರೆಯವರ ಭಾವಗೀತೆಗಳಲ್ಲಿ ರೂಪಿತವಾದ ಸ್ತ್ರೀತ್ವದ ಶ್ರೀಮಂತ ಚಿತ್ರಣವನ್ನು *ಈ* ಕಿರುಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ.

### ೨೧೮. ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ

ಲೇ: ಕೃಷ್ಣ ಕಟ್ಟಿ
ಪುಟ: viii+೨೦೪, ವರ್ಷ: ೧೯೯೬, ರೂ: ೮೦.೦೦

ಪರಿವಿಡಿ
೧. ಆಧುನಿಕ ಭಾವಗೀತೆ ಸ್ವರೂಪ, ಪರಿಭಾಷೆ
೨. ಬೇಂದ್ರೆಯವರ ಭಾವಗೀತೆಯ ಸ್ವರೂಪ
೩. ಬೇಂದ್ರೆಯವರ ದೀರ್ಘ ಕವನಗಳು
೪. ಬೇಂದ್ರೆಯವರ ಕಾವ್ಯ
೫. ಮೂರ್ತಿ ಮತ್ತು ಬಾಲಬೋಧೆ

ಆಧುನಿಕ ಕನ್ನಡ ಭಾವಗೀತೆಗಳ ಸ್ವರೂಪದ ಜತೆಗೆ ಬೇಂದ್ರೆಯವರ ಭಾವಗೀತೆಗಳ ಸ್ವರೂಪವನ್ನು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿರುವ ಕೃತಿಯಿದು.



### ೨೧೯. ಮಂಟೇಸ್ವಾಮಿ ಕಾವ್ಯ : ಸಾಂಸ್ಕೃತಿಕ ಮುಖಾಮುಖಿ

ಸಂ: ವೆಂಕಟೇಶ ಇಂದ್ವಾಡಿ
ಪುಟ: XVI+೨೯೪, ವರ್ಷ: ೨೦೦೪, ರೂ: ೧೨೦.೦೦

ಪರಿವಿಡಿ
೧. ವಿಸರ್ಜಿತ ಲೋಕಗಳಿಂದ ಹುಟ್ಟಿಬಂದ ಆಧ್ಯಾತ್ಮಿಕ ದಂಗೆಕೋರ
೨. ಮಂಟೇಸ್ವಾಮಿ: ಸೃಜನಶೀಲ ಅನುಸಂಧಾನ
೩. ಮಂಟೇಸ್ವಾಮಿ ಪರಂಪರೆ: ಕುಲಸ್ಥಾಪನೆಯ ಯತ್ನ; ಅಪವಸಾಹತೀಕರಣಗೊಳಿಸುವ ಬಗೆ
೪. ಮಂಟೇಸ್ವಾಮಿ ಕಾವ್ಯ: ಅಂತರ್‌ಪಠ್ಯೀಯತೆ
೫. ಮಂಟೇಸ್ವಾಮಿ: ಜನಪ್ರಿಯ ಸಂಸ್ಕೃತಿ
೬. ಮಂಟೇಸ್ವಾಮಿ: ಸಿದ್ಧಪರಂಪರೆಗಳ ಹಿನ್ನೆಲೆಯಲ್ಲಿ
೭. ಮಂಟೇಸ್ವಾಮಿ ಕಾವ್ಯ: ಚಾರಿತ್ರಿಕ ಸಂಘರ್ಷಗಳ ಸ್ವರೂಪ
೮. ಮಂಟೇಸ್ವಾಮಿ ಕಾವ್ಯ: ಆಚರಣ ಲೋಕದ ವಿಶ್ಲೇಷಣೆ
೯. ಮಂಟೇಸ್ವಾಮಿ ಕಾವ್ಯ: ಕಥನಕ್ರಮದ ಸ್ವರೂಪ
೧೦. ಮಂಟೇಸ್ವಾಮಿ: ಪರ್ಯಾಯ ಸಂಸ್ಕೃತಿ ಹುಡುಕಾಟದ ಹಿನ್ನೆಲೆ

*ಈ* ಕೃತಿಯಲ್ಲಿ ಮಂಟೇಸ್ವಾಮಿ ಕಾವ್ಯವನ್ನು ಇಂದಿನ ಚಿಂತನೆಗೆ ತಕ್ಕಂತೆ ಮರುಓದಿಗೆ ಒಳಪಡಿಸಲಾಗಿದೆ. ಕಳೆದ ಒಂದು ದಶಕದಲ್ಲಿ ಮಂಟೇಸ್ವಾಮಿಯನ್ನು ಕುರಿತಂತೆ ನಡೆದ ಅಧ್ಯಯನವನ್ನು, ಅಕಾಡೆಮಿಕ್ ಚರ್ಚೆ ಚಟುವಟಿಕೆಗಳನ್ನು ಇಲ್ಲಿ ಸಮಗ್ರವಾಗಿ ದಾಖಲಿಸಲಾಗಿದೆ.

### ೨೨೦. ಮಧುರಚೆನ್ನರ ಲೇಖನಗಳು

ಸಂ: ಗುರುಲಿಂಗ ಕಾಪಸೆ
ಪುಟ: ೬೦೮, ವರ್ಷ: ೧೯೯೩, ರೂ: ೧೫೦.೦೦

ಪರಿವಿಡಿ

೧. ಸಂಶೋಧನಾತ್ಮಕ
೨. ಭಾಷಾಶಾಸ್ತ್ರ
೩. ಜನಪದ ಸಾಹಿತ್ಯ
೪. ಕವಿ ಪರಿಚಯ
೫. ಸಾಹಿತ್ಯಕ ಉಪನ್ಯಾಸಗಳು
೬. ಶರಣ ಸಾಹಿತ್ಯ
೭. ಶ್ರೀ ಅರವಿಂದ ಸಾಹಿತ್ಯ
೮. ಚಿಂತನಶೀಲ
೯. ಇತರ

ಮಧುರಚೆನ್ನರು ೧೯೩೬ರಿಂದ ೧೯೫೩ರವರೆಗೆ ಬರೆದ ಲೇಖನಗಳ ಗುಚ್ಛವೇ *ಈ* ಪುಸ್ತಕ. ವಿಷಯಗಳಿಗನುಗುಣವಾಗಿ ೧೦ ಅಧ್ಯಾಯಗಳುಳ್ಳ *ಈ* ಕೃತಿ ಎಪ್ಪತ್ತಮೂರು ಲೇಖನಗಳ ನ್ನೊಳಗೊಂಡಿದೆ. *ಈ* ಬರಹಗಳಲ್ಲಿ ವಿಷಯ ವೈವಿಧ್ಯ, ಅಧ್ಯಯನದ ಆಳ, ತೌಲನಿಕ ದೃಷ್ಟಿ, ಸಾಂಸ್ಕೃತಿಕ ಕಾಳಜಿ, ಆಧ್ಯಾತ್ಮಿಕ ಪ್ರಜ್ಞೆ ಪ್ರಮುಖವಾಗಿ ಪ್ರತಿಫಲಿಸುತ್ತಿವೆ.

### ೨೨೧. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪರಿಸರ

ಲೇ: ಶ್ರೀಧರ ಪಿಸ್ಸೆ
ಪುಟ: iv+೪೬, ವರ್ಷ: ೨೦೦೬, ರೂ: ೧೦.೦೦

ಮಧ್ಯಯುಗದ ಕಾಲಘಟ್ಟದ ಕನ್ನಡ ಸಾಹಿತ್ಯವೆಲ್ಲ ಮತ ಧರ್ಮ ಮತ್ತು ಭಕ್ತಿಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡಿವೆ. ಆ ಕಾಲದ ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿಸಲ್ಪಟ್ಟಿರುವ ಸಾಂಸ್ಕೃತಿಕ ಪರಿಸರದ ಒಂದು ಪಕ್ಷಿನೋಟ *ಈ* ಕಿರು ಕೃತಿಯಲ್ಲಿ ದಾಖಲಾಗಿದೆ.

### ೨೨೨. ಮರದೊಳಗಣ ಕಿಚ್ಚು

ಲೇ: ರಹಮತ್ ತರೀಕೆರೆ
ಪುಟ: xii+೨೭೪, ವರ್ಷ: ೧೯೯೬, ರೂ: ೯೦.೦೦

ಪರಿವಿಡಿ

೧. ಪ್ರಮಾಣ
೨. ತೊಡಕು
೩. ನಿರ್ಮಾಣ

ಪ್ರತಿಸಂಸ್ಕೃತಿ ಎಂಬ ಪರಿಕಲ್ಪನೆ ಮೂಲಕ ಆಧುನಿಕ ಕನ್ನಡ ಸಾಹಿತ್ಯವನ್ನು ವಿಶ್ಲೇಷಣೆ ಮಾಡಿರುವ ಕೃತಿ ಇದು. ಕನ್ನಡ ಸಾಹಿತ್ಯ ಸಂಸ್ಕೃತಿಗೆ ಕರ್ನಾಟಕ ಸಮಾಜದ ಅನೇಕ ಸ್ತರಗಳಿಂದ ಧ್ವನಿಗಳು ಬಂದು ಕೂಡಿರುವ *ಈ* ಹೊತ್ತಲ್ಲಿ ಹೊಸ ಹೊಸ ಪರಿಕಲ್ಪನೆಗಳು ಸಾಹಿತ್ಯ ಪ್ರವೇಶಿಸುವ ಅಗತ್ಯ ಕೂಡಾ ಇದೆ. ಪ್ರತಿಸಂಸ್ಕೃತಿ ಪರಿಕಲ್ಪನೆಯನ್ನು ಸಾಹಿತ್ಯ ಕೃತಿಗಳು ಒಳಗೊಂಡಿರುವ ಹಾಗು ಒಳಗೊಳ್ಳದ ಬಗೆಗಳನ್ನು ಇಲ್ಲಿ ಚರ್ಚಿಸಲಾಗಿದೆ.




### ೨೨೩. ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ

ಲೇ: ಕೇಶವಶರ್ಮ ಕೆ.
ಪುಟ: x+೧೭೦, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ಸಾಹಿತ್ಯದ ಪರಿಕಲ್ಪನೆ: ಮಾರ್ಕ್ಸ್‌ವಾದಿ ದೃಷ್ಟಿಕೋನ; ಸಾಹಿತ್ಯ ಉತ್ಪಾದನೆ ಮತ್ತು ತಾತ್ವಿಕತೆ
೨. ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ; ಮಾರ್ಕ್ಸ್‌ವಾದಿ ವಿಮರ್ಶಾ ತತ್ವಗಳು
೩. ವ್ಯಕ್ತಿ ವಿಶಿಷ್ಟತೆಯ ಪರಿಕಲ್ಪನೆ ಮತ್ತು ಸಾಹಿತ್ಯ ವಿಮರ್ಶೆ; ನೆನಿನ್‌ವಾದದಲ್ಲಿ ಸಾಹಿತ್ಯದ ಚಿಂತನೆಗಳು; ಸಾಹಿತ್ಯ ವಿಮರ್ಶೆಯ ಕಾರ್ಯ
೪. ಮಾರ್ಕ್ಸ್‌ವಾದ ಮತ್ತು ರಚನಾವಾದ; ಮಾರ್ಕ್ಸ್‌ವಾದ ಮತ್ತು ನಿರಚನವಾದ
೫. ಚಾರಿತ್ರಿಕ ಭೌತವಾದದ ಹಿನ್ನೆಲೆಯಲ್ಲಿ ಸ್ತ್ರೀವಾದ
೬. ಮಾರ್ಕ್ಸ್‌ವಾದದಲ್ಲಿ ಸಂಸ್ಕೃತಿಯ ದೃಷ್ಟಿಕೋನ; ವಸಾಹತುಶಾಹಿ ಅನುಭವ ಮತ್ತು ವಸಾಹತೋತ್ತರ ಅನುಭವ

ಆಧುನಿಕ ಸಾಹಿತ್ಯ ವಿಮರ್ಶೆಯಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ ಒಂದು ವಿಶೇಷ ಭಾಗವಾಗಿದೆ. *ಈ* ವಿಮರ್ಶೆಯ ವಿಧಾನವನ್ನು ಅನ್ವಯ ಮಾಡಿಕೊಳ್ಳದೇ ಸಾಹಿತ್ಯ ವಿಮರ್ಶೆ ಪೂರ್ಣವಾಗಲಾರದು. *ಈ* ಕೃತಿಯಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆಯ ಅಂಗೋಪಾಂಗ ಗಳನ್ನು ಪರಿಚಯ ಮಾಡಿಕೊಡುತ್ತಾ, ಮಾರ್ಕ್ಸ್‌ವಾದಿ ದೃಷ್ಟಿಕೋನದ ಮೂಲಕ ಸಾಹಿತ್ಯದ ಪರಿಕಲ್ಪನೆಯನ್ನು ವಿವರಿಸುತ್ತಾ ಸಾಹಿತ್ಯದ ಉತ್ಪಾದನೆಗೂ ಮತ್ತು ಅದರ ತಾತ್ವಿಕತೆಗೂ ಇರುವ ಸಂಬಂಧಗಳನ್ನು ಚರ್ಚಿಸಲಾಗಿದೆ. ಮಾರ್ಕ್ಸ್‌ವಾದ ಮತ್ತು ರಚನಾವಾದಕ್ಕೂ ನಿರಚನವಾದಕ್ಕೂ ಇರುವ ಅಂತರಗಳನ್ನು ವಿಮರ್ಶಿಸುತ್ತಾ, ವಸಹಾತುಶಾಹಿ ಅನುಭವ ಮತ್ತು ವಸಹಾತೋತ್ತರ ಅನುಭವಗಳನ್ನು ಮಾರ್ಕ್ಸ್‌ವಾದದ ಮೂಲಕ ಚರ್ಚಿಸಲಾಗಿದೆ.

**೨೨೪. ಮೂಕ ನಾಟಕ**

ಲೇ: ಅಶೋಕಕುಮಾರ ರೆಂಜೇರೆ

ಪುಟ: ii+೨೭, ವರ್ಷ: ೧೯೯೯, ರೂ: ೧೦.೦೦

ನಾಟಕದ ಹಲವು ಪ್ರಕಾರಗಳಲ್ಲಿ ತೀರ ಇತ್ತೀಚಿನ ಸೇರ್ಪಡೆ ಮೂಕ ನಾಟಕ. ಶಾಬ್ದಿಕ ಭಾಷೆಯೊಂದಿಗೆ ಬದುಕುತ್ತಿರುವ ನಾಟಕಕ್ಕಿಂತ ಭಿನ್ನ ಬಗೆಯಲ್ಲಿರುವ *ಈ* ಮೂಕ ನಾಟಕಗಳ ಸ್ವರೂಪ ಉದ್ದೇಶ ಹಾಗು ಕನ್ನಡದಲ್ಲಿ ಅವುಗಳ ಇತಿಮಿತಿಗಳನ್ನು *ಈ* ಕೃತಿ ಚರ್ಚಿಸಿದೆ.

**೨೨೫. ಮೌಖಿಕ ಕಾವ್ಯ ಸಂಯೋಜನ ಪ್ರಕ್ರಿಯೆ**

ಲೇ: ಎ.ವಿ.ನಾವಡ

ಪುಟ: ii+೩೬, ವರ್ಷ: ೨೦೦೦, ರೂ: ೧೦.೦೦ ಮ.ಮಾ

ಮೌಖಿಕ ಕಾವ್ಯ ಪರಂಪರೆಯಲ್ಲಿ ಕಾವ್ಯ ಸಂರಚನೆಗೊಳ್ಳುವ ಬಗ್ಗೆ ಹಾಗೂ ಮೌಖಿಕ ಸೂತ್ರಾತ್ಮಕ ಸಿದ್ಧಾಂತದ ಹಿನ್ನೆಲೆಯಲ್ಲಿ ತುಳು ಮೌಖಿಕ ಕಥನ ಸಂಪ್ರದಾಯ ಅಥವಾ ಪಾಡ್ದನಗಳ ಸಂಯೋಜನೆಯನ್ನು ಕುರಿತಂತೆ *ಈ* ಪ್ರಬಂಧದಲ್ಲಿ ವಿವೇಚಿಸಲಾಗಿದೆ.

**೨೨೬. ರಗಳೆಗಳ ನಾಮಕೋಶ**

ಲೇ: ಮೃತ್ಯುಂಜಯ ರುಮಾಲೆ

ಪುಟ: ೯೯, ವರ್ಷ: ೨೦೦೦, ರೂ: ೬೦.೦೦

ಧರ್ಮ, ಸಾಹಿತ್ಯಗಳ ಜೊತೆಗೆ ಐತಿಹಾಸಿಕ ಸಂಗತಿಗಳನ್ನು ತಿಳಿಸಿರುವ ಹರಿಹರನ ರಗಳೆಗಳಲ್ಲಿ ನಾಮಗಳು ಸಮೃದ್ಧವಾಗಿವೆ. ಅಂತಹ ನಾಮಗಳ ಕೋಶ ಇದಾಗಿದೆ. ಇದು ಡಾ. ಎಂ.ಎಂ. ಕಲಬುರ್ಗಿಯವರಿಂದ ಸಂಪಾದಿಸಲ್ಪಟ್ಟ 'ಹರಿಹರನ ರಗಳೆಗಳು' ಕೃತಿಯನ್ನು ಆಧರಿಸಿದ ನಾಮಕೋಶ. ಹರಿಹರನ ಐತಿಹಾಸಿಕ ಪ್ರಜ್ಞೆ ಮತ್ತು ಆತನ ವಿಶಾಲವಾದ ಅಭ್ಯಾಸವನ್ನು ಅರಿಯಲು *ಈ* ಪುಸ್ತಕ ಸಹಕಾರಿ.

**೨೨೭. ವಚನಕಾರರು ಮತ್ತು ದಲಿತ ಸಂವೇದನೆ**

ಲೇ: ಬಸವರಾಜ ಸಬರದ

ಪುಟ: VI+೩೪, ವರ್ಷ: ೨೦೦೪, ರೂ: ೧೦.೦೦

ಕನ್ನಡ ನಾಡಿನಲ್ಲಿ ಜಾತ್ಯತೀತ ಪರಿಕಲ್ಪನೆಯನ್ನು ಮೊಟ್ಟಮೊದಲು ಹುಟ್ಟುಹಾಕಿದ ಹನ್ನೆರಡನೇ ಶತಮಾನದ ವಚನಕಾರರು, ತಮ್ಮ ವಚನ ಚಳುವಳಿಯ ಮೂಲಕ ಅಭಿವ್ಯಕ್ತಗೊಳಿಸಿದ ದಲಿತ ಸಂವೇದನೆ-ಕಾಳಜಿಯ ಬಗ್ಗೆ *ಈ* ಕಿರುಕೃತಿ ಸಾಕಷ್ಟು ಮಹತ್ತ್ವದ ಮಾಹಿತಿಯನ್ನು ನೀಡುತ್ತದೆ.

**೨೨೮. ವಚನಗಳಲ್ಲಿ ಪ್ರಸಾದದ ಪರಿಕಲ್ಪನೆ**

ಲೇ: ಎಸ್.ಜಿ.ಮಹಾದೇವಪ್ಪ

ಪುಟ: ii+೪೧, ವರ್ಷ: ೧೯೯೪, ರೂ: ೨.೦೦

ವಚನಗಳ ಬಗ್ಗೆ ಸೂಕ್ಷ್ಮ ಅಧ್ಯಯನ ನಡೆಸಿದರೆ ಶರಣರ ಪ್ರಕಾರ ಅಲ್ಲಿ ಪ್ರಸಾದದ ಪರಿಕಲ್ಪನೆಗೆ ೫ ಸ್ತರದ ಅರ್ಥಗಳಿವೆ. *ಈ* ಅರ್ಥಗಳನ್ನು *ಈ* ಕಿರುಕೃತಿಯಲ್ಲಿ ವಿಶ್ಲೇಷಿಸಲಾಗಿದೆ.




**೨೨೯. ವಡ್ಡಾರಾಧನೆ : ಸಾಂಸ್ಕೃತಿಕ ಮುಖಾಮುಖಿ**

ಸಂ: ಬಿ.ಎಂ.ಪುಟ್ಟಯ್ಯ

ಪುಟ: xvi+೧೫೨, ವರ್ಷ: ೨೦೦೧, ರೂ: ೫೦.೦೦

ಪರಿವಿಡಿ

೧. ವಡ್ಡಾರಾಧನೆ : ಆಧುನಿಕ ಓದು
೨. ವಡ್ಡಾರಾಧನೆ : ಕಥನ ಸ್ವರೂಪ
೩. ವಡ್ಡಾರಾಧನೆ : ಲೌಕಿಕ ಅಧಿಕಾರ ಮತ್ತು ಮಧ್ಯಕಾಲೀನ ಜೈನ ಮತ
೪. ವಡ್ಡಾರಾಧನೆ : ಸ್ತ್ರೀವಾದಿ ನೆಲೆಯಲ್ಲಿ
೫. ವಡ್ಡಾರಾಧನೆ : ನನ್ನ ಓದು
೬. ವಡ್ಡಾರಾಧನೆ ಕಥೆಗಳು : ಶಿಷ್ಟ ದೃಷ್ಟಿಯ ಫಲ
೭. ವಡ್ಡಾರಾಧನೆ : ಸಾಮಾನ್ಯ ಮನುಷ್ಯನ ಓದು
೮. ವಡ್ಡಾರಾಧನೆ : ಸಾಂಸ್ಕೃತಿಕ ವಿಚಾರಗಳು
೯. ವಡ್ಡಾರಾಧನೆ : ಸಮಾನತೆ ಮತ್ತು ಪಾಪಪ್ರಜ್ಞೆ ಎಂಬ ಜ್ವಾಲೆ

ವಡ್ಡಾರಾಧನೆಯು ಕನ್ನಡದ ಮೊದಲ ಗದ್ಯ ಕೃತಿ. *ಈ* ಕೃತಿಯನ್ನು ಇಂದು ಸಾಹಿತ್ಯದ ಆಧುನಿಕ ಗ್ರಹಿಕೆಯ ನೆಲೆಯಲ್ಲಿ ನಿಂತು ಅಧ್ಯಯನ ಮಾಡಲಾಗಿದೆ. ವಡ್ಡಾರಾಧನೆಯನ್ನು ಗ್ರಹಿಸಲು ಹೊಚ್ಚ ಹೊಸದಾದ ಹಲವು ಆಯಾಮಗಳನ್ನು *ಈ* ಕೃತಿಯಲ್ಲಿನ ಲೇಖನಗಳು ತೋರಿಸುತ್ತವೆ. ಚಾರಿತ್ರಿಕ, ಸಾಹಿತ್ಯಿಕ, ಜಾನಪದೀಯ, ಮಹಿಳಾ ದೃಷ್ಟಿ, ಕೆಳಜಾತಿ ಕೆಳವರ್ಗಗಳ ನೆಲೆಗಳು, ಪ್ರಭುತ್ವದ ನೆಲೆ... ಇವೇ ಮುಂತಾದ ಹಲವು ದೃಷ್ಟಿಕೋನಗಳಿಂದ ವಡ್ಡಾರಾಧನೆಯನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**೨೩೦. ವಿ.ಕೃ. ಗೋಕಾಕ (ಕನ್ನಡ ಸಾಹಿತ್ಯ : *ಈ* ಶತಮಾನದ ನೋಟ ಮಾಲಿಕೆ)**

ಸಂ: ಮಲ್ಲೇಪುರಂ ಜಿ. ವೆಂಕಟೇಶ

ಪುಟ: xvi+೨೦೩, ವರ್ಷ: ೧೯೯೬, ರೂ: ೭೦.೦೦




ಪರಿವಿಡಿ

೧. ವ್ಯಕ್ತಿತ್ವ : ಕಾವ್ಯಸ್ವರೂಪ, ಕಾವ್ಯವ್ಯಕ್ತಿತ್ವ

೨. ಕಾವ್ಯ : ಅನ್ವಯಿಕ ವಿಮರ್ಶೆ

೩. ಭಾರತ ಸಿಂಧುರಶ್ಮಿ; ಸಮರಸವೇ ಜೀವನ

೪. ನವ್ಯ-ನವ್ಯತೆ ಚರ್ಚೆ; ವಿಮರ್ಶೆ

೫. ನಾಟಕ, ಪ್ರಬಂಧ ಇತರ; ಅನುಬಂಧಗಳು

೬. ಗೋಕಾಕರ ಬದುಕಿನ ಮೈಲಿಗಲ್ಲುಗಳು

ವಿ.ಕೃ. ಗೋಕಾಕರ ಕೃತಿಗಳನ್ನು ಕುರಿತು, ವಿವಿಧ ಕಡೆಗಳಲ್ಲಿ ಪ್ರಕಟವಾಗಿರುವ ವಿಮರ್ಶಾತ್ಮಕ ಬರಹಗಳನ್ನು ಒಂದೆಡೆ ಸಂಗ್ರಹಿಸಿಕೊಂಡು ಅವುಗಳಿಂದ ಕೆಲವು ಸಾಲುಗಳನ್ನು ಬೃಂದಗಳನ್ನೂ ಆಯ್ದುಕೊಂಡು ಒಂದು ಕ್ರಮದಲ್ಲಿ ಜೋಡಿಸಿ ಪ್ರಸ್ತುತ ಸಂಪುಟವನ್ನು ಸಿದ್ಧಗೊಳಿಸಲಾಗಿದೆ. *ಈ* ಸಂಪುಟವು ಕನ್ನಡ ಬರಹಗಳಿಗೆ ಹೆಚ್ಚು ಒತ್ತನ್ನು ನೀಡುವಂತೆ ಯೋಜಿಸಲಾಗಿದೆ. ಗೋಕಾಕರ ಕೃತಿಗಳು ಯಾವ ಯಾವ ನೆಲೆಗಳಲ್ಲಿ ಚರ್ಚೆಗೆ ಒಳಗಾಗಿವೆ ಎಂಬುದು ಒಂದು ಆಸಕ್ತಿಯಾದರೆ, ಕನ್ನಡದ ಯಾವೆಲ್ಲ ವಿಮರ್ಶಕರು ಗೋಕಾಕರ ಕೃತಿಗಳಿಗೆ ಪ್ರತಿಕ್ರಿಯಿಸಿದ್ದಾರೆ ಎಂಬುದು ಇಲ್ಲಿನ ಮತ್ತೊಂದು ಆಸಕ್ತಿ.

**೨೩೧. ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಾಸ ಸಾಹಿತ್ಯ**

ಲೇ: ವಸಂತ ಕುಷ್ಟಗಿ

ಪುಟ: iv+೩೫, ವರ್ಷ: ೨೦೦೨, ರೂ: ೧೦.೦೦

ವಿಜಯನಗರ ಸಾಮ್ರಾಜ್ಯದ ಪತನಾನಂತರ ಹರಿದಾಸ ಸಾಹಿತ್ಯವು ಎರಡನೆಯ ಘಟ್ಟದಲ್ಲಿ ಅರಳಿದ ಬಗೆಯನ್ನು *ಈ* ಕೃತಿ ವಿವೇಚಿಸುತ್ತದೆ.




**೨೩೨. ಶತಮಾನದ ಕವಿತೆ ಜೋಗಿ**

ಸಂ: ಕೆ.ಸಿ.ಶಿವಾರೆಡ್ಡಿ

ಪುಟ: xx+೧೨೮, ವರ್ಷ: ೧೯೯೯, ರೂ: ೬೦.೦

ವಾಚನ, ಶ್ರವಣ *ಈ* ಎರಡೂ ಪಾತಳಿಗಳಲ್ಲಿ ನಿರಾಳ ಅನುಭೂತಿ ನೀಡುವ ಅಂಬಿಕಾತನಯ ದತ್ತರ 'ಜೋಗಿ' ಕವನದ ಬಗ್ಗೆ ನಾಡಿನ ವಿಮರ್ಶಕರು *ಈ* ಕವಿತೆಯೊಂದಿಗೆ ಉದ್ದಕ್ಕೂ ನಡೆಸುತ್ತ ಬಂದ ಸಂವಾದ ವಿಮರ್ಶೆಗಳನ್ನು *ಈ* ಪುಸ್ತಕದಲ್ಲಿ ಸಂಕಲಿಸ ಲಾಗಿದೆ. *ಈ* ಗ್ರಂಥದಲ್ಲಿರುವ ೩೧ ಲೇಖನಗಳು 'ಜೋಗಿ'ಯನ್ನು ವಿವಿಧ ರೀತಿಯಲ್ಲಿ ಕಂಡಿವೆ. ಒಂದು ಕವನವನ್ನು ಬೇರೆ ಬೇರೆ ವಿಮರ್ಶಕರು ಹೇಗೆ ಹೇಗೆ ಓದಿದ್ದಾರೆ ಎಂಬುದನ್ನು *ಈ* ಕೃತಿ ಸ್ಪಷ್ಟಪಡಿಸುತ್ತದೆ.




**೨೩೩. ಶಿವರಾಮ ಕಾರಂತ : (ಕನ್ನಡ ಸಾಹಿತ್ಯ : *ಈ* ಶತಮಾನದ ನೋಟ ಮಾಲಿಕೆ)**

ಸಂ: ಟಿ.ಪಿ.ಅಶೋಕ

ಪುಟ: xxiv+೩೧೨, ವರ್ಷ: ೧೯೯೩, ರೂ: ೯೦.೦೦

ಶಿವರಾಮ ಕಾರಂತರ ಕೃತಿಗಳನ್ನು ಕುರಿತು ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವಿಮರ್ಶಾತ್ಮಕ ಬರಹಗಳನ್ನು ಒಂದೆಡೆ ಸಂಗ್ರಹಿಸಿಕೊಂಡು ಅವುಗಳಿಂದ ಕೆಲವು ವಾಕ್ಯಗಳನ್ನು ಆಯ್ದು ಕೊಂಡು *ಈ* ಸಂಪುಟದಲ್ಲಿ ಸಂಕಲಿಸಲಾಗಿದೆ.

**೨೩೪. ಶ್ರೀಪಾದರಾಜರು : ಜೀವನ ಮತ್ತು ಕೃತಿಗಳು**

ಲೇ: ಟಿ.ಎನ್. ನಾಗರತ್ನ

ಪುಟ: VIII+೮೪, ವರ್ಷ: ೨೦೦೪, ರೂ: ೪೦.೦೦

ಪರಿವಿಡಿ

೧. ಕಾಲ ದೇಶ ಜೀವನ ವಿಚಾರ

೨. ಕೃತಿಗಳು

೩. ಕೀರ್ತನೆಗಳ ಕಾವ್ಯ ಸ್ವಾರಸ್ಯ ಹಾಗೂ ಶೈಲಿ

ಪೂಜಾ ಕಾಲದಲ್ಲಿ ಕನ್ನಡದ ಗೀತೆಗಳನ್ನು ಹಾಡುವ ಸಂಕೀರ್ತನ ಸಂಪ್ರದಾಯವನ್ನು ಮೊದಲಿಗೆ ಆರಂಭಿಸಿದ ಹರಿದಾಸ ಪರಂಪರೆಯ ಶ್ರೀಪಾದರಾಯರ ಬದುಕು, ಅನನ್ಯ ಸಿದ್ಧಿ ಸಾಧನೆಗಳ ವಿವರ *ಈ* ಕೃತಿಯಲ್ಲಿದೆ.

**೨೩೫. ಶ್ರೀ ವ್ಯಾಸರಾಯರು : ಜೀವನ ಮತ್ತು ಕೃತಿಗಳ ಸಮೀಕ್ಷೆ**

ಲೇ: ಕೆ.ಗೋಕುಲನಾಥ

ಪುಟ: xii+೫೬, ವರ್ಷ: ೨೦೦೨, ರೂ: ೪೦.೦೦

ಹರಿದಾಸ ಪರಂಪರೆಯಲ್ಲಿ ಅಪಾರ ಗೌರವಕ್ಕೆ ಪಾತ್ರರಾದ ವಿದ್ವಾಂಸ, ಕೀರ್ತನಕಾರ ಶ್ರೀ ವ್ಯಾಸರಾಯರನ್ನು ಕುರಿತ ಚಿಕ್ಕ ಮತ್ತು ಚೊಕ್ಕ ಕೃತಿಯಿದು. ಶ್ರೀ ವ್ಯಾಸರಾಯರ ಜೀವನ ವಿವರಗಳನ್ನು ಹಾಗೂ ಅವರ ಕೃತಿಗಳ ಅವಲೋಕನವನ್ನು *ಈ* ಕೃತಿಯಲ್ಲಿ ಕಟ್ಟಿಕೊಡಲಾಗಿದೆ.




**೨೩೬. ಶೂನ್ಯ ಸಂಪಾದನೆ : ಪ್ರಸ್ತುತ ಸವಾಲುಗಳು**

ಲೇ: ಬಸವರಾಜ ಸಬರದ

ಪುಟ: iv+೩೨, ವರ್ಷ: ೨೦೦೭, ರೂ: ೧೦.೦೦

ಶೂನ್ಯಸಂಪಾದನೆಗಳು ಇತ್ತ ವಚನಗಳ ಸಂಕಲನವೂ ಆಗದೆ ಅತ್ತ ಸ್ವತಂತ್ರ ಕಾವ್ಯಗಳೂ ಆಗಿರದೆ ವಿಚಿತ್ರ ರೂಪವೊಂದನ್ನು ತೆಗೆದುಕೊಂಡಿದ್ದು ವಚನ ಚಳುವಳಿಯ ಮೂಲ ಉದ್ದೇಶವನ್ನು ಮರೆ ಮಾಡಿಬಿಡುವ ಅಪಾಯವಿದೆ ಎಂಬುದನ್ನು ಸ್ಥೂಲವಾಗಿ *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಶೂನ್ಯಸಂಪಾದನೆಗಳ ಸೃಷ್ಟಿಯ ಹಿಂದಿರುವ ಉದ್ದೇಶ, ಶರಣರ ಮೂಲ ವಚನಗಳಿಗಿಂತಲೂ ಇವು ಹೆಚ್ಚು ಜನಪ್ರಿಯವಾಗಲು ಏನು ಕಾರಣ, ವಚನಚಳುವಳಿಯ ಮೂಲ ಆಶಯಕ್ಕೆ ಇವು ಬದ್ಧವಾಗಿವೆಯೇ ಎಂಬುದನ್ನು *ಈ* ಕಿರುಕೃತಿಯಲ್ಲಿ ವಿಶ್ಲೇಷಿಸಲಾಗಿದೆ.

**೨೩೭. ಶೂನ್ಯ ಸಂಪಾದನೆಗಳು : ಸಾಂಸ್ಕೃತಿಕ ಮುಖಾಮುಖಿ**

ಸಂ: ಅಮರೇಶ ನುಗಡೋಣಿ

ಪುಟ: xvi+೧೮೬, ವರ್ಷ: ೨೦೦೨, ರೂ: ೮೦.೦೦

ಪರಿವಿಡಿ

೧. ಶೂನ್ಯಸಂಪಾದನೆ : ನೆನಪಿನ ತೋಟದಲ್ಲಿ ತಿರುಗಾಟ;

೨. ಶೂನ್ಯಸಂಪಾದನೆಗಳು : ಓದುವುದು ಹೇಗೆ?; ಶೂನ್ಯಸಂಪಾದನೆಗಳು: ಆಧುನಿಕ ವ್ಯಾಖ್ಯಾನಗಳ ಹಿಂದಿನ ತಾತ್ವಿಕತೆ

೩. ಶೂನ್ಯಸಂಪಾದನೆಗಳು : ರಚನಾ ವಿನ್ಯಾಸ; ಅನುಸಂಧಾನದ ಹೊಸ ಸಾಧ್ಯತೆಗಳು

೪. ಅರಿವೆಂಬ ಅಲಗ ಅವಧಾನ ತಪ್ಪದೆ ಹಿಡಿ

೫. ಶೂನ್ಯಸಂಪಾದನೆಗಳು : ಕೆಲವು ಟಿಪ್ಪಣಿಗಳು

೬. ಶೂನ್ಯಸಂಪಾದನೆ ಮತ್ತು ಡೆಮಾಕ್ರಸಿ

೭. ಶೂನ್ಯಸಂಪಾದನೆ : ನನ್ನ ಓದು

೮. ಅಲ್ಲಮನ ಜೀವನದ ಕಥಾನಕಗಳು

೯. ಶೂನ್ಯಸಂಪಾದನೆಗಳ ಅಧ್ಯಯನಗಳು; ಮೌಖಿಕ ಪರಂಪರೆಗಳು

ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆಯ ಜತೆಗೆ ನಂತರ ಬಂದಿರುವ ಮೂರು ಶೂನ್ಯಸಂಪಾದನೆಗಳನ್ನು ಮುಂದಿಟ್ಟುಕೊಂಡು ಸಮಕಾಲೀನ ದೃಷ್ಟಿಕೋನದಿಂದ ನಡೆಸಿರುವ ಸಂವಾದದ ಫಲವೇ *ಈ* ಗ್ರಂಥ. ಇದರಲ್ಲಿ ಒಟ್ಟು ೧೪ ಅಧ್ಯಯನ ಲೇಖನಗಳಿವೆ.

**೨೩೮. ಸಾಂಸ್ಕೃತಿಕ ಸಂಶೋಧನೆ**

ಲೇ: ತಾಳ್ತಜೆ ವಸಂತಕುಮಾರ್

ಪುಟ: iv+೨೪, ವರ್ಷ: ೧೯೯೮, ರೂ: ೫.೦೦

ಸಂಸ್ಕೃತಿಯೊಂದರ ಅಧ್ಯಯನದ ಹೊಸ ಸಾಧ್ಯತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸಮಾಜವೊಂದರ ಸಾಂಸ್ಕೃತಿಕ ಅಧ್ಯಯನವು ಸಾಂಸ್ಕೃತಿಕ ಘಟಕಗಳು ಮತ್ತು ಪರಿಕಲ್ಪನೆಗಳ ನಿರ್ವಚನೆ, ವಿಶ್ಲೇಷಣೆ ಸಾಂಸ್ಕೃತಿಕ ಸಂಬಂಧಗಳ ನಿಷ್ಕರ್ಷ, ಸಾಂಸ್ಕೃತಿಕ ಸಂವಾದಗಳ ಸಾಧ್ಯತೆ ಮುಂತಾದ ಒಳ ಹೊರವಲಯಗಳಿಗೆ ವ್ಯಾಪಿಸಿಕೊಳ್ಳುತ್ತವೆ. *ಈ* ದೃಷ್ಟಿಯಿಂದ ನಮ್ಮ ಸಾಂಸ್ಕೃತಿಕ ಸಂಶೋಧನೆಯು ಸಾಗಬಹುದಾದ ದಿಕ್ಕುಗಳ ಸೂಚಿಯನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.




**೨೩೯. ಸಾಹಿತ್ಯ ಕರ್ನಾಟಕ : ಕನ್ನಡ ಕವಿಗಳ ಸ್ಥಳ, ಕಾಲಸೂಚಿ**

ಸಂ: ಡಿ.ವಿ.ಪರಶಿವಮೂರ್ತಿ

ಪುಟ: viii+೨೮, ವರ್ಷ: ೨೦೦೨, ರೂ: ೩೦.೦೦

ಕನ್ನಡ ಸಾಹಿತ್ಯ ಲೋಕದ ಹಿರಿಮೆಯನ್ನು ಬೆಳಗಿರುವ ನಮ್ಮ ಕನ್ನಡ ಕವಿಗಳ ಸ್ಥಳ, ಕಾಲಸೂಚಿಯನ್ನು ಇಲ್ಲಿ ನೀಡಲಾಗಿದೆ. ಕ್ರಿಸ್ತಪೂರ್ವ ೩೦೦ರ ಅವಧಿಯ ಅಶೋಕನ ಶಾಸನಗಳಿಂದ ಪ್ರಾರಂಭಿಸಿ ಕ್ರಿಸ್ತಶಕ ೧೯೦೦ರ ಅವಧಿಯಲ್ಲಿದ್ದ ಕವಿ ಮತ್ತು ಲೇಖಕರ ಸ್ಥಳ ಹಾಗೂ ಕಾಲವನ್ನು ಜಿಲ್ಲಾ ನಕ್ಷೆಯೊಡನೆ ಸೂಚಿಯ ರೂಪದಲ್ಲಿ ನೀಡಲಾಗಿದೆ. ಅಕಾರಾದಿಯಲ್ಲಿ ಜಿಲ್ಲೆ, ತಾಲ್ಲೂಕು, ಜನ್ಮಸ್ಥಳಗಳ ಹೆಸರುಗಳನ್ನು ನೀಡಲಾಗಿದೆ.

**೨೪೦. ಸಿರಿಗನ್ನಡ - ೧೯೯೩**

ಸಂ: ಎಚ್.ಎಸ್.ರಾಘವೇಂದ್ರರಾವ್

ಪುಟ: ೨೪೭, ವರ್ಷ: ೧೯೯೩

ಕರ್ನಾಟಕ ಸಂಸ್ಕೃತಿಯ ವಿವಿಧ ನೆಲೆಗಳನ್ನು, ವಿನ್ಯಾಸಗಳನ್ನು ಪರಿಶೀಲಿಸಲು ಅಗತ್ಯವಾದ ಹೊಸ ದೃಷ್ಟಿಕೋನಗಳನ್ನು, ಚಿಂತನ ವಿಧಾನಗಳನ್ನು ರೂಪಿಸಿಕೊಡುವ ಅಧ್ಯಯನ ಪೂರ್ಣವಾದ ಲೇಖನಗಳು *ಈ* ಕೃತಿಯಲ್ಲಿವೆ.

**೨೪೧. ಸ್ತ್ರೀ ಮತ್ತು ರಾಜಕಾರಣ**

ಲೇ: ಕೇಶವ ಶರ್ಮ

ಪುಟ: ii+೩೫, ವರ್ಷ: ೨೦೦೦, ರೂ: ೧೦.೦೦

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಮಾಜದ ಸ್ತ್ರೀಯರು, ಸಮಾಜದ ಆಡಳಿತರಂಗ, ರಾಜಕಾರಣದಲ್ಲಿ ಪಾತ್ರ ವಹಿಸಿರುವುದರ ಬಗ್ಗೆ ಇರುವ ಉಲ್ಲೇಖಗಳನ್ನು ಆಧರಿಸಿ *ಈ* ಕೃತಿ ರಚಿತವಾಗಿದೆ.




**೨೪೨. ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ**

ಲೇ: ನಾ.ಗೀತಾಚಾರ್ಯ

ಪುಟ: iv+೪೦, ವರ್ಷ: ೨೦೦೮, ರೂ: ೧೦.೦೦

*ಈ* ಕಿರುಗ್ರಂಥದಲ್ಲಿ ೯೦ರ ದಶಕದಿಂದೀಚೆಗೆ ಶೋಧನೆಗೊಂಡಿರುವ ಶ್ರೀ ವೈಷ್ಣವ ಹರಿದಾಸ ಸಾಹಿತ್ಯದ ಸ್ವರೂಪವನ್ನು ಸಮೀಕ್ಷೆ ಮಾಡಲಾಗಿದೆ. ಶ್ರೀವೈಷ್ಣವ ವಿಶಿಷ್ಟಾದ್ವೈತ ಸಾಹಿತ್ಯವು ಕನ್ನಡ ಓದುಗರಿಗೆ ಹೊಸ ಓದಾಗಿರುವುದರಿಂದ ಅದರ ಪ್ರವೇಶಕ್ಕಾಗಿ ಪ್ರಸ್ತಾವನೆ ಮತ್ತು ಶ್ರೀವೈಷ್ಣವ ತತ್ತ್ವ ಧರ್ಮದ ಪರಿಚಯ ಹಾಗೂ *ಈ* ವರೆಗೆ *ಈ* ಕ್ಷೇತ್ರದಲ್ಲಿ ಆಗಿರುವ ಸಂಶೋಧನೆಯ ಜೊತೆಗೆ ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಪ್ರಮುಖ ಲಕ್ಷಣಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.




**೨೪೩. ಹರಿಶ್ಚಂದ್ರ ಚಾರಿತ್ರ : ಸಾಂಸ್ಕೃತಿಕ ಮುಖಾಮುಖಿ**

ಸಂ: ಅಮರೇಶ ನುಗಡೋಣಿ

ಪುಟ: ೧೬+೨೪೬, ವರ್ಷ:೨೦೦೬, ರೂ: ೮೦

ಪರಿವಿಡಿ

೧. ಹರಿಶ್ಚಂದ್ರ ಚಾರಿತ್ರ: ಇದುವರೆಗಿನ ಅಧ್ಯಯನಗಳ ಹಿಂದಿನ ತಾತ್ವಿಕತೆ

೨. ಹರಿಹರ, ರಾಘವಾಂಕರ ಸೃಜನಶೀಲತೆಯ ಸಂಘರ್ಷ

೩. ಹರಿಶ್ಚಂದ್ರ ಚಾರಿತ್ರ: ಸತ್ಯದ ನಿರೂಪಣೆ ಮತ್ತು ನಿಲುವಿನ ಸಮಸ್ಯೆ

೪. ಜಾತಿ, ಅಸ್ಪೃಶ್ಯತೆ ಪ್ರಶ್ನೆಗಳು: ಹರಿಶ್ಚಂದ್ರ ಚಾರಿತ್ರ ಮುಖೇನ

೫. ಪ್ರಭುತ್ವ ಮತ್ತು ಜನತೆ: ಹರಿಶ್ಚಂದ್ರ ಚಾರಿತ್ರ ಮುಖೇನ

೬. ಮಹಿಳಾ ಪ್ರಶ್ನೆಗಳು: ಹರಿಶ್ಚಂದ್ರ ಚಾರಿತ್ರ ಮುಖೇನ

೭. ಚರಿತ್ರೆ ಮತ್ತು ಪುರಾಣಗಳ ಅಂತಃಸಂಬಂಧಗಳು ರಾಘವಾಂಕನ ಕಾವ್ಯಗಳ ಮುಖೇನ

೮. ಹರಿಶ್ಚಂದ್ರ ಚಾರಿತ್ರ ಮತ್ತು ರಾಘವಾಂಕನ ಇತರ ಕಾವ್ಯಗಳ ನಡುವಿನ ಅಂತರ್‌ಸಂಬಂಧಗಳು

೯. ರಾಘವಾಂಕನ ಕಾವ್ಯತತ್ತ್ವ: ಕೆಲವು ಟಿಪ್ಪಣಿಗಳು

೧೦. ಹರಿಶ್ಚಂದ್ರ ಕಾವ್ಯ-ಹರಿಶ್ಚಂದ್ರ ಚಾರಿತ್ರ

ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ: ಸಾಂಸ್ಕೃತಿಕ ಮುಖಾಮುಖಿ' ಎನ್ನುವ ಸಂವಾದ ಸಂಕಿರಣದ ಮಾತು ಮತ್ತು ಬರಹಗಳು *ಈ* ಸಂಕಲನದಲ್ಲಿ ಒಟ್ಟು ಸೇರಿವೆ. ಭಿನ್ನ ಚಿಂತನ ಕ್ರಮದ ವಿಮರ್ಶಕರು ಭಿನ್ನ ನೆಲೆಗಳಿಂದ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಇಲ್ಲಿ ಚರ್ಚೆಗೆ ಒಡ್ಡಿದ್ದಾರೆ. ಸಾಹಿತ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ ಸಂಗತಿಗಳಿಗೆ ತೆರೆದುಕೊಂಡ *ಈ* ಕೃತಿಯಲ್ಲಿ ಅನೇಕ ಆಲೋಚನಾ ಕೇಂದ್ರಗಳ ಮೂಲಕ ಭಿನ್ನ ದಿಕ್ಕುಗಳಿಗೆ ವಿಸ್ತರಿಸಿಕೊಳ್ಳುವ ಅಧ್ಯಯನದ ಮಾದರಿಗಳು ದಾಖಲಾಗಿವೆ. ಸಾಹಿತ್ಯ ಪಠ್ಯವೊಂದು ಭಿನ್ನ ಮತ್ತು ವಿರುದ್ಧದ ಧ್ವನಿಗಳನ್ನು ಏಕಕಾಲಕ್ಕೆ ಹೊಂದಿರುತ್ತದೆ ಎನ್ನುವ ಸತ್ಯದ ಸಾಕ್ಷಾತ್ಕಾರ *ಈ* ಗ್ರಂಥದಿಂದ ಸಾಧ್ಯವಾಗಿದೆ.

**೨೪೪. ಹರಿಹರ ಚಿತ್ರಿಸಿದ ದಲಿತ ಶರಣರು**

ಲೇ: ಎಸ್.ಎಸ್.ಹಿರೇಮಠ

ಪುಟ: iv+೨೧, ವರ್ಷ: ೧೯೯೮, ರೂ: ೫.೦೦

ಕವಿ ಹರಿಹರ ತನ್ನ ಕೃತಿಗಳಲ್ಲಿ ಕಟ್ಟಿಕೊಡುವ ದಲಿತ ಶರಣರ ಬದುಕಿನ ಚಿತ್ರಣವನ್ನು *ಈ* ಕಿರುಕೃತಿಯಲ್ಲಿ ವಿಶ್ಲೇಷಿಸಲಾಗಿದೆ.




**೨೪೫. ಹರಿಹರನ ರಗಳೆಗಳು : ಸಾಂಸ್ಕೃತಿಕ ಮುಖಾಮುಖಿ**

ಸಂ: ಶಿವಾನಂದ ಎಸ್. ವಿರಕ್ತಮಠ

ಪುಟ: XX+೨೩೦, ವರ್ಷ: ೨೦೦೩, ರೂ: ೧೦೦.೦೦

ಪರಿವಿಡಿ

೧. ರಗಳೆಗಳ ವೈವಿಧ್ಯತೆ ಮತ್ತು ಹರಿಹರ ಪ್ರತಿಭೆ

೨. ವಚನ ಚಳುವಳಿ: ಮೌಖಿಕ ಮತ್ತು ಲಿಖಿತ ಪರಂಪರೆಗಳ ಗ್ರಹಿಕೆ

೩. ತಮಿಳು ಶೈವ ಪರಂಪರೆ ಮತ್ತು ರಗಳೆಗಳು

೪. ಹರಿಹರನ ರಗಳೆಗಳು 'ಯಾಜಮಾನ್ಯ'ದ ನೆಲೆಗಳು

೫. ಬಹುಮುಖಿ ಶೈವ ಧಾರೆಗಳು ಮತ್ತು ಹರಿಹರ

೬. ಹರಿಹರನ ರಗಳೆಗಳು: ಸಾಮಾಜಿಕ ದರ್ಶನ; ಭಕ್ತಿಯ ಸ್ವರೂಪ

೭. ರಗಳೆಗಳಲ್ಲಿ ಭಕ್ತಿಯ ಸ್ವರೂಪ

೮. ಪೂಜನ ಸಂಸ್ಕೃತಿ ಮತ್ತು ಭಕ್ತಿ ಸಿದ್ಧಾಂತದ ನೆಲೆಗಳು; ಹರಿಹರನ ರಗಳೆಗಳು : ಹೊಸ ಚೌಕಟ್ಟಿನ ಶೋಧದಲ್ಲಿ

೯. ಹರಿಹರನ ರಗಳೆಗಳು: ಪರಿವಾರ ನಿರ್ಮಾಣ ಮತ್ತು ಪರ್ಯಾಯ ನಿರ್ಮಾಣದ ಕಥನಗಳು

೧೦. ರಗಳೆಗಳ ಕಥನ ಕ್ರಮವೂ, ಲೋಕದೃಷ್ಟಿಯೂ

ಕವಿ ಹರಿಹರನ ರಗಳೆಗಳನ್ನು ಮರು ಓದಿಗೆ ಒಳಪಡಿಸಿ, ಆಗ ಹೊರ ಹೊಮ್ಮಿದ ಹೊಸ ನೋಟದ, ಬಹು ನಿಲುವಿನ, ಬಹು ನೆಲೆಯ ಅರ್ಥಪೂರ್ಣ ಸಂವಾದಗಳನ್ನು *ಈ* ಕೃತಿ ಒಳಗೊಂಡಿದೆ.




**೨೪೬. ಹಲಸಂಗಿ ಗೆಳೆಯರು**

ಲೇ: ಗುರುಲಿಂಗ ಕಾಪಸೆ

ಪುಟ: iv+೨೮, ವರ್ಷ: ೧೯೯೮, ರೂ: ೫.೦೦

ಕನ್ನಡ ನುಡಿಯ ನವೋದಯಕ್ಕೆ ಕಾರಣವಾದ ಊರು ಹಲಸಂಗಿಯಲ್ಲಿ ಸಾಹಿತ್ಯದ ಕೃಷಿಗೈದ ಐವರು ಹಲಸಂಗಿ ಗೆಳೆಯರ ಸಾಹಿತ್ಯಕ ಚಟುವಟಿಕೆಗಳ ಬಗ್ಗೆ *ಈ* ಕಿರುಕೃತಿ ಮಹತ್ವದ ವಿಚಾರಗಳನ್ನು ಬಿಚ್ಚಿಡುತ್ತದೆ. ಹಲಸಂಗಿ ಪ್ರದೇಶದಲ್ಲಿದ್ದ ಅನುಭಾವ ಕವಿ ಮಧುರಚೆನ್ನರು ತಾವು ಬರೆಯಲು ತೊಡಗಿದ್ದಲ್ಲದೆ, ತಮ್ಮ ಗೆಳೆಯರಾದ ಸಿಂಪಿಲಿಂಗಣ್ಣ, ಪಿ. ಧೂಲಾಸಾಹೇಬ ಹಾಗೂ ಕಿರಿಯರಾದ ಕಾಪಸೆ, ರೇವಪ್ಪನವರನ್ನು ಕೂಡಾ ಬರೆಸಿ ಕನ್ನಡನಾಡಿನಲ್ಲಿ ಸಾಹಿತ್ಯಕ ಸಾಂಸ್ಕೃತಿಕ ವಾತಾವರಣವನ್ನು ಬೆಳೆಸಿದ ಪರಿಯನ್ನು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.





## ೮

## ಕನ್ನಡೇತರ ಸಾಹಿತ್ಯ-ಸಾಹಿತ್ಯ ವಿಮರ್ಶೆ

**೨೪೭. ಅಚ್ಯುತರಾಯಾಭ್ಯುದಯಂ**

ಅನು : ಸುಚೇತಾ ನವರತ್ನ

ಪುಟ : ೩೨ + ೧೭೦, ವರ್ಷ : ೨೦೦೦, ರೂ. ೧೦೦

ಸಂಸ್ಕೃತ ಕವಿ ರಾಜನಾಥ ಡಿಂಡಿಮ ಬರೆದಿರುವ ೧೨ ಸರ್ಗಗಳ *ಈ* ಮಹಾಕಾವ್ಯ ಅಚ್ಯುತರಾಯನ ಸಮಕಾಲಿನ ವಿಜಯನಗರ ಸಾಮ್ರಾಜ್ಯದ ಬಗೆಗಿನ ಐತಿಹಾಸಿಕ ಉಲ್ಲೇಖಗಳನ್ನು ಒಳಗೊಂಡಿವೆ. ವಿಜಯನಗರ ಕಾಲದ ಇತಿಹಾಸ ವಿಚಾರಗಳಿಗೆ ಇದೊಂದು ಸಮಗ್ರ ಆಕರ ಗ್ರಂಥ. ವಿಜಯನಗರ ಕಾಲದ ಸಾಂಸ್ಕೃತಿಕ ರಾಜಕಾರಣವನ್ನು ಗ್ರಹಿಸುವಲ್ಲಿ *ಈ* ಕೃತಿ ನೆರವಾಗುತ್ತದೆ. *ಈ* ಕೃತಿಯು ಅಚ್ಯುತದೇವರಾಯನ ಆಳ್ವಿಕೆಯ ವಿವರಗಳ ಜೊತೆಗೆ ಶ್ರೀ ಕೃಷ್ಣದೇವರಾಯನ ಬಗೆಗೂ ಮಹತ್ವದ ಮಾಹಿತಿಗಳನ್ನು ನೀಡುತ್ತದೆ.




**೨೪೮. ಆಧುನಿಕ ಮಲಯಾಳಂ ಕವಿತೆಗಳು**

ಸಂ: ಓ.ಎಲ್.ನಾಗಭೂಷಣ ಸ್ವಾಮಿ ಮತ್ತು ಇತರರು

ಪುಟ: x+೯೦, ವರ್ಷ: ೧೯೯೭, ರೂ: ೪೦.೦೦

ಪರಿವಿಡಿ

೧. ಶ್ರೀಕುಮಾರನ್ ತಂಬಿ
೨. ಕರೂರು ಶಶಿ
೩. ನಾರಾಯಣ ಕುರುಪ್
೪. ದೇಶಮಂಗಲಂ ರಾಮಕೃಷ್ಣನ್
೫. ವಿನಯಚಂದ್ರನ್

ಕನ್ನಡದ ವಿವಿಧ ಕವಿಗಳು ಅನುವಾದಿಸಿರುವ ೩೦ ಆಧುನಿಕ ಮಲಯಾಳಂ ಕವಿತೆಗಳ ಸಂಗ್ರಹವಿದು. ಮಲಯಾಳಂನ ಪ್ರಮುಖ ಕವಿಗಳ ಕವನಗಳು ಒಂದೆಡೆ ಸಿಗುವುದು *ಈ* ಕೃತಿಯ ವೈಶಿಷ್ಟ್ಯ.

### ೨೪೯. ಆಮುಕ್ತಮಾಲ್ಯದ

ಲೇ: ನಿರುಪಮಾ

ಪುಟ: ii+೨೮, ವರ್ಷ: ೧೯೯೯, ರೂ: ೧೦.೦೦

ವಿಜಯನಗರ ಸಾಮ್ರಾಜ್ಯದ ಅರಸ ಶ್ರೀ ಕೃಷ್ಣದೇವರಾಯ ತೆಲುಗಿನಲ್ಲಿ ಬರೆದ ಕಾವ್ಯ ಆಮುಕ್ತಮಾಲ್ಯದ. ಇದರ ವಿಶ್ಲೇಷಣೆ ಮತ್ತು ವಿಮರ್ಶೆ *ಈ* ಕಿರುಕೃತಿಯಲ್ಲಿದೆ.




### ೨೫೦. ಕಥೆ ಮತ್ತು ಹಾಡು

ಆಂಗ್ಲಮೂಲ: ಎ.ಕೆ. ರಾಮಾನುಜನ್

ಅನು: ಕರೀಗೌಡ ಬೀಚನಹಳ್ಳಿ

ಪುಟ: XLVI+೨೮೨, ವರ್ಷ: ೨೦೦೩, ರೂ: ೧೪೦.೦೦

ಪ್ರೊ. ಎ.ಕೆ.ರಾಮಾನುಜನ್ ಅವರು ಕನ್ನಡದ ವಿವಿಧ ನೆಲೆಗಳಿಂದ ಮತ್ತು ವಿವಿಧ ಮೂಲಗಳಿಂದ ಇಂಗ್ಲಿಶ್‌ಗೆ ತಂದು ಆ ಮೂಲಕ ಕನ್ನಡ ಜನಪದ ಜೀವನ ಕನ್ನಡೇತರ ಲೋಕದಲ್ಲಿ ಬಿಚ್ಚಿಕೊಳ್ಳುವಂತೆ ಮಾಡಿದ ಜನಪದ ಕಥೆಗಳನ್ನು ಇಲ್ಲಿ ಅನುವಾದಿಸಲಾಗಿದೆ. ಮೂಲ ಕಥಾಶರೀರವನ್ನು ರೂಕ್ಷಗೊಳಿಸದೆ, ಕ್ಲಿಷ್ಟಗೊಳಿಸದೆ ಅತ್ಯಂತ ಸರಳವಾಗಿ, ಆಕರ್ಷಕವಾಗಿ, ಪರಿಣಾಮಕಾರಿಯಾಗಿ ಇಲ್ಲಿ ಅನುವಾದಿಸಲಾಗಿದೆ.




### ೨೫೧. ಕ್ರೀಡಾಭಿರಾಮ

ತೆಲುಗು ಮೂಲ: ವಿನುಕೊಂಡ ವಲ್ಲಭರಾಯ

ಕನ್ನಡಕ್ಕೆ ಅನು: ಆರ್ವ್ವಿಯಸ್ ಸುಂದರಂ

ಪುಟ: xx+೩೦, ವರ್ಷ: ೨೦೦೦, ರೂ: ೪೦.೦೦

ಕ್ರೀಡಾಭಿರಾಮ ಒಂದು ಚಂಪೂ ಪ್ರಬಂಧವೂ ಹೌದು-ರೂಪಕವೂ ಹೌದು; ಸಂಭಾಷಣೆಯ ರೂಪದಲ್ಲಿರುವುದರಿಂದ ದೃಶ್ಯಕಾವ್ಯವೂ ಹೌದು. ಇದರ ಕರ್ತೃ ವಲ್ಲಭಾಮಾತ್ಯ ೧೫ನೇ ಶತಮಾನಕ್ಕೆ ಸೇರಿದವನು. ಕ್ರೀಡಾಭಿರಾಮದ ಮೂಲ ಆಕರ ೧೪ನೇ ಶತಮಾನಕ್ಕೆ ಸೇರಿದ ಸಂಸ್ಕೃತ ಮತ್ತು ತೆಲುಗು ಕವಿ ರಾವಿರಾಟಿ ತ್ರಿಪುರಾಂತಕನ ಸಂಸ್ಕೃತ ನಾಟಕ ಕೃತಿ- 'ಪ್ರೇಮಾಭಿರಾಮ'. ಕ್ರೀಡಾಭಿರಾಮ ಅತಿ ಶೃಂಗಾರವಿರುವ ರೂಪಕ. ಇಲ್ಲಿನ ಶೃಂಗಾರ ಬಹುಪಾಲು ತರುಣಿಯರ, ವೇಶ್ಯೆಯರ ವರ್ಣನೆಗೆ ಸಂಬಂಧಿಸಿದ್ದು. ವಿವಿಧ ಜಾತಿಗಳಿಗೆ, ಪ್ರದೇಶಗಳಿಗೆ ಸೇರಿದ ಸ್ತ್ರೀಯರ ವರ್ಣನೆ *ಈ* ಕೃತಿಯಲ್ಲಿದೆ. ಓರಂಗಲ್ಲು ನಗರದಲ್ಲಿ ೧೪ನೇ ಶತಮಾನದ ಪ್ರಾರಂಭದಲ್ಲಿದ್ದ ವಿವಿಧ ಜಾತಿ ಸ್ತ್ರೀಯರ ಹಾಗು ವೇಶ್ಯೆಯರ ಬಗ್ಗೆ *ಈ* ಕೃತಿ ಮಾಹಿತಿ ನೀಡುತ್ತದೆ.








### ೨೫೨. ಕೇರಳ ಕಥನ

ಲೇ: ಮೋಹನ ಕುಂಟಾರ್

ಪುಟ: viii+೨೯೮, ವರ್ಷ: ೨೦೦೬, ರೂ: ೧೫೦

ಪರಿವಿಡಿ

೧. ಕೇರಳ ಕಥನ ಪೂರ್ವ ಪೀಠಿಕೆ

೨. ನವೀನ ಕೇರಳೋದಯ

೩. ಮತಧರ್ಮ ಮತ್ತು ಸಂಪ್ರದಾಯ; ಕೇರಳ ಮಹಿಮೆ

೪. ಶಿಕ್ಷಣ

೫. ಬುಡಕಟ್ಟು ಕಲೆಗಳು, ರಂಗ ಕಲೆಗಳು, ಕರಕುಶಲ ಕಲೆಗಳು

೬. ಭಾಷೆ ಮತ್ತು ಸಾಹಿತ್ಯ

೭. ಧಾರ್ಮಿಕ ಕೇಂದ್ರಗಳು

೮. ಸಾಂಪ್ರದಾಯಿಕ ಆಚರಣೆಗಳು

೯. ಹೊಸ ಸಾಮಾಜಿಕ ವ್ಯವಸ್ಥೆಗಳು

ಇಲ್ಲಿ ವಿಶಿಷ್ಟ ಸಾಂಸ್ಕೃತಿಕ ಪ್ರದೇಶವಾದ ಕೇರಳವನ್ನು ಅದರ ಭೌಗೋಳಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಬಿಡಿಯಾಗಿ ಮತ್ತು ಇಡಿಯಾಗಿ ಕಟ್ಟಿಕೊಡುವ ಪ್ರಯತ್ನವಿದೆ. ಕೇರಳದಂಥ ಸಾಂಸ್ಕೃತಿಕ ಅನನ್ಯ ಪ್ರದೇಶವು ತನ್ನ ವಿಶಿಷ್ಟ ನೆಲೆಗಳನ್ನು ಎಲ್ಲೆಲ್ಲಿ ಉಳಿಸಿಕೊಂಡಿದೆ ಎನ್ನುವುದರ ಶೋಧ ಮತ್ತು ಚರ್ಚೆ ಇಲ್ಲಿ ದೊರೆಯುತ್ತದೆ. ಪುರಾಣಗಳ ಕಾಲದಿಂದ ಆಧುನಿಕೋತ್ತರ ಕಾಲದವರೆಗೆ ನಿರಂತರ ದುಡಿಮೆ ಹೋರಾಟ ಮತ್ತು ಹುಡುಕಾಟದ ಮೂಲದ ಕೇರಳದ ಬದುಕು ಮತ್ತು ಸಾಂಸ್ಕೃತಿಕ ಉತ್ಪನ್ನಗಳು ಮೈತಾಳಿದ ಬಗೆಗಳನ್ನು ಇಲ್ಲಿ ವಿವರಿಸಲಾಗಿದೆ. ಅಧ್ಯಯನ, ಕ್ಷೇತ್ರಕಾರ್ಯ ಮತ್ತು ಸಮಾಲೋಚನೆಗಳ ಮೂಲಕ ಕನ್ನಡದಲ್ಲಿ ಕೇರಳದ ಕಥನವನ್ನು ವಿವರವಾಗಿ ಮತ್ತು ಆಕರ್ಷಕವಾಗಿ ಇಲ್ಲಿ ಕಟ್ಟಿಕೊಡಲಾಗಿದೆ.

### ೨೫೩. ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ

ಲೇ: ಕುಂ.ವೀರಭದ್ರಪ್ಪ

ಪುಟ: ೨೭, ವರ್ಷ: ೧೯೮೩, ರೂ: ೧.೦೦

ತೆಲುಗು ಸಾಹಿತ್ಯವನ್ನು ಜಮೀನ್ದಾರಿ ವ್ಯವಸ್ಥೆಯ ತಾತ್ತ್ವಿಕ ನೆಲೆಯಲ್ಲಿ ನಿರ್ವಚಿಸಲು *ಈ* ಕೃತಿಯಲ್ಲಿ ಪ್ರಯತ್ನಿಸಲಾಗಿದೆ. ಜೊತೆಗೆ ತೆಲುಗು ಸಾಹಿತ್ಯದ ವಿಶ್ಲೇಷಣಾತ್ಮಕ ಅಧ್ಯಯನ ವಿಧಾನವು ಇಲ್ಲಿ ಅನನ್ಯವಾಗಿದೆ.

### ೨೫೪. ಟಾಲ್‌ಸ್ಟಾಯ್ ದರ್ಶನ

ಸಂ : ಕರೀಗೌಡ ಬೀಚನಹಳ್ಳಿ

ಪುಟ : viii + ೧೬೬, ವರ್ಷ : ೨೦೦೯, ರೂ. ೮೦.೦೦




ಪರಿವಿಡಿ

೧. ಟಾಲ್‌ಸ್ಟಾಯ್

೨. ಸಣ್ಣ ಕಥೆಗಳು

೩. ಕಾದಂಬರಿಗಳು

೪. ಪ್ರಬಂಧಗಳು

೫. ಗಾಂಧೀಟಾಲ್‌ಸ್ಟಾಯ್‌ರ ಪತ್ರ ವ್ಯವಹಾರ

೬. ಬಾಳಿನ ಹೆಜ್ಜೆ ಗುರುತು

೭. ಜೀತ ಮತ್ತು ಗೇಣಿ  ಸ್ವಾತಂತ್ರ್ಯಪೂರ್ವದ ಕನ್ನಡ ಸಮಾಜ

೮. ಸಂಸ್ಕೃತಿ ಮಾರಾಟ  ವಸಾಹತುಶಾಹಿ ಮತ್ತು ಜಾಗತೀಕರಣ

೯. ಕನ್ನಡದಲ್ಲಿ ಟಾಲ್‌ಸ್ಟಾಯ್ ಕೃತಿಗಳು ಮತ್ತು ಆಕರ ಸಾಹಿತ್ಯ

ಮನುಕುಲದ ಸಂವೇದನೆಗೆ ಸಂಕೇತದಂತಿದ್ದ ಲಿಯೊ ಟಾಲ್‌ಸ್ಟಾಯ್ ಜಗತ್ತಿನ ಶ್ರೇಷ್ಠ ಲೇಖಕ. ರೈತರ ಅಭಿವೃದ್ಧಿ ಮತ್ತು ಶಿಕ್ಷಣ ಪದ್ಧತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾತ. ಟಾಲ್‌ಸ್ಟಾಯ್‌ನ ಸಾಹಿತ್ಯ ಸಮೃದ್ಧಿಯಾದರೂ ಆತನ ಸಾಮಾಜಿಕ ಹಾಗೂ ಶೈಕ್ಷಣಿಕ ಸುಧಾರಣೆಗಳು ಮುಂಚೂಣಿಗೆ ಬರಲಿಲ್ಲ. ಕಥೆ, ಕಾದಂಬರಿ ಹಾಗೂ ಪ್ರಬಂಧಗಳ ಮುಖೇನ ಅದ್ಭುತ ಪ್ರತಿಭೆಯನ್ನು ಪ್ರಕಟಿಸಿದ ಟಾಲ್‌ಸ್ಟಾಯ್‌ನ ಬದುಕು, ಬರಹ, ಹೋರಾಟ ಹಾಗೂ ಅವನ ದಾರ್ಶನಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ, ಸೂಕ್ಷ್ಮವಾಗಿ ಮತ್ತು ವಿಮರ್ಶಾತ್ಮಕವಾಗಿ *ಈ* ಕೃತಿಯಲ್ಲಿ ಕಟ್ಟಿಕೊಡಲಾಗಿದೆ.

**೨೫೫. ತುಳು ಸಾಹಿತ್ಯ ಚರಿತ್ರೆ**

ಸಂ: ಎ.ವಿ.ನಾವಡ

ಪುಟ: xviii+೧೧೨೦, ವರ್ಷ: ೨೦೦೭, ರೂ: ೧೦೦೦

ಪರಿವಿಡಿ

೧. ತುಳುನಾಡು ಇತಿಹಾಸ

೨. ಭಾಷೆ; ಜಾನಪದ

೩. ಸಾಹಿತ್ಯ

೪. ಯಕ್ಷಗಾನ

೫. ಮಾಧ್ಯಮಗಳಲ್ಲಿ ತುಳು

೬. ತುಳು ಸಾಂಸ್ಥಿಕ ನೆಲೆಗಳು

ದಕ್ಷಿಣ ಭಾರತದ ಸಂಸ್ಕೃತಿಯ ಅಧ್ಯಯನದಲ್ಲಿ ತುಳು ಭಾಷೆ, ಸಾಹಿತ್ಯದ ಪಾತ್ರ ಗಣನೀಯವಾದುದು. *ಈ* ಗ್ರಂಥದಲ್ಲಿ ದಾಖಲಾಗಿರುವ ಭೂತಾರಾಧನೆ, ನಾಗಾರಾಧನೆ, ಮಾತೃಮೂಲೀಯ ಕುಟುಂಬ ವ್ಯವಸ್ಥೆ, ಕಡಲು ಮತ್ತು ಮಡಲುಗಳನ್ನು ನಂಬಿ ಬದುಕುವ ಸಮುದಾಯಗಳು ಹುಟ್ಟುಹಾಕಿದ ಸಂಸ್ಕೃತಿ - ಇವು ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕೆ ಸಮೃದ್ಧಿ ಆಕಾರವಾಗಿ ನಿಲ್ಲಬಹುದು.




**೨೫೬. ತೆಲುಗು ದಾಕ್ಷಿಣಾತ್ಯ ಸಾಹಿತ್ಯ**

ತೆಲುಗು ಮೂಲ: ಚಲ್ಲಾರಾಧಾಕೃಷ್ಣ ಶರ್ಮ

ಕನ್ನಡಕ್ಕೆ ಅನು: ಸಿ.ವೆಂಕಟೇಶ

ಪುಟ: viii+೫೫, ವರ್ಷ: ೧೯೯೭, ರೂ: ೪೦.೦೦

ಪರಿವಿಡಿ

೧. ದಾಕ್ಷಿಣಾತ್ಯ ಭಾಷೆಗಳು

೨. ತೆಲುಗು-ತಮಿಳು

೩. ತೆಲುಗು-ಕನ್ನಡ

೪. ತೆಲಗು-ಮಲಯಾಳಂ

ಇದು ತೆಲುಗಿನ ಪ್ರಸಿದ್ಧ ವಿದ್ವಾಂಸರಾದ ಡಾ. ಚಲ್ಲಾರಾಧಾಕೃಷ್ಣ ಶರ್ಮ ಅವರು ಆಂಧ್ರ ಸಾಹಿತ್ಯ ಅಕಾಡೆಮಿಗಾಗಿ ಬರೆದ ಕೃತಿ. ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿರುವ ಪ್ರಮುಖ ದಾಕ್ಷಿಣಾತ್ಯ ಭಾಷೆಗಳಾದ ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಸಾಹಿತ್ಯದ ತೌಲನಿಕ ಅಧ್ಯಯನ *ಈ* ಕೃತಿಯ ಮುಖ್ಯ ಆಶಯ. ಇಲ್ಲಿ ಭಾಷೆ, ಸಂಸ್ಕೃತಿ ಮತ್ತು ಚರಿತ್ರೆಯ ವಿಷಯಗಳು ಕೂಡಾ ಪ್ರಧಾನವಾಗಿ ಚರ್ಚೆಗೆ ಒಳಗಾಗಿವೆ. ಸಂಸ್ಕೃತದ ಪ್ರಭಾವ ವಿದ್ದಾಗ್ಯೂ ದಾಕ್ಷಿಣಾತ್ಯ ಭಾಷೆಗಳ ಪ್ರತ್ಯೇಕತೆಯ ಬಗ್ಗೆ ಮೊದಲು ಮಾತನಾಡಿದ ವಿಲ್ಲಿಸ್, ಕಾಲ್ಡ್‌ವೆಲ್ ಮುಂತಾದ ಪಾಶ್ಚಾತ್ಯ ವಿದ್ವಾಂಸರ ವಿಚಾರಗಳು *ಈ* ಕೃತಿಯಲ್ಲಿ ಪ್ರಸ್ತಾಪವಾಗಿವೆ. ಸಾಹಿತ್ಯ ಸಮೃದ್ಧಿಯೊಂದಿಗೆ ನಿರಂತರವಾಗಿ ಜೀವಂತವಾಗಿರುವ ಪ್ರಮುಖ ದ್ರಾವಿಡ ಭಾಷೆಗಳ ಪ್ರಾಚೀನತೆಯನ್ನು ಗುರುತಿಸುವುದರ ಜತೆಗೆ ಇವುಗಳ ನಡುವಿನ ಹಲವು ರೀತಿಯ ಸಂಬಂಧಗಳನ್ನು ಮತ್ತು ಪರಸ್ಪರ ಪ್ರಭಾವ, ಪ್ರೇರಣೆಗಳನ್ನು ಸೋದಾಹರಣವಾಗಿ *ಈ* ಕೃತಿಯಲ್ಲಿ ವಿವೇಚಿಸಲಾಗಿದೆ.

**೨೫೭. ನೀತಿವಾಕ್ಯಾಮೃತಂ**

ಲೇ: ಆಚಾರ್ಯ ಸೋಮದೇವ

ಸಂ: ಜಿ.ಎಸ್.ದೀಕ್ಷಿತ್ ಮತ್ತು ಇತರರು

ಪುಟ: xxvi+೪೭೨, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ಧರ್ಮ, ಅರ್ಥ, ಕಾಮ, ಅರಿಷಡ್ವರ್ಗ ಸಮುದ್ದೇಶ



೨. ವಿದ್ಯಾವೃದ್ಧ, ಅನ್ವೀಕ್ಷಿಕೀ, ತ್ರಯೀ, ವಾರ್ತಾ, ದಂಡನೀತಿ ಸಮುದ್ದೇಶ

೩. ಮಂತ್ರಿ, ಪುರೋಹಿತ, ಸೇನಾಪತಿ, ಧೂತ, ಚಾರ ಸಮುದ್ದೇಶ

೪. ವಿಚಾರ, ವ್ಯಸನ, ಸ್ವಾಮಿ, ಅಮಾತ್ಯ ಸಮುದ್ದೇಶ

೫. ಜನಪದ, ದುರ್ಗ, ಕೋಶ, ಬಲ, ಮಿತ್ರ ಸಮುದ್ದೇಶ

೬. ರಾಜರಕ್ಷಾ, ದಿವಸಾನುಷ್ಠಾನ, ಸದಾಚಾರ, ವ್ಯವಹಾರ ಸಮುದ್ದೇಶ

೭. ವಿವಾದ, ಷಾಡ್ಗುಣ್ಯ, ಯುದ್ಧ ಸಮುದ್ದೇಶ

೮. ವಿವಾಹ, ಪ್ರಕೀರ್ಣ ಸಮುದ್ದೇಶ

'ನೀತಿವಾಕ್ಯಾಮೃತಂ' ಸೂತ್ರಪ್ರಾಯವಾದ ವಾಕ್ಯಗಳಲ್ಲಿ ರಚಿತವಾಗಿರುವ ಸಂಸ್ಕೃತ ರಾಜನೀತಿ ಶಾಸ್ತ್ರ ಗ್ರಂಥ. ಆಚಾರ್ಯ ಸೋಮದೇವ ಸೂರಿಯಿಂದ ರಚಿಸಲ್ಪಟ್ಟ *ಈ* ಗ್ರಂಥ ಆತನ ಕಾಲದಲ್ಲಿ ಪ್ರಚಲಿತವಾಗಿದ್ದ ರಾಜನೀತಿಶಾಸ್ತ್ರ ಗ್ರಂಥಗಳ ಆಧಾರದ ಮೇಲೆ, ಸಮಕಾಲೀನ ರಾಜಕೀಯ ಪರಿಸ್ಥಿತಿಗಳನ್ನು ಆಧರಿಸಿ, ರಚಿಸಿದ ಸ್ವತಂತ್ರವಾದ ಒಂದು ರಾಜನೀತಿಗ್ರಂಥ. ಕೌಟಿಲ್ಯನ ಅರ್ಥಶಾಸ್ತ್ರಾಧ್ಯಯನಕ್ಕೆ ಇದು ಪ್ರವೇಶಿಕೆ.

**೨೫೮. ಮಲಯಾಳಂ ಕಥೆಗಳು**

ಸಂ: ಕರೀಗೌಡ ಬೀಚನಹಳ್ಳಿ

ಪುಟ: X+೧೧೮, ವರ್ಷ: ೨೦೦೪, ರೂ: ೭೦.೦೦

ಪರಿವಿಡಿ

೧. ದೇವರ ಚಿಟ್ಟೆ

೨. ಹದಿನಾಲ್ಕರ ಪ್ರಾಯದಲ್ಲಿ

೩. ದೆವ್ವದ ಮಾತು

೪. ಜಡಿ ಮಳೆಯ ಮರುದಿನ

೫. ಪೆಸಹಾ ಹಬ್ಬ; ಮಾಮಲ್ಲಪುರದ ಮೊಲಗಳು

೬. ಮುದಿತಾಯಿ; ಭೂಮಿಯ ಆಕ್ರಂದನ

೭. ಮಕ್ಕಳು; ಹೆಮ್ಮರಗಳು ಬೀಳುವಾಗ

೮. ಕುಲಚಿಹ್ನೆ; ಒಂದು ದಿನದ ಕೆಲಸ

೯. ರಿಕ್ಷಾವಾಲ ಪಪ್ಪುವಿನ ಭವಿಷ್ಯದತ್ತ

೧೦. ಓಕ್ಕಿನಾವದ ಪತಿವ್ರತೆಯರು

ಮಲಯಾಳಂನಿಂದ ಕನ್ನಡಕ್ಕೆ ಅನುವಾದಿಸಿದ ಕತೆಗಳ ಸಂಕಲನವಿದು. ಮಲಯಾಳಂನ ಪ್ರಮುಖ ಕತೆಗಾರರ ಒಟ್ಟು ೧೪ ಕತೆಗಳನ್ನು ಸೃಜನಶೀಲವಾಗಿ ಇಲ್ಲಿ ಅನುವಾದಿಸಲಾಗಿದೆ.

**೨೫೯. ಮಲಯಾಳಂ ನಾಟಕಗಳು**

ಸಂ: ಮೋಹನ ಕುಂಟಾರ್

ಪುಟ: VIII+XIV+೯೮, ವರ್ಷ: ೨೦೦೪, ರೂ: ೫೦.೦೦

ಪರಿವಿಡಿ

೧. ನೋಡ್ತ್ರಿರಿ ಇನ್ನೊಮ್ಮೆ ಬರ್‍ತಾನೌನು

೨. ಬಡಪಾಯಿ ಉಸ್ಮಾನ್

೩. ಮಂತ್ರದಂಡದ ಇನ್ನೊಂದು ತುದಿ

ಮಲಯಾಳಂನ ಖ್ಯಾತ ನಾಟಕಕಾರರಾದ ಸಿ.ಜೆ. ಥೋಮಸ್, ಪಿ. ಬಾಲಚಂದ್ರನ್ ಹಾಗೂ ಪಿ.ಎಂ. ತಾಜ್ ಅವರ ಮೂರು ನಾಟಕಗಳ ಕನ್ನಡ ಸೃಜನಶೀಲ ಅನುವಾದ ಇಲ್ಲಿದೆ.




**೨೬೦. ರಾಮಾಯಣ : ಮರುದರ್ಶನ**

ಸಂ: ಮಂಜುನಾಥ ಬೇವಿನಕಟ್ಟಿ

ಪುಟ: xii+೨೦೮, ವರ್ಷ: ೨೦೦೮, ರೂ: ೧೦೦

ಪರಿವಿಡಿ

೧. ರಾಮಾಯಣ, ರಾಮಾಯಣದ ಯುಗ, ರಾಮಾಯಣದ ರಾಜಕೀಯ

೨. ಮಹಾಪರಂಪರೆ ಮತ್ತು ಉಪಪರಂಪರೆಗಳ ನಡುವೆ ಬುಡಕಟ್ಟು ರಾಮಾಯಣಗಳು

೩. ಜಾನಪದ ರಾಮಾಯಣ, ಮಹಾಭಾರತ

೪. ಹಲವು ರಾಮಕತೆಗಳು; ರಾಮಾಯಣದ ವಿಮರ್ಶೆ

೫. ರಾಮಾಯಣ-ನಮ್ಮ ನೆಲೆಗಟ್ಟು

೬. ರಾಮಾಯಣದ ಜಗಳ, ರಮಾಯಣದ ಪಕ್ಷಪಾತ, ರಾಮನ ವ್ಯಕ್ತಿತ್ವ ವಿಮರ್ಶೆ

೭. ಮೌಖಿಕ ರಾಮಾಯಣಗಳು; ಹಿಂದೂ ಧರ್ಮದಲ್ಲಿ ರಾಮ-ಕೃಷ್ಣರು

ಮಹರ್ಷಿ ವಾಲ್ಮೀಕಿ ರಾಮಾಯಣವು ಪ್ರಪಂಚದ ಎಲ್ಲಾ ಪ್ರಮುಖ ಭಾಷೆಗಳಿಗೂ ಅನುವಾದ ಗೊಂಡು, ಅದರ ಕುರಿತು ಹಲವಾರು ಬಗೆಯ ವಿಮರ್ಶೆ-ವಿಶ್ಲೇಷಣೆಗಳು ಇಂದಿಗೂ ನಡೆಯುತ್ತಿವೆ. ಇಂತಹ ಪ್ರಯತ್ನಗಳು ಕನ್ನಡದಲ್ಲೂ ಬಂದಿವೆ. ಇವುಗಳಲ್ಲಿ ಆಯ್ದ ಕೆಲವನ್ನು ಸಂಗ್ರಹಿಸಿ ಮುಂದಿನ ಅಧ್ಯಯನಕಾರರಿಗೆ ಇದೊಂದು ಆಕರ ಗ್ರಂಥವಾಗುವಂತೆ *ಈ* ಕೃತಿಯನ್ನು ಸಂಪಾದಿಸಲಾಗಿದೆ.




**೨೬೧. ಲಜ್ಜಾಗೌರಿ**

ಮರಾಠಿ ಮೂಲ: ರಾಮಚಂದ್ರ ಚಿಂತಾಮಣ ಢೇರೆ

ಕನ್ನಡಕ್ಕೆ ಅನು: ವಿಠಲರಾವ್ ಗಾಯಕ್ವಾಡ್

ಪುಟ: XXII+೨೫೨, ವರ್ಷ: ೨೦೦೩, ರೂ: ೧೨೦.೦೦

ಪರಿವಿಡಿ

೧. ಲಜ್ಜಾಗೌರಿ

೨. ಜೋಗುಳಾಂಬ

೩. ಮಾತಂಗೀ

೪. ಮಾತಂಗೀಪಟ್ಟ; ಅಂಬುವಾಚೀ

೫. ಕುಂಭಪ್ರತೀಕ

೬. ಸೃಷ್ಟಿಯ ತವರು

೭. ಜೋತಿಬಾ

೮. ಸುಬ್ರಹ್ಮಣ್ಯ; ಅದಿತಿಯ ರೂಪಗಳು

೯. ಪರಿಶಿಷ್ಟ ಒಂದು: ಜೋತಿಬಾ

೧೦. ಪರಿಶಿಷ್ಟ ಎರಡು: ಲಜ್ಜಾಗೌರಿ-ಒಂದು ಕಲ್ಪನಾಬಂಧ ಒಂದು ಚರ್ಚೆ

ನಮ್ಮ ಪ್ರಾಚೀನ ಸಂಸ್ಕೃತಿಯ ಅಂಗವಾಗಿ ರೂಪುಗೊಂಡ ಲಜ್ಜಾಗೌರಿ ಸಂಪ್ರದಾಯದ ಚಾರಿತ್ರಿಕ, ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಹಾಗೂ *ಈ* ಸಂಪ್ರದಾಯ ಕಂಡುಬರುವ ಭಾರತದ ಬೇರೆ ಬೇರೆ ನೆಲೆಗಳನ್ನು *ಈ* ಕೃತಿಯಲ್ಲಿ ಶೋಧಿಸಲಾಗಿದೆ. ಹೊಸದೃಷ್ಟಿ, ಧೋರಣೆಗಳ ಹಿನ್ನೆಲೆಯಲ್ಲಿ ಆದಿಮಾತೆಯ ಸ್ವರೂಪ ಮತ್ತು ಉಪಾಸನೆಯನ್ನು ಚಿತ್ರಿಸಿರುವ *ಈ* ಕೃತಿ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ತೀರಾ ಉಪಯುಕ್ತವಾದುದು.




**೨೬೨. ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ**

ಸಂ: ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪ

ಪುಟ: xxxii+೧೫೬, ವರ್ಷ: ೨೦೦೨, ರೂ: ೮೦.೦೦

ಪರಿವಿಡಿ

೧. ಮಿತ್ರಭೇದ ತಂತ್ರ

೨. ಸುಹೃಲ್ಲಾಭ ತಂತ್ರ

೩. ಸಂಧಿವಿಗ್ರಹ ತಂತ್ರ

೪. ಲಬ್ಧನಾಶ ತಂತ್ರ

೫. ಕಾರ್ಯತ್ವ ತಂತ್ರ

ಸಂಸ್ಕೃತದ ವಿಷ್ಣುಶರ್ಮನಿಂದ ರಚಿತಗೊಂಡಿರುವ ಸಂಸ್ಕೃತ ಪಂಚತಂತ್ರದ ಕತೆಗಳ ಕನ್ನಡ ಸಾರಸಂಗ್ರಹ *ಈ* ಕೃತಿಯಲ್ಲಿದೆ. ಇದುವರೆಗೂ ಕನ್ನಡಿಗರಿಗೆ ಅಲಭ್ಯವಾಗಿದ್ದ ವಿಷ್ಣುಶರ್ಮನ ಪಂಚತಂತ್ರದ ಕಥೆಗಳು ಇದೀಗ *ಈ* ಕೃತಿಯಿಂದ ಲಭ್ಯವಾಗಿವೆ.




**೨೬೩. ಶ್ರೀ ಕೃಷ್ಣದೇವರಾಯನ ಆಮುಕ್ತಮಾಲ್ಯದ**

ಅನು : ನಿರುಪಮಾ

ಪುಟ : ೫೬ + ೧೦೪, ವರ್ಷ : ೨೦೧೦, ರೂ. ೮೦

ಶ್ರೀ ಕೃಷ್ಣದೇವರಾಯನ ಅಮುಕ್ತಮಾಲ್ಯದ ಕಾವ್ಯದ ಗದ್ಯಾನುವಾದವಿದು. ಮುಖ್ಯವಾಗಿ ರಾಜನೀತಿಯನ್ನು ಹೇಳುವ *ಈ* ಕೃತಿಯಲ್ಲಿ ಕೃಷ್ಣದೇವರಾಯನ ಸಮಕಾಲೀನ ಬದುಕಿನ ಸೂಕ್ಷ್ಮ ಅವಲೋಕನವು ಇದ್ದು ಹದಿನಾರನೇ ಶತಮಾನದ ಹಂಪೆಯು ಕಣ್ಣೆದುರಿಗೇ ಬಂದು ನಿಲ್ಲುವಂತಿದೆ *ಈ* ಕಾವ್ಯಾನುವಾದ.



**೨೬೪. ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗ**

ಸಂ: ಎಂ.ರಾಜಗೋಪಾಲಾಚಾರ್ಯ

ಪುಟ: viii+೭೮, ವರ್ಷ: ೧೯೯೮, ರೂ: ೩೦.೦೦

ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗದ ಬಗ್ಗೆ *ಈ* ಕೃತಿ ವಿಶ್ಲೇಷಿಸುತ್ತದೆ.

**೨೬೫. ಸಾಹಿತ್ಯ ವಿಮರ್ಶೆಯ ಮಾದರಿಗಳು**

ಲೇ: ಸಿ.ಆರ್. ಯರವಿನತೆಲಿಮಠ

ಪುಟ: xii+೫೮೮, ವರ್ಷ: ೨೦೦೮, ರೂ: ೩೦೦

ಪರಿವಿಡಿ

೧. ಸರ್ ಫಿಲಿಪ್ ಸಿಡ್ನಿ: 'ಕಾವ್ಯ ಸಮರ್ಥನೆ'

೨. ಜಾನ್ ಡ್ರೈಡನ್: 'ನಾಟಕ ಕಾವ್ಯ'

೩. ಅಲೆಕ್ಸಾಂಡರ್ ಪೋಪ್: 'ವಿಮರ್ಶೆ ಕುರಿತು ಪ್ರಬಂಧ'

೪. ಸ್ಯಾಮುವೆಲ್ ಜಾನ್ಸನ್ ಮತ್ತು ವಿಲ್ಯಂ ವರ್ಡ್ಸ್‌ವರ್ಥ್ 'ಮುನ್ನುಡಿ'

೫. ಎಸ್.ಟಿ.ಕೋಲ್ರಿಜ್: 'ಬೈಯೊಗ್ರಾಫಿಯಾ ಲಿಟರರಿಯಾ'

೬. ಪಿ.ಬಿ. ಶೆಲ್ಲಿ : 'ಕಾವ್ಯ ಸಮರ್ಥನೆ'

೭. ಜಾನ್ ಕೀಟ್ಸ್ ಪತ್ರಗಳು; ಎಫ್.ಆರ್. ಲೀವಿಸ್: 'ಕೀಟ್ಸ್'

೮. ಮ್ಯಾಥ್ಯೂ ಆರ್ನಲ್ಡ್: 'ಕಾವ್ಯ ವ್ಯಾಸಾಂಗ'
೯. ಡಿ.ಎಚ್.ಲಾರೆನ್ಸ್: 'ಕಾದಂಬರಿಯ ಮಹತ್ವ'
೧೦. ಟಿ.ಎಸ್.ಎಲಿಯಟ್: ಪರಂಪರೆ ಮತ್ತು ವ್ಯಕ್ತಿಪ್ರತಿಭೆ ಐ.ಎ.ರಿಚರ್ಡ್ಸ್: 'ಚತುರ್ವಿಧ ಅರ್ಥಗಳು'

*ಈ* ಮಹಾಸಂಪುಟವು ಕನ್ನಡದಲ್ಲಿ ಪ್ರಕಟವಾಗುತ್ತಿರುವ 'ಸಮಗ್ರ' ಪಾಶ್ಚಾತ್ಯ ಚಿಂತನೆ ರಿನೇಸನ್ಸ್ ಯುಗದಿಂದ ಆಧುನಿಕ ಯುಗದವರೆಗೆ ಆಗಿಹೋದ ಮಹತ್ವದ ಸಾಹಿತ್ಯ ಚಿಂತಕರ ಬರಹಗಳ ಅನುವಾದವನ್ನು *ಈ* ಸಂಪುಟವು ಒಳಗೊಂಡಿದೆ. ಇಲ್ಲಿಯ ಬರಹಗಳು ಹದಿನಾರನೆಯ ಶತಮಾನದಿಂದ ಪ್ರಾರಂಭವಾಗಿ ಇಪ್ಪತ್ತನೆಯ ಶತಮಾನದ ಮೊದಲ ಭಾಗದವರೆಗೂ ವ್ಯಾಪನಗೊಂಡಿವೆ. ಸರ್. ಫಿಲಿಫ್ ಸಿಡ್ನಿಯ 'ಕಾವ್ಯಸರ್ಮಥನೆ'ಯಿಂದ ಪ್ರಾರಂಭವಾಗಿ ನಮ್ಮ ಕಾಲದ ಸೂಕ್ಷ್ಮ ಚಿಂತಕ ಎಫ್.ಆರ್. ಲೀವಿಸ್‌ನ 'ಪುನರ್ ಮೌಲ್ಯೀಕರಣ' ಬರಹಗಳವರೆಗೂ ಇದು ವ್ಯಾಪಕಗೊಂಡಿದೆ. ಇಲ್ಲಿನ ಬರಹಗಳು ಕಾವ್ಯ, ನಾಟಕ, ವಿಮರ್ಶೆ, ಕಾದಂಬರಿ *ಈ* ಪ್ರಕಾರಗಳ ತಾತ್ವಿಕ ಚಿಂತನೆಯನ್ನು ಹೊತ್ತಿದೆ.




**೨೬೬. ಸಿಲಪ್ಪದಿಗಾರಂ**
ಮೂಲ: ಇಳಂಗೋವಡಿಗಳ್
ಕನ್ನಡಕ್ಕೆ: ಕುಕ್ಕಿಲ ಕೃಷ್ಣಭಟ್ಟ
ಪುಟ: x+೧೧೪, ವರ್ಷ: ೨೦೦೦, ರೂ: ೬೦.೦೦
ಪರಿವಿಡಿ
೧. ಪುಗಾರ್‌ಕಾಂಡ
೨. ಮಧುರೈ ಕಾಂಡ
೩. ವಂಚಿಕಾಂಡ

ಸಂಸ್ಕೃತಿ ಪ್ರಧಾನ ಕೃತಿಯಾಗಿರುವ ಸಿಲಪ್ಪದಿಗಾರಂನ ಕರ್ತೃ ಇಳಂಗೋವಡಿಗಳ್. ಸ್ತ್ರೀಗೆ ಪಾತಿವ್ರತ್ಯ, ರಾಜನಿಗೆ ನ್ಯಾಯಪರತೆ ಪರಮಮೌಲ್ಯ. ಇದನ್ನು ಸಾರುವುದೇ *ಈ* ಕೃತಿಯ ಮುಖ್ಯ ಉದ್ದೇಶ. ಇದು ತಮಿಳು ಮಹಾಕಾವ್ಯದ ಕನ್ನಡ ಗದ್ಯಕಥಾ ರೂಪ. ಸಿಲಪ್ಪದಿಗಾರಂ ಎಂದರೆ ಕಾಲ್ಗಡಗ ಸಂಬಂಧವನ್ನಾಧರಿಸಿದ ಕೃತಿ ಎಂದರ್ಥ.





# ೯

# ಕಲೆಗಳು

**೨೬೭. ಉತ್ತರ ಕರ್ನಾಟಕ ರಂಗಭೂಮಿ**
ಲೇ: ಎನ್ಕೆ
ಪುಟ: iv+೩೦, ವರ್ಷ: ೨೦೦೧, ರೂ: ೧೦.೦೦

*ಈ* ಕೃತಿಯಲ್ಲಿ ಉತ್ತರ ಕರ್ನಾಟಕದ ರಂಗಭೂಮಿ ಬಗ್ಗೆ ವಿವರವಾಗಿ ಪ್ರಸ್ತಾಪಿಸುತ್ತ, ರಂಗಭೂಮಿಯು ಜಾನಪದ ತಾಯಿಬೇರಿನಿಂದ ಅಂಕುರಿಸಿದ ಬಗೆಯನ್ನು ವಿಶ್ಲೇಷಿಸಲಾಗಿದೆ.

**೨೬೮. ಕನ್ನಡ ಚಲನಚಿತ್ರ ಇತಿಹಾಸ : ಸಂಪುಟ ೧**
ಸಂ: ವಿಜಯಾ ಮತ್ತು ಇತರರು
ಪುಟ: xvi+೮೨೬, ವರ್ಷ: ೨೦೦೧, ರೂ: ೧೦೦೦.೦೦ (ಎರಡು ಸಂಪುಟಗಳಿಗೆ)

ಕನ್ನಡದಲ್ಲಿ ೭೦ ವರ್ಷಗಳ ಸಾಧನಾಪಥವನ್ನು ಉಜ್ವಲವಾಗಿ ನಿರ್ಮಿಸಿರುವ ಚಲನಚಿತ್ರ ಇತಿಹಾಸವನ್ನು ಒಟ್ಟು ಎರಡು ಸಂಪುಟಗಳಲ್ಲಿ ಕಟ್ಟಿಕೊಡಲಾಗಿದೆ. *ಈ* ಸಂಪುಟದಲ್ಲಿ ಕನ್ನಡದ



ನೆಲದಲ್ಲಿ ನಡೆದ ಚಲನಚಿತ್ರ ಕೃಷಿಯ ಪರಿಚಯದೊಂದಿಗೆ ಅದು ಮೂಕಿ ಚಿತ್ರಗಳ ಜಗತ್ತಿನಿಂದ ವಾಕ್ಚಿತ್ರಗಳ ಜಗತ್ತಿಗೆ ಹೊರಳಿ ಬಂದ ಬಗೆ, ವಾಕ್ಚಿತ್ರಗಳ ಆರಂಭದ ಅಸ್ಥಿರ ಹೆಜ್ಜೆಗಳು, ರಂಗಭೂಮಿಯ ಪ್ರಭಾವಲಯದಿಂದ ಹೊರಬಂದ ಚಲನಚಿತ್ರ ಮಾಧ್ಯಮ ತನ್ನದೇ ಪ್ರಭಾವಲಯವೊಂದನ್ನು ಕಟ್ಟಿಕೊಂಡ ಪರಿ, ದಶಕದಿಂದ ದಶಕಕ್ಕೆ ಚಲನಚಿತ್ರ ಮಾಧ್ಯಮದಲ್ಲಾದ ಆವಿಷ್ಕಾರಗಳು, ಹೊಸ ತಂತ್ರಜ್ಞಾನದ ಅಳವಡಿಕೆ, ಪ್ರಾದೇಶಿಕವಾದ ಭಾಷಾ ಚಲನಚಿತ್ರಗಳ ನಿರ್ಮಾಣ, ಉಪಭಾಷಾ ಚಿತ್ರಗಳ ಭರಾಟೆ, ಕಲಾವಿದರ ಬದುಕು-ಬವಣೆ, ಅವರ ವೈಯಕ್ತಿಕ ಸಾಧನೆ, ಕಲೋದ್ಯಮದಲ್ಲಿ ಸಂಘ ಶಕ್ತಿ, ಚಲನಚಿತ್ರ ಉದ್ಯಮದ ಹಿತಚಿಂತಕವೆನಿಸಿದ್ದ ಪತ್ರಿಕೋದ್ಯಮ ಇತ್ಯಾದಿ ವಿಷಯಗಳ ಬಗ್ಗೆ ವೈಶಿಷ್ಟ್ಯಪೂರ್ಣ ಸಚಿತ್ರ ಲೇಖನಗಳಿವೆ. ಕನ್ನಡ ಚಲನಚಿತ್ರೋದ್ಯಮದ ಬೆಳವಣಿಗೆಯ ಹಾದಿಯಲ್ಲಿ ಶ್ರಮಿಸಿದ ಪ್ರತಿಭಾವಂತರ ಸೂಕ್ಷ್ಮ ಪರಿಚಯವೂ *ಈ* ಸಂಪುಟದಲ್ಲಿದೆ.

**೨೬೯. ಕನ್ನಡ ಚಲನಚಿತ್ರ ಇತಿಹಾಸ : ಸಂಪುಟ ೨**

ಸಂ: ವಿಜಯಾ ಮತ್ತು ಇತರರು

ಪುಟ: xvi+೮೬೭, ವರ್ಷ: ೨೦೦೧, ರೂ: ೧೦೦೦.೦೦ (ಎರಡು ಸಂಪುಟಗಳು ಸೇರಿ)

ಕನ್ನಡ ಚಲನಚಿತ್ರವೂ ನಾವೀನ್ಯಕ್ಕಾಗಿ ನಿರಂತರ ನಡೆಸಿದ ಹೊಸ ತಂತ್ರಜ್ಞಾನದ ಶೋಧ, ಅದು ಅನುಸರಿಸಿದ ಕಂಠದಾನ ಕಲೆ, ಚಿತ್ರಕ್ಕೆ ಸೃಜನಾತ್ಮಕ ಚೌಕಟ್ಟಾಗಿ ಛಾಯಾಗ್ರಹಣವನ್ನು ಅಳವಡಿಸಿದ ಪರಿ ಹಾಗು ಚಿತ್ರ ಸಂಕಲನ, ಚಲನಚಿತ್ರ ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ಪ್ರಸಾಧನ, ವಸ್ತ್ರಾಲಂಕಾರ, ಕೇಶಾಲಂಕಾರ, ಸಾಹಸ, ಕಲಾನಿರ್ದೇಶನದಲ್ಲಿ ಕನ್ನಡ ಚಲನಚಿತ್ರ ತೋರಿಸುವ ಹೊಸ ಬಗೆ, ಕನ್ನಡ ಚಲನಚಿತ್ರದಲ್ಲಿ ಸೆನ್ಸಾರ್ ಅಂಕುಶ, ಸ್ಟುಡಿಯೋ, ಚಿತ್ರಮಂದಿರಗಳು ಚಲನಚಿತ್ರದೊಂದಿಗೆ ಹೊಂದಿರುವ ನಂಟಿನ ಬಗ್ಗೆ *ಈ* ಸಂಪುಟದಲ್ಲಿ ವಿವರಣಾತ್ಮಕ ಸಚಿತ್ರ ಮಾಹಿತಿಗಳಿವೆ. ಚಿತ್ರೋದ್ಯಮದ ಯಶಸ್ಸಿನ ಬೆನ್ನೆಲುಬಾಗಿರುವ ಪ್ರಚಾರ, ಸೃಜನಶೀಲತೆಗೆ ಭದ್ರ ಬುನಾದಿಯಾಗಿ ಅಗತ್ಯವಾಗಿರುವ ಚಲನಚಿತ್ರ ಶಿಕ್ಷಣ ಹಾಗು ೨೦೪೫ ಚಿತ್ರಗಳ ನಿರ್ಮಾಣ ವಿವರಗಳೂ *ಈ* ಸಂಪುಟದಲ್ಲಿವೆ.



**೨೭೦. ಕನ್ನಡ ರಂಗಭೂಮಿ**

ಲೇ: ಬಿ.ವಿ.ವೈಕುಂಠರಾಜು

ಪುಟ: xii+೩೫೮, ವರ್ಷ: ೧೯೯೭, ರೂ: ೨೧೦.೦೦

ಪರಿವಿಡಿ

೧. ನಟರ ಕಾಲ

೨. ನಾಟಕಕಾರರ ಕಾಲ

೩. ನಿರ್ದೇಶಕರ ಕಾಲ

ಕನ್ನಡ ರಂಗಸಭೂಮಿಯ ಬಗ್ಗೆ ಸಮಗ್ರ ಮಾಹಿತಿ, ವಿಮರ್ಶೆ, ವಿಶ್ಲೇಷಣೆಯನ್ನು ನೀಡುವ ಕೃತಿ ಇದು. ೨೦ನೇ ಶತಮಾನದ ಕನ್ನಡ ರಂಗಭೂಮಿಯ ಸ್ಪಷ್ಟ ಚಿತ್ರಣ, ಪ್ರಮುಖ ಘಟ್ಟಗಳನ್ನು *ಈ* ಗ್ರಂಥ ಪರಿಚಯಿಸುತ್ತದೆ. ವೃತ್ತಿ ರಂಗಭೂಮಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು *ಈ* ಕೃತಿಯಲ್ಲಿವೆ.



**೨೭೧. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ**

ಲೇ: ಕೆ.ವಿ.ಕಾಳೆ

ಪುಟ: xiv+೧೬೦, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ಬದುಕು ಬಣ್ಣ; ಬಣ್ಣಗಳು; ಬಣ್ಣದ ಬಗೆಗಳು

೨. ಇತಿಹಾಸ ಪೂರ್ವಕಾಲದಲ್ಲಿ ಬಣ್ಣಗಳ ಬಳಕೆ; ಕರ್ನಾಟಕದ ಭಿತ್ತಿ ಚಿತ್ರಗಳಲ್ಲಿ ಬಣ್ಣಗಳು; ಹುಡಿಬಣ್ಣಗಳು; ರಸಚಿತ್ರ, ಧೂಳಿ ಚಿತ್ರಗಳ ಬಣ್ಣ

೩. ನೀರುಬಣ್ಣ; ಹಸ್ತಪ್ರತಿಗಳಲ್ಲಿ ಬಳಸುವ ಬಣ್ಣ; ಕರಕುಶಲ ಕಲಾಕೃತಿಗಳಲ್ಲಿ ಬಳಸುವ ಬಣ್ಣ; ತೊಗಲು ಗೊಂಬೆ, ಸೂತ್ರದ ಗೊಂಬೆಗಳಲ್ಲಿ ಬಳಸುವ ಬಣ್ಣ

೪. ಕಾವಿ ಬಣ್ಣ; ಮದರಂಗಿ ಬಣ್ಣ; ಗಂಜೀಫ ಎಲೆಗಳಲ್ಲಿ ಬಳಸುವ ಬಣ್ಣ; ಎಣ್ಣೆ ಬಣ್ಣಗಳು

೫. ಲೇಹ್ಯ ಬಣ್ಣ; ಗಾಜಿನ ಚಿತ್ರಗಳಲ್ಲಿ ಬಳಸುವ ಬಣ್ಣ; ಪೋಸ್ಟರ್ ಬಣ್ಣ; ಆಕ್ರಿಲಿಕ್ ಹಾಗೂ ಫ್ಯಾಬ್ರಿಕ್ ಬಣ್ಣ

೬. ಪೇಸ್ಟೆಲ್ ಹಾಗೂ ಕ್ರೇಯಾನ್ ಬಣ್ಣ; ಮೇಣ ಬಣ್ಣ

೭. ಕಪ್ಪುಬಣ್ಣ; ಸೀಸಕಡ್ಡಿಬಣ್ಣ; ಬಯಲಾಟಗಳ ಪ್ರಸಾಧನ ಬಣ್ಣ

೮. ರಂಗಭೂಮಿ ಪ್ರಸಾಧನ ಬಣ್ಣ; ಸುರಪುರ ಕಲಾಕೃತಿಗಳ ಬಣ್ಣ; ಮೈಸೂರು ಕಲಾಕೃತಿಗಳ ಬಣ್ಣ; ಎನಾಮಲ್ ಮತ್ತು ಸ್ಟೇನರ್ ಬಣ್ಣ

೯. ಸಮಕಾಲೀನ ಚಿತ್ರಕಲೆಯಲ್ಲಿ ಬಳಕೆಯಾಗುವ ಬಣ್ಣ

ಕರ್ನಾಟಕದಲ್ಲಿರುವ ವೈವಿಧ್ಯಮಯ ಕಲಾ ಪ್ರಕಾರಗಳಲ್ಲಿ, ಧಾರ್ಮಿಕ ವಿಧಿ ವಿಧಾನಗಳಲ್ಲಿ, ವಾಣಿಜ್ಯ ವ್ಯವಹಾರಗಳಲ್ಲಿ ಬಳಸುತ್ತಾ ಬಂದಿರುವ ಬಣ್ಣಗಳನ್ನು ಕುರಿತ ಕೃತಿಯಿದು. ವಿವಿಧ ಕಲಾಪ್ರಕಾರಗಳಲ್ಲಿ ವಿವಿಧ ಬಣ್ಣಗಳ ಉಪಯೋಗದ ಜತೆಗೆ ವಿಶೇಷವಾಗಿ ಚಿತ್ರಕಲೆ ಪ್ರಕಾರ ದಲ್ಲಿ, ಕಲಾವಿದರು ಬಳಸುವ ಅನೇಕ ಬಣ್ಣಗಳು ಹಾಗು ಬಣ್ಣಗಳನ್ನು ಬಳಸುವಾಗ ಅನುಸರಿಸುವ ತಂತ್ರಜ್ಞಾನಗಳ ಬಗ್ಗೆ *ಈ* ಕೃತಿಯಲ್ಲಿ ಸಮಗ್ರ ವಿವರಣೆ ಇದೆ.

**೨೭೨. ಕಲಾಗ್ರಾಮ ಮರಿಯಮ್ಮನ ಹಳ್ಳಿ**

ಲೇ: ಗುಡಿಹಳ್ಳಿ ನಾಗರಾಜ

ಪುಟ: ii+೨೮, ವರ್ಷ: ೧೯೯೯, ರೂ: ೫.೦೦

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಕಲಾಗ್ರಾಮ ಮರಿಯಮ್ಮನಹಳ್ಳಿಯ ಸಾಂಸ್ಕೃತಿಕ ಮುಖವನ್ನು *ಈ* ಕೃತಿ ಪರಿಚಯಿಸುತ್ತದೆ. *ಈ* ಊರು ಕನ್ನಡ ರಂಗಭೂಮಿಗೆ ನೀಡಿರುವ ಅಮೂಲ್ಯ ಕಾಣಿಕೆ ಮತ್ತು ವೃತ್ತಿ ರಂಗಭೂಮಿಗೆ ಅದು ಸಾಕಷ್ಟು ಮಹಿಳಾ ಕಲಾವಿದೆಯರನ್ನು ಕೊಟ್ಟಿರುವುದರ ಬಗ್ಗೆ ಹಾಗು ಇಡೀ ಊರಿನ ಕಲಾಸಂಪತ್ತಿನ ಹಲವು ಮುಖಗಳನ್ನು *ಈ* ಕೃತಿ ತೆರೆದಿಡುತ್ತದೆ.

**೨೭೩. ಕೊಣ್ಣೂರ ನಾಟಕ ಕಂಪನಿ**

ಲೇ: ರಾಮಕೃಷ್ಣ ಮರಾಠೆ

ಪುಟ: xiv+೭೩, ವರ್ಷ: ೧೯೯೯, ರೂ: ೪೦.೦೦

ಪರಿವಿಡಿ

೧. ಪೂರ್ವರಂಗ
೨. ಕೊಣ್ಣೂರ ಶ್ರೀ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ
೩. ತಿರುಗಾಟ
೪. ನಾಟಕಗಳು
೫. ನಟ-ನಟಿಯರು
೬. ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ
೭. ಶಿವಮೂರ್ತಿ ಸ್ವಾಮಿಯವರ ಡೈರಿಗಳು
೮. ಕಲಾವಿದ ಸಾಹಿತಿಗಳು ಕಂಡಂತೆ

ಕರ್ನಾಟಕದಲ್ಲಿ ಹಲವಾರು ನಾಟಕ ಕಂಪನಿಗಳು ಕ್ರಿಯಾಶೀಲವಾಗಿದ್ದುಕೊಂಡು ರಂಗಭೂಮಿ ಪ್ರಪಂಚವನ್ನು ಜೀವಂತವಾಗಿರಿಸಿದ್ದವು. ಅದರಲ್ಲಿ ಕೊಣ್ಣೂರು ನಾಟಕ ಕಂಪನಿಯೂ ಒಂದು. ಉತ್ತರ ಕರ್ನಾಟಕದ ವೃತ್ತಿ ನಾಟಕ ಕಂಪನಿಯಾಗಿದ್ದ ಕೊಣ್ಣೂರ ನಾಟಕ ಕಂಪನಿಯ ಬಗ್ಗೆ ಸಮಗ್ರ ಮಾಹಿತಿಗಳು *ಈ* ಕೃತಿಯಲ್ಲಿವೆ. ರಂಗಭೂಮಿಯ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಇದು ಉತ್ತಮ ಕೈಪಿಡಿಯಾಗಬಲ್ಲದು.



**೨೭೪. ದೃಶ್ಯ ಕಲಾವಿದರು**

ಲೇ: ಎನ್. ಮರಿಶಾಮಾಚಾರ್

ಪುಟ: X+೧೫೪, ವರ್ಷ: ೨೦೦೩, ರೂ: ೧೦೦.೦೦

ಪರಿವಿಡಿ

೧. ರಾಜಾ ರವಿವರ್ಮ; ಅಬನೀಂದ್ರನಾಥ ಠಾಗೂರ್; ನಂದ ಲಾಲ್ ಬೋಸ್; ಗಗನೇಂದ್ರನಾಥ ಠಾಕೂರ್; ಕ್ಷಿತೀಂದ್ರನಾಥ ಮಜುಂದಾರ್
೨. ಕೆ.ವೆಂಕಟಪ್ಪ; ಜಾಮಿನಿರಾಯ್; ಅಸಿತ್‌ಕುಮಾರ್ ಅಲ್ದಾರ; ದೇವಿಪ್ರಸಾದ್ ರಾಯ್ ಚೌದುರಿ; ಶೈಲಜ ಮುಖರ್ಜಿ
೩. ಅಮೃತಾ ಶೇರ್‌ಗಿಲ್ ; ರವೀಂದ್ರನಾಥ್ ಠಾಗೂರ್; ರಾಮಕಿಂಕರ್ ಬೈಜ್; ಬಿನೋದ ಬಿಹಾರಿ ಮುಖರ್ಜಿ; ಎನ್.ಎಸ್.ಬೇಂದ್ರೆ
೪. ಕೆ.ಕೆ.ಹೆಬ್ಬಾರ್; ಎಂ.ಎಫ್.ಹುಸೇನ್; ಕೆ.ಸಿ.ಎಸ್.ಪಣಿಕರ್; ಕೆ.ಜಿ.ಸುಬ್ರಹ್ಮಣ್ಯನ್
೫. ಜೆ.ಸುಲ್ತಾನ್ ಅಲಿ; ಸೋಮನಾಥ ಹೋರೆ; ಸ್ವೆತಾಸ್ಲಾವ್ ರೋರಿಚ್; ಎಸ್.ಎಂ.ಪಂಡಿತ್; ಎಸ್.ಎನ್.ಸ್ವಾಮಿ
೬. ಪಾಲ್ ಸಿಜಾನ್; ಪಿಯರಿ ಆಗಸ್ಟ್ ರೆನ್ವಾರ್; ಪಾಲ್ ಗೌಗಿನ್; ವಿನ್ಸೆಂಟ್ ವ್ಯಾನ್‌ಗೋ; ಹೆನ್ರಿ ಮತೀಸ್; ಪಾಬ್ಲೊ ಪಿಕಾಸೋ
೭. ಮಾರ್ಕ್ ಶೆಗಾಲ್; ಹೆನ್ರಿ ಮೂರ್; ಜಾನ್ ಮಿರೋ; ಸಾಲ್ವಡಾರ್ ಡಾಲಿ

ದೃಶ್ಯಕಲಾ ಮಾಧ್ಯಮದಲ್ಲಿ ಪ್ರಪಂಚ ಖ್ಯಾತಿಯನ್ನು ಪಡೆದ ಒಟ್ಟು ೩೬ ಮಂದಿ ಹಿರಿಯ ಭಾರತೀಯ ಕಲಾವಿದರು ಮತ್ತು ಭಾರತೇತರ ಕಲಾವಿದರ ಕಲಾ ಪರಿಚಯ ಹಾಗೂ ಅವರ ಅನನ್ಯ ಸಾಧನೆಗಳನ್ನು ಬಿಂಬಿಸುವ ಪ್ರಯತ್ನ *ಈ* ಕೃತಿಯಲ್ಲಿದೆ.

**೨೭೫. ಬಳ್ಳಾರಿ ಜಿಲ್ಲೆಯ ಚಿತ್ರಕಲೆ**

ಲೇ: ಎಚ್. *ಈ.* ಬಸವರಾಜಪ್ಪ

ಪುಟ: iv+೪೦, ವರ್ಷ: ೨೦೦೬, ರೂ: ೧೦.೦೦

ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಕಲೆಯ ಕಾಲಾವಧಿಯಿಂದ ಹಿಡಿದು, ಇತ್ತೀಚಿನ ಕಾಲಾವಧಿಯವರೆಗೂ ಬಳ್ಳಾರಿ ಜಿಲ್ಲೆಯಲ್ಲಿ ವರ್ಣಚಿತ್ರಕಲೆ ಬೆಳೆದು ಬಂದ ಕ್ರಮವನ್ನು ಕುರಿತು ವಿಶ್ಲೇಷಿಸುವುದು *ಈ* ಕೃತಿಯ ಮುಖ್ಯ ಉದ್ದೇಶ. ಪ್ರಾಗೈತಿಹಾಸಿಕ ಕಾಲದ ವರ್ಣ ಚಿತ್ರಗಳು, ವಿಜಯನಗರ ಕಾಲದ ಭಿತ್ತಿಚಿತ್ರಗಳು, ವಿಜಯನಗರೋತ್ತರ ಕಾಲದಿಂದಲೂ ಜಾನಪದ ಶೈಲಿಯ ಚಿತ್ರಗಳಾದ ಹಚ್ಚೆ, ಹಾಕುವಿಕೆ, ರಂಗೋಲಿ, ತೊಗಲುಗೊಂಬೆಯ ಚಿತ್ರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.




**೨೭೬. ಬೃಹದ್ದೇಶೀ**

ಲೇ: ಮತಂಗ ಮುನಿ

ಸಂ: ಆರ್.ಸತ್ಯನಾರಾಯಣ

ಪುಟ: xxxii+೨೧೮, ವರ್ಷ: ೧೯೯೮, ರೂ: ೪೦೦.೦೦

ಪರಿವಿಡಿ

೧. ಗ್ರಂಥಕರ್ತೃ; ಮತಂಗ
೨. ಗ್ರಂಥ : ಬೃಹದ್ - ದೇಶೀ

೩. ಬೃಹದ್ದೇಶಿಯ ಗದ್ಯಖಂಡಗಳು; ಬೃಹದ್ದೇಶಿಯ ಲುಪ್ತಾಂಶಗಳು ಉದ್ಧೃತಿಗಳು ಮತ್ತು ಉಲ್ಲೇಖಗಳು
೪. ಬೃಹದ್ದೇಶಿ ಮತ್ತು ಅಭಿನವಭಾರತಗಳಲ್ಲಿ ಪಾಠಸಾದೃಶ್ಯ
೫. ಬೃಹದ್ದೇಶಿಯ ಪ್ರಾಮಾಣಿಕರು: ಅನಿರ್ದಿಷ್ಟ ಆಕರಗಳು
೬. ನಾಮನಿರ್ದಿಷ್ಟ ಪ್ರಾಮಾಣಿಕರ ಪಥಕ
೭. ಮತಂಗಪ್ರಭಾವ
೮. ಬೃಹದ್ದೇಶಿಯ ರಚನಾಕಾಲ
೯. ಬೃಹದ್ದೇಶಿ ಮತ್ತು ನಾಟ್ಯಶಾಸ್ತ್ರ : ಒಂದು ತುಲನೆ
೧೦. ಬೃಹದ್ದೇಶಿಯ ಪ್ರಕೃತಸಂಸ್ಕರಣ : ವೈಶಿಷ್ಟ್ಯಗಳು

ಭಾರತೀಯ ಸಂಗೀತಕ್ಕೆ ದೇಶೀ ಧ್ವನಿನಿರೂಪಣೆಯನ್ನು ಒದಗಿಸಿದಂತಹ ಮತಂಗನಿಂದ ರಚಿಸಲ್ಪಟ್ಟ *ಈ* ಗ್ರಂಥ ಭಾರತೀಯ ಸಂಗೀತಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಪ್ರಪ್ರಥಮ ಗ್ರಂಥ. ಅತ್ಯಂತ ಸುಲಲಿತವಾಗಿ, ಪಾಂಡಿತ್ಯಪೂರ್ಣವಾಗಿ, ನಮ್ಮ ಸಂಸ್ಕೃತಿ ಸಂಗೀತಗಳಿಗೆ ಹೊಸ ಆಯಾಮವನ್ನು ನಿರ್ಮಿಸಿದ ಬಹುಶ್ರುತವಾದ ಗ್ರಂಥವೂ ಹೌದು. ಅನೇಕ ಶಾಸ್ತ್ರಗಳಲ್ಲಿ ಪ್ರಗಲ್ಭ ವಿದ್ವಾಂಸನಾದ ಕನ್ನಡಿಗ ಮತಂಗ ಮುನಿಯು ಸಾವಿರದೈನೂರು ವರ್ಷಗಳಷ್ಟು ಹಿಂದೆಯೇ ನಮ್ಮ ಸಂಗೀತದ ಲಕ್ಷ್ಯ ಲಕ್ಷಣಗಳ ಬುನಾದಿಯನ್ನು ಸಿದ್ಧಪಡಿಸಿ ಸಂಸ್ಕೃತದಲ್ಲಿ ಬರೆದ ಗ್ರಂಥವಿದು. *ಈ* ಸಂಸ್ಕೃತ ಗ್ರಂಥದ ಶಾಸ್ತ್ರೀಯ ಪಠ್ಯವನ್ನು ರೂಪಿಸಿ ಅದರ ಕನ್ನಡಾನುವಾದವನ್ನು *ಈ* ಕೃತಿಯಲ್ಲಿ ನೀಡಲಾಗಿದೆ.




**೨೭೭. ಭಾವಾಭಿವ್ಯಂಜಕ ಛಾಯಾಚಿತ್ರಕಲೆ**

ಲೇ: ದೊಡ್ಡೇರಿ ವೆಂಕಟಗಿರಿರಾವ್

ಪುಟ: viii+೧೧೬, ವರ್ಷ: ೧೯೯೫, ರೂ: ೧೦೦.೦೦

ಪರಿವಿಡಿ

೧. ಭಾವಾಭಿವ್ಯಂಜಕ ಛಾಯಾಚಿತ್ರಕಲೆ,
೨. ಮೂಲತತ್ವಗಳು
೩. ಛಾಯಾಚಿತ್ರಣ-ಜಡವಸ್ತುಗಳು, ಭೂ ದೃಶ್ಯ ನಿರೂಪಣೆ
೪. ಛಾಯಾಚಿತ್ರಣ-ಮಕ್ಕಳು, ಮೃಗ ಪಕ್ಷಿಗಳು
೫. ಛಾಯಾಚಿತ್ರಣ-ಪ್ರಕೃತಿ, ಚಲಿಸುವ ಮೋಡಗಳು
೬. ಛಾಯಾಚಿತ್ರಣ-ಪೋರ್‌ಟ್ರೇಟ್
೭. ಛಾಯಾಚಿತ್ರಣ-ಆ್ಯಕ್ಷನ್ ಕ್ಲೋಸಪ್
೮. ಛಾಯಾಚಿತ್ರಣ-ತಂತ್ರಜ್ಞಾನ

ಛಾಯಾಚಿತ್ರಣಕ್ಕೆ ಸಂಬಂಧಿಸಿದ ಎಲ್ಲ ಸಾಧನ ಯಂತ್ರೋಪಕರಣಗಳ ಯಥೋಚಿತ ಪರಿಚಯ, ಬಳಕೆಯ ವಿಧಾನ ವೈಖರಿಗಳ ಮನವರಿಕೆಯು *ಈ* ಕೃತಿಯಲ್ಲಿದೆ. ಮುಖ್ಯವಾಗಿ ಅಭಿವ್ಯಂಜಕ ಛಾಯಾಚಿತ್ರದ ಬಗ್ಗೆ *ಈ* ಪುಸ್ತಕದಲ್ಲಿ ಮಾಹಿತಿಗಳಿವೆ.

**೨೭೮. ಮರಾಠಿ ದಲಿತ ರಂಗಭೂಮಿ**

ಲೇ: ಚಂದ್ರಕಾಂತ ಪೋಕಳೆ

ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಸುಮಾರು ನೂರೈವತ್ತು ವರ್ಷಗಳ ಸುದೀರ್ಘವಾದ ಇತಿಹಾಸವಿರುವ ಮರಾಠಿ ರಂಗಭೂಮಿಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ದಲಿತ ರಂಗಭೂಮಿಯ ಬಗ್ಗೆ *ಈ* ಕೃತಿ ಬಹಳಷ್ಟು ಆಸಕ್ತಿಪೂರ್ಣ ಮಾಹಿತಿಗಳನ್ನು ನೀಡುತ್ತದೆ.




**೨೭೯. ರಂಗ ಪ್ರತಿಸ್ಪಂದನ**

ಲೇ: ಜಯಪ್ರಕಾಶ ಮಾವಿನಕುಳಿ

ಪುಟ: x+೧೬೮, ವರ್ಷ: ೨೦೦೧, ರೂ: ೧೨೦.೦೦

ಪರಿವಿಡಿ

೧. ರಂಗಭೂಮಿ, ಭಾರತೀಯ ರಂಗಭೂಮಿ
೨. ರಂಗಭೂಮಿ ಮತ್ತು ಸಮಾಜ; ಮೇಯರ್ ಹೋಲ್ಡ್ ರಂಗಭೂಮಿ
೩. ಕಲೆ ಮತ್ತು ರಾಜಕೀಯ ಸಿದ್ಧಾಂತ; ರಂಗಭೂಮಿ ಮತ್ತು ಅಭಿವ್ಯಕ್ತಿವಾದ
೪. ನಾಟಕಕಾರ ಮತ್ತು ಸಮಾಜ ಪರಿವರ್ತನ; ನಾಟಕ ಸಾಹಿತ್ಯ ಕೃತಿ ಮತ್ತು ಪ್ರದರ್ಶನ ಕಲೆ
೫. ಅಸಂಗತ ನಾಟಕ ಮತ್ತು ಬೀದಿನಾಟಕಗಳು
೬. ನಾಟಕ ಓದುವುದು ಮತ್ತು ಅರ್ಥಮಾಡಿಕೊಳ್ಳುವ ಬಗೆ
೭. ರಂಗಭೂಮಿ ಮತ್ತು ಪಾವಿತ್ರ್ಯ; ರಂಗಭೂಮಿ ಮತ್ತು ಪ್ರೇಕ್ಷಕ
೮. ಟಿ.ವಿ. ಮತ್ತು ರಂಗಭೂಮಿ; ನಾಟಕ ಮತ್ತು ಮೌಲ್ಯಗಳು
೯. ರಂಗನಿರ್ದೇಶಕ, ರಂಗಶಿಸ್ತು; ರಂಗಭೂಮಿ ಮತ್ತು ವಿಮರ್ಶಕ
೧೦. ಮಕ್ಕಳ ರಂಗಭೂಮಿ ರಂಗಧ್ವನಿ

ರಂಗಭೂಮಿಯ ವಿವಿಧ ಆಯಾಮಗಳ ಮೇಲೆ ಕೇಂದ್ರಿಕೃತಗೊಂಡ ೨೫ ಪ್ರಬುದ್ಧ ಲೇಖನಗಳ ಸಂಕಲನವೇ *ಈ* ಕೃತಿ.

## ೨೮೦. ರಾಗ ದೀಪಿಕೆ : ಹಿಂದೂಸ್ತಾನಿ ರಾಗ ಮತ್ತು ಚೀಜುಗಳ ಗ್ರಂಥ

ಲೇ: ಹನುಮಣ್ಣನಾಯಕ ದೊರೆ

ಪುಟ: ೩೮+೩೩೮, ವರ್ಷ: ೨೦೦೮, ರೂ: ೨೦೦.೦೦

ಪರಿವಿಡಿ

೧. ಪ್ರಾತರ್ಗೇಯ ರಾಗಗಳು

೨. ದಿನಗೇಯ ರಾಗಗಳು

೩. ಸಾಯಂಗೇಯ ರಾಗಗಳು

೪. ರಾತ್ರಿಗೇಯ ರಾಗಗಳು

*ಈ* ಗ್ರಂಥದಲ್ಲಿ ಹಿಂದೂಸ್ತಾನಿ ರಾಗ ಮತ್ತು ಚೀಜುಗಳ ಬಗ್ಗೆ ಸವಿಸ್ತಾರವಾದ ವಿವರಗಳಿವೆ. ಇಲ್ಲಿ ಹಲವಾರು ರಾಗಗಳನ್ನು ಸಂಗೀತ ಸಿದ್ಧಾಂತದ ಸಮಯ ವಿಭಜನೆಯನುಸಾರ ಸ್ಥೂಲವಾಗಿ ಪ್ರಾತರ್ಗೇಯ, ದಿನಗೇಯ, ಸಾಯಂಗೇಯ, ರಾತ್ರಿಗೇಯ ಎಂದು ನಾಲ್ಕು ವಿಂಗಡಣೆ ಮಾಡಿಕೊಂಡು ಸ್ವರ ಸಂಯೋಜನೆ ಮಾಡಲಾಗಿದೆ. ಇಲ್ಲಿರುವ ಎಲ್ಲ ರಾಗಗಳಿಗೆ ಶಾಸ್ತ್ರೀಯ ವಿವರಗಳನ್ನು ಹಾಗೂ ಪ್ರತಿಯೊಂದು ರಾಗದ ಬಗ್ಗೆ ಸಂಸ್ಕೃತ ಗ್ರಂಥಗಳಲ್ಲಿರುವ ಅನೇಕ ಉಲ್ಲೇಖಗಳನ್ನು ನೀಡಲಾಗಿದೆ. ಪರಂಪರಾನುಗತವಾಗಿ ನಡೆದು ಬಂದ ಅನೇಕ ಚೀಜುಗಳಿಗೆ ಸ್ವರ ಪ್ರಸ್ತಾರ ಹಾಕಿ ಸ್ವರಲಿಪಿಗೆ ಅಳವಡಿಸಲಾಗಿದೆ. ಹಿಂದೂಸ್ತಾನಿ ಸಂಗೀತದಲ್ಲಿ ಗೇಯ ಪ್ರಕಾರಗಳಿಗೆ ಚೀಜುಗಳೆನ್ನುತ್ತಾರೆ. ಇಂತಹ ಚೀಜುಗಳು ಮತ್ತು ಅವುಗಳನ್ನು ಗ್ರಂಥಸ್ಥ ಗೊಳಿಸುವ ಕಾರ್ಯಗಳು ಸಾಮಾನ್ಯವಾಗಿ ಔತ್ತರೇಯ ಭಾಷೆಗಳಲ್ಲಿವೆ. ಕನ್ನಡದಲ್ಲಿ ಇದುವರೆಗೆ *ಈ* ಬಗೆಯ ಪ್ರಯತ್ನಗಳು ನಡೆದದ್ದು ಅಪರೂಪ. ರಾಗ, ಚೀಜು, ಸ್ವರಪ್ರಸ್ತಾರ ಹೀಗೆ ವಿವಿಧ ಸಂಗೀತ ಸಂಬಂಧಿ ವಿವರಗಳನ್ನು *ಈ* ಕೃತಿಯಲ್ಲಿ ಕ್ರೋಡೀಕರಿಸಿ ಅವೆಲ್ಲ ಸುಲಭವಾಗಿ ಸಂಗೀತಗಾರರಿಗೆ ಲಭ್ಯವಾಗುವಂತೆ ಮಾಡಲಾಗಿದೆ.




## ೨೮೧. ವಚನಗಾನವಾಹಿನಿ

ಲೇ : ಹನುಮಣ್ಣನಾಯಕ ದೊರೆ

ಪುಟ: xii+೧೦೦, ವರ್ಷ: ೨೦೦೫, ರೂ: ೬೦.೦೦

ಪರಿವಿಡಿ

೧. ಬಸವಣ್ಣನ ವಚನಗಳ ಸ್ವರಸಂಕೇತಗಳು

೨. ಅಕ್ಕಮಹಾದೇವಿ ವಚನಗಳ ಸ್ವರಸಂಕೇತಗಳು

೩. ಅಲ್ಲಮಪ್ರಭು ವಚನಗಳ ಸ್ವರಸಂಕೇತಗಳು

೪. ಜೇಡರ ದಾಸಿಮಯ್ಯನ ವಚನಗಳ ಸ್ವರಸಂಕೇತಗಳು

೫. ಹಾವಿನಾಳ ಕಲ್ಲಯ್ಯನವರ ವಚನಗಳ ಸ್ವರಸಂಕೇತಗಳು

೬. ಸೊಡ್ಡಳ ಬಾಚರಸರ ವಚನಗಳ ಸ್ವರಸಂಕೇತಗಳು

ಮೌಖಿಕ ಪರಂಪರೆಯಲ್ಲಿರುವ ಶಿವಶರಣರ ವಚನಗಳನ್ನು ಸಂಗೀತ ಶಾಸ್ತ್ರದ ಪರಿಭಾಷೆಯಲ್ಲಿ ಹಾಗೂ ಹಿಂದೂಸ್ತಾನಿ ಸಂಗೀತದ ಚೌಕಟ್ಟಿನಲ್ಲಿ ಒಂದು ವಿಶಿಷ್ಟವಾದ ಸ್ವರಲಿಪಿಗೆ ಅಳವಡಿಸಲು ಪ್ರಯತ್ನವಿರುವ ಗ್ರಂಥ ಇದಾಗಿದೆ. ಕನ್ನಡದ ಮಹತ್ವದ ವಚನಗಳಿಗೆ ಸ್ವರ ಸಂಭಾಷಣೆಗಳನ್ನು ಕಟ್ಟಿಕೊಡುವ ಪ್ರಯತ್ನವೂ ಇಲ್ಲಿದೆ. ಕನ್ನಡದ ದೇಸೀ ಸ್ವರೂಪದ ವಚನಗಳು, ಸಂಗೀತ ಶಾಸ್ತ್ರದ ಪರಿಭಾಷೆಗೆ ದಕ್ಕುವ ಮೂಲಕ, ಮಾರ್ಗ ಮತ್ತು ದೇಸಿಗಳ ಸಮನ್ವಯಗಳ ಒಂದು ಮುಖ್ಯಪ್ರಯೋಗವನ್ನು *ಈ* ಗ್ರಂಥದ ಮೂಲಕ ಕಟ್ಟಿಕೊಡಲಾಗಿದೆ.

## ೨೮೨. ವಾಚಿಕಾಭಿನಯ

ಲೇ: ಮೋಹನ ಕುಂಟಾರ್

ಪುಟ: ii+೩೮, ವರ್ಷ: ೧೯೯೬, ರೂ: ೨.೦೦

ನಾಟ್ಯದ ಅಭಿನಯಗಳಲ್ಲಿ ನಾಲ್ಕು ಪ್ರಮುಖಾಂಗಗಳು. ಅವುಗಳಲ್ಲಿ ಮುಖ್ಯವಾದ ವಾಚಿಕಾಭಿನಯದ ಬಗ್ಗೆ *ಈ* ಕೃತಿ ಕೇಂದ್ರೀಕೃತಗೊಂಡಿದೆ.

## ೨೮೩. ಸ್ವಾತಂತ್ರ್ಯ ಹೋರಾಟ ಮತ್ತು ರಂಗಭೂಮಿ

ಲೇ: ಶಾಮಸುಂದರ ಬಿದರಕುಂದಿ

ಪುಟ: ii+೩೨, ವರ್ಷ: ೧೯೯೮, ರೂ: ೬.೦೦

ನಾಟಕವೆಂಬ ಮಾಧ್ಯಮ ಸ್ವಾತಂತ್ರ್ಯ ಹೋರಾಟದ ಸನ್ನಿವೇಶದಲ್ಲಿ ಅಭಿವ್ಯಕ್ತಿಸಿದ ಪರಿ *ಈ* ಕೃತಿಯ ಹೂರಣ. ಭಾರತೀಯ ನಾಟಕ ಕಲಾತ್ಮಕತೆಯನ್ನು ಸ್ವೀಕರಿಸುತ್ತಲೇ ಸಾಂಸ್ಕೃತಿಕ ಒತ್ತಡವನ್ನು ನಿರ್ವಹಿಸಿದ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ. ಭಾರತದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಹಾಗೂ ಆ ಸಂದರ್ಭಕ್ಕೆ ಕನ್ನಡ ರಂಗಭೂಮಿ ಪ್ರತಿಕ್ರಿಯಿಸಿದ ಬಗೆಗಿನ ಸಮೀಕ್ಷೆ *ಈ* ಕೃತಿಯಲ್ಲಿದೆ.

## ೧೦

## ಕೃಷಿ-ಕೃಷಿ ಸಮಸ್ಯೆ

**೨೮೪. ಉರಿದಾವೊ ನೇಗಿಲು**

ಸಂ : ಮೊಗಳ್ಳಿ ಗಣೇಶ್

ಪುಟ : xxii + ೯೮, ವರ್ಷ : ೨೦೦೯, ರೂ. ೮೦.೦೦

ಪರಿವಿಡಿ

೧. ವ್ಯವಸ್ಥೆಯ ಹುನ್ನಾರದಲ್ಲಿ ಸಾವಿನ ಬೆಳೆ
೨. ಮಣ್ಣಲ್ಲಿ ಮಣ್ಣಾದವರಿಗೆ ಯಾವ ನಾಳೆಯೊ
೩. ಹೆಪ್ಪುಗಟ್ಟುತ್ತಿದೆ ಮಣ್ಣಿನ ಮಕ್ಕಳ ನೆತ್ತರು
೪. ಮಣ್ಣಿಗೆ ವಿಷವಿಕ್ಕಿ ಬೆಳೆವುದೇನು
೫. ರೈತ ಪರವಿರದ ಸರಕಾರವೆ ನರಕ
೬. ಆತ್ಮವಿಶ್ವಾಸದ ವ್ಯವಸಾಯಕ್ಕೆ ಬದ್ಧರಾಗಬೇಕು
೭. ಇನ್ನಾದರು ಸರಕಾರ ಕಣ್ಣು ತೆರೆಯಲಿ
೮. ವಂಚಕರ ಮಾರುಕಟ್ಟೆಯಲ್ಲಿ ರೈತರು ಹರಾಜಾದರು
೯. ಸ್ವಾವಲಂಬನೆ ನಿಜವಾದ ದೇಸಿ
೧೦. ಜಾಗತೀಕರಣದ ಬೆಂಕಿಯಲ್ಲಿ ಜೀವದ ಬೆಲೆ ಎಷ್ಟು

ಇಂದಿನ ಯುವ ಜನಾಂಗ ರೈತ ಸಮುದಾಯದ ಅಂತರಾಳವನ್ನು ಅರಿತು ಆಧುನಿಕೋತ್ತರದ ಭಾರತದ ಕನಸುಗಳನ್ನು ಕಾಣಬೇಕಾಗಿದೆ. ನಾಳಿನ ಭಾರತವನ್ನು ಕಟ್ಟಬೇಕಾದ ಯುವ ಜನಾಂಗ ಐಟಿ ಬಿಟಿ ತಂತ್ರಜ್ಞಾನಕ್ಕೆ ಮಾರು ಹೋದರೆ ನಮ್ಮ ಕೃಷಿ ವ್ಯವಸ್ಥೆಯ ಭವಿಷ್ಯವೇನು ಎಂಬ ಆತಂಕದಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾದ ಶಂಭಾ ಸಂಶೋಧನಾ ಪ್ರಬಂಧ ಸ್ಪರ್ಧೆಗೆ ಬಂದಿರುವ ಲೇಖನಗಳು *ಈ* ಸಂಕಲನದಲ್ಲಿದೆ. 'ರೈತರ ಆತ್ಮಹತ್ಯೆ ಮತ್ತು ಕೃಷಿ ನೀತಿ' ಹಾಗೂ 'ಸ್ಥಾನೀಯವಾಗಿ ವಿವೇಚಿಸಿ ಜಾಗತಿಕವಾಗಿ ವರ್ತಿಸು' ಎಂಬ ಎರಡು ವಿಷಯಗಳ ಬಗ್ಗೆ ಬರೆದಿರುವ ಇಲ್ಲಿನ ಲೇಖನಗಳು ಯುವ ಪೀಳಿಗೆಯ ವೈಚಾರಿಕ ಪ್ರಖರತೆಗೆ ಸಾಕ್ಷಿಯಾಗಿವೆ.

**೨೮೫. ಕೃಷಿ ಮತ್ತು ಪೇಟೆಂಟ್**

ಲೇ: ಟಿ.ಎಸ್.ಚನ್ನೇಶ್

ಪುಟ: iv+೫೨, ವರ್ಷ: ೨೦೦೮, ರೂ: ೧೦.೦೦

ಹಿಂದೆ, ಕೃಷಿ ನಮ್ಮ ಒಂದು ಜೀವನಕ್ರಮವಾಗಿತ್ತು. ಇಂದು ಕೃಷಿ ಒಂದು ಉದ್ಯಮ. ಮಾರುಕಟ್ಟೆ ವ್ಯವಹಾರ, ಲಾಭ ನಷ್ಟಗಳು ದೇಶ ವಿದೇಶಗಳ ಬಂಡವಾಳ ಇವೆಲ್ಲವೂ ಇಂದು ಕೃಷಿಯನ್ನು ಸುತ್ತುವರಿದಿದೆ. ಕೃಷಿ ವಲಯದಲ್ಲಿ ಇಂತಹ ಬದಲಾವಣೆಯ ಪರ ಹಾಗೂ ವಿರೋಧಗಳ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಹಿತಾಸಕ್ತಿಗಳು ರೈತನನ್ನು ಹೇಗೆ ಗೊಂದಲದಲ್ಲಿ ಇಡುತ್ತಿವೆ, ರೈತ ಇದರಿಂದ ಪಾರಾಗುವ ಬಗೆ ಹೇಗೆ ಎಂಬ ಮಹತ್ವಪೂರ್ಣ ಮಾಹಿತಿಗಳು *ಈ* ಕೃತಿಯಲ್ಲಿ ಅಡಕಗೊಂಡಿವೆ.

**೨೮೬. ಕೃಷಿಜ್ಞಾನ ಪ್ರದೀಪಿಕೆ**

ಲೇ: ಘನಮಠದ ಶಿವಯೋಗಿಗಳು

ಪುಟ: viii+೩೩೬, ವರ್ಷ: ೧೯೯೮, ರೂ: ೧೦.೦೦

೧೯ನೇ ಶತಮಾನದಲ್ಲಿ ರಚಿಸಲ್ಪಟ್ಟಿರುವ *ಈ* ಗ್ರಂಥದಲ್ಲಿ ತೋಟಗಾರಿಕೆ, ಕೃಷಿಗೆ ಸಂಬಂಧಿಸಿದಂತೆ ಮಣ್ಣು, ಬೀಜ, ಧಾನ್ಯ, ಗಿಡಗಳ ಸಂರಕ್ಷಣೆ ಆರೈಕೆಯಿಂದ ಹಿಡಿದು, ನೀರಾವರಿ ವ್ಯವಸ್ಥೆವರೆಗಿನ ಕೃಷಿಜ್ಞಾನದ ವಿವರಣೆಯಿದೆ.

**೨೮೭. ಕೀಟಗಳು ಬದುಕುವ ದಾರಿ**

ಲೇ: ಪಿ.ಶಿವರಾಮ ರೈ

ಪುಟ: ೪೭, ವರ್ಷ: ೧೯೯೩, ರೂ: ೧೦.೦೦

ಮನೆ, ಗದ್ದೆ, ತೋಟ, ಕಾಡು ಹೀಗೆ ಎಲ್ಲೆಡೆ ಇರುವ ನೂರಾರು ಬಗೆಯ ಕೀಟಗಳು, ಜಗತ್ತಿನ ಪ್ರಾಣಿ ಪ್ರಪಂಚದ ಶೇ.೭೫ರಷ್ಟು ಪ್ರಮಾಣದವು. ಇವುಗಳಿಂದ ನಾನಾ ರೀತಿಯ ನಷ್ಟಗಳಿರುವುದರಿಂದ ಅವುಗಳನ್ನು ಸಂಹರಿಸುವ ಕ್ರಿಮಿನಾಶಕಗಳನ್ನು ಕಂಡು ಹಿಡಿಯಲಾಯಿತು. ಆದರೂ ಮನುಷ್ಯನ ಎಲ್ಲ ಪ್ರಯತ್ನಗಳೂ ನಿರರ್ಥಕವಾಗುತ್ತಿವೆ. ಕೀಟಗಳ ವಂಶಾಭಿವೃದ್ಧಿಯು ನಿರ್ಭಿತವಾಗಿದ್ದು ಅವು ಯಶಸ್ವೀ ಜೀವನ ನಡೆಸುತ್ತಿವೆ. ಇದಕ್ಕೆ ಕಾರಣವೇನು ಎಂಬುದನ್ನು *ಈ* ಪುಸ್ತಕ ವಿವರಿಸುತ್ತದೆ.

**೨೮೮. ಡಾ. ಎಂ.ಮಹದೇವಪ್ಪನವರ ಲೇಖನಗಳು**

ಲೇ: ಎಂ.ಮಹದೇವಪ್ಪ

ಪುಟ: viii+೧೯೦, ವರ್ಷ: ೧೯೯೯, ರೂ: ೧೫೦.೦೦




ಪರಿವಿಡಿ

೧. ಕರ್ನಾಟಕಕ್ಕೆ ಅತಿ ಯೋಗ್ಯ ಬತ್ತದ ತಳಿ

೨. ಬತ್ತದ ಹೊಸ ತಳಿಗಳು

೩. ಮಲೆನಾಡು-ಕರಾವಳಿಗೆ ಯೋಗ್ಯ ಬತ್ತದ ತಳಿಗಳು

೪. ನೀರಾವರಿ ಆಸರೆಗಳಲ್ಲಿ ಬತ್ತದ ತಳಿಗಳ ಆಯ್ಕೆ

೫. ಬತ್ತದ ಅಧಿಕ ಇಳುವರಿ, ಉತ್ಪಾದನೆಗೆ ಕ್ರಮ

೬. ಬತ್ತದ ಬೀಜೋದ್ಯಮ

೭. ಬತ್ತದ ಉತ್ಪಾದನೆ-ಇಳುವರಿಯಲ್ಲಿ ವೈಜ್ಞಾನಿಕ ಕ್ರಾಂತಿ

ನಾಡಿನ ಕೃಷಿಶಿಕ್ಷಣ ತಜ್ಞ ಡಾ. ಎಂ.ಮಹದೇವಪ್ಪನವರು ಕೃಷಿಯ ಬಗ್ಗೆ ತಾತ್ವಿಕ ಹಾಗು ಅನ್ವಯಿಕ ಅಧ್ಯಯನ ನಡೆಸಿ ಬರೆದ ಹಲವಾರು ಲೇಖನಗಳ ಗುಚ್ಛವೇ *ಈ* ಕೃತಿ. ಇಲ್ಲಿರುವ ೪೫ ಲೇಖನಗಳಲ್ಲಿ ಹೆಚ್ಚಿನ ಲೇಖನಗಳು ಭತ್ತದ ತಳಿ ಇಳುವರಿ ಬಗ್ಗೆ ಕೇಂದ್ರೀಕೃತಗೊಂಡಿವೆ.





# ೧೧

# ಕಾನೂನು

**೨೮೯. ನಾಗರಿಕ ಹಕ್ಕು ರಕ್ಷಣೆ ಕಾಯಿದೆ ೧೯೫೫**

ಲೇ: ಡಾ. ಡಿ.ವಿ. ಗುರುಪ್ರಸಾದ್

ಪುಟ: X+೪೮, ವರ್ಷ: ೨೦೦೬, ರೂ: ೪೦

ಪರಿವಿಡಿ

೧. ಪರಿಚಯ

೨. ನಾಗರಿಕ ಹಕ್ಕು ರಕ್ಷಣಾ ಕಾಯಿದೆ ೧೯೫೫

೩. ನಾಗರಿಕ ಹಕ್ಕು ರಕ್ಷಣಾ ನಿಯಮಗಳು ೧೯೭೭

೪. ಪರಿಶಿಷ್ಟರ ಮೇಲೆ ದೌರ್ಜನ್ಯ ತಡೆ ಕಾಯಿದೆ ಸ್ಥೂಲ ರೂಪುರೇಷೆಗಳು

ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಕಾನೂನುಗಳು ದೊರೆಯಬೇಕು ಎನ್ನುವ ಪ್ರಜಾಪ್ರಭುತ್ವದ ತತ್ತ್ವಕ್ಕೆ ಅನುಗುಣವಾಗಿ ನಾಗರಿಕ ಹಕ್ಕು ರಕ್ಷಣೆ ಕಾಯಿದೆ ೧೯೫೫ನ್ನು ಇಲ್ಲಿ ಸರಳ ಕನ್ನಡದಲ್ಲಿ ತಿಳಿಸಿಕೊಡಲಾಗಿದೆ.




**೨೯೦. ಪರಿಸರ ಸಂರಕ್ಷಣಾ ಕಾಯ್ದೆಗಳು ೧೯೮೬**

ಲೇ: ಕೆ.ಎಂ.ವೀರಪ್ಪ

ಪುಟ: ೭೬, ವರ್ಷ: ೨೦೦೬, ರೂ: ೪೦

ಪರಿವಿಡಿ

೧. ಭಾರತದ ಪರಿಸರ ದರ್ಶನ

೨. ಪರಿಸರ ಸಂರಕ್ಷಣಾ ಕಾಯ್ದೆಗಳು ೧೯೮೬

೩. ಪರಿಸರ ಹಾಗೂ ಪರಿಣಾಮ ಅಧ್ಯಯನ

೪. ವನ್ಯಜೀವಿ ರಕ್ಷಣಾ ಕಾಯ್ದೆ ೧೯೭೨

೫. ಸುಸ್ಥಿರ ಅಭಿವೃದ್ಧಿ ೧೯೯೨

೬. ಪರಿಸರ ಸಂರಕ್ಷಣೆ ವಿವೇಕವಾಣಿ

ಶ್ರೀಸಾಮಾನ್ಯರಿಗಾಗಿ ಕಾನೂನು ಎಂಬ ಮಾಲಿಕೆಯಡಿ ಕನ್ನಡದಲ್ಲಿ ರಚಿಸಲ್ಪಟ್ಟ *ಈ* ಗ್ರಂಥದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾನೂನು ವಿವರಗಳನ್ನು ಸ್ಥೂಲವಾಗಿ ಇಲ್ಲಿ ನೀಡಲಾಗಿದೆ. ನಮ್ಮ ಉದಾರೀಕರಣ, ಜಾಗತೀಕರಣ ಹಾಗೂ ಆರ್ಥಿಕ ಸ್ಥಿತಿಗತಿಯ ಪ್ರಗತಿಗಾಗಿ ಹಮ್ಮಿಕೊಂಡಿರುವ ಕೈಗಾರೀಕರಣವು, ಪರಿಸರಕ್ಕೆ ಉಂಟುಮಾಡುತ್ತಿರುವ ಹಾನಿ ಹಾಗೂ ಅದಕ್ಕೆ ಸಂಬಂಧಿಸಿದ ಕಾಯಿದೆಗಳ ಬಗ್ಗೆ *ಈ* ಕೃತಿಯಲ್ಲಿ ಸಾಕಷ್ಟು ಕಾನೂನು ಮಾಹಿತಿಗಳು ಲಭ್ಯವಿದೆ.



**೨೯೧. ಮಜೂರಿ ಸಂದಾಯ ಅಧಿನಿಯಮ ೧೯೩೬**

ಲೇ: ಬಿ.ವೆಂ.ಪುಟ್ಟೇಗೌಡ

ಪುಟ: x+೭೦, ವರ್ಷ: ೨೦೦೬, ರೂ: ೪೦

ಪರಿವಿಡಿ

೧. ಮಜೂರಿ ಸಂದಾಯ ಅಧಿನಿಯಮ ೧೯೩೬

೨. ಮಂಜೂರಿ ಸಂದಾಯದ ಪ್ರಕ್ರಿಯೆ ನಿಯಮಗಳು

ಶ್ರೀ ಸಾಮಾನ್ಯರಿಗಾಗಿ ಕಾನೂನು ಮಾಲೆಯಡಿಯಲ್ಲಿ ಆಂಗ್ಲಭಾಷೆಯಲ್ಲಿರುವ ಮಜೂರಿ ಸಂದಾಯ ಅಧಿನಿಯಮ ೧೯೩೬ ಇಲ್ಲಿ ಕನ್ನಡದಲ್ಲಿ ನೀಡಲಾಗಿದೆ. ೧೯೩೬ರ ಮಜೂರಿ ಸಂದಾಯ ಅಧಿನಿಯಮ ಕೆಲವು ವರ್ಗದ ನೌಕರಿಗೆ ನೀಡಬೇಕಾದ ಮಜೂರಿಯನ್ನು ನಿಯಂತ್ರಿಸುತ್ತದೆ. ಇಲ್ಲವೆ ಕ್ರಮಗೊಳಿಸುವ ಕಾನೂನಿನ ಬಗ್ಗೆ *ಈ* ಗ್ರಂಥ ಅವಶ್ಯ ಮಾಹಿತಿಗಳನ್ನು ಕನ್ನಡದಲ್ಲಿ ನೀಡುತ್ತದೆ.

**೨೯೨. ಮಾನವ ಹಕ್ಕುಗಳು**

ಲೇ: ಎನ್.ಎಸ್. ಸಂಗೊಳ್ಳಿ

ಪುಟ: X+೫೪, ವರ್ಷ: ೨೦೦೬, ರೂ: ೪೦

ಪರಿವಿಡಿ

೧. ಮಾನವ ಹಕ್ಕುಗಳು

೨. ಮಹಿಳೆ ಮತ್ತು ಮಾನವ ಹಕ್ಕುಗಳು

೩. ಮಾನವ ಹಕ್ಕುಗಳು ಮತ್ತು ನ್ಯಾಯಾಂಗ

೪. ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ ೧೯೯೩

೫. ಮಾನವ ಹಕ್ಕುಗಳು ಮತ್ತು ಮಗು

ಬೇರೆ ಬೇರೆ ರಾಷ್ಟ್ರಗಳಲ್ಲಿ ಆ ರಾಷ್ಟ್ರದ ನಾಗರಿಕರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದನ್ನು *ಈ* ಪುಸ್ತಕದಲ್ಲಿ ವಿವರವಾಗಿ ತುಂಬ ಸರಳವಾಗಿ ಕನ್ನಡದಲ್ಲಿ ತಿಳಿಸಿಕೊಡಲಾಗಿದೆ.

**೨೯೩. ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ**

ಲೇ: ಶಂಕರ ಖಂಡೇರಿ

ಪುಟ: x+೬೦, ವರ್ಷ: ೨೦೦೬, ರೂ: ೪೦

ಪರಿವಿಡಿ

೧. ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ

೨. ದತ್ತಕ ಅಧಿನಿಯಮ

೩. ಜೀವನಾಂಶ ಅಧಿನಿಯಮ

ಶ್ರೀಸಾಮಾನ್ಯರಿಗಾಗಿ ಕಾನೂನು ಎಂಬ ಮಾಲಿಕೆಯಡಿ ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮದ ಬಗ್ಗೆ ಕನ್ನಡದಲ್ಲಿ ರಚಿತವಾಗಿರುವ *ಈ* ಕೃತಿಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಹಿಂದೂ ದತ್ತಕ ವಿಧಿಗಳನ್ನು ವಿವರಿಸಲಾಗಿದ್ದು ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಸಂದರ್ಭೋಚಿತವಾಗಿ ವಿವರಿಸಲಾಗಿದೆ.

# ೧೨

# ಕಾವ್ಯಮೀಮಾಂಸೆ-ಛಂದಸ್ಸು




**೨೯೪. ಛಂದೋಂಬುಧಿ**

ಲೇ: ಟಿ.ವಿ.ವೆಂಕಟಾಚಲಶಾಸ್ತ್ರೀ

ಪುಟ: xxviii+೧೫೬, ವರ್ಷ: ೨೦೦೭, ರೂ: ೬೦.೦೦

ಪರಿವಿಡಿ

೧. ಸಂಜ್ಞಾಪ್ರಕರಣಂ

೨. ಸಮವೃತ್ತಪ್ರಕರಣಂ

೩. ಮೂಲಾವೃತ್ತಾರ್ಧಸಮವಿಷಮಾದಿವೃತ್ತಪ್ರಕರಣಂ

೪. ಕಂದಾದಿಮಾತ್ರಾವೃತ್ತಪ್ರಕರಣಂ

೫. ಕರ್ಣಾಟವಿಷಯಜಾತಿವೃತ್ತಪ್ರಕರಣಂ

೬. ಷಟ್ಪ್ರತ್ಯಯವಿವರಣಪ್ರಕರಣಂ

ಛಂದೋಂಬುಧಿಯ ಪದ್ಯಗಳ ಜೊತೆಗೆ ಅವುಗಳಿಗೆ ಸರಳವಾದ ಹೊಸಗನ್ನಡ ಗದ್ಯದಲ್ಲಿ ಅನುವಾದವನ್ನು ಇಲ್ಲಿ ಕೊಟ್ಟಿರುವುದು ತುಂಬಾ ಉಪಯುಕ್ತವಾಗಿದೆ. ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಅಧ್ಯಯನಕಾರರಿಗೆ *ಈ* ಜನಪ್ರಿಯ ಆವೃತ್ತಿ ಒಂದು ಕೈಗನ್ನಡಿ ಯಾಗಬಲ್ಲದು.




**೨೯೫. ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ**

ಲೇ: ಮಲ್ಲೇಪುರಂ ಜಿ.ವೆಂಕಟೇಶ

ಪುಟ: xiv+೪೨೨, ವರ್ಷ: ೨೦೦೦, ರೂ: ೧೨೦.೦೦

*ಈ* ಕೋಶವು ಸಂಸ್ಕೃತ ಕಾವ್ಯಮೀಮಾಂಸೆ ಹಾಗೂ ಕನ್ನಡ ಕಾವ್ಯ ಮೀಮಾಂಸೆಯ ಪರಿಭಾಷೆಗಳ ವಿವರಣೆಗಳನ್ನು ಒಳಗೊಂಡಿದೆ. ಪರಿಭಾಷೆಗಳ ಕುರಿತಾದ ಚಾರಿತ್ರಿಕ ನೆಲೆ ಇಲ್ಲಿ ಚರ್ಚಿತವಾಗಿದೆ.




**೨೯೬. ವಚನ ಸಾಹಿತ್ಯ ಛಂದೋಲಯ**

ಲೇ: ಎಸ್.ಎಸ್.ಅಂಗಡಿ

ಪುಟ: xiv+೧೬೮, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ವಚನ ಭಾಷೆ ಮತ್ತು ಛಂದಸ್ಸು

೨. ವಚನಶೈಲಿ ಮತ್ತು ಛಂದಸ್ಸು

೩. ಅಕ್ಷರಾವೃತ್ತಿ-ಭಾವಾಭಿವ್ಯಕ್ತಿ

೪. ವಚನ ಸಾಹಿತ್ಯ ಮತ್ತು ಮಾತ್ರಾಲಯ

೫. ವಚನ ಸಾಹಿತ್ಯ ಮತ್ತು ಅಂಶಲಯ

೬. ವಚನ ಸಾಹಿತ್ಯ ಮತ್ತು ಮುಕ್ತ ಛಂದಸ್ಸು

೭. ವಚನ ಸಾಹಿತ್ಯ ಛಂದಃಪ್ರಭಾವ

*ಈ* ಕೃತಿಯಲ್ಲಿ ವಚನಕಾರರ ಛಂದೋಲಯದ ಬಹುಸಾಧ್ಯತೆಗಳ ನೋಟಗಳು ದೊರೆಯುತ್ತವೆ. ಪದ್ಯ ಜಾತಿಗಳಲ್ಲಿ ಯತಿ, ನಾದ, ಲಯ, ಕಾಲ ಇವುಗಳ ಸ್ಥಾನ ವಿವೇಚನೆಯ ಜೊತೆಗೆ ಭಾವಕ್ಕಿರುವ ಅವುಗಳ ಸಂಬಂಧದ ವಿವೇಚನೆಯೂ ಆಗಿದೆ. ಭಾಷೆ ಮತ್ತು ಭಾವದ ಜೊತೆಗೆ ಛಂದೋಲಯದ ಶೋಧ ನಡೆದರೆ ಛಂದಸ್ಸಿನ ಅಧ್ಯಯನ ತುಂಬಾ ವಿಶಿಷ್ಟವಾಗುತ್ತದೆ. ವಚನಗಳ ಛಂದೋಲಯ ಚಲನಶೀಲವಾದದ್ದು. ಪಾದದ ನಿಯತತೆ, ಪ್ರಾಸದ ಕಟ್ಟು, ಸಂಸ್ಕೃತ ಸಮಾಸಗಳನ್ನು ಬಳಸಿಕೊಂಡದಲ್ಲಿ ಅದಕ್ಕೆ ಆಡುಮಾತಿನ ಲಯ ಪ್ರಾಪ್ತವಾಯಿತು. ಅದುವೇ ಛಂದಸ್ಸಿನ ಕ್ಷೇತ್ರದಲ್ಲಿ ವಚನನಕಾರರು ಮಾಡಿದ ವೈಚಾರಿಕ ಕ್ರಾಂತಿ. ಇದು *ಈ* ಕೃತಿಯ ವಿಶೇಷ.




**೨೯೭. ಹೊಸಗನ್ನಡ ಛಂದಸ್ಸು**

ಲೇ: ಎಸ್.ಎಸ್. ಅಂಗಡಿ

ಪುಟ: xii+೧೫೪, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ಕಾವ್ಯಭಾಷೆ ಮತ್ತು ಛಂದಸ್ಸು

೨. ಕಾವ್ಯಶೈಲಿ ಮತ್ತು ಛಂದಸ್ಸು

೩. ಹೊಸಗನ್ನಡ ಛಂದಸ್ಸಿನ ತತ್ವಗಳು

೪. ಹೊಸಗನ್ನಡ ಕಾವ್ಯ: ಮಾತ್ರಾಲಯ

೫. ಹೊಸಗನ್ನಡ ಕಾವ್ಯ: ಅಂಶಲಯ

೬. ಹೊಸ ಛಂದೋರೂಪಗಳು: ಬಂಧ ಮತ್ತು ರಚನೆ

೭. ಶಿಶುಪ್ರಾಸಗಳು ಛಂದೋಲಯ
೮. ಜಾನಪದ ಛಂದಸ್ಸು: ರಚನೆ ವಿನ್ಯಾಸ

ಹೊಸಗನ್ನಡ ಛಂದಸ್ಸಿನ ಹಲವು ಮುಖಗಳನ್ನು ಇಲ್ಲಿ ಬಿಡಿಸಿ ತೋರಿಸಲಾಗಿದೆ. ಹೊಸಗನ್ನಡ ಛಂದಸ್ಸಿನ ವರ್ಣನಾತ್ಮಕ ವಿಶ್ಲೇಷಣೆ ಕಡೆಗೆ ಹೆಚ್ಚಿಗೆ ಗಮನ ಕೊಡದೆ ಕಾವ್ಯದ ಆಶಯಕ್ಕೂ, ಛಂದಸ್ಸಿಗೂ ಇರುವ ಸಾವಯವ ಸಂಬಂಧಗಳನ್ನು ಕುರಿತು *ಈ* ಗ್ರಂಥದಲ್ಲಿ ವಿಶ್ಲೇಷಿಸಲಾಗಿದೆ. ಛಂದಸ್ಸನ್ನು ಭಾಷೆ, ಶೈಲಿ ಮತ್ತು ಅಲಂಕಾರಗಳ ಜೊತೆಗೆ ಪೃಥಕ್ಕರಿಸಿ ನೋಡಿರುವುದು *ಈ* ಕೃತಿಯ ವಿಶೇಷ.

## ೧೩

## ಕೈಗಾರಿಕೆ-ಕೈಗಾರಿಕಾ ಉತ್ಪನ್ನಗಳು

**೨೯೮. ಇಳಕಲ್ಲ ಸೀರೆ**

ಲೇ: ಮಹೇಶ ತಿಪ್ಪಶೆಟ್ಟಿ

ಪುಟ: ii+೩೪, ವರ್ಷ: ೨೦೦೦, ರೂ: ೧೦.೦೦

ಇಳಕಲ್ ಪರಂಪರೆಯ ಚಿತ್ರಣವನ್ನು, ನೇಕಾರಿಕೆಯ ದೃಷ್ಟಿಕೋನದಿಂದ ಮಾತ್ರವಲ್ಲದೆ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ದಾಖಲಿಸುವ ಹಾಗು ಬಿಚ್ಚಿಡುವ ಪ್ರಯತ್ನ *ಈ* ಕೃತಿಯಲ್ಲಿದೆ. ಇಳಕಲ್ಲ ಸೀರೆಯ ಸಮಾಜೋ ಆರ್ಥಿಕ ಸ್ಥಿತಿಗತಿಯ ಬಗ್ಗೆ *ಈ* ಕೃತಿ ಮುಖ್ಯವಾಗಿ ಚರ್ಚಿಸುತ್ತದೆ.

**೨೯೯. ಮಂಗಳೂರು ಹಂಚು**

ಲೇ: ಪೀಟರ್ ವಿಲ್ಸನ್ ಪ್ರಭಾಕರ

ಪುಟ: ii+೨೮, ವರ್ಷ: ೧೯೯೯, ರೂ: ೧೦.೦೦

ನಾಗರಿಕ ಸಮಾಜದಲ್ಲಿ ಹಂಚು ಉದ್ಯಮದ ಇತಿಹಾಸ ಹಾಗು ಕರ್ನಾಟಕದಲ್ಲಿ ಹಂಚು ಉದ್ಯಮದ ಮೂಲವನ್ನು *ಈ* ಕೃತಿಯಲ್ಲಿ ವಿಶ್ಲೇಷಿಸುತ್ತ, ವಿಶ್ವದಲ್ಲೇ ಪ್ರಖ್ಯಾತಗೊಂಡ ಕರ್ನಾಟಕ 'ಮಂಗಳೂರು ಹಂಚು'ಗಳ ವೈಶಿಷ್ಟ್ಯ ಹಾಗೂ ಅದರ ಆರಂಭದ ಮೂಲವನ್ನು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.

## ೧೪

## ಗ್ರಂಥಾಲಯ-ಮಾಹಿತಿ ತಂತ್ರಜ್ಞಾನ

**೩೦೦. ತಿರುಳು ತೋರಣ**

ಸಂ: ಎಚ್. ನಾಗವೇಣಿ

ಪುಟ: XII+೧೪೮, ವರ್ಷ: ೨೦೦೪, ರೂ: ೫೦.೦೦

ಕನ್ನಡ ವಿಶ್ವವಿದ್ಯಾಲಯ ೧೯೯೨ ರಿಂದ ೨೦೦೨ ವರೆಗೆ ೧೦ ವರ್ಷಗಳ ಅವಧಿಯಲ್ಲಿ ಪ್ರಕಟಿಸಿದ ಎಲ್ಲಾ ಪುಸ್ತಕಗಳ ತಿರುಳನ್ನಷ್ಟೇ ಆಯ್ದು ಅವುಗಳನ್ನು ೩೭ ವಿಷಯಾವಾರು ಶೀರ್ಷಿಕೆಗಳಲ್ಲಿ ವಿಂಗಡಿಸಿ ನೀಡಿರುವ ವಿವರಣಾತ್ಮಕ ಗ್ರಂಥಸೂಚಿ ಇದು.

**೩೦೧. ಮಾಹಿತಿಯ ರಾಜಮಾರ್ಗ**

ಲೇ: ಮಂಜುನಾಥ ಪೆಂಡಕೂರು

ಅನು: ಗುರುಮೂರ್ತಿ ಪೆಂಡಕೂರು

ಪುಟ: ii+೨೩, ವರ್ಷ: ೧೯೯೫, ರೂ: ೨.೦೦

*ಈ* ಮಾಹಿತಿ ಸ್ಫೋಟ ಯುಗದಲ್ಲಿ ಮಾಹಿತಿ ಸಂಗ್ರಹಣೆ ಮತ್ತು ಪರಾಮರ್ಶೆ ಹಾಗೂ ಮಾಹಿತಿ ಉತ್ಪಾದನೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ ಹೇಗೆ-ಎಷ್ಟು ಎಂಬ ವಿಷಯದ ಬಗ್ಗೆ *ಈ* ಕಿರುಪುಸ್ತಕದಲ್ಲಿ ಚರ್ಚಿಸಲಾಗಿದೆ.

೧೫

# ಜನಪದ-ಜಾನಪದ ನಂಬಿಕೆ, ಆಚರಣೆ, ಸಂಸ್ಕಾರ

**೩೦೨. ಅಕ್ಕಮ್ಮನ ಆಚರಣೆ**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: iv+೩೪, ವರ್ಷ: ೨೦೦೨, ರೂ: ೧೦.೦೦

ಕರ್ನಾಟಕ ಮತ್ತು ಆಂಧ್ರಪ್ರದೇಶದ ಹಲವು ಪ್ರದೇಶಗಳಲ್ಲಿ *ಈ* ಆಚರಣೆ ರೂಢಿಯಲ್ಲಿದೆ. ಬಯಲು ಸೀಮೆಯಲ್ಲಿ ಹೆಚ್ಚು ಪ್ರಚಲಿತವಿರುವ *ಈ* ಆಚರಣೆ ಸಪ್ತಮಾತೃಕೆಯರ ಕಲ್ಪನೆಗೆ ಪೂರಕವಾದದ್ದು. ಶೂದ್ರ ವರ್ಗದ ಜನಪದ ಪರಂಪರೆಯಲ್ಲಿ *ಈ* ಆಚರಣೆ ೭ ಜನ ಅಕ್ಕತಂಗಿಯರ ಆಚರಣೆಯಾಗಿ ಹೆಸರು ಪಡೆದಿರುವುದರ ವಿವರಣೆ *ಈ* ಕಿರುಹೊತ್ತಿಗೆಯಲ್ಲಿದೆ.




**೩೦೩. ಅಲೆಮಾರಿಗಳ ಸ್ಥಿತಿಗತಿ**

ಸಂ : ಸ.ಚಿ. ರಮೇಶ್

ಪುಟ: x+೩೦೫, ವರ್ಷ: ೨೦೦೫, ರೂ: ೧೨೦.೦೦

ಪರಿವಿಡಿ

೧. ಸಮಕಾಲೀನ ಸಮಾಜ ಮತ್ತು ಅಲೆಮಾರಿಗಳು; ಅಲೆಮಾರಿಗಳ ಅಧ್ಯಯನ ಸಮೀಕ್ಷೆ; ಅಲೆಮಾರಿಗಳ ಪಯಣದ ಹಿಂದಿನ ಭೌಗೋಳಿಕ ಪರಿಸರ

೨. ಅಲೆಮಾರಿಗಳ ಸಮಕಾಲೀನ ಸ್ಥಿತಿ-ಗತಿ; ಆರ್ಥಿಕ ಸ್ಥಿತ್ಯಂತರಗಳು; ಅಲೆಮಾರಿಗಳ ಸಾಂಸ್ಕೃತಿಕ ಲೋಕದೃಷ್ಟಿ

೩. ಅಲೆಮಾರಿಗಳ ಕಲಾ ಪರಂಪರೆ; ಕರಕುಶಲ ಪರಂಪರೆ; ಸಾಮಾಜಿಕ ಪರಂಪರೆ

೪. ಅಲೆಮಾರಿ ಸಮುದಾಯ : ಸ್ಥಿರ ಸಮುದಾಯ-ವಾಸ್ತವ ಮತ್ತು ವೈವಿಧ್ಯ

ಒಂದು ನಿರ್ದಿಷ್ಟ ನೆಲೆಯಿಲ್ಲದೆ ನಿರಂತರ ಜಂಗಮರಾಗಿರುವ ಅನೇಕ ಸಮುದಾಯಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಕಾನೂನುಗಳ ಸಮಸ್ಯೆಗಳನ್ನು ಬಹುದೃಷ್ಟಿಕೋನಗಳಿಂದ *ಈ* ಕೃತಿಯಲ್ಲಿರುವ ಹಲವು ಲೇಖನಗಳಲ್ಲಿ ಚರ್ಚಿಸಲಾಗಿದೆ. ಕರ್ನಾಟಕದ ಅಲೆಮಾರಿ ಸಮುದಾಯಗಳ ಭವಿಷ್ಯದ ಕುರಿತ ಹೊಸ ಚಿಂತನೆಗಳು, ಅಲೆಮಾರಿ ಸಮುದಾಯಗಳ ಸಂವಿಧಾನ ನಿರ್ಮಾಣದ ಮಾದರಿಯನ್ನು ಇಲ್ಲಿ ಚರ್ಚಿಸಲಾಗಿದೆ.

**೩೦೪. ಆಚರಣೆಯಲ್ಲಿ ಜನಪದ ವಾಸ್ತು, ಶಿಲ್ಪ**

ಲೇ: ಎಸ್.ಸಿ.ಪಾಟೀಲ

ಪುಟ: ii+೨೯, ವರ್ಷ: ೧೯೯೮, ರೂ: ೩.೦೦

ನಮ್ಮ ಜನಪದ ಆಚರಣೆಯಲ್ಲಿರುವ ನೂರಾರು ಆಚರಣಾ ಕಲೆಗಳಲ್ಲಿನ ವಾಸ್ತು ಶಿಲ್ಪಕಲೆಯ ಬಗ್ಗೆ *ಈ* ಕಿರುಕೃತಿಯಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕ ದಲ್ಲಿರುವ ಕೆಲವು ಆಚರಣೆಗಳಲ್ಲಿ ಬಳಸುವ ಮೂರ್ತಿಶಿಲ್ಪದ ಆಚರಣೆ ಮತ್ತು ವಿಧಿ ವಿಧಾನಗಳ ಕುರಿತು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

**೩೦೫. ಇಡಗುಂಜಿ ಮೇಳ**

ಲೇ: ರಾಮಕೃಷ್ಣ ಜೋಶಿ

ಪುಟ: ii+೩೬, ವರ್ಷ: ೨೦೦೦, ರೂ: ೧೦.೦೦

ಉತ್ತರಕನ್ನಡ ತಿಟ್ಟು ಯಕ್ಷಗಾನ ಕಲಾ ಸಂಪ್ರದಾಯದಲ್ಲಿ ತನ್ನದೇ ಆದ ವಿಶೇಷತೆಯನ್ನು ಉಳಿಸಿಕೊಂಡು ಬಂದಿರುವಂತಹದ್ದು. *ಈ* ಪರಂಪರೆಯಲ್ಲಿ ಬೆಳೆದು ಬಂದಿರುವ ಇಡಗುಂಜಿ ಯಕ್ಷಗಾನ ಮೇಳದ ವೈಶಿಷ್ಟ್ಯ ಇತಿಹಾಸಗಳನ್ನು *ಈ* ಕೃತಿಯಲ್ಲಿ ಬಿಚ್ಚಿಡಲಾಗಿದೆ.

**೩೦೬. ಉತ್ತರ ಕರ್ನಾಟಕದಲ್ಲಿ ಪ್ರಾಣಿಬಲಿ**

ಲೇ: ಸ.ಜ. ನಾಗಲೋಟಿಮಠ

ಪುಟ: iv+೩೨, ವರ್ಷ: ೨೦೦೧, ರೂ: ೧೦.೦೦

ಉತ್ತರ ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಧಾರ್ಮಿಕ ಪದ್ಧತಿ 'ಪ್ರಾಣಿಬಲಿ' ಹಾಗು ಕರ್ನಾಟಕ ದಲ್ಲಿ ಜಾರಿಯಲ್ಲಿರುವ ಪ್ರಾಣಿಬಲಿಗಳ ಪ್ರತಿಬಂಧಕ ಕಾನೂನು ಮತ್ತು ಪ್ರಾಣಿ ದಯಾಸಂಘ ಗಳ ಬಗ್ಗೆ *ಈ* ಪುಸ್ತಕದಲ್ಲಿ ಸಾಕಷ್ಟು ಮಾಹಿತಿಗಳಿವೆ.

**೩೦೭. ಏಳು ಊರಿನ ದೇವತೆಗಳು : ಒಂದು ಅಧ್ಯಯನ**

ಲೇ : ಸಿ.ಟಿ. ಗುರುಪ್ರಸಾದ್

ಪುಟ: viii+೫೪, ವರ್ಷ: ೨೦೦೫, ರೂ: ೪೦.೦೦



ಪರಿವಿಡಿ

೧. ದೈವತ್ವದ ಕಲ್ಪನೆ

೨. ಗ್ರಾಮದೇವತೆಗಳ ಉಗಮ ಮತ್ತು ವಿಕಾಸ

೩. ಜನಪದರಲ್ಲಿರುವ 'ಏಳು' ಎಂಬುದರ ಕಲ್ಪನೆ

೪. ಹಬ್ಬಗಳು ಆಚರಣೆಗಳು ಮತ್ತು ಜಾತ್ರೆಗಳು

೫. ಪೂಜಾರಿ ಸೇವೆಗಳು ಮತ್ತು ಭಕ್ತರ ಸೇವೆಗಳು

೬. ಆಧುನಿಕ ಯುಗದಲ್ಲಿ ಗ್ರಾಮದೇವತೆಯ ಅಳಿವು-ಉಳಿವು

ಗ್ರಾಮದೇವತೆಗಳ ಸ್ವರೂಪ ಮತ್ತು ಅವುಗಳ ಜೊತೆಯಲ್ಲಿರುವ ಪರಂಪರೆಯ ಭಿನ್ನ ಬಗೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಆಧುನಿಕ ಸಂದರ್ಭದಲ್ಲಿ ಅವುಗಳಲ್ಲಿ ಆಗಿರುವ ಸ್ಥಿತ್ಯಂತರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಜಾನಪದದಲ್ಲಿ ಏಳು ಎಂಬ ಅಂಕಿಯ ಸಾಂಕೇತಿಕ ಮಹತ್ವವನ್ನು ವಿವರಿಸುತ್ತಾ ಮಂಡ್ಯ ಜಿಲ್ಲೆಯ ಹರಹಿನಲ್ಲಿ ಬರುವ ಏಳು ಊರಿನ ದೇವತೆಗಳನ್ನು ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ನೆಲೆಗಳಲ್ಲಿ ಅಧ್ಯಯನ ಮಾಡಲು *ಈ* ಕೃತಿಯಲ್ಲಿ ಪ್ರಯತ್ನಿಸಲಾಗಿದೆ.




**೩೦೮. ಕನ್ನಡ ಜಾನಪದ ಗ್ರಂಥಸೂಚಿ**

ಸಂ: ಸಿ.ಟಿ.ಗುರುಪ್ರಸಾದ್

ಪುಟ: xviii+೨೦೮, ವರ್ಷ: ೨೦೦೦, ರೂ: ೧೩೫.೦೦

ಪರಿವಿಡಿ

೧. ಕಾವ್ಯ-ಕಥನಕಾವ್ಯ-ಮಹಾಕಾವ್ಯ

೨. ಕಥೆ, ಐತಿಹ್ಯ

೩. ಗಾದೆ, ಒಗಟು

೪. ಆಚರಣೆ ಸಂಪ್ರದಾಯಗಳು

೫. ಸಮುದಾಯಗಳ ಅಧ್ಯಯನ

೬. ವಿಚಾರ, ವಿಮರ್ಶೆ, ವೈಚಾರಿಕ

೭. ನಾಟಕ, ರಂಗಭೂಮಿ, ಕಲೆಗಳು

೮. ಭಾಷಾಂತರ

೯. ಸಂಕೀರ್ಣ

ಇದು ೧೯೭೫ರಿಂದ ೨೦೦೦ರವರೆಗೆ ೨೫ ವರುಷಗಳ ಅವಧಿಯಲ್ಲಿ ಪ್ರಕಟಗೊಂಡಿರುವ ಜಾನಪದ ಕೃತಿಗಳ ಗ್ರಂಥ ಸೂಚಿ. *ಈ* ಗ್ರಂಥಸೂಚಿಯಲ್ಲಿ ಒಟ್ಟು ೧೧೧೪ ಕೃತಿಗಳಿವೆ. ಕೃತಿಗಳ ಸಂಕ್ಷಿಪ್ತ ಪರಿಚಯವನ್ನು *ಈ* ಆಕರ ಸೂಚಿಯಲ್ಲಿ ನೀಡಲಾಗಿದೆ.

**೩೦೯. ಕರ್ನಾಟಕದ ಕೈಫಿಯತ್ತುಗಳು**

ಸಂ: ಎಂ.ಎಂ. ಕಲಬುರ್ಗಿ

ಪುಟ: V+೭೫೮+೫೦, ವರ್ಷ: ೧೯೯೪, ರೂ: ೩೦೦.೦೦

ಪ್ರಾಚೀನ ಕರ್ನಾಟಕದ ಅಧ್ಯಯನಕ್ಕೆ ಹೊಸ ಬಗೆಯ ಆಕರ ಸಾಮಗ್ರಿಯೆಂಬಂತಿರುವ *ಈ* ಗ್ರಂಥದಲ್ಲಿ ಒಟ್ಟು ೧೩೪ ಕೈಫಿಯತ್ತುಗಳಿವೆ. ೧೮ನೇ ಶತಮಾನದ ಉತ್ತರಾರ್ಧ ಮತ್ತು ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಮೆಕೆಂಝಿ ಸಂಗ್ರಹಿಸಿದ ಕೈಫಿಯತ್ತುಗಳೂ *ಈ* ಸಂಗ್ರಹದಲ್ಲಿವೆ.

**೩೧೦. ಕಾಟಮರಾಜನ ಕಥೆ**

ಸಂ: ಆರ್ವಿಯಸ್ ಸುಂದರಂ

ಪುಟ: xvi+೨೧೬, ವರ್ಷ: ೨೦೦೦, ರೂ: ೧೦೦.೦೦

ಪರಿವಿಡಿ

೧. ಆವುಲ ವಲುರಾಜನ ಕಥೆ; ಪೆದ್ದಿರಾಜನ ಕಥೆ; ಪೋಲುರಾಜನ ಕಥೆ

೨. ಬಲ್ಲಿಕುರವ ಹೋರಾಟ; ಕಾಟಮರಾಜನ ಪಟ್ಟಾಭಿಷೇಕ; ಕರಿಯಾವುಲ ರಾಜನ ಕಥೆ

೩. ಪಾಪನೂಕಳ ಕಥೆ; ಉತ್ತರದಲ್ಲಿ ಕಾಟಮರಾಜ ಹಸುಗಳನ್ನು ಮೇಯಿಸಿದ ಕಥೆ

೪. ಗಂಗೆ ಕಾಟಮರಾಜರ ಸಂವಾದ; ದಕ್ಷಿಣದಲ್ಲಿ ಹಸುಗಳನ್ನು ಮೇಯಿಸಿದ ಕಥೆ

೫. ಭಟ್ಟನ ರಾಯಭಾರ; ಕೋಟಪಾಡಿನ ತಾಳೆಮರವನ್ನು ತಂದ ಕಥೆ; ವಿನೋದದ ಬುಗುರಿ ಆಟದ ಕಥೆ

೬. ಎರ್ರಗಡ್ಡಪಾಡಿನ ಕಾಳಗ; ಆಗುಮಂಚಿಯ ಕಥೆ; ಭಕ್ತಿರನ್ನನ ಕಥೆ

ತೆಲುಗಿನ 'ಕಾಟಮರಾಜು ಕಥಲು' ಎಂಬುದರ ಅನುವಾದ *ಈ* ಕಾಟಮರಾಜನ ಕಥೆ. ಇದು ಜನಪದ ಮಹಾಕಾವ್ಯವಾಗಿದ್ದು ಸುಮಾರು ೩೨ ಲಾವಣಿಗಳನ್ನೊಳಗೊಂಡಿದ್ದು ಇಂದಿಗೂ ಗೇಯ ಕಾವ್ಯವೆನಿಸಿದೆ. ಮೌಖಿಕ ಹಾಗೂ ತಾಳೆಗರಿಗಳಲ್ಲಿ ಲಿಖಿತವಾದ ಎರಡೂ ಸಂಪ್ರದಾಯ ಗಳಲ್ಲಿ *ಈ* ಕಾವ್ಯ ಲಭ್ಯವಿದೆ. ಇದು ಐತಿಹಾಸಿಕ ಕಾವ್ಯವಾಗಿರುವುದು ಇನ್ನೊಂದು ವಿಶೇಷ.

**೩೧೧. ಕಾವೇರಿ ಜಾನಪದ**

ಲೇ : ಹೆಬ್ಬಾಲೆ ಕೆ. ನಾಗೇಶ್

ಪುಟ: viii+೮೦, ವರ್ಷ: ೨೦೦೫, ರೂ: ೫೦.೦೦

ಪರಿವಿಡಿ

೧. ಕಾವೇರಿ ಹರಿದು ಮುನ್ನುಗ್ಗಿದ ದಾರಿ

೨. ಕಾವೇರಿ ಮತ್ತು ಜನಪದರು

೩. ಕಾವೇರಿ ಮತ್ತು ಕನ್ನಡ : ಜನಪದರ ಸೃಷ್ಟಿ-ದೃಷ್ಟಿಯಲ್ಲಿ



೪. ಕಾವೇರಿ ಮತ್ತು ಸ್ತ್ರೀ ಸ್ಮೃತಿ-ವಿಸ್ಮೃತಿ
೫. ಕಾವೇರಿ ಮತ್ತು ಹಬ್ಬ-ಹರಿದಿನಗಳು : ಜನಪದರ ಲೋಕ ಜ್ಞಾನದಲ್ಲಿ
೬. ಕಾವೇರಿ ಮತ್ತು ಪ್ರದರ್ಶನ ಕಲೆಗಳು : ಜನಪದರ ವಿವೇಚನೆಯಲ್ಲಿ
೭. ಕಾವೇರಿ ಮತ್ತು ಜನಪದ ಕ್ರೀಡೆಗಳು
೮. ಕಾವೇರಿ ಮತ್ತು ಜಲವಿವಾದ : ಸಂಕ್ಷಿಪ್ತ ನೋಟ
೯. ಕಾವೇರಿ ಮತ್ತು ಕೃಷಿ : ಸಮಸ್ಯೆಗಳು, ಸವಾಲುಗಳು.

ಕೊಡಗಿನ ಕಾವೇರಿ ನದಿಯನ್ನು ಕೇಂದ್ರವಾಗಿಟ್ಟುಕೊಂಡು ಅದರ ಸಮಗ್ರ ಸಂಕಥನದ ಅಧ್ಯಯನ ಇಲ್ಲಿದೆ. ಕಾವೇರಿಯು ಒಂದು ನದಿಯಾಗಿ, ಮಾತೆಯಾಗಿ, ಮಾತ್ರವಲ್ಲದೆ ಸಂಸ್ಕೃತಿಯ ನಿರ್ಮಾಣದ ರೂಪಕವಾಗಿ ಜಲವಿವಾದದ ಕೇಂದ್ರ ಬಿಂದುವಾಗಿ ಬಹುಬಗೆಯಲ್ಲಿ *ಈ* ಕೃತಿಯಲ್ಲಿ ಅನಾವರಣಗೊಂಡಿದ್ದಾಳೆ. ಭಾವನಾತ್ಮಕ ನೆಲೆಯಿಂದ ವಾಸ್ತವಿಕ ನೆಲೆಯವರೆಗೆ ಹರಹು ಉಳ್ಳ *ಈ* ಅಧ್ಯಯನದಲ್ಲಿ ಕಾವೇರಿ ಮತ್ತು ಕೃಷಿ ಸಮಸ್ಯೆಗಳು ಹಾಗೂ ಸವಾಲುಗಳು ಎನ್ನುವ ಮಹತ್ವದ ವಿಷಯವು ಚರ್ಚೆಗೆ ಒಳಗಾಗಿದೆ.

### ೩೧೨. ಕುಮಾರರಾಮ ಮತ್ತು ಕುಮ್ಮಟದುರ್ಗ

ಲೇ: ಪುರುಷೋತ್ತಮ ಬಿಳಿಮಲೆ

ಪುಟ: ii+೩೮, ವರ್ಷ: ೧೯೯೯, ರೂ: ೧೦.೦೦

ಮಧ್ಯಕಾಲೀನ ಕರ್ನಾಟಕದ ಪ್ರಸಿದ್ಧ ಅರಸನಾದ ಕುಮಾರರಾಮನ ಬಗ್ಗೆ ಸಾಕಷ್ಟು ಮಾಹಿತಿ *ಈ* ಕಿರುಪುಸ್ತಕದಲ್ಲಿದೆ. ಐತಿಹಾಸಿಕ ವೀರನಾಗಿಯೂ, ಜಾನಪದದ ಸಾಂಸ್ಕೃತಿಕ ವೀರನಾಗಿಯೂ ಕನ್ನಡಿಗರ ಮನದಲ್ಲಿ ಅಚ್ಚೊತ್ತಿರುವ ಕುಮಾರರಾಮನ ವ್ಯಕ್ತಿತ್ವವನ್ನು ವಿಶ್ಲೇಷಿಸುವ ಪ್ರಯತ್ನವೂ ಇಲ್ಲಿದೆ.

### ೩೧೩. ಕೊಂತಿ ಪೂಜೆ

ಲೇ: ಸೋಮಣ್ಣ

ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಕೃಷಿಪ್ರಧಾನವಾದ *ಈ* ನಾಡಿನಲ್ಲಿ ಪ್ರಚಲಿತವಾಗಿರುವ ಕೃಷಿಸಂಬಂಧಿ ಆಚರಣೆಯಾದ 'ಕೊಂತಿಪೂಜೆ'ಯ ಬಗ್ಗೆ *ಈ* ಕಿರುಪುಸ್ತಕದಲ್ಲಿ ಸಾಕಷ್ಟು ಮಾಹಿತಿಗಳಿವೆ.

### ೩೧೪. ಕೊಡವರ ಮದುವೆ

ಲೇ: ಎಚ್.ಕೆ.ನಾಗೇಶ್

ಪುಟ: ii+೩೦, ವರ್ಷ: ೧೯೯೯, ರೂ: ೧೦.೦೦

ಕೊಡವ ಜನಾಂಗದ ವಿವಾಹ ಪದ್ಧತಿಯ ಬಗ್ಗೆ *ಈ* ಕಿರುಪುಸ್ತಕ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುತ್ತದೆ. ಕೊಡವರ ಕುಟುಂಬ ಪದ್ಧತಿ, ಧಾರ್ಮಿಕತೆ, ಸಂಪ್ರದಾಯ, ವೇಷಭೂಷಣಗಳ ಬಗ್ಗೆಯೂ ಇಲ್ಲಿ ಚರ್ಚಿಸಲಾಗಿದೆ.




### ೩೧೫. ಗಾದರಿ ಪಾಲನಾಯಕ

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: x+೯೮, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ
೧. ಗಾದರಿ ಪಾಲನಾಯಕನ ಹಿನ್ನೆಲೆ
೨. ಗಾದರಿ ಪಾಲನಾಯಕನ ಜನಪದ ಕತೆ
೩. ಪ್ರಸ್ತುತ ಗಾದರಿಪಾಲನಾಯಕನ ಪಂಥ

ಗಾದರಿ ಪಾಲನಾಯಕ ಒಬ್ಬ ಚಾರಿತ್ರಿಕ ವ್ಯಕ್ತಿ. ವೃತ್ತಿಯಲ್ಲಿ ಪಶುಪಾಲಕ. ಇಂದಿನ ದಂತಕಥೆ, ನಂಬಿಕೆಗಳ ಪ್ರಕಾರ ದೇವರು ವಿವಿಧ ಸಮುದಾಯದವರು ಮತ್ತು ವಿಶೇಷವಾಗಿ ಮ್ಯಾಸನಾಯಕರು ಇವನನ್ನು ಆರಾಧ್ಯ ದೇವರನ್ನಾಗಿ ಪೂಜಿಸುವರು. ಕಥನಗೀತೆ, ಸೋಬಾನೆ ಹಾಡು ಹಾಗು ಇತರ ಮೌಖಿಕ ಆಕರಗಳ ನೆರವಿನೊಂದಿಗೆ ಮೌಖಿಕ ಚರಿತ್ರೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಇದು ಒಂದು ಕಾಲಘಟ್ಟದ ಸಾಂಸ್ಕೃತಿಕ ಚರಿತ್ರೆ ಕೂಡಾ ಹೌದು.

### ೩೧೬. ಗಾಳೆಮ್ಮ

ಲೇ: ಸುಬ್ಬಣ್ಣ ರೈ

ಪುಟ: ii+೩೪, ವರ್ಷ: ೧೯೯೮, ರೂ: ೩.೦೦

ಸ್ಥಳೀಯ ಗ್ರಾಮದೇವತೆಯಾದ ಗಾಳೆಮ್ಮನನ್ನು ಕೇಂದ್ರೀಕರಿಸಿ ಪ್ರಸ್ತುತ ಕಿರುಪುಸ್ತಕ ರಚನೆಯಾಗಿದೆ. ಹೊಸಪೇಟೆ ಪರಿಸರದಲ್ಲಿ ಕಂಡುಬರುವ ಗಾಳೆಮ್ಮ ದೇವತೆಯ ನೆಲೆಗಳು, ಗಾಳೆಮ್ಮ ಪದ ನಿಷ್ಪತ್ತಿ, ಗಾಳೆಮ್ಮನ ಕುರಿತಾಗಿರುವ ಭೌತಿಕ, ಮೌಖಿಕ ಮತ್ತು ಆಚರಣಾತ್ಮಕ ಜಾನಪದ, ಗಾಳೆಮ್ಮನ ಗುಡಿ ಮತ್ತು ಗ್ರಾಮಪರಿಕಲ್ಪನೆ ಇತ್ಯಾದಿ ಅಂಶಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ಒಟ್ಟು ಅಧ್ಯಯನದ ಮೂಲಕ ಜನಪದ ಬದುಕಿನ ಸಾಂಸ್ಕೃತಿಕ ಧಾರ್ಮಿಕ ಸ್ಥಿತ್ಯಂತರಗಳನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

### ೩೧೭. ಗೊಂದಲಿಗರ ದೇವೇಂದ್ರಪ್ಪನವರ ಆಟಗಳು

ಲೇ: ಮುದೇನೂರು ಸಂಗಣ್ಣ

ಪುಟ: VXviii+೩೯೬, ವರ್ಷ: ೧೯೯೩, ರೂ: ೯೦.೦೦

ಪರಿವಿಡಿ
೧. ಮಹಾಸತಿ ಶಿವಲೋಚನಾ
೨. ಬಾಳ ಭಿಕ್ಷುಕ
೩. ಸತ್ಯ ಶೀಲಾವತಿ
೪. ರಾಜ ವೀರಪರಾಕ್ರಮ
೫. ವಿಘ್ನಾವತಿ
೬. ಅಡ್ಡ ಕಥೆಗಳು
೭. ದುರಾಸೆಯ ಭಕ್ತ

ಜಾನಪದ ರಂಗಕಲೆಗಳಲ್ಲಿ ಒಂದಾದ ಗೊಂದಲಿಗರ ಆಟ ಸಾಂಪ್ರದಾಯಿಕ ಆರಾಧನಾ ಭಕ್ತಿಯ ಅಭಿವ್ಯಕ್ತಿಯಾಗಿ ರೂಪುಗೊಂಡು ಬಾಳಿ ಬಂದಿದೆ. *ಈ* ರಂಗಕಲೆಯಲ್ಲಿನ ಶ್ರೀಮಂತಿಕೆಯ ಒಳ ಹೊರಗನ್ನು ಬಲ್ಲಂತಹ ಗೊಂದಲಿ ಕಲಾವಿದರಾದ ದೇವೇಂದ್ರಪ್ಪನವರು ಆಡಿರುವ, ಹಾಗು ಆಡಿಸಿರುವ ಆಟಗಳನ್ನು ಇಲ್ಲಿ ಸಂಕಲಿಸಲಾಗಿದೆ. ದೇವೇಂದ್ರಪ್ಪನವರು ಆಡಿಸಿರುವ ಏಳು ಗೊಂದಲಿಗರ ಆಟಗಳು ಇಲ್ಲಿವೆ.

**೩೧೮. ಜನಪದ ಆಟಗಳು**

ಲೇ: ಗಣನಾಥ ಎಕ್ಕಾರು

ಪುಟ: ೩೨, ವರ್ಷ: ೨೦೦೦, ರೂ: ೧೦.೦೦

ಜನಪದ ಆಟಗಳಿಗೆ ಅವುಗಳದ್ದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳಿವೆ. ಅವುಗಳಿಗೆ ಮನೋರಂಜನೆಯ ಉದ್ದೇಶ ಮಾತ್ರವಿರದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಉದ್ದೇಶಗಳೂ ಇವೆ. ಇಂತಹ ಜನಪದ ಆಟಗಳ ಬಗ್ಗೆ ಅಧ್ಯಯನಾತ್ಮಕವಾಗಿ ಬರೆದ ಕೃತಿಯಿದು.

**೩೧೯. ಜನಪದ ಕಸೂತಿ**

ಲೇ: ಮಧು ವೆಂಕಾರೆಡ್ಡಿ

ಪುಟ: ii+೩೬, ವರ್ಷ: ೨೦೦೦, ರೂ: ೧೦.೦೦

ಜನಪದ ಕಲೆಯೆನಿಸಿರುವ ಕಸೂತಿ ಕಲೆಯ ಹುಟ್ಟು, ಬೆಳವಣಿಗೆ, ಅದರಲ್ಲಿರುವ ಪ್ರಕಾರಗಳು, ಬೇಕಾಗಿರುವ ಪರಿಕರಗಳು ಆ ಬಗ್ಗೆ ಇರುವ ನಂಬಿಕೆ, ಸಂಪ್ರದಾಯಗಳ ಬಗ್ಗೆ *ಈ* ಕೃತಿ ಚರ್ಚಿಸುತ್ತದೆ.

**೩೨೦. ಜನ ಜಾನಪದ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: IV+೨೮, ವರ್ಷ: ೨೦೦೩, ರೂ: ೧೦.೦೦

ಜನಪದರು ಜಾನಪದ ಸಾಮಗ್ರಿಗಳ ಬಗೆಗೆ ಹೊಂದಿರುವ ನಂಬಿಕೆ, ಕಲ್ಪನೆ, ಆ ಬಗೆಯ ವಿವರಣೆ, ವ್ಯಾಖ್ಯಾನ ಅಥವಾ ಜ್ಞಾನವನ್ನು ಜನ ಜಾನಪದವೆಂದು ಪರಿಗಣಿಸಿ ಬರೆದ ವಿಶ್ಲೇಷಣಾತ್ಮಕ ಕೃತಿಯಿದು.

**೩೨೧. ಜನಪದ ದೈವಗಳು**

ಸಂ : ಬಸವರಾಜ ಸಬರದ

ಪುಟ : vi + ೩೪, ವರ್ಷ : ೨೦೦೮, ರೂ. ೧೦.೦೦

ಪರಿವಿಡಿ
೧. ಜನಪದ ದೈವಗಳ ವಿಶಿಷ್ಟ ಲಕ್ಷಣಗಳು
೨. ಹೆಣ್ಣು ದೈವಗಳ ಲಕ್ಷಣಗಳು
೩. ಗಂಡು ದೈವಗಳ ಲಕ್ಷಣಗಳು
೪. ದೈವಗಳ ಸಂಬಂಧಗಳು
೫. ಸಾಂಸ್ಕೃತಿಕ ಸಂಘರ್ಷ

ಜನಪದ ದೈವಗಳ ವಿಶಿಷ್ಟ ಲಕ್ಷಣಗಳ ಅಧ್ಯಯನವೇ *ಈ* ದೇಶದ ವಿಶಿಷ್ಟ ಸಂಸ್ಕೃತಿಗಳ ಅಧ್ಯಯನ ಎಂದು ಪರಿಭಾವಿಸುವ *ಈ* ಕೃತಿಯಲ್ಲಿ ಜನಪದ ದೈವಗಳ ಬಗ್ಗೆ ಸಾಂಸ್ಕೃತಿಕ ಚರ್ಚೆಯನ್ನು ಮಾಡಲಾಗಿದೆ. ಜನಪದ ದೈವಗಳಲ್ಲಿ ಹೆಣ್ಣು ಮತ್ತು ಗಂಡು ದೈವಗಳನ್ನು ವರ್ಗೀಕರಿಸಿ ಅವುಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸಲಾಗಿದೆ.

**೩೨೨. ಜನಪದ ನಂಬಿಕೆಗಳು**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: iv+೨೫, ವರ್ಷ: ೧೯೯೬, ರೂ: ೨.೦೦

ನಂಬಿಕೆಯು ಅಭಯ ಅಥವ ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ. ಇದು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆಯಾಗಿದ್ದರೂ, ಮಾನವಕುಲ ತನ್ನ ಉಳಿವಿಗಾಗಿ ಕೆಲವೊಂದು ನಂಬಿಕೆಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದೆ. ಸಮಾಜದಲ್ಲಿ ಅಸ್ತಿತ್ವ ದಲ್ಲಿರುವ ಇಂತಹ ಹಲವು ಜನಪದ ನಂಬಿಕೆಗಳ ಬಗ್ಗೆ *ಈ* ಪುಸ್ತಕ ಸಾಕಷ್ಟು ಮಾಹಿತಿಗಳನ್ನು ನೀಡುತ್ತದೆ.

**೩೨೩. ಜನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ**

ಲೇ: ಹರಿಲಾಲ ಪವಾರ

ಪುಟ: iv+೩೮, ವರ್ಷ: ೨೦೦೨, ರೂ: ೧೦.೦೦

ಜನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ ಅಪಾರವಾದದು. ಕನ್ನಡ ಜಾನಪದ ಅಧ್ಯಯನದ ಆರಂಭದ ಘಟ್ಟವನ್ನು ಗಮನಿಸಿದರೆ ಆ ಆರಂಭದ ಕಾಲವು ಲಾವಣಿ ಸಾಹಿತ್ಯ ದಿಂದ ಸಮೃದ್ಧಗೊಂಡದ್ದಾಗಿತ್ತು. ತನ್ನ ಲಾವಣಿ ಸಾಹಿತ್ಯದ ಮೂಲಕವೇ ವಿಜಾಪುರ ಜಿಲ್ಲೆಯು ಜನಪದ ಸಾಹಿತ್ಯವನ್ನು ಪ್ರವೇಶಿಸಿ, ಅದನ್ನು ಉಳಿಸಿ ಬೆಳೆಸಿದ ಬಗ್ಗೆ *ಈ* ಕಿರುಕೃತಿಯಲ್ಲಿ ಚರ್ಚಿಸಲಾಗಿದೆ.

**೩೨೪. ಜಾನಪದ ಕ್ಷೇತ್ರ ಕಾರ್ಯ ಆಧುನಿಕ ವಿಧಾನಗಳು**

ಲೇ: ಪುರುಷೋತ್ತಮ ಬಿಳಿಮಲೆ

ಪುಟ: ೨೮, ವರ್ಷ: ೧೯೯೩, ರೂ: ೧.೦೦

ಜಾನಪದ ಕ್ಷೇತ್ರಕಾರ್ಯದ ಬಗೆಗೆ ಬಂದ ಅಧಿಕೃತ ಕೃತಿಯಿದು. ಜಾನಪದ ಸಿದ್ಧಾಂತಗಳು, ಚರ್ಚೆಗಳು ಮುಖ್ಯವಾಗಿ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲೇ ನಡೆಯುವುದಾದರೂ ಅದರ ವೈಜ್ಞಾನಿಕತೆ ಬಗೆಗೆ ಬೆಳಕು ಚೆಲ್ಲುವ ಪುಸ್ತಕಗಳು ಕನ್ನಡದಲ್ಲಿ ಅಪರೂಪ. *ಈ* ಕೃತಿಯು ಕ್ಷೇತ್ರಕಾರ್ಯದ ಪ್ರಾಥಮಿಕ ತಯಾರಿಯಿಂದ ಆರಂಭಿಸಿ ವೈಜ್ಞಾನಿಕ ಸೂಕ್ಷ್ಮಾತಿಸೂಕ್ಷ್ಮ ವಿವರ ಗಳನ್ನು ನೀಡುತ್ತದೆ.

**೩೨೫. ಜಾನಪದ ಪ್ರಕ್ರಿಯೆ : ಹಾಂಕೊ ದೃಷ್ಟಿ**

ಲೇ: ಅಂಬಳಿಕೆ ಹಿರಿಯಣ್ಣ

ಪುಟ: ೩೬, ವರ್ಷ: ೨೦೦೦, ರೂ: ೧೦.೦೦

ಜಾನಪದ ಪ್ರಕ್ರಿಯೆ ಬಗ್ಗೆ ಲಾರಿ ಹಾಂಕೋ ಮತ್ತಿತರ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯ ದೃಷ್ಟಿಧೋರಣೆ ಬಗ್ಗೆ *ಈ* ಕಿರುಪುಸ್ತಿಕೆಯಲ್ಲಿ ಸಂಶೋಧನಾತ್ಮಕ ಮಾಹಿತಿಗಳಿವೆ.

**೩೨೬. ಜಾನಪದ ವಸ್ತುಸಂಗ್ರಹಾಲಯಗಳು**

ಲೇ: ವ.ನಂ.ಶಿವರಾಮು

ಪುಟ: ii+೩೮, ವರ್ಷ: ೨೦೦೦, ರೂ: ೧೦.೦೦

ಜಾನಪದ ವಸ್ತು ಸಂಗ್ರಹಾಲಯಗಳ ಸ್ಥಾಪನೆ ಹಾಗು ಸಂರಕ್ಷಣೆ ಕುರಿತು *ಈ* ಕಿರುಪುಸ್ತಕದಲ್ಲಿ ಸಾಕಷ್ಟು ಮಾಹಿತಿಗಳಿವೆ.

**೩೨೭. ಜಾನಪದ ಶೋಧ**

ಲೇ ಹ.ಕ.ರಾಜೇಗೌಡ

ಪುಟ: xvi+೨೫೮, ವರ್ಷ: ೨೦೦೭, ರೂ: ೧೦೦.೦೦



ಪರಿವಿಡಿ

೧. ಕನ್ನಡದ ಮೊದಲ ಯಕ್ಷಗಾನ ಕವಿ

೨. ಕರಿಭಂಟನ ಕಾಳಗ : ಒಂದು ಚಾರಿತ್ರಿಕ ಘಟನೆ

೩. ಇತಿಹಾಸ ಮತ್ತು ಜಾನಪದ

೪. ಯಕ್ಷಗಾನ ಸಾಹಿತ್ಯದ ಪ್ರಾಚೀನತೆ

೫. ಯಲಹಂಕ ಪ್ರಭುಗಳು ಹೊರಗಿನಿಂದ ಬಂದವರೆ?

೬. ಗ್ರಾಮಾಂತರ ವ್ಯವಸಾಯ ಚಕ್ರ

೭. ಮೂಗೂರು ತಿಬ್ಬಾದೇವಿ: ಒಂದು ಅಧ್ಯಯನ

೮. ದಕ್ಷಿಣ ಕರ್ನಾಟಕದಲ್ಲಿ ಮೈಲಾರಲಿಂಗ ಸಂಪ್ರದಾಯ

೯. ಸೀತೆದಂಡು : ಒಂದು ಟಿಪ್ಪಣಿ

೧೦. ಬಸವಣ್ಣನ ಕಾಲದ ಒಬ್ಬ ಒಕ್ಕಲಿಗ ಶಿವಶರಣ

ಕನ್ನಡ ಜಾನಪದ, ಇತಿಹಾಸ ಮತ್ತು ಸಂಸ್ಕೃತಿ ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖನಗಳು *ಈ* ಕೃತಿಯಲ್ಲಿವೆ. ಜಾನಪದ ಮತ್ತು ಇತಿಹಾಸದ ಸಂಬಂಧಗಳನ್ನು ಚರ್ಚಿಸುವ ಸ್ಥಳೀಯ ಚರಿತ್ರೆಯ ಅಧ್ಯಯನವು ಜಾನಪದ ಅಧ್ಯಯನಕ್ಕೆ ಹೇಗೆ ಮುಖ್ಯವಾದದ್ದು ಎಂಬುದನ್ನು ಇಲ್ಲಿ ನಿದರ್ಶನ ಗಳೊಂದಿಗೆ ವಿವೇಚಿಸಲಾಗಿದೆ.



**೩೨೮. ಡಾ. ಸಿಂಪಿ ಲಿಂಗಣ್ಣ ಸಮಗ್ರ ಜನಪದ ಸಂಪುಟ**

ಲೇ: ವೀರೇಂದ್ರ ಸಿಂಪಿ

ಪುಟ: xvi+೫೮೦, ವರ್ಷ: ೨೦೦೭, ರೂ: ೩೦೦

ಪರಿವಿಡಿ

೧. ಗರತಿಯ ಬಾಳು

೨. ಜನಾಂಗದ ಜೀವಾಳ

೩. ಜನಪದ ಸಾಹಿತ್ಯದಲ್ಲಿ ಕಿರಿದರೊಳ್ ಪಿರಿದರ್ಥದ ಚಲಕ

೪. ಹೆಡಿಗೆ ಜಾತ್ರೆ

೫. ಗರತಿಯ ಬಾಳ ಸಂಹಿತೆ

೬. ಗಾದೆಗಳ ಗಾರುಡಿ

ಜಾನಪದವನ್ನು ತಮ್ಮ ಜೀವಾಳವನ್ನಾಗಿ ಮಾಡಿಕೊಂಡು ಬದುಕಿದ ಡಾ. ಸಿಂಪಿ ಲಿಂಗಣ್ಣನವರು ತಮ್ಮ ಅನುಭವ, ಅಧ್ಯಯನ ಮತ್ತು ಆಲೋಚನೆಗಳನ್ನು ನಿರಂತರವಾಗಿ ತಮ್ಮ ಮಾತು ಮತ್ತು ಬರಹಗಳಲ್ಲಿ ಪ್ರಕಟಿಸುತ್ತ ಬಂದವರು. ಗರತಿಯ ಬಾಳು, ಜನಾಂಗದ ಜೀವಾಳ, ಜನಪದ ಸಾಹಿತ್ಯದಲ್ಲಿ ಕಿರಿದರೊಳ್ ಪಿರಿದರ್ಥದ ಚಲಕ, ಹೆಡಿಗೆ ಜಾತ್ರೆ, ಗರತಿಯ ಬಾಳ ಸಂಹಿತೆ ಮತ್ತು ಗಾದೆಗಳ ಗಾರುಡಿ ಎನ್ನುವ ಸಿಂಪಿಯವರ ಆರು ಗ್ರಂಥಗಳು ಇಲ್ಲಿ ಸಮಾಗಮ

ಗೊಂಡು ಸಮಗ್ರ ಸಿಂಪಿ ಜನಪದ ಸಂಪುಟವೊಂದು ರೂಪು ತಾಳಿದೆ. ವಸಾಹತೋತ್ತರ ಕರ್ನಾಟಕ ದಲ್ಲಿ ಜಾನಪದ ಅಧ್ಯಯನವನ್ನು ಮರುನಿರ್ವಚನ ಮಾಡಿಕೊಳ್ಳಬೇಕಾದ ಸನ್ನಿವೇಶದಲ್ಲಿ *ಈ* ಸಮಗ್ರ ಜನಪದ ಸಂಪುಟದ ಬರಹಗಳು ತುಂಬಾ ತುಂಬ ಮೌಲಿಕವೆನಿಸಿವೆ.

**೩೨೯. ದೇಶಿ**

ಲೇ: ಮೊಗಳ್ಳಿ, ಗಣೇಶ್

ಪುಟ: xii+೯೦, ವರ್ಷ: ೧೯೯೭, ರೂ: ೪೦.೦೦

ಪರಿವಿಡಿ

೧. ಮಹಿಳಾ ಸೊಲ್ಲು
೨. ಪಠ್ಯದ ಮೂರು ರೂಪಗಳು
೩. ಜಾನಪದರಲ್ಲಿ ವಿದೇಶಿ ಕೈವಾಡ
೪. ಪಠ್ಯದ ವಸ್ತು ಮತ್ತು ಬಂಧ
೫. ದೇಶೀಯತೆ ಮತ್ತು ಮತಾಂತರ

ಜಾಗತೀಕರಣದ ಪ್ರವಾಹದಲ್ಲಿ, ದಲಿತ ಸಂಸ್ಕೃತಿಯ ಆಳದ ಸಾಂಸ್ಕೃತಿಕ ಜೀವಕೋಶಗಳು ಇಪ್ಪತ್ತೊಂದನೇ ಶತಮಾನದ ಜೊತೆ ಹೇಗೆ ಸಾಂಸ್ಕೃತಿಕವಾಗಿ ಮುಖಾಮುಖಿಯಾಗಿ ತನ್ನ ಅನನ್ಯತೆಗೆ ತಕ್ಕದಾದ ದೇಶಿ ಚಿಂತನೆಯನ್ನು ಮುಂದಿಡುತ್ತವೆ ಎಂಬುದು ಇಲ್ಲಿಯ ಚರ್ಚಿತ ವಿಷಯ.

**೩೩೦. ನಮ್ಮ ಜನಪದ ಕತೆಗಳು**

ಲೇ: ಹಿ.ಶಿ.ರಾಮಚಂದ್ರೇಗೌಡ

ಪುಟ: ii+೪೫, ವರ್ಷ: ೧೯೯೪, ರೂ: ೨.೦೦

ಜನಪದ ಕತೆಗಳ ಹುಟ್ಟು ಬೆಳವಣಿಗೆ ಇತಿಹಾಸದ ಬಗ್ಗೆ ಅಧ್ಯಯನಾತ್ಮಕವಾಗಿ ಬರೆದ ಪುಟ್ಟ ಕೃತಿಯಿದು.



**೩೩೧. ನೀರು : ಒಂದು ಜಾನಪದ ನೋಟ**

ಲೇ : ಸ.ಚಿ. ರಮೇಶ್

ಪುಟ: vi+೩೬, ವರ್ಷ: ೨೦೦೫, ರೂ: ೧೦.೦೦

ಪಂಚಭೂತಗಳಲ್ಲಿ ಒಂದಾದ ನೀರಿನ ಬಗ್ಗೆ ಜನಪದರು ಕಂಡು ಕೊಂಡ ನಂಬಿಕೆ ಮತ್ತು ಜಾನಪದವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ನೀರಿನ ಮಹತ್ವ ಹಾಗೂ *ಈ* ಭೂಮಿಯಲ್ಲಿ ಅದಕ್ಕಿರುವ ಶ್ರೇಷ್ಠತೆಯನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಮೌಖಿಕ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ನೀರಿನ ಬಗೆಗಿನ ಸಮಗ್ರ ಜ್ಞಾನವನ್ನು *ಈ* ಕಿರುಕೃತಿಯಲ್ಲಿ ದಾಖಲಿಸಲಾಗಿದೆ.



**೩೩೨. ಬಂಡಾಯ ಜಾನಪದ**

ಲೇ: ಬಸವರಾಜ ಸಬರದ

ಪುಟ: iv+೩೨, ವರ್ಷ: ೨೦೦೬, ರೂ: ೧೦.೦೦

ಬಂಡಾಯವೆಂಬುದು ಒಂದು ಮನೋಧರ್ಮ. ಜಾನಪದವು ಜಗತ್ತಿನ ಜನ ಸಮುದಾಯಗಳ ಬಗೆಗೆ ಮಾತನಾಡಿದರೆ, ಬಂಡಾಯವು ಜನಸಮುದಾಯಗಳ ಮನೋಧರ್ಮದ ಬಗ್ಗೆ ಮಾತನಾಡುತ್ತದೆ ಎಂಬುದು ಒಂದು ವಾದ. ಸಂಪ್ರದಾಯದ ತಳಹದಿಯ ಮೇಲೆ ಬೆಳೆದ ಜಾನಪದದಲ್ಲಿ ಬಂಡಾಯ ಇರುವುದು ಹೇಗೆ ಎಂಬ ಇನ್ನೊಂದು ವಾದಕ್ಕೆ ಉತ್ತರವಾಗಿ ಜಾನಪದವನ್ನು ಆಳವಾಗಿ ಅಧ್ಯಯನ ಮಾಡಿ, ಜಾನಪದದ ಒಳವಿನ್ಯಾಸಗಳಲ್ಲಿ ಬಂಡಾಯದ ಬೀಜಗಳು ಮೊಳಕೆಯೊಡೆದಿರುವುದನ್ನು *ಈ* ಕಿರುಪುಸ್ತಕದಲ್ಲಿ ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

**೩೩೩. ಮಂಟೇಸ್ವಾಮಿ ಪರಂಪರೆ**

ಲೇ: ರಾ.ವೆಂಕಟೇಶ ಇಂದ್ವಾಡಿ

ಪುಟ: xiv+೧೫೦, ವರ್ಷ: ೧೯೯೯, ರೂ: ೭೫.೦೦

ಪರಿವಿಡಿ

೧. ಉತ್ತರದೇಶ
೨. ಕತ್ತಲರಾಜ್ಯ



ಉತ್ತರ ದಕ್ಷಿಣವಾಗಿ ಚದುರಿಹೋಗಿರುವ ಮಂಟೇಸ್ವಾಮಿಗಳ ಸಿದ್ಧಪಥವನ್ನು ಕುರಿತು, ಮೌಖಿಕ ಕಥನ ಹಾಗೂ ಮೌಖಿಕ ಮಾಹಿತಿಗಳನ್ನು ಮುಂದಿಟ್ಟುಕೊಂಡು ನಡೆಸಿರುವ ಅಧ್ಯಯನದ ಫಲಶ್ರುತಿಯೇ *ಈ* ಗ್ರಂಥ. ವಚನಯುಗದ ಆಶಯಗಳನ್ನು ಮೈಗೂಡಿಸಿಕೊಂಡು, ವೀರಶೈವ ಧರ್ಮಗಳ ಏಕೀರೂಪಕರಣದ ಬಗ್ಗೆ ವಿಭಿನ್ನ ಪ್ರತಿಕ್ರಿಯೆಗಳನ್ನು ತೋರುತ್ತ ಬಂದಿರುವ ಪ್ರಮುಖ ಸಾಂಸ್ಕೃತಿಕ ಪಂಥವಾದ ನೀಲಗಾರ ಪರಂಪರೆಯ ಬಗ್ಗೆಯೂ ಇಲ್ಲಿ ಅಧ್ಯಯನ ನಡೆಸಲಾಗಿದೆ.




**೩೩೪. ಮಾಟ ಮಂತ್ರ ಮೋಡಿ**

ಸಂ: ಸ.ಚಿ. ರಮೇಶ್

ಪುಟ: X+೨೫೨, ವರ್ಷ: ೨೦೦೩, ರೂ: ೧೨೦.೦೦

ಪರಿವಿಡಿ

೧. ಆಚರಣೆ ಮತ್ತು ಪರಿಣಾಮ

೨. ಪ್ರಾದೇಶಿಕ ಅಧ್ಯಯನ

೩. ಸಾಹಿತ್ಯಿಕ ಪ್ರಸ್ತಾಪ ಮತ್ತು ವೈಜ್ಞಾನಿಕ ವಿಶ್ಲೇಷಣೆ

ಕನ್ನಡ ವಿಶ್ವವಿದ್ಯಾಲಯವು ಮಾಟ ಮಂತ್ರ ಮೋಡಿಯನ್ನು ಕುರಿತು ಆಯೋಜಿಸಿದ್ದ ದೇಶಿ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನವಿದು. ಅಜ್ಞಾನ, ಪರಂಪರೆಯ ಪಳೆಯುಳಿಕೆಗಳೆಂದು ಭಾವಿಸಲಾದ ಮಾಟ ಮಂತ್ರ ಮೋಡಿ ಮತ್ತು ಸಂಪ್ರದಾಯದ ವೈಶಿಷ್ಟ್ಯಗಳನ್ನು, ಅದು ಸ್ಥಾಪಿಸಿದ ಹಲವು ಸಂಪ್ರದಾಯಗಳನ್ನು ಸಾಂಸ್ಕೃತಿಕವಾಗಿ ಆಧುನಿಕ ನೆಲೆಯಲ್ಲಿ ನಿಂತು ವಿಶ್ಲೇಷಿಸುವ ಪ್ರಯತ್ನ *ಈ* ಕೃತಿಯಲ್ಲಿ ಸಂಕಲಿತಗೊಂಡ ಪ್ರಬಂಧಗಳಲ್ಲಿದೆ.

**೩೩೫. ಮಾತಂಗಿ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: ii+೨೪, ವರ್ಷ: ೧೯೯೬, ರೂ: ೨.೦೦

'ಮಾತಂಗಿ' ದೈವ ಹಾಗೂ 'ಮಾತಂಗಿ' ಸಂಪ್ರದಾಯ, ನಂಬಿಕೆ ವಿಧಿ ನಿಷೇಧಗಳು ಹಾಗೂ ಜನಪದ ಕತೆ, ಐತಿಹ್ಯಗಳನ್ನು *ಈ* ಕಿರುಕೃತಿಯಲ್ಲಿ ದಾಖಲಿಸಲಾಗಿದೆ.

**೩೩೬. ಯಕ್ಷಗಾನ ಛಂದೋಗತಿ**

ಲೇ: ಕಬ್ಬಿನಾಲೆ ವಸಂತ ಭಾರದ್ವಾಜ

ಪುಟ: ii+೩೨, ವರ್ಷ: ೨೦೦೦, ರೂ: ೧೦.೦೦

ಯಕ್ಷಗಾನದ ಹಾಡುಗಾರಿಕೆಯಲ್ಲಿರುವ ಛಂದಸ್ಸು ಮತ್ತು ಲಯದ ಕುರಿತಾಗಿ *ಈ* ಕಿರುಪುಸ್ತಕದಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

**೩೩೭. ಯಕ್ಷಗಾನ ತಾಳಮದ್ದಲೆ : ನವ್ಯೋತ್ತರ ಸಂಕಥನ**

ಲೇ: ಮಾಧವ ಪೆರಾಜೆ

ಪುಟ: x+೩೧೪, ವರ್ಷ: ೨೦೦೦, ರೂ: ೧೨೫.೦೦

ಪರಿವಿಡಿ

೧. ತಾಳಮದ್ದಳೆಯ ಅಧ್ಯಯನದ ವಿಮರ್ಶಾತ್ಮಕ ಸಮೀಕ್ಷೆ




೨. ಕಲಾವಿದರು ಮತ್ತು ಸಹೃದಯರು ನಿರೂಪಿಸುವ ತಾಳಮದ್ದಳೆ

೩. ಹರಿಕಥೆ-ಪುರಾಣವಾಚನ-ತಾಳಮದ್ದಳೆ

೪. ಯಕ್ಷಗಾನದ ಪಠ್ಯ : ತಾತ್ತ್ವಿಕ ವಿವೇಚನೆ

೫. ಪ್ರಾತಿನಿಧಿಕ ಯಕ್ಷಗಾನ ಪ್ರಸಂಗಗಳು ಹಾಗೂ ಅಭಿಜಾತ ಕಾವ್ಯಗಳು

೬. ಅರ್ಥಗಾರಿಕೆಯ ತಾತ್ತ್ವಿಕತೆ

೭. ಅರ್ಥದ ಅರ್ಥ

೮. ಬರವಣಿಗೆ ಮತ್ತು ಮಾತು

೯. ಪ್ರಸಂಗವೊಂದರ ಬರವಣಿಗೆ

೧೦. ಕನ್ನಡದ ಅಪೂರ್ವ ಸಂಕಥನ : ಅರ್ಥಗಾರಿಕೆ

ಯಕ್ಷಗಾನವನ್ನು ನವ್ಯೋತ್ತರ ಸಂಕಥನದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ ಕೃತಿಯಿದು. ಯಕ್ಷಗಾನದ ಸಂಕ್ಷಿಪ್ತ ರೂಪವಾಗಿರುವ ತಾಳಮದ್ದಲೆಯ ಬಗ್ಗೆ ವಿಮರ್ಶಾತ್ಮಕ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದ್ದು ಇದರೊಂದಿಗೆ ಕನ್ನಡದ್ದೇ ಆದ ವಿಮರ್ಶಾ ಪಂಥವೊಂದನ್ನು ಹೇಗೆ ಕಟ್ಟಿಕೊಳ್ಳಬಹುದೆಂಬ ಚರ್ಚೆಯೂ ಸೇರಿದೆ.




**೩೩೮. ಯಕ್ಷಗಾನ ವರ್ಣವೈಭವ**

ಲೇ: ಗೋಪಾಲಕೃಷ್ಣ ಹೆಗಡೆ

ಪುಟ: viii+೪೦+೧೦೬, ವರ್ಷ: ೧೯೯೯, ರೂ: ೧೫೦.೦೦

ಪರಿವಿಡಿ

೧. ಯಕ್ಷಗಾನ

೨. ವರ್ಣವೈಭವ

ಯಕ್ಷಗಾನದ ಬಣ್ಣಗಾರಿಕೆ ಮತ್ತು ವೇಷಭೂಷಣಗಳು ಅವುಗಳ ಹಿಂದಿರುವ ಸಾಮಾಜಿಕ ಹಾಗೂ ಧಾರ್ಮಿಕ ಮನೋಭಾವ ಇತ್ಯಾದಿ ವಿಷಯಗಳ ಬಗ್ಗೆ ಅಧ್ಯಯನಾತ್ಮಕವಾಗಿ ಬರೆದ ಕೃತಿಯಿದು.

**೩೩೯. ಯಕ್ಷಗಾನ ವಾಚಿಕಾಧ್ಯಯನ**

ಲೇ: ಮೋಹನ ಕುಂಟಾರ್

ಪುಟ: vi+೨೩೨, ವರ್ಷ: ೨೦೦೦, ರೂ: ೯೦.೦೦

ಪರಿವಿಡಿ

೧. ಯಕ್ಷಗಾನದ ನೆಲೆ




೨. ವಾಚಿಕದ ಹಿನ್ನೆಲೆ
೩. ಪರಂಪರೆ ಮತ್ತು ಸಾಂಸ್ಕೃತಿಕ ಸ್ಪಂದನ
೪. ಹಾಸ್ಯ ಸನ್ನಿವೇಶಗಳು
೫. ಐತಿಹಾಸಿಕ ಪ್ರಸಂಗಗಳು
೬. ಭಾಷೆ ಮತ್ತು ಸಾಮಾಜಿಕತೆ

ಯಕ್ಷಗಾನ ವಾಚಿಕಾಧ್ಯಯನ ಯಕ್ಷಗಾನದ ಮೌಖಿಕ ಸಾಹಿತ್ಯವಾದ ಅರ್ಥಗಾರಿಕೆ ಅಥವಾ ವಾಚಿಕವನ್ನು ಆಧರಿಸಿ ಸಾಂಸ್ಕೃತಿಕ ನೆಲೆಯಿಂದ ಅಧ್ಯಯನ ಮಾಡಲಾಗಿದೆ. ಯಕ್ಷಗಾನದ ಸಂದರ್ಭದಲ್ಲಿ ರಚನೆಗೊಳ್ಳುವ *ಈ* ಆಶು ಸಾಹಿತ್ಯವು ಕಲಾವಿದರ ಸೃಜನಶೀಲ ಪ್ರವೃತ್ತಿಗೊಂದು ನಿದರ್ಶನ. ಕಲಾವಿದರ ಭಾಷಿಕ ಹಿನ್ನೆಲೆ, ಸಾಮಾಜಿಕ ಪರಿಸರ ಇವುಗಳ ನೆಲೆಯಿಂದ ರೂಪುಗೊಳ್ಳುವ *ಈ* ಸಾಹಿತ್ಯವು ಸಾಂಸ್ಕೃತಿಕವಾಗಿಯೂ ಮಹತ್ವದ್ದಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

**೩೪೦. ರಾಶಿ ಬುತ್ತಿ**

ಲೇ: ವೀರೇಶ ಬಡಿಗೇರ

ಪುಟ: ii+೩೪, ವರ್ಷ: ೧೯೯೭

'ರಾಶಿಬುತ್ತಿ' ಕೃಷಿ ಸಂಬಂಧಿತ ಆಚರಣೆಯೊಂದರ ವಿವರಣೆ. ಕೃಷಿಯ ಪ್ರತಿಯೊಂದು ಹಂತವು ಭೂತಾಯಿ ಎನ್ನುವ ಪರಂಪರೆಯಡಿ ದೈವಿಕ ನೆಲೆಯನ್ನು ಪಡೆಯುತ್ತದೆ. ಅದೇ ರೀತಿ ಕೃಷಿ ಚಟುವಟಿಕೆಯ ಕೊನೆ ಹಂತವಾದ ರಾಶಿಪೂಜೆಯ ವಿವರಗಳು *ಈ* ಕೃತಿಯಲ್ಲಿವೆ. ಬೆಳೆಯ ಕೊಯ್ಲಿನಿಂದ ಹಿಡಿದು ಗೂಡು ಬಡಿಯುವುದು, ತೆನೆ ಮುರಿಯುವುದು, ರಾಶಿ ಮಾಡುವುದು, ರಾಶಿ ಮನೆಗೆ ತರುವುದು... ಇವೆಲ್ಲ ರಾಶಿಪೂಜೆಯ ಹಂತದಲ್ಲಿ ಅಡಕಗೊಡಿರುವುದನ್ನು *ಈ* ಕೃತಿಯಲ್ಲಿ ವಿವೇಚಿಸಲಾಗಿದೆ.

**೩೪೧. ಶಿಕಾರಿ ಪರಂಪರೆ**

ಲೇ: ಸ.ಚಿ. ರಮೇಶ್

ಪುಟ: VI+೩೦, ವರ್ಷ: ೨೦೦೩, ರೂ: ೧೦.೦೦

ಶಿಕಾರಿ ಪರಂಪರೆಯು ಸಮಾಜದಲ್ಲಿ ಬೆಳೆದುಬಂದ ಬಗೆ, ಜನಪದೀಯವಾಗಿ ನುಸುಳಿಕೊಂಡ ಪರಿಯನ್ನು *ಈ* ಕಿರುಕೃತಿಯಲ್ಲಿ ಚರ್ಚಿಸಲಾಗಿದೆ.




**೩೪೨. ಸಣ್ಣಾಟಗಳು ಹುಟ್ಟು, ಬೆಳವಣಿಗೆ**

ಲೇ: ಗಂಗಾಧರ ದೈವಜ್ಞ

ಪುಟ: iv+೫೪, ವರ್ಷ: ೨೦೦೬, ರೂ: ೧೦.೦೦

ಸಣ್ಣಾಟದ ಹುಟ್ಟಿನ ಕುರಿತು ಅನೇಕ ವಿದ್ವಾಂಸರು ಮಂಡಿಸಿದ ಅಭಿಪ್ರಾಯಗಳನ್ನು ಮಂಡಿಸುತ್ತ, ಸಣ್ಣಾಟದ ಹುಟ್ಟಿಗೆ ಪ್ರೇರಣೆ ನೀಡಿದ ಶೈವ, ವೈಷ್ಣವ, ಭಕ್ತಿಪಂಥ, ಜನಪದ ಸಂಗೀತ, ಭಜನೆ, ಲಾವಣಿ, ಹರದೇಶಿ ನಾಗೇಶಿ ಇವುಗಳ ಹಿನ್ನೆಲೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**೩೪೩. ಸಸ್ಯ ಜಾನಪದ**

ಲೇ: ಬಿ.ಶಿವರಾಮ ಶೆಟ್ಟಿ

ಪುಟ: ii+೩೬, ವರ್ಷ: ೨೦೦೦ ಮ.ಮಾ, ರೂ: ೧೦.೦೦

ಸಸ್ಯದ ಕುರಿತು ಇಂದು ದತ್ತವಾಗಿರುವ ಎಲ್ಲ ಬಗೆಯ ಜನಪದ ವ್ಯಕ್ತರೂಪಗಳನ್ನು ಅವಲೋಕಿಸಿ ಸಸ್ಯದ ಹಾಗೂ ಅದರ ಉತ್ಪನ್ನಗಳ ಸುತ್ತ ಕಟ್ಟಿಕೊಂಡಿರುವ ಜನಪದವನ್ನು, ನಂಬಿಕೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.




**೩೪೪. ಸಾವು : ಒಂದು ಚಿಂತನೆ**

ಲೇ: ಬಿ.ಎಂ.ಪುಟ್ಟಯ್ಯ

ಪುಟ: xvi+೧೩೦, ವರ್ಷ: ೨೦೦೧, ರೂ: ೭೫.೦೦

ಪರಿವಿಡಿ

೧. ಆಚರಣಾ ಲೋಕ
೨. ಆಲೋಚನಾ ಲೋಕ
೩. ಸೈದ್ಧಾಂತಿಕ ಲೋಕ

ಇದು ಕೆಳಜಾತಿ ಮತ್ತು ಕೆಳವರ್ಗಗಳ ಸಾವಿನ ಆಚರಣೆಗಳನ್ನು ಕುರಿತ ಆಳವಾದ ಅಧ್ಯಯನ ಕೃತಿಯಾಗಿದೆ. ಇದು ಸಾವಿನ ಆಚರಣೆಗಳನ್ನು ಕುರಿತ ಅಧ್ಯಯನವಾಗಿದ್ದರೂ ಆಚರಣೆಗಳನ್ನು ರಾಜಕೀಯ-ಆರ್ಥಿಕ-ಸಾಮಾಜಿಕವಾದ ಸಮಗ್ರ ಚೌಕಟ್ಟಿನಲ್ಲಿ ಗ್ರಹಿಸಲಾಗಿದೆ. *ಈ* ಗ್ರಹಿಕೆಯ ವಿಧಾನದಿಂದಾಗಿ ಆಚರಣೆಗಳನ್ನು ಬದುಕಿನಿಂದ ಪ್ರತ್ಯೇಕಿಸದೆ ಬದುಕಿನ ಸಮಗ್ರತೆಯಲ್ಲಿ ಇಟ್ಟು ನೋಡಲಾಗಿದೆ. ಬದುಕು ಮತ್ತು ಆಚರಣೆಗಳ ನಡುವಿನ ದ್ವಂದ್ವಾತ್ಮಕ ಸಂಬಂಧದ ನೆಲೆಗಳನ್ನು ಹಾಗು ಅದೇ ಕಾಲಕ್ಕೆ ದುಡಿಮೆಯ ವಿಧಾನಗಳು ಇದರೊಂದಿಗೆ ಹೊಂದಿರುವ ಸಂಬಂಧಗಳನ್ನು ಇಲ್ಲಿ ಒಟ್ಟಿಗೆ ಚರ್ಚಿಸಲಾಗಿದೆ.

**೩೪೫. ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ**

ಲೇ: ಬಸವರಾಜ ಮಲಶೆಟ್ಟಿ

ಪುಟ: ii+೨೮, ವರ್ಷ: ೧೯೭೮, ರೂ: ೫.೦೦

ಲಾವಣಿಗಳು ಉತ್ತರ ಕರ್ನಾಟಕದ ಒಂದು ಜನಪ್ರಿಯ ಗೀತ ಪ್ರಕಾರ. *ಈ* ಶೃಂಗಾರ ರಸ ಪ್ರಧಾನವಾದ ಲಾವಣಿಗಳು ೧೯೦೦ರಲ್ಲಿ ಮರಾಠಿ ಲಾವಣಿಕಾರರ ಮೂಲಕ ನಾಡಿನಲ್ಲಿ ರಾಷ್ಟ್ರೀಯ ಭಾವನೆ ಮೊಳಗಿಸುವುದಕ್ಕೆ ಬಳಕೆಯಾದ ಬಗ್ಗೆ *ಈ* ಕೃತಿಯಲ್ಲಿ ಸಾಕಷ್ಟು ಮಾಹಿತಿಗಳಿವೆ. ಲಾವಣಿಗಳು ಕರ್ನಾಟಕದಲ್ಲಿ ರಾಷ್ಟ್ರೀಯ ಭಾವನೆಗಳನ್ನು ಹುಟ್ಟುಹಾಕುವುದರ ಜತೆಗೆ ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳ ಬಗೆಗೂ ಜನತೆಯನ್ನು ಜಾಗೃತಗೊಳಿಸುವಲ್ಲಿ ವಹಿಸಿದ ಪಾತ್ರದ ಬಗ್ಗೆಯೂ *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.

**೩೪೬. ಸುಳಿ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: ii+೩೫, ವರ್ಷ: ೨೦೦೦, ರೂ: ೧೦.೦೦

'ಸುಳಿ'ಯ ಬಗ್ಗೆ ಅನಾದಿ ಕಾಲದಿಂದಲೂ ಆರ್ಥಿಕ ಅಪೇಕ್ಷೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ನಂಬಿಕೆಗಳು ಹಲವು. 'ಸುಳಿ' ಎಂಬುದು ಪ್ರಾಣಿ-ಮನುಷ್ಯರಲ್ಲಷ್ಟೇ ಸೀಮಿತವಲ್ಲ. ಅದು ಭೌತಿಕ ವಸ್ತುಗಳಾದ ಗಾಳಿ, ನೀರು, ಕಲ್ಲು ಇತ್ಯಾದಿಗಳಲ್ಲೂ ಇವೆಯಾದ್ದರಿಂದ ಅವುಗಳ ಸುತ್ತಲೂ ಆರ್ಥಿಕತೆಯನ್ನು ಬೆನ್ನಲುಬಾಗಿಸಿಕೊಂಡು ಹಲವು ಜಾನಪದ ನಂಬಿಕೆಗಳು ಹರಡಿವೆ. ನಮ್ಮ ಲೌಕಿಕ ವ್ಯವಹಾರ ಹಾಗು ನಮ್ಮ ನಂಬಿಕೆಗಳಲ್ಲಿ ಹಾಸುಹೊಕ್ಕಾಗಿರುವ 'ಸುಳಿ'ಗಳ ಬಗ್ಗೆ *ಈ* ಪುಸ್ತಕ ಸಾಕಷ್ಟು ಆಸಕ್ತಿಪೂರ್ಣ ಮಾಹಿತಿಗಳನ್ನು ನೀಡುತ್ತದೆ.




**೩೪೭. ಹಂಪಿ ಜಾನಪದ**

ಲೇ: ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು

ಪುಟ: xii+೧೯೮, ವರ್ಷ: ೧೯೯೬, ರೂ: ೮೦.೦೦

ಪರಿವಿಡಿ

೧. ಮೌಖಿಕ ಸಾಹಿತ್ಯ

೨. ಭೌತಿಕ ಜಾನಪದ

೩. ಸಾಮಾಜಿಕ ಧಾರ್ಮಿಕ ಆಚರಣೆಗಳು

೪. ಕಲೆಗಳು

೫. ಅಧ್ಯಯನದ ಮುಖ್ಯಾಂಶಗಳು

ಐತಿಹಾಸಿಕ ಹಂಪಿಯನ್ನು ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು ಹಂಪಿಯ ಬಗೆಗಿನ ಮೌಖಿಕ ಪರಂಪರೆಯ ಮಾಹಿತಿ ಹಾಗೂ ಲಿಖಿತ ಮಾಹಿತಿಗಳೆರಡನ್ನೂ ಕಲೆ ಹಾಕಿಕೊಂಡು ಎರಡೂ ಪರಂಪರೆಗಳು ಇತಿಹಾಸದ ಬಗ್ಗೆ ಹೇಗೆ ಪ್ರತಿಕ್ರಿಯಿಸಿವೆ ಎಂಬುದನ್ನು ಅಧ್ಯಯನ ಮಾಡುತ್ತಾ, ಹಂಪಿಯ ಇತಿಹಾಸದ ಬಗೆಗೆ ಹೊಸದಾಗಿ ಕಂಠಸ್ಥ ಪರಂಪರೆ ಏನು ಹೇಳುತ್ತಿದೆ ಎಂಬುದನ್ನು *ಈ* ಗ್ರಂಥದಲ್ಲಿ ದಾಖಲಿಸಲಾಗಿದೆ.




**೩೪೮. ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು**

ಲೇ: ಚೆಲುವರಾಜು

ಪುಟ: xii+೧೨೬, ವರ್ಷ: ೨೦೦೦, ರೂ: ೭೫.೦೦

ಪರಿವಿಡಿ

೧. ಹಂಪಿಯ ಭೌಗೋಳಿಕ ಪರಿಸರ

೨. ಹಂಪಿಯ ಸ್ಮಾರಕಗಳು

೩. ಜನಪದ ವೃತ್ತಿಗಳು

೪. ಜನಪದ ಯುದ್ಧ ಕಲೆಗಳು

೫. ಜನಪದ ಪ್ರದರ್ಶನಾತ್ಮಕ ಕಲೆಗಳು

೬. ಜನಪದ ವಾದ್ಯಗಳು

೭. ಜನಪದ ಉಡುಗೆ ತೊಡುಗೆಗಳು

೮. ಜನಪದ ದಿನಬಳಕೆ ವಸ್ತುಗಳು

೯. ಜನಪದ ಆಟಗಳು

೧೦. ಮಿಥುನ ಶಿಲ್ಪಗಳು

ಹಂಪಿ, ವಿಜಯನಗರ ಸಾಮ್ರಾಜ್ಯದ ಭೂಮಿ ಎಂದು ಶೋಧಿಸಲ್ಪಟ್ಟಿದೆಯೇ ವಿನಾ ಹಂಪಿ ಪ್ರದೇಶದ ಜನಪದರ ಬಗೆಗಿನ ಶೋಧನೆ ಅಪೂರ್ಣವಾಗಿಯೇ ಉಳಿದಿದೆ. ಇಂತಹ ಅಧ್ಯಯನ ವೊಂದರ ಅಗತ್ಯತೆಯ ಉದ್ದೇಶ ಹೊಂದಿರುವ ಕೃತಿ ಇದಾಗಿದೆ. ವಿಜಯನಗರ ಮತ್ತು ವಿಜಯನಗರೋತ್ತರ ಹಂಪಿ ಪ್ರದೇಶದ ಸಾಂಸ್ಕೃತಿಕ ಪರಿಸರ ಹಾಗೂ *ಈ* ಪರಿಸರದಲ್ಲಿ ಸಿಗುವ ಸ್ಮಾರಕಗಳಲ್ಲಿರುವ ಜಾನಪದೀಯ ಅಂಶಗಳನ್ನು ಶೋಧಿಸಿ, ಆ ಮಾಹಿತಿಗಳಿಂದ ನೈಜ ಚರಿತ್ರೆಯೊಂದನ್ನು ಪುನಾರಚಿಸುವುದನ್ನು ಕಾಣಬಹುದು.

**೩೪೯. ಹುಲಿಗೆಮ್ಮ**

ಲೇ: ಪುರುಷೋತ್ತಮ ಬಿಳಿಮಲೆ

ಪುಟ: vi+೬೨, ವರ್ಷ: ೧೯೯೯, ರೂ: ೪೦.೦೦

ಪರಿವಿಡಿ

೧. ಹಿನ್ನೆಲೆ - ಭೌಗೋಳಿಕ ವಿವರ, ಐತಿಹ್ಯಗಳು, ಪವಾಡಗಳು ಮತ್ತು ಐತಿಹಾಸಿಕ ದಾಖಲೆಗಳು

೨. ಪೌರಾಣಿಕ - ಜಾನಪದ ಹಿನ್ನೆಲೆ

೩. ಪಠ್ಯಗಳ ಸಾಂಸ್ಥೀಕರಣ

೪. ನಾಥ ಸಂಪ್ರದಾಯ, ಸಿದ್ಧ - ಸಂಪ್ರದಾಯ, ಸುಡುಗಾಡು ಸಿದ್ಧರು.

೫. ಪೂಜಾರಿಗಳು ಮತ್ತು ಮಡಿ - ಮೈಲಿಗೆ

೬. ಹುಲಿಗೆಮ್ಮ ಸೇವೆಗಳು

೭. ರಂಡಿ ಹುಣ್ಣಿಮೆ - ಮುತ್ತೈದೆ ಹುಣ್ಣಿಮೆ.

೮. ಹುಲಿಗಿ ಜಾತ್ರೆ ವಿಶ್ಲೇಷಣೆ; ಮುತ್ತು ಕಟ್ಟುವುದು

೯. ಹುಲಿಗೆಮ್ಮನ ಧರ್ಮಪ್ರಸಾರಕರು; ಆಡಳಿತ ಮತ್ತು ನಂಬಿಕೆಗಳು; ಹರಕೆಗಳು

೧೦. ರೋಗಚಿಕಿತ್ಸೆ; ಆರಾಧನೆ ಮತ್ತು ಸಾಮಾಜಿಕ ಸಂರಚನೆ

ಹುಲಿಗೆಮ್ಮ ದೈವ ಮತ್ತು ಹುಲಿಗೆಮ್ಮ ಕ್ಷೇತ್ರದ ಭೌಗೋಳಿಕ-ಪೌರಾಣಿಕ ದಾಖಲೆ, ಜಾನಪದ ವಿವರಗಳನ್ನು *ಈ* ಕೃತಿಯಲ್ಲಿ ದಾಖಲಿಸಲಾಗಿದೆ. ಜನಪದ ಪುರಾಣಗಳಲ್ಲಿ ಹುಲಿಗೆಮ್ಮ ದೇವಿಯ ಬಗ್ಗೆ ಇರುವ ಪ್ರಸ್ತಾಪ, ಪೌರಾಣಿಕ-ಜಾನಪದ ಹಿನ್ನೆಲೆ ಹಾಗೂ ಆ ಬಗ್ಗೆ ಮೌಖಿಕ ರೂಪದಲ್ಲಿ ಉಳಿದಿರುವ ಪುರಾಣಗಳನ್ನು *ಈ* ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.





# ೧೬

# ಜನಾಂಗ-ಜನಾಂಗೀಯ ಅಧ್ಯಯನ-ಸಂಸ್ಕೃತಿ ಮತ್ತು ದಲಿತ ಚಳುವಳಿ

**೩೫೦. ತುಳು ಸಂಸ್ಕೃತಿ : ಚತುರ್ಮುಖಿ ಅಧ್ಯಯನ**

ಲೇ: ಕೆ.ಮೋಹನಕೃಷ್ಣ ರೈ

ಪುಟ: xi+೮೩, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಸಂಸ್ಕೃತಿ ಮುಖಿ

೨. ಜಾತಿಮುಖಿ

೩. ಧರ್ಮಮುಖಿ

೪. ರಂಗಮುಖಿ

ತುಳುನಾಡು ಕರ್ನಾಟಕದ ಭಾಗವಾಗಿದ್ದರೂ ಒಂದು ಸಾಂಸ್ಕೃತಿಕ ಘಟಕದ ಲಕ್ಷಣಗಳನ್ನೊಳಗೊಂಡಿದೆ. ಪ್ರಸ್ತುತ ಕೃತಿಯಲ್ಲಿ ತುಳುನಾಡಿನ ಬದುಕನ್ನು ಕರ್ನಾಟಕದ ಸಾಂಸ್ಕೃತಿಕ ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ ಹಾಗೂ ಪ್ರಾದೇಶಿಕ ಭಿನ್ನತೆಗಳನ್ನು ಗಮನದಲ್ಲಿರಿಸಿ ಕೊಂಡು ನೋಡಲಾಗಿದೆ.




**೩೫೧. ದಲಿತ ಅಧ್ಯಯನ**

ಸಂ : ಟಿ.ಆರ್. ಚಂದ್ರಶೇಖರಯ್ಯ

ಪುಟ: xv+೪೧೪, ವರ್ಷ: ೨೦೦೫, ರೂ: ೧೫೦.೦೦

ಪರಿವಿಡಿ

೧. ವರ್ಣ-ಜಾತಿ-ವರ್ಗ-ಲಿಂಗ-ಜಾಗತಿಕ ಸಂದರ್ಭ

೨. ದಲಿತ ಚಿಂತನೆ

೩. ದಲಿತ ಸಾಹಿತ್ಯ ಮತ್ತು ಸಂಸ್ಕೃತಿ

೪. ದಲಿತ ಚಳುವಳಿ ಮತ್ತು ಸಮಕಾಲೀನತೆ

*ಈ* ಗ್ರಂಥದಲ್ಲಿ ದಲಿತ ಸಾಹಿತ್ಯ, ಸಂಸ್ಕೃತಿ, ಚಿಂತನೆ ಮತ್ತು ಚಳುವಳಿಗೆ ಸಂಬಂಧಿಸಿದ ಅಧ್ಯಯನಾತ್ಮಕ ಲೇಖನಗಳಿವೆ. ವರ್ಣ, ಜಾತಿ, ವರ್ಗ, ಲಿಂಗ ಮತ್ತು ಜಾಗತಿಕ ಸಂದರ್ಭಗಳಲ್ಲಿ ಇವುಗಳ ಸಂಬಂಧವನ್ನು ವಿವೇಚಿಸಲಾಗಿದೆ. ದಲಿತರ ಆಲೋಚನಾಕ್ರಮ, ಲೋಕದೃಷ್ಟಿ ಮತ್ತು ಅವುಗಳಿಂದ ನಿರ್ಮಾಣಗೊಂಡ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಪರಂಪರಾಗತವಾದ ದಲಿತ ಸಮಾಜವು ಆಧುನಿಕ ಸನ್ನಿವೇಶದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹೊಸ ಆಯಾಮಗಳನ್ನು ಪಡೆಯುವ ಸಂಗತಿಗಳನ್ನು, ಸಾಧ್ಯತೆಗಳನ್ನು ಮತ್ತು ಅವುಗಳಿಗಿರುವ ಆತಂಕಗಳನ್ನು ಇಲ್ಲಿನ ಲೇಖನಗಳು ಚರ್ಚಿಸುತ್ತವೆ.




**೩೫೨. ದಲಿತ ಕಥನ**

ಲೇ: ಮೊಗಳ್ಳಿ ಗಣೇಶ್

ಪುಟ: xii+೨೭೮, ವರ್ಷ: ೨೦೦೬, ರೂ: ೧೨೦.೦೦

ಪರಿವಿಡಿ

೧. ಕುವೆಂಪು, ಕಾರಂತ, ದೇವನೂರು, ಸಿದ್ಧಲಿಂಗಯ್ಯರ ಕೃತಿಗಳಲ್ಲಿ ದಲಿತ ಸಂವೇದನಾ ವಿನ್ಯಾಸ

೨. ದಲಿತತ್ವ, ದಲಿತ ಸಂಸ್ಕೃತಿ, ದಲಿತ ಮೀಮಾಂಸೆಯ ವೈಚಾರಿಕ ಸ್ವರೂಪ

೩. ದಲಿತತ್ವ ಮತ್ತು ಬುದ್ಧತ್ವ

೪. ದಲಿತರ ಸಮಕಾಲೀನ ಹಾಗೂ ಭವಿಷ್ಯಪರ ಚಿಂತನೆ

ಸಾಹಿತ್ಯ ಸಂಸ್ಕೃತಿ ಮತ್ತು ಸಮಕಾಲೀನ ಸಮಾಜದ ತಲ್ಲಣಗಳನ್ನು ಹೊಸಬಗೆಯಲ್ಲಿ ಕಂಡು ಚರ್ಚಿಸುವ ಇಲ್ಲಿನ ಲೇಖನಗಳನ್ನು ಕುವೆಂಪು, ಶಿವರಾಮಕಾರಂತ, ದೇವನೂರು ಮಹಾದೇವ, ಸಿದ್ಧಲಿಂಗಯ್ಯರಂತಹ ಕನ್ನಡದ ಮಹತ್ವದ ಲೇಖಕರ ಕೃತಿಗಳನ್ನು ಒಳಹೊಕ್ಕು ನೋಡುವ ಪರಿ ವಿಶಿಷ್ಟವಾದುದು. ಇಲ್ಲಿ ಲೇಖನಗಳು ದಲಿತತ್ವ, ದಲಿತ ಮೀಮಾಂಸೆಯ ವೈಚಾರಿಕ ಸ್ವರೂಪ, ದಲಿತ ಸಂಸ್ಕೃತಿಗಳನ್ನು ದಲಿತರ ನೆಲೆಯಲ್ಲಿ ತಾತ್ವಿಕ ಸಂವಾದಕ್ಕೆ ಎತ್ತಿಕೊಳ್ಳುತ್ತದೆ.

**೩೫೩. ದಲಿತ ಚಿಂತನೆ**

ಸಂ: ಮೊಗಳ್ಳಿ ಗಣೇಶ್

ಪುಟ: xx+೨೯೬, ವರ್ಷ: ೨೦೦೨, ರೂ: ೧೨೫.೦೦

ಪರಿವಿಡಿ

೧. ಮಾನವೀಯತೆಯ ಕ್ರಾಂತಿ ಆಗಬೇಕು; ಶೂದ್ರಶಾಹಿಯಿಂದ ಪುರೋಹಿತಶಾಹಿಯೆಡೆಗೆ

೨. ಅಂಬೇಡ್ಕರ್ ನಂತರದ ಭಾರತ; ದಲಿತರ ಸ್ಥಿತಿಗತಿ ಮತ್ತು ಭವಿಷ್ಯ




೩. ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ

೪. ಅಂತರ್ಜಾತಿ ವಿವಾಹ; ಗ್ರಾಮದೇವತೆಯ ಪರಿಕಲ್ಪನೆ

೫. ಅಸ್ಪೃಶ್ಯತೆ ಮತಾಂತರ ವೀಸಲಾತಿ

೬. ಸಮೂಹ ಸನ್ನಿಯ ರಾಜಕೀಯ; ಬಂಡಾಯ ಸಾಹಿತ್ಯದ ನೆಲೆ

೭. ಒಡೆದು ಹೋಳಾಗುತ್ತಿರುವ ದಲಿತ ಸಮೂಹ

೮. ದಲಿತರು ಮತ್ತು ಜಾಗತೀಕರಣ; ದಲಿತರ ರಾಷ್ಟ್ರೀಯತೆ ಮತ್ತು ಗಾಂಧೀಯುಗ

೯. ಆಧುನಿಕತೆಯ ಮಹಾಮಾಯೆ; ತಿಳಿವ ತೇಜದ ಮುಂದೆ

೧೦. ವರ್ಣಭೇದ ನೀತಿ ಮತ್ತು ಅಸ್ಪೃಶ್ಯತೆ

ಕರ್ನಾಟಕದ ಪ್ರಮುಖ ದಲಿತ ಸಂವೇದನೆಯ ಚಿಂತಕರ ೧೫ ಪ್ರಬುದ್ಧ ಲೇಖನಗಳು *ಈ* ಕೃತಿಯಲ್ಲಿವೆ. ದಲಿತ ಲೋಕದ ಸೂಕ್ಷ್ಮ ಸಮಸ್ಯೆಗಳನ್ನು ಹಾಗೂ ಆ ಬಗೆಗಿನ ಚಿಂತನೆಗಳನ್ನು ಶಿಸ್ತುಬದ್ಧವಾಗಿ ಅಧ್ಯಯಿಸಲು *ಈ* ಲೇಖನಗಳು ಸಹಕಾರಿಯಾಗಿವೆ. ದಲಿತ ಸಮುದಾಯದ ಬಗ್ಗೆ ನಮ್ಮ ಲೇಖಕರ ಮನಸ್ಸುಗಳು ಹಿಡಿದಿರುವ ದಾರಿ ಅವರ ಆಲೋಚನೆ, ಚಿಂತನೆ ಮತ್ತು ಗುರಿಗಳನ್ನು *ಈ* ಲೇಖನಗಳು ಪ್ರತಿಫಲಿಸುತ್ತವೆ.

**೩೫೪. ದಲಿತ ಸಂಸ್ಕೃತಿ**

ಲೇ: ಎಸ್.ಎಸ್.ಹಿರೇಮಠ

ಪುಟ: xii+೧೪೨, ವರ್ಷ: ೨೦೦೧, ರೂ: ೬೦.೦೦

ಪ್ರಾಚೀನ ಸಾಂಸ್ಕೃತಿಕ ಆಕರಗಳಿಂದ ದಲಿತ ಸಂಸ್ಕೃತಿಯನ್ನು ವಿಶ್ಲೇಷಿಸುವ ಹಾಗೂ ಸಮಕಾಲೀನ ಒತ್ತಡಗಳಿಗೆ ಪೂರಕವಾದ ವಾದಗಳಿಂದ ಇಲ್ಲಿ ವಿಚಾರ ಮಂಡಿಸಿರುವುದು *ಈ* ಕೃತಿಯ ವಿಶೇಷ.




**೩೫೫. ದಲಿತರ ಮೇಲೆ ದೌರ್ಜನ್ಯ ಒಂದು ನೋಟ**

ಲೇ: ಚಿನ್ನಸ್ವಾಮಿ ಸೋಸಲೆ

ಪುಟ: iv+೪೮, ವರ್ಷ: ೨೦೦೬, ರೂ: ೧೦.೦೦

ಇಂದಿಗೂ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅಸ್ಪೃಶ್ಯತಾ ಚರಣೆ, ಲೈಂಗಿಕ ಅತ್ಯಾಚಾರ, ಅಮಾನವೀಯ ಆಚರಣೆಗಳು ಹಾಗೂ ಸಾಮಾಜಿಕ ದುಃಸ್ಥಿತಿಗಳ ಅಧ್ಯಯನ *ಈ* ಕಿರುಗ್ರಂಥದಲ್ಲಿದೆ.



**೩೫೬. ದಲಿತರು ಮತ್ತು ಚರಿತ್ರೆ**

ಸಂ : ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: 22+೧೮೬, ವರ್ಷ: ೨೦೦೫, ರೂ: ೧೦೦.೦೦

ಪರಿವಿಡಿ

೧. ದಲಿತರ ಚರಿತ್ರೆಯ ಆಕರಗಳು ಮತ್ತು ಅಧ್ಯಯನ ಸ್ವರೂಪ
೨. ಮಧ್ಯಕಾಲೀನ ಭಾರತದ ಚರಿತ್ರೆ ಮತ್ತು ದಲಿತರು
೩. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯ ಸಂದರ್ಭದ ದಲಿತರ ಚರಿತ್ರೆ
೪. ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಮತ್ತು ದ್ರಾವಿಡ ಚಳುವಳಿ
೫. ಆಧುನಿಕ ಕರ್ನಾಟಕದ ಚರಿತ್ರೆ ಮತ್ತು ದಲಿತರು, ದಲಿತ ಚಳುವಳಿ ಪುನಾರಚನೆ
೬. ದಲಿತ ಪ್ರಜ್ಞೆಯ ವಿಕಾಸ ಮತ್ತು ಚರಿತ್ರೆಯ ಪುನಾರಚನೆ
೭. ಚರಿತ್ರೆಯ ಪುನರ್‌ರಚನೆ ಮತ್ತು ದಲಿತ ಮಹಿಳೆ
೮. ಜನಪದ ಸಾಹಿತ್ಯದಲ್ಲಿ ದಲಿತ ಮಹಿಳೆ

ದಲಿತರ ದೃಷ್ಟಿಕೋನದಿಂದ ನಮ್ಮ ಸಾಂಪ್ರದಾಯಿಕ ಚರಿತ್ರೆಯನ್ನು ಪುನರ್‌ರಚನೆ ಮಾಡುವ ಆಲೋಚನಾ ದೃಷ್ಟಿಯಿಂದ *ಈ* ಕೃತಿಯಲ್ಲಿನ ಲೇಖನಗಳು ವಿಶೇಷ ಮಹತ್ವದ್ದಾಗಿವೆ. ಭಾರತ ಮತ್ತು ಕರ್ನಾಟಕ ಚರಿತ್ರೆಯನ್ನು, ದಲಿತರ ಪಾಲ್ಗೊಳ್ಳುವಿಕೆ ಮತ್ತು ಲೋಕದೃಷ್ಟಿಯ ಮೂಲಕ ಒಡೆದು ಮತ್ತೆ ಕಟ್ಟುವ ಮಹತ್ವದ ಕೆಲಸವನ್ನು *ಈ* ಕೃತಿಯ ಲೇಖನಗಳಲ್ಲಿ ಪ್ರಸ್ತಾಪಿಸಲಾಗಿದೆ.



**೩೫೭. ದಲಿತರು ಮತ್ತು ಪರ್ಯಾಯ ರಾಜಕಾರಣ**

ಸಂ : ಪಿ. ಮಹಾದೇವಯ್ಯ

ಪುಟ: xvi+೩೩೮, ವರ್ಷ: ೨೦೦೫, ರೂ: ೧೨೦.೦೦

ಪರಿವಿಡಿ

೧. ಪರ್ಯಾಯ ರಾಜಕೀಯ ವ್ಯವಸ್ಥೆ
೨. ಪರ್ಯಾಯ ರಾಜಕಾರಣ; ಪರ್ಯಾಯ ಸಮಾಜ
೩. ಪರ್ಯಾಯ ರಾಜಕಾರಣದ ತಾತ್ವಿಕತೆ; ಪರ್ಯಾಯ ರಾಜಕಾರಣ-ಸಾಮಾಜಿಕ ಚಳುವಳಿಗಳು
೪. ಪರ್ಯಾಯ ರಾಜಕಾರಣ : ಭೂಮಿ ಪ್ರಶ್ನೆ
೫. ಮಹಿಳೆಯರು, ದಲಿತರು, ರೈತರು ಮತ್ತು ಪರ್ಯಾಯ ರಾಜಕಾರಣ
೬. ಅಹಿಂದ ರಾಜಕಾರಣ ಮತ್ತು ಜಾಗತೀಕರಣ
೭. ಪ್ರಜಾಪ್ರಭುತ್ವದ ಆಶಯ-ಪರ್ಯಾಯ ರಾಜಕಾರಣ

ಕನ್ನಡ ಬಹಳ ಮುಖ್ಯ ಚಿಂತಕರು, ಲೇಖಕರು, ಹೋರಾಟಗಾರರು, ರಾಜಕಾರಣಿಗಳು, ರೈತ ಮುಖಂಡರು 'ದಲಿತರು ಮತ್ತು ಪರ್ಯಾಯ ರಾಜಕಾರಣ' ಎಂಬ ಮಹತ್ವದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನಗಳು, ಉಪನ್ಯಾಸಗಳು ಮತ್ತು ಚರ್ಚೆಗಳು *ಈ* ಕೃತಿಯಲ್ಲಿ ಸಂಕಲಿತಗೊಂಡಿವೆ. ಕರ್ನಾಟಕದಲ್ಲಿ ದಲಿತರು ಮುಂಚೂಣಿಯಲ್ಲಿ ನಿಂತು ಪರ್ಯಾಯ ರಾಜಕಾರಣ ಕಟ್ಟುವ ದೃಷ್ಟಿಯಿಂದ ಮತ್ತು ಆ ದಲಿತ ಸಂಘಟನೆಗಳು ರೈತ ಹಾಗೂ ಮಹಿಳೆಯರನ್ನು ಸೇರಿಸುತ್ತ ಹೊಸ ಶಕ್ತಿಯ ಉದಯಕ್ಕೆ ದಿಕ್ಸೂಚಿಯಾಗಿ ನಿಲ್ಲುವಂತಹ ಆಲೋಚನಾಪರ ಚಿಂತನೆಗಳು *ಈ* ಕೃತಿಯಲ್ಲಿವೆ.



**೩೫೮. ದಲಿತರು ಮತ್ತು ಜಾಗತೀಕರಣ**

ಲೇ: ಮೊಗಳ್ಳಿ ಗಣೇಶ್

ಪುಟ: xiv+೨೭೦, ವರ್ಷ: ೧೯೯೯, ರೂ: ೧೨೦.೦೦

ಪರಿವಿಡಿ

೧. ಜಾಗತೀಕರಣ ಮತ್ತು ದಲಿತರು
೨. ಸಮಕಾಲೀನತೆ ಮತ್ತು ಜಾಗತೀಕರಣ
೩. ಆದಿವಾಸಿ ಅಲೆಮಾರಿ ಬುಡಕಟ್ಟುಗಳು: ಜಾಗತಿಕ ಪ್ರಕ್ರಿಯೆ
೪. ದೇಶಿ ವಿದೇಶಿ
೫. ಜಾನಪದ ಮತ್ತು ಜಾಗತೀಕರಣ
೬. ವಿಶ್ವಪದದ ಪ್ರಕ್ರಿಯೆ
೭. ದಲಿತ ವಿಮೋಚನೆ.

ಆಧುನಿಕ ವೈಜ್ಞಾನಿಕ ಯುಗದಲ್ಲಿ ಅದರಲ್ಲೂ ಇಂದಿನ ಜಾಗತೀಕರಣ ಸಂದರ್ಭದಲ್ಲಿ ದಲಿತ ಸಮುದಾಯಗಳು, ಜಾಗತೀಕರಣದ ಪ್ರಕ್ರಿಯೆ ಮೂಡಿಸುವ ಬೌದ್ಧಿಕ ಸವಾಲುಗಳಿಗೆ ಸ್ಪಂದಿಸುವ ಪರಿಯನ್ನು ತರ್ಕಬದ್ಧವಾಗಿ ವ್ಯಾಖ್ಯಾನಿಸುವ ಕೃತಿ ಇದಾಗಿದೆ.

**೩೫೯. ದಲಿತರು ಮತ್ತು ಭೂಮಿಯ ಪ್ರಶ್ನೆ**

ಲೇ ಬಿ.ಎಂ.ಪುಟ್ಟಯ್ಯ

ಪುಟ: iv+೬೨, ವರ್ಷ; ೨೦೦೮, ರೂ: ೧೦

ಭೂಮಿಗೂ ಭೂಮಾಲೀಕರಿಗೂ ಇರುವ ಸಂಬಂಧ, ಭೂಮಿಗೂ ಆಳುವ ವರ್ಗಗಳಿಗೂ ಇರುವ ಸಂಬಂಧವನ್ನು ವಿಶ್ಲೇಷಿಸುತ್ತಾ ಭೂಮಿಗೂ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಸಾಮ್ರಾಜ್ಯಶಾಹಿ ಮಾರುಕಟ್ಟೆಗೂ ಇರುವ ಸಂಬಂಧವನ್ನು ಇಲ್ಲಿ ವಿಮರ್ಶಿಸಲಾಗಿದೆ. *ಈ* ವಿಮರ್ಶೆ-ವಿಶ್ಲೇಷಣೆಯ ಬೆಳಕಲ್ಲಿ ಭೂಮಿಗೂ ಅದರಲ್ಲಿ ದುಡಿಯುವ ಉತ್ಪಾದಕ ವರ್ಗಕ್ಕೂ ಇರುವ ಸಂಬಂಧವನ್ನು ಭೂರಹಿತ ದಲಿತ ಹಿತಾಸಕ್ತಿಯ ನೆಲೆಯಡಿ ಚರ್ಚಿಸಲಾಗಿದೆ.

**೩೬೦. ದಲಿತರು ಭಾಷೆ ಮತ್ತು ಸಮಾಜ**

ಸಂ: ಪಿ. ಮಹಾದೇವಯ್ಯ

ಪುಟ: ೪೨+೨೯೮, ವರ್ಷ: ೨೦೦೬, ರೂ: ೧೨೯

ಪರಿವಿಡಿ

೧. ದಲಿತರು ಮತ್ತು ಭಾಷೆ
೨. ಶಿಕ್ಷಣ, ದಲಿತರು ಮತ್ತು ಭಾಷೆ
೩. ಸಾಮಾಜಿಕ ಸಂವಹನ, ದಲಿತರು ಮತ್ತು ಭಾಷೆ
೪. ಮಾಧ್ಯಮ, ದಲಿತರು ಮತ್ತು ಭಾಷೆ
೫. ದಲಿತರ (ಹೊಲೆಮಾದಿಗರ) ಕನ್ನಡದ ರಚನೆ

ದಲಿತರ ಭಾಷೆ ಹಾಗೂ ಸಮಾಜವನ್ನು ಕುರಿತು ಮೊತ್ತಮೊದಲ ಬಾರಿಗೆ ಭಿನ್ನ ಭಿನ್ನ ಕ್ಷೇತ್ರಗಳ ಚಿಂತಕರು, ಭಾಷಾ ವಿಜ್ಞಾನಿಗಳು, ಚಳುವಳಿಗಾರರು ಮತ್ತು ಮಾಧ್ಯಮದವರು ಒಂದು ಕಡೆ ಸೇರಿ ಚರ್ಚಿಸಿ ಅಭಿವ್ಯಕ್ತಿಸಿದ ವಿಚಾರಗಳು *ಈ* ಕೃತಿಯಲ್ಲಿವೆ. ಭಿನ್ನ ಸಾಮಾಜಿಕ ಸನ್ನಿವೇಶಗಳಲ್ಲಿ ದಲಿತರ ಭಾಷೆಗಳು ಮತ್ತು ಉಪಭಾಷೆಗಳು ಹುಟ್ಟಿಕೊಂಡು ಶಿಕ್ಷಣದ ವ್ಯವಸ್ಥೆಗೆ ಬಂದಾಗ ಭಾಷೆಗಳು ಪಲ್ಲಟವಾಗುತ್ತ ದಲಿತರಲ್ಲಿ ತಲ್ಲಣ ಆತಂಕ ಸಂಭ್ರಮಗಳನ್ನು ಉಂಟುಮಾಡಿದ ಸಂಕಥನದ ಅಪೂರ್ವ ಮಾದರಿಗಳು *ಈ* ಕೃತಿಯಲ್ಲಿವೆ.

**೩೬೧. ದಲಿತರು ಮತ್ತು ಮತಾಂತರ : ಒಂದು ಚಿಂತನೆ**

ಸಂ : ಎನ್. ಚಿನ್ನಸ್ವಾಮಿ ಸೋಸಲೆ

ಪುಟ : xii + ೧೧೦, ವರ್ಷ : ೨೦೦೯, ರೂ. ೮೦.೦೦

ಪರಿವಿಡಿ

೧. ದಲಿತರು ಮತ್ತು ಜಾತಿ
೨. ಚರಿತ್ರೆ ಮತ್ತು ಮತಾಂತರ
೩. ಮತಾಂತರದ ಕಥನ
೪. ಅಂಬೇಡ್ಕರ್, ಮತಾಂತರ ಮತ್ತು ದಲಿತರು
೫. ಬೌದ್ಧಧರ್ಮ, ಮತಾಂತರ ಮತ್ತು ದಲಿತರು
೬. ದಲಿತ ಸಂಘಟನೆಗಳು ಮತ್ತು ಮತಾಂತರ

ಭಾರತದ ಸ್ವಾತಂತ್ರ್ಯಾನಂತರದಲ್ಲಿ ದಲಿತರು ಸಾಂವಿಧಾನಿಕವಾಗಿ ಸವರ್ಣೀಯರ ಸಮಾನ ಸ್ಥಾನಮಾನ ಮತ್ತು ಹಕ್ಕಿಗಾಗಿ ಹೋರಾಡುವ ಸಂದರ್ಭದಲ್ಲಿ ಎದುರಾಗಿರುವ ಸಂಘರ್ಷಗಳನ್ನು ಹಿನ್ನೆಲೆಯನ್ನಿಟ್ಟುಕೊಂಡು ಸಮಾನ ಸ್ಥಾನಮಾನಕ್ಕಾಗಿ ಇಂದು ದಲಿತ ಸಮಾಜ ಮತಾಂತರದತ್ತ ವಾಲುತ್ತಿರುವುದರ ಸಾಧಕ ಬಾಧಕಗಳ ಕುರಿತು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.




**೩೬೨. ದೇವ-ದೇವಿ : ಅಲೆವ ಜನರ ಕೆಲವು ಆಚರಣೆಗಳ ಮುಖೇನ**

ಲೇ: ರಾ. ವೆಂಕಟೇಶ ಇಂದ್ವಾಡಿ

ಪುಟ: xvi+೯೪, ವರ್ಷ: ೨೦೦೨, ರೂ: ೫೦.೦೦

ಪರಿವಿಡಿ

೧. ೧೪ ಗ್ರಾಮದ ೨೫ ಮನೆ ತೆಲುಗು ಶೆಟ್ಟರ ಮೂಲ
೨. ಕರ್ನಾಟಕದ ಅಲ್ಪಸಂಖ್ಯಾತ ಆಯೋಗಗಳು
೩. ವಲಸೆಯ ವಿವಿಧ ಹಂತಗಳು ಪಂಗಡಗಳಾದದ್ದು
೪. ಕುಲಕಥನಗಳ ಸಮೀಕ್ಷೆ
೫. ಮದುವೆ : ಕಳ್ಳಿಗೆ ಕಂಕಣ ಅಥವಾ ಹುಸಿಹೆಣ್ಣು
೬. ದೇವ ದೇವಿ; ಪೂರ್ವಿಕರ ಹಬ್ಬಗಳು; ಭಾಷೆ
೭. ಸಾವಿನ ಆಚರಣೆ

ಪ್ರಾಚೀನ ನಾಗರಿಕತೆಯ ನಿರ್ಮಾಣದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದ ವರ್ತಕ ಜನಾಂಗಕ್ಕೆ ಸೇರಿದವರೆನ್ನಲಾದ ೨೪ ಮನೆ ತೆಲುಗು ಶೆಟ್ಟರ ಪಂಗಡದ ಬಗ್ಗೆ ನಡೆಸಿರುವ ಅಧ್ಯಯನ ಕೃತಿಯಿದು. ಕರ್ನಾಟಕದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ಊರುಗಳಲ್ಲಿ *ಈಗ* ನೆಲೆಸಿರುವ *ಈ* ವಲಸಿಗ ಜನಾಂಗ ಬೇರೆ ಬೇರೆ ಕಾಲಘಟ್ಟಗಳಲ್ಲಿ ಮತ್ತು ಪ್ರದೇಶಗಳಲ್ಲಿ ಸಂಚರಿಸುತ್ತ ತಮ್ಮದೇ ಆದ ಆಚರಣೆಗಳನ್ನು ಆಚರಿಸುತ್ತಾ ಬಂದಿದೆ. *ಈ* ಜನಾಂಗದ ಕುಲಕಥನಗಳು, ಮದುವೆ ಮುಂತಾದ ವಿಶಿಷ್ಟ ಜೀವನಘಟ್ಟಗಳು, ದೇವ ದೇವಿ ಎಂಬಂತಹ ವಿಶಿಷ್ಟ ಆಚರಣೆ-ಹಬ್ಬಗಳ ಬಗ್ಗೆ ಮಾಹಿತಿ *ಈ* ಕೃತಿಯಲ್ಲಿದೆ.




**೩೬೩. ನೇಕಾರ ಸಮಾಜ ಸಂಸ್ಕೃತಿ ಆರ್ಥಿಕ ಸ್ಥಿತಿಗತಿ**

ಸಂ : ಸಿ. ಮಹದೇವ

ಪುಟ : x + ೭೮, ವರ್ಷ : ೨೦೦೯, ರೂ. ೬೦

ಪರಿವಿಡಿ

೧. ನೇಕಾರರ ಸಾಂಸ್ಕೃತಿಕ ಹಿನ್ನೆಲೆ
೨. ನೇಕಾರರಲ್ಲಿ ಒಳಪಂಗಡಗಳು
೩. ನೇಕಾರಿಕೆಯಲ್ಲಿ ಕುಟುಂಬದ ಪಾತ್ರ
೪. ನೇಕಾರಿಕೆ ವೃತ್ತಿಯಲ್ಲಿ ಯಜಮಾನ ಮತ್ತು ನೇಕಾರರು
೫. ನೇಕಾರಿಕೆ ವೃತ್ತಿಯಲ್ಲಿ ಪ್ರಾದೇಶಿಕ ವೈವಿಧ್ಯತೆ
೬. ಉತ್ಪಾದನೆ ಮತ್ತು ಮಾರಾಟ ಸಮಸ್ಯೆ
೭. ನೇಕಾರರ ಆರ್ಥಿಕ ಸ್ಥಿತಿಗತಿ
೮. ನೇಕಾರರಿಗೆ ಸರ್ಕಾರಿ ಸವಲತ್ತುಗಳು

ಪ್ರಸ್ತುತ ಕೃತಿಯಲ್ಲಿ ನೇಕಾರರ ಜನಾಂಗದ ಸಾಂಸ್ಕೃತಿಕ ಹಿನ್ನೆಲೆ, ಅದರ ಒಳಪಂಗಡಗಳು, ನೇಕಾರಿಕೆಯಲ್ಲಿ ಕುಟುಂಬದ ಪಾತ್ರ, ನೇಕಾರಿಕೆಯಲ್ಲಿರುವ ಪ್ರಾದೇಶಿಕ ವೈವಿದ್ಯತೆ, ಉತ್ಪಾದನೆ, ಮಾರಾಟ ವ್ಯವಸ್ಥೆ ಮತ್ತು ಸವಾಲುಗಳು, ನೇಕಾರರ ಪ್ರಸ್ತುತ ಆರ್ಥಿಕ ಸ್ಥಿತಿಗತಿ, ನೇಕಾರರಿಗೆ ದೊರಕುತ್ತಿರುವ ಸವಲತ್ತುಗಳು ಮೊದಲಾದ ವಿಷಯಗಳನ್ನು ಕುರಿತ ಲೇಖನಗಳಿವೆ. ಭಾರತದಲ್ಲಿ ಕೃಷಿಯಷ್ಟೇ ಪ್ರಾಚೀನವಾದ ನೇಕಾರರಿಗೆ ವೃತ್ತಿಯ ಬಗ್ಗೆ *ಈ* ಕೃತಿಯು ವಿಪುಲ ಮಾಹಿತಿಯನ್ನು ನೀಡುತ್ತದೆ.

### ೩.೬.೪. ಭಾರತೀಯ ಸಮಾಜ ಮತ್ತು ದಲಿತರು

ಲೇ: ಎನ್.ಚಿನ್ನಸ್ವಾಮಿ ಸೋಸಲೆ

ಪುಟ: ೧೨+೨೬೮, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ಭಾರತೀಯ ಸಮಾಜ ಮತ್ತು ಅಂಬೇಡ್ಕರ್

೨. ಭಾರತೀಯ ಸಮಾಜ ಮತ್ತು ಜಾತಿ

೩. ಭಾರತೀಯ ಸಮಾಜ ಮತ್ತು ಅಸ್ಪೃಶ್ಯತೆ

೪. ಭಾರತೀಯ ಸಮಾಜ ಮತ್ತು ಮಹಿಳೆ

೫. ಧರ್ಮ ಮತ್ತು ದಲಿತರು

೬. ವಚನ ಚಳುವಳಿ ಮತ್ತು ಮತಾಂತರ

೭. ಚರಿತ್ರೆ ಮತ್ತು ಮತಾಂತರ

೮. ದಲಿತ ಸಮಾಜ ಮತ್ತು ಮತಾಂತರ

ಭಾರತೀಯ ಸಮಾಜದ ಸ್ವರೂಪವನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿದೆ. ಭಾರತೀಯ ಸಮುದಾಯಗಳ ವರ್ಗೀಕರಣ ಹಾಗೂ *ಈ* ತೆರನಾದ ವರ್ಗೀಕರಣದಿಂದಾಗಿ ಸಮುದಾಯದ ಶೋಷಣೆಯು ಪರಿಸರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅಂಬೇಡ್ಕರ್ ಅವರ ಚಿಂತನಗಳ ಮೂಲಕ ಭಾರತೀಯ ಸಮುದಾಯದ ಜಾತಿ ರಾಜಕಾರಣಗಳು ಹಾಗೂ ಆ ಮೂಲಕ ಇಂದಿನ ಭಾರತದಲ್ಲಿ ಮತಾಂತರದಂತಹ ಪ್ರಕ್ರಿಯೆಗೆ ಕಾರಣವನ್ನು ವಿಶ್ಲೇಷಿಸಲಾಗಿದೆ. ಭಾರತೀಯ ಪರಿಸರದ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮಹಿಳೆ, ಧರ್ಮ, ದಲಿತ ಚಿಂತನೆ ಹಾಗೂ ಮತಾಂತರವನ್ನು ಬಸವಯುಗ ಮತ್ತು ಡಾ.ಅಂಬೇಡ್ಕರ್ ಅವರ ಹೋರಾಟದ ಹಿನ್ನೆಲೆಯಲ್ಲಿ ವಿವರಿಸಿರುವುದು *ಈ* ಕೃತಿಯ ವಿಶೇಷ.

### ೩.೬.೫. ವಾಲ್ಮೀಕಿ ಸಮುದಾಯ

ಸಂ : ಮಂಜುನಾಥ ಬೇವಿನಕಟ್ಟಿ

ಪುಟ : xiv + ೨೭೬, ವರ್ಷ : ೨೦೦೯, ರೂ. ೧೨೦.೦೦

ಪರಿವಿಡಿ

೧. ಅಥಣಿ ಪರಿಸರದ ಚಾರಿತ್ರಿಕ ನೆಲೆಗಳು ಸ್ಥಳನಾಮಗಳು ಐತಿಹ್ಯಗಳು

೨. ಅಥಣಿ ಪರಿಸರದ ಜಾನಪದೀಯ ನೆಲೆಗಳು ಜನಪದ ಕಲೆಗಳು ಧಾರ್ಮಿಕ ನೆಲೆಗಳು

೩. ಅಥಣಿ ಪರಿಸರದ ಸಾಮಾಜಿಕ ಸ್ಥಿತಿಗತಿಗಳು; ಆರ್ಥಿಕ ಸ್ಥಿತಿಗತಿಗಳು; ಮಹಿಳಾ ಸ್ಥಿತಿಗತಿ

೪. ಅಥಣಿ ಪರಿಸರದ ಶೈಕ್ಷಣಿಕ ಸ್ಥಿತಿಗತಿ; ಕನ್ನಡ ಮತ್ತು ಮರಾಠಿ ಬಾಂಧವ್ಯ

೫. ಅಥಣಿ ಪರಿಸರದ ರಾಜಕೀಯ ಸ್ಥಿತಿಗತಿ

೬. ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಜನಪದ ಸಾಹಿತ್ಯ; ವಾರ್ಷಿಕಾವರ್ತನ, ಜೀವನಾವರ್ತನ ಆಚರಣೆಗಳು

ವಾಲ್ಮೀಕಿ ಸಮುದಾಯವನ್ನು ಕುರಿತಂತೆ ಹಾಗೂ ಬಾಗಲಕೋಟೆಯ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳನ್ನು ಕುರಿತಂತೆ ವಿವರವಾಗಿ ಇಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಅಥಣಿ ಪರಿಸರದಲ್ಲಿ ವಾಸಿಸುವ ಬೇಡ ಸಮುದಾಯಕ್ಕೆ ಸಂಬಂಧಿಸಿದ ವಿಧಿ ವಿಧಾನಗಳನ್ನು, ದೈವ ನಂಬಿಕೆಗಳು, ಜಾತ್ರೆ ಉತ್ಸವಗಳನ್ನು ಇಲ್ಲಿ ಪರಿಚಯಿಸಲಾಗಿದೆ. ವಾಲ್ಮೀಕಿ ಸಮುದಾಯಕ್ಕೆ ಸಮಾಜದ ಇತರ ಸಮುದಾಯಗಳೊಡನೆ ಇರುವ ಸಾಮರಸ್ಯ, ಬಾಂಧವ್ಯ ಮತ್ತು ಒಡನಾಟದ ಅಂಶಗಳ ಬಗ್ಗೆಯೂ *ಈ* ಕೃತಿಯಲ್ಲಿ ಮಹತ್ವದ ಮಾಹಿತಿಗಳಿವೆ.




### ೩.೬.೬. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ಸಂ : ಮಂಜುನಾಥ ಬೇವಿನಕಟ್ಟಿ

ಪುಟ : xiv + ೨೯೪, ವರ್ಷ : ೨೦೦೯, ರೂ. ೧೫೦.೦೦

ಪರಿವಿಡಿ

೧. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

೨. ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳು

೩. ಆಚರಣಾತ್ಮಕ ನೆಲೆಗಳು

೪. ಆಧುನಿಕ ಜಗತ್ತು ಹಾಗೂ ತಳಸಮುದಾಯಗಳು

೫. ಸಿಂಧೂರ ಲಕ್ಷ್ಮಣ ಹಾಗೂ ಸಂಘರ್ಷದ ಸಂಕಥನ

ಬೇಡ ಸಮುದಾಯದ ಅನನ್ಯತೆ, ಹೋರಾಟ ಹಾಗೂ ಪ್ರಸ್ತುತ ಸಂದರ್ಭದಲ್ಲಿ ತಳಸಮುದಾಯ ಗಳ ಸ್ಥಿತಿಗತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ೪೭ ಲೇಖನಗಳನ್ನು ಒಳಗೊಂಡಿರುವ ಪ್ರಸ್ತುತ ಗ್ರಂಥ ಹಲಗಲಿ ಬಂಡಾಯವನ್ನು ಕುರಿತಂತೆ ಹಾಗೂ ಬಾಗಲಕೋಟೆಯ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿ, ಆಚರಣೆ, ಸಂಸ್ಕೃತಿಗಳನ್ನು ಕುರಿತಂತೆ ವಿವರವಾಗಿ ತಿಳಿಸಿಕೊಟ್ಟಿದೆ. ಬೇಡ ಸಮುದಾಯದ ಪ್ರತೀಕವಾಗಿ ಸಿಂಧೂರ

ಲಕ್ಷ್ಮಣನನ್ನು ಕುರಿತ ಸಾಹಿತ್ಯ ಮೂಲ ಮತ್ತು ಮೌಖಿಕ ಪರಂಪರೆಯಿಂದ ಬಂದಿರುವ ಹಾಗೂ ಜಾನಪದ ಆಕರಗಳ ಮುಖಾಂತರ ಅವನ ವ್ಯಕ್ತಿತ್ವವನ್ನು ಕಟ್ಟಿಕೊಡುವ ನೆಲೆಯಲ್ಲಿ ಸಂಘಟಿಸಿದ್ದ ವಿಚಾರಸಂಕಿರಣ ಒಂದರಲ್ಲಿ ಮಂಡಿಸಿದ ಲೇಖನಗಳನ್ನು *ಈ* ಕೃತಿ ಒಳಗೊಂಡಿದೆ.



**೩೬೭. ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು**

ಲೇ: ಲಕ್ಷ್ಮಣ್ ತೆಲಗಾವಿ

ಪುಟ: xiv+೧೭೬, ವರ್ಷ: ೧೯೯೯, ರೂ: ೮೦.೦೦

ಪರಿವಿಡಿ

೧. ಹಿಂದುಳಿದವರು ಮತ್ತು ದಲಿತರು, ಅರ್ಥವ್ಯಾಖ್ಯೆ
೨. ಚಳವಳಿಗಳ ಹಿನ್ನೆಲೆ
೩. ಆಯೋಗಗಳ ರಚನೆ ಮತ್ತು ವರದಿಗಳ ಮಂಡನೆ
೪. ದಲಿತ ಚಳವಳಿಯ ವಿವಿಧ ನೆಲೆಗಳು
೫. ಪ್ರಚಲಿತ ಚಳವಳಿಗಳು

ಶತಮಾನಗಳಿಂದ ಭಾರತಾದ್ಯಂತ ನಡೆದಿರುವ ಕೆಳವರ್ಗದವರ, ಹಿಂದುಳಿದ ವರ್ಗದವರ ಪ್ರತಿಭಟನೆಗಳು ಕರ್ನಾಟಕದಲ್ಲಿಯೂ ಕಂಡುಬರುತ್ತವೆ. ೨೦ನೇ ಶತಮಾನದ ಆರಂಭದಿಂದ *ಈ* ಪ್ರತಿಭಟನೆಗಳು ತೀವ್ರಗೊಂಡಿವೆ. ಕರ್ನಾಟಕದಲ್ಲಿ ನಡೆದಿರುವ ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳನ್ನು ಕುರಿತು *ಈ* ಕೃತಿಯಲ್ಲಿ ವಿವೇಚಿಸಲಾಗಿದೆ.

# ೧೭

# ಜಾನಪದ ಕಲೆ-ಕಾವ್ಯ-ಕಥನ



**೩೬೮. ಅವ್ವಣ್ಣೆವ್ವ ಕಾವ್ಯ**

ಸಂ: ತಾರಿಹಳ್ಳಿ ಹನುಮಂತಪ್ಪ

ಪುಟ: X+೧೩೬, ವರ್ಷ: ೨೦೦೪, ರೂ: ೭೫.೦೦

ಪರಿವಿಡಿ

೧. ಅವ್ವಣೆವ್ವ ಕಾವ್ಯ
೨. ಮಂಗಳಾರತಿ ಹಾಡು.

ಇದೊಂದು ಜನಪದ ಖಂಡಕಾವ್ಯ. ಏಳು ಜನ ಗಂಡು ಮಕ್ಕಳನ್ನು ಹಡೆದರೂ, ಹೆಣ್ಣು ಮಗುವೊಂದನ್ನು ಹಡೆಯಲಿಲ್ಲವೆಂಬ ಕಾರಣಕ್ಕಾಗಿ ಬಂಜೆ ಪಟ್ಟ ಪಡೆದುಕೊಂಡ ಹೆಣ್ಣೊಬ್ಬಳ ದುಃಖ, ಆತಂಕಗಳು, ಕೊನೆಗೆ ಅವೆಲ್ಲ ಸುಖಾಂತ್ಯಗೊಳ್ಳುವುದೇ *ಈ* ಕಾವ್ಯದ ಒಳತಿರುಳು. ಎಂಟು ಮಂದಿ ಜನಪದ ಕಲಾವಿದೆಯರು ಹಾಡಿರುವ *ಈ* ಕಾವ್ಯವನ್ನು ಸ್ತ್ರೀವಾದಿ ನೆಲೆಯಲ್ಲಿ ಬಲು ಮಹತ್ತ್ವದ ಕೃತಿಯೆನಿಸುತ್ತದೆ.



**೩೬೯. ಕಾಳಿಂಗರಾಯನ ಕಾವ್ಯ**

ಸಂ: ಹೆಚ್.ಕೆ.ನಾಗೇಶ್

ಪುಟ: xiv+೧೩೮, ವರ್ಷ: ೨೦೦೦, ರೂ: ೮೦.೦೦

ಪರಿವಿಡಿ

೧. ಜೀವಂತ ಜೀವಾಳಗಳು ಜಿನುಗಿದಾಗ; ಶರಣೆಂಬೆ
೨. ಮದರಂಬಿಯ ಪುತ್ರಾಪೇಕ್ಷೆ
೩. ಹಡದಾಳ ಗಂಡು ಕೋಮಾರನ
೪. ದೋಷಿರಣ್ಣ ಭವಿಷ್ಯ ಹೇಳಣ್ಣ
೫. ಬಾಲನ ಲೀಲೆಗೆ ನಾರೆರೆಲ್ಲರು ನಕ್ಕಾರು

೬. ಕಾಳಿಂಗ ಹುಲಿ ಬ್ಯಾಟಿಗೆ ಹೊಂಟ್ಯಾನ

೭. ಚಿತ್ರಾದ ಹುಲಿಗಂಜಿ ಶಿರವೇನೆ ನೆಲಕ್ಕಿಟ್ಟು ಮಡಿದಾನ ಕಾಳಿಂಗ

೮. ರೆಂಬೇನೆ ಚನ್ನಮ್ಮ ಸತ್ತ ಕಾಳಿಂಗನ ಹೆಣಕ್ಕೆ ತಾಳಿ ಕಟ್ಯಾಳ

೯. ಶಿವರಾಯ ಚನ್ನಮ್ಮಳ ಭಕ್ತಿ ಮೆಚ್ಚಿ ಕಾಳಿಂಗನಿಗೆ ಜೀವದಾನ ಮಾಡಾನೊ

೧೦. ರಾಜ್ಯವಾಳಿಕೊಂಡು ದಂಪತಿಗಳಿಬ್ಬರು ಸುಖವಾಗಿರುವಾರೊ

ಉತ್ತರ ಕರ್ನಾಟಕಾದ್ಯಂತ ಜನಪದರ ಜೀವ ಕೇಂದ್ರವೆನಿಸಿರುವ *ಈ* ಕಾವ್ಯದಲ್ಲಿ ಸಾಂಸ್ಕೃತಿಕ ವೀರ ಕಾಳಿಂಗರಾಯನ ಬದುಕು ಸಾಹಸವನ್ನು ಕಾವ್ಯಾತ್ಮಕವಾಗಿ ಬಿಂಬಿಸಲಾಗಿದೆ. *ಈ* ಕಾವ್ಯವನ್ನು ಹಾಡಿದವರು ಚೌಡಮ್ಮ ಮತ್ತು ಸಂಗಡಿಗರು.



### ೩೭೦. ಗೋಣಿಬಸಪ್ಪನ ಕಾವ್ಯ

ಸಂ: ವೆಂಕಟೇಶ ಇಂದ್ವಾಡಿ

ಪುಟ: vi+೧೭೬, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಯೋಜನೆಯ ಮೊದಲ ಪುಟಗಳು

೨. ಪ್ರಸ್ತಾವನೆಯೊಳಗೆ......

೩. ಜನಪದ ಸಾಹಿತ್ಯ ಸಂಪಾದನೆಯ ತೊಡಕುಗಳು

೪. ಗೋಣಿಬಸಪ್ಪನ ಕಾವ್ಯ

ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯವು ಬಾಲಬಸವ ಸಂಪ್ರದಾಯದ ಬಹಳ ಮುಖ್ಯವಾದ ಕಥನವಾಗಿದೆ. ಕನ್ನಡ ಜನಪದ ಮಹಾಕಾವ್ಯಗಳ ಪರಂಪರೆಯಲ್ಲಿ *ಈ* ಕಾವ್ಯಕ್ಕೆ ವಿಶಿಷ್ಟ ಸ್ಥಾನವಿದೆ. ವಚನ ಮತ್ತು ಪದ್ಯಗಳ ಮಿಶ್ರಣ ರೂಪದಲ್ಲಿ ಅದ್ಭುತ ನಾಟಕೀಯತೆಯುಳ್ಳ *ಈ* ಕಾವ್ಯವು ಕನ್ನಡ ಜನಪದ ರಂಗಭೂಮಿಯ ದೃಷ್ಟಿಯಿಂದಲೂ ವಿಶೇಷವಾಗಿದೆ. ಗೋಣಿ ಬಸಪ್ಪನು ದೈವವಾದ ಸಂಕಥನವೇ ಸಂಘರ್ಷದ ಒಂದು ಗಾಥೆ ಯಾಗಿದೆ. ಕಾವ್ಯದ ಪಠ್ಯ, ಪ್ರದರ್ಶನ, ಸಾಮುದಾಯಿಕತೆ ಮತ್ತು ಸಾಮಾಜಿಕ ಸಂಬಂಧದ ನೆಲೆಗಳನ್ನು ಇಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಮುಖ್ಯವಾಗಿರುವ *ಈ* ಕಾವ್ಯವನ್ನು ಸಂಪಾದಿಸಿ ಮೌಖಿಕ ಪರಂಪರೆಯ ಪಠ್ಯೀಕರಣಕ್ಕೆ ಹೊಸ ಆಯಾಮಗಳನ್ನು ಜೋಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

### ೩೭೧. ಚಾರಿತ್ರಿಕ ಲಾವಣಿಗಳು

ಸಂ : ಹರಿಶ್ಚಂದ ದಿಗ್ಸಂಗಿಕರ್

ಪುಟ : viii + ೧೩೨, ವರ್ಷ : ೨೦೦೯, ರೂ. ೮೦.೦೦








ಪರಿವಿಡಿ

೧. ಕಲಬುರ್ಗಿ ಶರಣ ಬಸವೇಶ್ವರ

೨. ನಿಕ್ಕಿ ಜಾಬೀರ ನಬಿ ಹಬೀಬ; ಇಬ್ರಾಹಿಮ ಖಲಿಲುಲ್ಲಾ

೩. ಮಹಿಬೂಬ; ವ ಸುಬಾನಿ; ಮುರಲೀಧರ; ಜೋಗತಿ ಎಲ್ಲಮ್ಮ

೪. ತಿರುನೀಲಕಂಠ; ರೇವಣಸಿದ್ಧ

೫. ಸಿದ್ಧರಾಮ; ವೀರಬಾಹುಕ

೬. ಹೊನ್ನಮ್ಮ ಚನ್ನಮ್ಮ *ಈ*ರಣ್ಣ ಸಂಗಣ್ಣ

೭. ಡಾ. ಬಾಬಾ ಸಾಹೇಬ ಅಂಬೇಡ್ಕರ್

ಹಳ್ಳಿ ಹಳ್ಳಿಗಳಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಜಾತ್ಯತೀತವಾಗಿ ಕೆಲಸ ನಿರ್ವಹಿಸಿದ ಲಾವಣಿಕಾರರ ರಚನೆಗಳು *ಈ* ಪುಸ್ತಕದಲ್ಲಿವೆ. ನಾಡಿನ ಭಾವೈಕ್ಯವನ್ನು ಕಾಪಾಡುವಲ್ಲಿ ಲಾವಣಿ ಕವಿಗಳು ವಹಿಸಿದ ಪಾತ್ರ ಇಲ್ಲಿನ ರಚನೆಗಳಲ್ಲಿ ಗಮನಾರ್ಹ.




### ೩೭೨. ತುಳು ಪಾಡ್ದನ ಸಂಪುಟ

ಸಂ: ಅಮೃತ ಸೋಮೇಶ್ವರ

ಪುಟ: viii+೫೦೨, ವರ್ಷ: ೧೯೯೭, ರೂ: ೧೫೦.೦೦

ಪರಿವಿಡಿ

೧. ಪಾಡ್ದನಗಳು

೨. ಪಾಡ್ದನಗಳ ಕನ್ನಡ ರೂಪ

೩. ಟಿಪ್ಪಣಿಗಳು

೪. ಕೆಲವು ಶಬ್ದಾರ್ಥಗಳು

೫. ಪಾಡ್ದನ ಒದಗಿಸಿದವರ ಮಾಹಿತಿ

೬. ಪರಾಮರ್ಶನ ಸಾಹಿತ್ಯ

ತುಳುನಾಡಿನ ವಿಶಿಷ್ಟ ಜನಪದ ಪದ್ಯಪ್ರಕಾರ ಪಾಡ್ದನಗಳ ಸಂಪುಟವಿದು. ಇಲ್ಲಿ ೧೬ ಮುಖ್ಯ ಪಾಡ್ದನಗಳಿದ್ದು, ಒಂದೊಂದು ಪಾಡ್ದನದ ಒಂದೊಂದು ಪಠ್ಯವನ್ನು ಮುಖ್ಯವಾಗಿ ಗಮನಿಸಿ ಅದಕ್ಕೆ ಸಂಬಂಧಿಸಿದಂತೆ ಉಳಿದ ವಿಷಯಗಳನ್ನು ಪೂರಕವಾಗಿ ಟಿಪ್ಪಣಿ ರೂಪದಲ್ಲಿ ನೀಡಲಾಗಿದೆ. ಪಾಠಾಂತರ ವಿಚಾರಗಳನ್ನು ಮಿತವಾಗಿ ಕೊಡಲಾಗಿದೆ.

### ೩೭೩. ಪದವ ಕೇಳವ್ವ

ಸಂ: ಅಪ್ಪಗೆರೆ ತಿಮ್ಮರಾಜು

ಪುಟ: XVI+೨೦೨, ವರ್ಷ: ೨೦೦೪, ರೂ: ೬೦.೦೦

ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಜನಪದರ ಜನಪ್ರಿಯ ಗೀತೆಗಳ ಸಂಕಲನವಿದು. ಶ್ರಮಜೀವಿಗಳ ಹೃದಯದಿಂದ ಹೊರಹೊಮ್ಮಿರುವ ೧೬೫ ಜನಪದ ಗೀತೆಗಳ ಸಂಕಲನವಿದು.



**೩೭೪. ಮೈಲಾರಲಿಂಗನ ಕಾವ್ಯ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: x+೪೩೬, ವರ್ಷ: ೧೯೯೯, ರೂ: ೨೦೦.೦೦

ಪರಿವಿಡಿ

೧. ಮೈಲಾರಲಿಂಗನ ಮಹಿಮೆಗಳ ಸಂಧಿ

೨. ಗಂಗಿಮಾಳಮ್ಮನ ಸಂಧಿ

೩. ಕೊಮಾಲೆ ಸಂಧಿ

೪. ಮಡಿವಾಳರ ಸಂಧಿ

೫. ಕುರುಬರ ಸಂಧಿ

ಶ್ರೀ ಒಗ್ಗರು ಹನುಮಂತಪ್ಪ ಹಾಡಿರುವ ಕಾವ್ಯವನ್ನು ಸಂಪಾದಿಸಿ *ಈ* ಗ್ರಂಥದಲ್ಲಿ ಸಂಕಲಿಸಲಾಗಿದೆ. ಮೈಲಾರಲಿಂಗನಿಂದ ದುಷ್ಟಸಂಹಾರ, ಶಿಷ್ಟರಕ್ಷಣೆ, ಮದುವೆಗಳು, ಪವಾಡ, ಭಕ್ತರನ್ನು ಒಲಿಸಿಕೊಳ್ಳಲು ಮಾಡುವ ಪ್ರಯತ್ನಗಳು ಇವೆಲ್ಲವೂ ಕಾವ್ಯದ ಮೌಲ್ಯವನ್ನು ಹೆಚ್ಚಿಸಿವೆ.



**೩೭೫. ಲಾವಣಿ : ಸವಾಲ್ ಜವಾಬ್ ಪದಗಳು**

ಲೇ : ಹರಿಶ್ಚಂದ್ರ ದಿಗ್ಸಂಗಿಕರ್

ಪುಟ: vii+೧೪೦, ವರ್ಷ: ೨೦೦೫, ರೂ: ೬೦.೦೦

ಪರಿವಿಡಿ

೧. ಮುಖ್ಯ ಪದಗಳು

೨. ಸಖಿಗಳು ಮತ್ತು ಬ್ಯಾಲಿಗಳು

೩. ಸ್ತುತಿ ಪದಗಳಲ್ಲಿ ಸವಾಲ್ ಜವಾಬ್

೪. ನೀತಿ ಪದಗಳಲ್ಲಿ ಸವಾಲ್-ಜವಾಬ್

೫. ಶೃಂಗಾರ ಪದಗಳಲ್ಲಿ ಸವಾಲ್-ಜವಾಬ್

ಇಲ್ಲಿ ಲಾವಣಿ ಸಂಪ್ರದಾಯದ ಸವಾಲ್ ಜವಾಬ್ ಹಾಡುಗಳನ್ನು ದಾಖಲೀಕರಣದ ಮೂಲಕ ವಿವರವಾಗಿ ಸಂಗ್ರಹಿಸಿ ಕೊಡಲಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದ ಹರದೇಶಿ ನಾಗೇಶಿ ಸಂಪ್ರದಾಯಕ್ಕೆ ಸೇರಿದ ಲಾವಣಿಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.



**೩೭೬. ಶ್ರೀಕೃಷ್ಣ ಪಾರಿಜಾತ**

ಸಂ: ಕೃಷ್ಣ ಕಟ್ಟಿ

ಪುಟ: xxxvi+೨೨೨, ವರ್ಷ: ೧೯೯೭, ರೂ: ೨೦.೦೦

ಅಪರಾಳ ತಮ್ಮಣ್ಣ ಮತ್ತು ಶಿರಗುಪ್ಪಿ ಸದಾಶಿವಪ್ಪ ಇವರಿಬ್ಬರೂ ಸೇರಿ ಬರೆದಿರುವ *ಈ* ಗ್ರಂಥ ಒಂದು ಗೀತನಾಟಕ. *ಈ* ಗೀತನಾಟಕದ ಹಸ್ತಪ್ರತಿ, ೧೮೭೦ರಲ್ಲಿ ಶ್ರೀಮತಿ ಜೀಜಾಬಾಯಿ ವೆಂಕಟರಾವು ಜಹಗೀರದಾರ ಅವರ ಕೈಗೆ ಸಿಕ್ಕಾಗ ಆಕೆ ಹಸ್ತಪ್ರತಿ ಯಲ್ಲಿ ಸನ್ನಿವೇಶಗಳನ್ನು ವರ್ಣಿಸುವ ೧೦೫ ಚಿತ್ರಗಳನ್ನು ಚಿತ್ರಿಸಿದರು. *ಈ* ಅದ್ಭುತ ಚಿತ್ರಗಳೇ *ಈ* ಗ್ರಂಥದ ವೈಶಿಷ್ಟ್ಯ.

**೩೭೭. ಸಾವಿರದ ಸಿರಿಬೆಳಗು**

ಸಂ : ಕೃಷ್ಣಮೂರ್ತಿ ಹನೂರು

ಪುಟ: viii+೪೮೦, ವರ್ಷ: ೨೦೦೫, ರೂ: ೨೦೦.೦೦

ಪರಿವಿಡಿ

೧. ಸೋಬಾನೆ ಪದಗಳು

೨. ಪ್ರಕೃತಿ ಮತ್ತು ಬುಡಕಟ್ಟು ಸಂಬಂಧಿ ಪದಗಳು

೩. ಸತಿಗೀತೆಯ ಮಾದರಿ ಪದಗಳು

೪. ಭಕ್ತಿಗೀತೆಗಳು

೫. ಇತರ ಗೀತೆಗಳು

ಕರ್ನಾಟಕದ ಜಾನಪದ ಕಥನಗಾಯಕ ಪರಂಪರೆಯಲ್ಲಿನ ಚಿತ್ರದುರ್ಗದ ಗೊಲ್ಲರಹಟ್ಟಿಯ ಸಿರಿಯಜ್ಜಿಯು ಹಾಡಿರುವ ನೂರಾರು ತ್ರಿಪದಿಗಳು, ಸೋಬಾನೆ ಪದಗಳು, ಕಥನ ಗೀತೆಗಳು *ಈ* ಕೃತಿಯಲ್ಲಿ ಅಡಕಗೊಂಡಿವೆ. ಕಾಡುಗೊಲ್ಲರ ಸಂಸ್ಕೃತಿಯ ಭಿತ್ತಿಯಿಂದಲೇ ಪುರಾಣದ ಕಥನಗಳನ್ನು ಕಟ್ಟುವ ಕಲೆಗಾರಿಕೆಯ ಸೊಗಸು *ಈ* ಕೃತಿಯಲ್ಲಿ ವ್ಯಕ್ತಗೊಂಡಿದೆ.



**೩೭೮. ಸ್ಯಾಸಿ ಚಿನ್ನಮ್ಮನ ಕಾವ್ಯ**

ಲೇ: ಸ..ಚಿ.ರಮೇಶ

ಪುಟ: xii+೧೭೪, ವರ್ಷ: ೧೯೯೯, ರೂ: ೯೦.೦೦

*ಈ* ಜನಪದ ಮಹಾಕಾವ್ಯವನ್ನು ಹಾಡಿದವರು ದರೋಜಿ *ಈ*ರಮ್ಮ. ಪ್ರಸ್ತುತ ಕಾವ್ಯದಲ್ಲಿ ವೈಷ್ಣವಪಂಥದ ಚಿನ್ನಮ್ಮ ಶೈವಪಂಥದ ಮನೆಗೆ ಸೊಸೆಯಾಗುವುದರ ಮೂಲಕ ಎರಡೂ ಪಂಥಗಳ ನಡುವೆ ನಡೆಯುವ ಒಳಜಗಳ, ಹುನ್ನಾರ, ವೈರಸಾಧನೆ, ಸಾಂಸ್ಕೃತಿಕ

ಬಂಡಾಯ ಮತಾಂತರಕ್ಕಾಗಿ ಪರಸ್ಪರ ಬಲಾತ್ಕಾರ ಗಳೆಲ್ಲವೂ *ಈ* ಕಾವ್ಯದ ಹೂರಣವಾಗಿದ್ದು ಎರಡೂ ಸಂಸ್ಕೃತಿಗಳ ನಡುವಿನ ಮೌಲ್ಯಗಳ ತಿಕ್ಕಾಟ ಇಲ್ಲಿ ಕಾವ್ಯವಾಗಿ ಹರಿದಿದೆ.



**೩೭೯. ಸಿರಿಪಾಡ್ದನ**

ಲೇ: ಎ.ವಿ.ನಾವಡ

ಪುಟ: xv+೩೩೫, ವರ್ಷ: ೧೯೯೯, ರೂ: ೧೫೦.೦೦

ತುಳುನಾಡಿನ ಹೆಸರಾಂತ ಪಾಡ್ದನ ಗಾಯಕಿ ರಾಮಕ್ಕ ಮುಗ್ಗೇರ್ತಿ ತುಳುವಿನಲ್ಲಿ ಹಾಡಿದ ಪಾಡ್ದನವನ್ನು ಇಲ್ಲಿ ಸಂಪಾದಿಸಿ ಸಂಕಲಿಸಲಾಗಿದೆ. ಕರ್ನಾಟಕದ ಶ್ರೀಮಂತ ಮೌಖಿಕ ಪರಂಪರೆಯನ್ನು ಹೊಂದಿರುವ ತುಳುಭಾಷೆಯ *ಈ* ಸಿರಿ ಪಾಡ್ದನದಲ್ಲಿ ಸಾಂಸ್ಕೃತಿಕ ವೀರೆ ಸಿರಿಯ ಬದುಕು ಸಾಧನೆಯನ್ನು ಕಟ್ಟಿಕೊಡಲಾಗಿದೆ. ಪಾಡ್ದನದ ಸಾರಾಂಶವನ್ನು ಕನ್ನಡದಲ್ಲಿ ನೀಡಲಾಗಿದೆ.



**೩೮೦. ಹಲಸಂಗಿ ಹಾಡು**

ಸಂ: ಹಲಸಂಗಿ ಗೆಳೆಯರು

ಪುಟ: xxii+೨೮೨, ವರ್ಷ: ೨೦೦೦, ರೂ: ೧೨೫.೦೦

ನವೋದಯ ಸಾಹಿತ್ಯದ ಪ್ರಾರಂಭದ ಘಟ್ಟದಲ್ಲಿಯೇ ಗ್ರಾಮೀಣ ಪರಿಸರದಲ್ಲಿದ್ದ ಹಲಸಂಗಿ ಗೆಳೆಯರು ಸಂಪಾದಿಸಿದ್ದ ಜನಪದ ಸಾಹಿತ್ಯವನ್ನು ಇಲ್ಲಿ ಸಂಕಲಿಸಲಾಗಿದೆ. *ಈ* ಗ್ರಂಥದಲ್ಲಿ ಹಲಸಂಗಿ ಗೆಳೆಯರು ಸಂಪಾದಿಸಿದ್ದ, ಗರತಿಯ ಹಾಡು, ಜೀವನಸಂಗೀತ ಹಾಗೂ ಮಲ್ಲಿಗೆದಂಡೆ ಎಂಬ ಮೂರು ಸಂಗ್ರಹಗಳು ಸಂಯುಕ್ತವಾಗಿ ಅಡಕಗೊಂಡಿವೆ.



**೩೮೧. ಹಳೆಯ ಲಾವಣಿಗಳು : ಸಂಪುಟ ೧**

ಸಂ: ವೀರೇಶ ಬಡಿಗೇರ

ಪುಟ: xxiv+೨೭೯, ವರ್ಷ: ೨೦೦೦, ರೂ: ೧೦೦.೦೦

ಪರಿವಿಡಿ

೧. ಚರಿತ್ರೆ - ಪುರಾಣ

೨. ಕಾಮ - ಪ್ರೇಮ

೩. ನೀತಿ - ತತ್ವ

೪. ಕಲಗಿ - ತುರಾ

ಉತ್ತರ ಕರ್ನಾಟಕದ ವಿಶಿಷ್ಟ ಜನಪದ ಪದ್ಯಪ್ರಕಾರವಾದ ಲಾವಣಿಗಳ ಸಂಗ್ರಹ *ಈ* ಸಂಪುಟದಲ್ಲಿದೆ. *ಈ* ಲಾವಣಿಗಳೆಲ್ಲ ಮುಖ್ಯವಾಗಿ ನಾಗೇಶಿ ಸಂಪ್ರದಾಯಕ್ಕೆ ಸೇರಿದವು. *ಈ* ಮೌಖಿಕ ಸಂಪ್ರದಾಯದ ಜನಪದ ಪ್ರಕಾರದಿಂದಾಗಿ ೧೮-೧೯ನೇ ಶತಮಾನದ ಸಾಂಸ್ಕೃತಿಕ ಬದುಕನ್ನು ಅರ್ಥೈಸಲು ಇವು ಸಹಾಯಕವಾಗಿವೆ.

**೩೮೨. ಹೈದರಾಬಾದ ರಜಾಕಾರ ಲಾವಣಿ**

ಲೇ: ನಲವಡಿ ಶ್ರೀಕಂಠಶಾಸ್ತ್ರಿ

ಪುಟ: iv+೨೭, ವರ್ಷ: ೧೯೯೮, ರೂ: ೩.೦೦

ಹೈದರಾಬಾದ್ ರಜಾಕಾರರ ದಾಳಿಯನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿದ ಲೇಖಕರು, ಅಕ್ಷರದಲ್ಲಿ ಆ ಇತಿಹಾಸವನ್ನು ಸಾಹಿತ್ಯ ಕೃತಿಯ ರೂಪದಲ್ಲಿ ದಾಖಲಿಸಿದ್ದಾರೆ. ಹೈದರಾಬಾದ್ ಕರ್ನಾಟಕದ ಸ್ವಾತಂತ್ರ್ಯ ಸುವರ್ಣ ಸಂದರ್ಭದಲ್ಲಿ *ಈ* ಅಪೂರ್ವ ಕೃತಿ ಪ್ರಕಟಗೊಂಡಿರುವುದು ಒಂದು ವಿಶೇಷ.

## ೧೮

## ಜ್ಞಾನಶಾಸ್ತ್ರ

**೩೮೩. ಜ್ಞಾನಶಾಸ್ತ್ರ**

ಲೇ: ಸುಚೇತ ನವರತ್ನ

ಪುಟ: iv+೪೦, ವರ್ಷ: ೨೦೦೬, ರೂ: ೧೦.೦೦

*ಈ* ಕಿರುಕೃತಿ ಜ್ಞಾನದ ಬಗೆಗಿನ ವಿಸ್ತೃತ ಚರ್ಚೆಯನ್ನು ಒಳಗೊಂಡಿದೆ. ಜ್ಞಾನಶಾಸ್ತ್ರದ ಬೇರೆ ಬೇರೆ ಅಂಶಗಳು ಯಾವ ರೀತಿಯಲ್ಲಿ ಜ್ಞಾನದ ವ್ಯುತ್ಪತ್ತಿಗೆ ಕಾರಣಗಳಾಗುತ್ತವೆ ಎಂಬುದನ್ನು *ಈ* ಕೃತಿಯಲ್ಲಿ ನಿರೂಪಿಸಲಾಗಿದೆ.

# ೧೯

## ಧರ್ಮ-ಧಾರ್ಮಿಕ ನಂಬಿಕೆಗಳು

### ೩೮೪. ಆಚಾರ್ಯ ಸಮಂತಭದ್ರ

ಲೇ: ಕೆ. ಶಾರದ

ಪುಟ: iv+೩೨, ವರ್ಷ: ೨೦೦೭, ರೂ: ೧೦.೦೦

ತೀರ್ಥಂಕರ ಪರಂಪರೆಯ ನಂತರ ಜೈನಧರ್ಮದ ಚುಕ್ಕಾಣಿ ಹಿಡಿದ ಕರ್ನಾಟಕ ಆಚಾರ್ಯ ಪರಂಪರೆ ಒಂದು ಹೊಸ ಮನ್ವಂತರವನ್ನೇ ಸೃಷ್ಟಿಸಿತು. ಇಂತಹ ಆಚಾರ್ಯ ಪರಂಪರೆಯಲ್ಲಿ ಬಂದವರು ಸ್ವಾಮಿ ಸಮಂತಭದ್ರರು. ಜೈನಧರ್ಮದ ಪ್ರಚಾರ ಪ್ರಸಾರದಲ್ಲಿ ಹೊಸ ಆಯಾಮಗಳನ್ನು ತಂದ ಸಮಂತಭದ್ರರು, ತಾತ್ವಿಕ, ತಾರ್ಕಿಕ, ಜೈನ ನ್ಯಾಯಶಾಸ್ತ್ರಕ್ಕೆ ಕೊಟ್ಟ ಕೊಡುಗೆ ಹಾಗೂ ವೈದಿಕ ಸಂಸ್ಕೃತಿಯ ದಾಳಿಗಳಿಗೆ ಪ್ರತಿಕ್ರಿಯಿಸುವಲ್ಲಿ ಅವರು ತೋರಿದ ನಿಲುವು ಮತ್ತು ಅವರ ಜೀವನದ ವೈಶಿಷ್ಟ್ಯ ವೈಚಿತ್ರ್ಯ ಸಾಹಿತ್ಯಿಕ ಮಾದರಿಗಳನ್ನು *ಈ* ಕಿರುಹೊತ್ತಿಗೆಯಲ್ಲಿ ಪರಿಣಾಮಕಾರಿಯಾಗಿ ವಿಶ್ಲೇಷಿಸಲಾಗಿದೆ.



### ೩೮೫. ಕರ್ನಾಟಕ ನಾಥಪಂಥ

ಲೇ: ರಹಮತ್ ತರೀಕೆರೆ

ಪುಟ: xii+೩೪೮+xii, ವರ್ಷ: ೨೦೦೬, ರೂ: ೧೨೦

ಪರಿವಿಡಿ

೧. ಕರ್ನಾಟಕದ ಕನ್ನಡಿನೋಟ
೨. ನಾಥಪಂಥ: ದರ್ಶನ ಮತ್ತು ಚರಿತ್ರೆ
೩. ವಜ್ರಯಾನ ಹಾಗೂ ನಾಥಪಂಥ
೪. ಕಾಪಾಲಿಕರು ಹಾಗೂ ಭೈರವಾರಾಧನೆ
೫. ಶಾಕ್ತರು ಹಾಗೂ ನಾಥರು; ಬಹುಪಂಥೀಯ ಅನುಸಂಧಾನ
೬. ನಾಥರ ಆಚರಣಾ ಲೋಕ; ಕರ್ನಾಟಕದ ನಾಥಮಠಗಳು
೭. ರೂಪಾಂತರವಾದ ನಾಥಮಠಗಳು; ನಾಥರೂ ಅರೂಢ ಸಿದ್ಧರೂ; ಪ್ರಭುತ್ವಗಳ ಕೊಡುಕೊಳೆ
೮. ನಾಥಪಂಥಿ ಸಮುದಾಯಗಳು; ನಾಥಪಂಥದ ಸ್ಥಳೀಕರಣ
೯. ಕನ್ನಡ ಸಾಹಿತ್ಯದಲ್ಲಿ ನಾಥರು; ಜನಪದರ ಅಭಿವ್ಯಕ್ತಿಗಳು; ನಾಥಪಂಥದ ಕಲಾರೂಪಗಳು
೧೦. ಧಾರ್ಮಿಕ ಪಲ್ಲಟಗಳ ಜತೆ; ದುಡಿಮೆಯ ಜಗತ್ತಿನ ಭಾಗವಾಗಿ

*ಈ* ಗ್ರಂಥವು ಕರ್ನಾಟಕ ಸಂಸ್ಕೃತಿಯ ಅಧ್ಯಯನದ ಬಹುಕಾಲದ ಬೇಡಿಕೆಯನ್ನು ಕೊನೆಗೂ ಪೂರ್ಣಗೊಳಿಸಿದ ಒಂದು ಮಹತ್ವದ ಕೃತಿ. ಚಿಂದಿಯಾಗಿ ಹೋಗಿದ್ದ ನಾಥಪಂಥದ ಅಧ್ಯಯನದ ಒಂದೊಂದು ತುಣುಕನ್ನು ಕೂಡಾ ಪರಿಶೀಲಿಸಿ ಜೋಡಿಸಿ ಕರ್ನಾಟಕ ಸಂಸ್ಕೃತಿಯ ಇನ್ನೊಂದು ಮಗ್ಗುಲನ್ನು ಇಲ್ಲಿ ಅನಾವರಣ ಮಾಡಲಾಗಿದೆ. ನಿಷ್ಠೆ ಮತ್ತು ಹಠದಿಂದ ಗಮನಿಸಿ ತುಂಬಾ ವಿಶಿಷ್ಟವಾದ ಒಳನೋಟದ ಸಂಗತಿಗಳನ್ನು ಇಲ್ಲಿ ದಾಖಲಿಸಲಾಗಿದೆ.



### ೩೮೬. ಕರ್ನಾಟಕದ ಸೂಫಿಗಳು

ಲೇ: ರಹಮತ್ ತರೀಕೆರೆ

ಪುಟ: xxxii+೨೮೮, ವರ್ಷ: ೧೯೯೮, ರೂ: ೧೦೦.೦೦

ಪರಿವಿಡಿ

೧. ಚರಿತ್ರೆಯ ಜತೆ ಗುದ್ದಾಟ; ಸೂಫಿ ಮತ್ತು ಸೂಫಿವಾದ
೨. ಸೂಫಿಗಳ ಆಗಮನ; ಸೂಫಿಗಳು ಮತ್ತು ಭಾರತ
೩. ಕರ್ನಾಟಕ ಸೂಫಿಗಳು ಮತ್ತು ಸ್ಥಳೀಯ ಪಂಥಗಳು
೪. ಕರ್ನಾಟಕದ ಸೂಫಿಕರಣ ಪರಂಪರೆಗಳು; ಕರ್ನಾಟಕ ಸೂಫಿಗಳು ಮತ್ತು ಮೂಲಭೂತವಾದ
೫. ಕರ್ನಾಟಕದ ಸೂಫಿಗಳು ಮತ್ತು ರಾಜ್ಯಪ್ರಭುತ್ವ
೬. ಕರ್ನಾಟಕದ ಸೂಫಿಗಳು ಮತ್ತು ಜನಪ್ರಿಯತೆ
೭. ಕರ್ನಾಟಕದ ಸೂಫಿಗಳು ಮತ್ತು ಜನಪದೀಕರಣ
೮. ಕರ್ನಾಟಕದ ಸೂಫಿಗಳು ಮತ್ತು ಭಾಷೆ
೯. ಕನ್ನಡ ಸಾಹಿತ್ಯ ಮತ್ತು ಸೂಫಿಗಳು
೧೦. ಕರ್ನಾಟಕದ ಸೂಫಿಗಳು ಮತ್ತು ಸಂಗೀತ

ಕರ್ನಾಟಕದ ಸಂಸ್ಕೃತಿಯಲ್ಲಿ ಅಂದರೆ ಕರ್ನಾಟಕದ ಚರಿತ್ರೆ, ಧರ್ಮ, ತತ್ತ್ವಶಾಸ್ತ್ರ, ಸಾಹಿತ್ಯಗಳಲ್ಲಿ, ಸೂಫಿಗಳ ಕೊಡುಗೆಯನ್ನು *ಈ* ಕೃತಿ ಹುಡುಕಾಟ ಮಾಡುತ್ತದೆ. *ಈ* ಕೊಡುಗೆಯನ್ನು ಲಿಖಿತ ದಾಖಲೆಗಳಿಗಿಂತ ಹೆಚ್ಚಾಗಿ, ಜನಸಮುದಾಯಗಳ ಬದುಕಿನ ನಂಬಿಕೆ ಆಚರಣೆಗಳಲ್ಲಿ ಇದು ಶೋಧಿಸುತ್ತದೆ. ಪ್ರೇಮತತ್ತ್ವದ ಅನುಭಾವಿಗಳಾದ ಸೂಫಿಗಳು ಕರ್ನಾಟಕ ಸಂಸ್ಕೃತಿಯಲ್ಲಿ ಬೆರೆತು ಹೋಗಿರುವ ಬಗೆಯನ್ನು *ಈ* ಕೃತಿಯಲ್ಲಿ ದಾಖಲಿಸಲಾಗಿದೆ.

**೩೮೭. ಕರ್ನಾಟಕದಲ್ಲಿ ಜೈನಧರ್ಮ**

ಲೇ: ಕೆ. ಶಾರದಾ

ಪುಟ: iv+೩೨, ವರ್ಷ: ೨೦೦೬, ರೂ: ೧೦.೦೦

ಕರ್ನಾಟಕದ ರಾಜಕೀಯ, ಧಾರ್ಮಿಕ, ಆರ್ಥಿಕ ಸಾಮಾಜಿಕ ವಲಯಗಳನ್ನು ರೂಪಿಸುವಲ್ಲಿ ಜೈನಧರ್ಮದ ಕೊಡುಗೆಯೇನು ಎಂಬುದನ್ನು *ಈ* ಕಿರುಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಕರ್ನಾಟಕದಲ್ಲಿ ಜೈನಧರ್ಮ ಜನಧರ್ಮವಾಗಿ ಬೆಳಗಿದ ಬಗೆಯನ್ನು *ಈ* ಕಿರುಕೃತಿ ತೆರೆದಿಡುತ್ತದೆ.

**೩೮೮. ಕಾಯಕ ದಾಸೋಹ**

ಲೇ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಪುಟ: ೨೮, ವರ್ಷ: ೧೯೯೪, ರೂ: ೧.೦೦

ಅಂದು ಕಲುಷಿತಗೊಂಡಿದ್ದ ವ್ಯಷ್ಟಿ ಸಮಷ್ಟಿಗೆ ಕಾಯಕ ಮಹತ್ವ ಕುರಿತು ವಚನಕಾರರು ನಡೆದು ದಾರಿ ತೋರಿದರು. ಪಂಚಾಚಾರಗಳಲ್ಲಿ ಒಂದಾದ ಕಾಯಕ ದಾಸೋಹದ ಅಗತ್ಯ ಇಂದಿನ ವಿಷಮ ಪರಿಸ್ಥಿತಿಗೆ ಎಷ್ಟು ಅನಿವಾರ್ಯವೆಂಬುದನ್ನು *ಈ* ಪುಸ್ತಕ ಅತ್ಯಂತ ಸರಳವಾಗಿ ನಿರೂಪಿಸುತ್ತದೆ.

**೩೮೯. ಜಂಗಮ**

ಲೇ: ಹಿರೇಮಲ್ಲೂರು *ಈ*ಶ್ವರನ್

ಪುಟ: ii+೨೯, ವರ್ಷ: ೧೯೯೬, ರೂ: ೨.೦೦

ವೀರಶೈವ ಮತದ ಹುಟ್ಟು, ಬೆಳವಣಿಗೆ, ಸಿದ್ಧಾಂತ, ಸಾಹಿತ್ಯಗಳ ಬಗ್ಗೆ *ಈ* ಕೃತಿ ಸೂಕ್ಷ್ಮವಾಗಿ ಸಂಕ್ಷಿಪ್ತ ಮಾಹಿತಿಗಳನ್ನು ನೀಡುತ್ತದೆ.

**೩೯೦. ಜೈನ ಬಸದಿಗಳು**

ಲೇ: ಎಸ್.ಡಿ.ಶೆಟ್ಟಿ

ಪುಟ: ii+೪೨, ವರ್ಷ: ೧೯೯೯, ರೂ: ೧೦.೦೦

ಜೈನಧರ್ಮದ ಪ್ರಾಚೀನತೆ ಅದರ ತತ್ತ್ವ ಹಾಗೂ ಜೈನ ಬಸದಿಗಳ ಬಗ್ಗೆ ಸಮಗ್ರ ಮಾಹಿತಿ ಇಲ್ಲಿದೆ.

**೩೯೧. ಧರ್ಮ ಮತ್ತು ಮುಕ್ತ ವಿಚಾರ**

ಲೇ: ಯಳನಾಡು ಅಂಜನಪ್ಪ

ಪುಟ: X+೧೯೪, ವರ್ಷ: ೨೦೦೮, ರೂ: ೮೦.೦೦

ಪರಿವಿಡಿ

೧. ಹಂಬಲ

೨. ಧರ್ಮ

೩. ಧರ್ಮಾತೀತರು

೪. ಉಗಮದಲ್ಲಿ

೫. ದೇವರು, ದೇವತೆಗಳ ಹುಟ್ಟು

೬. ಹಿಂದೂ ಧರ್ಮ

೭. ಬಿಡುಗಡೆ ಪ್ರಯತ್ನಗಳು

೮. ಬಿಡುಗಡೆ-ಜೈನಧರ್ಮ, ಬೌದ್ಧಧರ್ಮ, ವೀರಶೈವ ಧರ್ಮ, ಸಿಖ್ ಧರ್ಮ

೯. ಅನ್ಯಮತ ಧರ್ಮಗಳು: ಕ್ರೈಸ್ತ ಮತಧರ್ಮ, ಇಸ್ಲಾಂ ಧರ್ಮ

ಆಧಾರ ರಹಿತವಾದ ಕೇವಲ ಊಹೆಗಳ ಆಧಾರದ ಮೇಲೆ ಕಟ್ಟಿಕೊಂಡ ಅವೈಚಾರಿಕವಾದ ನಂಬಿಕೆಯನ್ನು ಇಲ್ಲಿ ವೈಚಾರಿಕ ನೆಲೆಯಲ್ಲಿ ನಿರಾಕರಿಸಲಾಗಿದೆ. ಮುಕ್ತ ತರ್ಕವು ವಿವೇಕ, ತರ್ಕ, ವಿಶ್ಲೇಷಣೆ ಹಾಗೂ ಮೌಲ್ಯೀಕರಣದ ತಳಹದಿಯ ಮೇಲೆ ರೂಪಿತವಾಗಿದೆ. ಧರ್ಮದ ಪರಿಮಿತಿಯನ್ನು ಅವೈಜ್ಞಾನಿಕವಾದ ಧರ್ಮದ ನೆಲೆಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವ ಮೂಲಕ ಮನುಷ್ಯ ತನ್ನ ವೈಚಾರಿಕ ಪ್ರಜ್ಞೆಯಿಂದ ವಂಚಿತನಾಗುತ್ತಾನೆ. ಪ್ರಸ್ತುತ ಗ್ರಂಥದಲ್ಲಿ ಹಲವು ಮತಗಳ ಹಲವು ನಂಬಿಕೆಗಳ ನಡುವೆ ಮುಕ್ತ ವೈಚಾರಿಕತೆಯನ್ನು ಬಲವಾಗಿ ಪ್ರತಿಪಾದಿಸಲಾಗಿದೆ.

**೩೯೨. ಪುರಾಣ**

ಲೇ: ಓ.ಎಲ್.ನಾಗಭೂಷಣ ಸ್ವಾಮಿ

ಪುಟ: ೩೨, ವರ್ಷ: ೧೯೯೩, ರೂ: ೧.೦೦

*ಈ* ಕಿರುಹೊತ್ತಿಗೆಯು ಪುರಾಣವೆಂಬ ಪರಿಕಲ್ಪನೆಯ ಹಲವು ಮಗ್ಗುಲಗಳನ್ನು ಪರಿಚಯ ಮಾಡಿಕೊಡುತ್ತದೆ.




**೩೯೩. ಬುದ್ಧ ಸಾಸನ**

ಲೇ: ವೈ.ಬಿ. ನಂದನ

ಪುಟ: XVIII+೫೨೦, ವರ್ಷ: ೨೦೦೩, ರೂ: ೨೦೦.೦೦

ಪರಿವಿಡಿ

೧. ಬುದ್ಧಧರ್ಮದ ಮೂಲ ಸಿದ್ಧಾಂತ ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ನಾಮರೂಪ, ಪಟಿಚ್ಚ ಸಮುಪ್ಪಾದ, ಸತಿಪಟ್ಠಾಣಾಧ್ಯಾನ, ಪ್ರಕೃತಿ ನಿಯಮ

೨. ಜಗತ್‌ಸೃಷ್ಟಿ, ಬ್ರಹ್ಮ ಉದ್ಭವ, ಮಾನವ ವಿಕಾಸ

೩. ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತ, ಸ್ವರ್ಗ ನರಕಗಳ ಅರ್ಥ, ದೇವಾಸುರರ ಅಸ್ತಿತ್ವ, ಸಮಣ ಬ್ರಾಹ್ಮಣರ ಮತ್ತು ಮಾರವ ವಿಶಿಷ್ಟಗುಣ

೪. ನಾರಿಯರ ವರ್ತನೆ

೫. ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ಹಾಗೂ ವ್ಯಕ್ತಿಗತ ವಿಷಯಗಳು

೬. ಮೋಕ್ಷ ಅಥವ ನಿಬ್ಬಾಣ

ಪಾಲಿ ವಾಙ್ಮಯದ ಮೇಲೆ ಆಧಾರಗೊಂಡಿರುವ *ಈ* ಕೃತಿಯನ್ನು ತ್ರಿಪಿಟಿಕ ಧರ್ಮಶಾಸ್ತ್ರಗಳಿಂದ ಸಂಗ್ರಹಿಸಲಾಗಿದೆ. ಬುದ್ಧನು ಭೋದಿಯನ್ನು ಪಡೆದ ನಂತರ ಮಹಾಪರಿನಿಬ್ಬಾಣದವರೆಗೆ ಭೋದಿಸಿದ ಧರ್ಮಸಾರವು ಇದಾಗಿದ್ದು ಅದರಲ್ಲೂ ಶೀಲ, ಸಮಾಧಿ, ಪಞ್ಞಾ, ವಿಮುಕ್ತಿಗಳ ಬಗ್ಗೆ ವಿವರವಾದ ಜ್ಞಾನವನ್ನು ನೀಡುವ ಅತ್ಯಂತ ಮಹತ್ತ್ವದ ಗ್ರಂಥವಿದು. *ಈ* ಗ್ರಂಥವು 'ಜ್ಞಾನೋದಯ' ದಿಂದ ಪ್ರಾರಂಭವಾಗಿ 'ಸಂಸ್ಕಾರಗಳು ಅನಿತ್ಯ ಮೋಕ್ಷವು ಉಚಿತ' ಎಂಬ ಉಪದೇಶದವರೆಗೆ ಸಮಯೋಚಿತವಾಗಿ ರಚಿಸಲ್ಪಟ್ಟಿದೆ.




### ೩೯೪. ಭಗವಾನ್ ಬುದ್ಧ

ಲೇ: ವೈ.ಬಿ.ನಂದನ

ಪುಟ: vi+೨೦೩, ವರ್ಷ: ೨೦೦೧, ರೂ: ೮೦.೦೦

ಬೌದ್ಧಧರ್ಮದ ಪ್ರತಿಪಾದಕ, ಮೂಲಪುರುಷ ಬುದ್ಧನ ಚರಿತೆಯೇ *ಈ* ಕೃತಿಸಾರ. ಇತಿಹಾಸ, ಶಾಸ್ತ್ರ,ಪುರಾಣ ಹಾಗು ತ್ರಿಪಿಟಿಕವನ್ನು ಮೂಲವಾಗಿರಿಸಿಕೊಂಡು *ಈ* ಕೃತಿಯನ್ನು ರಚಿಸಲಾಗಿದೆ.




### ೩೯೫. ಮಹಾಯಾತ್ರೆ

ಲೇ: ಆರ್.ಸಿ.ಹಿರೇಮಠ

ಪುಟ: xiv+೫೮೫, ವರ್ಷ: ೧೯೯೭, ರೂ: ೨೫೦.೦೦

ಪರಿವಿಡಿ

೧. ಭಾರತೀಯ ದರ್ಶನಗಳು

೨. ಶಿವಾಗಮಗಳು-ಶೈವಧರ್ಮ

೩. ಸಿದ್ಧಾಂತ-ಶಿಖಾಮಣಿ

೪. ವಚನವಾಙ್ಮಯ

೫. ಮಹಾಯಾತ್ರೆ ಪ್ರವೃತ್ತಿ

೬. ಮಹಾಯಾತ್ರೆ : ಅಂಗದಿಂದ ಲಿಂಗದತ್ತ:ನಿವೃತ್ತಿ

ಷಟ್ಸ್ಥಲ ಸಿದ್ಧಾಂತವು ನೂರೊಂದು ನೆಲೆಗಳನ್ನು ಕಾಣುತ್ತ ಸರ್ವಶೂನ್ಯ ನಿರಾಲಂಬದ ನೆಲೆಯನ್ನು ಮುಟ್ಟುತ್ತದೆ, ಬದುಕಿಗೆ ಬೆಲೆಯನ್ನು ಕಟ್ಟುತ್ತದೆ. *ಈ* ಸಿದ್ಧಾಂತ-ಷಟ್ಸ್ಥಲ ದರ್ಶನದ ಉದ್ಗಮ ವಿಕಾಸ ಚರಿತ್ರೆ *ಈ* ಗ್ರಂಥ.

### ೩೯೬. ಮಾತೃಪೂಜೆ

ಲೇ: ಚಿ.ನಾ.ಮಂಗಳ

ಪುಟ: iv+೩೧, ವರ್ಷ: ೧೯೯೪, ರೂ: ೨.೦೦

ಮಾತೃಪೂಜೆ ನಾವು ನಮ್ಮ ತಾಯಿಗೆ ಸಲ್ಲಿಸುವ ನಮನ. ಅನಾದಿಕಾಲದಿಂದಲೂ ಮಾನವ ತನ್ನ ಅಸ್ತಿತ್ವಕ್ಕೆ ಕಾರಣವಾದ ಮಾತೃಶಕ್ತಿಗೆ ನಮಿಸುತ್ತಾ ಬಂದಿದ್ದಾನೆ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, ಹಾಗು ಶಕ್ತಿ ಸ್ವರೂಪಿಣಿಯಾದ ಜಗದ್ಧಾತ್ರಿಯನ್ನು ಉಷೆಯಲ್ಲಿ ನಿಶೆಯಲ್ಲಿ ಜಲದಲ್ಲಿ ನೆಲದಲ್ಲಿ ಕಂಡಿದ್ದಾನೆ. ಇದುವೆ ಮಾತೃಪೂಜೆ. ಬದುಕಿನ ರೀತಿನೀತಿಗಳಲ್ಲಿ ನಂಬಿಕೆಗಳಲ್ಲಿ ನಡೆನುಡಿಗಳಲ್ಲಿ ಆಚಾರ ವಿಚಾರಗಳಲ್ಲಿ ಬದಲಾವಣೆಗಳಾದ ಹಾಗೆ ಮಾತೃ ಪೂಜೆಯ ವಿಧಿ ವಿಧಾನಗಳಲ್ಲೂ ಬದಲಾವಣೆಗಳಾಗಿವೆ. *ಈ* ಮಾತೃಪೂಜೆಯ ಬಗ್ಗೆ *ಈ* ಕೃತಿ ವಿಶ್ಲೇಷಿಸುತ್ತದೆ.




### ೩೯೭. ಮುಕ್ತಿಯ ಪರಿಕಲ್ಪನೆ

ಲೇ: ಎಸ್.ಆರ್.ಚನ್ನವೀರಪ್ಪ

ಪುಟ: iv+೪೮, ವರ್ಷ: ೨೦೦೬, ರೂ: ೧೦.೦೦

ಮಾನವ ತನ್ನನ್ನು ಮಹಾತ್ಮನನ್ನಾಗಿಸಿಕೊಳ್ಳುವ ಪರಿಯೇ ಮುಕ್ತಿಯ ಪರಿಕಲ್ಪನೆ. ತಮ್ಮ ಧರ್ಮದ ಸೈದ್ಧಾಂತಿಕ ಪ್ರಣಾಳಿಕೆ ಯನ್ನೇ ಮುಖ್ಯ ಪ್ರೇರಣೆಯನ್ನಾಗಿರಿಸಿಕೊಂಡು, ಅದರ ಬಿತ್ತರ ಕಾರ್ಯವನ್ನು ಸಾಹಿತ್ಯ ಕೃತಿಗಳ ರಚನೆಯ ಅಂತರ್ಯದಲ್ಲಿ ಕೈಗೊಂಡ ಕನ್ನಡ ಜೈನ, ವೀರಶೈವ ಹಾಗೂ ವೈದಿಕ ಸಾಹಿತ್ಯ ಪರಂಪರೆಗಳು, ಮಾನವನ ಮುಕ್ತಿಯ ಬಗ್ಗೆ ನಡೆಸಿರುವ ಚಿಂತನ ಮಂಥನಗಳ ಅರ್ಥಪೂರ್ಣ ಅಧ್ಯಯನವನ್ನು ಸ್ಥೂಲವಾಗಿ ಇಲ್ಲಿ ಮಾಡಲಾಗಿದೆ.

### ೩೯೮. ಯಾಪನೀಯ ಸಂಘ

ಲೇ: ಹಂಪ ನಾಗರಾಜಯ್ಯ

ಪುಟ: viii+೧೫೬, ವರ್ಷ: ೧೯೯೯, ರೂ: ೬೫.೦೦

ಪರಿವಿಡಿ

೧. ಯಾಪನೀಯ ಸಂಘ




೨. ಪಾಲಿ ಪ್ರಾಕೃತ ಆಕರಗಳು
೩. ಯಾಪನೀಯ ಸಂಘದ ಸ್ವರೂಪ
೪. ಯಾಪನೀಯ ಸಂಘದ ಮೈಳಾಪತೀರ್ಥ
೫. ಯಾಪನೀಯ ಸಂಘದ ಗಣ-ಗಚ್ಛಗಳು
೬. ಶಾಸನಗಳಲ್ಲಿ ಯಾಪನೀಯ
೭. ಯಾಪನೀಯರ ಕಾಳಜಿಗಳು

ಜೈನಶಾಖೆಗಳಾದ ಶ್ವೇತಾಂಬರ, ದಿಗಂಬರ ಪ್ರಭೇದಗಳಷ್ಟೇ ಪ್ರಾಚೀನವಾದ ಹಳೆಯ ಪಂಥವಾಗಿರುವ ಯಾಪನೀಯ ಸಂಘದ ಬಗ್ಗೆ ಇಲ್ಲಿ ಸಮಗ್ರ ಅಧ್ಯಯನ ವಿವರಗಳಿವೆ.

**೩೯೯. ವಿಠಲ ಸಂಪ್ರದಾಯ**

ಸಂ : ವಿಠ್ಠಲರಾವ್ ಗಾಯಕ್ವಾಡ್
ಪುಟ: iv+೩೨, ವರ್ಷ: ೨೦೦೫, ರೂ: ೧೦.೦೦

ಭಕ್ತ ಜ್ಞಾನೇಶ್ವರರ ಕಾಲದಿಂದ ಹೆಚ್ಚು ತೀವ್ರತೆಯನ್ನು ಪಡೆದ ವಿಠ್ಠಲ ಭಕ್ತಿ ಸಂಪ್ರದಾಯದ ಉಗಮ ಮತ್ತು ಆ ಸಂಪ್ರದಾಯದ ಪ್ರಸಾರದ ಬಗ್ಗೆ *ಈ* ಕಿರುಕೃತಿಯಲ್ಲಿ ಚರ್ಚಿಸಲಾಗಿದೆ. ವಿಠಲ ಸಂಪ್ರದಾಯ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ ಎಂಬ ಮೂರು ರಾಜ್ಯಗಳನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸುವಲ್ಲಿ ಹೇಗೆ ಪ್ರಮುಖವಾಗಿದೆ ಎಂಬುದನ್ನೂ *ಈ* ಕಿರು ಕೃತಿಯಲ್ಲಿ ಚರ್ಚಿಸಲಾಗಿದೆ.




**೪೦೦. ವೇದಗಳಲ್ಲಿ ಜನಸಾಮಾನ್ಯರು**

ಲೇ: ಬಿ.ವಿ. ವೀರಭದ್ರಪ್ಪ
ಪುಟ: x+೧೩೬, ವರ್ಷ: ೨೦೦೧, ರೂ: ೬೦.೦೦

ಪರಿವಿಡಿ
೧. ಆರ್ಯರ ವಲಸೆ; ವೇದಗಳಲ್ಲಿ ಜಾನಪದ
೨. ಕಸುಬುಗಳು; ವಿನೋದಗಳು
೩. ಅನೈತಿಕತೆ; ಮೂಢನಂಬಿಕೆಗಳು
೪. ವೈದಿಕ ಋಷಿಗಳ ಲೌಕಿಕ ಬಯಕೆಗಳು
೫. ಮಾನವ ದೇವರುಗಳು : ನಿತ್ಯೋಪಯೋಗಿ ದೇವರುಗಳು
೬. ಮಹಿಳೆಯರ ಸ್ಥಿತಿಗತಿಗಳು; ಪುರುಷ ಸೂಕ್ತ ಮತ್ತು ಗತಿಗಳು
೭. ವೇದಗಳಲ್ಲಿ ವಿಜ್ಞಾನ

ವೈದಿಕ ಕಾಲದ ಜನಸಾಮಾನ್ಯರ ಸಂಸ್ಕೃತಿಯನ್ನು ತಿಳಿಸುವ ಪ್ರಯತ್ನ *ಈ* ಗ್ರಂಥದಲ್ಲಿದೆ. ಭಾರತೀಯ ಸಂಸ್ಕೃತಿಯ ಮಹತ್ತ್ವದ ಧಾರ್ಮಿಕ ಗ್ರಂಥಗಳೆಂದು ಪರಿಗಣಿಸಲಾದ ವೇದಗಳ ಪಾತ್ರಗಳಾದ ಅಂದಿನ ಜನಸಾಮಾನ್ಯರನ್ನು ಹಾಗು ಅವರ ಲೌಕಿಕ ಜೀವನಕ್ಕೆ ಸಂಬಂಧಿಸಿದಂತೆ ಹಲವು ಆಚರಣಾ ವಿಧಿಗಳನ್ನು ಇಂದಿನ ಜನಸಾಮಾನ್ಯರಿಗೆ ಆಪ್ತವಾಗುವ ಶೈಲಿಯಲ್ಲಿ *ಈ* ಕೃತಿ ವಿವರಿಸುತ್ತದೆ.




**೪೦೧. ಶಿವತತ್ತ್ವ ರತ್ನಾಕರ : ಸಂಪುಟ ೧**

ಸಂ: ಮಲ್ಲೇಪುರಂ ಜಿ.ವೆಂಕಟೇಶ
ಸಂಪುಟ ೧: ಪುಟ: xxxiiii+೬೦೪, ವರ್ಷ: ೧೯೯೯, ರೂ: ೭೫೦.೦೦ (ಎರಡೂ ಸಂಪುಟಗಳ ಒಟ್ಟು ಬೆಲೆ)

ಕೆಳದಿಯ ಬಸವರಾಜ ಸಂಕಲಿಸಿದ ಬೃಹತ್ ಸಂಸ್ಕೃತ ವಿಶ್ವಕೋಶ ವಿದು. ಪುರಾಣ ಭಾಷೆಯಲ್ಲಿ ಮಣಿ, ಮಂತ್ರ, ತಂತ್ರ, ಔಷಧ, ರಸ, ಸಾಹಿತ್ಯ, ಸಂಗೀತ, ಚಿತ್ರ, ವಾಸ್ತು ನೃತ್ಯ, ಇತಿಹಾಸ, ಜ್ಯೋತಿಷ, ಆಗಮ, ಖಗೋಳ, ಭೂಗೋಳ, ರಥ, ತುರಗ ಹಸ್ತಿ, ರಾಜನೀತಿಗಳ ವಸ್ತು ವೈವಿಧ್ಯತೆಯನ್ನು ಇದು ಪ್ರತಿಪಾದಿಸುತ್ತದೆ. ಬ್ರಹ್ಮಾಂಡ, ಸೃಷ್ಟಿಯನ್ನು ವಿವರಿಸುತ್ತಲೇ ೧೫-೧೬ನೇ ಶತಮಾನದ ಚಾರಿತ್ರಿಕ ನೋಟವನ್ನು *ಈ* ಕೃತಿ ಒದಗಿಸುತ್ತದೆ. ಜ್ಞಾನಶಾಸ್ತ್ರವನ್ನು ಸಾಂಸ್ಕೃತಿಕ ತತ್ತ್ವವಾಗಿ ಅನುಸಂಧಾನಗೊಳಿಸಿರುವುದು *ಈ* ಕೃತಿಯ ವೈಶಿಷ್ಟ.

ಮೊದಲನೆಯ *ಈ* ಸಂಪುಟ ೧ನೆಯ ಕಲ್ಲೋಲದಿಂದ ೬ನೆಯ ಕಲ್ಲೋಲದವರೆಗೂ ವಿಸ್ತರಿಸಿಕೊಂಡಿದೆ. ಇದು ಸೃಷ್ಟಿಯ ಕಥನ, ವೇದಾದಿ ಶಾಸ್ತ್ರಗಳ ವಿವರಣೆ, ವಿದ್ಯಾಸ್ವರೂಪ ನಿರೂಪಣೆ, ಶೂನ್ಯ ನಿಷ್ಕಲ ಮಹಾಲಿಂಗಗಳ ನಿರೂಪಣೆ, ತತ್ತ್ವತ್ರಯಗಳ ವಿವರಣೆಗಳನ್ನೊಳಗೊಂಡಿದೆ. ಬ್ರಹ್ಮಾಂಡ ಸೃಷ್ಟಿ, ಮಳೆನಕ್ಷತ್ರಗಳ ಚರ್ಚೆ, ಭಾರತದ ನದಿ-ನದಿಗಳ ಸಮೀಕ್ಷೆ, ವರ್ಣಾಶ್ರಮ ವಿವರ, ಯುಗಧರ್ಮ, ಕೆಳದಿ ವಂಶಜರ ರಾಜ್ಯಭಾರ, ಪಾಕಶಾಲಾ ಸ್ವರೂಪ, ಭಕ್ಷ್ಯ, ಲೇಹ್ಯ, ಭೋಜನ ವಿಧಾನ, ಸ್ಥಾವರ ಜಂಗಮ ಭೇದ ಇತ್ಯಾದಿ ೬೪ ಕಲೆಗಳ ವರ್ಣನೆಯನ್ನು *ಈ* ಸಂಪುಟ ಒಳಗೊಂಡಿದೆ.




**೪೦೨. ಶಿವತತ್ತ್ವ ರತ್ನಾಕರ : ಸಂಪುಟ ೨**

ಸಂ: ಮಲ್ಲೇಪುರಂ ಜಿ.ವೆಂಕಟೇಶ
ಸಂಪುಟ ೨: ಪುಟ: xx+೫೮೪, ವರ್ಷ: ೧೯೯೯, ರೂ: ೭೫೦.೦೦ (ಎರಡೂ ಸಂಪುಟಗಳ ಒಟ್ಟು ಬೆಲೆ)

*ಈ* ಸಂಪುಟದಲ್ಲಿ ರಾಜನ ಆಸ್ಥಾನದ ಅಲಂಕಾರಗಳ ವಿವರಣೆ, ಇಂದ್ರಜಾಲ ವಿದ್ಯೆ, ಕಾವ್ಯಸ್ವರೂಪ ವರ್ಣನೆ, ನಾಯಕಿ-ನಾಯಕ ಗುಣಲಕ್ಷಣಗಳು, ಕಾವ್ಯ ಪ್ರಕಾರಗಳು, ನಾಟ್ಯ ಪ್ರಕಾರಗಳು,

ಷೋಡಶ ಸಂಸ್ಕಾರ ವಿಶೇಷಗಳು, ಗೃಹವಿಜ್ಞಾನ, ಅಶ್ವಶಾಸ್ತ್ರ, ಗಜಶಾಸ್ತ್ರ, ಮಂತ್ರಯೋಗದ ವಿವರಣೆಗಳಿವೆ. ಜೀವವೈಜ್ಞಾನಿಕ ವಿಷಯಗಳು, ದರ್ಶನಾದಿ ವಿವರಗಳು, ಐತಿಹಾಸಿಕ ವಿವರಗಳೂ *ಈ* ಸಂಪುಟದಲ್ಲಿವೆ.




**೪೦೩. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧: ಪಂಪ ಸಂಪುಟ**

ಸಂ: ಟಿ.ವಿ.ವೆಂಕಟಾಚಲಶಾಸ್ತ್ರೀ

ಪುಟ: Lvii+೯೨೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಆದಿಪುರಾಣಂ

೨. ವಿಕ್ರಮಾರ್ಜುನ ವಿಜಯಂ

**೪೦೪. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೨: ಶಿವಕೋಟಾಚಾರ್ಯ ಚಾವುಂಡರಾಯ ಸಂಪುಟ**

ಸಂ: ಕಮಲಾ ಹಂಪನಾ

ಪುಟ: XLIV+೫೪೧, ವರ್ಷ: ೨೦೦೬, ರೂ: ೧೦೦

ಪರಿವಿಡಿ

೧. ವಡ್ಡಾರಾಧನೆ

೨. ಚಾವುಂಡರಾಯ ಪುರಾಣಂ




**೪೦೫. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೩: ಪೊನ್ನ-ಕಮಲಭವ ಸಂಪುಟ**

ಸಂ: ಹಂಪ ನಾಗರಾಜಯ್ಯ

ಪುಟ: XLII+೮೨೮, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಶಾಂತಿಪುರಾಣಂ

೨. ಶಾಂತೀಶ್ವರಪುರಾಣಂ

**೪೦೬. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೪: ರನ್ನ ಸಂಪುಟ**

ಸಂ: ಹಂಪ ನಾಗರಾಜಯ್ಯ

ಪುಟ: XLII+೩೨೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಅಜಿತ ತೀರ್ಥಂಕರ ಪುರಾಣ ತಿಲಕಂ

೨. ಸಾಹಸಭೀಮ ವಿಜಯಂ




**೪೦೭. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೫: ನಾಗವರ್ಮ ಸಂಪುಟ**

ಸಂ: ಮಲ್ಲೇಪುರಂ ಜಿ. ವೆಂಕಟೇಶ

ಪುಟ: XL+೫೧೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಕಾವ್ಯಾವಲೋಕನಂ

೨. ಕರ್ನಾಟಕ ಭಾಷಾಭೂಷಣಂ

೩. ಅಭಿಧಾನ ವಸ್ತುಕೋಶಂ

**೪೦೮. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೬: ಶಾಂತಿನಾಥ-ಆಂಡಯ್ಯ ಸಂಪುಟ**

ಸಂ: ಪಿ.ವಿ.ನಾರಾಯಣ

ಪುಟ: XL+೩೦೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಸುಕುಮಾರ ಚರಿತಂ

೨. ಕಬ್ಬಿಗರ ಕಾವ್ಯಂ

**೪೦೯. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೭: ನಾಗಚಂದ್ರ ಸಂಪುಟ**

ಸಂ: ಶಾಂತಿನಾಥ ದಿಬ್ಬದ

ಪುಟ: LXX+೮೨೮, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ರಾಮಚಂದ್ರ ಚರಿತ ಪುರಾಣಂ

೨. ಮಲ್ಲಿನಾಥ ಪುರಾಣಂ

**೪೧೦. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೮: ನಯಸೇನ ಸಂಪುಟ**

ಸಂ: ಎಸ್.ಪಿ.ಪಾಟೀಲ

ಪುಟ: XXXVI+೫೪೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಧರ್ಮಾಮೃತಂ

**೪೧೧. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೯: ಬ್ರಹ್ಮಶಿವ-ವೃತ್ತವಿಲಾಸ ಸಂಪುಟ**

ಸಂ: ಟಿ.ವಿ.ವೆಂಕಟಾಚಲಶಾಸ್ತ್ರೀ, ಕೆ.ರಾಘವೇಂದ್ರರಾವ್

ಪುಟ: ೬೬೨, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಸಮಯ ಪರೀಕ್ಷೆ

೨. ಧರ್ಮ ಪರೀಕ್ಷೆ

**೪೧೨. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೦: ನೇಮಿಚಂದ್ರ ಸಂಪುಟ**

ಸಂ: ದೇ.ಜವರೇಗೌಡ

ಪುಟ: XXXVI+೫೬೦, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಲೀಲಾವತೀ ಪ್ರಬಂಧಂ

೨. ಅರ್ಧನೇಮಿ ಪುರಾಣಂ

**೪೧೩. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೧: ಬಂಧುವರ್ಮ ಸಂಪುಟ**

ಸಂ: ಬಿ.ಎಸ್.ಸಣ್ಣಯ್ಯ

ಪುಟ: XXXVI+೫೦೦, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಜೀವಸಂಬೋಧನಂ

೨. ಹರಿವಂಶಾಭ್ಯುದಯಂ

**೪೧೪. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೨: ಆಚಣ್ಣ-ಅಗ್ಗಳ ಸಂಪುಟ**

ಸಂ: ಜಿ.ಜಿ. ಮಂಜುನಾಥನ್

ಪುಟ: XLIV+೭೩೪, ವರ್ಷ: ೨೦೦೭, ರೂ: ೧೦೦.೦೦

ಪರಿವಿಡಿ

೧. ವರ್ಧಮಾನ ಪುರಾಣಂ

೨. ಶ್ರೀಪಾಪದಾಶೀತಿ

೩. ಚಂದ್ರಪ್ರಭ ಪುರಾಣಂ

**೪೧೫. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೩: ಜನ್ನ ಸಂಪುಟ**

ಸಂ: ಸಿ.ಪಿ.ಕೃಷ್ಣಕುಮಾರ್

ಪುಟ: Lvi+೩೯೦, ವರ್ಷ: ೨೦೦೭, ರೂ: ೧೦೦.೦೦

ಪರಿವಿಡಿ

೧. ಯಶೋಧರ ಚರಿತ್ರೆ

೨. ಅನಂತನಾಥ ಪುರಾಣಂ

೩. ಅನುಭವಮುಕುರಂ

**೪೧೬. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೪: ಇಮ್ಮಡಿ ಗುಣವರ್ಮ-ಪಾರ್ಶ್ವಪಂಡಿತ ಸಂಪುಟ**

ಸಂ: ವೈ.ಸಿ.ಭಾನುಮತಿ

ಪುಟ: L+೬೪೨, ವರ್ಷ: ೨೦೦೭, ರೂ: ೧೦೦.೦೦

ಪರಿವಿಡಿ

೧. ಪುಷ್ಪದಂತ ಪುರಾಣಂ

೨. ಚಂದ್ರನಾಥಾಷ್ಟಕ

೩. ಪಾರ್ಶ್ವನಾಥ ಪುರಾಣಂ

**೪೧೭. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೫: ಬಾಹುಬಲಿ-ಮಧುರ ಸಂಪುಟ**

ಸಂ: ಎನ್.ಬಸವಾರಾಧ್ಯ

ಪುಟ: XXXIV+೬೪೨, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ

೧. ಧರ್ಮನಾಥ ಪುರಾಣಂ

**೪೧೮. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೬: ಮೂರನೇ ಮಂಗರಸ ಸಂಪುಟ**

ಸಂ: ಬಿ.ವಿ.ಶಿರೂರ

ಪುಟ: ೧೦೦೧, ವರ್ಷ: ೨೦೦೭, ರೂ: ೧೦೦.೦೦

ಪರಿವಿಡಿ
೧. ಶ್ರೀಪಾಲಚರಿತೆ, ಪ್ರಭಂಜನ ಚರಿತೆ
೨. ಜಯನೃಪಕಾವ್ಯ, ಸಮ್ಯಕ್ತ್ವಕೌಮುದಿ
೩. ನೇಮಿಜಿನೇಶಸಂಗತಿ, ಸೂಪಶಾಸ್ತ್ರ

**೪೧೯. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೭: ರತ್ನಾಕರವರ್ಣಿ ಸಂಪುಟ**
ಸಂ: ಎಂ.ಜಿ.ಬಿರಾದಾರ
ಪುಟ: Lvi+೧೦೮೮=೧೧೪೪, ವರ್ಷ: ೨೦೦೬, ರೂ: ೧೦೦.೦೦
ಪರಿವಿಡಿ
೧. ಭರತೇಶ ವೈಭವ
೨. ಶತಕತ್ರಯ
೩. ರತ್ನಾಕರನ ಹಾಡುಗಳು

**೪೨೦. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೮: ಸಾಳ್ವ ಸಂಪುಟ**
ಸಂ: ಎಂ.ಎ.ಜಯಚಂದ್ರ
ಪುಟ: XXXII+೬೫೪, ವರ್ಷ: ೨೦೦೬, ರೂ: ೧೦೦.೦೦
ಪರಿವಿಡಿ
೧. ನೇಮಿನಾಥ ಚರಿತೆ
೨. ರಸರತ್ನಾಕರಂ
೩. ಶಾರದಾ ವಿಲಾಸಂ

**೪೨೧. ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲಿಕೆ-ಸಂಪುಟ ೧೯: ದೇವಚಂದ್ರ ಸಂಪುಟ**
ಸಂ: ಎಚ್.ಜೆ. ಲಕ್ಕಪ್ಪಗೌಡ
ಪುಟ: XXVIII+೪೬೦, ವರ್ಷ: ೨೦೦೭, ರೂ: ೧೦೦.೦೦
ಪರಿವಿಡಿ
೧. ರಾಜಾವಳಿ ಕಥಾಸಾರ

ಸಮಗ್ರ ಕನ್ನಡ ಜೈನಸಾಹಿತ್ಯ ಯೋಜನೆಯಡಿ ಇದುವರೆಗೆ ಪ್ರಕಟವಾಗಿರುವ ಮೇಲಿನ ಹತ್ತೊಂಬತ್ತು ಸಂಪುಟಗಳಲ್ಲಿ, ಪ್ರಾಚೀನ ಕನ್ನಡ ಸಾಹಿತ್ಯದ ಮೊದಲ ಮಹಾಕಾವ್ಯಗಳಾದ ಪಂಪನ ವಿಕ್ರಮಾರ್ಜುನ ವಿಜಯಂ ಮತ್ತು ಆದಿಪುರಾಣದಿಂದ ಹಿಡಿದು ದೇವಚಂದ್ರನ ರಾಜಾವಳಿ ಕಥಾಸಾರದವರೆಗೂ ಕನ್ನಡ ಜೈನಸಾಹಿತ್ಯದ ಹರಹು ವ್ಯಾಪಿಸಿಕೊಂಡಿದೆ. ಕನ್ನಡ ಜೈನಸಾಹಿತ್ಯದ ಬಗ್ಗೆ ಹೇಳುವಾಗ ಜೈನ ಪುರಾಣಗಳ ಪರಿಭಾಷೆ ಮತ್ತು ಪರಿಮಾಣುಗಳು ಮಾರ್ಗವಾದರೆ, ಇತಿಹಾಸ, ಸಮಾಜ, ಲೌಕಿಕ ಪ್ರಪಂಚ ದೇಸಿಯಾಗುತ್ತದೆ. ಪಂಪನ ಕಾವ್ಯಗಳ ನಾಣ್ನುಡಿಯಿಂದ ತೊಡಗಿ, ವಡ್ಡಾರಾಧನೆ ಕತೆಗಳ ಗ್ರಾಮೀಣ ಬದುಕಿನಿಂದ ಮುಂದುವರಿದು, ನಯಸೇನನ ಧರ್ಮಾಮೃತದ ಕಥೆಗಳ ಮಾಲೋಪಮೆಗಳಿಂದ ಹಾದು ಬಂದು, ರತ್ನಾಕರನ ಭರತೇಶ ವೈಭವದ ನುಡಿಗಟ್ಟುಗಳವರೆಗೆ ಕನ್ನಡದ ನಿಜವಾದ ದೇಸಿಯನ್ನು ಜೈನಸಾಹಿತ್ಯ ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಂಪೂಕಾವ್ಯ ಪ್ರಕಾರವು ಜೈನರಿಂದ ಆರಂಭವಾಯಿತು. ಹಾಗೆಯೇ ಸಾಂಗತ್ಯಕಾವ್ಯ ಪ್ರಕಾರಕ್ಕೆ ನಾಂದಿ ಹಾಡಿದವರೂ ಜೈನಕವಿಗಳು. ಗದ್ಯವನ್ನು ಮೊದಲು ಮಾಡಿದವರು ಜೈನ ಕಥೆಗಾರರು. ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರದಂತಹ ಶಾಸ್ತ್ರ ಪಾಂಡಿತ್ಯವನ್ನು ಕನ್ನಡದಲ್ಲಿ ಕಟ್ಟಿಕೊಟ್ಟವರು ಜೈನರು. ಹೀಗೆ ಕನ್ನಡದ ವಿದ್ವತ್ತು, ವಿವೇಕ ಮತ್ತು ವಿಸ್ಮಯ ಕನ್ನಡ ಸಾಹಿತ್ಯದಲ್ಲಿ ಜೈನಕವಿಗಳಿಂದ ನಿರ್ಮಾಣ ವಾಗಿದೆ ಮತ್ತು ಪ್ರಸಾರವಾಗಿದೆ. ಗ್ರಂಥದ ಕೊನೆಗೆ ಶಬ್ದಾರ್ಥಕೋಶ, ಪಾರಿಭಾಷಿಕಕೋಶ, ಸಹಾಯಕ ಸಾಹಿತ್ಯವನ್ನು ನೀಡಲಾಗಿದೆ.

# ೨೦

# ನಾಡು-ನುಡಿ ಚಿಂತನೆ

### ೪೨೨. ಅ.ನ.ಕೃ ಮತ್ತು ಕನ್ನಡ ಚಳವಳಿ

ಲೇ: ಬಿ.ಕೆ.ಅನಂತಸ್ವಾಮಿ

ಪುಟ: ೩೫, ವರ್ಷ: ೨೦೦೦, ರೂ: ೧೦.೦೦

ಕನ್ನಡದ ಪ್ರಮುಖ ಕಾದಂಬರಿಕಾರ ಅನಕೃ ಅವರು ಕನ್ನಡದ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಬಗ್ಗೆ ಅವರು ಎದುರಿಸಿದ ಸಮಸ್ಯೆಗಳನ್ನು *ಈ* ಕಿರುಪುಸ್ತಕ ವಿವರಿಸುತ್ತದೆ.

### ೪೨೩. ಕನ್ನಡ ಕರ್ನಾಟಕತ್ವ (ಆಲೂರು ವೆಂಕಟರಾಯರ ಚಿಂತನೆಗಳು)

ಲೇ: ಸಿ.ಆರ್.ಗೋವಿಂದರಾಜು

ಪುಟ: viii+೫೬, ವರ್ಷ: ೧೯೯೫, ರೂ: ೨೦.೦೦

ಪರಿವಿಡಿ

೧. ಆಲೂರ ವೆಂಕಟರಾಯರು : ಪರಿಚಯ ಮತ್ತು ಪರಿಸರ

೨. ಆಲೂರರ ಕನ್ನಡ-ಕರ್ನಾಟಕತ್ವದ ಚಿಂತನೆಯ ನಿಲುವುಗಳು

೩. ಪತ್ರಿಕೋದ್ಯಮ ಮತ್ತು ಆಲೂರರು.

೪. ಆಲೂರರ ಸಾಹಿತ್ಯ ಚಿಂತನೆಯಲ್ಲಿ ಕನ್ನಡ ಕರ್ನಾಟಕತ್ವಗಳು

೫. ತಳೆದ ನಿಲುವು

ನಾಡು ನುಡಿ ಜನ ಸಂಸ್ಕೃತಿಗಳ ಬಗೆಗೆ ಚಿಂತನೆ ನಡೆಸಿದವರಲ್ಲಿ ಆಲೂರು ವೆಂಕಟರಾಯರು ಪ್ರಮುಖರು. ಕನ್ನಡಿಗರು ತಮ್ಮತನದ ಅರಿವನ್ನು ಸಾಂಸ್ಕೃತಿಕವಾಗಿ ಗಳಿಸಿಕೊಳ್ಳುವಲ್ಲಿ ಆಲೂರು ವೆಂಕಟರಾಯರು ನಡೆಸಿದ ಪ್ರಯತ್ನಗಳು ಪ್ರಧಾನವಾದವು. *ಈ* ಪ್ರಯತ್ನಗಳಿಂದಲೇ ಛಿದ್ರಗೊಂಡಿದ್ದ ನಾಡು ಭೌಗೋಳಿಕವಾಗಿ ರಾಜಕೀಯವಾಗಿ ೧೯೫೬ರಲ್ಲಿ ಏಕೀಕೃತಗೊಂಡಿತು.

*ಈ* ಚಾರಿತ್ರಿಕ ಘಟನೆಗೆ ತಮ್ಮ ತಾತ್ತ್ವಿಕ ಚಿಂತನೆಗಳ ಮೂಲಕ ಕನ್ನಡಿಗರನ್ನು ಸಾಂಸ್ಕೃತಿಕವಾಗಿ ಸಿದ್ಧಗೊಳಿಸಿದ ಆಲೂರರ ಕನ್ನಡತ್ವದ ಬಗೆಗಿನ ಚಿಂತನೆಗಳನ್ನು ಅಧ್ಯಯನ ಮಾಡುವ ಕೃತಿಯೇ ಕನ್ನಡ ಕರ್ನಾಟಕತ್ವ.






### ೪೨೪. ಕನ್ನಡ ಕಾವಲು

ಸಂ: ಗುರುಲಿಂಗ ಕಾಪಸೆ

ಪುಟ: xxxvi+೨೩೭, ವರ್ಷ: ೧೯೯೫, ರೂ: ೭೫.೦೦

ಪರಿವಿಡಿ

೧. ಆಡಳಿತ

೨. ಶಿಕ್ಷಣ

೩. ಗಡಿಪ್ರದೇಶ

೪. ಸಂಕೀರ್ಣ

ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪಾಟೀಲ ಪುಟ್ಟಪ್ಪ ಅವರು ಬರೆದಿರುವ ಸಾವಿರಾರು ಪತ್ರಗಳಲ್ಲಿ ಹಲವನ್ನು ಆಯ್ದು *ಈ* ಪುಸ್ತಕದಲ್ಲಿ ಸಂಕಲಿಸಲಾಗಿದೆ.

### ೪೨೫. ಕನ್ನಡ ಚಳವಳಿಗಳು

ಲೇ: ಸಿ.ಆರ್.ಗೋವಿಂದರಾಜು

ಪುಟ: xii+೯೨, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಭಾಷೆ-ಭಾಷೆಯ ಸ್ವರೂಪ ಭಾಷಿಕ ಚಳವಳಿ ತಾತ್ವಿಕತೆ

೨. ಕನ್ನಡ ಚಳವಳಿಯ ಚಾರಿತ್ರಿಕ ಹಿನ್ನೆಲೆ

೩. ಸೈದ್ಧಾಂತಿಕ ಪ್ರೇರಣೆ ಮತ್ತು ಒತ್ತಡಗಳು

೪. ಕನ್ನಡ ಚಳವಳಿಯ ಮೊದಲ ಘಟ್ಟ

೫. ರಾಜಕಾರಣ, ಜಾತೀಯತೆ ಮತ್ತು ಕನ್ನಡ ಚಳವಳಿ

೬. ಚಳವಳಿಯ ವಿಭಿನ್ನ ಹಂತಗಳು

೭. ಕನ್ನಡ ಚಳವಳಿಯು ಕಳೆದ ಎರಡು ದಶಕಗಳಿಂದ ತಳೆದ ನಿಲುವುಗಳು

ಏಕೀಕರಣೋತ್ತರ ಕರ್ನಾಟಕದ ಚಳವಳಿಗಳಲ್ಲಿ ಕನ್ನಡ ಚಳವಳಿಯೂ ಒಂದು. *ಈ* ಭಾಷಿಕ ಚಳವಳಿಯು ಪ್ರಸ್ತುತ ಸಂದರ್ಭದಲ್ಲಂತೂ ಜೀವಂತ ಸಮಸ್ಯೆಗಳನ್ನು ಚರ್ಚೆಗೆ ತೆಗೆದುಕೊಂಡು ಮುಂದುವರೆಯುತ್ತದೆ. ಕನ್ನಡಿಗರ ಎಲ್ಲ ಆಗುಹೋಗುಗಳನ್ನು ಅಧ್ಯಯನಕ್ಕೆ ಒಳಪಡಿಸಿರುವ *ಈ* ಕೃತಿ, ನಾಡಿನ ಸಾಂಸ್ಕೃತಿಕ ಚಳವಳಿಯ ಚರಿತ್ರೆಯನ್ನು, ಪ್ರಧಾನವಾದ ಪ್ರಶ್ನೆಗಳನ್ನು ಎತ್ತುವಲ್ಲಿ ಸಫಲವಾಗಿದೆ. ಕನ್ನಡವನ್ನು ಕುರಿತ ಆತಂಕ ಕೇವಲ ಭಾಷಿಕವಲ್ಲ. ರಾಜ್ಯದ ಹಾಗೂ ಜನರ ಎಲ್ಲ ಆಗುಹೋಗುಗಳ ಪ್ರತೀಕವಾದ, ಚಾರಿತ್ರಿಕ ತುರ್ತಿನಿಂದಾದ ಕನ್ನಡ ಚಳವಳಿ ಕುರಿತ ಕೃತಿ ಇದಾಗಿದೆ.




**೪೨೬. ಕನ್ನಡ ಚಿಂತನೆ**

ಲೇ: ದೇ. ಜವರೇಗೌಡ

ಪುಟ: xii+೩೧೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಆಡಳಿತದಲ್ಲಿ ಕನ್ನಡ ಭಾಷಾ ಬಳಕೆ
೨. ಶಿಕ್ಷಣದಲ್ಲಿ ಕನ್ನಡ ಭಾಷಾ ಬಳಕೆ
೩. ಮಾಧ್ಯಮಗಳಲ್ಲಿ ಕನ್ನಡ ಭಾಷಾ ಬಳಕೆ
೪. ನ್ಯಾಯಾಲಯಗಳಲ್ಲಿ ಕನ್ನಡ ಭಾಷಾ ಬಳಕೆ
೫. ಕನ್ನಡ ಅಭಿವೃದ್ಧಿ-ತ್ರಿಭಾಷಾ ಸೂತ್ರ
೬. ಕನ್ನಡ-ಇಂಗ್ಲೀಷ್ ಸಂಬಂಧ
೭. ಕನ್ನಡ ಮುಖ್ಯಭಾಷೆಯಾಗಿ, ಮಾಧ್ಯಮವಾಗಿ

ಈ ಸಂಕಲನದಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿ ಇಟ್ಟು ಕೊಂಡು ಆಡಳಿತ, ಶಿಕ್ಷಣ, ಮಾಧ್ಯಮ, ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯ ಕುರಿತು ಅಧ್ಯಯನಪೂರ್ಣವಾದ ಕಾರ್ಯರೂಪಿ ಚಿಂತನೆಗಳಿವೆ. ಕನ್ನಡದ ಅಭಿವೃದ್ಧಿಯ ಕುರಿತು ನೀಲಿ ನಕಾಶೆಯನ್ನು ಇಲ್ಲಿ ರೂಪಿಸಲಾಗಿದೆ. ತ್ರಿಭಾಷಾ ಸೂತ್ರ, ಕನ್ನಡ ಇಂಗ್ಲಿಷ್ ಸಂಬಂಧಗಳ ಚರ್ಚೆ ವಿಶೇಷವಾಗಿ ಇಲ್ಲಿ ಮಂಡಿತವಾಗಿದೆ. ಕನ್ನಡ ಮುಖ್ಯ ಭಾಷೆಯಾಗಿ ಮತ್ತು ಮಾಧ್ಯಮವಾಗಿ ಬಳಕೆಯಾಗ ಬೇಕಾದ ಅಗತ್ಯಗಳನ್ನು ಸಮರ್ಥಕವಾಗಿ ಇಲ್ಲಿ ಪ್ರತಿಪಾದಿಸಲಾಗಿದೆ.




**೪೨೭. ಕನ್ನಡ ಜಗತ್ತು ಅರ್ಧಶತಮಾನ**

ಲೇ: ಕೆ.ವಿ. ನಾರಾಯಣ

ಪುಟ: xiv+೩೪೨, ವರ್ಷ: ೨೦೦೭, ರೂ: ೧೨೦.೦೦

ಪರಿವಿಡಿ

೧. ಏಕೀಕರಣ ಸಂದರ್ಭದ ಕನ್ನಡ ಸ್ವರೂಪ, ಭಾಷಾ ನೀತಿ, ಭಾಷಾ ಯೋಜನೆ
೨. ಆಡಳಿತ ಶಿಕ್ಷಣ ಸಮೂಹ ಮಾಧ್ಯಮಗಳಲ್ಲಿ ಕನ್ನಡ
೩. ಕನ್ನಡ ಇತರ ಭಾಷೆಗಳ ಜತೆಗಿನ ಸಂಬಂಧ
೪. ಪ್ರಮಾಣೀಕರಣ, ಆಧುನೀಕರಣ
೫. ಕನ್ನಡದ ಪ್ರಭೇದಗಳು : ನಿರ್ವಹಣೆಯ ಸಮಸ್ಯೆಗಳು
೬. ಕನ್ನಡ ರಚನೆಯಲ್ಲಿನ ಪಲ್ಲಟಗಳು
೭. ಪದರಚನೆ, ಪದಕೋಶ, ಮಾತು ಬರಹ
೮. ಕನ್ನಡ ಮತ್ತು ತಂತ್ರಜ್ಞಾನ; ಕನ್ನಡ ಮತ್ತು ಸಾಹಿತ್ಯ
೯. ಕನ್ನಡದ ಚಳುವಳಿಗಳು; ಕನ್ನಡದ ಗುರುತುಗಳು
೧೦. ಕನ್ನಡ ಭಾಷೆಯ ಅಧ್ಯಯನಗಳು, ಕನ್ನಡದ ಆತಂಕಗಳು

ಐವತ್ತು ವರ್ಷಗಳಲ್ಲಿ ಕನ್ನಡ ಭಾಷೆಯ ಹಾಗೂ ಬದುಕಿನ ಭಾಗವಾಗಿ ರೂಪಿತವಾದ ಮತ್ತು ರೂಪಿತವಾಗದ ವಿದ್ಯಮಾನಗಳನ್ನು ಅಪೂರ್ವ ಆಕರಗಳ ಮೂಲಕ ಅಧ್ಯಯನ ಮಾಡಿರುವ ಮಹತ್ವದ ಕೃತಿ ಇದು. ಭಾಷಾನೀತಿ ಮತ್ತು ಭಾಷಾಯೋಜನೆ ಎನ್ನುವ ಪರಿಕಲ್ಪನೆಗಳು ಕನ್ನಡದ ಸಂದರ್ಭದಲ್ಲಿ ಹೆಚ್ಚು ಖಚಿತವಾಗಿ ಮತ್ತು ಸಾಮಾಜಿಕವಾಗಿ ಎತ್ತಿಕೊಂಡು ಇಲ್ಲಿ ಚರ್ಚಿಸಲಾಗಿದೆ. ಕನ್ನಡ ಭಾಷೆಯ ಆಂತರಿಕ ರಚನೆ, ಬಾಹ್ಯ ಪ್ರಯೋಗಗಳು ಮತ್ತು ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು- ಇವುಗಳ ಅಂತರ್‌ಸಂಬಂಧವು ಮಾಹಿತಿ ಮತ್ತು ಮೌಲ್ಯಮಾಪನಗಳ ನೆಲೆಯಲ್ಲಿ ಇಲ್ಲಿ ವಿವೇಚನೆಗೆ ಒಳಗಾಗಿದೆ. ಕನ್ನಡ ಭಾಷೆಯ ಬಳಕೆಯು ಭಾವನೆಗಳ ಮಟ್ಟದಿಂದ ತೊಡಗಿ ಭಿನ್ನಕ್ಷೇತ್ರಗಳ ಆಳಕ್ಕೆ ಇಳಿಯಬೇಕಾದ ಅಗತ್ಯಗಳ ಕುರಿತು ವಿಶಿಷ್ಟ ಒಳನೋಟಗಳು ಇಲ್ಲಿ ದೊರೆಯುತ್ತವೆ. ಇಲ್ಲಿನ ಚರ್ಚೆಗಳು ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ.




**೪೨೮. ಗಡಿ ಚಳವಳಿಗಳು**

ಲೇ: ಎಸ್.ಚಿನ್ನಸ್ವಾಮಿ ಸೋಸಲೆ

ಪುಟ: xii+೯೬, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಏಕೀಕರಣೋತ್ತರ ಕರ್ನಾಟಕದಲ್ಲಿ ಹೊರಗುಳಿದ ಕನ್ನಡದ ನೆಲೆ ಹಿನ್ನೆಲೆ
೨. ಹೊರನಾಡಿನಲ್ಲಿ ಕನ್ನಡದ ಗಡಿಯ ರಕ್ಷಣೆಗಾಗಿ ಚಳವಳಿ
೩. ಕಾಸರಗೋಡು ತಾಲೂಕಿಗಾಗಿ ಹೋರಾಟ
೪. ಗಡಿಪ್ರದೇಶಗಳ ಮೂಲಭೂತ ಸಮಸ್ಯೆಗಳು
೫. ಗಡಿನಾಡಿನ ಬಗ್ಗೆ ಗಣ್ಯರ ಅಭಿಪ್ರಾಯಗಳು
೬. ರಾಜ್ಯದ ಒಟ್ಟು ಜಿಲ್ಲೆಗಳು ಮತ್ತು ತಾಲ್ಲೂಕುಗಳು : ಏಳು ಹೊಸ ಜಿಲ್ಲೆಗಳ ಪರಿಚಯ

ಏಕೀಕರಣೋತ್ತರ ಕಾಲದಲ್ಲಿ ಕನ್ನಡನಾಡು ನುಡಿಗಳಿಂದ ಹೊರಗುಳಿದ ಗಡಿನಾಡ ಕನ್ನಡಿಗರು ನಡೆಸಿದ ಹೋರಾಟದ ಅಧ್ಯಯನವು ಇಲ್ಲಿದೆ. ಏಕೀಕರಣೋತ್ತರ ಕರ್ನಾಟಕದಲ್ಲಿ ಹೊರಗುಳಿದ ಕನ್ನಡದ ನೆಲೆ ಹಾಗು ಹೊರನಾಡು ಕನ್ನಡಿಗರು ಗಡಿ ರಕ್ಷಣೆಗಾಗಿ ನಡೆಸಿದಂತಹ ಹೋರಾಟ ಮತ್ತು ವಿಶೇಷವಾಗಿ ಕಾಸರಗೋಡು ಕೇರಳಕ್ಕೆ ಸೇರಿದಾಗಿನಿಂದ ಇಂದಿನವರೆಗೆ ನಡೆದಿರುವ ಗಡಿಚಳವಳಿಯನ್ನು ಈ ಪುಸ್ತಕದಲ್ಲಿ ಮುಖ್ಯವಾಗಿ ಪ್ರಸ್ತಾಪಿಸಲಾಗಿದೆ.




**೪೨೯. ಗಾಂಧೀ ತತ್ತ್ವಚಿಂತನೆ**

ಲೇ: ನೀಲತ್ತಹಳ್ಳಿ ಕಸ್ತೂರಿ

ಪುಟ ೯೮, ವರ್ಷ ೨೦೦೮, ರೂ ೬೦

ಪರಿವಿಡಿ

೧. ಸತ್ಯದೇವರು; ಮಾನವ; ಪ್ರಾರ್ಥನೆ; ಆತ್ಮಶುದ್ಧಿ
೨. ಅಹಿಂಸೆ; ಸತ್ಯಾಗ್ರಹ; ವ್ಯಕ್ತಿ-ರಾಷ್ಟ್ರ-ಜಗತ್ತು
೩. ಧರ್ಮ-ಸಂಸ್ಕೃತಿ; ನಾಗರೀಕತೆ; ಕಲೆ-ಸಾಹಿತ್ಯ
೪. ಅರ್ಥ ಚಿಂತನೆ; ಶರೀರ ಶ್ರಮ
೫. ಸ್ವದೇಶಿ; ಸಮಾನತೆ; ಧರ್ಮದರ್ಶಿತ್ವ; ಸರ್ವೋದಯ ವಿಚಾರ ಪರಂಪರೆ
೬. ಕಾರ್ಮಿಕ ಸಂಬಂಧಗಳು; ರಾಜಕಾರಣ
೭. ಸಮಾಜ; ಶಿಕ್ಷಣ ಚಿಂತನ
೮. ಕಟ್ಟಕಡೆಯವನಿಗೆ; ಸಪ್ತಸಾಮಾಜಿಕ ಪಾಪಗಳು; ಏಕಾದಶಿ ವ್ರತಗಳು
೯. ಯಜ್ಞದೃಷ್ಟಿ; ಗೀತಾಚಿಂತನ
೧೦ ಆರೋಗ್ಯ ಚಿಂತನ; ಜೀವನ ರೇಖಾಪಟ

ಈ ಕೃತಿ ಗಾಂಧಿಯವರ ಸಮಗ್ರ ಚಿಂತನೆಯನ್ನು ಒಳಗೊಂಡಿದೆ. ಗಾಂಧೀಜಿಯವರ ವೈಚಾರಿಕ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಮುಖಗಳನ್ನು ಈ ಕೃತಿ ಸಮಗ್ರವಾಗಿ ತೆರೆದು ತೋರಿಸುತ್ತದೆ.

**೪೩೦. ನಡುಗಾಲದ ಕನ್ನಡನಾಡು**

ಲೇ: ಮೊಗಳ್ಳಿ ಗಣೇಶ್

ಪುಟ: xiv+೧೮೬, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ಕನ್ನಡತ್ವದ ಸಾಮಾಜಿಕ ವಾಸ್ತವ
೨. ಏಕೀಕರಣೋತ್ತರ ಕನ್ನಡ ಸಾಹಿತ್ಯದ ಸಮಾಜ
೩. ಏಕೀಕರಣೋತ್ತರ ಸಂಘರ್ಷ ಮತ್ತು ವಿಪರ್ಯಾಸ
೪. ವರ್ತಮಾನದ ಕನ್ನಡ ನಾಡು

ಸಾಹಿತ್ಯ, ಪ್ರಭುತ್ವ, ಸಮುದಾಯಗಳ ನೆಲೆಗಳಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಪರ ಚಿಂತನೆಗಳನ್ನು ಕುರಿತಂತೆ ವಿಸ್ತೃತವಾದ ಅಧ್ಯಯನ ಈ ಗ್ರಂಥದಲ್ಲಿ ಪ್ರತಿಫಲಿತಗೊಂಡಿದೆ. ನವೋದಯ ಸಾಹಿತ್ಯದಿಂದ ಆರಂಭಿಸಿ ಈವರೆಗಿನ ಕನ್ನಡ ಸಾಹಿತ್ಯ ಮತ್ತು ಕನ್ನಡತ್ವದ ಸ್ಥಿತಿಯನ್ನು ಸೂಕ್ಷ್ಮವಾಗಿ ಗಂಭೀರವಾದ ಒಳನೋಟಗಳಿಂದ ಇಲ್ಲಿ ಅವಲೋಕಿಸಲಾಗಿದೆ.




**೪೩೧. ನಾಡು ನುಡಿ**

ಲೇ: ಪಾಟೀಲ ಪುಟ್ಟಪ್ಪ

ಪುಟ: xvi+೩೮೪, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಕನ್ನಡ ಭಾಷೆ
೨. ನಾಡು ನಾಡವರು
೩. ಇತಿಹಾಸ
೪. ಗಡಿವಿವಾದ; ಪ್ರಾದೇಶಿಕ ಅಸಮಾನತೆ
೫. ಗೋಕಾಕ ವರದಿ
೬. ಕರ್ನಾಟಕದ ಮೇರುವ್ಯಕ್ತಿಗಳು
೭. ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣ

ಇಲ್ಲಿನ ಬರಹಗಳಲ್ಲಿ ವ್ಯಕ್ತಗೊಳ್ಳುತ್ತಿರುವ ಚಿಂತನೆಗಳು ಮೌಲಿಕವೂ ಅನನ್ಯ ಮಾದರಿಯವೂ ಆಗಿವೆ. ಈ ಕೃತಿ ಮೂಲಕ ಕೃತಿಕಾರರು ತಾವು ಕಂಡ ಕರ್ನಾಟಕ ಮಾತ್ರವಲ್ಲ, ಕಾಣಬೇಕಾದ ಕರ್ನಾಟಕ ಯಾವುದೆಂಬ ಪರಿಪ್ರೇಕ್ಷ್ಯದ ಕಡೆ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಇಂದಿನ ಕರ್ನಾಟಕದ ಪಡಿಪಾಟಲುಗಳನ್ನು ಎತ್ತಿ ಹೇಳುವ ಈ ಕೃತಿಯ ಬರಹಗಳ ಹಿಂದೆ ಸ್ವಚ್ಛವಾದ ಮನಸ್ಸೊಂದು ಪ್ರಾಮಾಣಿಕವಾಗಿ ಮಿಡಿಯುತ್ತಿದೆ.

**೪೩೨. ಬಹುಭಾಷಿಕ ಸಂಸ್ಕೃತಿ**

ಲೇ: ರಹಮತ್ ತರೀಕೆರೆ

ಪುಟ: ii+೨೮, ವರ್ಷ: ೧೯೯೯, ರೂ: ೫.೦೦

ಕರ್ನಾಟಕದ ಬಹುಭಾಷಿಕ ಪರಿಸರದ ಸಾಂಸ್ಕೃತಿಕ ಸಿರಿವಂತಿಕೆ ಹಾಗೂ ರಾಜಕೀಯ ಕಷ್ಟಗಳ ಬಗ್ಗೆ ಮತ್ತು ಕರ್ನಾಟಕದಲ್ಲಿ ಬಹುಭಾಷಿಕ ಪರಿಸರದ ಸೃಷ್ಟಿ ನಂತರದ ಕೊಳುಕೊಡೆ ಸಂಘರ್ಷವು ಎಂಥವು ಎಂಬುದನ್ನು ಗ್ರಂಥದಲ್ಲಿ ಸವಿವರವಾಗಿ ಪ್ರಸ್ತಾಪಿಸಲಾಗಿದೆ.




**೪೩೩. Imagining Unimaginable Communities**

By. K.Raghavendra Rao

P.p 12+156, 2000, Rs. 90.00

This book explains the ideas of four important modern thinkers of Karnataka on the nature of nationalism and their complex relationship to regionalism and Kannada Culture.

## ೨೧

# ನ್ಯಾಯಶಾಸ್ತ್ರ

### ೪೩೪. ಕನ್ನಡದಲ್ಲಿ ಕಾನೂನು

ಲೇ: ಜಿ.ಎಮ್.ಪಾಟೀಲ

ಪುಟ: ii+೨೩, ವರ್ಷ: ೧೯೯೭, ರೂ: ೨.೦೦

ಇಂದಿನ ಲಭ್ಯ ಕಾನೂನು ಕನ್ನಡದಲ್ಲಿ ಇರಬೇಕಾದುದರ ಅವಶ್ಯಕತೆಯನ್ನು *ಈ* ಕೃತಿ ಚರ್ಚಿಸುತ್ತಲೇ ಜನರಿಗೆ ಅರ್ಥವಾಗದ ಭಾಷೆಯಲ್ಲಿ ಕಾನೂನುಗಳಿದ್ದರೆ ಅವುಗಳ ಬಳಕೆಯ ಬಗ್ಗೆ ಏಳುವ ಅಡ್ಡಿ ಆತಂಕಗಳನ್ನೂ ವಿವರಿಸುತ್ತದೆ.

### ೪೩೫. ಕರ್ನಾಟಕದಲ್ಲಿ ವಿದೇಶಿ ನಾಣ್ಯಗಳು

ಲೇ: ಎ.ವಿ.ನರಸಿಂಹಮೂರ್ತಿ

ಪುಟ: ii+೪೬, ವರ್ಷ: ೨೦೦೦, ರೂ: ೧೦.೦೦

ನಾಣ್ಯಶಾಸ್ತ್ರ ಪ್ರಾಚೀನ ಭಾರತೀಯ ಇತಿಹಾಸ ರಚನೆಗೆ ಉಪಯುಕ್ತವಾದ ಆಕರ ಹಾಗೂ ನಾಣ್ಯಗಳು ಒಂದು ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಪ್ರತಿಬಿಂಬಿಸಬಲ್ಲವು ಎಂದು ಪರಿಗಣಿಸಲಾಗಿದೆ. *ಈ* ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೊರಕಿರುವ ವಿದೇಶಿ ನಾಣ್ಯಗಳನ್ನು ಐತಿಹಾಸಿಕ ಚೌಕಟ್ಟಿನಲ್ಲಿ ಪರೀಕ್ಷಿಸಿ ಅವುಗಳ 'ಮೌಲ್ಯ'ವನ್ನು ಅರಿಯಲು *ಈ* ಕಿರುಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ. ಕರ್ನಾಟಕದಲ್ಲಿ ಹಿಂದೆ ಚಲಾವಣೆಯಲ್ಲಿದ್ದ ವಿದೇಶಿ ನಾಣ್ಯಗಳ  ಬಗ್ಗೆಯೂ *ಈ* ಪುಸ್ತಕ ಐತಿಹಾಸಿಕ ವಿವರ ನೀಡುತ್ತದೆ.

### ೪೩೬. ಕೋಚೆ ನ್ಯಾಯದೃಷ್ಟಿ

ಸಂ: ಎಚ್.ಎಂ.ಮರುಳಸಿದ್ಧಯ್ಯ

ಪುಟ: vi+೧೯೦, ವರ್ಷ: ೧೯೯೬, ರೂ: ೭೫.೦೦




ಪರಿವಿಡಿ

೧. ಸಂವಿಧಾನ, ಸಂವಿಧಾನದ ತಿದ್ದುಪಡಿ
೨. ನ್ಯಾಯಮೂರ್ತಿ-ನ್ಯಾಯಾಂಗ
೩. ಕಾರ್ಯಾಂಗ ನ್ಯಾಯಾಂಗ ಹಣಾಹಣಿ
೪. ಲೋಕಪಾಲಮಸೂದೆ; ಸುಪ್ರೀಂಕೋರ್ಟ್ ತೀರ್ಪು ಸಮೀಕ್ಷೆ
೫. ನ್ಯಾಯಾಲಯ ನಿಂದನೆ
೬. ನ್ಯಾಯಪರಿಪಾಲನಾ ಪದ್ಧತಿ
೭. ನ್ಯಾಯದಾನ ಪದ್ಧತಿ-ನ್ಯಾಯದಾನ ವಿಳಂಬ
೮. ಇತರ ನ್ಯಾಯಸಂಬಂಧಿ ವೈಚಾರಿಕ ಲೇಖನಗಳು

ಕನ್ನಡದ ನ್ಯಾಯತಜ್ಞ ಕೋ-ಚೆನ್ನಬಸಪ್ಪನವರ ಕಾನೂನು ಬರಹಗಳು *ಈ* ಕೃತಿಯಲ್ಲಿವೆ. ಕೋಚೆಯವರು ಕನ್ನಡದ ಬೇರೆ ಬೇರೆ ನಿಯತಕಾಲಿಕೆ ಹಾಗು ಪತ್ರಿಕೆಗಳಲ್ಲಿ ಕಾಯಿದೆ, ಕಾನೂನು, ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗಗಳ ಆಂತರಿಕ ಸಂಬಂಧಗಳ ಬಗ್ಗೆ ಹಾಗೂ ಅವು ಜನಜೀವನದ ಮೇಲೆ ಬೀರುವ ಪರಿಣಾಮಗಳ ಕುರಿತು ಬರೆದಿರುವ ಕಿರುಬರಹಗಳ ಸಂಗ್ರಹವಿದು.

### ೪೩೭. ಗ್ರಾಮೀಣ ನ್ಯಾಯ

ಲೇ: ಎಚ್.ವಿ.ನಾಗೇಶ್

ಪುಟ: ೩೪, ವರ್ಷ: ೧೯೯೪, ರೂ: ೧.೦೦

ಇಂದು ಬಂಡವಾಳಶಾಹಿ ವ್ಯವಸ್ಥೆ ಇದೆಯಾದರೂ ಇದಕ್ಕೆ ದಾರಿ ಮಾಡಿಕೊಟ್ಟ ಊಳಿಗ ಮಾನ್ಯ ವ್ಯವಸ್ಥೆ ಇನ್ನೂ ಸಂಪೂರ್ಣ ನಾಶವಾಗಿಲ್ಲ. ಕೆಲವು ಮೌಲ್ಯಗಳನ್ನು *ಈ* ಎರಡೂ ವ್ಯವಸ್ಥೆ ನಿಯಂತ್ರಿಸಿ-ನಿರ್ಧರಿಸುತ್ತವೆ. ಇಂಥವರಲ್ಲಿ 'ನ್ಯಾಯ'ದ ಪರಿಕಲ್ಪನೆಯೂ ಒಂದು. ಪ್ರಸ್ತುತ ಕಿರುಕೃತಿ ಗ್ರಾಮೀಣ ನ್ಯಾಯದಾನದ ಹಲವು ಮುಖಗಳನ್ನು ಮತ್ತು ಸರಕಾರಿ ವ್ಯವಸ್ಥೆಯಲ್ಲಿನ ನ್ಯಾಯದ ಬಗೆಗಳನ್ನು ಪರಿಚಯ ಮಾಡಿಕೊಡುತ್ತದೆ. *ಈ* ವಿಷಯ ಕುರಿತಂತೆ ಇದೊಂದು ಸ್ವತಂತ್ರ ಅಧ್ಯಯನ ಕೃತಿ. ದೇವರ ನ್ಯಾಯ, ಪಂಚಾಯ್ತಿ ನ್ಯಾಯ, ಸರಕಾರಿ ಪಂಚಾಯತ್ ನ್ಯಾಯದ ಬಗ್ಗೆ ಸಂಕ್ಷಿಪ್ತವಾದ ಸಮಗ್ರ ಮಾಹಿತಿ ಇಲ್ಲಿ ಲಭ್ಯವಿದೆ.

## ೨೨

# ಪತ್ರಿಕೆ-ಪತ್ರಿಕೋದ್ಯಮ-ಸಂವಹನ ಮಾಧ್ಯಮ




**೪೩೮. ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ**

ಲೇ: ಟಿ.ಸಿ. ಪೂರ್ಣಿಮಾ

ಪುಟ: XVI+೩೭೬, ವರ್ಷ: ೨೦೦೩, ರೂ: ೧೮೦.೦೦

ಪರಿವಿಡಿ

೧. ಸಂವಹನೆ

೨. ಸಮೂಹ ಸಂವಹನ ಮಾಧ್ಯಮಗಳು

೩. ಸಂವಹನ ಮಾಧ್ಯಮಗಳ ಸಮಾಜೋ-ರಾಜಕೀಯ ಆಯಾಮಗಳು

೪. ದೂರದರ್ಶನ

೫. ಆಕಾಶವಾಣಿ

೬. ಪತ್ರಿಕೆ

೭. ಸಂಹವನ ಮಾಧ್ಯಮಗಳ ಅನಿವಾರ್ಯತೆ

೮. ಕನ್ನಡ ಅಭಿವೃದ್ಧಿ

೯. ಸಂವಹನ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ

ಸಂವಹನ ಮತ್ತು ಸಮೂಹ ಸಂವಹನ ಮಾಧ್ಯಮಗಳ ಎಲ್ಲ ಆಯಾಮಗಳನ್ನು ಸೈದ್ಧಾಂತಿಕವಾಗಿ ಮತ್ತು ಸೃಜನಶೀಲತೆಯ ಅನ್ವೇಷಣೆಯ ಹಾದಿಯಲ್ಲಿ ಇಲ್ಲಿ ವಿಶದವಾಗಿ ಪರಿಶೀಲಿಸಲಾಗಿದೆ. ಕನ್ನಡ ಅಭಿವೃದ್ಧಿಯ ವಿನ್ಯಾಸದ ಹಾದಿಯಲ್ಲಿ ದೂರದರ್ಶನ, ಆಕಾಶವಾಣಿ ಮತ್ತು ಪತ್ರಿಕೆಯಂತಹ ಸಂವಹನ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಬಗ್ಗೆಯೂ *ಈ* ಕೃತಿಯಲ್ಲಿ ವಿವರಿಸಲಾಗಿದೆ.

**೪೩೯. ಕನ್ನಡದ ಪತ್ರಿಕೆಗಳು ಮತ್ತು ಸಾಹಿತ್ಯ**

ಲೇ: ಕೆ. ವಿಜಯಶ್ರೀ

ಪುಟ: ii+೩೨, ವರ್ಷ: ೨೦೦೦, ರೂ: ೧೦.೦೦

ಕನ್ನಡ ಪತ್ರಿಕೆಗಳು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಅವಲೋಕಿಸುವುದು *ಈ* ಕೃತಿಯ ಉದ್ದೇಶ. ಕನ್ನಡ ಪತ್ರಿಕೋದ್ಯಮದ ಇತಿಹಾಸವನ್ನು ಗಮನಿಸುತ್ತ ಸಾಹಿತ್ಯವು ವೃತ್ತಪತ್ರಿಕೆಗಳ ಮೂಲಕ ಹೇಗೆ ಪ್ರಚಾರ ಪಡೆಯುತ್ತ ಬಂದಿತು ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸ್ವಾತಂತ್ರ್ಯಾನಂತರ ನಮ್ಮ ಪತ್ರಿಕೆಗಳು ಸಾಹಿತ್ಯಕ್ಕೆ ಚಾಲಕಶಕ್ತಿಯಾದ ಬಗ್ಗೆ *ಈ* ಕಿರುಪುಸ್ತಕದಲ್ಲಿ ಸಂಕ್ಷಿಪ್ತ ಮಾಹಿತಿಗಳಿವೆ. ಕನ್ನಡ ಪತ್ರಿಕೋದ್ಯಮ ಮತ್ತು ಸಾಹಿತ್ಯ ಸಂಬಂಧವನ್ನು *ಈ* ಕೃತಿಯಲ್ಲಿ ಗುರುತಿಸಲಾಗಿದೆ.




**೪೪೦. ಸಂವಹನ ಮಾಧ್ಯಮಗಳು**

ಲೇ: ಬಿ.ಎಸ್. ಚಂದ್ರಶೇಖರ್

ಪುಟ: XVI+೩೧೦, ವರ್ಷ: ೨೦೦೩, ರೂ: ೧೫೦.೦೦

ಪರಿವಿಡಿ

೧. ಸಂವಹನ, ಸಮೂಹ ಸಂವಹನ

೨. ಮಾಧ್ಯಮಗಳ ಅಧ್ಯಯನಗಳು; ಪತ್ರಿಕೆ

೩. ಚಲನಚಿತ್ರ; ರೇಡಿಯೋ

೪. ಟೆಲಿವಿಷನ್

೫. ಉಪಗ್ರಹ ಟೆಲಿವಿಷನ್

೬. ಹೊಸ ಮಾಧ್ಯಮಗಳು

ಸಂವಹನ ಮಾಧ್ಯಮ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ ವ್ಯಾಪಕ ಪ್ರಯೋಗಗಳನ್ನು ಪರಿಣಾಮಗಳನ್ನು ಕುರಿತು *ಈ* ಕೃತಿಯಲ್ಲಿ ವಿವೇಚಿಸಿರುವುದಲ್ಲದೆ ಭಾರತ ಮತ್ತು ಕರ್ನಾಟಕದ ಮೇಲೆ *ಈ* ಮಾಧ್ಯಮಗಳು ಉಂಟುಮಾಡಿರುವ ಪರಿಣಾಮ ಮತ್ತು ಪ್ರಭಾವಗಳನ್ನು ಹಂತ ಹಂತವಾಗಿ ಅಗತ್ಯ ನಿದರ್ಶನಗಳ ಮೂಲಕ ಇಲ್ಲಿ ಚರ್ಚಿಸಲಾಗಿದೆ.

## ೨೩

# ಪರಿಸರ-ನೀರು-ನೀರಾವರಿ

**೪೪೧. ಕನ್ನಡ ಅಧ್ಯಯನ : ಕರ್ನಾಟಕದ ಪರಿಸರ (ಸಂಪುಟ ೨)**

ಸಂ: ಕೆ.ಜಿ.ವಾಸುಕಿ

ಪುಟ: viii+೧೯೬, ವರ್ಷ: ೧೯೯೫, ರೂ: ೫೦.೦೦

ಪರಿವಿಡಿ

೧. ಭೂಕಂಪನಗಳು; ಪರಿಸರ ಭೂವಿಜ್ಞಾನ

೨. ಜೀವವೈವಿಧ್ಯತೆ; ಪಶ್ಚಿಮ ಘಟ್ಟಗಳ ಪಕ್ಷಿಗಳು

೩. ಪರಿಸರ ಮಾಲಿನ್ಯ : ನದಿ ಮಾಲಿನ್ಯ, ವಾಯು ಮಾಲಿನ್ಯ

೪. ಪರಿಸರ ಶಿಕ್ಷಣ

೫. ಪರಮಾಣು ಸ್ಥಾವರಗಳು; ಜಲವಿದ್ಯುತ್ ಕೇಂದ್ರಗಳು

೬. ಪಶ್ಚಿಮ ಘಟ್ಟಗಳಲ್ಲಿ ಗಣಿಗಾರಿಕೆ

ಕನ್ನಡ ವಿಶ್ವವಿದ್ಯಾಲಯದ ದ್ವೈವಾರ್ಷಿಕ ನಿಯತಕಾಲಿಕೆಯಾಗಿರುವ 'ಕನ್ನಡ ಅಧ್ಯಯನ'ದ ಪ್ರತೀ ಸಂಚಿಕೆ ಒಂದೊಂದು ಪ್ರಮುಖ ಕ್ಷೇತ್ರದ ಬಗ್ಗೆ ಅಥವ ವಿಚಾರಕ್ಕೆ ಸ್ಪಂದಿಸುತ್ತ ಆ ಕ್ಷೇತ್ರದ ಬಗ್ಗೆ ಹೊಸಬೆಳಕು ಚೆಲ್ಲುವಂತಹದ್ದು. ಆ ಕಾರಣಕ್ಕೆ ಇದನ್ನು ಪುಸ್ತಕವೆಂದು ಪರಿಗಣಿಸಬಹುದಾಗಿದೆ. *ಈ* ಸಂಚಿಕೆ 'ಕರ್ನಾಟಕ ಪರಿಸರ'ದ ಬಗ್ಗೆ ತನ್ನ ಪುಟಗಳನ್ನು ಮೀಸಲಿಟ್ಟಿದೆ. ನಾಡಿನ ಬಹುಮುಖ್ಯ ಪರಿಸರ ವಿಜ್ಞಾನಿಗಳು ವಿಚಾರಸಂಕಿರಣವೊಂದರಲ್ಲಿ ನಡೆಸಿರುವ ವಿಚಾರ ವಿನಿಯಮಗಳೇ *ಈ* ಪುಸ್ತಕ ರೂಪದ ನಿಯತಕಾಲಿಕೆ ಸಂಚಿಕೆಯಲ್ಲಿದೆ.

**೪೪೨. ಕರ್ನಾಟಕದಲ್ಲಿ ಕೆರೆ ನೀರಾವರಿ**

ಆಂಗ್ಲ ಮೂಲ: ಜಿ.ಎಸ್.ದೀಕ್ಷಿತ್ ಮತ್ತು ಇತರರು

ಅನು: ನೀಲತ್ತಹಳ್ಳಿ ಕಸ್ತೂರಿ

ಪುಟ: xiv+೨೫೨, ವರ್ಷ: ೨೦೦೦, ರೂ: ೧೫೦.೦೦




ಪರಿವಿಡಿ

೧. ಪ್ರಾಚೀನ ಕಾಲ

೨. ಮಧ್ಯಯುಗ

೩. ಬ್ರಿಟಿಷರ ಕಾಲ ಮತ್ತು ಅನಂತರ

೪. ನಿರ್ಮಾಣ ಮತ್ತು ಸಂರಕ್ಷಣೆ

೫. ಜಲ ನಿರ್ವಹಣೆ ಮತ್ತು ಹಣಕಾಸು

೬. ಸಲಹೆಗಳು

*ಈ* ಗ್ರಂಥ 'ಟ್ಯಾಂಕ್ ಇರ್ರಿಗೇಷನ್ ಇನ್ ಕರ್ನಾಟಕ-ಎ ಹಿಸ್ಟಾರಿಕಲ್ ಸರ್ವೆ' ಎಂಬ ಇಂಗ್ಲೀಷ್ ಗ್ರಂಥದ ಅನುವಾದ. ಇತಿಹಾಸ ಪೂರ್ವಕಾಲದಿಂದ ಇಂದಿನವರೆಗೆ ಕರ್ನಾಟಕದಲ್ಲಿ ಕಟ್ಟಲಾಗಿರುವ ಕೆರೆಗಳು ಮತ್ತವುಗಳ ಸಂರಕ್ಷಣೆಯ ಬಗ್ಗೆ *ಈ* ಗ್ರಂಥದಲ್ಲಿ ಮಹತ್ತ್ವದ ವಿಷಯಗಳಿವೆ.




**೪೪೩. ಕೆರೆ ನೀರಾವರಿ ನಿರ್ವಹಣೆ : ಚಾರಿತ್ರಿಕ ಅಧ್ಯಯನ**

ಸಂ: ರಾಜಾರಾಮ ಹೆಗಡೆ

ಪುಟ: xvi+೧೬೪, ವರ್ಷ: ೨೦೦೨, ರೂ: ೮೦.೦೦

ಪರಿವಿಡಿ

೧. ಕೆರೆಗಳು ಚಾರಿತ್ರಿಕ ಅಂಶಗಳು

೨. ಹಳೆಯ ಕೆರೆಗಳು ಕಟ್ಟಡದಲ್ಲಿನ ತಾಂತ್ರಿಕ ವಿಶಿಷ್ಟತೆ

೩. ಮಧ್ಯಕಾಲೀನ ಕೆರೆಗಳ ತಾಂತ್ರಿಕತೆ ಮತ್ತು ಮಿತಿಗಳು; ಮಧ್ಯಕಾಲೀನ ಕರ್ನಾಟಕದಲ್ಲಿ ಕೆರೆಗಳ ನಿರ್ವಹಣೆ

೪. ಪ್ರಾಚೀನ ಕರ್ನಾಟಕದ ಜಲನಿರ್ವಹಣೆಯಲ್ಲಿ ಜನ(ಸಾ)ಮಾನ್ಯರ ಪಾತ್ರ; ಪ್ರಾಚೀನ ಕರ್ನಾಟಕದ ಕೆರೆಗಳು : ಒಂದು ಟಿಪ್ಪಣಿ

೫. ಸೊರಬ ತಾಲೂಕಿನ ಕೆರೆಗಳು ಮತ್ತು ಅವುಗಳ ಮಹತ್ವ; ಕೆಳದಿ ಕಾಲದಲ್ಲಿ ನೀರಾವರಿ ವ್ಯವಸ್ಥೆ

೬. ಫ್ರಾನ್ಸಿಸ್ ಬುಖಾನನ್ ಕಂಡಂತೆ ಕರ್ನಾಟಕದ ನೀರಾವರಿ ಬೆಳೆಗಳು

೭. ಚಿತ್ರದುರ್ಗ ಪ್ರದೇಶದ ಕೆರೆಗಳು : ನಿರ್ವಹಣೆಯ ಐತಿಹಾಸಿಕ ಅವಲೋಕನ

೮. ಕೆರೆ ನಿರ್ಮಾತೃಗಳು

೯. ಕರಾವಳಿ ಕರ್ನಾಟಕದ ನೀರಾವರಿ ಇತಿಹಾಸ

೧೦. ಶಾಂತಿ ಸಾಗರ : ಒಂದು ಅಧ್ಯಯನ

ಜನಜೀವನಕ್ಕೆ ಮೂಲಾಧಾರವಾಗಿರುವ ನೀರು ಹಾಗೂ ನೀರಿನ ಸಮರ್ಥ ಬಳಕೆಗಳಲ್ಲಿ ಒಂದಾದ ಕೆರೆ ನೀರಾವರಿ ಕುರಿತಾದ ಮಾಹಿತಿ ಇಲ್ಲಿದೆ. ಅಂತಹ ಕೆರೆ ನೀರಾವರಿ ಕುರಿತಾದ ಸಮರ್ಥ ನಿರ್ವಹಣೆಯನ್ನು ಇತಿಹಾಸ ಪ್ರಸಿದ್ಧ ಸಾಮ್ರಾಜ್ಯಗಳು ಅನುಸರಿಸಿದ ಬಗೆ *ಈ* ಕೃತಿಯಲ್ಲಿ ಚರ್ಚಿತವಾಗಿದೆ. ಆ ಕಾಲದಲ್ಲಿದ್ದ ತಾಂತ್ರಿಕ ಕೌಶಲತೆ ಇತ್ಯಾದಿ ಚಾರಿತ್ರಿಕ ಅಂಶಗಳನ್ನು ವಿವಿಧ ಶಿಸ್ತುಗಳ ಅಧ್ಯಯನಕಾರರು ಅಧ್ಯಯಿನಿಸಿ ಇಲ್ಲಿ ದಾಖಲಿಸಿದ್ದಾರೆ.




**೪೪೪. ಜಲಸಂಬಂಧಿ ಚಳವಳಿಗಳು**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: xii+೧೪೪, ವರ್ಷ: ೧೯೯೯, ರೂ: ೭೦.೦೦

ಪರಿವಿಡಿ

೧. ಜಲದ ಹಿನ್ನೆಲೆ ಮತ್ತು ನೀರಾವರಿಯ ಬೆಳವಣಿಗೆ
೨. ನದಿಗಳ ಉಗಮ ಮತ್ತು ಭೌಗೋಳಿಕ ಪರಿಚಯ
೩. ಅಣೆಕಟ್ಟುಗಳ ನಿರ್ಮಾಣ ಯೋಜನೆ
೪. ಅಂತರ್‌ರಾಜ್ಯ ನದಿನೀರು ವಿವಾದ ಮತ್ತು ಚಳವಳಿಗಳು
೫. ಕರ್ನಾಟಕದ ಆಂತರಿಕ ಜಲಸಮಸ್ಯೆ ಕುರಿತ ಚಳವಳಿಗಳು
೬. ಪ್ರಚಲಿತ ಮತ್ತು ಸಂಭವನೀಯ ಚಳುವಳಿಗಳು

ಏಕೀಕರಣೋತ್ತರ ಸಂದರ್ಭದಲ್ಲಿ ಸಂಭವಿಸಿದ ಚಳವಳಿಗಳ ಪೈಕಿ ನದಿ ನೀರು ವಿವಾದ ಪ್ರಮುಖವಾದುದು. ಕರ್ನಾಟಕದ ಮಟ್ಟಿಗೆ ಕಾವೇರಿ, ತುಂಗಭದ್ರಾ, ಕೃಷ್ಣ, ಮೇಲ್ದಂಡೆ ಯೋಜನೆ ಮೊದಲಾದವುಗಳ ಬಗ್ಗೆ ಇರುವ ವಿವಾದ ಮತ್ತು ಚಳವಳಿಗಳನ್ನು ಇಲ್ಲಿ ವಿಶ್ಲೇಷಿಸ ಲಾಗಿದೆ. ಆ ಮೂಲದ ನದಿಗಳ ಉಗಮ, ಉಪಯೋಗ, ಅಣೆಕಟ್ಟುಗಳ ನಿರ್ಮಾಣ, ನದಿ ನೀರು ವಿವಾದ, ರಾಜ್ಯದ ಆಂತರಿಕ ಮತ್ತು ಅಂತರ್‌ರಾಜ್ಯದ ವಿವಾದಗಳಲ್ಲದೆ, ಕುಡಿಯುವ ನೀರಿನ ಸಮಸ್ಯೆಯ ಬಗೆಗೂ ಇಲ್ಲಿ ಚರ್ಚಿಸಲಾಗಿದೆ. ಬೃಹತ್, ಮಧ್ಯಮ ಮತ್ತು ಸಣ್ಣ ನೀರಾವರಿಗಳ ಬಗ್ಗೆ ಸೂಕ್ಷ್ಮವಾದ ಒಳನೋಟಗಳನ್ನು ಇಲ್ಲಿ ಕಾಣಬಹುದು.




**೪೪೫. ಪರಿಸರ ಚಳವಳಿಗಳು**

ಲೇ: ಕೆ. ಮೋಹನ್‌ಕೃಷ್ಣ ರೈ

ಪುಟ: x+೧೦೦, ವರ್ಷ: ೧೯೯೯, ರೂ: ೫೦.೦೦

ಪರಿವಿಡಿ

೧. ಪರಿಸರ ಚಳವಳಿ, ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳು
೨. ಪ್ರಮುಖ ಪರಿಸರ ಚಳವಳಿಗಳು

ಪ್ರಸ್ತುತ ಗ್ರಂಥದಲ್ಲಿ ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಪ್ರಮುಖ ಪರಿಸರ ಚಳುವಳಿ ಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಪರಿಸರ ಸಂಘಟನೆಗಳು, ಸಂಘ ಸಂಸ್ಥೆಗಳು ಹಾಗು ಪರಿಸರವಾದಿಗಳ ಕಾರ್ಯಚಟುವಟಿಕೆ ಮತ್ತು ವಿಚಾರಗಳು *ಈ* ಗ್ರಂಥದಲ್ಲಿ ದಾಖಲಾಗಿವೆ.

**೪೪೬. ಪರಿಸರ ಮತ್ತು ಅಭಿವೃದ್ಧಿ**

ಲೇ: ಎಂ. ಚಂದ್ರಪೂಜಾರಿ

ಪುಟ: ii+೩೦, ವರ್ಷ: ೧೯೯೮, ರೂ: ೩.೦೦

ಪರಿಸರ ಮತ್ತು ಅಭಿವೃದಿ ಪರಿಕಲ್ಪನೆಗಳ ಸಂಬಂಧದ ವಿಶ್ಲೇಷಣೆ *ಈ* ಕೃತಿಯಲ್ಲಿದೆ. *ಈ* ಕೃತಿ ಮೂರು ಬಗೆಯ ಚರ್ಚೆಗಳನ್ನಿಲ್ಲಿ ಒಳಗೊಂಡಿದೆ. ೧. ಪರಿಸರ ಸಂಬಂಧಿತ ಚರ್ಚೆಗಳು ಯಾವ ವಿಚಾರದ ಸುತ್ತ ಹೆಣೆಯಲ್ಪಟ್ಟಿವೆ. ೨. ಅಭಿವೃದ್ಧಿಯ ಪರಿಕಲ್ಪನೆ ರೂಪುಗೊಂಡ ಬಗೆ ಮತ್ತು ಇದು ಆಧುನೀಕರಣ ಪ್ರಕ್ರಿಯೆಯ ಮುಖ್ಯ ಅಂಶ ಹೇಗೆ ೩. ಪರಿಸರದ ಸಂಬಂಧಿತ ಚಳವಳಿಗಳ ಸಂದರ್ಭದಲ್ಲಿ ರೂಪುಗೊಂಡ ಪ್ರಮುಖ ವಿಚಾರಗಳ ಬಗ್ಗೆ ಇಲ್ಲಿ ಚರ್ಚಿಸ ಲಾಗಿದೆ.

**೪೪೭. ಪರಿಸರ ವಿಜ್ಞಾನ**

ಲೇ: ಜಿ.ಎಸ್. ಜಯದೇವ

ಪುಟ: XII+೧೦೦, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಪರಿಸರದಲ್ಲಿ ಶಕ್ತಿ ಮೂಲಗಳು
೨. ಜೀವಿಗಳ ಆವಾಸ ನೆಲೆ
೩. ಪರಿಸರ ವ್ಯವಸ್ಥೆಗಳ ವಿಂಗಡಣೆ
೪. ಜೀವವೈವಿಧ್ಯತೆ ಮತ್ತು ಪರಿಸರ
೫. ಅಪಾಯದ ಅಂಚಿನಲ್ಲಿರುವ ಜೀವ ಜಾತಿಗಳು

ನಮ್ಮ ಪರಿಸರ, ಅದರ ಸಂರಕ್ಷಣೆಯ ಅಗತ್ಯ, *ಈ* ಪರಿಸರದಲ್ಲಿರುವ ಶಕ್ತಿ ಮೂಲ, ಜೀವಿಗಳ ವೈವಿಧ್ಯತೆ, ಅಪಾಯದ ಅಂಚಿನಲ್ಲಿರುವ ಜೀವ ಜಾತಿಗಳು, ಅವುಗಳ ರಕ್ಷಣಾ ಕ್ರಮಗಳು, ಪರಿಸರದಲ್ಲಿ ಭೂ ಸವಕಳಿ, ಅದರಿಂದಾಗುವ ಕಷ್ಟ ನಷ್ಟ.... ಇತ್ಯಾದಿ ಪರಿಸರ ಸಂಬಂಧವಾದ ಸಮಸ್ಯೆ ಹಾಗೂ ಕಾಳಜಿಯ ಬಗ್ಗೆ ಎಲ್ಲ ಜನಸಮಾನ್ಯರಿಗೂ ಅರ್ಥವಾಗು ವಂತಹ ನಿರೂಪಣೆ ಹಾಗೂ ಭಾಷೆಯಿಂದ *ಈ* ಕೃತಿಯನ್ನು ರಚಿಸಲಾಗಿದೆ.




**೪೪೮. ರೈತ ಚಳವಳಿಗಳು**

ಲೇ: ತಂಬಂಡ ವಿಜಯ್ ಪೂಣಚ್ಚ

ಪುಟ: x+೭೦, ವರ್ಷ: ೧೯೯೯, ರೂ: ೪೦.೦೦

ಪರಿವಿಡಿ

೧. ಪ್ರಸ್ತಾವನೆ ಮತ್ತು ರೈತ ಚಳವಳಿಗಳ ಹಿನ್ನೆಲೆ
೨. ಕರ್ನಾಟಕ ಪ್ರಾಂತ್ಯ ರೈತಸಂಘ ಮತ್ತು ರೈತ ಚಳವಳಿ
೩. ಮಲಪ್ರಭಾ ರೈತರ ಚಳವಳಿ, ಕರ್ನಾಟಕ ರಾಜ್ಯ ರೈತಸಂಘದ ಉದಯ ಮತ್ತು ಚಳವಳಿ ಮಾದರಿಗಳು

*ಈ* ಕೃತಿಯು ಏಕೀಕರಣೋತ್ತರ ಕರ್ನಾಟಕದ ರೈತ ಚಳಿವಳಿಗೆ ಸಂಬಂಧಿಸಿದ ವಿವರಗಳು ಹಾಗೂ ಚಳವಳಿಗಳ ಹಿನ್ನೆಲೆಯಿಂದ ಹಿಡಿದು ಕರ್ನಾಟಕ ಪ್ರಾಂತ್ಯ ರೈತಸಂಘ ಮತ್ತು ಅದರ ಚಳವಳಿ, ಮಲಪ್ರಭಾ ರೈತರ ಚಳುವಳಿ, ಕರ್ನಾಟಕ ರಾಜ್ಯರೈತ ಸಂಘದ ಉದಯ ಹಾಗೂ ಚಳವಳಿಗಳ ಮಾದರಿಗಳ ಬಗ್ಗೆ *ಈ* ಗ್ರಂಥದಲ್ಲಿ ವಿವರವಾಗಿ ದಾಖಲಿಸಲಾಗಿದೆ.

**೪೪೯. ಸಾಲು ಮರಗಳು**

ಲೇ: ಪಿ. ಸತ್ಯನಾರಾಯಣ ಭಟ್

ಪುಟ: ii+೩೦, ವರ್ಷ: ೧೯೯೯, ರೂ: ೧೦.೦೦

ಸಾಲುಮರಗಳ ಇತಿಹಾಸ, ಪರಿಸರದಲ್ಲಿ ಅವುಗಳ ಆವಶ್ಯಕತೆ ಹಾಗೂ ಯಾವ ಜಾತಿಯ ಮರಗಳು ಸಾಲು ಮರಗಳಾಗಿ 'ಮರ ನೆಡುವಿಕೆಯ' ಮೂಲ ಉದ್ದೇಶಗಳನ್ನು *ಈ*ಡೇರಿಸಬಲ್ಲವು ಎಂಬುದರ ಬಗ್ಗೆ *ಈ* ಕೃತಿಯಲ್ಲಿ ಸ್ಪಷ್ಟ ವಿವರಣೆಯಿದೆ.




**೪೫೦. ಹಂಪಿ ಪರಿಸರದ ಕೆರೆಗಳು**

ಲೇ: ಸಿ.ಎಸ್.ವಾಸುದೇವನ್

ಪುಟ: xiv+೧೦೨, ವರ್ಷ: ೨೦೦೧, ರೂ: ೫೦.೦೦

ಪರಿವಿಡಿ

೧. ಪ್ರಾಚೀನ ಭಾರತದಲ್ಲಿ ಕೆರೆ ನೀರಾವರಿ ಪದ್ಧತಿ
೨. ವಿಜಯನಗರ ಕಾಲದ ಕೆರೆ ನೀರಾವರಿ ಪದ್ಧತಿ
೩. ಹೊಸಪೇಟೆ ತಾಲೂಕಿನ ವಿಜಯನಗರ ಕಾಲದ ಕೆರೆಗಳು
೪. ವಿಜಯನಗರ ಕಾಲದ ಕೆರೆ ತೆರಿಗೆ ಪದ್ಧತಿ
೫. ಕೆರೆಗಳು ನಂಬಿಕೆ ಮತ್ತು ಆಚರಣೆಗಳು

ಹಂಪಿಯ ಪರಿಸರದ ೨೫ಕ್ಕೂ ಹೆಚ್ಚು ಕೆರೆಗಳ ಪರಿಚಯ *ಈ* ಗ್ರಂಥದಲ್ಲಿದೆ. *ಈ* ಕೆರೆಗಳು ಪ್ರಾಚೀನಕಾಲದ ಕೆರೆ ನೀರಾವರಿ ಪದ್ಧತಿಯ ಬಗ್ಗೆಯೂ ಸ್ಥೂಲ ಚರಿತ್ರೆಯನ್ನು ಬಿಚ್ಚಿಡುತ್ತವೆ ಅಲ್ಲದೆ, ಪ್ರಾಚೀನ ಭಾರತದ ಮತ್ತು ಕರ್ನಾಟಕದ ಹಾಗೂ ವಿಶೇಷವಾಗಿ ವಿಜಯನಗರ ಕಾಲದ ಕೆರೆ ನೀರಾವರಿಯ ಅಪರೂಪದ ವಿವರಗಳು *ಈ* ಗ್ರಂಥದಲ್ಲಿವೆ. ಕೆರೆಗಳಿಗೆ ಸಂಬಂಧಿಸಿದಂತೆ *ಈ* ಕಾಲದಲ್ಲಿ ರೂಢಿಯಲ್ಲಿದ್ದ ನಂಬಿಕೆ-ಆಚರಣೆಗಳನ್ನೂ ಇಲ್ಲಿ ದಾಖಲಿಸಲಾಗಿದೆ.

## ೨೪

# ಬುಡಕಟ್ಟು ಅಧ್ಯಯನ ಮತ್ತು ಬುಡಕಟ್ಟು ಕಾವ್ಯ-ಕಥನ

**೪೫೧. ಆದಿವಾಸಿ ಸಮುದಾಯಗಳ ಅಭಿವೃದ್ಧಿ**

ಲೇ: ಸಿ. ಪಾರ್ವತಮ್ಮ

ಪುಟ: xii+೧೧೨, ವರ್ಷ: ೨೦೦೭, ರೂ: ೬೦.೦೦

ಪರಿವಿಡಿ

೧. ಅಧ್ಯಯನದ ಯೋಜನೆ

೨. ಕರ್ನಾಟಕ ಹಾಗೂ ಮೈಸೂರು ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ

೩. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ (ವಿ.ಜಿ.ಕೆ.ಕೆ.) ವಹಿಸಿರುವ ಪಾತ್ರದ ಮೌಲ್ಯಮಾಪನ

೪. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್

೫. ಡೀಡ್ ಸಂಸ್ಥೆ

೬. ಮೂರು ಸ್ವಯಂ ಸೇವಾ ಸಂಸ್ಥೆಗಳ ತೌಲನಿಕ ಅಧ್ಯಯನ

೭. ಬುಡಕಟ್ಟು ಅಭಿವೃದ್ಧಿ

ಆದಿವಾಸಿ ಸಮುದಾಯಗಳ ನಡುವೆ ನಿರಂತರವಾಗಿ ಕೆಲಸ ಮಾಡುತ್ತ ಬಂದ *ಈ* ಕೃತಿಯ ಲೇಖಕರ ಅಧ್ಯಯನವು ಅಪೂರ್ವ ಮಾಹಿತಿಗಳನ್ನು ಒಳಗೊಂಡಿದೆ ಬುಡಕಟ್ಟು ಕುರಿತು ಅವರ ವಿಶಿಷ್ಟ ಚಿಂತನೆಗಳು ಇಲ್ಲಿ ಸಂಕಲಿತಗೊಂಡಿವೆ.

**೪೫೨. ಕೃಷ್ಣಗೊಲ್ಲರ ಕಥನಕಾವ್ಯಗಳು**

ಸಂ: ಕೆ.ಎಂ.ಮೈತ್ರಿ

ಪುಟ: xii+೩೪೮, ವರ್ಷ: ೨೦೦೦, ರೂ: ೧೮೦.೦೦

ಪರಿವಿಡಿ

೧. ಪ್ರಸ್ತಾವನೆ, ಮದುವೆ ಪದಗಳು

೨. ಹಾಲೊತ್ತುವ ಪದ



೩. ವಳ್ಳಕ್ಕಿ ಪೂಜೆ

೪. ಅಸೆ ಬರೆಯುವ ಪದ

೫. ಧಾರೆ

೬. ಜಾಡಿ

೭. ಅಕ್ಕಿ ತೊಳೆಯುವ ಪದ

೮. ಮುತ್ತೈದೆ ಪದ

ಇಲ್ಲಿನ ಕಾವ್ಯಗಳನ್ನು ಹಾಡಿದವರು ಚಳ್ಳಕೆರೆ ತಾಲೂಕಿನ ಶ್ರೀಮತಿ ಭೂಮನೋರ *ಈ*ರಮ್ಮ ಮತ್ತು ಇತರರು. ಕೃಷ್ಣಗೊಲ್ಲ ಬುಡಕಟ್ಟು ಸಂಸ್ಕೃತಿಯ ಕಥನಗಳನ್ನು ಒಳಗೊಂಡಿರುವ *ಈ* ಗ್ರಂಥದಲ್ಲಿ ಒಟ್ಟು ೮ ಕಥನ ಕಾವ್ಯಗಳಿದ್ದು, ಅದಕ್ಕೆ ಸಂಬಂಧಿಸಿದಂತೆ ೭ ಮದುವೆ ಪದಗಳೂ ಇದರಲ್ಲಿವೆ.

**೪೫೩. ಕಾಮಗೇತಿ ವಂಶಜರ ಚರಿತ್ರೆ**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: x+೮೦, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಬೇಡ ನಾಯಕರ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆ

೨. ಬೇಡ ನಾಯಕರ ಕಟ್ಟೆಮನೆಗಳ ಸ್ಥಾಪನೆ ಹಾಗೂ ನ್ಯಾಯಪಂಚಾಯ್ತಿ

೩. ಕಾಮಗೇತನಹಳ್ಳಿ ಆಚಾರದ ಕಟ್ಟೆಮನೆ ಸ್ಥಾಪನೆ

೪. ಕಾಮಗೇತಿ ವಂಶಜರ ರಾಜಕೀಯ ಚರಿತ್ರೆ

ಮ್ಯಾಸನಾಯಕರ ಒಂದು ಬೆಡಗಾಗಿರುವ ಕಾಮಗೇತಿ ಎನ್ನುವುದು ಒಂದು ವಂಶಜರ ಚರಿತ್ರೆಯಾಗಿ ರೂಪುಗೊಂಡು ಮತ್ತು ಐತಿಹಾಸಿಕವಾಗಿ ಬೆಳೆದುಬಂದ ಸಂಕಥನವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಬೇಡ ನಾಯಕರ ಚಾರಿತ್ರಿಕ ಹಿನ್ನೆಲೆಯಿಂದ ತೊಡಗಿ ಅವರ ಕಟ್ಟೆಮನೆಗಳಿಂದ ಮುಂದುವರೆದು, ನ್ಯಾಯ ಕಟ್ಟೆಗಳವರೆಗೆ ಹಾಗೂ ಕಾಮಗೇತನಹಳ್ಳಿ ಆಚಾರದ ಕಟ್ಟೆಮನೆ ಬಗ್ಗೆ ಇಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಕಾಮಗೇತಿ ಸಮುದಾಯದ ಚರ್ಚೆ ಮತ್ತು ಸಂಸ್ಕೃತಿಯನ್ನೂ ಇಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ.

**೪೫೪. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ**

ಸಂ: ಕೆ.ಎಂ.ಮೈತ್ರಿ

ಪುಟ: xxv+೮೦೫, ವರ್ಷ: ೧೯೯೭, ರೂ: ೧೭೫.೦೦



ಕುಮಾರರಾಮ ಹಾಗು ಕೃಷ್ಣಗೊಲ್ಲರ ಮಹಾಕಾವ್ಯ ಎಂಬ ಎರಡೂ ಮಹಾಕಾವ್ಯಗಳು ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದ ಬೃಹತ್ ಕಥಾನಕಗಳು. ಕೃಷ್ಣಗೊಲ್ಲರ ಮಹಾಕಾವ್ಯ ಕೃಷ್ಣಗೊಲ್ಲ ಸಮುದಾಯಕ್ಕೆ ಮಹಾಕಾವ್ಯವಾದರೆ, ಕುಮಾರರಾಮನ ಕಾವ್ಯ ಬೇಡವಾಲ್ಮೀಕಿ, ನಾಯಕ, ಗಂಗಾಮತಸ್ಥ ಸಮುದಾಯಗಳಿಗೆ ಪೂಜ್ಯನೀಯವಾದ ಕೃತಿ. ಕುಮಾರರಾಮ ಮಹಾಕಾವ್ಯದಲ್ಲಿ ಕಥಾನಾಯಕ ಕುಮಾರರಾಮನ ಬಗ್ಗೆ ಐತಿಹಾಸಿಕ ವಿವರಣೆಯಿದೆ. ಕೃಷ್ಣಗೊಲ್ಲರ ಕಾವ್ಯದಲ್ಲಿ ಶರಬಂಧರಾಜ ಸಾಂಸ್ಕೃತಿಕ ಕಥಾನಾಯಕನಾದ ಬಗ್ಗೆ ವಿವರಗಳಿವೆ. *ಈ* ಎರಡೂ ಮಹಾಕಾವ್ಯಗಳ ಮೌಖಿಕ ಪರಂಪರೆಯ ಸಂಪಾದನಾ ಗ್ರಂಥವಿದು. ಬಳ್ಳಾರಿ ಜಿಲ್ಲೆಯ ಬುಡ್ಗ ಜಂಗಮ ಸಮುದಾಯದ ದರೋಜಿ *ಈ*ರಮ್ಮ ಮತ್ತು ಆಕೆಯ ಸಂಗಡಿಗರಿಂದ ಹಾಡಿಸಿ *ಈ* ಕಾವ್ಯಗಳನ್ನು ಸಂಪಾದಿಸಲಾಗಿದೆ.



**೪೫೫. ಗೊಂಡರ ರಾಮಾಯಣ**

ಸಂ: ಹಿ.ಚಿ.ಬೋರಲಿಂಗಯ್ಯ

ಪುಟ: xii+೧೮೭, ವರ್ಷ: ೧೯೯೯, ರೂ: ೯೦.೦೦

ತಿಮ್ಮಪ್ಪಗೊಂಡ ಹಾಡಿದ ಗೊಂಡರ ರಾಮಾಯಣವನ್ನು ಇಲ್ಲಿ ಸಂಪಾದಿಸಲಾಗಿದೆ. ಮೌಖಿಕ ಪರಂಪರೆಯಲ್ಲಿ ಕಾಲದಿಂದ ಕಾಲಕ್ಕೆ, ಬಾಯಿಂದ ಬಾಯಿಗೆ ಬೆಳೆದು ಬಂದ ಹಲವು ಬುಡಕಟ್ಟು ರಾಮಾಯಣಗಳಿವೆ. ಇಂಥ ಅನೇಕ ಬುಡಕಟ್ಟು ರಾಮಾಯಣಗಳ ಸ್ವರೂಪವನ್ನು ಅವುಗಳ ಬಗ್ಗೆ ವಿದ್ವಾಂಸರು, ಸಂಶೋಧಕರು, ಚಿಂತಕರು ಹಾಗೂ ಇತಿಹಾಸಕಾರರು ಪಟ್ಟಿರುವ ಅಭಿಪ್ರಾಯಗಳನ್ನು *ಈ* ತಿಮ್ಮಪ್ಪಗೊಂಡರ ರಾಮಾಯಣದ ಮುಖೇನವೇ ಪ್ರಸ್ತಾಪಿಸಿ ತುಲನೆ ಮಾಡುವ ಸಂಕ್ಷಿಪ್ತ ರೂಪದ ಬರಹವೂ ಇಲ್ಲಿದೆ.



**೪೫೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು**

ಲೇ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: xvi+೨೫೮, ವರ್ಷ: ೨೦೦೨, ರೂ: ೧೫೦.೦೦

ಪರಿವಿಡಿ

೧. ಬುಡಕಟ್ಟು ಪರಿಚಯ

೨. ವೀರರು : ತಾತ್ವಿಕ ಚಿಂತನೆ

೩. ಬೇಡ ನಾಯಕ ವೀರರ ಆರಾಧನಾ ಕ್ಷೇತ್ರಗಳು

೪. ಮ್ಯಾಸ ನಾಯಕ ಪರಂಪರೆಯಲ್ಲಿ ಬುಡಕಟ್ಟು ವೀರರು

೫. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು

೬. ಬುಡಕಟ್ಟು ವೀರರು ಧಾರ್ಮಿಕ ಪಂಥ ಮತ್ತು ಸಾಂಸ್ಕೃತಿಕ ಪರಂಪರೆ

ಮ್ಯಾಸಬೇಡರ ಮೌಖಿಕ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನ ಇಲ್ಲಿದೆ. ಚಿತ್ರದುರ್ಗ ಜಿಲ್ಲೆಯ ಮುಖ್ಯ ಬುಡಕಟ್ಟುಗಳಲ್ಲಿ ಒಂದಾದ ಮ್ಯಾಸಬೇಡ ಬುಡಕಟ್ಟು ಜನಾಂಗದ ವಿಶಿಷ್ಟ ಅಧ್ಯಯನವನ್ನು ಮತ್ತು ಚಿಂತನೆಯನ್ನು *ಈ* ಕೃತಿ ಒಳಗೊಂಡಿದೆ. ಹಾಗು *ಈ* ಬುಡಕಟ್ಟಿನ ವೀರರು ಮತ್ತು ಅವರಿಂದಾಗಿ ಹುಟ್ಟಿಕೊಂಡ ಸಾಂಸ್ಕೃತಿಕ ನಡುವಳಿಕೆಗಳ ವಿವರಗಳನ್ನೂ ಇಲ್ಲಿ ದಾಖಲಿಸಲಾಗಿದೆ.



**೪೫೭. ಜುಂಜಪ್ಪ**

ಸಂ: ಚೆಲುವರಾಜು

ಪುಟ: xxiv+೭೮೦, ವರ್ಷ: ೧೯೯೭, ರೂ: ೧೬೫.೦೦

ಬುಡಕಟ್ಟು ಕಾಡುಗೊಲ್ಲರ ಕಾವ್ಯವಾಗಿರುವ ಜುಂಜಪ್ಪ ಕಾವ್ಯವನ್ನು ಹಾಡಿದವರು ಮಧುಗಿರಿ ಹಟ್ಟಿಯ ದಾಸಪ್ಪನವರು. ಗೊಲ್ಲರ ಸಮಗ್ರ ಸಂಸ್ಕೃತಿ ಅಂಶಗಳನ್ನು ಅರಗಿಸಿಕೊಂಡಿರುವ ಹಾಗು ಆ ಕಾಡಿನ ಮಕ್ಕಳ ನೋವು ನಲಿವುಗಳೆರಡನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಕಾವ್ಯ ಗ್ರಂಥ ಇದಾಗಿದೆ.



**೪೫೮. ಬುಡಕಟ್ಟು ಅಭಿವೃದ್ಧಿ ಮೀಮಾಂಸೆ**

ಸಂ: ಎ.ಎಸ್. ಪ್ರಭಾಕರ

ಪುಟ: X+೩೪೦, ವರ್ಷ: ೨೦೦೪, ರೂ: ೧೨೫.೦೦

ಪರಿವಿಡಿ

೧. ಬುಡಕಟ್ಟು ಅಭಿವೃದ್ಧಿ; ಪರಿಕಲ್ಪನೆ ಮತ್ತು ಮೀಮಾಂಸೆ; ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ

೨. ಭಾರತದಲ್ಲಿ ಬುಡಕಟ್ಟುಗಳ ಅಭಿವೃದ್ಧಿ: ಒಂದು ಸಮಾಜ ಶಾಸ್ತ್ರೀಯ ಚಿಂತನೆ

೩. ಬುಡಕಟ್ಟು ಅಭಿವೃದ್ಧಿ ಸಾಧ್ಯವಾಗದ ಸಾರ್ವತ್ರಿಕ ಮಾದರಿ; ಬಹುಸಂಸ್ಕೃತಿಗಳ ಆರ್ಥಿಕ ಅಭಿವೃದ್ಧಿ

೪. ಬುಡಕಟ್ಟುಗಳ ಅಭಿವೃದ್ಧಿ: ಮತ್ತು ಸ್ವಯಂಸೇವಾ ಸಂಸ್ಥೆಗಳು; ಪಾರಂಪರಿಕ ಉತ್ಪಾದನೆ ಮತ್ತು ಆದಿವಾಸಿಗಳ ಅಭಿವೃದ್ಧಿ ಕೆಲವು ವೈರುಧ್ಯಗಳು

೫. ಲಂಬಾಣಿಗಳ ಅಭಿವೃದ್ಧಿಯಲ್ಲಿ ರೈತಾಪೀಕರಣದ ಪಾತ್ರ

೬. ಕಾಡುಗೊಲ್ಲರು ಸರ್ಕಾರ ಮತ್ತು ಅಭಿವೃದ್ಧಿ

೭. ಸರ್ಕಾರದ ಬುಡಕಟ್ಟುಗಳ ಅಭಿವೃದ್ಧಿ ಯೋಜನೆಗಳು; ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು ಹಾಗೂ ಅವುಗಳ ಅಭಿವೃದ್ಧಿ ಒಂದು ಚಿಂತನೆ

೮. ಗರಿಕೆಗೇಕೆ ಹಸಿರು ಬಣ್ಣ ಹೊಡೆಸುವ ಸಂಚು; ನಾವು ಅಂದರೆ ಚಿಗುರೊಡೆಯುತ್ತಿರುವ ಗಿಡದ ತನ್ಮಯತೆ

೯. ಬುಡಕಟ್ಟುಗಳ ಅಭಿವೃದ್ಧಿ : ನೆಹರೂ ಚಿಂತನೆಗಳು; ಬಡಕಟ್ಟುಗಳ ಅಭಿವೃದ್ಧಿ: ಮಹಾಶ್ವೇತಾದೇವಿಯವರ ಚಿಂತನೆಗಳು

೧೦. ಆದಿವಾಸಿಗಳ ಆರ್ಥಿಕ ಅಭಿವೃದ್ಧಿ; ನೆಘಾದ ತತ್ವಜ್ಞಾನ

ಬುಡಕಟ್ಟು ಅಭಿವೃದ್ಧಿ ಕುರಿತಂತೆ ವಿಚಾರ ಸಂಕಿರಣವೊಂದರಲ್ಲಿ ನಾಡಿನ ಚಿಂತಕರು ಮಂಡಿಸಿದ ೨೧ ಪ್ರಬಂಧಗಳನ್ನು ಇಲ್ಲಿ ಸಂಕಲಿಸಲಾಗಿದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಆದಿವಾಸಿಗಳ ಸಬಲೀಕರಣದ ಬಗ್ಗೆ ಮಾನವೀಯ ಚಿಂತನೆ ಹಾಗೂ ತೀವ್ರ ತುಡಿತವನ್ನು ಇಲ್ಲಿಯ ಬರಹಗಳಲ್ಲಿ ಕಾಣಬಹುದಾಗಿದೆ.




**೪೫೯. ಬುಡಕಟ್ಟು ಕುಲಕಸುಬುಗಳು**

ಲೇ: ಕೆ.ಎಂ.ಮೈತ್ರಿ

ಪುಟ: xiv+೩೨೮, ವರ್ಷ: ೨೦೦೨, ರೂ: ೧೫೦.೦೦

ಪರಿವಿಡಿ

೧. ಅಡಿಯನ್; ಬಾರ್‍ಡ್ಸಾ; ಬಾವಚ; ಭಿಲ್; ಚೆಂಚು; ಚೋಧರಾ; ಡುಬ್ಲ; ತಲವಿಯ

೨. ಗಮಿಟ್; ಗೊಂಡ್; ಗೌಡಲು; ಹಕ್ಕಿಪಿಕ್ಕಿ; ಹಸಲರು; ಇರುಳರ್; ಇರುಳಿಗ

೩. ಜೇನುಕುರುಬ; ಕಾಡು ಕುರುಬ; ಕಮ್ಮಾರ; ಕಣಿಯನ್; ಕಥೋಡಿ; ಕಾಟ್ಟುನಾಯಕನ್; ಕೊಕ್ನ; ಕೋಳಿ ಢೋರ್

೪. ಕೊಂಡ ಕಾಪುಸ್; ಕೊರಗ; ಕೋಟ; ಕೋಯ; ಕುಡಿಯ; ಕುರುಬ; ಕುರುಮನ್ಸ್

೫. ಮಹಾ ಮಲಸರ್; ಮಲೈಕುಡಿ; ಮಲಸರ್; ಮಲಯೆಕಂಡಿ; ಮಲೇರು; ಮರಾಠ

೬. ಮರಾಟಿ; ಮೇದ; ನಾಯಕ; ಪಳ್ಳಿಯನ್; ಪಣಿಯನ್; ಪಾರ್ಧಿ; ಪಟೇಲಿಯ

೭. ರಾಠವಾ; ಶೋಲಗ; ಸೋಲಿಗರು; ತೋಡ; ವರ್ಲಿ; ವಿಟೋಲಿಯ; ಯೆರವ

ಕರ್ನಾಟಕದ ಒಟ್ಟು ೪೯ ಬುಡಕಟ್ಟುಗಳ ಸಂಕ್ಷಿಪ್ತ ಪರಿಚಯದೊಂದಿಗೆ ಅವುಗಳ ಹಿಂದಿನ ಕುಲಕಸುಬುಗಳ ಸ್ಥಿತಿಗತಿಗಳನ್ನು ಪರಿಚಯಿಸುವ ಪ್ರಯತ್ನ *ಈ* ಗ್ರಂಥದಲ್ಲಿದೆ.




**೪೬೦. ಬುಡಕಟ್ಟು ದೈವಾರಾಧನೆ**

ಲೇ: ಹಿ.ಚಿ.ಬೋರಲಿಂಗಯ್ಯ

ಪುಟ: x+೧೧೮, ವರ್ಷ: ೨೦೦೦, ರೂ: ೭೫.೦೦

ಪರಿವಿಡಿ

೧. ಬುಡಕಟ್ಟು ವೀರರು ಮತ್ತು ಮಾತೆಯರು

೨. ಬೀರನ ಮನೆ; ಜಟ್ಟಿಗನ ಬನ

೩. ಕಾಡ್ಯನ ಮನೆ; ಕಾವೆಲಿಯಕುಚ್ಚಕಾಡು

೪. ಪೋಡಿನ ದೈವ; ಮರದ ಮೇಲಿನ ದೇವರು

೫. ಮಿಂಚೇರಿಯ ಹುಲಿ ಸಮಾಧಿ

೬. ಗೊಲ್ಲರ ಹಟ್ಟಿ; ಬೆಳದಿಂಗಳ ಸಿರಿ

೭. ಬಲೀಂದ್ರ

೮. ಮಾತೃಮೂಲ ಪರಂಪರೆ ಮತ್ತು ಮಾತೃ ದೇವತೆಯರು.

ಕರ್ನಾಟಕದ ಕೆಲವು ಬುಡಕಟ್ಟುಗಳ ದೈವಗಳ ಸ್ವರೂಪ ಹಾಗೂ ಆ ದೈವಗಳ ಕುರಿತಾದ ನಂಬಿಕೆ ಮತ್ತು ಆರಾಧನೆಯ ಬಗ್ಗೆ *ಈ* ಕೃತಿಯಲ್ಲಿ ಸಾಕಷ್ಟು ಮಹತ್ವದ ಮಾಹಿತಿಗಳಿವೆ. ಇಲ್ಲಿ ಹನ್ನೊಂದು ಬುಡಕಟ್ಟು ದೈವಗಳ ಸ್ವರೂಪ ಆರಾಧನೆ, ನಂಬಿಕೆಗಳ ಬಗ್ಗೆ ವಿವರಣೆ ನೀಡಲಾಗಿದೆ.

**೪೬೧. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು**

ಲೇ: ಎ.ಎಸ್.ಪ್ರಭಾಕರ್

ಪುಟ: xiv+೧೭೬, ವರ್ಷ: ೨೦೦೦, ರೂ: ೮೦.೦೦

ಪರಿವಿಡಿ

೧. ಸ್ಥಿತ್ಯಂತರಗಳು ಮತ್ತು ಬುಡಕಟ್ಟು

೨. ಪರಂಪರಾಗತ ಮೌಲ್ಯಗಳು

೩. ಭೂ ಒಡೆತನ ಮತ್ತು ಬುಡಕಟ್ಟುಗಳು

೪. ಅಭಿವೃದ್ಧಿಯ ಏಕಮುಖ ಪ್ರವಾಹ

೫. ಸರಕಾರ ಮತ್ತು ಬುಡಕಟ್ಟುಗಳು

ಕರ್ನಾಟಕ ಬುಡಕಟ್ಟು ಜನರ ಜೀವನ ಕ್ರಮದಲ್ಲಾದ ರೂಪಾಂತರ ಹಾಗೂ ಅದಕ್ಕೆ ಕಾರಣವಾದ ಸಾಮಾಜಿಕ ಆರ್ಥಿಕ ಅಂಶಗಳು, ಸರಕಾರದ ನೀತಿಗಳು, ಅಭಿವೃದ್ಧಿಯ ಹೆಸರಿನಲ್ಲಾದ ಪ್ರಾಕೃತಿಕ ವೈಪರಿತ್ಯಗಳು ಇವೆಲ್ಲವನ್ನು *ಈ* ಕೃತಿಯಲ್ಲಿ ಚರ್ಚಿಸುವುದರ ಜತೆಗೆ ಬುಡಕಟ್ಟುಗಳ ಪಾರಂಪರಿಕ ಜ್ಞಾನ, ಆರಾಧನೆ, ಮೌಖಿಕ ಸಂಕಥನ ಇತ್ಯಾದಿ ವಿಷಯಗಳು ಕೂಡಾ *ಈ* ಕೃತಿಯಲ್ಲಿ ವಿಶ್ಲೇಷಿಸಲ್ಪಟ್ಟಿವೆ.

## ೪೬೨. ಬುಡಕಟ್ಟು ಮಹಿಳೆಯರ ಪ್ರಸಾಧನ ಕಲೆ

ಲೇ: ಸವಿತಾ ನಾಯಕ

ಪುಟ: ii+೩೪, ವರ್ಷ: ೨೦೦೦, ರೂ: ೧೦.೦೦

ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ವಾಸಿಸುವ ಕನ್ನಡ ಮನೆಮಾತಾಗಿರುವ ಒಕ್ಕಲು ಬುಡಕಟ್ಟು ಮಹಿಳೆಯರ ಪ್ರಸಾಧನ ಕಲೆಯ ಬಗ್ಗೆ ಸಂಕ್ಷಿಪ್ತ ವಿವರ *ಈ* ಕಿರುಪುಸ್ತಕದಲ್ಲಿದೆ.



## ೪೬೩. ಬುಡಕಟ್ಟು ಸಮಾಜ : ಹುಟ್ಟು ಸಾವಿನ ನಡುವೆ

ಲೇ: ಗಂಗಾಧರ ದೈವಜ್ಞ

ಪುಟ: ii+೧೬೩, ವರ್ಷ: ೨೦೦೦, ರೂ: ೯೦.೦೦

ಪರಿವಿಡಿ

೧. ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳು
೨. ಹುಟ್ಟಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ
೩. ಋತುಮತಿ ಸಂದರ್ಭದ ಆಚರಣೆಗಳ ವಿಶ್ಲೇಷಣೆ
೪. ಮದುವೆ ಸಂದರ್ಭದ ಆಚರಣೆಗಳ ವಿಶ್ಲೇಷಣೆ
೫. ಸಾವಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ
೬. ಸಾವಿನ ನಂತರ ದೆವ್ವ-ಭೂತಗಳ ಪರಿಕಲ್ಪನೆ

ಬುಡಕಟ್ಟು ಸಮಾಜದಲ್ಲಿನ ಆಚರಣೆಗಳ ವಿವರ *ಈ* ಕೃತಿಯಲ್ಲಿದೆ. ಹುಟ್ಟಿನ ಸಂಸ್ಕಾರದಿಂದ ಹಿಡಿದು ಸಾವಿನ ಸಂಸ್ಕಾರದ ಮಧ್ಯೆ ಬರುವ ಹಲವು ಆಚರಣಾ ವಿಧಾನಗಳನ್ನು ಇಲ್ಲಿ ದಾಖಲಿಸಲಾಗಿದೆ. ಹಸಲರು, ದೀವರು, ಕಾಡುಕುರುಬರು, ಜೇನುಕುರುಬರು, ಸೋಲಿಗರು, ಮ್ಯಾಸಬೇಡರು, ಗೌಳಿಗರು, ಕಾಡುಗೊಲ್ಲರು, ಹಾಲಕ್ಕಿಗಳು ಮತ್ತು ಗೊಂಡ ಸಮಾಜಗಳ ಅಧ್ಯಯನ ಇಲ್ಲಿದೆ.

## ೪೬೪. ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ

ಸಂ: ವಿರೂಪಾಕ್ಷಿ ಪೂಜಾರಹಳ್ಳಿ

ಪುಟ: X+೨೨೪, ವರ್ಷ: ೨೦೦೮, ರೂ: ೧೦೦.೦೦

ಪರಿವಿಡಿ

೧. ವಿಜಯನಗರ ಕಾಲ - ವಿಜಯನಗರ ಪೂರ್ವಕಾಲ, ವಿಜಯನಗರೋತ್ತರ ಕಾಲದ ಬೇಡರು
೨. ಬೇಡ ಪಾಳೆಯಗಾರರು.
೩. ವಸಾಹತುಶಾಹಿ-ಬೇಡರ ಸಂಬಂಧ, ಸಂಘರ್ಷ
೪. ಬುಡಕಟ್ಟು ನೆಲೆಯಲ್ಲಿ ಬೇಡರು - ಬೇಡ ಬುಡಕಟ್ಟಿನ ವೈಶಿಷ್ಟ್ಯಗಳು
೫. ಬೇಡ ಬುಡಕಟ್ಟಿನ ಸಾಂಸ್ಕೃತಿಕ ನಾಯಕರು
೬. ಬೇಡರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಪರಿಸ್ಥಿತಿ-ಅಭಿವೃದ್ಧಿ
೭. ಬೇಡ ಸಮುದಾಯದ ಸಮಸ್ಯೆ, ಸವಾಲುಗಳು

ಪ್ರಸ್ತುತ ಕೃತಿಯ ೨೫ ಲೇಖನಗಳಲ್ಲಿ ಬೇಡ ಸಮುದಾಯದ ಮೌಖಿಕ ಪರಂಪರೆ, ಬೇಡ ಬುಡಕಟ್ಟಿನ ಸಮಾಜೋ ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಂಶಗಳು ವಿವರವಾಗಿ ಬಿಚ್ಚಿಕೊಂಡಿವೆ. ಭವ್ಯವಾದ ಚಾರಿತ್ರಿಕ ಪರಂಪರೆ ಪಡೆದ ಬೇಡ, ನಾಯಕ, ವಾಲ್ಮೀಕಿ ಬುಡಕಟ್ಟಿನ ಸಮುದಾಯ ವಿವಿಧ ರಾಜ್ಯ-ಸಂಸ್ಥಾನಗಳಲ್ಲಿ ತಳವಾರರಾಗಿ, ಸೈನಿಕರಾಗಿ, ಪಾಳೆಯಗಾರರಾಗಿ ಆಳ್ವಿಕೆ ನಡೆಸಿದ್ದರ ಕುರಿತು ಹಾಗೂ ಮೌರ್ಯ ಸಾಮ್ರಾಜ್ಯ, ವಿಜಯನಗರ ಆಳ್ವಿಕೆಯ ಪೂರ್ವ ಹಾಗೂ ನಂತರ ಬ್ರಿಟಿಷರ ಕಾಲದವರೆಗಿನ ಚಾರಿತ್ರಿಕ ಸನ್ನಿವೇಶಗಳನ್ನು ಇಲ್ಲಿ ಬೆಳಕಿಗೆ ತರಲಾಗಿದೆ.



## ೪೬೫. ಮಂಟೇಸ್ವಾಮಿ ಕಾವ್ಯ

ಸಂ: ಹಿ.ಚಿ.ಬೋರಲಿಂಗಯ್ಯ

ಪುಟ: xxiv+೮೫೪, ವರ್ಷ: ೧೯೯೭, ರೂ: ೧೮೦.೦೦

ಕನ್ನಡ ಮೌಖಿಕ ಪರಂಪರೆ ಸೃಷ್ಟಿಸಿದ ಬಹುಮುಖ್ಯ ಬುಡಕಟ್ಟು ಕಾವ್ಯವಿದು. ಮೈಸೂರು ಪಕ್ಕದ ಹಿನಕಲ್ಲಿನ ಮಹಾದೇವಯ್ಯ ಹಾಡಿರುವ ಕಾವ್ಯವನ್ನು ಇಲ್ಲಿ ಸಂಪಾದಿಸಿ ಅರ್ಥಪೂರ್ಣ ಪ್ರಸ್ತಾವನೆ ಯೊಂದಿಗೆ ಪ್ರಕಟಿಸಲಾಗಿದೆ. *ಈ* ಕಾವ್ಯದಲ್ಲಿ ಒಟ್ಟು ಒಂಬತ್ತು ವಿವಿಧ ಭಾಗಗಳಿದ್ದು ಅವುಗಳನ್ನು 'ಸಾಲು' ಎಂದು ವಿಂಗಡಿಸ ಲಾಗಿದೆ. ಜಾನಪದ ಜಗತ್ತಿನ ಪರ್ಯಾಯ ಇತಿಹಾಸ ಎಂದೇ ಕರೆಯಲಾಗುವ *ಈ* ಮಹಾಕಥಾನಕ ಇನ್ನೆಲ್ಲೂ ಪ್ರಕಟವಾಗಿರದ ಕಾವ್ಯವೂ ಹೌದು.



## ೪೬೬. ಮಲೆಮಾದೇಶ್ವರ ಕಾವ್ಯ

ಸಂ: ಕೆ.ಕೇಶವನ್ ಪ್ರಸಾದ್

ಪುಟ: xxxiii+೪೮೦, ವರ್ಷ: ೧೯೯೭, ರೂ: ೧೨೦.೦೦

ಪರಿವಿಡಿ

೧. ಮಾದಪ್ಪ ಹುಟ್ಟಿ ಬೆಳೆದ ಸಾಲು
೨. ಜುಂಜೇಗೌಡನ ಸಾಲು
೩. ಶ್ರವಣ ದೊರೆ ಸಾಲು

೪. ಸಂಕಮ್ಮನ ಸಾಲು

೫. ಬೇವಿನ ಹಟ್ಟಿ ಕಾಳಮ್ಮನ ಸಾಲು

೬. ಸರಗೂರಯ್ಯನ ಸಾಲು

೭. ಮಂಗಳಾರತಿ

ಏಕವ್ಯಕ್ತಿ ಗಾಯನದ ಪಠ್ಯವಾಗಿರುವ *ಈ* ಬುಡಕಟ್ಟು ಮಹಾಕಾವ್ಯವನ್ನು ಹಾಡಿದವರು ಶ್ರೀ ಹೆಬ್ಬಣಿ ಮಾದಯ್ಯ. ಸಾಂಸ್ಕೃತಿಕ ನಾಯಕನಾದ ಮಾದೇಶ್ವರನ ಬಗ್ಗೆ ಮೌಖಿಕ ಪರಂಪರೆಯಲ್ಲಿ ಹುಟ್ಟಿಕೊಂಡ ಸಾಂಸ್ಕೃತಿಕ ದೀರ್ಘ ಕಥನವೇ *ಈ* ಮಲೆಮಾದೇಶ್ವರ ಕಾವ್ಯ.

**೪೬೭. ಮಾಳಿಂಗರಾಯನ ಕಾವ್ಯ**

ಸಂ: ಗಂಗಾಧರ ದೈವಜ್ಞ

ಪುಟ: xii+೨೫೪, ವರ್ಷ: ೧೯೯೯, ರೂ: ೧೦೦.೦೦

ಪರಿವಿಡಿ

೧. ಸ್ತುತಿ ಪದ್ಯ

೨. ಮಾಳಿಂಗರಾಯನ ಕಾವ್ಯ

೩. ಐಕ್ಯದ ನಂತರದ ಪವಾಡಗಳು

೪. ಮಾಳಪ್ಪನ ಮೊಮ್ಮಗ ಬರಗಾವಿ ಸಿದ್ಧನ ಪವಾಡ

೫. ಕಂಬಳಿ ಕುರಿತು

೬. ಅರಿವು

೭. ಮಂಗಳಾರತಿ

ಕುರುಬ ಜನಾಂಗದ ಸಾಂಸ್ಕೃತಿಕ ವೀರ ಮಾಳಿಂಗರಾಯನ ಬಗ್ಗೆ ಮೌಖಿಕ ಪರಂಪರೆಯಿಂದ ಸಾಗಿ ಬಂದಿರುವ *ಈ* ಮಹಾಕಾವ್ಯವನ್ನು ಅಡಿವಪ್ಪ ಒಡೆಯರು ಎಂಬುವರು ಹಾಡಿದ್ದು, ಅದನ್ನಿಲ್ಲಿ ಸಂಪಾದಿಸಿಕೊಡಲಾಗಿದೆ.




**೪೬೮. ಮ್ಯಾಸಬೇಡರ ಕಥನಗಳು**

ಲೇ: ಪ್ರಭಾಕರ ಎ.ಎಸ್

ಪುಟ: xii+೧೭೫, ವರ್ಷ: ೧೯೯೯, ರೂ: ೯೦.೦೦

ಪರಿವಿಡಿ

೧. ಕಥೆಗಳು

೨. ಗಾದ್ರಿಪಾಲನಾಯಕನ ಕಾವ್ಯ

೩. ಜಗಳೂರಜ್ಜನ ಕಾವ್ಯ

೪. ಕಂಪಳ ದೇವರ ಕಾವ್ಯ

೫. ಬೋರೆದೇವರ ಕಾವ್ಯ

೬. ಮಾರಮ್ಮನ ಕಾವ್ಯ

ಪಾಲಮ್ಮ ಮತ್ತು ಸಂಗಡಿಗರು ಹಾಡಿರುವ *ಈ* ಕಾವ್ಯಗಳು ಕಥನರೂಪದಲ್ಲಿವೆ. ಗ್ರಂಥದ ಶೀರ್ಷಿಕೆ ಮ್ಯಾಸಬೇಡರ ಕಥನಗಳೆಂದಿದ್ದರೂ ಇಲ್ಲಿನ ಕಥನಗಳು ಕೇವಲ ಮ್ಯಾಸಬೇಡರ ಸಮುದಾಯದ ಆಶಯಗಳನ್ನು ಮಾತ್ರ ಹೊತ್ತುಕೊಂಡಿರದೆ ಎಲ್ಲ ಬುಡಕಟ್ಟು ಸಮುದಾಯಗಳ ಆಶಯವೂ ಇವುಗಳಲ್ಲಿದೆ. *ಈ* ಬುಡಕಟ್ಟು ಕಥನಕಾವ್ಯ ಸಂಕಲನದಲ್ಲಿ ಒಟ್ಟು ೫ ಕಾವ್ಯಗಳಿವೆ. ಅವು ಗಾದ್ರಿಪಾಲಕನ ಕಾವ್ಯ, ಜಗಳೂರಜ್ಜನ ಕಾವ್ಯ, ಕಂಪಳದೇವರ ಕಾವ್ಯ, ಬೋರೇದೇವರ ಕಾವ್ಯ, ಮಾರಮ್ಮನ ಕಾವ್ಯ.




**೪೬೯. ವ್ಯಾಧ ಚರಿತೆ : ಬೇಡ ಕುಲಮೂಲದ ಕಥನಗಳು**

ಸಂ: ಮಂಜುನಾಥ ಬೇವಿನಕಟ್ಟಿ

ಪುಟ: xii+೨೩೮, ವರ್ಷ: ೨೦೦೭, ರೂ: ೮೦

ಪರಿವಿಡಿ

೧. ವೇದಪೂರ್ವ ಭಾರತದ ಬೇಡ ಮೂಲನಿವಾಸಿಗಳು

೨. ಬೇಡ ಜನಾಂಗದ ನಿಜ ನಿಷ್ಪತ್ತಿ

೩. ಕರ್ನಾಟಕದ ಬೇಡ ಜನಾಂಗ ಉಗಮ, ವಿಕಾಸ, ವರ್ತಮಾನದ ಬದುಕು

೪. ಕರ್ನಾಟಕದ ಬೇಡ ನಾಯಕರು; ನಾಯಕ ಜನಾಂಗ ಪರಂಪರೆ

೫. ಬೇಡ ನಾಯಕರ ಬೆಡಗುಗಳ ಪ್ರಾಚೀನತೆ

೬. ಕನ್ನಡ ಶಾಸನಗಳಲ್ಲಿ ಬೇಡ ಜನಾಂಗ

೭. ಮ್ಯಾಸ ಬೇಡ, ಕಂಪಣ ಬೇಡ ಸಂಸ್ಕೃತಿ

೮. ದುರುಗ ಮುರುಗಿ ಕಥನ

೯. ಉಪಪಂಗಡ ಮೊಂಡರು, ಪರಿವಾರದವರ ಹಿನ್ನೆಲೆ ಮೂಲ

೧೦. ಕೇರಳದ ಚೇರರು, ನಾಯರರು ಮತ್ತು ಕರ್ನಾಟಕದ ನಾಯಕರು

*ಈ* ಕೃತಿ ಬೇಡ ಸಮುದಾಯವನ್ನು ಕುರಿತು ಬಹುನೆಲೆಗಳಲ್ಲಿ ವ್ಯಾಪಕ ಅಧ್ಯಯನ ನಡೆಸಿರುವ ೩೧ ಲೇಖನಗಳ ಸಂಕಲನ. ವೇದಪೂರ್ವ ಕಾಲದಿಂದ ಸಮಕಾಲೀನ ಸಂದರ್ಭದವರೆಗೆ ಬೇಡ ಜನಾಂಗವನ್ನು ಕುರಿತು ನಡೆಸಿದ ವ್ಯಾಪಕ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಫಲವಾಗಿ

ಸಂಗ್ರಹಿತಗೊಂಡ ಅಮೂಲ್ಯ ಮಾಹಿತಿಗಳು ಇಲ್ಲಿ ಒಟ್ಟು ಸೇರಿವೆ. ಬೇಡ ಜನಾಂಗದ ಭಿನ್ನ ನೆಲೆಗಳು, ಸಾಂಸ್ಕೃತಿಕ ವೈವಿಧ್ಯಗಳು, ಪ್ರಾದೇಶಿಕ ಭಿನ್ನತೆಗಳು ಸಾಂಸ್ಕೃತಿಕ ವಿವರಗಳು ಇಲ್ಲಿ ಚರ್ಚಿತವಾಗಿವೆ.




**೪೭೦. ಸೋಲಿಗರು ಹಾಡಿದ ಬಿಳಿಗಿರಿರಂಗನ ಕಾವ್ಯ**

ಸಂ : ಕೆ. ಕೇಶವನ್ ಪ್ರಸಾದ್

ಪುಟ: 8+೧೪೨, ವರ್ಷ: ೨೦೦೫, ರೂ: ೬೦.೦೦

ಪರಿವಿಡಿ

೧. ಹೇಳಲೇ ಬೇಕಾದ್ದು, ಬೇಡದ್ದು

೨. ಸೋಲಿಗ ಸಮುದಾಯದ ಪರಿಚಯ

೩. ಕಾವ್ಯವನ್ನು ಕುರಿತು

೪. ಕಾವ್ಯ ಓದುವ ಮೊದಲು

೫. ನೆನೆವಾರ್ತೆ

೬. ಬಿಳಿಗಿರಿರಂಗನ ಕಾವ್ಯ

*ಈ* ಸಂಕಲನದಲ್ಲಿ ಶ್ರೀ ದಂಬಡಿ ಕ್ಯಾತೇಗೌಡ, ಶ್ರೀ ತಂಬೂರಿ ದಾಸೇಗೌಡ ಮತ್ತು ಶ್ರೀ ಸಿಪ್ಪೆ ಸಿದ್ದೇಗೌಡ *ಈ* ಮೂವರು ಜನಪದ ಗಾಯಕರು ಹಾಡಿರುವ ಬಿಳಿಗಿರಿರಂಗನ ಕುರಿತು ಕಾವ್ಯವನ್ನು ಸಂಗ್ರಹಿಸಿ ಕೊಡಲಾಗಿದೆ. ಸೋಲಿಗ ಸಮುದಾಯದ ಕುರಿತು ವಿಸ್ತಾರವಾಗಿ ಪರಿಚಯಿಸುತ್ತಲೇ ಬಿಳಿಗಿರಿರಂಗನ ಕಾವ್ಯದ ಮಹತ್ವವನ್ನು *ಈ* ಕೃತಿಯಲ್ಲಿ ವಿವೇಚಿಸಲಾಗಿದೆ.




**೪೭೧. Strings and Cymbals**

Ed: C.N.Ramachadran

Pages: xvi+366, Year: 2007, Price: 200.00

Contents

1. Halumata Mahakavya
2. Manteswamy
3. Junjappa
4. Tamburi Ramayana
5. Janapada Mahabharata
6. Male Madeswara
7. Kumara Rama
8. The Epic of Krishna Gollas
9. The Story of Gadripala Nayaka
10. The Bedas of Halagali



Feeling the need of the world outside Kannada language culture, mainly the scholars of orality and folklore, anthropologists/ ethnologists, historians, sociologists, comparative literary scholars, university publishing the selections from Kannada oral kannada narratives.

Editor has also given a general introduction to oral epics in general and in Kannada particularly, apart fron giving an introduction to the book. The selection are classified into various themes and accordingly included under different section. Each section has an introduction to the theme, and then each text that is selected under the theme also has an introduction.

೨೫

# ಭಾರತೀಯ ತತ್ತ್ವಶಾಸ್ತ್ರ




**೪೭೨. ದೇವರನ್ನು ಕುರಿತು : ಒಂದು ಬಹುಮುಖಿ ನೋಟ**

ಸಂ : ಬಿ.ವಿ. ವೀರಭದ್ರಪ್ಪ

ಪುಟ: xii+೩೮೦+೨೮೦, ವರ್ಷ: ೨೦೦೫, ರೂ: ೧೨೦.೦೦

ಪರಿವಿಡಿ

೧. ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ಬಿ.ಆರ್. ಅಂಬೇಡ್ಕರ್, ಎಸ್.ರಾಧಾಕೃಷ್ಣನ್, ಭಗತ್ ಸಿಂಗ್, ಡಿವಿಜಿ ಅವರ ವಿಚಾರಗಳು.

೨. ಎಚ್.ತಿಪ್ಪೇರುದ್ರಸ್ವಾಮಿ, ಪಂಡಿತ ತಾರನಾಥ, ವಸುದೇವ ಭೂಪಾಲಂ, ಶಿವರಾಮ ಕಾರಂತ, ಎ.ಎನ್ ಮೂರ್ತಿರಾವ್, ಬೀಚಿ ಅವರ ವಿಚಾರಗಳು

೩. ಶಂಬಾಜೋಶಿ, ಕುಮಾರ ಕಕ್ಕಯ್ಯ ಪೋಳ, ಅಬ್ರಾಹಂ ಕೋವೂರ್, ಮಾತಾ ಅಮೃತಾನಂದಮಯಿ ವಿಚಾರಗಳು

೪. ಜ್ಯೋತ್ಸ್ನಾಕಾಮತ್ ಎಚ್.ನರಸಿಂಹಯ್ಯ, ಸಿದ್ಧಲಿಂಗಯ್ಯ, ಸದಾಶಿವಯೋಗಿ, ಗೌರೀಶ್ ಕಾಯ್ಕಿಣಿ, ಓಶೋ ಅವರ ವಿಚಾರಗಳು

ಭಾರತದ ಮಹತ್ವದ ಚಿಂತಕರ ಇಪ್ಪತ್ತೆರಡು ಲೇಖನಗಳು *ಈ* ಸಂಪುಟದಲ್ಲಿವೆ. ದೇವರನ್ನು ಪರಿಕಲ್ಪಿಸಿಕೊಳ್ಳುವ ನಮ್ಮ ಸಾಂಸ್ಕೃತಿಕ ಮನಸ್ಸುಗಳು ಎಷ್ಟು ಬಗೆಗಳಲ್ಲಿ ದೇವರನ್ನು ಕುರಿತು ಚರ್ಚಿಸಿವೆ ಎಂಬುದನ್ನು ಇಲ್ಲಿನ ಲೇಖನಗಳು ನವೀನವಾಗಿ ಪ್ರಕಟಮಾಡುತ್ತವೆ. ಆಸ್ತಿಕ ಮತ್ತು ನಾಸ್ತಿಕ ಎಂಬ ಒಣ ಚರ್ಚೆಯನ್ನು ಮೀರಿ ಚಿಂತನೆಯ ನೆಲೆಯಲ್ಲಿ ಅನುಭವ ಮತ್ತು ಅನುಭಾವಗಳನ್ನು ಒಂದುಗೂಡಿಸಿ ದೇವರನ್ನು ಕುರಿತು ಕೊಟ್ಟ ಬಹುಮುಖಿ ನೋಟಗಳು ಮತ್ತು ಆ ಬಗ್ಗೆ ನಡೆದ ಆರೋಗ್ಯಕರ ಸಂವಾದಗಳ ಒಂದು ವೇದಿಕೆಯೇ *ಈ* ಸಂಪುಟವಾಗಿದೆ.

**೪೭೩. ಭಾರತೀಯ ತತ್ತ್ವಶಾಸ್ತ್ರ**

ಲೇ: ಎಂ. ಪ್ರಭಾಕರ ಜೋಶಿ

ಪುಟ: iv+೪೩, ವರ್ಷ: ೨೦೦೨, ರೂ: ೧೦.೦೦

ಭಾರತೀಯ ತತ್ತ್ವಶಾಸ್ತ್ರದ ಬಗ್ಗೆ ಸ್ಥೂಲ ಪರಿಚಯ ಮಾಡಿಕೊಡುವ ಕಿರುಗ್ರಂಥವಿದು. ಭಾರತೀಯ ತತ್ತ್ವಶಾಸ್ತ್ರದ ವಿವಿಧ ಶಾಖೆಗಳು ಹಾಗೂ ಅವು ದರ್ಶನಕ್ಕೆ ಆಧಾರವಾಗಿ ಹೊಂದಿರುವ ಸೂತ್ರಗ್ರಂಥಗಳ ಬಗ್ಗೆ ಇಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.




**೪೭೪. ಹಾಲುಮತ ದರ್ಶನ**

ಲೇ: ಶಂಬಾ ಜೋಶಿ

ಪುಟ: xiii+೨೩೩, ವರ್ಷ: ೧೯೯೭, ರೂ: ೮೦.೦೦

ಪರಿವಿಡಿ

೧. ಕಣ್ಮರೆಯಾದ ಕಂನಡಿ

೨. ಒಂದೇ ಭಾಷಿಕರ ಒಳಪಂಗಡಗಳು

೩. ವೀರ ಹಟ್ಟಿಕಾರ : ದನಗಾರರು

೪. ಇನ್ನೂ ಸ್ವಲ್ಪನೀರ : ಹಾಲ ವಿಚಾರ

ಹಾಲುಮತ ದರ್ಶನದ ಪರಸ್ಪರ ವಿರುದ್ಧ ಮಾರ್ಗಗಳಾದ ಅಗ್ನಿಪೂಜೆ ಮತ್ತು ಜಲಪೂಜೆಗಳ ಸ್ನೇಹತ್ವವನ್ನು ಇದು ಪ್ರತಿಪಾದಿಸುತ್ತದೆ. ಅಗ್ನಿಪೂಜಕರಾದ ಆರ್ಯರು ಇರುವಂತೆಯೇ ನಿರಗ್ನಿಗಳಾಗಿದ್ದ ರಸದ ಆರಾಧಕರೂ ಇರುತ್ತಾರೆ. ಬೆಳಕನ್ನು ಆರಾಧಿಸುವ ಧರ್ಮ ಹಿಂದೆ ಬಿದ್ದು ರಸದ ಆರಾಧನೆ ಪ್ರಾರಂಭವಾದ ಹಂತದಲ್ಲಿ ಹಾಲುಮತ ಅಸ್ತಿತ್ವಕ್ಕೆ ಬಂದಿದ್ದನ್ನು ಶಂಬಾ ಪ್ರತಿಪಾದಿಸುತ್ತಾರೆ. ಇದನ್ನು ಪ್ರತಿಪಾದಿಸುವ ಶಾಸ್ತ್ರವಿಧಾನ *ಈ* ಕೃತಿಯಲ್ಲಿದೆ.

## ೨೬

# ಭಾಷೆ-ಭಾಷಾಧ್ಯಯನ-ಭಾಷಾಂತರ

### ೪೭೫. ಇಂದಿನ ಕನ್ನಡ : ರಚನೆ ಮತ್ತು ಬಳಕೆ

ಲೇ: ಎಸ್.ಎನ್.ಶ್ರೀಧರ್

ಪುಟ: xii+೧೬೪, ವರ್ಷ: ೧೯೯೫, ರೂ: ೪೫.೦೦

*ಈ* ಗ್ರಂಥದಲ್ಲಿ ಭಾಷಾಮಿಶ್ರಣ, ಕನ್ನಡ ಭಾಷಾ ಮಿಶ್ರಣದ ನಿಯೋಗಗಳು, ಭಾಷೆಯ ಆಧುನೀಕರಣ ರಾಚನಿಕ ಮತ್ತು ಸಾಮಾಜಿಕ ಆಯಾಮಗಳು, ಕನ್ನಡ ಭಾಷೆಯ ಆಧುನೀಕರಣ, ಭಾಷಿಕ ಅಭಿಸರಣ, ದ್ರಾವಿಡ ಭಾಷೆಗಳ ಇಂಡೋ ಆರ್ಯೀಕರಣ, ಕನ್ನಡ ಕ್ರಿಯಾ ಆಕೃತಿ ಮತ್ತು ರಚನೆಯಲ್ಲಿ ಸಂಸೃಷ್ಟಿ ಹಾಗೂ ಸಂಕರ, ಕನ್ನಡದಲ್ಲಿ ಉಪಸರ್ಗಗಳು ಹಾಗೂ ಆಧುನಿಕ ಮತ್ತು ಪ್ರಸ್ತುತ ಚೌಕಟ್ಟಿನಲ್ಲಿ ಕನ್ನಡವನ್ನು ಇರಿಸಿ ನೋಡುವ ಪ್ರಯತ್ನವೂ ಇಲ್ಲಿದೆ. ಕನ್ನಡ ಭಾಷಾಧ್ಯಯನಕ್ಕೆ ಹೊಸ ಚರ್ಚೆಯ ನೆಲೆಯನ್ನು ಇಲ್ಲಿ ಒದಗಿಸಲಾಗಿದೆ. ಕನ್ನಡ ಭಾಷಾತತ್ತ್ವದ ಚರ್ಚೆಯ ಜತೆಗೆ ಕನ್ನಡ ಭಾಷೆಯ ರಚನೆ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಅದರ ಬಳಕೆಯ ವಿನ್ಯಾಸಗಳ ಬಗ್ಗೆ *ಈ* ಗ್ರಂಥ ಬಹಳಷ್ಟು ಚರ್ಚಿಸುತ್ತದೆ.

### ೪೭೬. ಕನ್ನಡ ಕ್ರಿಯಾರೂಪಗಳು

ಲೇ: ಎಸ್.ಎಸ್. ಅಂಗಡಿ

ಪುಟ: xviii+೧೪೭, ವರ್ಷ: ೨೦೦೦, ರೂ: ೭೫.೦೦

ಭಾಷೆಗಳ ತೌಲನಿಕ ಅಧ್ಯಯನಕ್ಕೆ ಕ್ರಿಯಾಪದಗಳ ಅಧ್ಯಯನವು ಮೂಲ ತಳಹದಿ. ಪ್ರಸ್ತುತ ಕೃತಿಯಲ್ಲಿ ಕ್ರಿಯಾಪದಗಳನ್ನು ಕ್ರಿಯಾಪ್ರಕೃತಿ, ಅವುಗಳು ಪಡೆದುಕೊಳ್ಳುವ ಅರ್ಥ, ಧಾತುಪಾಠದ ಅನ್ವಯ, ಸಂಬಂಧಿತ ರೂಪಗಳು, ಆಡುನುಡಿ, ಸಾಧಿತ ಪದಗಳು ಹಾಗು ಜ್ಞಾತಿ ರೂಪಗಳನ್ನು ಅಳವಡಿಸಿ ಕನ್ನಡದ ಸಮಗ್ರ ಧಾತುಕೋಶದ ರೂಪ ನೀಡಲಾಗಿದೆ.

### ೪೭೭. ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ

ಸಂ : ಮಂಜುನಾಥ ಬೇವಿನಕಟ್ಟಿ

ಪುಟ : XX + ೨೪೨, ವರ್ಷ : ೨೦೦೯, ರೂ. ೧೦೦.೦೦

ಪರಿವಿಡಿ

ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ

*ಈ* ಪದಕೋಶವು ಕನ್ನಡದ ಜನಪದ ಸ್ತ್ರೀ ದೈವಗಳ ಬಗ್ಗೆ ಸಾಂಸ್ಕೃತಿಕ ಮಹತ್ವವಾದ ಪದಗಳ ಅರ್ಥಗಳನ್ನು ಹಿಡಿದಿಟ್ಟಿರುವ ಸಂಕಲನ. ಪ್ರಸ್ತುತ ಸಂಕಲನದಲ್ಲಿ ೬೦೦ಕ್ಕೂ ಹೆಚ್ಚು ಪದಗಳ ಕುರಿತು ಅವುಗಳ ಸಾಂಸ್ಕೃತಿಕ ಹಿನ್ನೆಲೆ, ಮಹತ್ವಗಳೊಂದಿಗೆ ಕ್ಷೇತ್ರಕಾರ್ಯದ ಮಾಹಿತಿಗಳು ಹಾಗೂ ವಿವಿಧ ಗ್ರಂಥಗಳ ಮುಖೇನ ಅರ್ಥಗಳನ್ನು ಸಂಗ್ರಹಿಸಿಕೊಡಲಾಗಿದೆ.

### ೪೭೮. ಕನ್ನಡ ಭಾಷಾಪ್ರಭೇದಗಳು

ಲೇ: ಸಂಗಮೇಶ ಸವದತ್ತಿಮಠ

ಪುಟ: iv+೨೮, ವರ್ಷ: ೧೯೯೮, ರೂ: ೫.೦೦

ಕನ್ನಡ ಭಾಷಾಪ್ರಭೇದಗಳ ಬಗ್ಗೆ ತಲಸ್ಪರ್ಶಿ ಅಧ್ಯಯನವನ್ನು ಮಾಡಿರುವ ಲೇಖಕರು *ಈ* ಕೃತಿಯಲ್ಲಿ ಕನ್ನಡ ಭಾಷೆಯ ಪ್ರಾಚೀನತೆ, ಅದು ಬೆಳೆದು ಬಂದಿರುವ ವಿವಿಧ ಅವಸ್ಥೆಗಳ ಬಗ್ಗೆ ವಿವರವಾಗಿ ದಾಖಲಿಸಿದ್ದಾರೆ.

### ೪೭೯. ಕನ್ನಡ ಭಾಷಾಭಿವೃದ್ಧಿ : ಸಾಧನೆ ಮತ್ತು ಮುನ್ನೋಟ

ಸಂ: ಕೆ.ವಿ.ನಾರಾಯಣ

ಪುಟ: viii+೫೦, ವರ್ಷ: ೧೯೯೯, ರೂ: ೨೫.೦೦

ಪರಿವಿಡಿ

೧. ಕರ್ನಾಟಕದ ಭಾಷಾನೀತಿ

೨. ಕರ್ನಾಟಕದಲ್ಲಿ ಭಾಷಾಯೋಜನೆ

೩. ವಿವಿಧವಲಯಗಳಲ್ಲಿ ಕನ್ನಡ ಭಾಷಾಬಳಕೆ

೪. ಕನ್ನಡದ ಉಪಬಾಷೆಗಳು ಮತ್ತು ಭಾಷಾಭಿವೃದ್ಧಿ

೫. ದ್ವಿಭಾಷಿಕತೆ ಮತ್ತು ಭಾಷಾಭಿವೃದ್ಧಿ

ಕನ್ನಡ ಭಾಷಾಭಿವೃದ್ಧಿಯ ಬಗ್ಗೆ *ಈ*ವರೆಗೆ ಆಗಿರುವ ಸಾಧನೆಗಳನ್ನು ಮತ್ತು ಮುಂದಿನ ದಿನಗಳಲ್ಲಿ *ಈ* ಬಗ್ಗೆ ನಡೆಯಬೇಕಾಗಿರುವ ಕೆಲಸಗಳನ್ನು *ಈ* ಕೃತಿ ಚರ್ಚಿಸುತ್ತದೆ. ಕರ್ನಾಟಕದ ಭಾಷಾನೀತಿ, ಕರ್ನಾಟಕದಲ್ಲಿ ಭಾಷಾಯೋಜನೆ, ವಿವಿಧ ವಲಯಗಳಲ್ಲಿ ಕನ್ನಡ ಭಾಷಾಬಳಕೆ, ಕನ್ನಡ ಉಪಭಾಷೆಗಳು ಮತ್ತು ಭಾಷಾಭಿವೃದ್ಧಿ ಹಾಗೂ ದ್ವಿಭಾಷಿಕತೆ ಮತ್ತು ಭಾಷಾಭಿವೃದ್ಧಿ ಬಗ್ಗೆ ಇಲ್ಲಿ ೫ ವಿದ್ವತ್ಪೂರ್ಣ ಲೇಖನಗಳಿವೆ.

### ೪೮೦. ಕನ್ನಡ ನಿಘಂಟು ರಚನೆ

ಲೇ: ಎಸ್.ಎಸ್. ಅಂಗಡಿ

ಪುಟ: X+೧೪೯, ವರ್ಷ: ೨೦೦೩, ರೂ: ೭೫.೦೦




ಪರಿವಿಡಿ

೧. ನಿಘಂಟುಗಳ ವರ್ಗೀಕರಣ; ನಿಘಂಟು ರಚನೆಯ ಶಿಲ್ಪ; ನಿಘಂಟು ರಚನೆ: ಸಾಮಾಜಿಕ ಆಯಾಮ

೨. ಏಕಭಾಷಿಕ ನಿಘಂಟು ರಚನೆ; ದ್ವಿಭಾಷಿಕ ನಿಘಂಟು ರಚನೆ; ಬಹುಭಾಷಿಕ ನಿಘಂಟು ರಚನೆ

೩. ಆಡುಭಾಷೆಗಳ ನಿಘಂಟುಗಳು: ರಚನೆ ಮತ್ತು ಉಪಯುಕ್ತತೆ

೪. ಮಕ್ಕಳ ನಿಘಂಟು: ಸಾಮಾನ್ಯ ಸ್ವರೂಪ

೫. ವಿಶ್ವಕೋಶ: ರಚನೆ ಶಿಲ್ಪ

೬. ಭಾಷೆಯ ಆಧುನೀಕರಣ ಮತ್ತು ನಿಘಂಟು ರಚನೆ

೭. ಪ್ರಾಚೀನ ಕನ್ನಡ ನಿಘಂಟುಗಳು

೮. ಆಧುನಿಕ ಕನ್ನಡ ನಿಘಂಟುಗಳು; ಕನ್ನಡದಲ್ಲಿ ನಿಘಂಟು ಸಾಹಿತ್ಯದ ಅಧ್ಯಯನ

ನಿಘಂಟು ರಚನೆಯ ರಹಸ್ಯ ಮತ್ತು ಮಾರ್ಗಗಳನ್ನು ತಿಳಿಸುವ ಶಾಸ್ತ್ರೀಯ ಗ್ರಂಥವಿದು. ಕೋಶ ರಚನೆಯ ತತ್ವಗಳನ್ನು ಸರಳವಾದ ಶೈಲಿಯಲ್ಲಿ ಆದಷ್ಟು ಕಡಿಮೆ ಪಾರಿಭಾಷಿಕಗಳೊಡನೆ *ಈ* ಕೃತಿಯಲ್ಲಿ ಪರಿಚಯಿಸಿ ಕೊಡಲಾಗಿದೆ.

**೪೮೧.ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು**

ಸಂ : ಪಿ. ಮಹಾದೇವಯ್ಯ

ಪುಟ : xii + ೯೨, ವರ್ಷ : ೨೦೦೯, ರೂ. ೬೦

ಪರಿವಿಡಿ

೧. ಓದು ಮತ್ತು ಬರವಣಿಗೆಯಲ್ಲಿನ ಸಮಸ್ಯೆಗಳು

೨. ಗುಣಿತಾಕ್ಷರಗಳು

೩. ಒತ್ತಕ್ಷರಗಳು

೪. ವ್ಯಾಕರಣಾಂಶಗಳಲ್ಲಿ ಕಂಡುಬರುವ ವ್ಯತ್ಯಾಸಗಳು

೫. ಕಥಾ ಮಾದರಿಗಳು

೬. ಕಾರಣಗಳು ಮತ್ತು ಪರಿಹಾರಗಳು

ಕರ್ನಾಟಕದಲ್ಲಿರುವ ಉರ್ದು ಭಾಷಿಕರು, ದ್ವಿಭಾಷಿಕರು ಮತ್ತು ಬಹುಭಾಷಿಕರಾಗಿದ್ದಾರೆ. *ಈ* ಲಕ್ಷಣ ಕರ್ನಾಟಕದಾದ್ಯಂತ ಬೇರೆ ಬೇರೆ ಪ್ರಮಾಣದಲ್ಲಿದೆ. ಉರ್ದು ಭಾಷಿಕರು ಶಾಲೆಯ ಪರಿಸರದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಮೂರನೇ ತರಗತಿಯಿಂದ ಓದಬೇಕಾಗಿದೆ. ಹಾಗೆ ಓದುವಾಗ ಮತ್ತು ಬರವಣಿಗೆ ಮಾಡುವಾಗ ಅನೇಕ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ. *ಈ* ಹಿನ್ನೆಲೆಯಲ್ಲಿ ಉರ್ದು ಭಾಷಿಕರು ಶಾಲೆಯ ಪರಿಸರದಲ್ಲಿ ಕನ್ನಡವನ್ನು ಓದುವಾಗ ಮತ್ತು ಬರವಣಿಗೆ ಮಾಡುವಾಗ ಎಂಥಹ ಸಮಸ್ಯೆಗಳನ್ನು ಎದುರಿಸುತ್ತಾರೆ? ಮತ್ತು ಏಕೆ? ಎಂಬುದನ್ನು *ಈ* ಗ್ರಂಥದಲ್ಲಿ ವಿಸ್ತರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸಾಮುದಾಯಿಕ ನೆಲೆಯಲ್ಲಿ ಕಂಡುಬರುವ ಭಾಷಾ ಕಲಿಕಾ ಸಮಸ್ಯೆಗಳನ್ನು ಮಾತ್ರ ಪರಿಗಣಿಸಲಾಗಿದೆ.




**೪೮೨. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ**

ಲೇ: ಡಿ.ಎನ್.ಶಂಕರಭಟ್

ಪುಟ: viii+೧೧೬, ವರ್ಷ: ೧೯೯೫, ರೂ: ೪೫.೦೦

ಪರಿವಿಡಿ

೧. ಮೂಲ ದ್ರಾವಿಡದಿಂದ ಕನ್ನಡಕ್ಕೆ

೨. ಮೂಲ ಕನ್ನಡದಿಂದ ಆಧುನಿಕ ಪ್ರಬೇಧಗಳಿಗೆ

ಭಾಷೆಯ ಚರಿತ್ರೆಯನ್ನು ಅದರ ಮೂಲಭಾಷೆಯನ್ನು ಕಲ್ಪಿಸಿ ವಿವರಿಸುವುದು ಒಂದು ವಿಧಾನ. ಆದರೆ ಕನ್ನಡ ಭಾಷೆಯಲ್ಲಿ ಬರಹದ ಬೇರೆ ಬೇರೆ ರೂಪಗಳನ್ನು ಆಧರಿಸಿ ಭಾಷೆಯ ಲಿಖಿತ ಚರಿತ್ರೆಯನ್ನು ಬರೆಯುವುದು ಪ್ರಚಲಿತವಾಗಿರುವ ಮುಖ್ಯ ವಿಧಾನ. *ಈ* ಎರಡೂ ವಿಧಾನಗಳ ಗುಣಾವಗುಣಗಳನ್ನು *ಈ* ಪುಸ್ತಕದಲ್ಲಿ ವಿವರಿಸುತ್ತಾ ಇವೆರಡೂ ಹೇಗೆ ಒಂದಕ್ಕೊಂದು ಪೂರಕವಾಗಬಲ್ಲವೆಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.



**೪೮೩. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**

ಸಂ: ಎಚ್.ಎಸ್. ಶ್ರೀಮತಿ

ಪುಟ: xii+೬೫೦, ವರ್ಷ: ೨೦೦೬, ರೂ: ೪೦೦.೦೦

ಪರಿವಿಡಿ

೧. ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಮಹಿಳಾ ಸಾಹಿತ್ಯದ ಪರಿಗಣನೆ

೨. ಮಹಿಳಾ ಸೃಜನಶೀಲತೆ ಮತ್ತು ಕವಿ, ಕೃತಿ, ಓದುಗ ನೆಲೆಯ ಸಾಹಿತ್ಯ ಚರ್ಚೆಗಳು

೩. ಮಹಿಳಾ ಸೃಜನಶೀಲತೆ ಮತ್ತು ಸಾಮಾಜಿಕತೆ

೪. ಪ್ರಾಚೀನ ಕನ್ನಡ ಮಹಿಳಾ ಸಾಹಿತ್ಯ : ಪ್ರಾರಂಭಿಕ ಘಟ್ಟ

೫. ಕ್ರಿ.ಶ. ೧೫೫೦-೧೮೯೯ ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ

೬. ತಿರುಮಲಾಂಬ ಅವರಿಂದ ೧೯೫೦ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ

೭. ೧೯೫೦-೧೯೭೫ ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ

೮. ೧೯೭೫ರ ಅನಂತರದ ಕನ್ನಡ ಮಹಿಳಾ ಸಾಹಿತ್ಯ

೯. ಸೃಜನೇತರ ಕನ್ನಡ ಮಹಿಳಾ ಸಾಹಿತ್ಯ

೧೦. ಮಹಿಳಾ ಜನಪದ ಸಾಹಿತ್ಯ : ಸಂಗ್ರಹ ಮತ್ತು ಅಧ್ಯಯನಗಳು

ಪ್ರಾಚೀನ ಕನ್ನಡ ಮಹಿಳಾ ಸಾಹಿತ್ಯ, ಮಧ್ಯಕಾಲೀನ ಮಹಿಳಾ ಸಾಹಿತ್ಯಗಳ ಬಳಿಕ ಆಧುನಿಕ ಮಹಿಳಾ ಸಾಹಿತ್ಯ ೩ಮತ್ತು ೪ನೇ ಘಟ್ಟಗಳು ವ್ಯಾಪಕ ಶೋಧ ಮತ್ತು ಸೂಕ್ಷ್ಮ ಅವಲೋಕನಗಳ ಮೂಲಕ ಇಲ್ಲಿ ಅಧ್ಯಯನಕ್ಕೆ ಒಳಗಾಗಿವೆ. ಇದರೊಂದಿಗೆ ಲಿಖಿತ ಸಾಹಿತ್ಯ ಚರಿತ್ರೆಯಲ್ಲಿ ಹೊರಗುಳಿದ, ಮೌಖಿಕ ಪರಂಪರೆಯ ಜೀವನಾಡಿಯಾಗಿರುವ ಮಹಿಳಾ ಜನಪದ ಸಾಹಿತ್ಯವನ್ನು ಕುರಿತ ವಿಶೇಷ ಅಧ್ಯಯನವು ಕೂಡ ಇಲ್ಲಿ ಸೇರ್ಪಡೆಯಾಗಿರುವುದು ತುಂಬ ಔಚಿತ್ಯಪೂರ್ಣ ವಾಗಿದೆ. ಆಳವಾದ ಅಧ್ಯಯನ ಮತ್ತು ಸೂಕ್ಷ್ಮ ಅವಲೋಕನ ಶಕ್ತಿಯಿಂದ *ಈ* ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

**೪೮೪. ಕನ್ನಡ ವ್ಯಾಕರಣ ಪರಂಪರೆ**

ಲೇ: ಡಿ.ಎಂ. ಶಂಕರಭಟ್

ಪುಟ: ii+೨೫, ವರ್ಷ: ೧೯೯೪, ರೂ: ೨.೦೦

ಕನ್ನಡ ಭಾಷೆಯ ವ್ಯಾಕರಣದ ಮೂಲಸೂತ್ರಗಳು ಸಂಸ್ಕೃತ, ಇಂಗ್ಲಿಷ್ ಮೊದಲಾದ ಇಂಡೋ ಯುರೋಪಿಯನ್ ಭಾಷೆಗಳಲ್ಲಿ ಕಾಣಿಸುವ ವ್ಯಾಕರಣದ ಮೂಲಸೂತ್ರಗಳಿಗಿಂತ ತೀರ ಭಿನ್ನವಾದವುಗಳು. ಇವುಗಳ ಅಧ್ಯಯನಕ್ಕಾಗಿ ಕನ್ನಡದ್ದೇ ಆದ ವ್ಯಾಕರಣ ಪರಂಪರೆಯೊಂದನ್ನು ಸಿದ್ಧಪಡಿಸಿಕೊಳ್ಳುವುದು ಅತ್ಯವಶ್ಯ. ಹೀಗೆ ಸಿದ್ಧಪಡಿಸಬೇಕಾಗಿರುವ ಕನ್ನಡ ವ್ಯಾಕರಣ ಪರಂಪರೆ ಸಂಸ್ಕೃತ ಮತ್ತು ಇಂಗ್ಲಿಷ್ ವ್ಯಾಕರಣ ಪರಂಪರೆಗಳಿಗಿಂತ ಯಾವ ಯಾವ ರೀತಿಯಲ್ಲಿ ಭಿನ್ನವಾಗಿರಲು ಸಾಧ್ಯ ಎಂಬುದನ್ನು ಸೂಚಿಸಲು ವ್ಯಾಕರಣದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

**೪೮೫. ಕನ್ನಡಶೈಲಿ ಕೈಪಿಡಿ (ಮೊದಲನೇ ಮುದ್ರಣ)**

ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು

ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು

ಪುಟ: xii+೨೬೦, ವರ್ಷ: ೧೯೯೫, ರೂ: ೮೦.೦೦

ಪರಿವಿಡಿ

೧. ಕನ್ನಡ ಶೈಲಿ

೨. ಬರಹ

೩. ಸಂಶೋಧನಾ ಬರಹ

೪. ಪುಸ್ತಕ

೫. ಮುದ್ರಣ





ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಲು ಹಾಗೂ ಸಂವಹನಶೀಲವಾಗುವಂತೆ ಪ್ರಕಟಿಸಲು ವಸ್ತುನಿಷ್ಠವಾದ, ವಿವರಣಾತ್ಮಕವಾದ ಪ್ರಾತಿನಿಧಿಕವಾದ ಬರೆಹದ ಕೈಪಿಡಿ ಇದಾಗಿದೆ.




**೪೮೬. ಕನ್ನಡಶೈಲಿ ಕೈಪಿಡಿ (ಎರಡನೇ ಮುದ್ರಣ)**

ಸಂ. : ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು

ಪುಟ: xii+೨೬೦, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಕನ್ನಡ ಶೈಲಿ

೨. ಬರಹ

೩. ಸಂಶೋಧನಾ ಬರಹ

೪. ಪುಸ್ತಕ

೫. ಮುದ್ರಣ

ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಲು ಹಾಗೂ ಸಂವಹನಶೀಲವಾಗುವಂತೆ ಪ್ರಕಟಿಸಲು ವಸ್ತುನಿಷ್ಠವಾದ, ವಿವರಣಾತ್ಮಕವಾದ ಪ್ರಾತಿನಿಧಿಕವಾದ ಬರೆಹದ ಕೈಪಿಡಿ ಇದಾಗಿದೆ.




**೪೮೭. ಕನ್ನಡ ಸಂಕ್ಷಿಪ್ತ ವ್ಯಾಕರಣ**

ಲೇ: ಕೆ.ಕುಶಾಲಪ್ಪಗೌಡ

ಪುಟ: viii+೪೪, ವರ್ಷ: ೨೦೦೭, ರೂ: ೪೦

ಪರಿವಿಡಿ

೧. ಕನ್ನಡದ ಸಂಕ್ಷಿಪ್ತ ವ್ಯಾಕರಣ

೨. ಕನ್ನಡದ ಭಾಷಿಕ ಅಧ್ಯಯನ-ವರ್ಣನಾತ್ಮಕ

೩. ಸಂಧಿ

೪. ಕನ್ನಡ ಕ್ರಿಯಾಪದಗಳ ಮತ್ತು ಅವುಗಳ ವರ್ಗೀಕರಣ.

ಕನ್ನಡ ವ್ಯಾಕರಣವನ್ನು ಕುರಿತು ಸರಳವಾಗಿ, ಸಮರ್ಪಕವಾಗಿ ವ್ಯಾಪಕ ನಿದರ್ಶನಗಳೊಂದಿಗೆ ಸಿದ್ಧವಾದ ಪಠ್ಯವಿದು. ಶಾಲೆಗಳಲ್ಲಿ ಕನ್ನಡ ವ್ಯಾಕರಣವನ್ನು ಸಮರ್ಪಕವಾಗಿ ಪ್ರಮಾಣಬದ್ಧ ವಾಗಿ ಕಲಿಸುವ ದೃಷ್ಟಿಯಿಂದ *ಈ* ವ್ಯಾಕರಣ ಗ್ರಂಥ ವಿಶೇಷ ಮಹತ್ವವುಳ್ಳದ್ದಾಗಿದೆ.

**೪೮೮. ಕನ್ನಡದಲ್ಲಿ ಪ್ರತ್ಯಯಗಳು**

ಲೇ: ಸಾಂಬಮೂರ್ತಿ

ಪುಟ: x+೪೬, ವರ್ಷ: ೨೦೦೬, ರೂ: ೩೦.೦೦

ಪರಿವಿಡಿ

೧. ವಚನ ಪ್ರತ್ಯಯ

೨. ವಿಭಕ್ತಿ ಪ್ರತ್ಯಯ

೩. ಕಾಲವಾಚಕ ಪ್ರತ್ಯಯ

೪. ಕೃತ್ಪ್ರತ್ಯಯಗಳು

೫. ತದ್ಧಿತ ಪ್ರತ್ಯಯಗಳು

೬. ಆಖ್ಯಾತ ಪ್ರತ್ಯಯಗಳು

೭. ಇತರ ಪ್ರತ್ಯಯಗಳು

ಕೇಶಿರಾಜನ ಶಬ್ದ ಮಣಿದರ್ಪಣದಲ್ಲಿ ಪ್ರಸ್ತಾವಗೊಂಡ ವಚನ, ವಿಭಕ್ತಿ, ಕಾಲವಾಚಕ, ಕೃತ್, ತದ್ಧಿತ, ಆಖ್ಯಾತ ಪ್ರತ್ಯಯಗಳ ಜೊತೆಗೆ ಕನ್ನಡದಲ್ಲಿ ಇಂದು ಬಳಕೆಯಾಗುತ್ತಿರುವ ಪ್ರತ್ಯಯಗಳನ್ನು ಇಲ್ಲಿ ಕಲೆಹಾಕಿರುವುದು ಕನ್ನಡದ ಇಂದಿನ ಬಳಕೆಯ ದೃಷ್ಟಿಯಿಂದ ಮಹತ್ವ ಪೂರ್ಣವಾದುದು. ಕನ್ನಡವನ್ನು ಕನ್ನಡದಲ್ಲೇ ಬಳಸಲು ಮತ್ತು ಕನ್ನಡೇತರರಿಗೆ ಕನ್ನಡವನ್ನು ಕಲಿಯಲು *ಈ* ಕೃತಿಯ ನಿದರ್ಶನಗಳು ಅಗತ್ಯವಾದವು.




**೪೮೯. ಕೃಷಿ ಪದಕೋಶ**

ಸಂ: ಕೆ.ವಿ.ನಾರಾಯಣ ಮತ್ತು ಇತರರು

ಪುಟ: xxxii+೩೬೮, ವರ್ಷ: ೧೯೯೮, ರೂ: ೨೦೦.೦೦

ಪರಿವಿಡಿ

೧. ಉಪಕರಣಗಳು

೨. ಭೂಮಿ; ನೀರಾವರಿ

೩. ಗೊಬ್ಬರ; ಬೆಳೆಗಳು

೪. ಮಳೆ ಮತ್ತು ಹವಾಮಾನ

೫. ಕಳೆಗಳು; ರೋಗಗಳು

೬. ನಂಬಿಕೆ, ದೈವ, ಆಚರಣೆಗಳು

೭. ಆರ್ಥಿಕ ನೆಲೆಗಳು

೮. ಆಡಳಿತ; ಮಾರುಕಟ್ಟೆ

೯. ಅಳತೆ ಮತ್ತು ಮಾಪನ

೧೦. ಕ್ರಿಯಾಪದಗಳು

ಕೃಷಿಗೆ ಸಂಬಂಧಿಸಿದಂತೆ ದೊರಕುವ ಪದಗಳನ್ನು ಕರ್ನಾಟಕದ ಎಲ್ಲ ಜಿಲ್ಲೆಗಳಿಂದಲೂ ಸಂಗ್ರಹಿಸಿ *ಈ* ಪದಕೋಶದಲ್ಲಿ ಸಂಕಲಿಸಲಾಗಿದೆ. ಕೃಷಿಗೆ ಸಂಬಂಧಿಸಿದ *ಈ* ಕೆಳಗಿನ ವಲಯಗಳ ಪದಗಳನ್ನು ದಾಖಲಿಸಲಾಗಿದೆ. ೧. ಉಪಕರಣಗಳು ೨. ಭೂಮಿ ೩. ನೀರಾವರಿ ೪. ಗೊಬ್ಬರ ೫. ಬೆಳೆಗಳು ೬. ಮಳೆ ಮತ್ತು ಹವಾಮಾನ ೭. ಕಳೆಗಳು ೮. ರೋಗಗಳು ೯. ನಂಬಿಕೆ ದೈವ ಆಚರಣೆ ೧೦. ಆರ್ಥಿಕ ನೆಲೆಗಳು ೧೧. ಆಡಳಿತ ೧೨. ಮಾರುಕಟ್ಟೆ ೧೩. ಅಳತೆ ಮತ್ತು ಮಾಪನ ೧೪. ಕ್ರಿಯಾಪದಗಳು *ಈ* ವಲಯಗಳ ಪದಸಂಗ್ರಹ ನಡೆಸಲು ಕ್ಷೇತ್ರಕಾರ್ಯದ ಜೊತೆಗೆ ಲಿಖಿತ ಆಕರಗಳಾದ ಶಾಸನಗಳು, ಸಾಹಿತ್ಯ ಕೃತಿಗಳು, ನಿಘಂಟುಗಳು ಮತ್ತು ವ್ಯವಸಾಯ ಸಂಬಂಧ ಕೈಪಿಡಿಗಳನ್ನು ಬಳಸಲಾಗಿದೆ.




**೪೯೦. ಜನಪದ ನುಡಿಗಟ್ಟುಗಳ ಕೋಶ**

ಲೇ: ಸುಧಾಕರ

ಪುಟ: XLii+೫೨೮, ವರ್ಷ: ೨೦೦೬, ರೂ: ೨೦೦

ನಮ್ಮ ಆಧುನಿಕ ಕನ್ನಡ ಹೆಚ್ಚೆಚ್ಚು ಬರಡಾಗುತ್ತಾ ಇಂಗ್ಲಿಷ್ ನುಡಿಗಟ್ಟುಗಳ ಅನುಕರಣೆಯಾಗುತ್ತಾ ತನ್ನ ಜೀವಧಾತುವನ್ನು ಕಳೆದುಕೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ *ಈ* ಬೃಹತ್ ಕೋಶ ಸಂಸ್ಕೃತಿಯ ಗಣಿಯಾಗಿ ಬಹಳ ಮಹತ್ವಪೂರ್ಣವಾಗಿದೆ. ಭಾವ ವ್ಯಂಜಕತೆಯುಳ್ಳ ಕನ್ನಡ ಭಾಷೆಯ ಅರ್ಥದ ಬಹು ನೆಲೆಗಳನ್ನು, ಧ್ವನಿ ಪರಂಪರೆಯ ಅನಂತ ಸಾಧ್ಯತೆಗಳನ್ನು ಇಲ್ಲಿನ ನುಡಿಗಟ್ಟುಗಳಲ್ಲಿ ಕಾಣಬಹುದು. *ಈ* ನುಡಿಗಟ್ಟುಗಳ ಕೋಶದ ಪ್ರತಿಯೊಂದು ನುಡಿಗಟ್ಟಿನ ಅರ್ಥ, ನಿಷ್ಪತ್ತಿ ಹಾಗೂ ಅದರ ಸಾಂದರ್ಭಿಕ ಹುಟ್ಟಿನ ವಿವರವನ್ನು ದಾಖಲಿಸುತ್ತಲೇ ಹೆಚ್ಚು ಸ್ಫಟಿಕ ಸ್ಪಷ್ಟಗೊಳಿಸುವಂತೆ ಕೊನೆಯಲ್ಲಿ ಒಂದು ಪ್ರಯೋಗವನ್ನು ನೀಡಲಾಗಿದೆ.




**೪೯೧. ತೌಲನಿಕ ದ್ರಾವಿಡ ವ್ಯಾಕರಣ**

ಇಂಗ್ಲೀಷ್ ಮೂಲ : ರಾಬರ್ಟ್ ಕಾಲ್ಡ್‌ವೆಲ್

ಕನ್ನಡಕ್ಕೆ ಅನು : ಮಾಧವ ಪೆರಾಜೆ

ಪುಟ: xii+೬೧೮, ವರ್ಷ: ೨೦೦೫, ರೂ: ೨೦೦.೦೦

ಪರಿವಿಡಿ

೧. ಧ್ವನಿಗಳು

೨. ಧಾತುಗಳು

೩. ನಾಮಪದ

೪. ಸಂಖ್ಯಾವಾಚಿಗಳು

೫. ಸರ್ವನಾಮ

೬. ಕ್ರಿಯಾಪದ

ರಾಬರ್ಟ್ ಕಾಲ್ಡ್‌ವೆಲ್ ಅವರ 'ಎ ಕಂಪ್ಯಾರಿಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಲಾಂಗ್ವೇಜಸ್' ಎಂಬ ಇಂಗ್ಲೀಷ್ ಗ್ರಂಥದ ಅನುವಾದವಿದು. *ಈ* ಗ್ರಂಥದಲ್ಲಿ ಪ್ರತಿಯೊಂದು ದ್ರಾವಿಡ ಭಾಷೆಯ ಇತಿಹಾಸದ ಬಗೆಗಿನ ಚರ್ಚೆಯಿದೆ. ಧ್ವನಿಮಾಗಳು, ಧಾತುಗಳು, ನಾಮಪದಗಳು, ಸಂಖ್ಯಾವಾಚಿಗಳು, ಸರ್ವನಾಮ, ಕ್ರಿಯಾಪದ ಮುಂತಾದ ಅಧ್ಯಾಯಗಳು *ಈ* ಗ್ರಂಥದಲ್ಲಿವೆ. *ಈ* ಅಧ್ಯಾಯಗಳು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯವನ್ನು ಪ್ರತಿಪಾದಿಸುತ್ತ ಅವುಗಳ ನಡುವೆ ಇರುವ ಸಾಮಾನ್ಯ ಸೂತ್ರವನ್ನು ವಿಶದೀಕರಿಸುತ್ತವೆ.

**೪೯೨. ದಾಸಸಾಹಿತ್ಯ : ಶಬ್ದ ಶಿಲ್ಪ**

ಲೇ: ಎಸ್.ಎಸ್.ಅಂಗಡಿ

ಪುಟ: x+೧೫೪, ವರ್ಷ: ೨೦೦೫, ರೂ: ೬೦

ಪರಿವಿಡಿ

೧. ದಾಸಸಾಹಿತ್ಯ : ಭಾಷಾಸ್ವರೂಪ
೨. ದಾಸಸಾಹಿತ್ಯ : ರಚನೆ ವಿನ್ಯಾಸ
೩. ದಾಸಸಾಹಿತ್ಯ : ಭಾಷೆ ಸಾಮಾಜಿಕ ವಿಡಂಬನೆ
೪. ದಾಸಸಾಹಿತ್ಯ : ಭಾಷೆ ಸಾಮಾಜಿಕೀಕರಣ
೫. ಕೀರ್ತನೆಗಳು : ಸ್ವೀಕರಣ ಕ್ರಿಯೆ
೬. ಕೀರ್ತನೆಗಳು : ಬಾಲಭಾಷೆ
೭. ಮಹಿಳಾ ಸಂವೇದನೆ : ಭಾಷೆ ಮತ್ತು ಸಂಸ್ಕೃತಿ
೮. ದಾಸಸಾಹಿತ್ಯ : ಶಬ್ದಚಿತ್ರಗಳು
೯. ದಾಸಸಾಹಿತ್ಯದ ವ್ಯಾಕರಣ

*ಈ* ಗ್ರಂಥವು ದಾಸರ ಕೀರ್ತನೆಗಳನ್ನು ಛಂದಸ್ಸು ಮತ್ತು ಭಾಷೆಯ ದೃಷ್ಟಿಯಿಂದ ಅಧ್ಯಯನ ಮಾಡಿದ ತುಂಬಾ ಉತ್ತಮವಾದ ಪ್ರಯತ್ನ. ದಾಸರ ಕೀರ್ತನೆಗಳನ್ನು ಉಲ್ಲೇಖ ಮಾಡುತ್ತಾ ಆ ಹಾಡುಗಳ ಲಯ ಮತ್ತು ಭಾಷೆ, ಅವುಗಳ ಸನ್ನಿವೇಶ ಮತ್ತು ರಚನೆಗಳೊಂದಿಗೆ ಹೊಂದಿರುವ ಸಂಬಂಧವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಬ್ದ ಚಿತ್ರಗಳನ್ನು ನಿರ್ಮಾಣ ಮಾಡುವ ದಾಸರ ಕೀರ್ತನೆಗಳು ಹೇಗೆ ಭಾಷೆಯ ರೂಪ ಮತ್ತು ಸತ್ವವನ್ನು ಒಳಗೊಂಡಿವೆ ಎಂಬುದನ್ನು ನಿದರ್ಶನಗೊಂದಿಗೆ ಇಲ್ಲಿ ಚರ್ಚಿಸಲಾಗಿದೆ. ಹೊರನೋಟಕ್ಕೆ ಇದು ದಾಸ ಸಾಹಿತ್ಯದ ಭಾಷೆ ಮತ್ತು ಛಂದಸ್ಸಿನ ಅಧ್ಯಯನದಂತೆ ಕಂಡರೂ ಸಮಗ್ರವಾಗಿ ಇದು ದಾಸಸಾಹಿತ್ಯದ ಶಾಬ್ದಿಕ ಮೀಮಾಂಸೆಯನ್ನು ಅಧ್ಯಯನ ಮಾಡಿದ ಮಹತ್ವದ ಕೃತಿ.




**೪೯೩. ದ್ರಾವಿಡ ನಿಘಂಟು**

ಸಂ: ಸುಬ್ಬಣ್ಣ ರೈ ಮತ್ತು ಇತರರು

ಪುಟ: xiv+೧೪೮, ವರ್ಷ: ೨೦೦೧, ರೂ: ೮೦.೦೦

ಇಲ್ಲಿ ಕನ್ನಡವು ಆಕರ ಭಾಷೆಯಾಗಿದೆ. ಒಟ್ಟು ೪ ಸಾವಿರದಷ್ಟು ಕನ್ನಡ ಪದಗಳನ್ನಾಯ್ದು ಅವುಗಳಿಗೆ ತಮಿಳು, ತುಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ಬಳಕೆಯಲ್ಲಿರುವ ಸಮಾನಾರ್ಥಕಗಳನ್ನು ನೀಡಲಾಗಿದೆ. ಆಸಕ್ತ ಕನ್ನಡಿಗರನ್ನು ದೃಷ್ಟಿಯಲ್ಲಿರಿಸಿಕೊಂಡು *ಈ* ಕೋಶ ಸಿದ್ಧಪಡಿಸಲಾಗಿದೆ. ಎಲ್ಲ ಭಾಷೆಗಳ ರೂಪಗಳನ್ನು ಕನ್ನಡ ಲಿಪಿಯಲ್ಲೇ ನೀಡಲಾಗಿದೆ.

**೪೯೪. ದ್ರಾವಿಡಶಾಸ್ತ್ರ**

ಸಂ: ಮಲ್ಲೇಪುರಂ ಜಿ. ವೆಂಕಟೇಶ

ಪುಟ: XX+೧೫೬, ವರ್ಷ: ೨೦೦೩, ರೂ: ೭೦.೦೦

ಪರಿವಿಡಿ

೧. ದ್ರಾವಿಡ ಆರ್ಯ ಪರಿಕಲ್ಪನೆ
೨. ದ್ರಾವಿಡ ಸಂಸ್ಕೃತಿ ಚಿಂತನೆಯ ತಾತ್ವಿಕ ಹಿನ್ನೆಲೆ
೩. ಆರ್ಯ ದ್ರಾವಿಡ ಪರಿಕಲ್ಪನೆ
೪. ದ್ರಾವಿಡ ಸಂಸ್ಕೃತಿ
೫. ದ್ರಾವಿಡ ಭಾಷಾ ಪರಿವಾರಿಕೆ ಸೇರಿದ ಕುಳವ ಭಾಷೆಯ ವೈಶಿಷ್ಟ್ಯಗಳು
೬. ದ್ರಾವಿಡ ಭಾಷೆಗಳ ಕಾಗುಣಿತ ವ್ಯವಸ್ಥೆ
೭. ದ್ರಾವಿಡ ಡೆಕ್ಕನ್ ದಕ್ಷಿಣ ಭಾರತ
೮. ಜರ್ಮನಿಯ ಪ್ರಸಿದ್ಧ ದ್ರಾವಿಡಾಧ್ಯಯನಕಾರರು
೯. ದಕ್ಷಿಣ ಭಾರತದಲ್ಲಿ ಸಾಮಾಜಿಕ ಭಾಷಾವಿಜ್ಞಾನದ ಸಂಶೋಧನೆ
೧೦. ವೇಮನ ಮತ್ತು ಇತರ ಅನುಭಾವಿಗಳು

ದ್ರಾವಿಡ ಭಾಷೆಗಳ ಅಕ್ಷರ ವ್ಯವಸ್ಥೆಯಿಂದ ಹಿಡಿದು, ಅದರ ಪ್ರಧಾನ ಮತ್ತು ಉಪಭಾಷೆಗಳ ವೈಶಿಷ್ಟ್ಯವನ್ನು, ಆರ್ಯ ದ್ರಾವಿಡರ ಪರಿಕಲ್ಪನೆಯ ವಿಶ್ಲೇಷಣೆಯನ್ನು, ದ್ರಾವಿಡ ಸಂಸ್ಕೃತಿಯ ವಿಶಿಷ್ಟ ಮತ್ತು ಅನನ್ಯ ಆಯಾಮಗಳನ್ನು, *ಈ* ಸಂಸ್ಕೃತಿ ಚಿಂತನೆಯ ತಾತ್ವಿಕ ಹಿನ್ನೆಲೆಯನ್ನು ಮತ್ತು ಆರ್ಯ ದ್ರಾವಿಡ ಪರಿಕಲ್ಪನೆಯ ಸ್ವರೂಪವನ್ನು *ಈ* ಕೃತಿಯಲ್ಲಿ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಲಾಗಿದೆ.




**೪೯೫. ದಿನದಿನ**

ಸಂ: ಕೆ.ವಿ.ನಾರಾಯಣ ಮತ್ತು ಇತರರು

ಪುಟ: x+೧೭೮, ವರ್ಷ: ೧೯೯೭, ರೂ: ೬೫.೦೦

ಇದು ಹೊಸಪದ, ರಚನೆಗಳ ಕೋಶ. ಕೋಶದ ಕೊನೆಯಲ್ಲಿ, ಕೋಶದಲ್ಲಿ ದಾಖಲಾದ ಪದ, ರಚನೆಗಳ ಹಿನ್ನಿಘಂಟೊಂದನ್ನು ನೀಡಲಾಗಿದೆ. ಭಾಷಾಧ್ಯಯನಕ್ಕೆ ಇದು ತುಂಬ ಸಹಕಾರಿಯಾಗಿದೆ.




**೪೯೬. ದಿನದಿನ ೨**

ಸಂ: ಸಾಂಬಮೂರ್ತಿ

ಪುಟ: xii+೧೩೦, ವರ್ಷ: ೨೦೦೧, ರೂ: ೬೦.೦೦

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗುವ ನಮ್ಮ ಕನ್ನಡ ನಿಯತಕಾಲಿಕೆಯಲ್ಲಿ ವಿವಿಧ ಮೂಲಗಳಿಂದ ಸಂಗ್ರಹಿಸಲಾದ ಕುತೂಹಲಕರ ಪದಗಳನ್ನು ಸಂಗ್ರಹಿಸಿ ಅದರ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ. ದಿನದಿನವೂ ಹುಟ್ಟಿಕೊಳ್ಳುವ ಭಾಷೆಯ ನೂನ್ಯತೆಯನ್ನು ಆವಿಷ್ಕಾರಗಳನ್ನು ಪರಿಶೀಲಿಸಿ ನಮ್ಮ ಭಾಷಾಕೋಶವನ್ನು ಬೆಳೆಸುವ ಮತ್ತು ಅವುಗಳಿಗೆ ಭಾಷಾಶಾಸ್ತ್ರೀಯ ಆಲೋಚನೆಗಳ ಚೌಕಟ್ಟನ್ನು ಹಾಕುವ ಪರಿ ಇದು. ಜೀವಂತ ಭಾಷೆಯ ಬೆಳವಣಿಗೆಯಲ್ಲಿ ಮತ್ತು ತ್ರಿವಿಕ್ರಮತ್ವದಲ್ಲಿ ಆಸಕ್ತಿ ಇರುವ ಎಲ್ಲರು ಕುತೂಹಲದಿಂದ ಗಮನಿಸಬೇಕಾದ ಕೃತಿ. ಅಷ್ಟೇ ಅಲ್ಲ, ಭಾಷೆಗೆ ಸಂಬಂಧಿಸಿದ ಹೊಸ ಚರ್ಚೆಗಳಿಗೆ ಅವಕಾಶ ಮಾಡಿಕೊಡುವ ಕೃತಿಯೂ ಇದಾಗಿದೆ.

**೪೯೭. ದಿನದಿನ-೩**

ಸಂ: ಪಿ.ಮಹಾದೇವಯ್ಯ

ಪುಟ: ೧೪+೯೦, ವರ್ಷ: ೨೦೦೬, ರೂ: ೬೦.೦೦

ಪ್ರಸ್ತುತ ಪದಕೋಶದಲ್ಲಿ ೫೭೫ ಪದಗಳಿದ್ದು, ಪದಗಳನ್ನು ಆಕಾರಾದಿಯಾಗಿ ಜೋಡಿಸುವುದರ ಜತೆಗೆ, ಹಿನ್ನಿಘಂಟನ್ನು ಕೊಡಲಾಗಿದೆ. ಓದುಗರಿಗೆ ಅಗತ್ಯವಿರುವ ಪದಗಳ ವಿವರಣೆಯನ್ನು ಹಿನ್ನಿಘಂಟಿನ ಸಹಾಯದಿಂದ ಸುಲಭವಾಗಿ ಪ್ರವೇಶಿಸಬಹುದು.

**೪೯೮. ದ್ವಿಭಾಷಿಕತೆ**

ಲೇ: ಕೆ.ವಿ.ನಾರಾಯಣ

ಪುಟ: iv+೩೨, ವರ್ಷ: ೧೯೯೮, ರೂ: ೬.೦೦

ದ್ವಿಭಾಷಿಕರು, ದ್ವಿಭಾಷಿಕತೆ ಸನ್ನಿವೇಶ ಹುಟ್ಟುವ ಬಗೆ, ದ್ವಿಭಾಷಿಕತೆಯ ಸಾಮುದಾಯಿಕ ನೆಲೆಗಳ ಬಗೆ *ಈ* ಕಿರುಕೃತಿಯಲ್ಲಿ ಅಧ್ಯಯನಾತ್ಮಕ ವಿಶ್ಲೇಷಣೆಯಿದೆ. ದ್ವಿಭಾಷಿಕತೆಯ ಬಗ್ಗೆ ಬಂದಿರುವ ಮೊದಲ ಕೃತಿ ಇದಾಗಿದೆ.

**೪೯೯. ದೇಶಭಾಷಾ ನಿರ್ಮಾಣ**

ಮೂ: ಷೆಲ್ಡನ್ ಪೊಲಾಕ್

ಅನು: ಕೆ ವಿ ಅಕ್ಷರ

ಪುಟ: ii+೨೮, ವರ್ಷ: ೨೦೦೦, ರೂ: ೧೦.೦೦

ಷಿಕಾಗೋ ವಿಶ್ವವಿದ್ಯಾಲಯದ ಸಂಸ್ಕೃತಿ ಹಾಗು ಭಾರತೀಯ ಭಾಷೆಗಳ ಪ್ರಾಧ್ಯಾಪಕ ಷೆಲ್ಡನ್ ಪೊಲಾಕ್ ಅವರ ಕಾಸ್ಮೋ ಪಾಲಿಟನ್ ವೆರ್ನಾಕುಲರ್ ಎಂಬ ಲೇಖನದ ಕನ್ನಡಾನುವಾದವಾದ 'ವಿಶ್ವಾತ್ಮಕ ದೇಶಭಾಷೆ' ಲೇಖನದ ಆಯ್ದ ಭಾಗಗಳನ್ನು ಒಳಗೊಂಡಿದೆ *ಈ* ಕಿರುಪುಸ್ತಕ.




**೫೦೦. ಧ್ವನಿ ವಿಜ್ಞಾನ**

ಬಿ.ಬಿ. ರಾಜಪುರೋಹಿತ

ಪುಟ : viii + ೧೦೦, ವರ್ಷ : ೨೦೦೯, ರೂ. ೬೦

ಪರಿವಿಡಿ

೧. ಉಚ್ಚಾರಣಾ ಧ್ವನಿವಿಜ್ಞಾನ
೨. ಅಂತಾರಾಷ್ಟ್ರೀಯ ಧ್ವನ್ಯಾಲೇಖ ಲಿಪಿಮಾಲೆ
೩. International phonetic Alphabet
೪. ಶ್ರವಣ ಧ್ವನಿ ವಿಜ್ಞಾನ
೫. ಧ್ವನಿ ಗುರುತಿಸುವುದು
೬. ತಾಂತ್ರಿಕ ಧ್ವನಿವಿಜ್ಞಾನ
೭. ಕನ್ನಡದ ಧ್ವನಿಗಳ ಲಕ್ಷಣಗಳು
೮. ಸ್ಪೆಕ್ಟ್ರೋಗ್ರಾಫಿಕ್ ವಿಶ್ಲೇಷಣೆ
೯. ಎಕ್ಸ್‌ರೇದಿಂದ ಧ್ವನಿ ವಿವರಣೆ

ಮೌಖಿಕ ಅಭಿವ್ಯಕ್ತಿಯ ಮೂಲ ಘಟಕವಾದ ಧ್ವನಿಯನ್ನು ಕುರಿತ ವಿವಿಧ ಆಯಾಮಗಳ ಅಧ್ಯಯನ ಸಾಧ್ಯತೆಯನ್ನು ಅಧಿಕೃತವಾಗಿ ಪರಿಚಯಿಸುವ ಉದ್ದೇಶ *ಈ* ಕೃತಿಯದ್ದು. ಪ್ರತಿ ಭಾಷೆ ತನ್ನದೇ ಆದ ಧ್ವನಿ ವಿನ್ಯಾಸವನ್ನು ಹೊಂದಿರುತ್ತದೆ. ತನ್ನ ಭಾಷಾ ಧ್ವನಿಗಳನ್ನು ಬಳಸುವಲ್ಲಿ ಒಬ್ಬ ವ್ಯಕ್ತಿ ಪರಿಣತಿ ಸಾಧಿಸಿರುವುದು ಸಾಮಾನ್ಯವಾದರೂ ತನ್ನದಲ್ಲದ ಭಾಷೆಯನ್ನು ಗ್ರಹಿಸುವಲ್ಲಿ ತನ್ನ ಧ್ವನಿ ವಿನ್ಯಾಸದ ಮೂಲಕವೇ ಗ್ರಹಿಸುವುದು ಸಹಜ. *ಈ* ಹಿನ್ನೆಲೆಯಲ್ಲಿ

ಇಡಿಯಾಗಿ ಜಗತ್ತಿನ ಎಲ್ಲ ಭಾಷೆಗಳಿಗೆ ಅನ್ವಯಿಸಬಹುದಾದ ಧ್ವನಿಸ್ವರೂಪವನ್ನು ಅದರ ಉಚ್ಚಾರ, ಪ್ರಸಾರ ಹಾಗೂ ಗ್ರಹಿಕೆಗಳ ನೆಲೆಯಲ್ಲಿ ತಿಳಿಯಪಡಿಸುವುದರ ಮೂಲಕ ಹಾಗೂ ಅದಕ್ಕೆ ಸಂವಾದಿಯಾಗಿ ಜಾಗತಿಕವಾಗಬಹುದಾದ ಬರಹ ಸಂಕೇತಗಳನ್ನು ಪರಿಚಯಿಸುವುದು ಮತ್ತು ಸ್ಪಷ್ಟ ಉಚ್ಚಾರ ಹಾಗೂ ಗ್ರಹಿಕೆಗೆ ಅನುವಾಗಬಹುದಾದ ಆಶಯದೊಂದಿಗೆ ಪ್ರಸ್ತುತ ಕೃತಿಯನ್ನು ರೂಪಿಸಲಾಗಿದೆ.

**೫೦೧. ನಿಘಂಟು ರಚನಾ ವಿಜ್ಞಾನ**

ಲೇ: ವಿಲ್ಯಂ ಮಾಡ್ತಾ ಮತ್ತು ಆರ್.ವೈ.ಕುಲಕರ್ಣಿ

ಪುಟ: x+೯೨, ವರ್ಷ: ೧೯೯೪, ರೂ: ೧೫.೦೦

ಪರಿವಿಡಿ

೧. ನಿಘಂಟು ವಿಜ್ಞಾನ

೨. ನಿಘಂಟು ರಚನೆ

೩. ಕನ್ನಡ ನಿಘಂಟುಗಳ ಬೆಳವಣಿಗೆ

೪. ವೃತ್ತಿ ಪದಕೋಶಗಳ : ಸಂಕ್ಷಿಪ್ತ ಚರಿತ್ರೆ

೫. ಪ್ರಾಯೋಗಿಕ ಪ್ರಶ್ನಾವಳಿಗಳು

೬. ವೃತ್ತಿ ಪದಕೋಶ

೭. ಸ್ವರೂಪ ಮತ್ತು ರಚನೆ

ಭಾಷಾ ಅಧ್ಯಯನದ ಒಂದು ಪ್ರಮುಖ ವಲಯವಾದ ನಿಘಂಟು ವಿಜ್ಞಾನ ಹಾಗೂ ನಿಘಂಟು ರಚನಾ ವಿಜ್ಞಾನಗಳನ್ನು ಶಾಸ್ತ್ರೀಯವಾಗಿ ವಿವೇಚಿಸುವ ಕೃತಿಯಿದು. ನಿಘಂಟು ರಚನೆಯ ತಾತ್ತ್ವಿಕ ಶೋಧನೆ ಮತ್ತು ನಿಘಂಟು ರಚನೆಯ ಅನ್ವಯಿಕ ನೆಲೆಗಳ ವಿವೇಚನೆಯ ಪ್ರಯತ್ನ ಇಲ್ಲಿದೆ. ನಿಘಂಟು, ಶಬ್ದಕ್ಕೆ ಅರ್ಥ ತಿಳಿಸುವ ಜ್ಞಾನ ಶಾಖೆಯಷ್ಟೇ ಆಗಿರದೆ ಕಾಲದಿಂದ ಕಾಲಕ್ಕೆ ಒಂದು ಪ್ರದೇಶದ ಸಂಸ್ಕೃತಿ ಹಾಗೂ ಸಾಮಾಜಿಕ ಒತ್ತಡಗಳನ್ನು ದಾಖಲಿಸುವ ಕೃತಿಯೂ ಆಗಿರುವುದು ಸಾಧ್ಯ ಎನ್ನುವುದನ್ನು *ಈ* ಪುಸ್ತಕ ವಿವರಿಸುತ್ತದೆ.

**೫೦೨. ನಿಷೇಧಾರ್ಥ ಪದಕೋಶ**

ಲೇ: ಸಾಂಬಮೂರ್ತಿ

ಪುಟ: xv+೬೧, ವರ್ಷ: ೧೯೯೧, ರೂ: ೪೦.೦೦

*ಈ* ಪದಕೋಶದಲ್ಲಿ ಕನ್ನಡದಲ್ಲಿ ಬಳಕೆಯಿರುವ ನಿಷೇಧಾರ್ಥ ಪದಗಳ ವಿಶ್ಲೇಷಣೆ ಸ್ವರೂಪವನ್ನು ತಿಳಿಸಲಾಗಿದೆ. ಕನ್ನಡದಲ್ಲಿ ನಿಷೇಧಾರ್ಥಗಳನ್ನು ಪಡೆಯಲು ಬಳಸುವ ಉಪಸರ್ಗಗಳಲ್ಲದೆ, ಪದಗಳನ್ನೂ ಸಹ ಬಳಸಿ ನಿಷೇಧಾರ್ಥ ಪಡೆಯಬಹುದಾಗಿದೆ. ಅಂತಹ ಪದಗಳನ್ನು ಸಹಾ *ಈ* ನಿಘಂಟು ಒಳಗೊಂಡಿದೆ. ಮಾಧ್ಯಮ, ಸಾಹಿತ್ಯ ಮತ್ತು ಭಾಷಾ ಪ್ರಭೇದಗಳಲ್ಲಿ ಬಳಕೆಯಲ್ಲಿರುವ ನಿಷೇಧ ರೂಪಗಳನ್ನಿಲ್ಲಿ ಸಂಗ್ರಹಿಸಲಾಗಿದೆ.



**೫೦೩. ನೇಕಾರ ವೃತ್ತಿ ಪದಕೋಶ**

ಲೇ: ಸಾಂಬಮೂರ್ತಿ

ಪುಟ: viii+೧೦೭, ವರ್ಷ: ೨೦೦೦, ರೂ: ೬೦.೦೦

ಪರಿವಿಡಿ

೧. ಉಪಕರಣ

೨. ಉಪಯೋಗಿ ವಸ್ತುಗಳು

೩. ಉತ್ಪಾದನೆ

೪. ಪಂಗಡಗಳು, ನಂಬಿಕೆ, ದೈವ, ಆಚರಣೆ

೫. ಕ್ರಿಯಾಪದ

೬. ಸಂಕೀರ್ಣ

೭. ಚಿತ್ರಗಳು

ನೇಕಾರಿಕೆ ವೃತ್ತಿಗೆ ಸಂಬಂಧಿಸಿದಂತೆ ವಿವಿಧ ರೀತಿಯ ಉಪಕರಣ, ಉಪಯೋಗಿ ವಸ್ತುಗಳು, ಉತ್ಪಾದನಾ ವಸ್ತು, ಕ್ರಿಯಾಪದಗಳು, ನಂಬಿಕೆ, ದೈವ, ಆಚರಣೆ ಇತ್ಯಾದಿಗಳಲ್ಲಿರುವ ಪದಗಳ ಸಂಗ್ರಹವೇ *ಈ* ಪದಕೋಶ. ಇಂದಿನ ಸಮಾಜದ ಜಾಗತೀಕರಣ, ಔದ್ಯಮೀಕರಣಗಳ ಒತ್ತಡಕ್ಕೆ ಸಿಲುಕಿ ಸಾಂಪ್ರದಾಯಿಕ ವೃತ್ತಿಗಳು ಹೊಸ ಹೊಸ ಪದಗಳನ್ನು ಬಳಕೆ ಮಾಡುತ್ತ ತಮ್ಮತನವನ್ನು ಕಳೆದುಕೊಳ್ಳುವ ಮೊದಲೇ ಅವುಗಳನ್ನು ಹಿಡಿದಿಟ್ಟು, *ಈ* ಕೋಶದಲ್ಲಿ ಸಂಗ್ರಹಿಸಲಾಗಿದೆ.



**೫೦೪. ಪಾಂಚಾಳ ವೃತ್ತಿ ಪದಕೋಶ**

ಲೇ: ಡಿ.ಪಾಂಡುರಂಗಬಾಬು

ಪುಟ: x+೧೨೩, ವರ್ಷ: ೨೦೦೦, ರೂ: ೭೫.೦೦

ಪರಿವಿಡಿ

೧. ಅಕ್ಕಸಾಲಿಕೆ

೨. ಬಡಗಿ

೩. ಕಮ್ಮಾರಿಕೆ

೪. ಶಿಲ್ಪಿ

೫. ಕಂಚುಗಾರಿಕೆ

ಬಡಗಿ, ಕಮ್ಮಾರ, ಅಕ್ಕಸಾಲಿ, ಕಂಚುಗಾರ, ಶಿಲ್ಪಿ *ಈ* ಐದು ವೃತ್ತಿಗಳಲ್ಲಿರುವವರು ಪಾಂಚಾಳರು. ಪಾಂಚಾಳರಲ್ಲಿ ವೃತ್ತಿ ಹೆಸರುಗಳೇ ಜಾತಿವಾಚಕಗಳಾಗಿವೆ. ಪಾಂಚಾಳರ ವೃತ್ತಿಗೆ ಸಂಬಂಧಿಸಿದ ಪದಗಳ ಕೋಶವೇ *ಈ* ಕೃತಿ.




**೫೦೫. ಬೇಟೆ : ಸಾಂಸ್ಕೃತಿಕ ಪದಕೋಶ**

ಲೇ: ಸ.ಚಿ. ರಮೇಶ್

ಪುಟ: xxiv+೧೬೮, ವರ್ಷ: ೨೦೦೧, ರೂ: ೮೦.೦೦

ಬೇಟೆಯ ವೃತ್ತಿ ಪ್ರವೃತ್ತಿಗಳು ದಿನನಿತ್ಯ ಜೀವನದ ಅಂಗಗಳಾಗಿ ಇದ್ದ ಕಾಲದಲ್ಲಿ *ಈ* ಬೇಟೆಯ ಸುತ್ತ ಹಲವು ಸಂಪ್ರದಾಯ, ಆಚರಣೆ, ನಂಬಿಕೆ, ವಿಧಿ ವಿಧಾನಗಳು ರೂಪುಗೊಳ್ಳುತ್ತ ಬಂದವು. ಇವು ರೂಪುಗೊಳ್ಳುತ್ತಿದ್ದಂತೆ ಇವುಗಳ ಜತೆಗೆ ಹಲವು ಪದಪುಂಜ ಗಳೂ ಸೃಷ್ಟಿಯಾದವು. ಮಲೆನಾಡ ಪರಿಸರದಲ್ಲಿ ಹೀಗೆ ಬೇಟೆ ಸಂಪ್ರದಾಯ ವಿಧಿ ವಿಧಾನ ಹಾಗೂ ಸಲಕರಣೆಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಪದಗಳನ್ನು *ಈ* ಕೋಶದಲ್ಲಿ ಕ್ರಮಬದ್ಧವಾಗಿ ದಾಖಲಿಸಲಾಗಿದೆ. ಅವುಗಳಿಗೆ ಅರ್ಥಗಳನ್ನೂ *ಈ* ಕೋಶದಲ್ಲಿ ನೀಡಿ, ಅವುಗಳು ಹುಟ್ಟಿಕೊಂಡ ಸಂದರ್ಭಗಳ ಸಾಂಸ್ಕೃತಿಕ ವಿವರಗಳನ್ನೂ ದಾಖಲಿಸಲಾಗಿದೆ.

**೫೦೬. ಭಾರತೀಯ ಭಾಷಾಧ್ಯಯನದ ಪರಂಪರೆ**

ಲೇ: ಜೆ. ಶ್ರೀನಿವಾಸಮೂರ್ತಿ

ಪುಟ: iv+೩೦, ವರ್ಷ: ೨೦೦೦, ರೂ: ೧೦.೦೦

ಭಾರತೀಯ ಸಂದರ್ಭದಲ್ಲಿ ಭಾಷಾಧ್ಯಯನದ ಪರಂಪರೆಯನ್ನು ಕುರಿತು *ಈ* ಕಿರುಕೃತಿ ಚರ್ಚಿಸುತ್ತದೆ.

**೫೦೭. ಭಾಷಾ ತಂತ್ರಜ್ಞಾನ**

ಸಂ: ಸಾಂಬಮೂರ್ತಿ

ಪುಟ : x+೯೬, ವರ್ಷ : ೨೦೦೯, ರೂ ೬೦.೦೦

ಪರಿವಿಡಿ

೧. ಭಾಷಾ ತಂತ್ರಜ್ಞಾನದ ವಿಕಾಸ
೨. ಕನ್ನಡ ಮತ್ತು ತಂತ್ರಜ್ಞಾನ
೩ ಕಂಪ್ಯೂಟರ್ ಆವಿಷ್ಕಾರ ಮತ್ತು ಬೆಳವಣಿಗೆ
೪. ತಂತ್ರಜ್ಞಾನ ಮತ್ತು ಸಮಾಜ
೫. ಕನ್ನಡ ಲಿಪಿ ವಿನ್ಯಾಸ ಕೆಲವು ಮಾತು
೬. ಭಾಷೆ ಮತ್ತು ತಂತ್ರಜ್ಞಾನ ಭಾರತೀಯ ಭಾಷೆಗಳಲ್ಲಿ ಕಂಪ್ಯೂಟರ್ ತಂತ್ರಜ್ಞಾನ
೭. ತಂತ್ರಜ್ಞಾನ ಮತ್ತು ಭಾಷಾ ಬಳಕೆ
೮. ಎಸ್‌ಎಂಎಸ್ ಮತ್ತು ಇಮೇಲ್ ಸೇವೆ, ಎಸ್‌ಎಂಎಸ್ ಭಾಷೆ
೯. ತಂತ್ರಜ್ಞಾನದ ಮೂಲಕ ಕನ್ನಡದ ಪ್ರಸಾರ

ಭಾಷಾ ಕ್ಷೇತ್ರದಲ್ಲಿ ವಿವಿಧ ಭಾಷಿಕ ಅಧ್ಯಯನ ಚಟುವಟಿಕೆಗಳಿಗಾಗಿ ಹಲವು ಬಗೆಯ ತಂತ್ರಾಂಶಗಳು *ಈ*ಗಾಗಲೆ ರೂಪುಗೊಂಡಿವೆ. ಕನ್ನಡ ಭಾಷಾ ಕ್ಷೇತ್ರದಲ್ಲಿ *ಈ* ಬಗ್ಗೆ ಲಭ್ಯವಿರುವ ಮಾಹಿತಿಯ ಕ್ರೋಢೀಕರಣಕ್ಕಾಗಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಭಾಷಾ ಮತ್ತು ತಂತ್ರಜ್ಞಾನ ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಮಹತ್ವದ ಲೇಖನಗಳು *ಈ* ಕೃತಿಯಲ್ಲಿವೆ.

**೫೦೮. ಭಾಷಾಂತರ**

ಲೇ: ಓ.ಎಲ್.ನಾಗಭೂಷಣ ಸ್ವಾಮಿ

ಪುಟ: ೨೬, ವರ್ಷ: ೧೯೯೩, ರೂ: ೧.೦೦

ಭಾಷಾಂತರದ ತಾತ್ತ್ವಿಕ ಚಿಂತನೆಗಳ ಪರಿಚಯವೇ *ಈ* ಕಿರುಪುಸ್ತಕದ ಉದ್ದೇಶ. ಭಾಷಾಂತರದ ಚರಿತ್ರೆ ಸುಮಾರು ಎರಡು ಸಾವಿರ ವರುಷಗಳಷ್ಟು ದೀರ್ಘವಾದುದು. *ಈ* ಪುಸ್ತಕ ಭಾಷಾಂತರದ ಎಲ್ಲ ಅಂಶಗಳನ್ನು ಸಮಗ್ರವಾಗಿ ಪರಿಚಯಿಸುತ್ತದೆ.

**೫೦೯. ಭಾಷಾಂತರದ ಸಾಂಸ್ಕೃತಿಕ ನೆಲೆಗಳು**

ಲೇ: ಕರೀಗೌಡ ಬೀಚನಹಳ್ಳಿ

ಪುಟ: xiv+೯೭, ವರ್ಷ: ೧೯೯೯, ರೂ: ೪೫.೦೦

ಪರಿವಿಡಿ

೧. ಭಾಷಾಂತರದ ಭಾಷೆಯಾಗಿ ಕನ್ನಡ
೨. ಭಾಷಾಂತರ ಮತ್ತು ರಾಜಕೀಯ ಸಾಂಸ್ಕೃತಿಕ ಒತ್ತಡಗಳು
೩. ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಭಾಷಾಂತರ
೪. ಭಾಷಾಂತರ : ಒಂದು ಅಪೂರ್ವವಾದ ಕಲ್ಯಾಣ ಘಟನೆ
೫. ಆಧುನಿಕ ಸಾಹಿತ್ಯದಲ್ಲಿ ಭಾಷಾಂತರ ಪ್ರಕ್ರಿಯೆ
೬. ಅನ್ಯ ಭಾಷೆಗಳಿಂದ ಕನ್ನಡಕ್ಕೆ ಬಂದ ಪುಸ್ತಕಗಳು
೭. ವಸಾಹತುಶಾಹಿ ಮತ್ತು ಭಾಷಾಂತರ ಕನ್ನಡ ಸಂದರ್ಭಗಳ ಪ್ರಕ್ರಿಯೆಗಳ ರೂಪುರೇಶೆ

ಶೈಕ್ಷಣಿಕ ಜ್ಞಾನ ಶಿಸ್ತುಗಳಲ್ಲಿ ಮುಖ್ಯವಾಗಿರುವ ಭಾಷಾಂತರದ ಬಗ್ಗೆ ಹಲವು ವಿದ್ವಾಂಸರು, ಹಲವು ದೃಷ್ಟಿಕೋನಗಳಿಂದ ಅಧ್ಯಯನ ನಡೆಸಿ ಬರೆದಿರುವ ಪ್ರಬುದ್ಧ ಲೇಖನಗಳನ್ನು ಸಂಪಾದಿಸಿ ಇಲ್ಲಿ ಸಂಕಲಿಸಲಾಗಿದೆ.




**೫೧೦. ವಸಾಹತುಶಾಹಿ ಮತ್ತು ಭಾಷಾಂತರ ಮೈಸೂರು ಮತ್ತು ಕನ್ನಡ ಪ್ರಕರಣಗಳು**

ಲೇ : ವಿ.ಬಿ. ತಾರಕೇಶ್ವರ್

ಪುಟ: viii+೧೬೦, ವರ್ಷ: ೨೦೦೫, ರೂ: ೮೦.೦೦

ಪರಿವಿಡಿ

೧. ವಸಾಹತುಶಾಹಿ ಮತ್ತು ಭಾಷಾಂತರ : ಸೈದ್ಧಾಂತಿಕ ಚೌಕಟ್ಟು

೨. ವಸಾಹತು ಸಂದರ್ಭದ ಕನ್ನಡ ಭಾಷಾಂತರ ಪ್ರಕ್ರಿಯೆಗಳು

೩. ಭಾಷಾಂತರ ಪರಿಕಲ್ಪನೆಯ ರಾಜಕೀಯ : ವಸಾಹತುಶಾಹಿ, ಮೈಸೂರು ಸಂಸ್ಥಾನ ಮತ್ತು ಜಾತಿ

೪. ಅಧ್ಯಯನದ ಇತಿ-ಮಿತಿಗಳು

ವಸಾಹತುಶಾಹಿ ಸಂದರ್ಭದಲ್ಲಿ ಕನ್ನಡದಲ್ಲಿ ನಡೆದ ಭಾಷಾಂತರ ಪ್ರಕ್ರಿಯೆಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಭಾಷಾಂತರ ಕೃತಿಯ ಆಯ್ಕೆಯಿಂದ ತೊಡಗಿ ಭಾಷಾಂತರ ವಿಧಾನ ಮತ್ತು ಆ ಕೃತಿಗಳು ಪ್ರತಿಪಾದಿಸುವ ಮೌಲ್ಯಗಳಂತಹ ತಾತ್ವಿಕ ವಿಷಯಗಳನ್ನು ಇಲ್ಲಿ ವಿವೇಚಿಸಲಾಗಿದೆ. ಕನ್ನಡವು ಪಶ್ಚಿಮದಿಂದ ಪಡೆಯುವ ಸಂಸ್ಕೃತಿಗಳ ಹಿಂದಿನ, ರಾಜಕೀಯ ಅಂಶಗಳನ್ನು *ಈ* ಕೃತಿಯಲ್ಲಿ ಗಮನಿಸಲಾಗಿದ್ದು, ಭಾಷಾಂತರವು ಹೇಗೆ ಸಂಸ್ಕೃತಿಯನ್ನು ರೂಪಿಸುತ್ತದೆ ಎನ್ನುವ ವಾದವನ್ನೂ ನಿದರ್ಶನಗಳೊಂದಿಗೆ ಇಲ್ಲಿ ವಿವರಿಸಲಾಗಿದೆ.

**೫೧೧. ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ**

ಸಂ: ಕೆ.ವಿ.ನಾರಾಯಣ

ಪುಟ: x+೬೭, ವರ್ಷ: ೨೦೦೦, ರೂ: ೪೫.೦೦

ಪರಿವಿಡಿ

೧. ಹೆಸರು : ತಾತ್ವಿಕತೆ

೨. ವ್ಯಕ್ತಿನಾಮ ಆಕರಗಳು

೩. ವ್ಯಕ್ತಿನಾಮಗಳು : ರಾಚನಿಕ ಅಧ್ಯಯನ

೪. ವ್ಯಕ್ತಿನಾಮಗಳು : ಚಾರಿತ್ರಿಕ ಹಿನ್ನೆಲೆ

೫. ವ್ಯಕ್ತಿನಾಮಗಳು : ಸಾಮಾಜಿಕ ಹಿನ್ನೆಲೆ

ವ್ಯಕ್ತಿನಾಮಗಳ ಅಧ್ಯಯನವು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಅವಶ್ಯವಾದುದು. ಹೆಸರುಗಳ ಸ್ವರೂಪ ಮತ್ತು ಬಳಕೆಯ ಬಗೆಗಳನ್ನು ಅಭ್ಯಾಸ ಮಾಡಿದರೆ ಸಂಸ್ಕೃತಿಯ ಕೆಲವು ನೆಲೆಗಳ ಪರಿಚಯವೂ ಸಾಧ್ಯವಾಗುತ್ತದೆ. *ಈ* ಗ್ರಂಥದಲ್ಲಿ ಮುಖ್ಯವಾಗಿ ವ್ಯಕ್ತಿನಾಮಗಳ ರಾಚನಿಕ ಅಧ್ಯಯನ, ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ವ್ಯಕ್ತಿನಾಮದ ತಾತ್ವಿಕತೆ ಮತ್ತು ವ್ಯಕ್ತಿನಾಮಗಳ ಬಗ್ಗೆಯ ಆಕರಗಳ ಬಗ್ಗೆ ೫ ಅಧ್ಯಯನಾತ್ಮಕ ಲೇಖನಗಳು ಸಂಕಲಿತ ಗೊಂಡಿವೆ.



**೫೧೨. ವಿವಿಧ ವೃತ್ತಿ ಪದಕೋಶ**

ಲೇ: ಅಶೋಕಕುಮಾರ ರಂಜೇರೆ

ಪುಟ: x+೯೨, ವರ್ಷ: ೨೦೦೦, ರೂ: ೬೦.೦೦

೧. ಗುಡಿಗಾರ

೨. ಮೇದಾರ ಮತ್ತು ಕೊರಚ

೩. ಮೀನುಗಾರ

೪. ಬಳೆಗಾರ

೫. ಉಪ್ಪಾರ

೬. *ಈ*ಡಿಗ

*ಈ* ವೃತ್ತಿ ಪದಕೋಶದಲ್ಲಿ ಒಟ್ಟು ಆರು ವೃತ್ತಿಗಳಲ್ಲಿನ ಪದಗಳನ್ನು ಸಂಗ್ರಹಿಸಲಾಗಿದೆ. ಗುಡಿಕಾರ, ಮೀನುಗಾರ, ಬಳೆಗಾರ, ಉಪ್ಪಾರ, *ಈ*ಡಿಗ, ಮತ್ತು ಮೇದಾರ *ಈ* ವೃತ್ತಿಯಲ್ಲಿ ಬಳಸುವ ಪದಗಳನ್ನು *ಈ* ಕೋಶದಲ್ಲಿ ಸಂಗ್ರಹಿಸಲಾಗಿದೆ.




**೫೧೩. ಸಂಕೀರ್ಣ ವೃತ್ತಿ ಪದಕೋಶ**

ಲೇ: ಎಸ್.ಎಸ್.ಅಂಗಡಿ

ಪುಟ: x+೧೨೧, ವರ್ಷ: ೨೦೦೦, ರೂ: ೭೦.೦೦

ಪರಿವಿಡಿ

೧. ಕುಂಬಾರ

೨. ಚಮ್ಮಾರ

೩. ಡೋಹರ

೪. ಅಗಸ

೫. ಕ್ಷೌರಿಕ

೬. ಹೂಗಾರ

೭. ಗೋಣಿಗ

೮. ಗಾಣಿಗ

ವಿವಿಧ ವೃತ್ತಿಪದಗಳ ಕೋಶ ಇದಾಗಿದ್ದು, *ಈ* ಕೋಶದಲ್ಲಿ ಕುಂಬಾರ, ಕ್ಷೌರಿಕ, ಚಮ್ಮಾರ, ಗಾಣಿಗ, ಡೋಹರ, ಹೂಗಾರ ವೃತ್ತಿಪದಗಳ ವಿವೇಚನೆಯಿದೆ. ಪ್ರತಿಯೊಂದು ವೃತ್ತಿಪದ ನಿಷ್ಪತ್ತಿ ಹಾಗೂ ಅದರ ಸ್ವರೂಪವನ್ನು ಹೇಳುವುದರೊಂದಿಗೆ ಆಯಾ ವೃತ್ತಿಯಲ್ಲಿ ಬಳಸುವ ಪದಗಳನ್ನು ಸಂಗ್ರಹಿಸಿ ನೀಡಲಾಗಿದೆ.



**೫೧೪. ಸಂಬಂಧವಾಚಕಗಳು ಮತ್ತು ಸಂಬೋಧನೆಗಳು**

ಲೇ: ಎಸ್.ಎಸ್.ಅಂಗಡಿ

ಪುಟ: x+೭೬, ವರ್ಷ: ೨೦೦೨, ರೂ: ೪೦.೦೦

ಪರಿವಿಡಿ

೧. ಬಂಧುತ್ವ : ಅರ್ಥ ಮತ್ತು ಸ್ವರೂಪ

೨. ಸಾಮಾಜಿಕ ಸ್ತರವಿನ್ಯಾಸ ಮತ್ತು ಭಾಷೆ

೩. ಸಾಮಾಜಿಕ ಅವಳಿ ಸಂಬಂಧಗಳು

೪. ಕೌಟುಂಬಿಕ ಅವಳಿ ಸಂಬಂಧಗಳು

೫. ವೃತ್ತಿಸೂಚಕ ಅವಳಿ ಸಂಬಂಧಗಳು

೬. ಸಂಬಂಧವಾಚಕಗಳು : ಪರಿವರ್ತನೆ ಮತ್ತು ಪ್ರಭಾವ

೭. ಸಂಬೋಧನೆಗಳ - ಸಾಮಾನ್ಯ ಸ್ವರೂಪ

ಕಿತ್ತೂರು ಕರ್ನಾಟಕ ಪ್ರದೇಶದ ಬಂಧುತ್ವ ಸೂಚಕ ಹಾಗೂ ಪರಸ್ಪರ ಸಂಬೋಧನೆಗೆ ಸಂಬಂಧಿಸಿದ ಭಾಷಾರೂಪಗಳನ್ನು *ಈ* ಕೃತಿಯಲ್ಲಿ ಪರಿಚಯಿಸಲಾಗಿದೆ. ಇಲ್ಲಿ ಭಾಷೆಗಳ ಹೊರ ಸ್ವರೂಪವನ್ನು ಮಾತ್ರ ವಿಶ್ಲೇಷಿಸದೆ, ಭಾಷಾಶಾಸ್ತ್ರೀಯವಾದ ತತ್ತ್ವಗಳ ಆಧಾರದ ಮೇಲೆ ಅವುಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ವರೂಪವನ್ನು ಪರಿಚಯಿಸಲಾಗಿದೆ.

**೫೧೫. ಸರಳ ಶಬ್ದಮಣಿದರ್ಪಣ**

ಲೇ: ಎಸ್.ಎಸ್. ಅಂಗಡಿ

ಪುಟ: XII+೩೫೨, ವರ್ಷ: ೨೦೦೪, ರೂ: ೧೫೦.೦೦

ಪರಿವಿಡಿ

೧. ಸಂಜ್ಞಾ ಪ್ರಕರಣ

೨. ಸಂಧಿ ಪ್ರಕರಣ

೩. ನಾಮ ಪ್ರಕರಣ

೪. ಸಮಾಸ ಪ್ರಕರಣ

೫. ತದ್ಧಿತ ಪ್ರಕರಣ

೬. ಅಖ್ಯಾತ ಪ್ರಕರಣ

೭. ಧಾತು ಪ್ರಕರಣ

೮. ಅಪಭ್ರಂಶ ಪ್ರಕರಣ

೯. ಅವ್ಯಯ ಪ್ರಕರಣ

ಹಳಗನ್ನಡ ಭಾಷೆಯ ವ್ಯಾಕರಣ ಕೃತಿಯಾದ ಕೇಶಿರಾಜನ ಶಬ್ದಮಣಿದರ್ಪಣವನ್ನು ಮುಖ್ಯವಾಗಿ ಇಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಸಂಪಾದಿಸಿಕೊಡಲಾಗಿದೆ.



**೫೧೬. ಸ್ಥಳನಾಮಗಳು : ಪರಿವರ್ತನೆ ಮತ್ತು ಪ್ರಭಾವ**

ಸಂ: ಕೆ.ವಿ.ನಾರಾಯಣ

ಪುಟ: xii+೬೫, ವರ್ಷ: ೧೯೯೯, ರೂ: ೩೦.೦೦

ಪರಿವಿಡಿ

೧. ಮರಾಠಿ ಪ್ರಭಾವ

೨. ಆರ್ಯ ಸಂಸ್ಕೃತ

೩. ಇಸ್ಲಾಂ ಉರ್ದು ಪ್ರಭಾವಗಳು

೪. ಕನ್ನಡೇತರ ದ್ರಾವಿಡ ಭಾಷಾ ಪ್ರಭಾವಗಳು

೫. ಆಂಗ್ಲ-ಆಡಳಿತ ಇಂಗ್ಲಿಷ್ ಪ್ರಭಾವಗಳು

೬. ಕರ್ನಾಟಕದಲ್ಲಿ ಸ್ಥಳನಾಮ ಅಧ್ಯಯನ

ಸ್ಥಳನಾಮಗಳು ಅನ್ಯಭಾಷಿಕ ಸಮುದಾಯಗಳ ಸಂಪರ್ಕದಿಂದ ಬದಲಾಗುವ ಪ್ರಕ್ರಿಯೆಯನ್ನು ಗಮನಿಸಿ ಸ್ಥಳನಾಮಾಂತರಗಳಿಗೆ ಸಂಬಂಧಿಸಿದಂತೆ ಆರು ಸಂಶೋಧನಾತ್ಮಕ ಲೇಖನಗಳನ್ನು ಇಲ್ಲಿ ಸಂಕಲಿಸಲಾಗಿದೆ.

**೫೧೭. ಸಾಂಸ್ಕೃತಿಕ ಪದಕೋಶ ೧ : ಮೈಲಾರಲಿಂಗ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: x+೮೬, ವರ್ಷ: ೨೦೦೦, ರೂ: ೫೦.೦೦



ಪರಿವಿಡಿ

೧. ಮೈಲಾರಲಿಂಗನ ನಂಬಿಕೆಗಳು

೨. ಮೈಲಾರಲಿಂಗನ ಕಾರ್ಣಿಕಗಳು

೩. ಪರಾಮರ್ಶಿತ ಪುಸ್ತಕಗಳು, ಲೇಖನಗಳು

೪. ಮೈಲಾರಲಿಂಗನ ಕ್ಷೇತ್ರಗಳು

ಮೈಲಾರಲಿಂಗನ ಸಂಪ್ರದಾಯದಲ್ಲಿನ ಬಹುಮುಖ್ಯ ಸಾಂಸ್ಕೃತಿಕ ಪದಗಳನ್ನು *ಈ* ಪದಕೋಶ ಪರಿಚಯಿಸುತ್ತದೆ. ಹಾಗೆಯೇ ಸಾಂಸ್ಕೃತಿಕ ಪದಗಳ ಮುಖೇನ ಒಂದು ಸಂಪ್ರದಾಯವನ್ನು ಸವಿಸ್ತಾರವಾಗಿ ಪರಿಚಯಿಸಿಕೊಳ್ಳಲು *ಈ* ಕೃತಿ ಸಹಕಾರಿ.



**೫೧೮. ಸಾಂಸ್ಕೃತಿಕ ಪದಕೋಶ ೨ : ನೀಲಗಾರರು**

ಲೇ: ವೆಂಕಟೇಶ ಇಂದ್ವಾಡಿ

ಪುಟ: xii+೪೮, ವರ್ಷ: ೨೦೦೦, ರೂ: ೩೦.೦೦

ಪರಿವಿಡಿ

೧. ಸಾಂಸ್ಕೃತಿಕ ಪದಕೋಶ

೨. ನುಡಿಗಟ್ಟುಗಳು

೩. ಪುಸ್ತಕಗಳು

ಸಂಪ್ರದಾಯವೊಂದರಲ್ಲಿ ವಾಚ್ಯಕ್ಕೆ ಭಿನ್ನವಾದ ಅರ್ಥದಲ್ಲಿ ಬಳಕೆ ಯಾಗುವ ಪದ ಅಥವ ಪದಗುಚ್ಛ ಸಾಂಸ್ಕೃತಿಕ ಪದವೆನಿಸಿಕೊಳ್ಳುತ್ತದೆ. ಕರ್ನಾಟಕ ನೀಲಗಾರರ ಸಂಪ್ರದಾಯದಲ್ಲಿ ಹೆಪ್ಪುಗಟ್ಟಿರುವ ಇಂಥ ಪದಗಳನ್ನು ಸಂಗ್ರಹಿಸಿರುವ ಪದಕೋಶ ಇದಾಗಿದೆ.

**೫೧೯. ಸಾಮಾಜಿಕ ಉಪಭಾಷೆ**

ಲೇ: ಪಿ.ಮಹಾದೇವಯ್ಯ

ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಭಾರತದಲ್ಲಿ ನೂರಾರು ಸಾಮಾಜಿಕ ವರ್ಗಗಳಿವೆ. ಪ್ರತಿಯೊಂದು ಸಾಮಾಜಿಕ ವರ್ಗವೂ ತನ್ನದೇ ಆದ ಸಾಮಾಜಿಕ ಉಪಭಾಷೆಯನ್ನು ಹೊಂದಿರುತ್ತದೆ. ಕನ್ನಡವನ್ನು ಅನುಲಕ್ಷಿಸಿ ಉಪಭಾಷೆಗಳ ವೈಧಾನಿಕತೆಯನ್ನು ಕುರಿತು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.

**೫೨೦. ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ**

ಅನು : ಎಚ್ ಎಸ್ ಶ್ರೀಮತಿ

ಪುಟ : xiii + ೩೫೨, ವರ್ಷ : ೨೦೦೯, ರೂ ೧೪೦



ಪರಿವಿಡಿ

೧. ಸ್ತ್ರೀವಾದಿಗಳು ಭಾಷೆಯನ್ನು ಕುರಿತು ಏಕೆ ಚರ್ಚಿಸಬೇಕು?

೨. ಭಾಷೆಯಲ್ಲಿರುವ ಜಂಡರ್ ವ್ಯತ್ಯಾಸಗಳಿಂದ ಆಗುವ ಸಾಮಾಜಿಕ ಪರಿಣಾಮಗಳು

೩. ಭಾಷಿಕ ವಿವರಗಳನ್ನು ಸಾಮಾಜಿಕ ನೆಲೆಗೆ ಕೊಂಡಿಹಾಕುವ ಬಗೆ

೪. ಭಾಷೆಯೇ ಯಾಜಮಾನ್ಯವಾದಾಗ: ಲಿಂಗ ಭಿನ್ನತೆಯನ್ನು ಸಾಂಸ್ಕೃತಿಕವಾಗಿ ನೋಡುವ ಬಗೆ

೫. ಗಂಡಸು ಕಟ್ಟಿದ ಭಾಷೆ ಡೇಲ್ ಸ್ಪೆಂಡರ್‌ಳ Man made language ಕೃತಿಯ ಆಯ್ದ ಭಾಗಗಳು

೬. ಭಾಷಿಕ, ಸಾಮಾಜಿಕ ಮತ್ತು ಲೈಂಗಿಕ ಸಂಬಂಧಗಳು (ಡೇಲ್ ಸ್ಪೆಂಡರ್ ಬರೆದ Man made language ಕೃತಿಗೆ ಪ್ರತಿಕ್ರಿಯೆ)

೭. ಜಂಡರ್ ಲೇಪಿತ ವಾಕ್ಯಗಳು

೮. ಹುಸಿ ದ್ವಿದಾ ಭಾವಗಳು ವ್ಯಾಕರಣ ಮತ್ತು ಲೈಂಗಿಕತೆಯ ಧ್ರುವೀಕರಣ

೯. ಪರಿವರ್ತನೆಗಳನ್ನು ತರುವುದು-ಲೈಂಗಿಕತಾವಾದೀ ಭಾಷಾ ಮಾದರಿಗಳು

೧೦. ಮೌನ, ಪ್ರತ್ಯೇಕೀಕರಣ ಮತ್ತು ದಮನ : ಸ್ತ್ರೀವಾದಿ ಭಾಷಾ ಮಾದರಿಗಳು

ಕನ್ನಡದ ಸಂದರ್ಭದಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ಭಾಷಾಶಾಸ್ತ್ರವನ್ನು ಮರುವಿವೇಚನೆಗೆ ಒಳಪಡಿಸುವ ಕೆಲಸ ನಡೆದಿಲ್ಲ. *ಈ* ಹಿನ್ನೆಲೆಯಲ್ಲಿ ಖ್ಯಾತ ಸ್ತ್ರೀವಾದಿಗಳಿಂದ *ಈ* ದಿಶೆಯಲ್ಲಿ ನಡೆದಿರುವ ಬರಹಗಳನ್ನು *ಈ* ಕೃತಿಯಲ್ಲಿ ಪರಿಚಯಿಸಲಾಗಿದೆ. *ಈ* ಬರಹಗಳು ಮಹಿಳಾ ಅಧ್ಯಯನ ಹಾಗೂ ಅನ್ಯಜ್ಞಾನ ವಲಯಗಳ ಸಂಬಂಧಾಂತರ ಸ್ವರೂಪಗಳನ್ನು ಖಚಿತವಾಗಿರಿಸುವಲ್ಲಿ ಅತ್ಯಂತ ಸಹಕಾರಿಯಾಗಿದೆ. ಸ್ತ್ರೀವಾದಿಗಳು ತಮ್ಮ ಭಾಷಾಶಾಸ್ತ್ರದ ತಿಳುವಳಿಕೆಯನ್ನು ತಮ್ಮ ಚಿಂತನಾ ಕ್ರಮದಲ್ಲಿ ಇನ್ನಷ್ಟು ವಿಸ್ತರಿಸಲು *ಈ* ಕೃತಿ ಸಹಕಾರಿ.

**೫೨೧. ಸ್ಫೋಟವಾದ**

ಲೇ: ಮಲ್ಲೇಪುರಂ ಜಿ.ವೆಂಕಟೇಶ

ಪುಟ: ೩೧, ವರ್ಷ: ೧೯೯೩, ರೂ: ೧.೦೦

ಸ್ಫೋಟ ಎಂಬ ಪರಿಕಲ್ಪನೆಯನ್ನು ಸ್ಥೂಲವಾಗಿ ತಿಳಿಸಿಕೊಡುತ್ತಾ, ಸ್ಫೋಟಕ್ಕೆ ಸಂಬಂಧಿಸಿದ ಚಾರಿತ್ರಿಕ ವಾಗ್ವಾದಗಳನ್ನು ಮಂಡಿಸುತ್ತ ಅದರ ಮುಖಾಂತರ ಇನ್ನಿತರ ಜ್ಞಾನ ಮೀಮಾಂಸೆಗಳು ತಾಳಿದ ಆಸಕ್ತಿ ಯಾವ ಬಗೆಯವು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

**೫೨೨. ಹಳಗನ್ನಡ ಮತ್ತು ಮರಾಠಿ**

ಲೇ: ರಂ.ಶಾ.ಲೋಕಾಪುರ

ಪುಟ: viii+೩೩೨, ವರ್ಷ: ೧೯೯೪, ರೂ: ೭೫.೦೦

ಪರಿವಿಡಿ

೧. ಅಪಭ್ರಂಶ, ಮರಾಠಿ ಹಾಗೂ ಕನ್ನಡ

೨. ಮರಾಠಿಯಲ್ಲಿಯ ಆಖ್ಯಾತಗಳು ೧

೩. ಮರಾಠಿಯಲ್ಲಿಯ ಆಖ್ಯಾತಗಳು ೨

೪. ಮರಾಠಿಯಲ್ಲಿಯ ಆಖ್ಯಾತಗಳು ೩

೫. ಮರಾಠಿಯಲ್ಲಿ ವಿಭಕ್ತಿ ಪ್ರತ್ಯಯಗಳು ೧

೬. ಮರಾಠಿಯಲ್ಲಿ ವಿಭಕ್ತಿ ಪ್ರತ್ಯಯಗಳು ೨

೭. ಮರಾಠಿಯಲ್ಲಿ ವಿಭಕ್ತಿ ಪ್ರತ್ಯಯಗಳು ೩

೮. ಜ್ಞಾನೇಶ್ವರೀಕಾಲೀನ ಮರಾಠಿಯಲ್ಲಿಯ ಕೆಲವು ಹಳಗನ್ನಡ ಶಬ್ದ ಪ್ರಯೋಗಗಳು

ಹಳಗನ್ನಡ ಮತ್ತು ಮರಾಠಿ ಭಾಷೆಗಳ ನಡುವೆ ಇರುವ ಹಲವಾರು ರೂಪಸಾಮ್ಯಗಳನ್ನು ಗ್ರಂಥದಲ್ಲಿ ವಿವರಿಸಲಾಗಿದೆ. ವ್ಯಾಕರಣಾಂಶಗಳಲ್ಲಿ ಹಾಗೂ ಭಾಷಾಮಿಶ್ರಣದ ಸಂದರ್ಭಗಳಲ್ಲಿ ಕನ್ನಡದ ಪ್ರಭಾವ ಮರಾಠಿಯಲ್ಲಿ ಅಡಕಗೊಂಡಿರುವುದನ್ನು ಗ್ರಂಥದಲ್ಲಿ ವಿವೇಚಿಸಲಾಗಿದೆ. ಕನ್ನಡ ಮರಾಠಿ ಸಂಬಂಧವನ್ನು ಕೇವಲ ಭಾಷಾಸ್ವೀಕರಣದ ನೆಲೆಯಿಂದಷ್ಟೆ ಗಮನಿಸದೆ ದ್ವಿಭಾಷಿಕತೆಯ ಪರಿಣಾಮವಾಗಿ ಏರ್ಪಡುವ ಭಾಷಾಮಿಶ್ರಣವನ್ನು ಗಮನಿಸಲಾಗಿದೆ. ವ್ಯಾಕರಣ ಸಂಬಂಧದ ಎಳೆಗಳನ್ನು ಗುರುತಿಸಲಾಗಿದೆ.



# ೨೭

# ಮಹಿಳೆ-ಮಹಿಳಾ ಅಧ್ಯಯನ




**೫೨೩. ಆಧುನಿಕ ಭಾರತದಲ್ಲಿ ಮಹಿಳೆ**

ಲೇ: ಜೆರಾಲ್ಡಿನ್ ಫೋರ್ಬ್ಸ್

ಅನು: ಎಚ್.ಎಸ್.ಶ್ರೀಮತಿ

ಪುಟ: xiv+೩೮೬, ವರ್ಷ: ೨೦೦೧, ರೂ: ೧೨೦.೦೦

ಪರಿವಿಡಿ

೧. ಹತ್ತೊಂಬತ್ತನೆಯ ಶತಮಾನದ ಸುಧಾರಣೆ; ಮಹಿಳೆಯರ ಪಾತ್ರಗಳನ್ನು ಆಧುನೀಕರಿಸುವ ಪ್ರಯತ್ನಗಳು

೨. ಮಹಿಳೆಯರಿಗೆ ಶಿಕ್ಷಣ

೩. ಮಹಿಳಾ ಸಂಘ-ಸಂಸ್ಥೆಗಳ ಅವಿರ್ಭಾವ

೪. ಮಹಿಳಾ ಹಕ್ಕುಗಳಿಗಾಗಿ ಚಳುವಳಿ

೫. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು

೬. ವಸಾಹತು ಭಾರತದಲ್ಲಿ ಮಹಿಳೆಯ ದುಡಿಮೆ

೭. ಸ್ಥಿತ್ಯಂತರ ಕಾಲ

೮. ಸ್ವತಂತ್ರ ಭಾರತದಲ್ಲಿ ಮಹಿಳೆಯರು

ಭಾರತೀಯ ಮಹಿಳೆಯ ಬದುಕಿನ ವ್ಯಥೆಯ ಕಥೆಯ, ಪ್ರಯತ್ನದ-ಪ್ರತಿಭಟನೆಯ ಸಾಧನೆಯ ಚಿತ್ರಣವನ್ನು *ಈ* ಗ್ರಂಥದಲ್ಲಿ ಕಾಣಬಹುದು. ಲೇಖಕಿ ಜೆರಾಲ್ಡಿನ್ ಫೋರ್ಬ್ಸ್ ಅವರು ತಮ್ಮ ವಿಸ್ತಾರವಾದ ಅಧ್ಯಯನ ಮತ್ತು ಚಿಂತನೆಗಳಿಂದ ಭಾರತೀಯ ನಾರಿ ನಡೆದ ಬಂದ ದಾರಿಯನ್ನು ಅಗತ್ಯವಾದ ನಿದರ್ಶನಗಳ ಸಮೇತ ವಿಶ್ಲೇಷಿಸಿದ್ದಾರೆ. ಇದೇ ಲೇಖಕಿ ಭಾರತೀಯ ಜನಜೀವನದ ಏಳುಬೀಳುಗಳಲ್ಲಿ ಹಾಸುಹೊಕ್ಕಾಗಿರುವ ಮಹಿಳೆಯ ಜೀವನಕ್ರಮವನ್ನು ವಿಶ್ಲೇಷಿಸಿರುವ ರೀತಿ ಗಮನಾರ್ಹವಾಗಿದೆ.

**೫೨೪. ಆಧುನಿಕ ಮಹಿಳಾ ಸಾಹಿತ್ಯ : ಇನ್ನಷ್ಟು ಪುಟಗಳು**

ಲೇ: ಎಂ. ಉಷಾ

ಪುಟ: ೮೦+೧೪೮, ವರ್ಷ: ೨೦೦೭, ರೂ: ೮೦




ಪರಿವಿಡಿ

೧. ಕಥನ

೨. ಕಾವ್ಯ

೧೯೩೦-೪೦ರ ಎರಡು ದಶಕಗಳ ಕನ್ನಡ ಪತ್ರಿಕೋದ್ಯಮ ಬರಹಗಳನ್ನು ಆಕರ ಸಾಮಗ್ರಿಯಾಗಿ ಬಳಸಿಕೊಂಡು ಮಹಿಳಾ ಸಾಹಿತ್ಯದ ಪರಿಕಲ್ಪನೆಯನ್ನು ವಿವರಿಸಿರುವ ವಿಶಿಷ್ಟವಾದ ಕೃತಿ ಇದು. ಕನ್ನಡ ಮಹಿಳಾ ಸಾಹಿತ್ಯವನ್ನು ಕೇವಲ ಆಕರ ಸಾಮಗ್ರಿಯಾಗಿ ಮಾತ್ರ ನೋಡದೆ, ಅಧ್ಯಯನದ ನೋಟವಾಗಿಯೂ ಕಾಣುವ ಅಗತ್ಯವಿದೆ ಎನ್ನುವ ಹೊಸ ದೃಷ್ಟಿ *ಈ* ಕೃತಿಯಲ್ಲಿ ಬಿಂಬಿತವಾಗಿದೆ.

**೫೨೫. ಕನ್ನಡ ಮಹಿಳೆ ಮತ್ತು ಸ್ವಾತಂತ್ರ್ಯ ಹೋರಾಟ**

ಸಂ: ಎಚ್.ಎಸ್.ಶ್ರೀಮತಿ

ಪುಟ: xii+೧೩೨, ವರ್ಷ: ೧೯೯೯, ರೂ: ೬೦.೦೦

ಪರಿವಿಡಿ

೧. ಸ್ವಾತಂತ್ರ್ಯ ಹೋರಾಟದ ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳು- ಹೈದ್ರಬಾದ್ ಕರ್ನಾಟಕ

೨. ಸ್ವಾತಂತ್ರ್ಯ ಹೋರಾಟದ ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳು- ಮುಂಬಯಿ ಕರ್ನಾಟಕ

೩. ಸ್ವಾತಂತ್ರ್ಯ ಹೋರಾಟದ ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳು- ಮೈಸೂರು ಕರ್ನಾಟಕ

೪. ಸ್ವಾತಂತ್ರ್ಯ ಯುದ್ಧ ಮತ್ತು ಚಳುವಳಿಯ ಚಾರಿತ್ರಿಕ ಬರವಣಿಗೆ ಮತ್ತು ಮಹಿಳೆಯ ಪ್ರತಿನಿಧೀಕರಣ

೫. ಸ್ವಾತಂತ್ರ್ಯ ಯುದ್ಧ ಮತ್ತು ಮಹಿಳಾ ಜನಪದ ಸಾಹಿತ್ಯ

೬. ಸ್ವಾತಂತ್ರ್ಯ ಯುದ್ಧ ಚಳುವಳಿ ಮತ್ತು ಮಹಿಳಾ ಬರವಣಿಗೆ

೭. ಸ್ವಾತಂತ್ರ್ಯ ಚಳುವಳಿಯ ಸಾಹಿತ್ಯಕ ಬರವಣಿಗೆ ಮತ್ತು ಮಹಿಳೆಯರು ಪ್ರತಿನಿಧೀಕರಣ

೮. ಸ್ವಾತಂತ್ರ್ಯ ಚಳುವಳಿ ಮತ್ತು ಮಹಿಳಾ ಜನಪದ ಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗವು 'ಕನ್ನಡ ಮಹಿಳೆ ಮತ್ತು ಸ್ವಾತಂತ್ರ್ಯ ಹೋರಾಟ' ಎಂಬ ವಿಷಯದ ಬಗ್ಗೆ ನಡೆಸಿದ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳನ್ನು ಇಲ್ಲಿ ಸಂಕಲಿಸಲಾಗಿದೆ. ಇಲ್ಲಿ ಒಟ್ಟು ೯ ಪ್ರಬಂಧಗಳಿವೆ. ಮೊದಲ ನಾಲ್ಕು ಪ್ರಬಂಧಗಳಲ್ಲಿ ಹೈದರಾಬಾದ್, ಮುಂಬಯಿ, ಮದ್ರಾಸ್ ಮತ್ತು ಮೈಸೂರು ಕರ್ನಾಟಕ ಪ್ರದೇಶಗಳಲ್ಲಿನ ಸ್ವಾತಂತ್ರ್ಯ ಹೋರಾಟದ ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳ ಹಿನ್ನೆಲೆಯಲ್ಲಿ ಅಲ್ಲಿನ ಮಹಿಳಾ ಹೋರಾಟದ ಸ್ವರೂಪಗಳನ್ನು ವಿವರಿಸಲಾಗಿದೆ. ಉಳಿದ ಪ್ರಬಂಧಗಳಲ್ಲಿ ಮಹಿಳಾ ಹೋರಾಟ ಚಾರಿತ್ರಿಕ ಬರವಣಿಗೆಯಲ್ಲಿ, ಸೃಜನಶೀಲ ಸಾಹಿತ್ಯದಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಹೇಗೆ ದಾಖಲಾಗಿದೆ ಎಂಬುದನ್ನು ಪರಿಶೀಲಿಸಲಾಗಿದೆ.



**೫೨೬. ಕನ್ನಡಮ್ಮ : ಹೆಣ್ಣು ಸಂಕಥನದ ನಾಡು-ನುಡಿ ರೂಪಕ-ಪ್ರತೀಕಗಳು**

ಲೇ : ಸಿ.ಆರ್. ಗೋವಿಂದರಾಜು

ಪುಟ: xii+೭೪, ವರ್ಷ: ೨೦೦೫, ರೂ: ೫೦.೦೦

ಪರಿವಿಡಿ

೧. ಅಧ್ಯಯನದ ಜರೂರು-ಸ್ವರೂಪ-ಮಿತಿಗಳು

೨. ನವೋದಯ ಕಾವ್ಯದ ರೂಪಕ-ಪ್ರತೀಕಗಳು

೩. ಕನ್ನಡಮ್ಮನ ರೂಪಕ-ಪ್ರತೀಕಗಳು

೪. ದೃಶ್ಯ ಮಾಧ್ಯಮ ಹಾಗೂ ಭುವನೇಶ್ವರಿ

೫. ತಳೆದ ನಿಲುವು

ಹೆಣ್ಣನ್ನು ಭೂಮಿ ಮತ್ತು ನಾಡಿನೊಂದಿಗೆ ಸಮೀಕರಿಸುವುದರ ಮೂಲಕ ಸಾಂಸ್ಕೃತಿಕ ನೆಲೆಗಳನ್ನು ಇಲ್ಲಿ ಸಮರ್ಪಕವಾಗಿ ವಿಶ್ಲೇಷಿಸಲಾಗಿದೆ. ಭಾವನೆಗಳ ಕಟ್ಟುವಿಕೆ ಮತ್ತು ನಾಡನ್ನು ಕಟ್ಟುವಿಕೆಗಳು ಹೇಗೆ ಜೊತೆ ಜೊತೆಯಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

**೫೨೭. ಗರ್ಭಾಶಯ-ಮಹಿಳೆಯ ಶಕ್ತಿಕೇಂದ್ರ**

ಲೇ: ಎಚ್.ಎಸ್. ಶ್ರೀಮತಿ

ಪುಟ: iv+೨೫, ವರ್ಷ: ೨೦೦೨, ರೂ: ೧೦.೦೦

ಗರ್ಭಾಶಯವೆಂಬುದು ಮಹಿಳೆಯ ಶಕ್ತಿಕೇಂದ್ರವಾಗಿ ಕಾರ್ಯ ನಿರ್ವಹಿಸುವಂತಹದ್ದು. ಆದರೆ ವಾಸ್ತವದಲ್ಲಿ ಆಕೆಗೆ ಗರ್ಭಾಶಯವೆಂಬುದೇ ಒಂದು ಹೊರೆಯಾಗಿದ್ದು, ಸೃಷ್ಟಿಕ್ರಿಯೆಯ ಹಂತಗಳೇ ಮಹಿಳೆಯ ಪಾಲಿಗೆ ಮಾನ-ಮಾರ್ಯಾದೆಗಳ ಪ್ರಶ್ನೆಗಳಾಗಿ ಕಾಡುತ್ತಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

**೫೨೮. ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು**

ಲೇ: ಬಿ.ಎನ್. ಸುಮಿತ್ರಾಬಾಯಿ

ಪುಟ: ii+೩೫, ವರ್ಷ: ೨೦೦೦, ರೂ: ೧೦.೦೦

ಪಶ್ಚಿಮ ರಾಷ್ಟ್ರಗಳ ಸ್ತ್ರೀವಾದಿ ವಿಮರ್ಶಾಪಂಥಗಳ ಬಗ್ಗೆ *ಈ* ಕಿರುಗ್ರಂಥದಲ್ಲಿ ಮಹತ್ವಪೂರ್ಣ ಮಾಹಿತಿಗಳಿವೆ. ತೀವ್ರಗಾಮಿ ಸ್ತ್ರೀವಾದಿ, ಸಾಂಸ್ಕೃತಿಕ ಸ್ತ್ರೀವಾದಿ, ಲೆಸ್ಬಿಯನ್ ಸ್ತ್ರೀವಾದಿ, ಅಮೆರಿಕದ ಸ್ತ್ರೀವಾದಿ , ಸಮಾಜವಾದಿ ಸ್ತ್ರೀವಾದಿ, ಫ್ರೆಂಚ್ ಸ್ತ್ರೀವಾದಿ, ಕಪ್ಪು ಸ್ತ್ರೀವಾದದ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.



**೫೨೯. ಪಾತರದವರು**

ಲೇ: ಶೈಲಜ ಹಿರೇಮಠ

ಪುಟ: x+೫೨, ವರ್ಷ: ೧೯೯೯, ರೂ: ೭೫.೦೦

ಪರಿವಿಡಿ

೧. ಅರ್ಥ, ಉಗಮ, ಬೆಳವಣಿಗೆ

೨. ಕುಟುಂಬಜೀವನ

೩. ಸಾಮಾಜಿಕಜೀವನ

೪. ಕಾಲಾಜೀವನ

೫. ಸಾಂಸ್ಕೃತಿಕ ಸ್ಥಿತ್ಯಂತರಗಳು

ಪ್ರಾಚೀನ ಕರ್ನಾಟಕದ ದೇವಾಲಯ ಸಂಸ್ಕೃತಿಯ 'ರಂಗಭೋಗದ' ಅವಶೇಷವೆನಿಸಿರುವ 'ಪಾತರದವರು' ಪರಂಪರೆಯ ಬಗ್ಗೆ ಕ್ಷೇತ್ರಕಾರ್ಯಪ್ರಧಾನವಾದ ಅಧ್ಯಯನಾತ್ಮಕ ಕೃತಿಯಿದು. ಪಾತರದವರ ಕುಟುಂಬ ಜೀವನ, ಸಾಮಾಜಿಕ ಜೀವನ, ಕಲಾಜೀವನ, ಅವರ ಸಾಂಸ್ಕೃತಿಕ ಸ್ಥಿತ್ಯಂತರಗಳ ಬಗ್ಗೆ *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.

**೫೩೦. ಭಾರತೀಯ ಸ್ತ್ರೀವಾದ : ಒಂದು ಸಂಕಥನ**

ಲೇ: ಗಾಯತ್ರಿ ನಾವಡ

ಪುಟ: ii+೪೪, ವರ್ಷ: ೨೦೦೦, ರೂ: ೧೦.೦೦

*ಈ* ಸಂದರ್ಭದ ಭಾರತೀಯ ಸ್ತ್ರೀವಾದಿ ಚಿಂತನಗಳು ಹಾಗೂ ಭಾರತೀಯ ಸಾಂಸ್ಕೃತಿಕ ಪರಂಪರೆಯ ಹಿನ್ನಲೆಯಲ್ಲಿ ಸ್ತ್ರೀವಾದವನ್ನು ಕಟ್ಟಿಕೊಳ್ಳಬೇಕಾದ ಬಗೆಯ ಬಗ್ಗೆ *ಈ* ಪುಟ್ಟ ಕೃತಿ ಚರ್ಚಿಸುತ್ತದೆ.




**೫೩೧. ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**

ಲೇ: ಪ್ರೀತಿ ಶುಭಚಂದ್ರ

ಪುಟ: xii+೩೨೨, ವರ್ಷ: ೨೦೦೨, ರೂ: ೧೨೫.೦೦

ಪರಿವಿಡಿ

೧. ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು

೨. ಸ್ತ್ರೀವಾದದ ಅರ್ಥ ಮತ್ತು ವ್ಯಾಪ್ತಿ; ಕೆಲವು ಪ್ರಮುಖ ಸ್ತ್ರೀವಾದದ ಪ್ರಸ್ಥಾನಗಳು

೩. ಮಹಿಳಾ ಅಧ್ಯಯನದ ಕೆಲವು ಪ್ರಮುಖ ಪರಿಕಲ್ಪನೆಗಳು

೪. ಮಹಿಳಾ ಚಳುವಳಿಗಳು

೫. ಅಭಿವೃದ್ಧಿಶೀಲ ರಾಷ್ಟಗಳಲ್ಲಿ ಮಹಿಳಾ ಚಳುವಳಿಗಳು

೬. ಭಾರತದಲ್ಲಿನ ಮಹಿಳಾ ಹೋರಾಟಗಾರರು

೭. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಚಳುವಳಿ

೮. ಮಹಿಳಾ ಚಳುವಳಿಗಳು ಮತ್ತು ಇತರ ಸಾಮಾಜಿಕ ರಾಜಕೀಯ ಸಾಂಸ್ಕೃತಿಕ ಚಳುವಳಿಗಳು

ಮಹಿಳಾ ಅಧ್ಯಯನವು ಪ್ರಮುಖ ಜ್ಞಾನ ವಿಷಯವಾಗಿ ಶೈಕ್ಷಣಿಕ ಶಿಸ್ತಿನ ಅಧ್ಯಯನಕ್ಕೆ ಒಳಗಾಗುತ್ತಿದೆ. ಹಾಗೆಯೇ ಸಮಕಾಲೀನ ಮಹಿಳಾ ಚಳವಳಿಗಳೂ ಸಾಮಾಜಿಕ ಬದುಕಿನ ಪ್ರಕ್ರಿಯೆಯ ಭಾಗವಾಗಿ ಅಸ್ತಿತ್ವದಲ್ಲಿವೆ. ಮಹಿಳಾ ಅಧ್ಯಯನ ಮತ್ತು ಮಹಿಳಾ ಚಳವಳಿಗಳು ಪ್ರತ್ಯೇಕ ಘಟಕಗಳಾಗಿ ನಿಲ್ಲದೆ ಪರಸ್ಪರ ಅಂತರ್ ಸಂಬಂಧಿ ಸ್ವರೂಪವನ್ನು ಪಡೆಯಬೇಕಾಗುತ್ತದೆ. ಹಾಗಾಗಿ ಸ್ತ್ರೀವಾದವನ್ನು ತಾತ್ವಿಕ ಹಾಗೂ ಪ್ರಾಯೋಗಿಕ ನೆಲೆಯಲ್ಲಿ ಅರ್ಥೈಸಿಕೊಳ್ಳುವ ಉದ್ದೇಶವನ್ನು *ಈ* ಕೃತಿ ತುಂಬಿ ಕೊಡುತ್ತದೆ.




**೫೩೨. ಮಹಿಳಾ ಆರೋಗ್ಯ**

ಲೇ: ಕೆ. ಸರೋಜ

ಪುಟ: xiv+೧೫೬, ವರ್ಷ: ೨೦೦೮, ರೂ: ೧೦೦

ಪರಿವಿಡಿ

೧. ಭಾರತೀಯ ಮಹಿಳಾ ಆರೋಗ್ಯ : ಒಂದು ಪಕ್ಷಿನೋಟ

೨. ಹದಿಹರೆಯದ ಹುಡುಗಿಯರ ಆರೋಗ್ಯ : ಒಂದು ವಿಶ್ಲೇಷಣೆ

೩. ಮಹಿಳೆಯರ ಅಲಕ್ಷಿತ ಆರೋಗ್ಯ ಸಮಸ್ಯೆಗಳು

೪. ಮಹಿಳೆ ಮತ್ತು ಮಾನಸಿಕ ಆರೋಗ್ಯ

೫. ಸಾರ್ವಜನಿಕ ವಲಯದ ಯೋಜನೆಗಳು ಮತ್ತು ಮಹಿಳಾ ಆರೋಗ್ಯ

೬. ಭಾರತದಲ್ಲಿ ಗರ್ಭನಿರೋಧಕಗಳ ಬಳಕೆ : ಒಂದು ಸೀಳುನೋಟ

೭. ಜಾಗತೀಕರಣ ಸಂದರ್ಭದಲ್ಲಿ ಸ್ತ್ರೀ ಆರೋಗ್ಯ ಸಬಲೀಕರಣ

ಪ್ರಸ್ತುತ ಗ್ರಂಥದಲ್ಲಿ ಮನೋದೇಹಿಯಾದ ಮಹಿಳೆಯರ ಆರೋಗ್ಯದ ಬಗೆಗೆ ಸೂಕ್ಷ್ಮವೂ, ಸ್ಥೂಲವೂ ಆದ ವಿವರಗಳಿವೆ. ಪ್ರತಿಯೊಬ್ಬ ಮಹಿಳೆಯು ಜೀವನಕ್ರಮದಲ್ಲಿ ವಹಿಸಬೇಕಾದ ಎಚ್ಚರಿಕೆಯನ್ನು ಇಲ್ಲಿ ಸೂಚಿಸಲಾಗಿದೆ. ದೇಹದ ಸ್ವಾಸ್ಥವು ಮನಸ್ಸಿನ ನೆಮ್ಮದಿಗೆ ಕಾರಣವಾಗುವ ವಿವಿಧ ಬಗೆಗಳನ್ನು ಸರಳವಾಗಿಯೂ ಹಿತವಾಗಿಯೂ ಇಲ್ಲಿ ನಿರೂಪಿಸಲಾಗಿದೆ.

**೫೩೩. ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು**

ಲೇ: ಎಂ. ಉಷಾ

ಪುಟ: VI+೨೦೪, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ

೧. ಅಧ್ಯಯನ ಕ್ಷೇತ್ರವಾಗಿ ಮಹಿಳಾ ಚಳುವಳಿ
೨. ಭಾರತದ ಮಹಿಳಾ ಚಳುವಳಿ ನಡೆದು ಬಂದ ದಾರಿ
೩. ಪ್ರಮುಖ ಮಹಿಳಾ ವಿಷಯಗಳು ೧
೪. ಪ್ರಮುಖ ಮಹಿಳಾ ವಿಷಯಗಳು ೨
೫. ಇತರ ಸಾಮಾಜಿಕ ಚಳುವಳಿಗಳಲ್ಲಿ ಮಹಿಳೆ
೬. ಮಹಿಳಾ ಚಳುವಳಿ ಕುರಿತ ಕೆಲವು ಸಮಕಾಲೀನ ಸೈದ್ಧಾಂತಿಕ ಚರ್ಚೆಗಳು

ಮಹಿಳಾ ಚಳುವಳಿಯ ಬಗ್ಗೆ ಶೈಕ್ಷಣಿಕ ವಲಯ ಬಯಸುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ಪ್ರಧಾನವಾದ *ಈ* ಕೃತಿಯನ್ನು ರಚಿಸಲಾಗಿದೆ. ಮಹಿಳಾ ಚಳುವಳಿ ಕುರಿತ ಕೆಲವು ಸಮಕಾಲೀನ ಸೈದ್ಧಾಂತಿಕ ಚರ್ಚೆಗಳೂ *ಈ* ಕೃತಿಯಲ್ಲಿವೆ.




### ೫೩೪. ಮಹಿಳಾ ಸಮಾಜಿಕತೆ

ಲೇ: ಜ್ಯೋತಿ ಶಶಿಕುಮಾರ್

ಪುಟ: xiv+೧೭೮, ವರ್ಷ: ೨೦೦೭ ರೂ: ೧೦೦.೦೦

ಪರಿವಿಡಿ

೧. ಸಮಾಜ ಮತ್ತು ಮಹಿಳೆ
೨. ಸಂಸ್ಕೃತಿ ಮತ್ತು ಮಹಿಳೆ

*ಈ* ಕೃತಿಯಲ್ಲಿ ಸಾಮಾಜಿಕ ಸನ್ನಿವೇಶದಲ್ಲಿ ಲಿಂಗಾಧಾರಿತ ಸಮಾಜದಲ್ಲಿ ಮಹಿಳೆಯ ಸ್ಥಾನ ಮಾನ, ಅವಕಾಶಗಳು, ಒತ್ತಡಗಳು ಮತ್ತು ಸಾಧ್ಯತೆಗಳನ್ನು ವಿವೇಚಿಸಲಾಗಿದೆ. ತುಂಬಾ ಮಹತ್ವದ ಪ್ರಶ್ನೆಗಳನ್ನು ಪರಿಚಯಿಸುತ್ತಲೇ ಸರಳವಾದ ರೀತಿಯಲ್ಲಿ ನಿರೂಪಿಸಿ ಉತ್ತಮ ಪ್ರವೇಶಿಕೆಯನ್ನು ಇಲ್ಲಿ ಒದಗಿಸಲಾಗಿದೆ.

### ೫೩೫. ಮಹಿಳೆ : ಆರ್ಥಿಕತೆ-ಅಭಿವೃದ್ಧಿ

ಲೇ: ಟಿ.ಆರ್.ಚಂದ್ರಶೇಖರ

ಪುಟ: xii+೨೩೦, ವರ್ಷ: ೨೦೦೧, ರೂ: ೧೦೦.೦೦

ಪರಿವಿಡಿ

೧. ಆರ್ಥಿಕತೆ ಮತ್ತು ಅಭಿವೃದ್ಧಿ
೨. ಮಹಿಳೆ ಮತ್ತು ಅಭಿವೃದ್ಧಿ

ಅರ್ಥಶಾಸ್ತ್ರದಲ್ಲಿ ಮಹಿಳೆಯನ್ನು ಹೇಗೆ ಪರಿಭಾವಿಸಿಕೊಳ್ಳಲಾಗಿದೆ? ಮಹಿಳೆಯರ ದುಡಿಮೆ ಜಗತ್ತಿನ ಆಳ-ಹರವು ಎಷ್ಟು, ಅಭಿವೃದ್ಧಿ ಸಿದ್ಧಾಂತಗಳ ಲಿಂಗ ಸಂಬಂಧಿ ಸ್ವರೂಪ ಯಾವ ಬಗೆಯದು? ಮಹಿಳೆಯರ ಅಭಿವೃದ್ಧಿಯಲ್ಲಿ ಸರ್ಕಾರದ ಪಾಲಿಸಿಯ ಪಾತ್ರವೇನು? ಸಬಲೀಕರಣದ ರಾಜಕೀಯ ನೆಲೆ ಯಾವುದು ಎಂಬ ವಿಷಯಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

### ೫೩೬. ಮಹಿಳೆ : ಕಾನೂನು ಮತ್ತು ರಾಜಕಾರಣ

ಲೇ: ಗೀತಾ ಕೃಷ್ಣಮೂರ್ತಿ

ಪುಟ: xii+೨೬೮, ವರ್ಷ: ೨೦೦೧, ರೂ: ೧೦೦.೦೦

ಕಾನೂನು ಮತ್ತು ರಾಜಕಾರಣ ಮಹಿಳೆಯ ಉನ್ನತಿ ಮತ್ತು ಅವನತಿಗೆ ಹೇಗೆ ಕಾರಣೀಭೂತವಾಗಿವೆ ಎಂಬುದನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಬ್ರಿಟಿಷರ ಕಾಲದಿಂದ ಮಹಿಳಾ ಸಂಬಂಧಿ ಕಾನೂನುಗಳು ಬೆಳೆದು ಬಂದ ಬಗೆಯನ್ನು ಮಹಿಳಾ ಅಧ್ಯಯನದ ದೃಷ್ಟಿಯಿಂದ ತೂಗಿ ಇಲ್ಲಿ ದಾಖಲಿಸಲಾಗಿದೆ.




### ೫೩೭. ಮಹಿಳೆ : ಸಮಾಜ ಮತ್ತು ಸಂಸ್ಕೃತಿ

ಲೇ: ಆರ್.ಇಂದಿರಾ

ಪುಟ: xii+೧೫೪, ವರ್ಷ: ೨೦೦೨, ರೂ: ೭೫.೦೦

ಪರಿವಿಡಿ

೧. ಸಾಮಾಜಿಕ ಸಂಸ್ಥೆಗಳು
೨. ವಿವಾಹ ಮತ್ತು ಲಿಂಗವ್ಯವಸ್ಥೆ
೩. ಕುಟುಂಬ ಮತ್ತು ಲಿಂಗವ್ಯವಸ್ಥೆ
೪. ಭಾರತದ ಕೆಲವು ಪ್ರಧಾನ ಮಹಿಳಾ ಸಮಸ್ಯೆಗಳು
೫. ಶಿಕ್ಷಣ ವ್ಯವಸ್ಥೆ ಮತ್ತು ಮಹಿಳೆ
೬. ಧರ್ಮ, ಜಾತಿ ಮತ್ತು ಮಹಿಳೆ
೭. ಕಲೆ ಮತ್ತು ಮಹಿಳೆ
೮. ಮಾಧ್ಯಮ ಮತ್ತು ಮಹಿಳೆ
೯. ಸಂಸ್ಕೃತ ಮತ್ತು ಮಹಿಳೆ

ಕಳೆದ ಮೂರು ದಶಕಗಳಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆಗಳಾಗಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಮಹಿಳಾ ಸಶಕ್ತೀಕರಣದ ಕನಸು ನನಸಾಗದೇ ಉಳಿದಿರುವುದು ಸಮಕಾಲೀನ ಸಾಮಾಜಿಕ ಸತ್ಯಗಳಲ್ಲಿ ಒಂದು. *ಈ* ಪರಿಸ್ಥಿತಿಗೆ ಕಾರಣೀಭೂತವಾದ ಪರಿಸ್ಥಿತಿಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಿಂದ ವಿಶ್ಲೇಷಿಸಲಾಗಿದೆ.



**೫೩೮. ಮಹಿಳೆ ದುಡಿಮೆ ಮತ್ತು ಬಿಡುವು**

ಸಂ: ಎಚ್.ಎಸ್. ಶ್ರೀಮತಿ ಮತ್ತು ಇತರರು

ಪುಟ: x+೧೬೪, ವರ್ಷ: ೨೦೦೭, ರೂ: ೮೦

ಪರಿವಿಡಿ

೧. ಸಾಮಾಜಿಕ ನಿರೀಕ್ಷೆಯಲ್ಲಿ ಹೆಂಗಸಿನ ದುಡಿಮೆ ಮತ್ತು ಬಿಡುವು

೨. ಕಾನೂನಿನ ವ್ಯಾಪ್ತಿಯಲ್ಲಿ ಮಹಿಳೆಯ ಸಾಮಾಜಿಕ ಬದುಕು

೩. ಉದ್ಯೋಗ, ಉದ್ದಿಮೆಗಳಲ್ಲಿ ಮಹಿಳೆ

೪. ಮಹಿಳೆ, ದುಡಿಮೆ ಮತ್ತು ಬಿಡುವು : ಒಂದು ಟಿಪ್ಪಣಿ

೫. ಮಹಿಳೆಯ ದುಡಿಮೆ ಮತ್ತು ಬಿಡುವು : ವೈಯಕ್ತಿಕ ಸಮಯವನ್ನು ಸಂರಚಿಸುವಲ್ಲಿ ಲಿಂಗತ್ವದ ಪಾತ್ರ

೬. ಕೈಗಾರಿಕೆಗಳು ನಗರ ಸಮಾಜ ಮತ್ತು ಮಹಿಳೆ

೭. ಸೃಜನಶೀಲತೆ ಮತ್ತು ಮಹಿಳೆ

೮. ಮಹಿಳೆಯರ ಅಸಾಂಪ್ರದಾಯಿಕ ಸಾಹಸ

*ಈ* ಕೃತಿ ವಿಚಾರ ಸಂಕೀರ್ಣವೊಂದರಲ್ಲಿ ಮಂಡಿತವಾದ ಭಾಷಣ ಹಾಗೂ ಚರ್ಚೆಗಳ ಸಂಕಲನ. ಮಹಿಳಾ ಆರ್ಥಿಕತೆಯ ಸಂದರ್ಭವನ್ನು ಅರ್ಥ ಮಾಡಿಕೊಳ್ಳುವಲ್ಲಿ, ಅವಳ ದುಡಿಮೆ, ಗಳಿಕೆ, ಬಿಡುವುಗಳನ್ನು ಸಾಂಪ್ರದಾಯಿಕ ಅರ್ಥಶಾಸ್ತ್ರ ಚಿಂತನಾಕ್ರಮದ ಪರಿಭಾಷೆಗಳ ಚೌಕಟ್ಟಿನಿಂದ ಬಿಡಿಸಿ ನೋಡುವ ಅಗತ್ಯವಿದೆ. ಇಂಥ ಸ್ತ್ರೀವಾದಿ ದೃಷ್ಟಿಕೋನದೊಂದಿಗೆ ತಮ್ಮ ಚಿಂತನೆಗಳನ್ನು ವಿದ್ವಾಂಸರು ಇಲ್ಲಿ ಮಂಡಿಸಿದ್ದಾರೆ.

**೫೩೯. ಮಹಿಳೆ ಮತ್ತು ಸಮಾಜ**

ಲೇ: ವಿಜಯಕುಮಾರಿ ಎಸ್.ಕರಿಕಲ್

ಪುಟ: iv+೪೬, ವರ್ಷ: ೨೦೦೭, ರೂ: ೧೦.೦೦

ನಮ್ಮ ಭಾರತದ ಸಂವಿಧಾನವೂ ಮಹಿಳೆಗೆ ಪುರುಷನಂತೆ ಸರ್ವಸಮಾನತೆಯನ್ನು ಕೊಟ್ಟಿದ್ದರೂ, ಸಮಾಜ ಆಕೆಯನ್ನು ಮನುಷ್ಯಳನ್ನಾಗಿ ನೋಡಲು ತಾರತಮ್ಯ ನೀತಿಯನ್ನು ಅನುಸರಿಸುತ್ತಿದೆ. ಸಮಾಜದಲ್ಲಿ ಸ್ತ್ರೀ ವಿರೋಧಿ ಪ್ರವೃತ್ತಿಗಳು ಎಷ್ಟು ಆಳವಾಗಿ ಬೇರೂರಿದೆ ಮತ್ತು ಸ್ತ್ರೀ ಕುಟುಂಬದ ಒಳಗೆ ಮತ್ತು ಹೊರಗೆ ಹೇಗೆ ದೌರ್ಜನ್ಯ, ಹಿಂಸೆ, ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ ಎಂಬುದರ ಕುರಿತು *ಈ* ಕಿರು ಗ್ರಂಥ ಸ್ಥೂಲ ಮಾಹಿತಿಯನ್ನು ನೀಡುತ್ತದೆ.

**೫೪೦. ಮಹಿಳೆ ಮತ್ತು ಸಮೂಹ ಮಾಧ್ಯಮಗಳು**

ಲೇ: ಕೆ. ಸರೋಜಾ

ಪುಟ: XVI+೧೧೬, ವರ್ಷ: ೨೦೦೪, ರೂ: ೭೫.೦೦



ಪರಿವಿಡಿ

೧. ಸಮೂಹ ಮಾಧ್ಯಮಗಳಲ್ಲಿ ಮಹಿಳೆಯಗೆ ನೀಡುವ ಪರಿಮಾಣಾತ್ಮಕ ಸ್ಥಾನ

೨. ಸಮೂಹ ಮಾಧ್ಯಮಗಳಲ್ಲಿ ಮಹಿಳೆಯ ಚಿತ್ರಣ

೩. ಸಮೂಹ ಮಾಧ್ಯಮಗಳಲ್ಲಿ ಮಹಿಳಾ ಕಾಳಜಿಗಳು

೪. ಸಮೂಹ ಮಾಧ್ಯಮಗಳಲ್ಲಿ ಮಹಿಳಾ ಚಳುವಳಿ

೫. ಅಂತರಜಾಲ ಮತ್ತು ಮಹಿಳೆ

೬. ಮುಖ್ಯವಾಹಿನಿಯ ಸಮೂಹ ಮಾಧ್ಯಮಗಳಲ್ಲಿ ಮಹಿಳಾ ಕಾಳಜಿಗಳ ಪ್ರತಿಪಾದನಾ ವಿಧಾನಗಳು

೭. ಮುಖ್ಯವಾಹಿನಿಯ ಸಮೂಹ ಮಾಧ್ಯಮಗಳ ಪರಿಣಾಮಕಾರಿ ಬಳಕೆ

ಇಂದಿನ ಮಾಧ್ಯಮಗಳ ಬದಲಾಗುತ್ತಿರುವ ಕ್ರಿಯೆಗಳು, ಗೊತ್ತು ಗುರಿಗಳು ಹಾಗೂ ನೆಲೆಗಳು ಯಾವ್ಯಾವ ರೀತಿಯಲ್ಲಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುತ್ತಿವೆ ಹಾಗೂ ಮುಂದೆ ಬೀರಬಹುದಾದ ಪರಿಣಾಮಗಳೇನು ಎಂಬುದರ ಬಗ್ಗೆ *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.



**೫೪೧. ಮಹಿಳೆ ಮತ್ತು ಆರೋಗ್ಯ : ಮಹಿಳಾ ಅಧ್ಯಯನಗಳ ದೃಷ್ಟಿಯಲ್ಲಿ**

ಲೇ: ಕೆ.ಸರೋಜ

ಪುಟ: xii+೧೭೪, ವರ್ಷ: ೨೦೦೧, ರೂ: ೭೫.೦೦

ಪರಿವಿಡಿ

೧. ಜನಸಂಖ್ಯಾ ಅಂಕಿಅಂಶಗಳಲ್ಲಿರುವ ಮಹಿಳಾ ಆರೋಗ್ಯ ಸೂಚಕಗಳು

೨. ಇಳಿಯುತ್ತಲೇ ಇರುವ ಭಾರತೀಯ ಸ್ತ್ರೀ ಸಂಖ್ಯೆ

೩. ಆಹಾರ ಪೋಷಣೆ ಮತ್ತು ಮಹಿಳಾ ಆರೋಗ್ಯ

೪. ಮಹಿಳೆ ಮತ್ತು ಆರೋಗ್ಯ ಸೇವಾ ಸೌಲಭ್ಯಗಳು

೫. ಭಾರತದ ರಾಷ್ಟ್ರೀಯ ಜನಸಂಖ್ಯಾ ನೀತಿ ಮತ್ತು ಸಂತಾನ ನಿರೋಧ

೬. ಪ್ರಜನನ ಆರೋಗ್ಯ

೭. ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಕಾಳಜಿಗಳು

ಮಹಿಳೆಯರ ಕೌಟುಂಬಿಕ, ಸಾಮಾಜಿಕ, ಸಾಮುದಾಯಿಕ ಬದುಕಿನ ಒಳಗೆ ಹೆಡೆ ಬಿಚ್ಚುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಹಾಗೂ ಅವುಗಳಿಗೆ ಕಾರಣವಾಗುವ ಮೂಲಾಂಶಗಳನ್ನು ಬಹುಜನ ಗ್ರಾಹ್ಯವಾಗುವಂತೆ *ಈ* ಗ್ರಂಥದಲ್ಲಿ ವಿವರಿಸಲಾಗಿದೆ. ಸ್ತ್ರೀಯರ ಆರೋಗ್ಯಕ್ಕೆ ಸಂಬಂಧಿಸಿ

ಹುಟ್ಟಿಕೊಂಡಿರುವ ಹಾಗು ಹಬ್ಬಿಕೊಂಡಿರುವ ವಾಸ್ತವ ಸಂಗತಿಗಳನ್ನು ಪ್ರಶ್ನಿಸುವ, ವಿಮರ್ಶಿಸುವ ಹಾಗೂ ಅವುಗಳ ಸತ್ಯಾಸತ್ಯತೆಗಳನ್ನು ಇಲ್ಲಿ ಗುರುತಿಸಲಾಗಿದೆ.



**೫೪೨. ಮಹಿಳೆ ಮತ್ತು ಜಾತಿ : ಒಂದು ಸೈದ್ಧಾಂತಿಕ ಗ್ರಹಿಕೆ**

ಲೇ : ಎಂ. ಉಷಾ

ಪುಟ: viii+೫೦, ವರ್ಷ: ೨೦೦೫, ರೂ: ೩೦.೦೦

ಪರಿವಿಡಿ

೧. ಪಿತೃಪ್ರಧಾನತೆಯ ಬೀಳಲಾಗಿ ಜಾತಿ ಅಸಮಾನತೆ

೨. ಭಾರತೀಯ ಚಿಂತನಾಕ್ರಮದಲ್ಲಿ ಜಾತಿ ಮತ್ತು ಮಹಿಳಾ ಪ್ರಶ್ನೆಗಳ ಗ್ರಹಿಕೆ

೩. ಸಮಕಾಲೀನ ಸಮಾಜದಲ್ಲಿನ ನವಪಿತೃಪ್ರಧಾನತೆ ಮತ್ತು ನವಜಾತೀಯತೆ.

ಜಾತಿ ಮತ್ತು ಮಹಿಳೆ ಪ್ರಶ್ನೆಗಳ ಸಂಬಂಧವನ್ನು ಕುರಿತು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಜಾತಿಯ ಅಸಮಾನತೆಯು ಪಿತೃ ಪ್ರಧಾನತೆಯ ಉತ್ಪನ್ನ ಎಂದು ವಾದಿಸುತ್ತ ಆಧುನಿಕ ಸಮಾಜಗಳಲ್ಲಿಯೂ ಇದು ನವಪಿತೃಪ್ರಧಾನತೆಯ ರೂಪದಲ್ಲಿ, ನವಜಾತೀಯತೆಯ ರೂಪದಲ್ಲಿ ಮೈದಾಳಿದೆ ಎಂಬುದನ್ನು ಇಲ್ಲಿ ವಿಮರ್ಶಿಸಲಾಗಿದೆ. ಪಿತೃಪ್ರಧಾನತೆ ಮತ್ತು ಜಾತಿವ್ಯವಸ್ಥೆಗಳು ವೈಚಾರಿಕ ಅಂತರ್‌ಸಂಬಂಧಿಯಾದವು ಎನ್ನುವುದನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ.

**೫೪೩. ಮಹಿಳೆ ಮತ್ತು ಪತ್ರಿಕೆ**

ಲೇ: ಎಂ. ಉಷಾ

ಪುಟ: ii+೨೮, ವರ್ಷ: ೧೯೯೯, ರೂ: ೧೦.೦೦

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ಪತ್ರಿಕೆಗಳು ಕೈಗೆತ್ತಿಕೊಂಡ ಸ್ತ್ರೀ ಶಿಕ್ಷಣ, ಸ್ತ್ರೀ ಉದ್ಯೋಗ, ಸ್ತ್ರೀವಾದದ ಬಗೆಗಿನ ಕುತೂಹಲಕಾರಿ ಮಾಹಿತಿಗಳನ್ನು ಕಲೆಹಾಕಿ, ಅವುಗಳ ಆಧಾರದ ಮೇಲೆ ವಸಾಹತುಶಾಹಿ ಕರ್ನಾಟಕವು ಪ್ರತಿನಿಧಿಸಿದ ಸ್ತ್ರೀಪರ ಮನೋಭಾವವನ್ನು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.

**೫೪೪. ಮಾತೃಪ್ರಧಾನ ಪರಿಕಲ್ಪನೆ**

ಲೇ: ಶೈಲಜ ಹಿರೇಮಠ

ಪುಟ: VI+೩೪, ವರ್ಷ: ೨೦೦೪, ರೂ: ೧೦.೦೦

ಮಾತೃಪ್ರಧಾನ ಪರಿಕಲ್ಪನೆಯ ವಿವರಗಳನ್ನು ಮುಂದಿಟ್ಟುಕೊಂಡು, ಇದುವರೆಗೆ ಮಾತೃ ಪ್ರಧಾನತೆಯ ಕುರಿತು ನಡೆದ ನಿರ್ವಚನದ ಹಿನ್ನೆಲೆಯಲ್ಲಿ ಆ ಬಗ್ಗೆಯ ಪರಿಕಲ್ಪನೆಯನ್ನು ವಿಶ್ಲೇಷಿಸುವ ಪ್ರಯತ್ನ *ಈ* ಕಿರುಕೃತಿಯಲ್ಲಿದೆ.

**೫೪೫. ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ**

ಲೇ: ಎಂ. ಉಷಾ

ಪುಟ: x+೬೨, ವರ್ಷ: ೨೦೦೧, ರೂ: ೩೦.೦೦

ಭಾರತೀಯ ಸ್ತ್ರೀವಾದ ನಿರ್ವಚನದಲ್ಲಿ ಸಂಸ್ಕೃತಿ ಚಿಂತನೆಯ ಪಾತ್ರ ಯಾವ ಬಗೆಯದು, ಅದರ ಪರಿಣಾಮವಾಗಿ ರೂಪುಗೊಂಡ ಭಾರತೀಯ ಸ್ತ್ರೀವಾದದ ಸ್ವರೂಪವೇನು ಇತ್ಯಾದಿ ಅಂಶಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಭಾರತೀಯ ಸಮಾಜದ ಏಕತೆಯನ್ನು ಪ್ರತಿಪಾದಿಸ ಹೊರಟ ಹಾಗು ಬಹುಮುಖೀ ಗುಣವನ್ನು ಶೋಧಿಸ ಹೊರಟ ಸಂಸ್ಕೃತಿ ಹಾಗು ಪ್ರತಿಸಂಸ್ಕೃತಿ ಚಿಂತನೆಯ ಸಂದರ್ಭಗಳೆರಡೂ ಸ್ತ್ರೀವಾದದ ಸಂದರ್ಭದಲ್ಲಿ ಮಾತ್ರ ಒಂದೇ ಬಗೆಯ ನಿಲುವನ್ನು ತಾಳುವುದರ ಮೂಲಕ ಹೆಚ್ಚು ವ್ಯತ್ಯಾಸವಿಲ್ಲದೆ ಭಾರತೀಯ ಸ್ತ್ರೀವಾದವನ್ನು ನಿಯಂತ್ರಿಸಲು ಪ್ರಯತ್ನಿಸಿವೆ ಎಂಬುದರ ಬಗ್ಗೆ *ಈ* ಕೃತಿ ಬೆಳಕು ಚೆಲ್ಲುತ್ತದೆ.



**೫೪೬. ಸ್ತ್ರೀವಾದ**

ಲೇ: ಎಚ್.ಎಸ್. ಶ್ರೀಮತಿ

ಪುಟ: XIV+೧೭೮, ವರ್ಷ: ೨೦೦೩, ರೂ: ೬೦.೦೦

ಪರಿವಿಡಿ

೧. ಹೆಣ್ಣು ಎಂದರೆ ಯಾರು ಅಥವಾ ಏನು

೨. ಲಿಂಗ ತಾರತಮ್ಯದ ನೆಲೆಗಳು

೩. ಲಿಂಗ ತಾರತಮ್ಯದ ಸ್ವರೂಪ

೪. ವಿಮೋಚನೆಗಾಗಿ ಸ್ತ್ರೀವಾದ ರಾಜಕೀರಣ

೫. ಒಂದು ಹಿನ್ನೋಟ

ಲಿಂಗತಾರತಮ್ಯದ ನೆಲೆಗಳು, ಲಿಂಗತಾರತಮ್ಯದ ಸ್ವರೂಪ, ವಿಮೋಚನೆಗಾಗಿ ಸ್ತ್ರೀವಾದಿ ರಾಜಕಾರಣ ಇತ್ಯಾದಿ ಸ್ತ್ರೀವಾದಿ ಚಿಂತನೆಗಳು *ಈ* ಕೃತಿಯಲ್ಲಿದ್ದು, ಸ್ತ್ರೀವಾದವನ್ನು ಹೆಣ್ಣು ಎಂದರೆ ಯಾರು ಎಂಬ ಮೂಲಪ್ರಶ್ನೆಯಿಂದಲೇ ಎತ್ತಿಕೊಂಡು ಮುಂದಕ್ಕೆ ಬೆಳಸಿಕೊಂಡು ಹೋಗಿರುವುದು *ಈ* ಕೃತಿಯ ವೈಶಿಷ್ಟ್ಯ.

**೫೪೭. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ : ಒಂದು ಪ್ರವೇಶಿಕೆ**

ಲೇ: ಡಿ. ಮಂಗಳಾ ಪ್ರಿಯದರ್ಶಿನಿ

ಪುಟ: x+೨೬೪, ವರ್ಷ: ೨೦೦೭, ರೂ: ೧೨೦



ಪರಿವಿಡಿ.

೧. ಮಹಿಳಾ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಗತ್ಯ

೨. ಮಹಿಳಾ ಅಧ್ಯಯನದ ಆರಂಭ ಮತ್ತು ಬೆಳವಣಿಗೆ; ಭಾರತದಲ್ಲಿ ಮಹಿಳಾ ಅಧ್ಯಯನದ ಬೆಳವಣಿಗೆ

೩. ಸ್ತ್ರೀವಾದದ ಅರ್ಥ ಮತ್ತು ವ್ಯಾಪ್ತಿ; ಸ್ತ್ರೀವಾದದ ಬೆಳವಣಿಗೆ; ಭಾರತದಲ್ಲಿ ಸ್ತ್ರೀವಾದದ ನೆಲೆಗಳು, ಸ್ತ್ರೀವಾದದ ವಿವಿಧ ಪ್ರಸ್ಥಾವಗಳು

೪. ಮಹಿಳಾ ಅಧ್ಯಯನದ ಕೆಲವು ಪರಿಕಲ್ಪನೆಗಳು

೫. ಮಹಿಳಾ ಚಳುವಳಿಯ ಆರಂಭ, ಸಮಾನ ಹಕ್ಕುಗಳಿಗಾಗಿ ಹೋರಾಟ; ಸ್ತ್ರೀವಾದ ಮತ್ತು ಸಮಾಜವಾದಿ ಚಳುವಳಿಯ ಪರಂಪರೆ; ಆಸ್ತಿ ಹಕ್ಕಿಗಾಗಿ ಹೋರಾಟ-ಮತದಾನದ ಹಕ್ಕಿಗಾಗಿ ಹೋರಾಟ

೬. ಭಾರತದಲ್ಲಿ ಮಹಿಳಾ ಹೋರಾಟಗಳು; ಸಮಾಜ ಸುಧಾರಕರ ಚಳುವಳಿಗಳು

೭. ಪ್ರಧಾನವ್ಯಾಪ್ತಿಯ ಮಹಿಳಾ ಸಂಘಟನೆಗಳು; ತಳಮೂಲ ಸಂಘಟನೆಗಳು

೮. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಚಳುವಳಿಗಳು; ಭಾರತದಲ್ಲಿ ಸ್ವಾಯತ್ತ ಮಹಿಳಾ ಚಳುವಳಿಗಳು ಅವುಗಳ ಮುಖ್ಯ ವಿಷಯಗಳು

೯. ಮಹಿಳಾ ಚಳುವಳಿಗಳು ಹಾಗು ರಾಜಕೀಯ ಚಳುವಳಿಗಳು; ಇತರ ಸಾಮಾಜಿಕ, ಸಾಂಸ್ಕೃತಿಕ ಚಳುವಳಿಗಳು

೧೦. ಮಹಿಳಾ ಚಳುವಳಿಯ ಸಂಘಟನೆ, ಸಂಪರ್ಕ ವ್ಯವಸ್ಥೆ; ಮಹಿಳಾ ಚಳುವಳಿಯ ಆದ್ಯತೆಗಳು, ಕಾರ್ಯತಂತ್ರಗಳು

ಈ ಪುಸ್ತಕದಲ್ಲಿ ಸಾಮಾಜಿಕ ಸನ್ನಿವೇಶದಲ್ಲಿ ಲಿಂಗಾಧಾರಿತ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ, ಅವಕಾಶಗಳು, ಒತ್ತಡಗಳು ಮತ್ತು ಸಾಧ್ಯತೆಗಳನ್ನು ವಿವೇಚಿಸಲಾಗಿದೆ. ಮಹಿಳಾ ಅಧ್ಯಯನಗಳಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಬರೆದಿರುವ ಈ ಕೃತಿ ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನಗಳನ್ನು ಶೈಕ್ಷಣಿಕ ಚೌಕಟ್ಟು ಮತ್ತು ಶಿಸ್ತುಗಳ ನೆಲೆಯಿಂದ ಗ್ರಹಿಸಲು ಬೇಕಾದ ವಿಪುಲ ಸಾಮಾಗ್ರಿಯನ್ನು ಒಳಗೊಂಡಿದೆ.

### ೫೪೮. ಸ್ತ್ರೀವಾದಿ ಚಿಂತನೆ : ಕೆಲವು ಪ್ರಶ್ನೆಗಳು, ಸಂದೇಹಗಳು

ಲೇ: ಎಚ್.ಎಸ್. ಶ್ರೀಮತಿ

ಪುಟ: ii+೨೬, ವರ್ಷ: ೧೯೯೯, ರೂ: ೧೦.೦೦

ಸ್ತ್ರೀವಾದಿ ಚಿಂತನೆಯ ಪ್ರಸ್ತುತತೆ, ಸ್ತ್ರೀವಾದಿ ಚಿಂತನೆಯ ಬಗೆಗಿನ ಆಕ್ಷೇಪಗಳು, ಮಹಿಳೆಯ ಅಸ್ತಿತ್ವದ ಪ್ರಶ್ನೆ ಸವಾಲುಗಳು ಈ ಕಿರುಪುಸ್ತಕದಲ್ಲಿ ಚರ್ಚಿತವಾಗಿವೆ.



### ೫೪೯. ಸ್ತ್ರೀವಾದಿ ವಿಮರ್ಶೆ : ಸ್ವರೂಪ ಮತ್ತು ಪರಿಕಲ್ಪನೆಗಳು

ಲೇ: ಅಶ್ವಿನಿ ದೋಂಗಡೆ

ಅನು: ವಿಠಲರಾವ್ ಗಾಯಕ್ವಾಡ್

ಪುಟ: xii+೧೬೬, ವರ್ಷ: ೨೦೦೧, ರೂ: ೯೦.೦೦

ಪರಿವಿಡಿ

೧. ಸ್ತ್ರೀವಾದ : ಸ್ತ್ರೀ - ಪ್ರತಿಮೆ ಮತ್ತು ಪಾರ್ಶ್ವಭೂಮಿ

೨. ಸ್ತ್ರೀಸ್ವಾತಂತ್ರ್ಯ - ಸಮಾಜ ಮತ್ತು ಮನಃಶಾಸ್ತ್ರ

೩. ಸ್ತ್ರೀವಾದಿ ವಿಮರ್ಶೆ

೪. ಮಹಿಳೆಯರ ವ್ರತ ಕತೆಗಳು

೫. ನನ್ನ ಪರಿಚಯದ ಮಜಲು

೬. ಅಂಡ್ ದೆ ಲೀವ್ಡ್ ಹ್ಯಾಪಿಲಿ ಎವರ್ ಆಫ್ಟರ್

೭. ಎರಡು ಆತ್ಮ ಚರಿತ್ರೆಗಳು.

ಸ್ತ್ರೀವಾದ ಆರಂಭಗೊಂಡುದರ ಸಾಮಾಜಿಕ ಹಿನ್ನೆಲೆ, ಮಾನಸಿಕ ಅಧಿಷ್ಠಾನ, ಸ್ತ್ರೀಸ್ವಾತಂತ್ರ್ಯದ ಹೋರಾಟವನ್ನು ಅತ್ಯಂತ ಸೂಕ್ಷ್ಮ ಹಾಗು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ. ಈ ಅಂಶಗಳ ಆಧಾರದ ಮೇಲೆ ಸ್ತ್ರೀವಾದಿ ವಿಮರ್ಶೆಯ ವೈಚಾರಿಕ ಆಶಯಗಳನ್ನೂ ಇಲ್ಲಿ ನೀಡಲಾಗಿದೆ. ಮರಾಠಿ ಭಾಷೆಯ ಕತೆ ಕವಿತೆ ಆತ್ಮ ಚರಿತ್ರೆ ಮತ್ತು ಸ್ತ್ರೀ ಲಿಖಿತ ಜನಪ್ರಿಯ ಕಾದಂಬರಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡಿರುವುದರ ದೃಷ್ಟಿಕೋನ ಈ ಕೃತಿಯಲ್ಲಿ ದೊರೆಯುತ್ತದೆ.



### ೫೫೦. ಹೆಣ್ಣು ಮತ್ತು ಭಾಷೆ

ಸಂ: ಎಚ್.ಎಸ್.ಶ್ರೀಮತಿ ಮತ್ತು ಇತರರು

ಪುಟ: x+೧೬೨, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಭಾಷಾ ಕಲಿಕೆ ಮತ್ತು ಬಳಕೆಯಲ್ಲಿ ಹೆಣ್ಣಿಗೆ ಇರುವ ಸವಾಲುಗಳು

೨. ಕಲಾತ್ಮಕ ಅಭಿವ್ಯಕ್ತಿಗಳಲ್ಲಿ ಹೆಣ್ಣಿನ ಭಾಷೆಗಿರುವ ಸವಾಲುಗಳು

೩. ಕಲಿಕೆ, ಬಳಕೆ ಮತ್ತು ಭಾಷೆ

೪. ಸಮಕಾಲೀನ ಮಹಿಳಾ ಕಾವ್ಯ ಮತ್ತು ಭಾಷೆ

೫. ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ

೬. ಸಾಮಾಜಿಕ ಸಂವಹನ ಲಿಂಗತಾರತಮ್ಯ, ಭಿನ್ನತೆ

೭. ಭಾಷಾ ಬಳಕೆಯಲ್ಲಿ ವ್ಯತ್ಯಾಸ

೮. ಸ್ತ್ರೀವಾದಿ ಭಾಷಾ ಯೋಜನೆ : ಒಂದು ಟಿಪ್ಪಣಿ

೯. ಹೆಣ್ಣಿನ ಭಾಷೆಯ ಕಲಿಕೆ, ಬಳಕೆ, ಅಭಿವ್ಯಕ್ತಿ ಕೌಟುಂಬಿಕ ವಲಯದಲ್ಲಿ

ಮಹಿಳಾ ಅಧ್ಯಯನವನ್ನು ವಿಶೇಷವಾಗಿ ಕನ್ನಡದಲ್ಲೇ ಅಭ್ಯಾಸ ಮಾಡುವ ನಮ್ಮ ವಿದ್ಯಾರ್ಥಿಗಳಿಗಾಗಿ ಕನ್ನಡ ವಿಶ್ವವಿದ್ಯಾಲಯ ದಲ್ಲಿ ಹಲವು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. *ಈ* ಕ್ಷೇತ್ರದ ತಜ್ಞರು ನೀಡಿದ ಉಪನ್ಯಾಸಗಳನ್ನು *ಈ* ಕೃತಿಯಲ್ಲಿ ಸಂಕಲಿಸಲಾಗಿದೆ.

# ೨೮

# ವ್ಯಕ್ತಿ-ಬದುಕು, ಸಾಧನೆ

**೫೫೧. ಎಂ.ಎಸ್.ಸುಂಕಾಪುರ**

ಲೇ: ಸಿ.ಎ.ಕೆರಿಮನಿ

ಪುಟ: vi+೩೨, ವರ್ಷ: ೨೦೦೬, ರೂ: ೧೦.೦೦

ಕನ್ನಡದ ಬಹುಮುಖ್ಯ ಬರಹಗಾರ ಎಂ.ಎಸ್.ಸುಂಕಾಪುರ ಅವರ ಬದುಕು ಬರಹ ಸಾಧನೆಗಳ ಸೂಕ್ಷ್ಮನೋಟ *ಈ* ಕಿರುಕೃತಿಯಲ್ಲಿದೆ.



**೫೫೨. ಎಚ್.ಎಲ್.ನಾಗೇಗೌಡ**

ಲೇ: ಕೇಶವನ್ ಪ್ರಸಾದ್.ಕೆ

ಪುಟ: x+೩೦, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಖ್ಯಾತ ಜಾನಪದ ತಜ್ಞ, ಬರಹಗಾರ ಶ್ರೀ ಎಚ್.ಎಲ್. ನಾಗೇಗೌಡ ಅವರ ಬದುಕು ಬರಹ ಸಾಧನೆಯ ಕಿರುಚಿತ್ರಣ *ಈ* ಕೃತಿಯಲ್ಲಿದೆ.

**೫೫೩. ಕನ್ನಡ ಚಳವಳಿಗಾರ ಮ.ರಾಮಮೂರ್ತಿ**

ಲೇ: ಸಿ.ಆರ್.ಗೋವಿಂದರಾಜು

ಪುಟ: ೩೨, ವರ್ಷ: ೨೦೦೦, ರೂ: ೧೦.೦೦

೧೯೬೦ರ ದಶಕದ ಕನ್ನಡದ ಚಳುವಳಿಗಳಲ್ಲಿ ಪ್ರಧಾನವಾಗಿ ಪಾಲ್ಗೊಳ್ಳುತ್ತಿದ್ದ ಕನ್ನಡದ ಚಳವಳಿಗಾರ, ಪತ್ರಿಕೋದ್ಯಮಿ ಹಾಗೂ ಪತ್ತೇದಾರಿ ಕಾದಂಬರಿಕಾರ ಮ.ರಾಮಮೂರ್ತಿ ಅವರ ಬದುಕು ಮತ್ತು ಸಾಧನೆಯ ಬಗ್ಗೆ ಸಂಕ್ಷಿಪ್ತ ಪರಿಚಯ ಮಾಹಿತಿ *ಈ* ಕಿರುಪುಸ್ತಕದಲ್ಲಿದೆ.

**೫೫೪. ಕೆ.ಎಸ್.ನರಸಿಂಹಸ್ವಾಮಿ**

ಲೇ: ಸಿ.ಆರ್.ಗೋವಿಂದರಾಜು

ಪುಟ: viii+೫೦, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಮಹತ್ತ್ವದ ಕವಿ, ಕೆ.ಎಸ್.ನರಸಿಂಹಸ್ವಾಮಿ ಅವರ ಬದುಕು-ಬರಹ-ಸಾಧನೆಗಳ ಕಿರುಚಿತ್ರಣ *ಈ* ಕೃತಿಯಲ್ಲಿದೆ.

**೫೫೫. ಕೆ.ವಿ.ಸುಬ್ಬಣ್ಣ**

ಲೇ: ಪ್ರಕಾಶ ಗರುಡ

ಪುಟ: ii+೪೪, ವರ್ಷ: ೨೦೦೦, ರೂ: ೨೫.೦೦

ಕನ್ನಡದ ಪ್ರಮುಖ ಚಿಂತಕ, ರಂಗಕರ್ಮಿ, ಸಾಹಿತಿ ಕೆ.ವಿ.ಸುಬ್ಬಣ್ಣ ಅವರ ಬದುಕು ಬರಹ ಮತ್ತು ಸಾಧನೆಗಳ ಬಗ್ಗೆ *ಈ* ಕೃತಿಯಲ್ಲಿ ಸಂಕ್ಷಿಪ್ತ ಮಾಹಿತಿಗಳಿವೆ.

**೫೫೬. ಗೋವಿಂದ ಪೈ**

ಲೇ: ಬಿ. ಸದಾಶಿವ

ಪುಟ: IV+೪೨, ವರ್ಷ: ೨೦೦೩, ರೂ: ೧೦.೦೦

ರಾಷ್ಟ್ರಕವಿ ಗೋವಿಂದ ಪೈ ಅವರ ಬದುಕು ಮತ್ತು ಸಾಹಿತ್ಯದ ಬಗ್ಗೆ ಆಪ್ತವಾದ ಕಿರುಪರಿಚಯ *ಈ* ಕೃತಿಯಲ್ಲಿದೆ.

**೫೫೭. ಜಿ.ಎಸ್.ಶಿವರುದ್ರಪ್ಪ**

ಲೇ: ಸಿ.ಮಹದೇವ

ಪುಟ: viii+೫೦, ವರ್ಷ: ೧೯೯೫, ರೂ: ೧೫.೦೦

ಕನ್ನಡದ ಖ್ಯಾತ ಕವಿ, ವಿಮರ್ಶಕ ಡಾ. ಜಿ.ಎಸ್.ಶಿವರುದ್ರಪ್ಪ ಅವರ ಬದುಕು,ಬರಹ, ಚಿಂತನೆ, ಸಾಧನೆಯ ಬಗ್ಗೆ *ಈ* ಪುಟ್ಟಕೃತಿ ಸಾಕಷ್ಟು ಮಾಹಿತಿಗಳನ್ನು ಬಿಚ್ಚಿಡುತ್ತದೆ.

**೫೫೮. ಜೀ.ಶಂ. ಪರಮಶಿವಯ್ಯ**

ಲೇ: ಚೆಲುವರಾಜು

ಪುಟ: viii+೫೦, ವರ್ಷ: ೧೯೯೫, ರೂ: ೧೨.೦೦

ಕರ್ನಾಟಕ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ತಳಹದಿಯನ್ನು ಒದಗಿಸಿದ ಡಾ. ಜಿ.ಶಂ. ಪರಮಶಿವಯ್ಯ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತಾದ ಕಿರು ಪುಸ್ತಕವಿದು.

**೫೫೯. ಟೇಕೂರ್ ಸುಬ್ರಹ್ಮಣ್ಯಂ (ಸ್ಮರಣ ಸಂಚಿಕೆ)**

ಸಂ: ಟೇಕೂರ್ ಸುಬ್ರಹ್ಮಣ್ಯಂ ಸ್ಮರಣ ಸಂಚಿಕೆ ಸಮಿತಿ

ಪುಟ: xiv+೧೬೪, ವರ್ಷ: ೨೦೦೦, ರೂ: ೫೦.೦೦




ಪರಿವಿಡಿ

೧. ಟೇಕೂರ್ ಜೀವನ ಮತ್ತು ಕಾಲ

೨. ಟೇಕೂರ್ ರಾಜಕೀಯ ಅಧ್ಯಯನ

೩. ಟೇಕೂರ್ ಲೇಖನಿ ಖಡ್ಗಕ್ಕಿಂತ ಹರಿತ

೪. ಭಾವಚಿತ್ರಗಳು

೫. ಟೇಕೂರ್ : ಒಂದು ಸ್ಮರಣೆ

ಬಳ್ಳಾರಿ ಜಿಲ್ಲೆಯಲ್ಲಿ ಜನಿಸಿ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಟೇಕೂರ್ ಸುಬ್ರಹ್ಮಣ್ಯಂ ಅವರ ಜನ್ಮ ಶತಾಬ್ದಿಯ ಸ್ಮರಣಸಂಚಿಕೆಯಾಗಿ *ಈ* ಕೃತಿ ಹೊರಬಂದಿದೆ. ಟೇಕೂರರ ಬದುಕು, ಸಾಧನೆಯ ಬಗ್ಗೆ ಹಲವರು ಬರೆದ ಮೌಲಿಕ ಲೇಖನಗಳು *ಈ* ಕೃತಿಯಲ್ಲಿವೆ.

**೫೬೦. ಡಾ. ಎ.ಕೆ. ರಾಮಾನುಜನ್**

ಲೇ: ವಿಶ್ವನಾಥ ಬದಿಕಾನ

ಪುಟ: viii+೨೮, ವರ್ಷ: ೧೯೯೫, ರೂ: ೧೦.೦೦

ಕವಿ, ಜಾನಪದ ತಜ್ಞ, ಭಾಷಾವಿಜ್ಞಾನಿ ಡಾ. ಎ.ಕೆ. ರಾಮಾನುಜನ್ ಅವರ ಬದುಕು ಮತ್ತು ಬರಹಗಳ ಬಗ್ಗೆ ಕಿರುಪರಿಚಯ ಮಾಡಿಕೊಡುವ ಕೃತಿಯಿದು.

**೫೬೧. ಡಾ. ಎಂ. ಚಿದಾನಂದಮೂರ್ತಿ**

ಲೇ: ಎಸ್.ಎಸ್.ಅಂಗಡಿ

ಪುಟ: viii+೩೦, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಖ್ಯಾತ ಸಂಶೋಧಕ ಡಾ. ಎಂ.ಚಿದಾನಂದಮೂರ್ತಿಯವರ ಬದುಕು, ಸಾಧನೆ ಮತ್ತು ಬರಹಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಪುಸ್ತಕದಲ್ಲಿದೆ.

**೫೬೨. ಡಾ. ಎಚ್. ನರಸಿಂಹಯ್ಯ**

ಲೇ: ಅಶೋಕಕುಮಾರ್ ರೆಂಜೇರೆ

ಪುಟ: viii+೩೨, ವರ್ಷ: ೧೯೯೫, ರೂ: ೧೦.೦೦

ಕರ್ನಾಟಕದ ಖ್ಯಾತ ಶಿಕ್ಷಣತಜ್ಞ, ಗಾಂಧಿವಾದಿ, ನಾಸ್ತಿಕವಾದಿ ಡಾ.ಎಚ್.ನರಸಿಂಹಯ್ಯ ಅವರ ಬದುಕು ಚಿಂತನೆ ಬರಹಗಳ ಬಗ್ಗೆ *ಈ* ಕಿರುಪುಸ್ತಕ ಸಾಕಷ್ಟು ಮಾಹಿತಿಗಳನ್ನು ನೀಡುತ್ತದೆ.




**೫೬೩. ಬಸವರಾಜ ರಾಜಗುರು**

ಸಂ : ನಂದಾ ಎಂ. ಪಾಟೀಲ

ಪುಟ : viii + ೬೮, ವರ್ಷ : ೨೦೦೯, ರೂ. ೪೦.೦೦

ಪರಿವಿಡಿ

೧. ಬಸವರಾಜ ರಾಜಗುರು ಅವರ ಜೀವನ ಬಾಲ್ಯ ಹಾಗೂ ಬೆಳವಣಿಗೆ

೨. ಬಸವರಾಜ ರಾಜಗುರು ಅವರ ಸಂಗೀತ ಸಾಧನೆ

೩. ಬಸವರಾಜ ರಾಜಗುರು ಸಾಂಸ್ಕೃತಿಕ ಪರಂಪರೆ

ಬಸವರಾಜ ರಾಜಗುರು ಅವರು ಕರ್ನಾಟಕದ ಶ್ರೇಷ್ಠ ಹಿಂದೂಸ್ತಾನಿ ಗಾಯಕರು. ಕಿರಾಣಾ ಘರಾಣಾ ಮತ್ತು ಗ್ವಾಲಿಯರ್ ಘರಾಣೆಗಳಲ್ಲಿ ವಿಶೇಷ ಪರಿಣತಿಯನ್ನು ಪಡೆದವರು. ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನೀಡಿ ಕರ್ನಾಟಕದ ಕೀರ್ತಿಯನ್ನು ಉತ್ತುಂಗಕ್ಕೇರಿಸಿ ದವರು. ವಚನಗಳನ್ನು ಅದ್ಭುತವಾಗಿ ಹಾಡಿದ *ಈ* ಸಂಗೀತಯೋಗಿ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ನಾದಭಾವದಲ್ಲಿ ಪಸರಿಸಿದ ಸಂಗೀತಶಿಲ್ಪಿ. ಇಂತಹ ಉನ್ನತ ಕಲಾವಿದರ ಕುರಿತಂತೆ ಉಪಯುಕ್ತ ಕೃತಿಯಿದು.

**೫೬೪. ಡಾ. ಎಸ್.ಎಲ್. ಭೈರಪ್ಪ**

ಲೇ: ವಿಠಲರಾವ್ ಗಾಯಕ್ವಾಡ್

ಪುಟ: viii+೫೨, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಪ್ರಮುಖ ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪ ಅವರ ಬದುಕು ಬರಹಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡುವ ಪುಸ್ತಕವಿದು.

**೫೬೫. ಡಾ. ಬಸವರಾಜ ಕಟ್ಟೀಮನಿ**

ಲೇ: ವೀರೇಶ ಬಡಿಗೇರ

ಪುಟ: viii+೪೩, ವರ್ಷ: ೧೯೯೭, ರೂ: ೧೦.೦೦

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ವಿಶಿಷ್ಟ ಬಗೆಯಲ್ಲಿ ಸ್ಪಂದಿಸಿದ ಡಾ. ಬಸವರಾಜ ಕಟ್ಟೀಮನಿಯವರ ಬದುಕು ಬರಹಗಳನ್ನು ಕುರಿತ ಕೃತಿ ಇದಾಗಿದೆ.

**೫೬೬. ಡಾ. ಬೆಸಗರಹಳ್ಳಿ ರಾಮಣ್ಣ**

ಲೇ: ಸ.ಚಿ.ರಮೇಶ್

ಪುಟ: vi+೩೬, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಕಥೆಗಾರ ಡಾ. ಬೆಸಗರಹಳ್ಳಿ ರಾಮಣ್ಣ ಅವರ ಬದುಕು ಕೃತಿಗಳ ಬಗ್ಗೆ ಮಾಹಿತಿಗಳನ್ನು ಕೊಡುವ ಕೃತಿಯಿದು.

**೫೬೭. ಡಾ. ಯು.ಆರ್.ಅನಂತಮೂರ್ತಿ**

ಲೇ: ಮೋಹನ ಕುಂಟಾರ್

ಪುಟ: viii+೫೦, ವರ್ಷ: ೧೯೯೫, ರೂ: ೧೫.೦೦

ಕನ್ನಡದ ಪ್ರಮುಖ ಕಾದಂಬರಿಕಾರ, ಕಥೆಗಾರ, ಕನ್ನಡದ ಚಿಂತಕ ಡಾ. ಯು.ಆರ್. ಅನಂತಮೂರ್ತಿಯವರ ಬದುಕು, ಬರಹ, ಚಿಂತನೆ, ಸಾಧನೆಯ ಬಗ್ಗೆ *ಈ* ಪುಸ್ತಕದಲ್ಲಿ ಸಂಕ್ಷಿಪ್ತವಾದ ಮಾಹಿತಿಗಳಿವೆ.

**೫೬೮. ಡಾ. ಸಿದ್ಧಲಿಂಗಯ್ಯ**

ಲೇ: ಮಾಧವ ಪೆರಾಜೆ

ಪುಟ: viii+೨೩, ವರ್ಷ: ೧೯೯೫, ರೂ: ೧೦.೦೦ ನಮ್ಮವರು ಪುಸ್ತಕ ಮಾಲೆ

ಡಾ. ಸಿದ್ಧಲಿಂಗಯ್ಯ ಅವರ ಬದುಕು ಹಾಗೂ ಬರಹಗಳ ಬಗ್ಗೆ ಸೂಕ್ಷ್ಮ ನೋಟ *ಈ* ಕೃತಿಯಲ್ಲಿದೆ.

**೫೬೯. ಡಾ. ಹಾ ಮಾ ನಾಯಕ**

ಲೇ: ಮಂಜುನಾಥ ಬೇವಿನಕಟ್ಟಿ

ಪುಟ: vi+೩೮, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಸಾಹಿತಿ, ಶಿಕ್ಷಣತಜ್ಞ, ಡಾ. ಹಾ ಮಾ ನಾಯಕ ಅವರ ಬದುಕು ಸಾಧನೆ ಕೃತಿಗಳ ವಿಶ್ಲೇಷಣೆ *ಈ* ಕಿರು ಕೃತಿಯಲ್ಲಿದೆ.




**೫೭೦. ಡಿ.ಎಲ್. ನರಸಿಂಹಾಚಾರ್ಯ : ಶತಮಾನ ಸ್ಮರಣೆ**

ಸಂ : ಎಫ್.ಟಿ. ಹಳ್ಳಿಕೇರಿ

ಪುಟ: xx+೩೬೦, ವರ್ಷ: ೨೦೦೫, ರೂ: ೫೦.೦೦

ಪರಿವಿಡಿ

೧. ಡಿ.ಎಲ್.ಎನ್. ಅವರ ವ್ಯಕ್ತಿತ್ವ

೨. ಡಿ.ಎಲ್.ಎನ್. ಅವರ ಸಾಹಿತ್ಯ

ಕನ್ನಡ ವಿದ್ವತ್ ಲೋಕದಲ್ಲಿ ಗ್ರಂಥಸಂಪಾದನೆ, ವ್ಯಾಕರಣ, ಭಾಷಿಕ ಅಧ್ಯಯನ, ಪ್ರಾಚೀನ ಕಾವ್ಯ ಅಧ್ಯಯನ, ಛಂದಸ್ಸು, ನಿಘಂಟು ಮುಂತಾದ 'ಸಂಶೋಧನಾ ಕ್ಷೇತ್ರ'ದಲ್ಲಿ ಸಮಾನ ಆಸಕ್ತಿಯನ್ನು ಇಟ್ಟುಕೊಂಡಿದ್ದ ಪ್ರೊ.

ಡಿ.ಎಲ್.ಎನ್ ಅವರ ಸಹಚರ್ಯದ ಸುಖವನ್ನು ಅನುಭವಿಸಿದ ಹಾಗೂ ಅವರ ಶಿಷ್ಯರಾಗಿದ್ದ ಕನ್ನಡದ ಹಿರಿಯ ಲೇಖಕರು ಡಿ.ಎಲ್.ಎನ್ ಬಗ್ಗೆ ತಮ್ಮ ಅನುಭವವನ್ನು *ಈ* ಕೃತಿಯಲ್ಲಿ ಹಂಚಿಕೊಂಡಿದ್ದಾರೆ.

**೫೭೧. ತ ರಾ ಸು**

ಲೇ: ಪಾಂಡುರಂಗ ಬಾಬು

ಪುಟ: vi+೩೮, ವರ್ಷ: ೧೯೯೬, ರೂ: ೧೦.೦೦

ಕನ್ನಡದ ಮುಖ್ಯ ಕಾದಂಬರಿಗಾರ, ಕನ್ನಡ ಚಳುವಳಿಗಳ ನೇತಾರ ತ.ರಾ.ಸುಬ್ಬರಾವ್ ಅವರ ಬದುಕು ಕೃತಿ ಸಾಧನೆಗಳ ಬಗ್ಗೆ *ಈ* ಕಿರುಕೃತಿಯಲ್ಲಿ ಮಾಹಿತಿಗಳಿವೆ.

**೫೭೨. ದೇವನೂರ ಮಹಾದೇವ**

ಲೇ: ಬಿ.ಎಂ.ಪುಟ್ಟಯ್ಯ

ಪುಟ: vi+೩೫, ವರ್ಷ: ೧೯೯೬, ರೂ: ೧೨.೦೦

ಕನ್ನಡದ ಖ್ಯಾತ ಪ್ರಗತಿಪರ ಚಿಂತಕ ದೇವನೂರ ಮಹಾದೇವ ಅವರ ಬದುಕು ಬರಹ ಸಾಧನೆಗಳ ಬಗ್ಗೆ *ಈ* ಕಿರುಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.

**೫೭೩. ದೇವಿಪ್ರಸಾದ್ ಚಟ್ಟೋಪಾಧ್ಯಾಯ**

ಸಂ : ಟಿ.ಎಸ್. ವೇಣುಗೋಪಾಲ್

ಪುಟ : vi + ೯೨, ವರ್ಷ : ೨೦೦೯, ರೂ. ೬೦.೦೦

ಪರಿವಿಡಿ

೧. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಬದುಕು-ಬರಹ

೨. ಭಾರತೀಯ ದರ್ಶನಗಳು

೩. ಮೀಮಾಂಸೆ

೪. ಭಾವನಾವಾದಕ್ಕೆ ಎದುರಾಗಿ ಭೌತವಾದ

೫. ಲೋಕಾಯತ

೬. ಭೌತಿಕವಾದ ಮತ್ತು ಭಾರತದ ವಿಜ್ಞಾನ

೭. ಬಿಡುಗಡೆಯ ಪ್ರಶ್ನೆ

ಭಾರತೀಯ ದಾರ್ಶನಿಕ ವಿಚಾರಗಳನ್ನು ಕಾಲಕಾಲಕ್ಕೆ ಹೊಸ ಹೊಸ ದೃಷ್ಟಿಕೋನದಿಂದ ವಿಮರ್ಶಿಸಿ ಭಾರತೀಯ ತತ್ವಶಾಸ್ತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಎಡಪಂಥೀಯ ಚಿಂತಕರಲ್ಲಿ ಮುಖ್ಯ ಹೆಸರು ದೇವಿಪ್ರಸಾದ್ ಚಟ್ಟೋಪಾಧ್ಯಾಯ. ಭಾರತೀಯ ದರ್ಶನದ ಆಕರಗಳೆನಿಸಿದ ಪ್ರಾಚೀನ ವೇದ, ಸಂಹಿತೆಗಳನ್ನು ಪೂಜ್ಯಭಾವನೆಯಿಂದ ನೋಡುತ್ತಿದ್ದ ಸಂದರ್ಭದಲ್ಲಿ ಅವುಗಳನ್ನು ವೈಜ್ಞಾನಿಕ ನೆಲೆಗಟ್ಟಿನಿಂದ ವಿಮರ್ಶಾತ್ಮಕ ದೃಷ್ಟಿಕೋನದಿಂದ ಶೋಧಿಸಿ ಕೊಟ್ಟವರು ಇವರು. ಇಂತಹ ಅಗಾಧ ಪಾಂಡಿತ್ಯವಿದ್ದ ಚಿಂತಕ ಚಟ್ಟೋಪಾಧ್ಯಾಯರ ಬದುಕು-ಬರಹಗಳನ್ನು ಪರಿಚಯಿಸುವ ಕೃತಿಯಿದು.




**೫೭೪. ನನ್ನ ಬಣ್ಣದ ಬದುಕು**

ನಿರೂಪಣೆ: ದು ನಿಂ ಬೆಳಗಲಿ

ಪುಟ: xvi+೯೫, ವರ್ಷ: ೧೯೯೯, ರೂ: ೫೦.೦೦

ಇದು ಕನ್ನಡ ವೃತ್ತಿರಂಗಭೂಮಿಗೆ ಪರ್ಯಾಯವೆನಿಸಿರುವ ಖ್ಯಾತ ರಂಗಕರ್ಮಿ ಏಣಗಿ ಬಾಳಪ್ಪನವರ ರಂಗಸಾಧನೆಯ ಸಂಕಥನ. *ಈ* ಕೃತಿ ಏಣಗಿಯವರ ಜೀವನ ಚರಿತ್ರೆಯಾಗುತ್ತಲೇ ಕಲಾವೈಭವ ನಾಟ್ಯಸಂಘದ ಚರಿತ್ರೆ ಹಾಗೂ ಸಮಕಾಲೀನ ರಂಗಭೂಮಿಯ ಚರಿತ್ರೆಯಾಗಿಯೂ ಬೆಳೆದು ಬಂದಿದೆ. ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಅರ್ಧಶತಮಾನ ಕಾಲ ವೈಭವಪೂರ್ಣವಾಗಿ ಒಂದು ನಾಟಕ ಸಂಸ್ಥೆಯನ್ನು ನಡೆಸಿಕೊಂಡು ಬಂದು ೭ ದಶಕಗಳ ಕಾಲ ಶ್ರೇಷ್ಠದರ್ಜೆಯ ರಂಗನಾಟರಾಗಿ ಮೆರೆದು ಐತಿಹಾಸಿಕ ದಾಖಲೆ ನಿರ್ಮಿಸಿರುವ ಬಾಳಪ್ಪ ನವರ ಬಣ್ಣದ ಬದುಕನ್ನು *ಈ* ಕೃತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ ಹಿಡಿದಿಡಲಾಗಿದೆ.




**೫೭೫. ನಾಳಿನ ಚಿಂತ್ಯಾಕ**

ಮರಾಠಿ ಮೂಲ: ಶಾಂತಾ ಹುಬಳೀಕರ್

ಅನು: ಕೆ.ಎಸ್.ಕುಲಕರ್ಣಿ

ಪುಟ: xvi+೧೧೮, ವರ್ಷ: ೧೯೯೫, ರೂ: ೪೫.೦೦

ಶ್ರೇಷ್ಠ ಸಿನಿಮಾ ಕಲಾವಿದೆ ದಿ.ಶಾಂತಾಹುಬಳೀಕರರು ಮರಾಠಿ ಭಾಷೆಯಲ್ಲಿ ಬರೆದಿರುವ ಆತ್ಮಚರಿತ್ರೆ 'ಕಶಾಲಾ ಉದ್ಯಾಚಿಬಾತ' ಕೃತಿಯ ಅನುವಾದವಿದು. ಶಾಂತಾ ಹುಬಳೀಕರರು ಅನುಭವಿಸಿದ ಜೀನವದ ಏರಿಳಿತಗಳು, ಹೋರಾಟದ ಕಲಾಜೀವನವು ಇಲ್ಲಿ ಪಡಿಮೂಡಿವೆ.

**೫೭೬. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ**

ಲೇ: ರಾಧಾಕೃಷ್ಣ ಬೆಳ್ಳೂರು

ಪುಟ: iv+೨೮, ವರ್ಷ: ೧೯೯೯, ರೂ: ೫.೦೦

ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಾತಂತ್ರ್ಯಗೀತೆಗಳನ್ನು ಬರೆದು, ಹಾಡಿದ ಕವಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಬದುಕು ಸಾಧನೆ ಕೃತಿ ವಿಚಾರಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕಿರುಕೃತಿಯಲ್ಲಿದೆ.

**೫೭೭. ಪೂರ್ಣಚಂದ್ರ ತೇಜಸ್ವಿ**

ಲೇ: ರಾ ವೆಂಕಟೇಶ ಇಂದ್ವಾಡಿ

ಪುಟ: viii+೫೦, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಪ್ರಖ್ಯಾತ ಬರಹಗಾರ ಮತ್ತು ಚಿಂತಕ ಶ್ರೀ ಪೂರ್ಣಚಂದ್ರ ತೇಜಸ್ವಿ ಅವರ ಜೀವನ ಮತ್ತು ಸಾಧನೆಯ ಬಗ್ಗೆ *ಈ* ಕಿರುಪುಸ್ತಕದಲ್ಲಿ ವಿವರಗಳಿವೆ.

**೫೭೮. ಪ್ರೊ. ಎ.ಎನ್. ಮೂರ್ತಿರಾವ್**

ಲೇ: ಮಲ್ಲಿಕಾರ್ಜುನಗೌಡ

ಪುಟ: viii+೩೦, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಪ್ರಮುಖ ಸಾಹಿತಿ, ಚಿಂತಕ, ಪ್ರೊ.ಎ.ಎನ್. ಮೂರ್ತಿರಾಯರ ಬದುಕು ಬರಹ ಸಾಧನೆಗಳ ಬಗ್ಗೆ *ಈ* ಕಿರುಕೃತಿ ಚರ್ಚಿಸುತ್ತದೆ.

**೫೭೯. ಪ್ರೊ. ಎಸ್.ಎಸ್.ಭೂಸನೂರಮಠ**

ಲೇ: ನೀಲಗಿರಿ ತಳವಾರ

ಪುಟ: vi+೩೬, ವರ್ಷ: ೨೦೦೧, ರೂ: ೧೦.೦೦

ಗ್ರಂಥಸಂಪಾದನೆ, ವ್ಯಾಖ್ಯಾನ, ಅನುವಾದ ಮತ್ತು ಸೃಜನಶೀಲ ಬರವಣಿಗೆ ಕ್ಷೇತ್ರದಲ್ಲಿ ಗಣನೀಯವಾದ ಸಾಧನೆ ಮಾಡಿರುವ ಪ್ರೊ. ಎಸ್.ಎಸ್.ಭೂಸನೂರ ಮಠ ಅವರ ವ್ಯಕ್ತಿತ್ವ, ಬರಹಗಳ ಬಗ್ಗೆ *ಈ* ಕಿರುಪುಸ್ತಕ ಮಾಹಿತಿ ನೀಡುತ್ತದೆ.

**೫೮೦. ಪ್ರೊ. ಕೀರ್ತಿನಾಥ ಕುರ್ತಕೋಟಿ**

ಲೇ: ಸುಬ್ಬಣ್ಣ ರೈ

ಪುಟ: viii+೪೭, ವರ್ಷ: ೧೯೯೫, ರೂ: ೧೨.೦೦

ಕನ್ನಡದ ಹಿರಿಯ ವಿಮರ್ಶಕ ಪ್ರೊ. ಕೀರ್ತಿನಾಥ ಕುರ್ತುಕೋಟಿಯವರ ಬದುಕು ಬರಹಗಳನ್ನು ಪರಿಚಯಿಸುವ ಕೃತಿಯಿದು. ಕುರ್ತಕೋಟಿಯವರ ವ್ಯಕ್ತಿತ್ವ ಚಿತ್ರಣದ ಜತೆಗೆ ಸಾಹಿತ್ಯ ಪ್ರಕಾರಗಳಿಗೆ ಅವರು ನೀಡಿದ ಕೊಡುಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

**೫೮೧. ಪ್ರೊ. ಕೆ.ಜಿ.ಕುಂದಣಗಾರರ ಬದುಕು ಮತ್ತು ಬರಹ**

ಲೇ: ಮ.ಗು. ಬಿರಾದಾರ

ಪುಟ: ii+೩೮, ವರ್ಷ: ೧೯೯೬, ರೂ: ೨.೦೦

ಕನ್ನಡ ಕುಲದಲ್ಲಿ ಕನ್ನಡದ ಛಲವನ್ನು ಬಿತ್ತಿಬೆಳೆಸಿದ, ಕನ್ನಡದ ಸಂಶೋಧಕ ಹಾಗೂ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಇತಿಹಾಸ, ಗ್ರಂಥಸಂಪಾದನೆ, ಛಂದಸ್ಸು, ನಿಘಂಟು, ಭಾಷಾಂತರ, ಪತ್ರಿಕೋದ್ಯಮ ಇತ್ಯಾದಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ ಪ್ರೊ. ಕೆ.ಜಿ. ಕುಂದಣಗಾರ ಅವರ ಬದುಕು ಮತ್ತು ಬರಹಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕೃತಿಯಲ್ಲಿದೆ.

**೫೮೨. ಫರ್ಡಿನಾಂಡ್ ಕಿಟೆಲ್ : ಜೀವನ ಸಾಧನೆ ಕೋಶರಚನೆ**

ಲೇ: ವಿಲ್ಯಂ ಮಾಡ್ತ

ಪುಟ: ೨೮, ವರ್ಷ: ೧೯೯೪, ರೂ: ೧.೦೦

ಕನ್ನಡಕ್ಕೆ ಕಿಟೆಲ್ ಅವರ ಕೊಡುಗೆ ಅಪಾರ. *ಈ* ಕೃತಿ ಅವರ ಜೀವನ ವಿವರಗಳನ್ನು, ಸಾಧನೆಯ ಹಂತಗಳನ್ನೂ ಪರಿಚಯಿಸುತ್ತದೆ. ಮುಖ್ಯವಾಗಿ ಕೋಶದ ರಚನೆಯ ವಿವಿಧ ಹಂತಗಳನ್ನು ಅತ್ಯಂತ ಸೂಕ್ಷ್ಮವಾಗಿಯೂ ಅಷ್ಟೇ ಸ್ಪಷ್ಟವಾಗಿಯೂ ತಿಳಿಯ ಹೇಳುತ್ತದೆ.

**೫೮೩. ಬಿ. ಶಿವಮೂರ್ತಿಶಾಸ್ತ್ರಿಗಳು**

ಲೇ: ಎನ್.ಬಸವಾರಾಧ್ಯ

ಪುಟ: iv+೩೨, ವರ್ಷ: ೨೦೦೨, ರೂ: ೧೦.೦೦

ಕನ್ನಡ ಸಾಹಿತ್ಯ ಸಂಸ್ಕೃತಿ ಇತಿಹಾಸ ಧರ್ಮ ಮೊದಲಾದ ಕ್ಷೇತ್ರಗಳಿಗೆ ಗಣನೀಯವಾದ ಸೇವೆಯನ್ನು ಸಲ್ಲಿಸಿದವರಲ್ಲಿ ಶಿವಮೂರ್ತಿಶಾಸ್ತ್ರಿಗಳು ಅಗ್ರಗಣ್ಯರು. ಸಾಮಾಜಿಕ, ರಾಜಕೀಯ, ಧಾರ್ಮಿಕ ಪತ್ರಿಕಾರಂಗಗಳಲ್ಲಿ ಅಪರಿಮಿತ ಸೇವೆ ಸಲ್ಲಿಸಿದ್ದ *ಈ* ಸಾಧಕರು ಕರ್ನಾಟಕ ಏಕೀಕರಣ ಭಾರತದ ಸ್ವಾತಂತ್ರ್ಯ ಚಳವಳಿಗಳಲ್ಲಿ ಇವರು ಸಕ್ರಿಯವಾಗಿ ಪಾಲ್ಗೊಂಡವರು. ಇವರ ಸಮಗ್ರ ಜೀವನದ ಒಂದು ಕಿರುಪರಿಚಯ *ಈ* ಕೃತಿ.

**೫೮೪. ಬಿ ವಿ ಕಾರಂತ**

ಲೇ: ಹಾ.ಸಾ.ಕೃ

ಪುಟ: ii+೪೦, ವರ್ಷ: ೨೦೦೦, ರೂ: ೨೫.೦೦

ನಮ್ಮ ನಾಡಿನ ಖ್ಯಾತ ರಂಗತಜ್ಞ-ರಂಗಕರ್ಮಿ ಶ್ರೀ ಬಿ.ವಿ.ಕಾರಂತರ ವ್ಯಕ್ತಿತ್ವ-ಬದುಕು-ಸಾಧನೆಯ ಬಗ್ಗೆ *ಈ* ಕೃತಿಯಲ್ಲಿ ಸಾಕಷ್ಟು ಮಾಹಿತಿಗಳಿವೆ.

**೫೮೫. ಮರಿಯಮ್ಮನ ಹಳ್ಳಿ ರಂಗಸಿರಿ**

ನಿರೂಪಣೆ: ಗುಡಿಹಳ್ಳಿ ನಾಗರಾಜ

ಪುಟ: ೨೦, ವರ್ಷ: ೧೯೯೯, ರೂ: ೫೦.೦೦

ಕರ್ನಾಟಕದ ಖ್ಯಾತ ವೃತ್ತಿರಂಗಭೂಮಿ ನಟಿ ಕೆ.ನಾಗರತ್ನಮ್ಮನವರ ಆತ್ಮಚರಿತ್ರೆ ಇದು. ವೃತ್ತಿ ಬದುಕಿನ ಏಳು ಬೀಳುಗಳು, ಅಡ್ಡಿ ಆತಂಕಗಳನ್ನು ಆಪ್ತವಾಗಿ ಬಿಚ್ಚಿಡುವ ಕೃತಿಯಿದು.




**೫೮೬. ಮಹಾಪತ್ರಕರ್ತ ಮಹಾತ್ಮಾ ಗಾಂಧೀಜಿ**

ಲೇ: ಸಂತೋಷಕುಮಾರ ಗುಲ್ವಾಡಿ

ಪುಟ: xxx+೧೫೨, ವರ್ಷ: ೨೦೦೧, ರೂ: ೮೦.೦೦

ಮಹಾತ್ಮ ಗಾಂಧಿ ಭಾರತದ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದ ಮಹಾಸಾಧಕರು. ಅವರು ಆದರ್ಶ ಪತ್ರಕರ್ತರಾಗಿ, ಅರ್ಥಪೂರ್ಣ ಮತ್ತು ಸಮರ್ಥ ಲೇಖಕರಾಗಿ ಮಾಡಿರುವ ಸಾಧನೆಯ ವಿವರಗಳು *ಈ* ಗ್ರಂಥದಲ್ಲಿ ದಾಖಲಾಗಿವೆ.

**೫೮೭. ಯಶವಂತ ಚಿತ್ತಾಲ**

ಲೇ: ಎಫ್.ಟಿ.ಹಳ್ಳಿಕೇರಿ

ಪುಟ: viii+೩೨, ವರ್ಷ: ೧೯೯೫, ರೂ: ೧೦.೦೦

ಕನ್ನಡದ ಖ್ಯಾತ ಕಾದಂಬರಿಕಾರ, ಕವಿ ಯಶವಂತ ಚಿತ್ತಾಲರ ಬದುಕು ಬರಹಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕಿರುಪುಸ್ತಕದಲ್ಲಿದೆ.

**೫೮೮. ಯು ಆರ್ ರಾವ್**

ಲೇ: ಎನ್.ಆರ್.ಗುನಗ

ಪುಟ: ii+೪೧, ವರ್ಷ: ೨೦೦೦, ರೂ: ೨೫.೦೦

ಭಾರತದ ಖ್ಯಾತ ಬಾಹ್ಯಾಕಾಶ ವಿಜ್ಞಾನಿ, ಕನ್ನಡಿಗ ಯು.ಆರ್.ರಾವ್ ಅವರ ಬದುಕು ಮತ್ತು ಸಾಧನೆಗಳ ಕುರಿತ ಕಿರುನೋಟ *ಈ* ಕಿರುಕೃತಿಯಲ್ಲಿದೆ.

**೫೮೯. ಯುಗದ ಕವಿ : ಕುವೆಂಪು ಜೀವನ ಮತ್ತು ಸಾಹಿತ್ಯ ಸಾಧನೆ**

ಲೇ: ಕೆ.ಸಿ.ಶಿವಾರೆಡ್ಡಿ

ಪುಟ: x+೮೨, ವರ್ಷ: ೨೦೦೨, ರೂ: ೫೦.೦೦




ಕುವೆಂಪು ಅವರ ವ್ಯಕ್ತಿತ್ವವನ್ನು ಚಿಕ್ಕದಾಗಿ, ಚೊಕ್ಕವಾಗಿ, ಸರಳವಾಗಿ ಮತ್ತು ಆಕರ್ಷಕವಾಗಿ ಹೊಸ ದೃಷ್ಟಿಕೋನದೊಡನೆ ಕಟ್ಟಿಕೊಡುವ ಕೃತಿಯಿದು. ಕುವೆಂಪು ಅವರ ಬದುಕು-ಸಾಧನೆ-ಚಿಂತನೆಗಳನ್ನು ಆತ್ಮೀಯವಾಗಿ ಹಾಗು ಹೊಸ ಒಳನೋಟಗಳೊಂದಿಗೆ ಬಿಂಬಿಸಿ, ಚಿಂತನೆ ಮತ್ತು ರಸಗ್ರಹಣ ಶಕ್ತಿಗಳ ವಿಶಿಷ್ಟ ಸಮನ್ವಯದಿಂದ ಓದುಗರನ್ನು ರಂಜಿಸಬಲ್ಲ ಕೃತಿಯೂ ಹೌದು.

**೫೯೦. ರಾ ಹ ದೇಶಪಾಂಡೆ**

ಲೇ: ಕೆ.ಎಸ್.ದೇಶಪಾಂಡೆ

ಪುಟ: ii+೩೪, ವರ್ಷ: ೨೦೦೦, ರೂ: ೧೦.೦೦

ಕನ್ನಡದ ಮೊಟ್ಟ ಮೊದಲ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಘವಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರು ರಾ.ಹ.ದೇಶಪಾಂಡೆಯವರು. ಅವರ ಜೀವನ, ಸಾಧನೆ ಕನ್ನಡದ ಕೆಲಸದ ಬಗ್ಗೆ *ಈ* ಕಿರುಕೃತಿಯಲ್ಲಿ ಚರ್ಚಿಸಲಾಗಿದೆ.




**೫೯೧. ವೈ ಕೆ ರಾಮಯ್ಯ : ಜೀವನ-ಸಾಧನೆ**

ಲೇ: ಹಿ.ಚಿ.ಬೋರಲಿಂಗಯ್ಯ

ಪುಟ: viii+೭೨, ವರ್ಷ: ೨೦೦೬, ರೂ: ೪೦.೦೦

ಪರಿವಿಡಿ

೧. ವಕೀಲಿ ವೃತ್ತಿ; ರೇಷ್ಮೆ ಸಂಘದ ಅಧ್ಯಕ್ಷ; ಶಾಸನ

೨. ಗೃಹಮಂಡಲಿ ಅಧ್ಯಕ್ಷ; ರೇಷ್ಮೆ ಸಚಿವ; ತೋಟಗಾರಿಕೆ ಸಚಿವ

೩. ಐತಿಹಾಸಿಕ ಉಪಚುನಾವಣೆ

೪. ಹೇಮಾವತಿ ನೀರಿಗಾಗಿ ಹೋರಾಟ

೫. ವಿಶಿಷ್ಟ ಕಾರ್ಯಕ್ಷೇತ್ರಗಳು

೬. ವ್ಯಕ್ತಿತ್ವದ ಹಿರಿಮೆ

೭. ಅಭಿನಂದನ ಗ್ರಂಥಗಳು

೮. ಶ್ರೀಸಾಮಾನ್ಯ ಬಿರುದುಗಳು

೯. ಅಂತರಂಗದ ಮಾತು

ಗ್ರಾಮೀಣ ಜನತೆಯ ಶ್ರಮ ಮತ್ತು ಸಂಸ್ಕೃತಿಯ ಪ್ರತೀಕದಂತೆ ಇದ್ದ ವೈ.ಕೆ.ರಾಮಯ್ಯನವರು ಕರ್ನಾಟಕ ಕಂಡ ಒಬ್ಬ ಅಪರೂಪದ ರಾಜಕೀಯ ಚಿಂತಕ. ಸಾಮಾಜಿಕ ಸ್ವಚ್ಛತೆಯನ್ನು ಪ್ರತಿಪಾದಿಸಿದ ವೈ.ಕೆ.ರಾಮಯ್ಯನವರ ಒಂದು ಸುಂದರವಾದ ವ್ಯಕ್ತಿಚಿತ್ರವನ್ನು ಇಲ್ಲಿ ಕಟ್ಟಿಕೊಡಲಾಗಿದೆ.




**೫೯೨. ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ**

ಸಂ: ಕಾಳೇಗೌಡ ನಾಗವಾರ ಮತ್ತು ಜಿ.ವಿ.ಆನಂದಮೂರ್ತಿ

ಪುಟ: xxxii+೫೧೨, ವರ್ಷ: ೧೯೯೭, ರೂ: ೧೦೦.೦೦

ಗೋಪಾಲಗೌಡರ ಹೋರಾಟದಲ್ಲಿ ಭಾಗವಹಿಸಿ ದುಡಿದ ಕಾರ್ಯಕರ್ತರು, ಗೆಳೆಯರು, ರಾಜಕಾರಣಿಗಳು, ಲೇಖಕರು, ಕಲಾವಿದರು, ತಂತಮ್ಮ ಮನಸ್ಸುಗಳಲ್ಲಿ ತುಂಬಿಕೊಂಡ ಶಾಂತವೇರಿಯವರ ವ್ಯಕ್ತಿತ್ವವನ್ನು ತಾವು ಕಂಡಂತೆ ನೆನಪುಗಳ ಮೂಲಕ ಇಲ್ಲಿ ದಾಖಲಿಸಿದ್ದಾರೆ. ಸುಮಾರು ೩ ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ನಾಡಿನ ಸಾಂಸ್ಕೃತಿಕ ಜೀವನವನ್ನು ಆವರಿಸಿಕೊಂಡಿದ್ದ ಗೋಪಾಲಗೌಡರ ವ್ಯಕ್ತಿತ್ವದ ವಿವಿಧ ಮುಖಗಳು *ಈ* ಗ್ರಂಥದಲ್ಲಿ ವಿವರವಾಗಿ ಚಿತ್ರಿಸಲ್ಪಟ್ಟಿದೆ. ಗೋಪಾಲಗೌಡರು, ಶಾಸಕರಾಗಿದ್ದ ಅವಧಿಯ ಭಾಷಣಗಳ ಮುಖ್ಯ ಭಾಗಗಳು, ಅವರ ಎರಡು ಲೇಖನಗಳು, ೧೯೬೦ನೇ ವರ್ಷದ ದಿನಚರಿಯ ಕೆಲವು ಪುಟಗಳೂ *ಈ* ಗ್ರಂಥದಲ್ಲಿವೆ.

**೫೯೩. ಶ್ರೀಕೃಷ್ಣ ಆಲನಹಳ್ಳಿ**

ಲೇ: ಅಮರೇಶ ನುಗಡೋಣಿ

ಪುಟ: viii+೪೩, ವರ್ಷ: ೧೯೯೫, ರೂ: ೧೩.೦೦

ಕನ್ನಡದ ಕವಿ, ಕತೆಗಾರ ಶ್ರೀ ಕೃಷ್ಣ ಆಲನಹಳ್ಳಿ ಅವರ ಬದುಕು ಬರಹಗಳ ಸಂಕ್ಷಿಪ್ತ ಕಿರುಪರಿಚಯ *ಈ* ಕಿರುಪುಸ್ತಕದಲ್ಲಿದೆ.



**೫೯೪. ಸಂಶೋಧಕ ನಾ. ಶ್ರೀ. ರಾಜಪುರೋಹಿತ**

ಲೇ: ಕೃಷ್ಣ ಕೊಲ್ಹಾರ ಕುಲಕರ್ಣಿ

ಪುಟ: XII+೧೪೪, ವರ್ಷ: ೨೦೦೩, ರೂ: ೬೦.೦೦

ಪರಿವಿಡಿ

೧. ಯಾರು *ಈ* ರಾಜಪುರೋಹಿತರು

೨. ಧಾರವಾಡದಲ್ಲಿ ಸಂಸಾರ

೩. ನಾಡು ಗುರುತಿಸಿದ ರಾಜ ಪುರೋಹಿತ

೪. ಅಧ್ಯಾತ್ಮ ಸಾಧನೆ: ಕೃತಿಗಳು

೫. ಸಂಶೋಧನೆ; ಸಂಶೋಧನಾ ಲೇಖನಗಳು

೬. ಹಿರಿಯರು ಕಂಡು ರಾಜಪುರೋಹಿತರು

ಕಳೆದ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ನಾಡು ನುಡಿ, ಚರಿತ್ರೆಗಳನ್ನು ಪ್ರಥಮ ಬಾರಿಗೆ ಕನ್ನಡಿಗರೆದುರಿಗಿಟ್ಟು, ಕನ್ನಡಿಗರನ್ನು ಎಚ್ಚರಗೊಳಿಸಿದ ನಾಡಿನ ಖ್ಯಾತ ಇತಿಹಾಸ ಸಂಶೋಧಕ ನಾ. ಶ್ರೀ ರಾಜಪುರೋಹಿತರ ಬದುಕು ಸಾಧನೆಯನ್ನು *ಈ* ಕೃತಿಯಲ್ಲಿ ಹಿಡಿದಿಡಲಾಗಿದೆ.

**೫೯೫. ಸಿ ಜಿ ಕೆ**

ಲೇ: ಎಲ್. ಹನುಮಂತಯ್ಯ

ಪುಟ: IV+೩೪, ವರ್ಷ: ೨೦೦೪, ರೂ: ೧೦.೦೦

ಕನ್ನಡ ರಂಗಭೂಮಿಯ ಪ್ರಖ್ಯಾತ ರಂಗಕರ್ಮಿ, ರಂಗ ಸಂಘಟಕ ಸಿ.ಜಿ. ಕೃಷ್ಣಸ್ವಾಮಿಯವರ ಬದುಕು ಬರಹಕ್ಕೆ ಸಂಬಂಧಿಸಿದ ಕಿರುಕೃತಿಯಿದು.




**೫೯೬. Discovering Tekur Subramanyam**

By : Kannada University and Tekur Subramanyam Centenary Celebration Committee, Bellary

Pp: 12+128, 2001, Rs. 50.00

Tekur Subramanyam, more than an indivisual, was an institution. He had fought for India's freedom struggle and at the same time for the unification of Karnataka as a true 'Bharatiya Kannadiga'.

This Volume prepared by a group of dedicated leaders of Bellary as Birth Centenary Commemoration Volume.

## ೨೯

# ವಾಸ್ತುಶಾಸ್ತ್ರ-ವಾಸ್ತುಶಿಲ್ಪ




**೫೯೭. ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ**

ಲೇ: ಕೆ.ಎಂ.ಸುರೇಶ್ ಮತ್ತು ಇತರರು

ಪುಟ: xxxix+೨೧೬, ವರ್ಷ: ೨೦೦೧, ರೂ: ೧೫೦.೦೦

ಪರಿವಿಡಿ

೧. ಕುಷ್ಟಗಿ ತಾಲೂಕು

೨. ಕೊಪ್ಪಳ ತಾಲೂಕು

೩. ಗಂಗಾವತಿ ತಾಲೂಕು

೪. ಯಲಬುರ್ಗಾ ತಾಲೂಕು

ಪ್ರಸ್ತುತ ಗ್ರಂಥದಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಚೀನ ಶಿಲ್ಪಕಲಾ ಚಾತುರ್ಯವನ್ನು ಪ್ರತಿನಿಧಿಸುವ ೧೮೭ ದೇವಾಲಯಗಳನ್ನು ಕುರಿತು ವಿವರ ನೀಡಲಾಗಿದೆ. ಅವುಗಳಲ್ಲಿ ೧೧೫ ಶೈವ, ೪೮ ವೈಷ್ಣವ, ೪ ಜೈನ ಹಾಗೂ ಇತರ ೨೦ ದೇವಾಲಯಗಳೆಂದು ವಿಭಾಗಿಸಲಾಗಿದೆ. *ಈ* ದೇವಾಲಯಗಳು ವಿವಿಧ ಅರಸು ಮನೆತನಗಳ ಅವಧಿಯಲ್ಲಿ ನಿರ್ಮಾಣವಾಗಿವೆ. ಆ ಅರಸರು ಯಾವ ರೀತಿಯಲ್ಲಿ ಪ್ರೋತ್ಸಾಹ ನೀಡಿದರೆಂಬ ಅಂಶವನ್ನು *ಈ* ದೇವಾಲಯಗಳ ಅಧ್ಯಯನ ದಲ್ಲಿ ಸೂಕ್ಷ್ಮವಾಗಿ ಗುರುತಿಸಲಾಗಿದೆ.

**೫೯೮. ಕರ್ನಾಟಕ ದೇವಾಲಯಗಳ ಕೋಶ : ಗದಗ ಜಿಲ್ಲೆ**

ಲೇ: ಬಾಲಸುಬ್ರಮಣ್ಯಂ ಮತ್ತು ಇತರರು

ಪುಟ: xvi+೩೦೬+೧೪, ವರ್ಷ: ೨೦೦೭, ರೂ: ೧೫೦

ಪರಿವಿಡಿ

೧. ಗದಗ ತಾಲೂಕು

೨. ನರಗುಂದ ತಾಲೂಕು

೩. ಮುಂಡರಗಿ ತಾಲೂಕು

೪. ರೋಣ ತಾಲೂಕು

೫. ಶಿರಹಟ್ಟಿ ತಾಲೂಕು

ಪ್ರಾಚೀನ, ಮಧ್ಯ ಹಾಗೂ ಆಧುನಿಕ ಕಾಲಾವಧಿಯಲ್ಲಿ ತನ್ನದೇ ಆದ ಸಂಸ್ಕೃತಿ ಮಹತ್ವ ಪಡೆದಿರುವ ಗದಗ ಜಿಲ್ಲೆ, ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನನ್ನು ವಿಶಿಷ್ಟವಾಗಿ ಗುರುತಿಸಿಕೊಂಡಿರುವ ಪ್ರಮುಖ ಜಿಲ್ಲೆ. *ಈ* ಜಿಲ್ಲೆಯೂ ಸುಮಾರು ೨೫೦ಕ್ಕಿಂತ ಹೆಚ್ಚಿನ ದೇವಾಲಯಗಳ ಕುರಿತ ಸಮಗ್ರ ಮಾಹಿತಿಯನ್ನು *ಈ* ಕೃತಿಯಲ್ಲಿ ದಾಖಲಿಸಲಾಗಿದೆ.




**೫೯೯. ಕರ್ನಾಟಕ ದೇವಾಲಯ ಕೋಶ : ಧಾರವಾಡ ಜಿಲ್ಲೆ**

ಲೇ: ಸಿ. ಮಹದೇವ

ಪುಟ: ೩೦+೨೨೬, ವರ್ಷ: ೨೦೦೬, ರೂ: ೧೫೦.೦೦

ಪರಿವಿಡಿ

೧. ಕಲಘಟಗಿ ತಾಲೂಕು

೨. ಕುಂದಗೋಳ ತಾಲೂಕು

೩. ಧಾರವಾಡ ತಾಲೂಕು

೪. ನವಲಗುಂದ ತಾಲೂಕು

೫. ಹುಬ್ಬಳ್ಳಿ ತಾಲೂಕು

*ಈ* ಕೃತಿಯಲ್ಲಿ ಮೂನ್ನೂರ ಹದಿನೇಳು ದೇವಾಲಯಗಳನ್ನು ದಾಖಲಿಸಲಾಗಿದೆ. *ಈ* ಎಲ್ಲ ದೇವಾಲಯಗಳು ಪ್ರಾಚೀನ ಮತ್ತು ಮಧ್ಯಕಾಲದ ನಿರ್ಮಾಣಗಳಾಗಿವೆ. ಮಾಹಿತಿ ಪ್ರಧಾನವಾದ *ಈ* ಕೋಶ ಐತಿಹಾಸಿಕ ಸಾಮಾಜಿಕ ಸಾಂಸ್ಕೃತಿಕ ಅಧ್ಯಯನಗಳಿಗೆ ಒಂದು ಅಪೂರ್ವ ಆಕರ ಗ್ರಂಥ.




**೬೦೦. ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ**

ಲೇ: ಕೆ.ಎಂ.ಸುರೇಶ್ ಮತ್ತು ಇತರರು

ಪುಟ: xxxxviii+೩೫೬, ವರ್ಷ: ೧೯೯೯, ರೂ: ೩೦೦.೦೦

ಪರಿವಿಡಿ

೧. ಬಳ್ಳಾರಿ ತಾಲೂಕು

೨. ಹೊಸಪೇಟೆ ತಾಲೂಕು

೩. ಸಿರುಗುಪ್ಪ ತಾಲೂಕು

೪. ಕೂಡ್ಲಿಗಿ ತಾಲೂಕು

೫. ಹಸೂರು ತಾಲೂಕು

ಪ್ರಸ್ತುತ ಕೃತಿ ಬಳ್ಳಾರಿ ಜಿಲ್ಲೆಗೆ ಸೇರಿದ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಸಂಡೂರು ತಾಲೂಕುಗಳಲ್ಲಿರುವ ಪ್ರಾಚೀನ ದೇವಾಲಯಗಳ ಕುರಿತು ಸಂಕ್ಷಿಪ್ತ ವಿವರಗಳನ್ನು ನೀಡುತ್ತದೆ.

ಇತಿಹಾಸದಲ್ಲಿ ಬಳ್ಳಾರಿ ಜಿಲ್ಲೆ ಶೈವ, ವೈಷ್ಣವ, ಜೈನ ಹೀಗೆ ಮೂರು ಧರ್ಮಗಳನ್ನು ಸಮಾನವಾಗಿ ಪೋಷಿಸಿಕೊಂಡು ಬಂದಿದ್ದು, *ಈ* ಜಿಲ್ಲೆಯಲ್ಲಿನ ೨೮೬ ಶೈವ, ೯೫ ವೈಷ್ಣವ, ೧೦ ಜೈನ ಹಾಗೂ ಇತರ ಧರ್ಮೀಯರ ೧೨ ದೇವಾಲಯಗಳು ಅಂದರೆ ಒಟ್ಟು ೪೦೩ ದೇವಾಲಯಗಳಿದ್ದು ಅವುಗಳ ಕಲೆ, ವಾಸ್ತುಶಿಲ್ಪಗಳ ಸಂಕ್ಷಿಪ್ತ ಇತಿಹಾಸವನ್ನು *ಈ* ಗ್ರಂಥವು ಹೊಂದಿದೆ. ಬಳ್ಳಾರಿ ಜಿಲ್ಲೆಯ ಪ್ರಾಚೀನತೆಯ ಬಗೆಗೆ ಆಸಕ್ತಿ ಮೂಡಿಸುವ ಗ್ರಂಥವಿದು.




**೬೦೧. ಕರ್ನಾಟಕ ದೇವಾಲಯಕೋಶ : ವಿಜಾಪುರ ಜಿಲ್ಲೆ**

ಲೇ: ವಾಸುದೇವ ಬಡಿಗೇರ

ಪುಟ: ೩೬+೨೧೮, ವರ್ಷ: ೨೦೦೬, ರೂ: ೧೫೦.೦೦

ಪರಿವಿಡಿ

೧. ಇಂಡಿ ತಾಲೂಕು

೨. ಸಿಂದಗಿ ತಾಲೂಕು

೩. ಮುದ್ದೇಬಿಹಾಳ ತಾಲೂಕು

೪. ಬಸವನ ಬಾಗೇವಾಡಿ ತಾಲೂಕು

೫. ವಿಜಾಪುರ ತಾಲೂಕು

*ಈ* ಕೃತಿಯಲಿ ಇಂಡಿ, ಸಿಂದಗಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಮತ್ತು ವಿಜಾಪುರ ತಾಲೂಕಿನ ದೇವಾಲಯಗಳನ್ನು ದಾಖಲಿಸಲಾಗಿದೆ. ವಿಜಾಪುರ ಜಿಲ್ಲೆಯ ಇತಿಹಾಸ, ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಗಳಿಗೆ *ಈ* ಕೋಶ ಒಂದು ಅಗತ್ಯವಾದ ಆಕರಗ್ರಂಥ.

**೬೦೨. ಕರ್ನಾಟಕ ದೇವಾಲಯ ಕೋಶ : ಹಾವೇರಿ ಜಿಲ್ಲೆ**

ಲೇ: ಸಿ.ಮಹದೇವ ಮತ್ತು ಇತರರು

ಪುಟ: xxxii+೩೮೪, ವರ್ಷ: ೧೯೯೯, ರೂ: ೩೦೦.೦೦

ಪರಿವಿಡಿ

೧. ಬ್ಯಾಡಗಿ ತಾಲೂಕು

೨. ರಾಣೆಬೆನ್ನೂರು ತಾಲೂಕು

೩. ಶಿಗ್ಗಾವಿ ತಾಲೂಕು

೪. ಸವಣೂರು ತಾಲೂಕು

೫. ಹಾನಗಲ್ಲು ತಾಲೂಕು

೬. ಹಾವೇರಿ ತಾಲೂಕು

೭. ಹಿರೇಕೆರೂರು ತಾಲೂಕು

*ಈ* ಕೋಶದಲ್ಲಿ ಹಾವೇರಿ ಜಿಲ್ಲೆಯ ಸುಮಾರು ೭೮೦ ಗ್ರಾಮಗಳಲ್ಲಿರುವ ಐದುನೂರಕ್ಕೂ ಹೆಚ್ಚಿನ ದೇವಾಲಯಗಳನ್ನು ದಾಖಲಿಸಲಾಗಿದೆ. ಅವುಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಶಾಸನಗಳ ಮಹತ್ತ್ವವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಸಾಂಸ್ಕೃತಿಕ ಕೇಂದ್ರಗಳಾಗಿದ್ದ ಪ್ರಾಚೀನ ಸ್ಮಾರಕಗಳ ಮಹತ್ತ್ವವನ್ನು ಜನಸಾಮಾನ್ಯರಿಗೆ ಪರಿಚಯಿಸುವುದು ಹಾಗೂ ಆ ಮೂಲಕ ಮುಂದಿನ ಸಂಶೋಧನೆ ಮತ್ತು ಅಧ್ಯಯನಕ್ಕೆ ಅನುವು ಮಾಡಿಕೊಡುವಲ್ಲಿ ಮಾಹಿತಿ ಪೂರ್ಣ ಗ್ರಂಥ.

**೬೦೩. ಕರ್ನಾಟಕದ ಚರ್ಚುಗಳು**

ಲೇ: ಬಿ.ಎಸ್.ತಲ್ವಾಡಿ

ಪುಟ: ii+೩೦, ವರ್ಷ: ೧೯೯೯, ರೂ: ೫.೦೦

ಕರ್ನಾಟಕದ ಚರ್ಚುಗಳು ಬೆಳೆದು ಬಂದ ಬಗೆ ಹಾಗೂ ಅವುಗಳ ವಾಸ್ತು ಪ್ರಾಚೀನತೆ ಇತ್ಯಾದಿಗಳನ್ನು *ಈ* ಕಿರುಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ.

**೬೦೪. ಚಾಲುಕ್ಯ ವಾಸ್ತುಶಿಲ್ಪ ವೈಭವ**

ಲೇ: ಕರವೀರಪ್ರಭು ಕ್ಯಾಲಕೊಂಡ

ಪುಟ: ii+೩೪, ವರ್ಷ: ೧೯೯೭, ರೂ: ೨.೦೦

ಕನ್ನಡ ನಾಡಿನ ಸಂಸ್ಕೃತಿ, ಶಿಲ್ಪಕಲೆ ಶ್ರೀಮಂತಿಕೆಯನ್ನು, ದೇಶದ ಉದ್ದಗಲಕ್ಕೂ ಹರಡಿದ ಚಾಲುಕ್ಯರ ವಾಸ್ತುಶಿಲ್ಪಗಳ ವೈಭವವನ್ನು *ಈ* ಕೃತಿಯಲ್ಲಿ ವರ್ಣಿಸಲಾಗಿದೆ.




**೬೦೫. ದೇಗುಲ ರಥಶಿಲ್ಪ**

ಲೇ: ಧ್ರುವರಾಜ ನಾ. ಗದಗಕರ

ಪುಟ: xii+೧೧೫, ವರ್ಷ: ೧೯೯೫, ರೂ: ೬೫.೦೦

ಪರಿವಿಡಿ

೧. ರಥಗಳ ಪ್ರಾಚೀನತೆ; ವೈವಿಧ್ಯಮಯ ರಥಗಳ ವರ್ಗೀಕರಣ

೨. ದೇಗುಲ ಹಾಗೂ ನಡೆದೇಗುಲ; ದೇಗುಲ ರಥದ ಪ್ರಮುಖ ಭಾಗಗಳು; ದೇಗುಲ ರಥದ ನಿರ್ಮಾಣ

೩. ದೇಗುಲ ರಥಗಳಲ್ಲಿನ ಚಿತ್ರಕಲೆ; ಆಧುನಿಕ ರಥಗಳು

೪. ರಥ ಹಾಗೂ ತೇರು; ಜಾತ್ರೆ ಹಾಗೂ ತೇರು

೫. ದೇಹ, ದೇವಾಲಯ, ರಥ; ವಾಸ್ತುಶಿಲ್ಪದಲ್ಲಿನ ರಥಗಳು; ಹಬ್ಬ ಹರಿದಿನಗಳಲ್ಲಿ ರಥಗಳ ಪೂಜೆ

೬. ದೇಗುಲಗಳಲ್ಲಿ ರಥೋತ್ಸವ ಬೆಳೆದು ಬಂದ ಬಗೆ; ಆಗಮೋಕ್ತ ಜಾನಪದ ರಥೋತ್ಸವಗಳ ವಿಧಿ ವಿಧಾನಗಳು; ರಥ ಶೃಂಗಾರ ವೈಖರಿ ಹಾಗೂ ರಥೋತ್ಸವಗಳ ವೈಭವ

೭. ವಿಶ್ವವಿಖ್ಯಾತಿಯ ಜಗನ್ನಾಥನ ರಥಯಾತ್ರೆ

೮. ಕರ್ನಾಟಕದ ಬೆಡಗಿನ ರಥಗಳು; ಕರ್ನಾಟಕದ ರಥದ ಸ್ವರೂಪ ಹಾಗೂ ಲಕ್ಷಣಗಳು; ಕರ್ನಾಟಕದ ರಥ ಶಿಲ್ಪಿಗಳು; ಕರ್ನಾಟಕದ ರಥೋತ್ಸವಗಳು

೯. ಉಡುಪಿ ಕ್ಷೇತ್ರದ ಬೆಡಗಿನ ರಥ ಹಾಗೂ ರಥೋತ್ಸವ; ಉಡುಪಿ ಕ್ಷೇತ್ರ, ಹಂಪಿವಿರೂಪಾಕ್ಷ, ಬನವಾಸಿಯ ಮಧುಕೇಶ್ವರ, ದ್ಯಾಮವ್ವ, ಶಿರಸಿಯ ಶ್ರೀಮಾರಿಕಾಂಬ, ಬದಾಮಿ ಬನಶಂಕರಿ ರಥೋತ್ಸವ

ಕನ್ನಡ ಸಂಸ್ಕೃತಿಯನ್ನು ಗಮನದಲ್ಲಿರಿಸಿಕೊಂಡು ಕನ್ನಡ ನಾಡಿನ ಅಮೂಲ್ಯ ರಥಗಳ ಹಾಗೂ ರಥೋತ್ಸವಗಳ ವಿವರಣೆಯೊಂದಿಗೆ, ದೇಗುಲ ರಥಗಳ ನೆಲೆ ಮತ್ತು ಹಿನ್ನೆಲೆಯನ್ನು ಅಧ್ಯಯಿಸಿ ಬರೆದ ಗ್ರಂಥವಿದು.



**೬೦೬. ದೇವಾಲಯ ವಾಸ್ತು ಚಂದ್ರಿಕೆ**

ಲೇ: ಎಂ.ಎಸ್.ಪ್ರಭಾಕರ್

ಪುಟ: xii+೮೪+xvi, ವರ್ಷ: ೨೦೦೦, ರೂ: ೬೦.೦೦

ಪರಿವಿಡಿ

೧. ದೇವಾಲಯ ವಾಸ್ತು : ವಿಷಯಾನುಪೂರ್ವೀ

೨. ದೇವಾಲಯಗಳ ವರ್ಗೀಕರಣದಲ್ಲಿ ಕರ್ನಾಟಕದ ಪಾತ್ರ

೩. ದೇವಾಲಯಗಳ ಉಗಮ ಮತ್ತು ವಿಕಾಸ

೪. ದೇವಾಲಯಗಳ ವರ್ಗೀಕರಣದಲ್ಲಿ ದಾಕ್ಷಿಣಾತ್ಯ ಶೈಲಿಗಳು

೫. ಶಾಸ್ತ್ರ ಗ್ರಂಥಗಳು ಕಂಡಂತೆ ಔತ್ತರೇಯ ದ್ರಾವಿಡ ಶೈಲಿ

೬. ಕರ್ನಾಟಕದಲ್ಲಿ ಭೂಮಿಜ ಮತ್ತು ವಿಮಾನ ನಾಗರಶೈಲಿಗಳು

ದೇವಾಲಯದ ವಾಸ್ತು ಹಾಗೂ ದೇವಾಲಯಗಳ ಉಗಮ, ವಿಕಾಸ ಹಾಗೂ ಅವುಗಳ ಶೈಲಿಗಳ ಬಗ್ಗೆ ಸಮಗ್ರ ವಿವರಣೆ *ಈ* ಗ್ರಂಥದಲ್ಲಿದೆ.




**೬೦೭. ದೇವಾಲಯ ವಾಸ್ತುಶಿಲ್ಪ ಪರಿಚಯ**

ಲೇ: ಕೂ.ಸ.ಅಪರ್ಣ

ಪುಟ: xii+೧೨೬, ವರ್ಷ: ೧೯೯೯, ರೂ: ೧೦೦.೦೦

ದೇವಾಲಯ ಒಂದು ಸಾವಯವ ವಾಸ್ತುಶಿಲ್ಪ. ಅದರ ಅಂಗ ಪ್ರತ್ಯಂಗಗಳನ್ನು ಪರಿಚಯಿಸುವುದೇ *ಈ* ಕೃತಿಯ ಉದ್ದೇಶ. ದೇವಾಲಯ ಭಾಗಗಳನ್ನು ಗುರುತಿಸಲು ಸಾಧ್ಯವಾಗುವಂತೆ ಕೃತಿಯಲ್ಲಿ ಅಲ್ಲಲ್ಲಿ ರೇಖಾಚಿತ್ರಗಳಿವೆ.




**೬೦೮. ಬಳ್ಳಾರಿ ಜಿಲ್ಲೆಯ ಮರದ ವಾಸ್ತು**

ಲೇ: ಸಿ.ಮಹದೇವ

ಪುಟ: x+೫೪, ವರ್ಷ: ೨೦೦೦, ರೂ: ೪೦.೦೦

ಪರಿವಿಡಿ

೧. ಮರದ ಬಳಕೆ ಪ್ರಾಚೀನತೆ

೨. ಮರ

೩. ಮರದ ವಾಸ್ತು

೪. ಮರದ ಪ್ರತಿಮೆ

ಬಳ್ಳಾರಿ ಜಿಲ್ಲೆಯಲ್ಲಿನ ಮರದ ವಾಸ್ತು ಮತ್ತು ವಾಸ್ತುಶಿಲ್ಪ ಕಲೆಯನ್ನು ಕುರಿತು ನಡೆಸಿದ ಅಧ್ಯಯನ ಗ್ರಂಥವಿದು. ವಿಜಯನಗರೋತ್ತರ ಕಾಲದಲ್ಲಿ ಜನಸಾಮಾನ್ಯರ ನಂಬಿಕೆ, ಆಚರಣೆ ಮತ್ತು ಆಸಕ್ತಿಯಿಂದ ಬೆಳೆದ ಮರದ ವಾಸ್ತು ಮತ್ತು ಶಿಲ್ಪಕಲೆಯ ಬಗ್ಗೆ ಸಂಕ್ಷಿಪ್ತ ವಿವರಣೆ *ಈ* ಪುಸ್ತಕದಲ್ಲಿದೆ. ವಿಜಯನಗರ ಸಾಮ್ರಾಜ್ಯವಿದ್ದ *ಈ* ಪ್ರದೇಶದಲ್ಲಿ ಕಲ್ಲಿನ ಬಳಕೆಯೇ ಅಧಿಕವಾಗಿತ್ತು. ಅದರ ಪತನಾ ನಂತರ ಜನಪದರ ವಾಸ್ತುಪ್ರಜ್ಞೆಯಿಂದ ಬೆಳವಣಿಗೆಯನ್ನು ಕಂಡ ಮರದ ವಾಸ್ತು ಮತ್ತು ಶಿಲ್ಪಕಲೆಯ ನೆಲೆ ಬೆಲೆಗಳನ್ನು *ಈ* ಗ್ರಂಥ ವಿವರಿಸುತ್ತದೆ.

**೬೦೯. ವಾಸ್ತುಶಾಸ್ತ್ರ ಪರಿಚಯ**

ತೆಲುಗು ಮೂಲ: ಜಿ. ವೀರಭದ್ರಾಚಾರ್ಯುಲು

ಕನ್ನಡಕ್ಕೆ ಅನು: ಬಿ. ಸುಜ್ಞಾನಮೂರ್ತಿ

ಪುಟ: xii+೧೧೬, ವರ್ಷ: ೧೯೯೭, ರೂ: ೪೫.೦೦

ಪರಿವಿಡಿ

೧. ಪ್ರಕೃತಿ - ಪ್ರಾಣಿಗಳು; ಮನುಷ್ಯ - ಪರಿಸರದ ಪ್ರಭಾವ

೨. ಪರಿಸರ - ಭೂಗೋಳ ದಿಕ್ಕುಗಳು

೩. ಭೂಮಿ - ಅಂತರಿಕ್ಷ - ಸೌರಶಕ್ತಿ - ವಾಸ್ತುಶಕ್ತಿ
೪. ವಾಸ್ತುಪದ ವಿನ್ಯಾಸಕ್ರಮ
೫. ವರ್ಗಾಕ್ಷರಗಳು; ಜ್ಯೋತಿಷಶಾಸ್ತ್ರ; ವರ್ಗಾರೂಢ
೬. ದಿಕ್ಕುಗಳು - ದಿಕ್ಪಾಲಕರು; ಸೂರ್ಯಕಿರಣಗಳ ಪ್ರಭಾವ ದಿಕ್ಪಾಲಕರ ಪ್ರಭಾವ
೭. ಗೃಹಬಲ-ಗೃಹಬಲ-ಗೃಹ ನಿರ್ಮಾಣ ನಿಯಮ
೮. ಶಾಲಾ ನಿರ್ಮಾಣ, ಗೃಹನಿರ್ಮಾಣ, ಉಪಗೃಹ ನಿರ್ಮಾಣ ವಾಸ್ತು

ಪಾರಂಪರಿಕ ಜ್ಞಾನವಾದ ವಾಸ್ತುಶಾಸ್ತ್ರದ ಬಗ್ಗೆ ಸರಿಯಾದ ಅರಿವನ್ನು ಮೂಡಿಸುವ ಉಪಯುಕ್ತ ಲೇಖನಗಳು *ಈ* ಕೃತಿಯಲ್ಲಿವೆ. ತೆಲುಗಿನಲ್ಲಿ ಶಾಸ್ತ್ರೀಯವಾಗಿ ನಿರೂಪಿತವಾಗಿರುವ ಪುಸ್ತಕವನ್ನು ಲೇಖಕರ ಮೂಲ ಕಾಳಜಿಗೆ ಲೋಪವಾಗದಂತೆ ಕನ್ನಡಕ್ಕೆ ಅನುವಾದಿಸಲಾಗಿದೆ.

**೬೧೦. ವಿಜಯನಗರದ ಗಾರೆಶಿಲ್ಪ**
ಲೇ: ಸಿ.ಮಹದೇವ
ಪುಟ: viii+೪೦, ವರ್ಷ: ೨೦೦೦, ರೂ: ೪೦.೦೦
ಪರಿವಿಡಿ
೧. ಗಾರೆ
೨. ಗಾರೆಶಿಲ್ಪಗಳು
೩. ದೇವತಾ ಶಿಲ್ಪಗಳು
೪. ಲೌಕಿಕ ಶಿಲ್ಪಗಳು

ವಿಜಯನಗರ ಕಾಲದ ವಾಸ್ತು ಮತ್ತು ಶಿಲ್ಪ ಕ್ಷೇತ್ರದಲ್ಲಿ ಗಾರೆಶಿಲ್ಪ ಕುರಿತಾದ ಅಧ್ಯಯನ *ಈ* ಕೃತಿಯಲ್ಲಿದೆ. ರಾಜಕೀಯ ಮತ್ತು ಧಾರ್ಮಿಕ ನೆಲೆಗಳಲ್ಲಿ *ಈ* ಅಧ್ಯಯನವು ತನ್ನ ವ್ಯಾಪ್ತಿಯನ್ನು ಇಲ್ಲಿ ವಿಸ್ತರಿಸಿಕೊಂಡಿದೆ.




**೬೧೧. ಶಿಲ್ಪಾದರ್ಶ : ಸಂಪುಟ ೧**
ಲೇ: ಜಿ. ಜ್ಞಾನಾನಂದ
ಪುಟ: xvi+೨೭೭, ವರ್ಷ: ೨೦೦೧, ರೂ: ೧೫೦.೦೦
ಪರಿವಿಡಿ
೧. ಶಿಲ್ಪ ಮತ್ತು ಇತಿಹಾಸ
೨. ಮಾನಲಕ್ಷಣ
೩. ಪ್ರತಿಮಾ ಮಾನಲಕ್ಷಣ
೪. ರೇಖಾಚಿತ್ರ

ಪ್ರಾಚೀನ ಶಿಲ್ಪಶಾಸ್ತ್ರದ ಬಗ್ಗೆ ಸಮಗ್ರ ಮಾಹಿತಿ ನೀಡುವ ಕೃತಿ ಇದು. ಶಿಲ್ಪದ ಅರ್ಥವ್ಯಾಪ್ತಿಯಿಂದ ಹಿಡಿದು, ಶಿಲ್ಪಶಾಸ್ತ್ರಗಳು, ಭಾರತೀಯ ಶಿಲ್ಪದ ಇತಿಹಾಸ, ಶಿಲ್ಪಶಾಸ್ತ್ರದಲ್ಲಿನ ಮಾನಲಕ್ಷಣ ಪ್ರತಿಮಾ ಮಾನಲಕ್ಷಣದ ಬಗ್ಗೆ *ಈ* ಕೃತಿಯಲ್ಲಿ ಮಹತ್ವದ ಮಾಹಿತಿಗಳಿವೆ.




**೬೧೨. ಶಿಲ್ಪಾದರ್ಶ : ಸಂಪುಟ ೨**
ಲೇ: ಜಿ. ಜ್ಞಾನಾನಂದ
ಪುಟ: xviii+೩೫೦, ವರ್ಷ: ೨೦೦೨, ರೂ: ೨೦೦.೦೦
ಪರಿವಿಡಿ
೧. ಭಾರತೀಯ ದೇವಾಲಯದ ಇತಿಹಾಸ
೨. ಭೂಪರೀಕ್ಷೆ
೩. ದಿಕ್‌ನಿರ್ಣಯ ಅಥವಾ ಪ್ರಾಚೀ ಸಾಧನೆ
೪. ವಾಸ್ತು ಮಂಡಲಗಳು
೫. ಕಟ್ಟಡ ರಚನೆಯ ವಸ್ತುಗಳು
೬. ಷಟ್ ಛಂದಗಳು

ಭಾರತೀಯ ದೇವಾಲಯದ ಇತಿಹಾಸಗಳ ಬಗ್ಗೆ ಸಮಗ್ರ ವಿವರಗಳನ್ನು ಆಧಾರಭೂತವಾಗಿ ಇಲ್ಲಿ ದಾಖಲಿಸಲಾಗಿದೆ. ಜೈನ, ಬೌದ್ಧ ಹಾಗೂ ಹಿಂದೂ ದೇವಾಲಯಗಳ ಸ್ವರೂಪ ವೈವಿಧ್ಯಗಳು, ಅವುಗಳ ಹಿಂದಿರುವ ಮಾಹಿತಿಗಳನ್ನು ಇಲ್ಲಿ ದಾಖಲಿಸಲಾಗಿದೆ. ದೇವಾಲಯ ಸ್ಥಾಪನೆಗೆ ಭೂಪರೀಕ್ಷೆ, ದಿಕ್ಕಿನ ನಿರ್ಣಯ, ವಾಸ್ತು ಮಂಡಲ, ಕಟ್ಟಡ ರಚನೆಯ ವಸ್ತುಗಳು, ಷಟ್‌ಛಂದಗಳು ಹಾಗೂ ಕಟ್ಟಡ ರಚನೆಗೆ ಅಗತ್ಯವಾದ ಹಾಗೂ ಮುಖ್ಯವಾದ ಪೂರ್ವಭಾವಿ ಸಿದ್ಧತೆಯ ಬಗ್ಗೆ ಇಲ್ಲಿನ ಬರಹಗಳಿವೆ.

## ೩೦

# ವಿಜ್ಞಾನ ಮತ್ತು ಖಗೋಳಶಾಸ್ತ್ರ




### ೬೧೩. ಆಹಾರ ಉತ್ಪಾದನೆ ಮತ್ತು ನಿರ್ವಹಣೆ

ಲೇ: ನಿರ್ಮಲಾ ಬ. ಏಣಗಿ

ಪುಟ: XII+೯೮, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಆಹಾರ ಘಟಕಗಳು

೨. ಆಹಾರದ ನಿರ್ವಹಣೆ

೩. ಆಹಾರ ಕಲಬೆರಕೆ

೪. ಆಹಾರ ಉತ್ಪಾದನೆ

ಜೀವಿಗಳ ಮೂಲಭೂತ ಅವಶ್ಯಕತೆಗಳ ಪೈಕಿ ಒಂದಾಗಿರುವ ಆಹಾರದ ಉತ್ಪಾದನೆ, ಅದರಲ್ಲಿನ ಮುಖ್ಯ ಪೋಷಕಾಂಶಗಳ ವಿವರ, ಆಹಾರದ ನಿರ್ವಹಣೆ ಸಂರಕ್ಷಣೆ, ಆಹಾರದಲ್ಲಾಗುವ ಕಲಬೆರಕೆ ಮುಂತಾದ ಅಂಶಗಳ ಬಗ್ಗೆ ಜನಸಾಮಾನ್ಯರಿಗೂ ಅರ್ಥವಾಗುವಂತಹ ಭಾಷೆಯಲ್ಲಿ ವಿಷಯವನ್ನು ಸಮರ್ಥವಾಗಿ ನಿರೂಪಿಸಲಾಗಿದೆ.

### ೬೧೪. ಇಂಧನಗಳು

ಲೇ: ವೆಂಕಟೇಶ ಮುತಾಲಿಕ

ಪುಟ: XII+೯೪, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಘನ ಇಂಧನಗಳು

೨. ದ್ರವ ಇಂಧನಗಳು ಮತ್ತು ಅವುಗಳ ವರ್ಗೀಕರಣ

೩. ಅನಿಲ ಇಂಧನಗಳು

೪. ಹೈಡ್ರೋಕಾರ್ಬನ್‌ಗಳು ಅವುಗಳ ವರ್ಗೀಕರಣ

೫. ಇಂಧನಗಳ ದಹನ ಕ್ರಿಯೆ ಮತ್ತು ಅದರ ಪರಿಕಲ್ಪನೆ

ನೈಸರ್ಗಿಕ ಇಂಧನಗಳ ವರ್ಗೀಕರಣ, ಆ ಇಂಧನಗಳ ವಿಶಿಷ್ಟ ಗುಣಗಳು, ಅನುಕೂಲ ಅನಾನುಕೂಲತೆಗಳ ಬಗ್ಗೆ *ಈ* ಕೃತಿ ಸಾಕಷ್ಟು ಮಾಹಿತಿ ನೀಡುತ್ತದೆ.

### ೬೧೫. ಜೀವಕೋಶ

ಲೇ: ಶಕುಂತಲಾ ವಿ. ಕತ್ರೆ

ಪುಟ: XII+೭೪, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಜೀವಕೋಶ

೨. ಕೋಶ ವಿಭಜನೆ

೩. ಅಂಗಾಂಶಗಳು

೪. ಜೀವಕೋಶದ ಸಾವು-೧

೫. ಜೀವಕೋಶದ ಸಾವು-೨

ಜೀವಕೋಶ, ಕೋಶ ವಿಭಜನೆ, ಅಂಗಾಂಶಗಳು, ಜೀವಕೋಶದ ಸಾವು ಇತ್ಯಾದಿ ವಿಷಯಗಳ ಬಗ್ಗೆ ಜನಸಾಮಾನ್ಯರಿಗೂ ಅರ್ಥವಾಗುವಂತಹ ಭಾಷೆ ಮತ್ತು ಸರಳ ನಿರೂಪಣೆಯಿಂದಾಗಿ ಇದೊಂದು ಅರ್ಥಪೂರ್ಣ ಕೃತಿಯೆನಿಸುತ್ತದೆ.

### ೬೧೬. ಜೀವ ವಿಕಾಸ

ಲೇ: ವಿ.ಎ. ಕುಲಕರ್ಣಿ

ಪುಟ: XXII+೮೪, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಜೀವವಿಕಾಸದ ಪರಿಚಯ, ಅರ್ಥ

೨. ಮಾನವನ ಉಗಮ ಹಾಗೂ ವಿಕಾಸ

ನಿಸರ್ಗದ ಜೀವವೈವಿಧ್ಯ, ಜೀವವಿಕಾಸದ ಪ್ರಕ್ರಿಯೆ ಮಾನವನ ಉಗಮ ಮತ್ತು ವಿಕಾಸದ ಪರಿಯನ್ನು *ಈ* ಕೃತಿಯಲ್ಲಿ ಸರಳವಾದ ಭಾಷೆಯಲ್ಲಿ ಜನಸಾಮಾನ್ಯರಿಗೂ ತಿಳಿಯುವಂತೆ ನಿರೂಪಿಸಲಾಗಿದೆ.

### ೬೧೭. ಜೈವಿಕ ತಂತ್ರಜ್ಞಾನ

ಲೇ: *ಈ*ಶ್ವರ ಕಟಗೇರಿ ಮತ್ತು ಇತರರು

ಪುಟ: XIV+೭೨, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ಜೀವೋದ್ಭವ; ಜೀವವಿಕಾಸ; ವಂಶವಾಹಿಗಳು

೨. ವಂಶವಾಹಿಗಳ ಸ್ವಭಾವ, ರಚನೆ, ಮತ್ತು ಕ್ರಿಯೆ

೩. ಜೈವಿಕ ತಂತ್ರಜ್ಞಾನ; ಜೈವಿಕ ತಂತ್ರಜ್ಞಾನದಲ್ಲಿ ಅಂಗಾಂಶ ಕೃಷಿ: ಜೀನೋಮಿಕ್ಸ್

೪. ವಂಶವಾಹಿ ಚಿಕಿತ್ಸೆ; ಕುಲಾಂತರಿ ಜೀವಿ

೫. ತದ್ರೂಪಿ ತಂತ್ರಜ್ಞಾನ

೬. ಜೈವಿಕ ತಂತ್ರಜ್ಞಾನದ ಸಾಧಕಬಾಧಕಗಳು

ಜೀವೋದ್ಭವ, ಜೀವವಿಕಾಸ, ವಂಶವಾಹಿಗಳ ರಚನೆ-ಕ್ರಿಯೆ, ಜೈವಿಕ ತಂತ್ರಜ್ಞಾನ ಮತ್ತು ಅದರ ಸಾಧಕ ಬಾಧಕಗಳ ಬಗ್ಗೆ ಇಲ್ಲಿ ಜನಸಾಮಾನ್ಯನಿಗೂ ಅರ್ಥವಾಗುವಂತೆ ಸರಳವಾಗಿ ವಿವರಿಸಲಾಗಿದೆ.




**೬೧೮. ತಂತ್ರಶಾಸ್ತ್ರ**

ಲೇ: ಜಿ.ಬಿ. ಹರೀಶ

ಪುಟ: iv+೩೪, ವರ್ಷ: ೨೦೦೬, ರೂ: ೧೦.೦೦

ತಂತ್ರಗಳ ಉಗಮ, ತಂತ್ರಗಳ ವಿವಿಧ ಆಯಾಮ ಹಾಗೂ ತಂತ್ರಶಾಸ್ತ್ರ ಜ್ಞಾನದ ಬಗ್ಗೆ *ಈ* ಕಿರುಗ್ರಂಥದಲ್ಲಿ ಮಹತ್ವಪೂರ್ಣ ಮಾಹಿತಿಗಳಿವೆ.

**೬೧೯. ತಳಿ ವಿಜ್ಞಾನ**

ಸಂ: ಸಾತನೂರು ದೇವರಾಜ್

ಪುಟ: ii+೩೧, ವರ್ಷ: ೨೦೦೦, ರೂ: ೧೦.೦೦

ತಳಿವಿಜ್ಞಾನ ಮತ್ತು ಅನುವಂಶೀಯತೆಯ ಬಗ್ಗೆ *ಈ* ಕೃತಿ ಅಮೂಲ್ಯ ಮಾಹಿತಿಗಳನ್ನು ನೀಡುತ್ತದೆ. ಸಂತಾನಾಭಿವೃದ್ಧಿಯಲ್ಲಿ ತಳಿವಿಜ್ಞಾನದ ಪಾತ್ರದ ಬಗ್ಗೆಯೂ ಕೃತಿ ವಿಶ್ಲೇಷಿಸುತ್ತದೆ.

**೬೨೦. ನಮ್ಮ ವಿಶ್ವ**

ಲೇ: ಸೋಮಶೇಖರಗೌಡ

ಪುಟ: XII+೮೨, ವರ್ಷ: ೨೦೦೩, ರೂ: ೨೦.೦೦

ಪರಿವಿಡಿ

೧. ಸೂರ್ಯ ಮತ್ತು ಸೌರ ಪರಿವಾರ

೨. ಭೂಮಿ

೩. ಉಲ್ಕೆಗಳು, ಕ್ಷುದ್ರಗ್ರಹಗಳು ಮತ್ತು ಧೂಮಕೇತುಗಳು

೪. ನಕ್ಷತ್ರಗಳು

೫. ವಿಶ್ವದ ಉಗಮ ಮತ್ತು ಅಂತ್ಯ

ವಿಶ್ವದ ಉಗಮ ಮತ್ತು ಅಂತ್ಯದಿಂದ ಹಿಡಿದು ಸೂರ್ಯ, ಸೌರ ಪರಿವಾರ, ಭೂಮಿ, ಉಲ್ಕೆ, ಧೂಮಕೇತು, ನಕ್ಷತ್ರ ಹಾಗೂ ಕ್ಷುದ್ರ ಗ್ರಹಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ *ಈ* ಕೃತಿಯಲ್ಲಿದೆ.

**೬೨೧. ಭಾರತೀಯ ಗಣಿತಶಾಸ್ತ್ರ**

ಲೇ: ಎಸ್. ಬಾಲಚಂದ್ರರಾವ್

ಪುಟ: viii+೧೦೦, ವರ್ಷ: ೧೯೯೫, ರೂ: ೩೦.೦೦

ಪರಿವಿಡಿ

೧. ಪ್ರಾಚೀನ ಭಾರತೀಯ ಗಣಿತ : ಶೂನ್ಯವೇ?

೨. ವೇದಕಾಲದಲ್ಲಿ ಗಣಿತಶಾಸ್ತ್ರ

೩. ಗಣಿತದಲ್ಲಿ ಅನಂತದ ಸ್ವಾರಸ್ಯ

೪. ಆರ್ಯಭಟ

೫. ಬ್ರಹ್ಮಗುಪ್ತ

೬. ಮಹಾವೀರಾಚಾರ್ಯ

೭. ಕ್ಯಾಲೆಂಡರ್ ಹಾಗೂ ನಮ್ಮ ರಾಷ್ಟ್ರೀಯ ಪಂಚಾಂಗ

೮. ಭಾಸ್ಕರಾಚಾರ್ಯ-೨

೯. ಕೇರಳದ ಗಣಿತಜ್ಞರ ಅದ್ಭುತ ಸಾಧನೆಗಳು

೧೦. ಶ್ರೀನಿವಾಸ ರಾಮಾನುಜನ್

ಭಾರತೀಯ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ *ಈ* ಕೃತಿ ಭಾರತೀಯ ಗಣಿತಜ್ಞರ ಬಗ್ಗೆ ಮತ್ತು ಅವರ ಕೊಡುಗೆಯ ಬಗ್ಗೆ ಉತ್ತಮ ಮಾಹಿತಿಯನ್ನು ನೀಡುತ್ತದೆ. ಗಣಿತಶಾಸ್ತ್ರವನ್ನು ಓದುವ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಸಂಶೋಧಕರಿಗೆ ಇದು ಒಂದು ಮುಖ್ಯ ಆಕರಗ್ರಂಥ.

**೬೨೨. ಭಾರತೀಯ ವಿಜ್ಞಾನದ ಹಾದಿ**

ಲೇ: ಜಿ.ರಾಮಕೃಷ್ಣ

ಪುಟ: xii+೪೧೩, ವರ್ಷ: ೧೯೯೭, ರೂ: ೧೫೦.೦೦

ಪರಿವಿಡಿ

೧. ವಿಜ್ಞಾನದ ವೈಶಾಲ್ಯ; ವೈಜ್ಞಾನಿಕ ಪದ್ಧತಿ; ಅನೇಕಾಂತವಾದ

೨. ತಂತ್ರಜ್ಞಾನದ ಪ್ರಾಚೀನತೆ; ಹರಪ್ಪ ನಾಗರಿಕತೆಯಲ್ಲಿ ಖಗೋಳಶಾಸ್ತ್ರ ಮತ್ತು ಮಾಪನ ಸಾಧನಗಳು; ಶುಲ್ಬಸೂತ್ರಗಳು



೩. ಮಾಂತ್ರಿಕತೆಯಿಂದ ಋತದತ್ತ; ಋಗ್ವೇದದಲ್ಲಿ ಔಷಧಿಗಳು; ಪ್ರಾಚೀನ ಪ್ರಕೃತಿ ವಿಜ್ಞಾನ; ಚರಕ ಸುಶ್ರುತ

೪. ವಿಜ್ಞಾನದ ಮೇಲೆ ಧರ್ಮಶಾಸ್ತ್ರಕಾರರ ಹಲ್ಲೆ; ತ್ರಿಮಲ್ಲಭಟ್ಟ; ವೈದ್ಯಸಾರಸಂಗ್ರಹ ಮತ್ತು ಸಕಲವೈದ್ಯಸಂಹಿತಾಸಾರಾರ್ಣವ

೫. ರಸಾಯನ ತಂತ್ರ; ರಸಪದ್ಧತಿ ಲೋಹಸರ್ವಸ್ವ

೬. ಅರ್ಥಶಾಸ್ತ್ರ; ಖಗೋಳಶಾಸ್ತ್ರ ಗಣಿತಶಾಸ್ತ್ರ; ಮಹಾವೀರಾಚಾರ್ಯ ವ್ಯವಹಾರ ಗಣಿತಂ; ಅಲ್ ಬಿರೂನಿಯ ವಿಮರ್ಶೆ; ಜಂಬೂದ್ವೀಪ

೭. ಪ್ರಾಣಿಶಾಸ್ತ್ರ; ಹಸ್ತ್ಯಾಯುರ್ವೇದ-ಅಶ್ವಾಯುರ್ವೇದ; ಸಸ್ಯಜೀವಿಗಳು; ವೃಕ್ಷಾಯುರ್ವೇದ; ಸೂಪಶಾಸ್ತ್ರಂ; ಲೋಕೋಪಕಾರಂ; ಸಮರಾಂಗಣ ಸೂತ್ರಧಾರ

೮. ಮಾನಸೋಲ್ಲಾಸ; ಕಲ್ಯಾಣಕಾರಕ; ಸಮಯ ಪರೀಕ್ಷೆ; ಖಗೇಂದ್ರಮಣಿ ದರ್ಪಣ

ವೇದಕಾಲದಿಂದ ಹಿಡಿದು ಬ್ರಿಟಿಷರ ಆಗಮನದವರೆಗೆ ನಮ್ಮ ದೇಶದಲ್ಲಿ ನಡೆದಿದ್ದ ಶಾಸ್ತ್ರ ಚಿಂತನವನ್ನು ಇಲ್ಲಿ ಸೆರೆಹಿಡಿಯಲಾಗಿದೆ. ತಿಳುವಳಿಕೆ ವಿಕಾಸಗೊಳ್ಳುವ ಕ್ರಮವನ್ನು *ಈ* ಗ್ರಂಥದಲ್ಲಿ ಗುರುತಿಸಲಾಗಿದ್ದು, ವೈಜ್ಞಾನಿಕ ಚಿಂತನ ವ್ಯವಸ್ಥಿತವಾಗಿ ನಡೆಯದಿರುವುದಕ್ಕೆ ಹಾಗೂ ತಂತ್ರಜ್ಞಾನದೊಡನೆ ಸಂಬಂಧವನ್ನು ಬೆಳೆಸಲಾಗದ್ದಕ್ಕೆ ಕಾರಣಗಳನ್ನೂ *ಈ* ಗ್ರಂಥದಲ್ಲಿ ವಿಶ್ಲೇಷಿಸಲಾಗಿದೆ.




**೬೨೩. ವಿಜ್ಞಾನ ವರ್ತಮಾನ**

ಲೇ: ಜಿ.ಟಿ. ನಾರಾಯಣರಾವ್

ಪುಟ: x+೩೪೬=೩೫೬, ವರ್ಷ: ೨೦೦೭, ರೂ: ೮೦.೦೦

ಪರಿವಿಡಿ

೧. ಪ್ರಾಚೀನ ಭಾರತದಲ್ಲಿ ವಿಜ್ಞಾನ

೨. ವಿಜ್ಞಾನದ ಮೂಲ, ವಿಜ್ಞಾನದ ಭಾಷೆ

೩. ಫಲಜ್ಯೋತಿಷ್ಯ; ಋಷಿವಾಕ್ಯ, ವಿಜ್ಞಾನ ಕಲೆ

೪. ಸಾಂತತೆ, ಅನಂತತೆ, ಅಸಂಖ್ಯತೆ, ನಿಸ್ಸಂಖ್ಯತೆ

೫. ರೇಡಿಯೋ ಎಕ್ಸ್‌ಕಿರಣ ಖಗೋಳ ವಿಜ್ಞಾನ; ವೇಗ

೬. ಅಂತರ ಬ್ರಹ್ಮಾಂಡ ಗುರುತ್ವ ಮಸೂರ; ಸುಪರ್ನೋವಾಗಳು

೭. ಗಣಿತ ಪ್ರಪಂಚ, ಗಣಿತ ತರ್ಕಶಾಸ್ತ್ರ

೮. ಶ್ರೀರಾಮಾಯಣದರ್ಶನದಲ್ಲಿ ವೈಜ್ಞಾನಿಕಾಂಶಗಳು

೯. ಅಂಕಗಣಿತ ವಿಹಾರ; ಸವಾಲುಗಳು

*ಈ* ಕೃತಿ ಸಂಶೋಧನೆ ಮತ್ತು ವೈಚಾರಿಕ ಆಶಯಗಳುಳ್ಳ ಲೇಖನಗಳ ಸಂಗ್ರಹವಾಗಿದೆ. ವಿಜ್ಞಾನವು ವರ್ತಮಾನ ಹೇಗೋ ಭವಿಷ್ಯದ ಅಭಿವೃದ್ಧಿಯ ಕಡೆಗೆ ಕರೆದೊಯ್ಯುವ ಭವಿಷ್ಯದ ವಿಜ್ಞಾನವೂ ಹೌದು. ವಿಜ್ಞಾನ ವಿಷಯವನ್ನು ಸಂಗ್ರಹವಾಗಿಯೂ ಔಚಿತ್ಯ ವಾಗಿಯೂ ಇಲಿಯ ಲೇಖನಗಳಲ್ಲಿ ನಿರೂಪಿಸಲಾಗಿದೆ. ಆಲ್ಬರ್ಟ್ ಐನ್‌ಸ್ಟೈನ್‌ರಂಥ ಮಹಾವಿಜ್ಞಾನಿಯ ಸಂಶೋಧನೆಗಳನ್ನು, ಗಣಿತವಿಜ್ಞಾನ ಕ್ಷೇತ್ರವು ಸಾಧಿಸಿರುವ ಪ್ರಗತಿಯನ್ನು ಬಾಹ್ಯಾಕಾಶದ 'ವ್ಯವಹಾರ'ಗಳನ್ನು *ಈ* ಗ್ರಂಥದಲ್ಲಿರುವ ಲೇಖನಗಳು ಪ್ರಕಟಿಸುತ್ತವೆ.




**೬೨೪. ವೈಜ್ಞಾನಿಕ ಮನೋಧರ್ಮ**

ಸಂ : ಜಿ. ರಾಮಕೃಷ್ಣ

ಪುಟ: xii+34+೧೩೪, ವರ್ಷ: ೨೦೦೫, ರೂ: ೭೫.೦೦

ಪರಿವಿಡಿ

೧. ಅತಿ ಆಸೆ ಗತಿಗೇಡು

೨. ಸಮಾಜ ವಿಚಾರ

೩. ವೈಜ್ಞಾನಿಕ ಪ್ರಜ್ಞೆ, ವೈಜ್ಞಾನಿಕ ಮನೋಭಾವ, ವೈಜ್ಞಾನಿಕ ಮನೋವೃತ್ತಿ

೪. ಜ್ಞಾನದ ಪರಿಣಾಮ

೫. ಸೃಷ್ಟಿಗೆ ಮೂಲವೇನು

೬. ಹಿಂದೂಸ್ತಾನದ ಪ್ರಾಚೀನ ಇತಿಹಾಸ ಏಕಿಲ್ಲ?

೭. ಗೋರಿ ಮತ್ತು ದೇಗುಲಗಳು; ವಿಜ್ಞಾನ ಮತ್ತು ಚೈತನ್ಯ

೮. ವಿವಾಹ ನಿರಾಕರಣೆ ಅಥವಾ ವಿವಾಹ ವಿಚ್ಛೇದನೆ

೯. ವೇದ ಮತ್ತು ವೇದ ವ್ಯಾಖ್ಯಾನಗಳು

೧೦. ಪ್ರಾಚೀನ ಭಾರತದಲ್ಲಿ ವಿಜ್ಞಾನದ ಅವನತಿ

ಭಾರತದ ಶ್ರೇಷ್ಠ ಚಿಂತಕರ ಆಲೋಚನೆಗಳನ್ನು ಕುರಿತ ಲೇಖನಗಳು *ಈ* ಗ್ರಂಥದಲ್ಲಿದ್ದು, ಕನ್ನಡ ವೈಚಾರಿಕ ಜಗತ್ತಿನಲ್ಲಿ ಇದೊಂದು ಮಹತ್ವಪೂರ್ಣವಾದ ಗ್ರಂಥ. ವಿಚಾರವಾದಿ ಮತ್ತು ಆಲೋಚನೆಗಳು ಒಂದನ್ನೊಂದು ಬೇರ್ಪಡಿಸಲಾಗದ ಪರಿಕಲ್ಪನೆಗಳು ಎಂಬುದನ್ನು ಇಲ್ಲಿನ ಲೇಖನಗಳು ನಿಜ ಮಾಡುವುದರ ಜತೆಗೆ, ವಿಜ್ಞಾನವನ್ನು ನಮ್ಮ ಬುದ್ಧಿಯ ಮತ್ತು ಕ್ರಿಯೆಯ ಸಮನ್ವಯಗಳೆಂದು ಪರಿಭಾವಿಸಬೇಕಾದ ಅಗತ್ಯವನ್ನು ಇಲ್ಲಿನ ಲೇಖನಗಳು ಮನವರಿಕೆ ಮಾಡಿಕೊಡುತ್ತವೆ.

**೬೨೫. ಸಂಕ್ಷಿಪ್ತ ಖಗೋಳ ದರ್ಶನ**

ಲೇ: ಆನಂದ ದೇಶಪಾಂಡೆ

ಪುಟ: viii+೨೦೭, ವರ್ಷ: ೧೯೯೪, ರೂ: ೬೫.೦೦

ಪರಿವಿಡಿ

೧. ಸೌರಮಂಡಲ

೨. ಗ್ರಹಗಳು

೩. ಸಮುದ್ರಭರತಗಳು

೪. ಆಕಾಶ ಕಾಯಗಳು

೫. ಧೂತಕೇತುಗಳು

೬. ಉಲ್ಕೆಗಳು

೭. ಬಾಹ್ಯ ಜಗತ್ತಿನಲ್ಲಿ ಜೀವರಾಶಿ

ನಮ್ಮ ಆಕಾಶಕಾಯಗಳು, ಅವುಗಳ ರೂಪ, ಚಲನ ವಲನ ಒಟ್ಟಿನಲ್ಲಿ ಖಗೋಲದ ಬಗ್ಗೆ ಸಾಕಷ್ಟು ಮಾಹಿತಿಗಳು ಸಂಕ್ಷಿಪ್ತವಾಗಿ, ಸರಳವಾಗಿ *ಈ* ಗ್ರಂಥದಲ್ಲಿ ಲಭ್ಯವಿದೆ.




**೬೨೬. ಸಂಕ್ಷಿಪ್ತ ಖಗೋಳ ವಿಜ್ಞಾನ ಚರಿತ್ರೆ**

ಲೇ: ಹೆಚ್.ಆರ್. ರಾಮಕೃಷ್ಣರಾವ್

ಪುಟ: XIV+೨೧೨, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ

೧. ಇತಿಹಾಸಪೂರ್ವ ಖಗೋಳ ವಿಜ್ಞಾನ; ಪುರಾತನ ನಾಗರಿಕತೆಗಳಲ್ಲಿ ಖಗೋಳ ವಿಜ್ಞಾನ.

೨. ವಿಶ್ವದ ಮತ್ತು ಭಾರತೀಯ ಖವಿಜ್ಞಾನಿಗಳು

೩. ಆಧುನಿಕ ವಿಜ್ಞಾನಕ್ಕೆ ಚೀನಿಯರ ಕೊಡುಗೆ

೪. ಮಲೆಕಣಿವೆಗಳು, ಬಾನು, ತಾರೆಗಳು

೫. ಧೂಮಕೇತು

೬. ವಿಶ್ವಾವಲೋಕನ, ಸೌರವ್ಯೂಹ ಗ್ರಹಯಾತ್ರೆ

೭. ಖಗೋಳ ಸಲಕರಣೆ, ವಿಸ್ಮಯಗಳ ಅವಿಷ್ಕಾರ

೮. ಬಾಹ್ಯಕಾಶ, ಬಾಹ್ಯಂತರಿಕ್ಷ ಜೀವಿಗಳು

೯. ಕೃಷ್ಣವಿವರ, ಕಪ್ಪುದ್ರವ್ಯ

ಇತಿಹಾಸ ಪೂರ್ವದಲ್ಲಿ ಖಗೋಳ ವಿಜ್ಞಾನ, ಪುರಾತನ ನಾಗರಿಕತೆಗಳಲ್ಲಿ ಖಗೋಳ ವಿಜ್ಞಾನ, ಭಾರತೀಯ ಖಗೋಳ ವಿಜ್ಞಾನಿಗಳು, ಖಗೋಳ ಸಲಕರಣೆಗಳು, ಖಗೋಳ ವಿಸ್ಮಯಗಳ ಆವಿಷ್ಕಾರ ಇತ್ಯಾದಿ ಖಗೋಳಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಸಮಗ್ರ ಮಾಹಿತಿಗಳನ್ನು, ಸರಳವಾಗಿ *ಈ* ಕೃತಿಯಲ್ಲಿ ನೀಡಲಾಗಿದೆ.



**೬೨೭. ಸಂಕ್ಷಿಪ್ತ ಭೌತವಿಜ್ಞಾನ ಚರಿತ್ರೆ**

ಲೇ: ಎ.ಓ. ಅವಲಮೂರ್ತಿ

ಪುಟ: XIV+೨೯೦, ವರ್ಷ: ೨೦೦೩, ರೂ: ೧೦೦.೦೦

ಪರಿವಿಡಿ

೧. ಪ್ರಾಚೀನ ಗ್ರೀಕರ ಕೊಡುಗೆ

೨. ವಿಶ್ವರಚನೆಯ ಮಾದರಿಗಳು

೩. ತಿರುಗು ಮುರುಗಾದ ವಿಶ್ವ

೪. ಗೆಲಿಲಿಯೋ ಕೊಟ್ಟ 'ಕಣ್ಣು'

೫. ನ್ಯೂಟನ್ ಕ್ರಾಂತಿ

೬. ಶಾಖ ಪ್ರಕರಣ; ವಿದ್ಯುತ್ ವಿವರ

೭. ಪರಮಾಣುವಿನ 'ಹೆಜ್ಜೆ ಜಾಡು'; ಅವಿನಾಶಿ ಶಕ್ತಿ

೮. ಕಾಂತ ವಿದ್ಯುತ್ ಬೆಳಕು; ಹೊಸ ಪರಮಾಣು

೯. ಹೊಸ ವಿಶ್ವ ೧ ಹೊಸವಿಶ್ವ ೨

೧೦. ವಿಜ್ಞಾನ ಮತ್ತು ಪರಮಾಣು ಬಾಂಬು; ಕಣಗಳ ಮೇಳ

ಭೌತವಿಜ್ಞಾನ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ ಚಟುವಟಿಕೆಗಳ ವಿವರಗಳನ್ನು ಮತ್ತು *ಈ* ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾನ್ವಿತ ವಿಜ್ಞಾನಿಗಳ ಹೊಸ ಹೊಸ ಚಿಂತನೆ ಹಾಗೂ ಪ್ರಯೋಗಗಳನ್ನು *ಈ* ಕೃತಿಯಲ್ಲಿ ವಿವರಿಸಲಾಗಿದೆ.




**೬೨೮. ಸಂಕ್ಷಿಪ್ತ ರಸಾಯನ ವಿಜ್ಞಾನ ಚರಿತ್ರೆ**

ಲೇ: ಸರ್ವೋತ್ತಮ ಅಂಬೇಕರ

ಪುಟ: XIV+೨೩೦, ವರ್ಷ: ೨೦೦೩, ರೂ: ೧೦೦.೦೦

ಪರಿವಿಡಿ

೧. ಪ್ರಾಚೀನ ರಸಾಯನ ವಿಜ್ಞಾನ; ರಸವಿದ್ಯೆ

೨. ಪ್ರಾಚೀನ ಭಾರತೀಯ ರಸಾಯನ ವಿಜ್ಞಾನ; ರಸ ವಿದ್ಯೆಯಿಂದ ರಸಾಯನ ವಿಜ್ಞಾನದವರೆಗೆ; ವಾಯು, ಜ್ವಲನ ಮತ್ತು ಅನಿಲಗಳು

೩. ಆಧುನಿಕ ರಸಾಯನ ವಿಜ್ಞಾನದ ಜನಕ ಲವಾಜಿಯೆ; ಪರಮಾಣುಗಳು, ಅಣುಗಳು, ಮತ್ತು ಧಾತುಗಳು; ಸಾವಯವ ರಸಾಯನ ವಿಜ್ಞಾನದ ಜನನ; ಅಣು ಸಂರಚನೆ

೪. ಟಾರೆಣ್ಣೆ ಉದ್ದಿಮೆ; ಆವರ್ತಕೋಷ್ಟಕ; ಭೌತರಸಾಯನ ವಿಜ್ಞಾನ

೫. ನಿರವಯವ ರಸಾಯನ ವಿಜ್ಞಾನ; ಸಂಶ್ಲೇಷಣಾತ್ಮಕ ರಸಾಯನ ವಿಜ್ಞಾನ

೬. ಪರಮಾಣುವಿನ ಅಂತರಾಳದಲ್ಲಿ ಯಾನ; ಎಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನ್; ಪರಮಾಣು ಸಂರಚನೆ

೭. ಬೈಜಿಕ ಪ್ರತಿಕ್ರಿಯೆಗಳು
೮. *ಈ* ನಾಲ್ಕು ದಶಕಗಳಲ್ಲಿ
೯. ನೋಬೆಲ್ ಪಾರಿತೋಷಕ ಪಟ್ಟಿ

ರಸಾಯನ ವಿಜ್ಞಾನ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ ಚಟುವಟಿಕೆಗಳ ವಿವರಗಳನ್ನು ಮತ್ತು ಆ ಕ್ಷೇತ್ರದಲ್ಲಿನ ಪ್ರತಿಭಾವಂತ ವಿಜ್ಞಾನಿಗಳ ಹೊಸ ಚಿಂತನೆ-ಅನ್ವೇಷಣೆ-ಪ್ರಯೋಗಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಅತ್ಯಂತ ಪರಿಣಾಮಕಾರಿಯಾಗಿ *ಈ* ಕೃತಿಯಲ್ಲಿ ವಿವರಿಸಲಾಗಿದೆ.




### ೬೨೯. ಸೂಕ್ಷ್ಮಜೀವಿಗಳು

ಲೇ: ಸುರೇಶ ವೆಂ. ಕುಲಕರ್ಣಿ
ಪುಟ: XII+೩೬, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ
೧. ಸೂಕ್ಷ್ಮ ಜೀವಿಗಳ ಶೋಧನೆ ಮತ್ತು ಸಂಶೋಧನೆ
೨. ವಿವಿಧ ಬಗೆಯ ಸೂಕ್ಷ್ಮ ಜೀವಿಗಳು
೩. ಅಣಬೆಗಳ ಉಪಯೋಗಗಳು
೪. ಉಪಯುಕ್ತ ಸೂಕ್ಷ್ಮಜೀವಿಗಳು

ಸೂಕ್ಷ್ಮಜೀವಿಗಳ ಶೋಧನೆ ಮತ್ತು ಸಂಶೋಧನೆಯಿಂದ ಹಿಡಿದು ವೈರಸ್, ಬ್ಯಾಕ್ಟೀರಿಯಾ, ಶೈವಲ, ಶಿಲೀಂದ್ರ, ಅಣಬೆಗಳಂತಹ ವಿವಿಧ ಬಗೆಯ ಸೂಕ್ಷ್ಮಜೀವಿಗಳ ದೇಹರಚನೆ, ಅವುಗಳಲ್ಲಿರುವ ವಿವಿಧ ಪ್ರಕಾರಗಳು, ಅವುಗಳು ಹರಡುವ ರೋಗಗಳು, ಕೆಲವು ಸೂಕ್ಷ್ಮಜೀವಿಗಳ ಉಪಯೋಗ ಇತ್ಯಾದಿ ವಿಚಾರಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತಹ ಸರಳ ಭಾಷೆಯಲ್ಲಿ ಆಕರ್ಷಕವಾಗಿ ನಿರೂಪಿಸಿರುವುದು *ಈ* ಕೃತಿಯ ವೈಶಿಷ್ಟ್ಯ.

### ೬೩೦. ಸೌರಮಂಡಲದ ಹೊಸ ಸದಸ್ಯರು

ಲೇ: ಬಿ.ಎಸ್.ಶೈಲಜಾ
ಪುಟ: iv+೨೪, ವರ್ಷ: ೨೦೦೧, ರೂ: ೧೦.೦೦

ಸೌರಮಂಡಲಕ್ಕೆ ಸೇರುವ ಹೊಸ ಕಾಯಗಳ ಬಗ್ಗೆ *ಈ* ಪುಟ್ಟಕೃತಿಯಲ್ಲಿ ಸಾಕಷ್ಟು ಮಾಹಿತಿಗಳಿವೆ. ಜತೆಗೆ ಸೌರಮಂಡಲದ ಹಳೆ ಸದಸ್ಯರ ಬಗ್ಗೆಯೂ ಕಿರು ಪ್ರಸ್ತಾಪವಿದೆ.

## ೩೧

## ವಿಶ್ವಕೋಶ-ವಾರ್ಷಿಕಗಳು

### ೬೩೧. ಕನ್ನಡ ವಾರ್ಷಿಕ ೧೯೯೧

ಸಂ: ಬಸವರಾಜ ಕಲ್ಗುಡಿ
ಪುಟ: xiv+೪೫೮, ವರ್ಷ: ೧೯೯೨, ರೂ: ೧೫೦.೦೦

ಕನ್ನಡ ವಾರ್ಷಿಕ ೧೯೯೧ರಲ್ಲಿ ಮುಖ್ಯವಾಗಿ ೨ ಭಾಗಗಳಿವೆ. ಮೊದಲ ಭಾಗವು ಕರ್ನಾಟಕದ ಚಾರಿತ್ರಿಕ, ಭೌಗೋಳಿಕ, ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಮೂಲಭೂತ ಮಾಹಿತಿಯ ಜತೆಗೆ, ೧೯೯೧ರ ಪ್ರಮುಖ ಘಟನೆಗಳು ಹಾಗೂ ಸಾಧನೆಗೆ ಪಾತ್ರವಾದ ಪ್ರಮುಖ ವ್ಯಕ್ತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಣಾತ್ಮಕ ಸಮೀಕ್ಷೆಯನ್ನು ಒಳಗೊಂಡಿದೆ. ಎರಡನೇ ಭಾಗವು ೧೯೯೧ರಲ್ಲಿಯ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಕುರಿತ ಸಮೀಕ್ಷೆಯನ್ನು ಒಳಗೊಂಡಿದೆ.




### ೬೩೨. ಕನ್ನಡ ವಾರ್ಷಿಕ-೧೯೯೨

ಸಂ: ಮಲ್ಲೇಪುರಂ ಜಿ.ವೆಂಕಟೇಶ
ಪುಟ: xii+೩೨೬, ವರ್ಷ: ೧೯೯೩, ರೂ: ೭೫.೦೦

ಪರಿವಿಡಿ
೧. ಅನುಭವದ ಆಗು-ಹೋಗು
೨. ಅಭಿವ್ಯಕ್ತಿಯ ಹುಡುಕಾಟ
೩. ಸಂಕೀರ್ಣ

ಕನ್ನಡ ವಾರ್ಷಿಕ ೯೨ರಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಕರ್ನಾಟಕದ ವಿದ್ಯಮಾನಗಳು, ಪ್ರಮುಖ ಘಟನೆಗಳು ಹಾಗೂ ಸಾಂಸ್ಕೃತಿಕ ಅನುಭವದ ಆಗುಹೋಗುಗಳನ್ನು ಒಳಗೊಂಡಿದೆ. ಎರಡನೇ ಭಾಗವು ಚಿತ್ರಕಲೆ, ಸಂಗೀತ, ರಂಗಭೂಮಿ, ಚಿತ್ರರಂಗ, ಕ್ರೀಡಾ ಚಟುವಟಿಕೆ ಮತ್ತು ಸಾಹಿತ್ಯ ಪ್ರಕಾರಗಳ ಸಮೀಕ್ಷೆಯನ್ನೊಳಗೊಂಡಿದೆ. ಮೂರನೇ ಭಾಗವು ಹೊರನಾಡ ಕನ್ನಡ ಚಟುವಟಿಕೆಗಳನ್ನು ಮತ್ತು ಅಗಲಿದ ಮಹನೀಯರ ಕಿರುಪರಿಚಯವನ್ನು ಹೊಂದಿದೆ.

**೬೩೩. ಕನ್ನಡ ವಾರ್ಷಿಕ-೧೯೯೩**

ಸಂ: ಕರೀಗೌಡ ಬೀಚನಹಳ್ಳಿ

ಪುಟ: xii+೪೦೪, ವರ್ಷ: ೧೯೯೫, ರೂ: ೯೦.೦೦

ಪರಿವಿಡಿ

೧. ಅನುಭವದ ಆಗು-ಹೋಗು

೨. ಅಭಿವ್ಯಕ್ತಿಯ ಹುಡುಕಾಟ

೩. ಅಂದು ಇಂದು ಜೋಡಿಸುವ ನೆನಪು

೪. ಸಂಕೀರ್ಣ

ಕನ್ನಡ ವಾರ್ಷಿಕ ೧೯೯೩ರಲ್ಲಿ ಮುಖ್ಯವಾಗಿ ೪ ಭಾಗಗಳಿವೆ. ಮೊದಲನೆಯ ಭಾಗವು ಕರ್ನಾಟಕದ ವಿದ್ಯಮಾನಗಳು, ಶೈಕ್ಷಣಿಕ ಪ್ರಮುಖ ಸಂಗತಿಗಳು ಹಾಗೂ ಸಾಂಸ್ಕೃತಿಕ ಅನುಭವದ ಆಗುಹೋಗುಗಳನ್ನು ಒಳಗೊಂಡಿದೆ. ಎರಡನೇ ಭಾಗವು ಚಿತ್ರಕಲೆ, ರಂಗಭೂಮಿ, ಕ್ರೀಡೆ ಹಾಗೂ ಸಾಹಿತ್ಯ ಪ್ರಕಾರಗಳ ಸಮೀಕ್ಷೆಯನ್ನು ಒಳಗೊಂಡಿದ್ದು, ಮೂರನೇ ಭಾಗದಲ್ಲಿ ಇತಿಹಾಸದ ಕೆಲವು ಅಪೂರ್ವ ನೆನಪುಗಳನ್ನು ವರ್ತಮಾನದ ಜತೆಗೆ ಜೋಡಿಸಲಾಗಿದೆ. ನಾಲ್ಕನೇ ಭಾಗದಲ್ಲಿ ಕನ್ನಡ ನಾಡು, ನುಡಿಗೆ ಸಂದ ಗೌರವ, ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಾಗೂ ಅಗಲಿದ ಗಣ್ಯರ ಕಿರುಪರಿಚಯವನ್ನು ದಾಖಲಿಸ ಲಾಗಿದೆ.




**೬೩೪. ಕನ್ನಡ ವಾರ್ಷಿಕ ೧೯೯೪**

ಸಂ: ರಹಮತ್ ತರೀಕೆರೆ

ಪುಟ: xiv+, ವರ್ಷ: ೧೯೯೫, ರೂ: ೯೦.೦೦

ಪರಿವಿಡಿ

೧. ವಿದ್ಯಮಾನ-೧೯೯೪

೨. ಸಾಧನೆ

೩. ಅಭಿವ್ಯಕ್ತಿ

೪. ನೆನಪು

*ಈ* ಕೃತಿಯಲ್ಲಿ, ೧೯೯೪ರ ಒಂದು ವರ್ಷದ ಅವಧಿಯಲ್ಲಿ ಕನ್ನಡಕ್ಕೆ, ಕರ್ನಾಟಕಕ್ಕೆ ಸಂಬಂಧಿಸಿ ದಂತೆ ಘಟಿಸಿದ ಮುಖ್ಯ ಆಗುಹೋಗುಗಳನ್ನೆಲ್ಲ ಸಾಂಸ್ಕೃತಿಕ ಆಯಾಮದಲ್ಲಿ ವಿಶ್ಲೇಷಿಸ ಲಾಗಿದೆ.

**೬೩೫. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೧ : ಭಾಷೆ**

ಸಂ: ಕೆ.ವಿ.ನಾರಾಯಣ ಮತ್ತು ಇತರರು

ಪುಟ: x+೩೮೮, ವರ್ಷ: ೨೦೦೦, ರೂ: ೩೦೦.೦೦

ಪರಿವಿಡಿ

೧. ನಮ್ಮ ತಿಳಿವಿನಲ್ಲಿ ಭಾಷೆ

೨. ಭಾಷೆಯೆಂಬ ಕನ್ನಡಿ

೩. ಭಾಷೆಯ ರಚನೆ

೪. ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದು

೫. ಓದು, ಬರಹ

೬. ಸಂಕೇತ ಭಾಷೆ

೭. ಬಾಷೆಯ ಕಲಿಕೆ

೮. ಭಾಷೆ, ಮೆದುಳು, ವಿಕಲತೆ

೯. ಲೋಕದ ಭಾಷೆಗಳು

೧೦. ಲೋಕದಲ್ಲಿ ಭಾಷೆಗಳು




ಇದು ಭಾಷೆಯನ್ನು ಕುರಿತ ವಿಶ್ವಕೋಶ. ನಮ್ಮ ಅತಿಸಾಮಾನ್ಯ ವ್ಯವಹಾರಗಳಿಂದ ಹಿಡಿದು ಅಮೂರ್ತವೂ ಅತಿ ಗಹನವೂ ಆದ ನೆಲೆಗಳವರೆಗೆ ಭಾಷೆಯ ವ್ಯಾಪ್ತಿಯಿದೆ. *ಈ* ಭಾಷೆಯ ವ್ಯಾಪಕ ರೂಪವನ್ನು ಅರಿಯುವುದಕ್ಕಾಗಿ ಹಾಗೂ ಭಾಷಾತಜ್ಞರಲ್ಲದವರಿಗೂ ಭಾಷಾ ಲೋಕದ ಅದ್ಭುತವನ್ನು ಪರಿಚಯಿಸುವ ಉದ್ದೇಶವನ್ನು ಮುಂದಿಟ್ಟುಕೊಂಡು *ಈ* ವಿಶ್ವಕೋಶವನ್ನು ರೂಪಿಸಲಾಗಿದೆ.

**೬೩೬. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೧ : ಭಾಷೆ (ಪರಿಷ್ಕೃತ ಆವೃತ್ತಿ)**

ಸಂ: ಕೆ.ವಿ.ನಾರಾಯಣ ಮತ್ತು ಇತರರು

ಪುಟ: x+೩೮೮, ವರ್ಷ: ೨೦೦೭, ರೂ: ೩೦೦.೦೦

ಪರಿವಿಡಿ

೧. ನಮ್ಮ ತಿಳಿವಿನಲ್ಲಿ ಭಾಷೆ
೨. ಭಾಷೆಯೆಂಬ ಕನ್ನಡಿ
೩. ಭಾಷೆಯ ರಚನೆ
೪. ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದು
೫. ಓದು, ಬರಹ
೬. ಸಂಕೇತ ಭಾಷೆ
೭. ಬಾಷೆಯ ಕಲಿಕೆ
೮. ಭಾಷೆ, ಮೆದುಳು, ವಿಕಲತೆ
೯. ಲೋಕದ ಭಾಷೆಗಳು
೧೦. ಲೋಕದಲ್ಲಿ ಭಾಷೆಗಳು

ಇದು ಭಾಷೆಯನ್ನು ಕುರಿತ ವಿಶ್ವಕೋಶ. ನಮ್ಮ ಅತಿಸಾಮಾನ್ಯ ವ್ಯವಹಾರಗಳಿಂದ ಹಿಡಿದು ಅಮೂರ್ತವೂ ಅತಿ ಗಹನವೂ ಆದ ನೆಲೆಗಳವರೆಗೆ ಭಾಷೆಯ ವ್ಯಾಪ್ತಿಯಿದೆ. *ಈ* ಭಾಷೆಯ ವ್ಯಾಪಕ ರೂಪವನ್ನು ಅರಿಯುವುದಕ್ಕಾಗಿ ಹಾಗೂ ಭಾಷಾತಜ್ಞರಲ್ಲದವರಿಗೂ ಭಾಷಾಲೋಕದ ಅದ್ಭುತವನ್ನು ಪರಿಚಯಿಸುವ ಉದ್ದೇಶವನ್ನು ಮುಂದಿಟ್ಟುಕೊಂಡು *ಈ* ವಿಶ್ವಕೋಶವನ್ನು ರೂಪಿಸಲಾಗಿದೆ.

**೬೩೭. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೨ : ಕರಕುಶಲ ಕಲೆಗಳು**

ಸಂ: ಕರೀಗೌಡ ಬೀಚನಹಳ್ಳಿ ಮತ್ತು ಇತರರು

ಪುಟ: xii+೪೯೪, ವರ್ಷ: ೨೦೦೦, ರೂ: ೩೦೦.೦೦

ಪರಿವಿಡಿ

೧. ಕರಕುಶಲ ಕಲೆಗಳ ಪರಂಪರೆ ಮತ್ತು ಇತಿಹಾಸ
೨. ಅಲಂಕರಣ ಸಂಬಂಧಿ ಕರಕುಶಲ ಕಲೆಗಳು
೩. ಆರಾಧನಾ ಸಂಬಂಧಿ ಕರಕುಶಲ ಕಲೆಗಳು
೪. ಗೃಹೋಪಯೋಗಿ ಕರಕುಶಲ ಕಲೆಗಳು
೫. ಮನರಂಜನಾ ಸಂಬಂಧಿ ಕರಕುಶಲ ಕಲೆಗಳು
೬. ವ್ಯವಸಾಯ ಸಂಬಂಧಿ ಕರಕುಶಲ ಕಲೆಗಳು

ಕರಕುಶಲ ಕಲೆಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿ *ಈ* ಗ್ರಂಥದಲ್ಲಿದೆ. ಇಲ್ಲಿನ ಅನೇಕ ಲೇಖನಗಳು ಮಾನವನ ಬದುಕಿನ ಅವಿಭಾಜ್ಯ ಅಂಗವಾದ ಕರಕುಶಲ ವಸ್ತುಗಳ ಸೃಷ್ಟಿಯ ಬಗ್ಗೆ ಹಾಗು ಅದನ್ನು ಬಳಸುವ ಸಮುದಾಯದ ಬಗ್ಗೆ ಮತ್ತು ಆ ಕರಕುಶಲ ವಸ್ತುಗಳ ಸಮಗ್ರ ವಿವರಗಳ ಬಗ್ಗೆಯೇ ಇದ್ದು ಆರು ಅಧ್ಯಾಯಗಳಲ್ಲಿ ಅವು ಹರಡಿಕೊಂಡಿವೆ. *ಈ* ಗ್ರಂಥದಲ್ಲಿರುವ ಒಟ್ಟು ಅಧ್ಯಾಯಗಳು ಆರು. ಅವು ೧. ಕರಕುಶಲ ಕಲೆಗಳ ಪರಂಪರೆ ಮತ್ತು ಇತಿಹಾಸ ೨. ಅಲಂಕರಣ ಸಂಬಂಧಿ ಕರಕುಶಲ ಕಲೆಗಳು ೩. ಆರಾಧನಾ ಸಂಬಂಧಿ ಕರಕುಶಲ ಕಲೆಗಳು ೪. ಗೃಹೋಪಯೋಗಿ ಸಂಬಂಧಿ ಕರಕುಶಲ ಕಲೆಗಳು ೫. ಮನರಂಜನಾ ಸಂಬಂಧಿ ಕರಕುಶಲ ಕಲೆಗಳು ೬. ವ್ಯವಸಾಯ ಸಂಬಂಧಿ ಕರಕುಶಲ ಕಲೆಗಳು. ಕನ್ನಡ ಭಾಷೆಯನ್ನು ಬಲ್ಲವರಿಗೆ ಕರಕುಶಲ ಕಲೆಗಳ ಬಗ್ಗೆ ಸಮಗ್ರ ಜ್ಞಾನ ಮತ್ತು ಮಾಹಿತಿ ವ್ಯವಸ್ಥೆಯನ್ನು ಒದಗಿಸಬಲ್ಲ ಆಕರ ಗ್ರಂಥವಿದು.

**೬೩೮. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೩ : ಧರ್ಮ**

ಸಂ: ರಹಮತ್ ತರೀಕೆರೆ ಮತ್ತು ಇತರರು

ಪುಟ: xii+೫೨೦, ವರ್ಷ: ೨೦೦೦, ರೂ: ೩೦೦.೦೦

ಇಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಧಾರ್ಮಿಕ ನಾಯಕರ ಮತ್ತು ವಿದ್ವಾಂಸರ ಜಡ ವಿಶ್ಲೇಷಣೆಗಿಂತ ಹಾಗೂ ವಿಚಾರವಾದಿಗಳ ಸರಳ ನಿರಾಕರಣೆಗಿಂತ ಭಿನ್ನವಾಗಿ ಬಹು ಆಯಾಮಗಳಿಂದ ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿದೆ. *ಈ* ಹಿನ್ನೆಲೆಯಲ್ಲಿ ಇಲ್ಲಿನ ಲೇಖನಗಳು ವಸಾಹತುಶಾಹಿಯ ಅಹಂಕಾರ, ವಿಚಾರವಾದದ ಸರಳ ನಿರಾಕರಣ, ಕ್ಲಾಸಿಕಲ್ ವಾದದ ಶಿಷ್ಟತೆ, ದೇಶಿವಾದದ ವಿಮರ್ಶಾಹೀನತೆ ಮುಂತಾದ ತಾತ್ವಿಕ ಮಿತಿಗಳನ್ನು ದಾಟಿ, ಧರ್ಮಗಳ ಮೇಲಿನ ಚಾರಿತ್ರಿಕ, ವರ್ತಮಾನಿಕ ನೋಟಗಳನ್ನು ತುಂಬಿಕೊಡುತ್ತವೆ.

**೬೩೯. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೪ : ಚರಿತ್ರೆ**

ಸಂ: ತಂಬಂಡ ವಿಜಯ್ ಪೂಣಚ್ಚ ಮತ್ತು ಇತರರು

ಪುಟ: xii+೯೨೪, ವರ್ಷ: ೨೦೦೧, ರೂ: ೭೫೦.೦೦

ಪರಿವಿಡಿ

೧. ಚರಿತ್ರೆ ರಚನಾಶಾಸ್ತ್ರ ಸಿದ್ಧಾಂತ ಮತ್ತು ಅಧ್ಯಯನ ವಿಧಾನದ ಮತ್ತು ಹೊಸ ಆಯಾಮಗಳು
೨. ಭೂಮಿಯ ಚರಿತ್ರೆ
೩. ಏಷ್ಯಾ
೪. ಆಫ್ರಿಕಾ
೫. ಯೂರೋಪ್
೬. ಅಮೇರಿಕಾ

ಪ್ರಸ್ತುತ ವಿಶ್ವಕೋಶವು ಪ್ರಾಚೀನ ಮತ್ತು ಮಧ್ಯಯುಗೀನ ಚರಿತ್ರೆಗಳಿಗೆ ಸಂಬಂಧಿಸಿದಂತೆ ಅನೇಕ ವಿವರಗಳನ್ನು ಚರ್ಚಿಸುತ್ತಲೆ ಬಹುತೇಕವಾಗಿ ಆಧುನಿಕ ಚರಿತ್ರೆಯನ್ನು ಪ್ರಮುಖವಾಗಿ ವಿಶ್ಲೇಷಿಸಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬೇರೆ ಬೇರೆ ಖಂಡಗಳ ಅನೇಕ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿದ ಹಾಗು ಆ ವಸಾಹತುಶಾಹಿ ಸರಕಾರಗಳಿಗೆ ವಿರೋಧವಾಗಿ ಜನಾಂದೋಲಗಳನ್ನು ಸಂಘಟಿಸಿದ ಸ್ಥಳೀಯರ ರಾಷ್ಟ್ರೀಯ ಹೋರಾಟಗಳ ಮತ್ತು ಪ್ರತಿಕ್ರಿಯೆಗಳ ಪ್ರಕ್ರಿಯೆಯನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. *ಈ* ವಿಶ್ವಕೋಶದಲ್ಲಿ ಒಟ್ಟು ಒಂಬತ್ತು ಭಾಗಗಳಿವೆ. ಅವು ೧. ಚರಿತ್ರೆ ರಚನಾಶಾಸ್ತ್ರ, ಸಿದ್ಧಾಂತ ಮತ್ತು ಅಧ್ಯಯನ ವಿಧಾನದ ಹೊಸ ಆಯಾಮಗಳು ೨. ಭೂಮಿಯ ಚರಿತ್ರೆ ೩. ಏಷ್ಯಾ ಚರಿತ್ರೆ ೪. ಆಫ್ರಿಕಾ ಚರಿತ್ರೆ ೫. ಯುರೋಪ್ ಚರಿತ್ರೆ ೬. ಅಮೆರಿಕ ಚರಿತ್ರೆ ೭. ಆಸ್ಟ್ರೇಲಿಯಾ ಶಾಂತ ಮಹಾಸಾಗರದ ದ್ವೀಪಗಳು, ೮. ಭಾರತ ಉಪಖಂಡ ಮತ್ತು ೯. ಕರ್ನಾಟಕದ ಹೋರಾಟ, ಚಳುವಳಿ, ಗಡಿ ಜಲವಿವಾದಗಳು. *ಈ* ವಿಶ್ವಕೋಶವು ಇತರ ಸಾಮಾನ್ಯ (ಜನರಲ್) ವಿಶ್ವಕೋಶಗಳ ಮಾದರಿಗಳಿಗಿಂತ ಅನೇಕ ಬಗೆಯಲ್ಲಿ ಭಿನ್ನವಾಗಿದ್ದು, ಇಲ್ಲಿ 'ಚರಿತ್ರೆ' ಎನ್ನುವ ವಿಚಾರದ ಬುನಾದಿಯಿಂದ ಚರಿತ್ರೆಯು ಬೇರೆ ಬೇರೆ ಕಾಲಘಟ್ಟಗಳಲ್ಲಿ ಕಂಡುಕೊಂಡ ಏರಿಳಿತಗಳನ್ನು ವಿವರಿಸಲಾಗಿದೆ. ಭಾರತ ಉಪಖಂಡ ಹಾಗೂ ಏಕೀಕರಣೋತ್ತರ ಕರ್ನಾಟಕದ ಚರಿತ್ರೆಗಳಿಗೆ ಸಂಬಂಧಿಸಿದಂತೆ ಇಲ್ಲಿ ಪ್ರತ್ಯೇಕವಾದ ಭಾಗಗಳನ್ನು ಮಾಡಿ ಅವುಗಳನ್ನು ವಿವರವಾಗಿ ಚರ್ಚಿಸಲಾಗಿದೆ.

**೬೪೦. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೫ : ಜೀವಜಗತ್ತು**

ಸಂ: ಎಚ್.ಎಸ್. ಶ್ರೀಮತಿ

ಪುಟ: xii+೪೨೦, ವರ್ಷ: ೨೦೦೨, ರೂ: ೩೦೦.೦೦

ಜೀವವಿಜ್ಞಾನಗಳ ಜಗತ್ತಿನ ಚೌಕಟ್ಟು ಅಖಂಡ ಜಗತ್ತಿನ ಚೌಕಟ್ಟಿನಷ್ಟೇ ವಿಸ್ತಾರವುಳ್ಳದ್ದು. *ಈ* ಜಗತ್ತು ಹುಟ್ಟಿದಂದಿನಿಂದ ಇಲ್ಲಿಯವರೆಗೆ ಅದು ತಳೆದ ರೂಪ, ಪಡೆದ ಸ್ವರೂಪ, ದಕ್ಕಿಸಿಕೊಂಡ ವೈವಿಧ್ಯ, ವೈಚಿತ್ರ ಮತ್ತು ಅದ್ಭುತಗಳು ಹಲವು. ಜೀವಿಗಳು ಕ್ರಮಿಸಿ ಬಂದ ಲಕ್ಷಾಂತರ ವರ್ಷಗಳ ವಿಕಾಸದ ಹಾದಿಗಳು ನಮಗೆ ದಿಗ್ಭ್ರಮೆ ಹುಟ್ಟಿಸುವಂತಹದ್ದು. *ಈ* ವಿಶ್ವಕೋಶದಲ್ಲಿ ಜೀವನದ ಉಗಮ, ಜೀವಕೋಶ-ಜೀವಸಾಮ್ರಾಜ್ಯ ಪೋಷಣೆ, ಸಸ್ಯಜೀವ ಪ್ರಕ್ರಿಯೆಗಳು, ಮಾನವನ ಅನುವಂಶೀಯತೆ, ಪರಿಸರಶಾಸ್ತ್ರ, ಆರ್ಥಿಕತೆ ಮುಂತಾದ ಹತ್ತು ವಿವರಣಾ ಘಟಕಗಳಿವೆ. ಜೀವ ಜಗತ್ತಿನ ವಿಸ್ತೃತ ಜ್ಞಾನವನ್ನು *ಈ* ಕೋಶ ಉಣಬಡಿಸುತ್ತದೆ.

**೬೪೧. ಕರ್ನಾಟಕ ಜನಪದ ಕಲೆಗಳ ಕೋಶ**

ಸಂ: ಹಿ.ಚಿ.ಬೋರಲಿಂಗಯ್ಯ

ಪುಟ: xxiv+೨೪+೩೩೬, ವರ್ಷ: ೧೯೯೬, ರೂ: ೩೦೦.೦೦




ಕರ್ನಾಟಕದಲ್ಲಿ ಆಚರಿಸಲ್ಪಡುತ್ತಿರುವ ಜನಪದ ಕಲೆಗಳು, ಆ ಕಲೆಗಳ ಆರಾಧನೆ, ಆಚರಣೆ, ನಂಬಿಕೆಗಳ ಬಗ್ಗೆ *ಈ* ಕೋಶದಲ್ಲಿ ಸಮಗ್ರ ಮಾಹಿತಿಗಳಿವೆ. ಕರ್ನಾಟಕದ ಕರಾವಳಿ, ಮಲೆನಾಡು, ಬಯಲುಸೀಮೆಗಳಲ್ಲಿನ ಆರಾಧನಾ ಕಲೆಗಳನ್ನು *ಈ* ಕೋಶದಲ್ಲಿ ವ್ಯವಸ್ಥಿತವಾಗಿ ದಾಖಲಿಸಲಾಗಿದ್ದು, ಅವು ಮಾರಿ ಆರಾಧನೆ, ನಾಗಾರಾಧನೆ, ಭೂತಾರಾಧನೆ, ವೀರಭದ್ರನ ಆರಾಧನೆ, ಯಲ್ಲಮ್ಮನ ಆರಾಧನೆ, ಮಲೆಮಾದೇಶ್ವರ-ಮಂಟೇಸ್ವಾಮಿ ಆರಾಧನೆ, ಮೈಲಾರಲಿಂಗನ ಆರಾಧನೆ, ಮೊಹರಂ ಆರಾಧನೆ, ಸಮೃದ್ಧಿ ಫಲವಂತಿಕೆಗಾಗಿ ಆಚರಣೆಗಳು ಹಾಗು ವಿಶೇಷ ಜನವರ್ಗಗಳ ಮತ್ತು ಬುಡಕಟ್ಟುಗಳ ಆಚರಣಾ ಕಲೆ ಇತ್ಯಾದಿ ವಿಭಾಗಗಳಲ್ಲಿ ಸಂಕಲಿಸಲ್ಪಟ್ಟಿವೆ. ಕರ್ನಾಟಕದ ಸುಮಾರು ಇನ್ನೂರು ಜನಪದ ಕಲೆಗಳ ಬಗೆಗೆ ಸವಿವರವಾದ ಸಂಶೋಧನ ಸ್ವರೂಪದ ಬರಹಗಳ ಸಂಕಲನವಿದು. ಕೋಶದಲ್ಲಿನ ಅಪೂರ್ವ ಛಾಯಾಚಿತ್ರಗಳು ಗ್ರಂಥದ ಮೌಲಿಕತೆಯನ್ನು ಹೆಚ್ಚಿಸಿವೆ.




**೬೪೨. ಕಿರಿಯರ ಕರ್ನಾಟಕ**

ಸಂ: ಎಲ್.ಎಸ್.ಶೇಷಗಿರಿರಾವ್

ಪುಟ: ೮೦೦, ವರ್ಷ: ೧೯೯೪, ರೂ: ೪೦೦.೦೦

ಪರಿವಿಡಿ

೧. ಕನ್ನಡ ನಾಡಿನ ಇತಿಹಾಸ
೨. ಕನ್ನಡನಾಡಿನ ಭಾಷೆ, ಸಾಹಿತ್ಯ
೩. ಕನ್ನಡ ನಾಡಿನ ಪತ್ರಿಕೋದ್ಯಮ
೪. ಕನ್ನಡ ನಾಡಿನ ಕೈಗಾರಿಕೆ, ಕೃಷಿ
೫. ಉದ್ಯೋಗ, ಜಾನಪದ
೬. ಶಿಕ್ಷಣ, ಆಧುನಿಕ ತಂತ್ರಜ್ಞಾನ
೭. ಚಲನಚಿತ್ರ
೮. ಸಾಂಸ್ಕೃತಿಕ ನಾಯಕ

ಯುವಪೀಳಿಗೆಗೆ ಕನ್ನಡ ನಾಡಿನ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಕಿರಿಯರ ಕರ್ನಾಟಕ ರೂಪ ತಳೆದಿದೆ. ೧೨ರಿಂದ ೧೭ವರ್ಷದ ಕಿರಿಯರನ್ನು ಗಮನದಲ್ಲಿರಿಸಿಕೊಂಡು *ಈ* ಸಂಪುಟವನ್ನು ಸಿದ್ಧಗೊಳಿಸಲಾಗಿದೆ. ನಮ್ಮ ನಾಡಿನ ಇತಿಹಾಸ, ಭಾಷೆ, ಸಾಹಿತ್ಯ, ಪತ್ರಿಕೋದ್ಯಮ, ಕೈಗಾರಿಕೆ, ಕೃಷಿ, ಉದ್ಯೋಗ, ಜಾನಪದ, ಶಿಕ್ಷಣ, ಆಧುನಿಕ ತಂತ್ರಜ್ಞಾನ, ಚಲನಚಿತ್ರ, ನಮ್ಮ ಸಾಂಸ್ಕೃತಿಕ ನಾಯಕರು ಮುಂತಾದ ಹಲವು ವಿಷಯಗಳ ಬಗೆಗೆ ಸರಳವೂ ಚೈತನ್ಯಪೂರ್ಣವೂ ಆದ ಭಾಷೆಯಲ್ಲಿ ವಿವರಗಳನ್ನು ದಾಖಲಿಸಲಾಗಿದೆ.

ಇಲ್ಲಿರುವ ಚಿತ್ರಗಳು ಕರ್ನಾಟಕದ ವೈವಿಧ್ಯಮಯ ಬದುಕನ್ನು ಕಣ್ಣಮುಂದೆ ತಂದು ನಿಲ್ಲಿಸುವಂತಹದ್ದು.

**೬೪೩. ಸಸ್ಯ ಸಂಪುಟ : ಕರ್ನಾಟಕ ರಾಜ್ಯಕೋಶ ೧**

ಸಂ: ಸಿ.ಡಿ.ಪಾಟೀಲ ಮತ್ತು ಇತರರು

ಪುಟ: xxiv+೬೧೨, ವರ್ಷ: ೨೦೦೧, ರೂ: ೫೦೦.೦೦

ಪರಿವಿಡಿ

೧. ಸ್ವಾಭಾವಿಕ ಸಸ್ಯಗಳು

೨. ಕೃಷಿ ಬೆಳೆಗಳು

*ಈ* ಗ್ರಂಥವು ಕರ್ನಾಟಕದಲ್ಲಿ ಬೆಳೆಯುವ ಹೂ ಬಿಡುವ ಸಸ್ಯಗಳ ಕನ್ನಡ ದಾಖಲೀಕರಣ ಹಾಗೂ ಕನ್ನಡ ಸಚಿತ್ರ ಸಸ್ಯಕೋಶವಾಗಿದೆ. *ಈ* ಗ್ರಂಥದಲ್ಲಿ ಸುಮಾರು ೩,೫೦೦ ಸ್ವಾಭಾವಿಕ ಬೆಳೆಯುವ ಹಾಗೂ ಸುಮಾರು ೬೫೦ ಕೃಷಿ ಮಾಡುವ ಸಸ್ಯ ನಮೂದುಗಳಿವೆ. ಸಸ್ಯ ಪ್ರಭೇದಗಳ ಬಗೆಗೆ ಹಾಗೂ ಕೃಷಿ ಬೆಳೆಗಳ ಬಗೆಗೆ ಒಂದೇ ಕಡೆ ಸಮಗ್ರವಾದ ಮಾಹಿತಿ ಇಲ್ಲಿ ಲಭ್ಯವಿದೆ.



**೬೪೪. ಪ್ರಾಣಿ ಪಕ್ಷಿ ಸಂಪುಟ : ಕರ್ನಾಟಕ ರಾಜ್ಯಕೋಶ ೨**

ಲೇ: ಹಾ.ಬ.ದೇವರಾಜ ಸರ್ಕಾರ ಮತ್ತು ಇತರರು

ಪುಟ: xvi೩೧೨, ವರ್ಷ: ೨೦೦೬, ರೂ: ೫೦೦.೦೦

ಪರಿವಿಡಿ

೧. ಪೈಸಸ್

೨. ಆಂಫಿಬಿಯ

೩. ರೆಪ್ಟೀಲಿಯ

೪. ಮ್ಯಾಮೆಲಿಯ

ಕರ್ನಾಟಕದ ಅಪರೂಪದ ಪ್ರಾಣಿ ಪ್ರಭೇದಗಳು ಪಶ್ಚಿಮ ಘಟ್ಟ ಪ್ರದೇಶದಲ್ಲಿ ವಿಶೇಷವಾಗಿ ವಾಸಿಸುತ್ತಿವೆ. ಇತ್ತೀಚಿನ ದಶಕಗಳಲ್ಲಿ ಪಶ್ಚಿಮ ಘಟ್ಟ ಪ್ರದೇಶದ ನೆರೆಯ ಪ್ರದೇಶಗಳಲ್ಲಿ ಬೃಹತ್ ಪ್ರಮಾಣದ ಔದ್ಯೋಗೀಕರಣ ನಡೆದಿರುವ ಕಾರಣಕ್ಕೆ *ಈ* ಪರಿಸರ ನಾಶದ ಜತೆ ಅಪೂರ್ವ ಜೀವಿ ಪ್ರಭೇದಗಳ ವಿನಾಶವೂ ಆಗುತ್ತಿದೆ. *ಈ* ಹಿನ್ನೆಲೆಯಲ್ಲಿ ನಾಶವಾಗುವ ಪ್ರಭೇದಗಳ ಹಾಗೂ ಅಲ್ಲಿ ಇರುವ ಹಾಗೂ ಇದ್ದಿರಬಹುದಾದ ಜೀವಿಪ್ರಭೇದಗಳ ವಿವರ ಸಂಗ್ರಹಿಸುವ ಪ್ರಯತ್ನ ಇಲ್ಲಿದೆ.

**೬೪೫. ಜನಸಮುದಾಯ ಸಂಪುಟ : ಕರ್ನಾಟಕ ರಾಜ್ಯಕೋಶ ೪**

ಸಂ: ಹೆಚ್.ಡಿ.ಪ್ರಶಾಂತ್

ಪುಟ: xiv+೧೪೦, ವರ್ಷ: ೨೦೦೦, ರೂ: ೧೫೦.೦೦

ಕರ್ನಾಟಕ ಜನಸಮುದಾಯಗಳ ಬಗ್ಗೆ ಕನ್ನಡದಲ್ಲಿ ಸಮಗ್ರ ಮಾಹಿತಿ *ಈ* ಆಕರ ಕೋಶದಲ್ಲಿ ಲಭ್ಯವಿದೆ. ಸ್ವಾತಂತ್ರ್ಯೋತ್ತರ ಭಾರತ ಕಂಡ ಎಲ್ಲ ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳು ಸುಮಾರು ೧೯೫೦ರ ಹೊತ್ತಿಗೆ ಕರ್ನಾಟಕದ ಜನಸಮುದಾಯಗಳನ್ನು ಯಾವ ಮಟ್ಟಕ್ಕೆ ತಂದು ನಿಲ್ಲಿಸಿದವು ಎಂಬುದನ್ನು ಇಲ್ಲಿ ದಾಖಲಿಸಲಾಗಿದೆ. ಎಲ್ಲ ಸಮುದಾಯಗಳನ್ನು ಅಕಾರಾದಿಯಲ್ಲಿ ವಿಂಗಡಿಸಲಾಗಿದೆ.
ಪ್ರಾಥಮಿಕ ಜ್ಞಾನ ಪೂರೈಕೆಯ ಪಠ್ಯವಾಗಿರುವುದರಿಂದ ಕರ್ನಾಟಕದ ಎಲ್ಲ ಸಮುದಾಯಗಳ ಬಗ್ಗೆ ಪುಟ್ಟ ಇತಿಹಾಸ, ಅವರ ಮುಖ್ಯ ಆಚರಣೆ, ಸಾಮಾಜಿಕ ಸ್ಥಾನಮಾನಗಳು, ಸ್ತ್ರೀಯರ ಸ್ಥಿತಿಗತಿಗಳು, ಸಾಂಸ್ಕೃತಿಕ ವಿಶಿಷ್ಟತೆಗಳು, ರಾಜಕೀಯ ಪ್ರಾಬಲ್ಯ ಮತ್ತು ಆಧುನಿಕ ಸೌಲಭ್ಯಗಳ ಬಳಕೆಯ ಕುರಿತಾಗಿ ಸಂಕ್ಷಿಪ್ತ ಮಾಹಿತಿಗಳನ್ನು ನೀಡಲಾಗಿದೆ.

**೬೪೬. ಭಾರತ ಸಮಾಜಕಾರ್ಯ ವಿಶ್ವಕೋಶ : ಸಂ.೧**

ಸಂ: ಎಚ್.ಎಂ.ಮರುಳಸಿದ್ದಯ್ಯ

ಪುಟ: xxviii+೫೨೦, ವರ್ಷ: ೧೯೯೪, ರೂ: ೬೦೦.೦೦ (೩ ಸಂಪುಟಗಳಿಗೆ)

*ಈ* ವಿಶ್ವಕೋಶ ೧೯೬೮ರಲ್ಲಿ ಪ್ರಕಟವಾದ 'ಎನ್‌ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ವರ್ಕ್ಸ್ ಇನ್ ಇಂಡಿಯಾ' ಎಂಬ ಆಂಗ್ಲ ಗ್ರಂಥದ ಕನ್ನಡ ಅನುವಾದ. *ಈ* ಸಂಪುಟದಲ್ಲಿ ಕಾರ್ಮಿಕ ಕಲ್ಯಾಣ, ಕಾರ್ಮಿಕ ಸಂಘಟನೆ, ಅಪರಾಧ, ಆರೋಗ್ಯ, ಶಿಕ್ಷಣ, ಆಹಾರ, ಕಲಬೆರಕೆ, ಉದ್ಯೋಗಸೇವೆ, ಕಾನೂನು ನೆರವು, ಕೇಂದ್ರ ಸರಕಾರದ ಆರೋಗ್ಯ ಪರಿಕ್ರಮ, ಗ್ರಾಮೀಣ ಆರೋಗ್ಯಸೇವೆ, ಜೀವವಿಮೆ, ಜೀತಪದ್ಧತಿ, ದೇವದಾಸಿಯರು, ದರೋಡೆ, ದೃಷ್ಟಿ-ದೈಹಿಕ ಊನಶಕ್ತರಿಗೆ ಉದ್ಯೋಗ, ನಗರ ಸಮುದಾಯಭಿವೃದ್ಧಿ, ನಿರುದ್ಯೋಗ ಇತ್ಯಾದಿ ಹತ್ತು ಹಲವು ವಿಷಯಗಳ ಬಗ್ಗೆ ವಿಪುಲ ಮಾಹಿತಿಗಳಿವೆ.



**೬೪೭. ವೈದ್ಯ ವಿಶ್ವಕೋಶ**

ಸಂ: ಪಿ.ಎಸ್.ಶಂಕರ್

ಪುಟ: xii+೪೮೪, ವರ್ಷ: ೧೯೯೫, ರೂ: ೩೫೦.೦೦

ಪರಿವಿಡಿ

೧. ಜೀವನದ ಉಗಮ ಮತ್ತು ಬೆಳವಣಿಗೆ

೨. ದೇಹ ರಚನೆ ಮತ್ತು ಕಾರ್ಯ

೩. ವೈದ್ಯಕೀಯ ಉಪಕರಣಗಳು

೪. ಪ್ರಸೂತಿ; ಸ್ತ್ರೀ ರೋಗಗಳು

೫. ತಳಿ ಸಂಬಂಧಿ ರೋಗಗಳು; ಪೋಷಣೆ ರೋಗಗಳು; ರಕ್ತ ರೋಗಗಳು

೬. ಸೋಂಕು ರೋಗಗಳು; ಪರಾವಲಂಬಿ ರೋಗಗಳು; ಪಚನಾಂಗ ರೋಗಗಳು

೭. *ಈ*ಲಿ-ಮೇದೋಜಿರಕ ರೋಗಗಳು; ಶಸ್ತ್ರವೈದ್ಯ ಕಾಯಿಲೆಗಳು; ಅಂತಃಸ್ರಾವಗ್ರಂಥ ರೋಗಗಳು

೮. ಹೃದಯ ರಕ್ತನಾಳ ರೋಗಗಳು; ಉಸಿರಾಟ ಮಂಡಲ ರೋಗಗಳು; ಮೂತ್ರ ಜನನಾಂಗ ವ್ಯವಸ್ಥೆಯ ರೋಗಗಳು

೯. ಸಂಪರ್ಕ, ಊತಕ, ಕೀಲು ಮತ್ತು ಮೂಳೆ ರೋಗಗಳು; ನರಮಂಡಲ ಕಾಯಿಲೆಗಳು; ಮನೋರೋಗಗಳು

೧೦. ಚರ್ಮರೋಗಗಳು; ಕಣ್ಣಿನ ರೋಗಗಳು; ಕಿವಿ, ಮೂಗು, ಗಂಟಲು ರೋಗಗಳು; ಪ್ರಥಮ ಚಿಕಿತ್ಸೆ

ಜೀವದ ಉಗಮ ಮತ್ತು ಬೆಳವಣಿಗೆ, ದೇಹ ರಚನೆ ಮತ್ತು ಅದರ ಕಾರ್ಯ, ದೇಹದ ಬೇರೆ ಬೇರೆ ಅಂಗಭಾಗಗಳು ಹಾಗೂ ಮನಸ್ಸಿನ ಆರೋಗ್ಯಕ್ಕೆ ಭಂಗ ತರುವ ರೋಗ ರುಜಿನಗಳ ಬಗ್ಗೆ ಜನಸಾಮಾನ್ಯರಲ್ಲಿ ತಿಳುವಳಿಕೆ ಹೆಚ್ಚಿಸುವ ವೈದ್ಯಕೀಯ ವಿಷಯಗಳ ವಿವರಣೆ *ಈ* ವಿಶ್ವಕೋಶದಲ್ಲಿದೆ.

**೬೪೮. ಶ್ರೀ ತತ್ತ್ವನಿಧಿ**

ಮೂಲ: ಮುಮ್ಮಡಿ ಕೃಷ್ಣರಾಜ ಒಡೆಯರ್

ಸಂ: ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಪುಟ: x+೨೪೮, ವರ್ಷ: ೧೯೯೩, ರೂ: ೩೫೦.೦೦, ೬೨ ವರ್ಣ, ೨೧೯ ಕಪ್ಪುಬಿಳುಪು ಚಿತ್ರಗಳು

ಶ್ರೀತತ್ತ್ವನಿಧಿಯು ಭಾರತೀಯ ಸಂಸ್ಕೃತಿಯ ಮುಖ್ಯ ವಿವರಗಳಿಗೆ ಕೈಗನ್ನಡಿಯಂತಿದೆ. *ಈ* ಸಚಿತ್ರ ವಿಶ್ವಕೋಶದ ಗ್ರಂಥಕಾರರು ಮೈಸೂರ ಅರಸ ಮುಮ್ಮಡಿ ಕೃಷ್ಣರಾಜ ಒಡೆಯರಾದರೆ, ಇಲ್ಲಿನ ಕಿರುವರ್ಣಚಿತ್ರಗಳನ್ನು ರಚಿಸಿದವರು ಅವರ ಓಲಗದಲ್ಲಿದ್ದ ಚಿತ್ರಕಾರರು. ಇಡೀ ನಾಡಿನ ಇತಿಹಾಸದಲ್ಲಿಯೇ ಇದೊಂದು ಅಪೂರ್ವಗ್ರಂಥ. ಇತರ ದೇಶ ಭಾಷೆಯಲ್ಲಿ ಇಂಥ ಪ್ರಯತ್ನ *ಈ*ವರೆಗೆ ನಡೆದಿಲ್ಲ. *ಈ* ಕೃತಿ ಗ್ರಂಥಕಾರರ ಬದುಕು, ವ್ಯಕ್ತಿತ್ವ, ಒಲವು, ನಿಲುವುಗಳು ಅವರ ಕಾಲದ ಸ್ವಭಾವ, ಸಂಸ್ಕೃತಿಯ ನೆಲೆ ಮತ್ತು ಗ್ರಂಥದ ಸ್ವರೂಪ ಇದನ್ನು ಕುರಿತು ವಿಸ್ತಾರವಾದ ವಿವೇಚನೆಯನ್ನು ಒದಗಿಸುತ್ತದೆ. ಇಲ್ಲಿನ ರಾಗಮಾಲಾ ಚಿತ್ರಗಳು ಗ್ರಂಥದ ಮೌಲಿಕತೆಯನ್ನು ಹೆಚ್ಚಿಸಿವೆ. ಆಗಮ, ಶಿಲ್ಪ, ಜ್ಯೋತಿಷ್ಯ, ಸಂಗೀತ, ಕ್ರೀಡೆ ಮೊದಲಾದ ಹಲವು ವಿಚಾರಗಳಲ್ಲಿ *ಈ* ಗ್ರಂಥದಲ್ಲಿ ಹರಡಿಕೊಂಡಿವೆ.

**೬೪೯. SRI-TATTVA-NIDHI (VOL.1)**

Ed By : S.K.Ramachandra Rao

p.p: 278, 1993, Rs.350.00

One of the major contributions of Karnataka to Indian Culture is the remarkable and encyclopaedic work 'Sri-tattva nidhi' prepared by Krishna Raja wodeyar. This Book in kannada is a compilation of passages from Classical Sanskrit sources pertaining to diverse subjects like iconography of our pantheon, places of worship, scriptural divisions, literary pursuits, music, dance, astrology, and indoor games. It is a monument of the ruler's versatile interests and broad-based education.

## ೩.೨

# ವೈದ್ಯಕೀಯ ವಿಜ್ಞಾನ-ಆರೋಗ್ಯಶಾಸ್ತ್ರ




**೬೫೦. ಆರೋಗ್ಯ ಸಮಸ್ಯೆಗಳ ನಿವಾರಣೆಗೆ ಪರಿಪೂರ್ಣ ಜೀವನಶೈಲಿ**

ಲೇ: ಎ.ಎಸ್.ನಾಗರಾಜ್

ಪುಟ: viii+೨೦೪, ವರ್ಷ: ೧೯೯೫, ರೂ: ೮೦.೦೦

ಪರಿವಿಡಿ

೧. ಪ್ರಸ್ತಾವನೆ, ಆಹಾರ

೨. ಮಾನಸಿಕ ಸ್ಥಿತಿ

೩. ವ್ಯಾಯಾಮ, ಧ್ಯಾನ

೪. ಕಾಯಿಲೆಗಳು, ಪರಿಹಾರಗಳು

ನಮ್ಮ ಆರೋಗ್ಯ ಚೆನ್ನಾಗಿರಬೇಕಾದರೆ ದೇಹಕ್ಕೆ ಆವಶ್ಯಕವಾದ ಎಲ್ಲ ಆಹಾರಾಂಶಗಳನ್ನು ಒದಗಿಸುವ ಆಹಾರ ವ್ಯವಸ್ಥೆ ಬೇಕು. ಇವುಗಳನ್ನು ಅರಗಿಸಿಕೊಳ್ಳುವುದಕ್ಕೆ ಸಾಕಷ್ಟು ವ್ಯಾಯಾಮ ಬೇಕು. ಇವೆಲ್ಲವನ್ನೂ ನಮಗೆ ಕೊಡುವ ಜೀವನಶೈಲಿಯನ್ನು ರೂಪಿಸಿಕೊಳ್ಳುವುದಕ್ಕೆ ಆಧುನಿಕ ಆಹಾರ ವಿಜ್ಞಾನ, ವ್ಯಾಯಾಮ ವಿಜ್ಞಾನ ಮತ್ತು ಯೋಗಾಸನಗಳು, ಮನೋವಿಜ್ಞಾನ ಧ್ಯಾನ ಪ್ರಾಣಾಯಾಮ ಇವೆಲ್ಲ ಅವಶ್ಯ. ಇಂತಹ ಜೀವನ ಶೈಲಿಯನ್ನು ಹೊಲಿಸ್ಟಿಕ್ ಜೀವನ ಶೈಲಿ ಎಂದು ಕರೆಯಲಾಗಿದ್ದು, *ಈ* ಜೀವನ ಶೈಲಿಯ ಬಗ್ಗೆ ಪರಿಚಯಿಸುವುದು *ಈ* ಗ್ರಂಥದ ಉದ್ದೇಶ.

**೬೫೧. ಗುದ ಮತ್ತು ನೆಟ್ಟಗರುಳುಗಳ ಸಾಮಾನ್ಯ ವ್ಯಾಧಿಗಳು**

ಲೇ: ವಿಲಾಸ ಬಿ.ನಾಯಿಕವಾಡಿ

ಪುಟ: iv+೧೯, ವರ್ಷ: ೧೯೯೬, ರೂ: ೨.೦೦

ಗುದ ಹಾಗೂ ನೆಟ್ಟಗರುಳುಗಳಲ್ಲಿ ಕಾಣಿಸಿಕೊಳ್ಳುವ ಹಲವು ವ್ಯಾಧಿಗಳ ಬಗ್ಗೆ ಹಾಗೂ ಅವುಗಳಲ್ಲಿ ಮುಖ್ಯವಾಗಿರುವ ಮೂಲವ್ಯಾಧಿಯ ಬಗ್ಗೆ *ಈ* ಕಿರುಪುಸ್ತಕದಲ್ಲಿ ವಿವರವಾದ ಮಾಹಿತಿಗಳಿವೆ.




**೬೫೨. ಜೈನ ವೈದ್ಯಕೀಯ ಪರಂಪರೆ**

ಲೇ: ಧನ್ಯಕುಮಾರ ಇಜಾರಿ

ಪುಟ: X+೩೨೨, ವರ್ಷ: ೨೦೦೪, ರೂ: ೧೫೦.೦೦

ಪರಿವಿಡಿ

೧. ಜೈನಾಯುರ್ವೇದ ಹುಟ್ಟಿದ ಬಗೆ; ವೈದ್ಯಕೀಯ ಶಾಸ್ತ್ರಕ್ಕೆ ಜೈನರ ಕೊಡುಗೆ

೨. ಜೈನಾಯುರ್ವೇದದ ವೈಶಿಷ್ಟ್ಯಗಳು; ಜೈನ ಆಯುರ್ವೇದ ಪರಂಪರೆ

೩. ಕಲ್ಯಾಣಕಾರಕ ಒಂದು ಅಧ್ಯಯನ

೪. ಖಗೇಂದ್ರಮಣಿ ದರ್ಪಣ

೫. ಶರೀರ ರಚನೆ; ಆರೋಗ್ಯ ಜೀವನ; ಋತುಚರ್ಯೆ; ಮಗುವಿನ ಪಾಲನೆ ಪೋಷಣೆ

೬. ಆಯುರ್ವೇದ ಮೂಲ ಸಿದ್ಧಾಂತಗಳು; ದ್ರವ್ಯಗಳ ರಸ, ವೀರ್ಯ, ವಿಪಾಕ, ಪ್ರಭಾವಗಳು

೭. ಕೆಲವು ಉಪಯುಕ್ತ ಮನೆ ಮದ್ದುಗಳು; ದ್ರವ್ಯಗುಣ, ಔಷಧ ತಯಾರಿಕೆ ಹಾಗೂ ಪತ್ಯಕ್ರಮಗಳು

೮. ರಸೌಷಧಗಳು; ರೋಗಕಾರಣಗಳು ಹಾಗೂ ಪ್ರತಿಬಂಧಕೋಪಾಯಗಳು

೯. ರೋಗ ನಿಧಾನ ಹಾಗೂ ರೋಗಿ ಪರೀಕ್ಷೆ; ಚಿಕಿತ್ಸೆಯ ಮೂಲಸೂತ್ರಗಳು

೧೦. ಸಾಮಾನ್ಯ ರೋಗಗಳ ಚಿಕಿತ್ಸೆ

ಜೈನ ಪರಂಪರೆಯ ಆಯುರ್ವೇದ ಪದ್ಧತಿ, ಅದರ ಸಂಶೋಧನಾತ್ಮಕ ಇತಿಹಾಸ, ಜಗತ್ತಿನ ವೈದ್ಯಕೀಯ ಶಾಸ್ತ್ರಕ್ಕೆ ಜೈನ ಧನ್ವಂತರಿಗಳು ನೀಡಿರುವ ಕೊಡುಗೆ, ಜೈನ ಆಯುರ್ವೇದ ಪರಂಪರೆಯ ಪ್ರಮುಖ ಗ್ರಂಥಗಳ ವಿಶ್ಲೇಷಣೆ ಹಾಗೂ ಆ ಗ್ರಂಥಗಳಲ್ಲಿನ ಆಯುರ್ವೇದ ಮೂಲಸಿದ್ಧಾಂತಗಳ ಮೂಲಕ ಕಂಡುಕೊಳ್ಳಲಾದ ರೋಗಕಾರಣಗಳು, ಪ್ರತಿಬಂಧಕೋಪಾಯಗಳು, ಮನೆಮದ್ದು, ರಸೌಷಧಗಳು, ರೋಗ ನಿಧಾನ, ರೋಗ ಪರೀಕ್ಷೆ ಹಾಗೂ ಚಿಕಿತ್ಸೆಯ ಮೂಲಸೂತ್ರಗಳ ಬಗ್ಗೆ ಸಮಗ್ರ ವಿವರಣೆ, ಸವಿವರವಾದ ಮಾಹಿತಿ *ಈ* ಕೃತಿಯಲ್ಲಿದೆ. ಜೈನ ವೈದ್ಯಕೀಯ ಪರಂಪರೆಯ ಬಗ್ಗೆ ಕನ್ನಡದಲ್ಲಿ ಬಂದಿರುವ ಅಪರೂಪದ ಗ್ರಂಥವಿದು.

**೬೫೩. ದೇಹಕ್ರಿಯೆಗಳ ಸೋಜಿಗಗಳು**

ಲೇ: ವಸಂತ ಅ ಕುಲಕರ್ಣಿ

ಪುಟ: ii+೩೪, ವರ್ಷ: ೧೯೯೪, ರೂ: ೧.೦೦

ದೇಹವೊಂದು ಸಂಕೀರ್ಣಮಯ ವಿಶ್ವ. ಯಾರೊಬ್ಬರ ಶಿಫಾರಸ್ಸಿಗಾಗಿ ಕಾಯದೆ ದೇಹದ ಅಂಗಗಳು ತಮ್ಮ ಪಾಡಿಗೆ ತಾವು ಕಾರ್ಯ ನಿರ್ವಹಿಸುತ್ತಿರುತ್ತವೆ. ಅಂತಹ ದೇಹದ ಕೆಲವು

ಅಂಗಗಳ ಕಾರ್ಯನಿರ್ವಹಣೆಯನ್ನು ಇಲ್ಲಿ ಪರಿಚಯಿಸಲಾಗಿದೆ. ಇಂಗ್ಲೀಷ್ ಪದಗಳಿಗೆ ಸಂವಾದಿಯಾಗಿ ಸರಳವಾದ ಹೊಸ ಕನ್ನಡ ಪದಗಳನ್ನು ಲೇಖಕರು ಇಲ್ಲಿ ಬಳಸಿದ್ದಾರೆ.




**೬೫೪. ಪ್ರಕೃತಿ ಜೀವನ**

ಲೇ: ಹೊ. ಶ್ರೀನಿವಾಸಯ್ಯ

ಪುಟ: xii+೮೪, ವರ್ಷ: ೨೦೦೮, ರೂ: ೬೦

ಪರಿವಿಡಿ

೧. ಆರೋಗ್ಯ; ಆಹಾರ; ನೀರು

೨. ಗಾಳಿ; ಸೂರ್ಯ; ಶೂನ್ಯ

೩. ತತ್ವಗಳು; ಜೀವಶಕ್ತಿ

೪. ಯೋಗಾಸನ; ಮಾನಸಿಕ ಆರೋಗ್ಯ

ಭಾರತೀಯ ಜೀವನ ಪದ್ಧತಿಗೆ ಅನುಗುಣವಾಗಿ ಪ್ರಕೃತಿ ಚಿಕಿತ್ಸಾ ವಿಧಾನವು ಮಾನ್ಯತೆಯನ್ನು ಪಡೆದಿದೆ. ಇದು ಆಹಾರ, ನೀರು, ಗಾಳಿ, ಸೂರ್ಯ ಮುಂತಾದ ಪ್ರಕೃತಿ ತತ್ವಗಳಿಂದ ವೈಧಾನಿಕ ರೂಪವನ್ನು ಪಡೆದಿದೆ. ಮಹಾತ್ಮಾಗಾಂಧೀಜಿಯವರು ಪ್ರಕೃತಿ ಚಿಕಿತ್ಸೆಯ ಕ್ರಮವನ್ನು ಅನುಸರಿಸುತ್ತಿದ್ದರು. *ಈ* ಚಿಕಿತ್ಸಾ ವಿಧಾನದ ಮೂಲಕ ಸಹಸ್ರಾರು ಜನ ಆರೋಗ್ಯವನ್ನು, ನೆಮ್ಮದಿಯನ್ನು ಪಡೆದಿದ್ದಾರೆ. *ಈ* ಎಲ್ಲ ಸಂಗತಿಗಳನ್ನು ಪ್ರಕೃತಿ ಜೀವನ ಗ್ರಂಥವು ನಮಗೆ ಮನವರಿಕೆ ಮಾಡಿಕೊಡುತ್ತದೆ. ಪ್ರಕೃತಿ ಚಿಕಿತ್ಸೆಯ ಮೂಲತತ್ವಗಳು ಹಾಗೂ ಅದರಿಂದ ಬರುವ ಸಂಪೂರ್ಣ ಆರೋಗ್ಯದ ಬಗೆಗಳನ್ನು *ಈ* ಗ್ರಂಥದಲ್ಲಿ ಸರಳವಾಗಿ ನಿರೂಪಿಸಲಾಗಿದೆ.

**೬೫೫. ಪ್ರಥಮ ಚಿಕಿತ್ಸೆ**

ಲೇ : ಎಚ್. ಗಿರಿಜಮ್ಮ

ಪುಟ: IV+೩೦, ವರ್ಷ: ೨೦೦೫, ರೂ: ೧೦.೦೦

ಪ್ರಾಣಾಪಾಯಾಗುವಂತಹ ಆಘಾತಗಳು ಸಂಭವಿಸಿದಾಗ ತಕ್ಷಣ ನೀಡಬೇಕಾದ ಪ್ರಥಮ ಚಿಕಿತ್ಸೆಗಳ ಬಗ್ಗೆ ಅತ್ಯಂತ ಸರಳವಾಗಿ ಮಾಹಿತಿಯನ್ನು ನೀಡುವಂತಹ ಉಪಯುಕ್ತ ಕಿರುಕೃತಿ ಇದು.

**೬೫೬. ಮನಸ್ಸು : ಹಲವು ಚಿಂತನೆಗಳು**

ಲೇ: ಸಿ.ಆರ್. ಚಂದ್ರಶೇಖರ್

ಪುಟ: XII+೧೧೬, ವರ್ಷ: ೨೦೦೩, ರೂ: ೫೦.೦೦

ಪರಿವಿಡಿ

೧. ಮನಸ್ಸು

೨. ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಮನಸ್ಸು

೩. ಭಾರತೀಯರ ದೃಷ್ಟಿಯಲ್ಲಿ ಮನಸ್ಸು

೪. ಜೀವಶಾಸ್ತ್ರದಲ್ಲಿ ಮನಸ್ಸು

೫. ಸ್ತ್ರೀ ಮನಸ್ಸು

೬. ಮನಸ್ಸಿನ ವಿಶೇಷ ಸಾಮರ್ಥ್ಯಗಳು

೭. ಮನಸ್ಸಿನ ಸಾಮರ್ಥ್ಯವನ್ನು ತಗ್ಗಿಸುವ ಅಂಶಗಳು

೮. ಮನಸ್ಸಿನ ನೆಮ್ಮದಿಯನ್ನು ಕಲುಕುವ ಅಂಶಗಳು ಹಾಗೂ ಅವುಗಳ ನಿವಾರಣೆ.

೯. ಭಾರತದಲ್ಲಿ ಮಾನಸಿಕ ಅಸ್ವಸ್ಥರ ಚಿಕಿತ್ಸೆ ಅಂದು-ಇಂದು-ಮುಂದು.

ಮನಸ್ಸನ್ನು ಅರಿಯುವ, ಅದರ ವಿವಿಧ ರೂಪ ಸ್ವರೂಪಗಳ ಕಾರಣವನ್ನು ವಿಶ್ಲೇಷಿಸುವ ಪ್ರಯತ್ನದ ಜತೆಗೆ ಇಂತಹ ವಿಸ್ಮಯಕಾರಿ ಮನಸ್ಸಿನ ಬಗ್ಗೆ ನಡೆದಿರುವ ಚಿಂತನೆಗಳನ್ನು *ಈ* ಕೃತಿಯಲ್ಲಿ ವಿವರಿಸಲಾಗಿದೆ.




**೬೫೭. ಯಶಸ್ಸು ಹಾಗೂ ನೆಮ್ಮದಿಯ ಬದುಕು**

ಲೇ: ಸಿ.ಆರ್.ಚಂದ್ರಶೇಖರ್

ಪುಟ: x+೯೦, ವರ್ಷ: ೨೦೦೭, ರೂ: ೬೦.೦೦

ಪರಿವಿಡಿ

೧. ಪ್ರಶ್ನೆಗಳು

೨. ಬದುಕಿಗೆ ಸವಾಲೆಸೆಯುವ ಅಂಶಗಳು

೩. ಸಾಮಾನ್ಯ ಮಾನಸಿಕ ಅಸ್ವಸ್ಥತೆಗಳು ಮತ್ತು ಅವುಗಳಿಗೆ ಪರಿಹಾರ

ಆಧುನಿಕ ಬದುಕು ಹಲವು ಬಗೆಯ ಜಂಜಡಗಳಿಗೆ, ಸಂಕೀರ್ಣತೆಗೆ ಒಳಗಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಯಶಸ್ಸು ಪಡೆಯಲು ಹೆಣಗುತ್ತಿದ್ದಾನೆ. ಯಶಸ್ಸು ಮತ್ತು ನೆಮ್ಮದಿಯ ಬದುಕು ಒಂದೆ ನಾಣ್ಯದ ಎರಡು ಮುಖಗಳು : *ಈ* ಎರಡು ಮುಖಗಳನ್ನು ಪಾರ್ಶ್ವ ಭಾಗಗಳನ್ನು ಇಡೀ ಪುಸ್ತಕ ಕೇಳುಗರ ಪ್ರಶ್ನೆಗಳ ಮುಖಾಂತರವೇ ವಿವರಿಸಲು ಪ್ರಯತ್ನಿವೆ.

**೬೫೮. ಸತ್ತಮೇಲೆ ಸಮಾಜಸೇವೆ**

ಲೇ: ಎಸ್.ಜಿ.ನಾಗಲೋಟಿಮಠ

ಪುಟ: ii+೧೮, ವರ್ಷ: ೧೯೯೩, ರೂ: ೧.೦೦

ವೃತ್ತಿಯಲ್ಲಿ ವೈದ್ಯರಾಗಿರುವ ಲೇಖಕರು, ವ್ಯಕ್ತಿಯ ಮರಣಾನಂತರ ದೇಹದಾನ ಮಾಡುವ ಮೂಲಕ ಸಮಾಜ ಸೇವೆ ಮಾಡುವುದರ ಬಗ್ಗೆ ಹಾಗೂ ಪ್ರಸ್ತುತ ಆ ಬಗ್ಗೆ ಜಾರಿಯಲ್ಲಿರುವ ಕಾನೂನುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

**೬೫೯. ಸಾಮಾನ್ಯ ಶಸ್ತ್ರವೈದ್ಯದ ಕಾಯಿಲೆಗಳು**

ಲೇ: ಎಚ್.ಡಿ.ಚಂದ್ರಪ್ಪಗೌಡ

ಪುಟ: xvi+೨೮೮, ವರ್ಷ: ೧೯೯೩, ರೂ: ೮೦.೦೦

ಶಸ್ತ್ರ ಚಿಕಿತ್ಸೆಯಿಂದ ಗುಣಪಡಿಸಬಹುದಾದ ಹಲವಾರು ಕಾಯಿಲೆಗಳ ಗುಣಲಕ್ಷಣ ಮತ್ತು ಚಿಕಿತ್ಸಾ ವಿಧಾನಗಳ ಸರಳ ವಿವರಣೆ *ಈ* ಪುಸ್ತಕದಲ್ಲಿದೆ. ತೀರಾ ಸಾಮಾನ್ಯ ಕಾಯಿಲೆಗಳ ಬಗೆಗೆ ತಿಳುವಳಿಕೆ ನೀಡುವುದರ ಜತೆಗೆ ಜಟಿಲ ಸಮಸ್ಯೆಗಳ ಬಗೆಗೂ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿದೆ.



## ೩೩

# ಶಾಸನಶಾಸ್ತ್ರ, ಪುರಾತತ್ವ



**೬೬೦. ಕನ್ನಡ ನಾಡಿನ ಶಾಸನಗಳ ಅಧ್ಯಯನ : ಕೆಲವು ಗ್ರಹಿಕೆಗಳು**

ಸಂ : ಸಿ. ನಾಗಭೂಷಣ

ಪುಟ : vi + ೩೮, ವರ್ಷ : ೨೦೦೯, ರೂ. ೧೦.೦೦

ಪರಿವಿಡಿ

೧. ಶಾಸನಗಳನ್ನು ಕುರಿತಾದ ಸಂಶೋಧನಾಧ್ಯಯನದ ಸ್ವರೂಪ
೨. ಕನ್ನಡ ನಾಡಿನಲ್ಲಿ ನಡೆದಿರುವ ಶಾಸನಗಳ ಅಧ್ಯಯನದ ಸಾಧ್ಯತೆಗಳ ಗ್ರಹಿಕೆ
೩. ಶಾಸನಗಳ ಸಾಂಸ್ಕೃತಿಕ ಸಂಶೋಧನೆಯ ತಾತ್ವಿಕ ಗ್ರಹಿಕೆಯ ವೈಶಿಷ್ಟ್ಯಗಳು
೪. ಶಾಸನಗಳ ಸಾಹಿತ್ಯಕ ಅಧ್ಯಯನದ ಕೆಲವು ತಾತ್ವಿಕ ದೃಷ್ಟಿಕೋನ
೫. ಶಾಸನಗಳ ಸಾಂಸ್ಕೃತಿಕ ಅಧ್ಯಯನದ ಕೆಲವು ಇತಿಮಿತಿಗಳು
೬. ಶಾಸನಾಧ್ಯಯನದ ಸಾಧ್ಯತೆಗಳು

ಕನ್ನಡ ಸಂಶೋಧನೆಯು ಪ್ರವೇಶಿಸಿರುವ ಅನೇಕ ಮಹತ್ವದ ನೆಲೆಗಳಲ್ಲಿ ಕನ್ನಡ ಶಾಸನಶಾಸ್ತ್ರವು ಒಂದು. ಆದರೆ ಇತರ ಮಾನವಿಕ ಅಧ್ಯಯನ ಶಿಸ್ತುಗಳ ಬೆಳವಣಿಗೆಯನ್ನು ಹೋಲಿಸಿದರೆ ಶಾಸನಶಾಸ್ತ್ರವು ನಿರೀಕ್ಷಿತ ಬೆಳವಣಿಗೆಯನ್ನು ಸಾಧಿಸಲಿಲ್ಲ. ಇದಕ್ಕೆ ಕಾರಣ ಶಾಸನಗಳು ಆಯಾ ಪ್ರದೇಶದ ಭಾಷೆಯಲ್ಲಿರುವುದು ಮತ್ತು ಶಾಸನ ಕ್ಷೇತ್ರದ ಹೆಚ್ಚಿನ ಅಧ್ಯಯನಕಾರರಿಗೆ ವ್ಯುತ್ಪತ್ತಿ ಜ್ಞಾನದ ಕೊರತೆ. *ಈ* ಹಿನ್ನೆಲೆಯಲ್ಲಿ ಕನ್ನಡ ನಾಡಿನ ಶಾಸನಗಳ ಅಧ್ಯಯನಕ್ಕೆ ಸಂಬಂಧಿಸಿದ ಹಲವು ಸಮಸ್ಯೆ ಹಾಗೂ ಗ್ರಹಿಕೆಗಳ ಬಗ್ಗೆ *ಈ* ಕಿರುಕೃತಿಯಲ್ಲಿ ಮಹತ್ವದ ಮಾಹಿತಿಗಳಿವೆ.

**೬೬೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೧ : ಬಳ್ಳಾರಿ ಜಿಲ್ಲೆ**

ಸಂ: ದೇವರಕೊಂಡಾರೆಡ್ಡಿ ಮತ್ತು ಇತರರು

ಪುಟ: Vxxix+೭೧೨+೧೬, ವರ್ಷ: ೧೯೯೯, ರೂ: ೬೦೦.೦೦

ಪರಿವಿಡಿ

೧. ಗ್ರಾಮವಾರು ಸೂಚಿ

೨. ಶಾಸನ ಪಾಠ

೩. ಪದಸೂಚಿ

೪. ಚಿತ್ರಗಳು

*ಈ* ಸಂಪುಟದಲ್ಲಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ, ಸೊಂಡೂರು, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ ತಾಲೂಕಿನಲ್ಲಿ ಲಭ್ಯವಾಗಿರುವ ಶಾಸನಗಳನ್ನು ಸೇರಿಸಲಾಗಿದೆ. ಶಾಸನ ಪಾಠದ ಜತೆಗೆ ಗ್ರಾಮವಾರು ಸೂಚಿ, ರಾಜವಂಶೀಯ ಸೂಚಿ, ಪದಸೂಚಿ, ಹಾಗೂ ಶಾಸನಗಳ ಚಿತ್ರಗಳೂ *ಈ* ಸಂಪುಟದಲ್ಲಿವೆ. ಇಲ್ಲಿನ ಕನ್ನಡ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೬೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೨ : ಕೊಪ್ಪಳ ಜಿಲ್ಲೆ**

ಸಂ: ದೇವರಕೊಂಡಾರೆಡ್ಡಿ ಮತ್ತು ಇತರರು

ಪುಟ: Vxxix+೪೦೪+೨೪, ವರ್ಷ: ೧೯೯೯, ರೂ: ೬೦೦.೦೦

ಪರಿವಿಡಿ

೧. ಸಂಕೇತ ಸೂಚಿ

೨. ಅಕ್ಷರ ಸೂಚಿ

೩. ಗ್ರಾಮವಾರು ಸೂಚಿ

೪. ರಾಜವಂಶೀಯ ಸೂಚಿ

೫. ಶಾಸನ ಪಾಠ

೬. ಪದಸೂಚಿ

೭. ಚಿತ್ರಗಳು

*ಈ* ಸಂಪುಟದಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ, ಕೊಪ್ಪಳ, ಗಂಗಾವತಿ, ಯಲಬುರ್ಗಿ ತಾಲೂಕುಗಳಲ್ಲಿ ಲಭ್ಯವಾಗಿರುವ ಶಾಸನಗಳು ಸೇರಿಕೊಂಡಿವೆ. ಶಾಸನ ಪಾಠದ ಜತೆಗೆ ಗ್ರಾಮವಾರು ಸೂಚಿ, ಪದಸೂಚಿ ಹಾಗು ಶಾಸನದ ಚಿತ್ರಗಳೂ *ಈ* ಸಂಪುಟದಲ್ಲಿವೆ. ಇಲ್ಲಿನ ಕನ್ನಡ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೬೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೩ : ಹಂಪಿ ಶಾಸನಗಳು**

ಸಂ: ದೇವರಕೊಂಡಾರೆಡ್ಡಿ ಮತ್ತು ಇತರರು

ಪುಟ: Vxxiv+೩೩೬, ವರ್ಷ: ೨೦೦೦, ರೂ: ೩೦೦.೦೦

ಪರಿವಿಡಿ

೧. ಸಂಕೇತ ಸೂಚಿ

೨. ಅಕ್ಷರ ಸೂಚಿ

೩. ಗ್ರಾಮವಾರು ಸೂಚಿ

೪. ರಾಜವಂಶೀಯ ಸೂಚಿ

೫. ಶಾಸನ ಪಾಠ

೬. ಪದಸೂಚಿ

೭. ಚಿತ್ರಗಳು

ಹಂಪಿಯ ಶಾಸನಗಳಿಗೆ ಸಂಬಂಧಿಸಿದಂತೆ ಆ ಗ್ರಾಮ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಾದ ಕಡ್ಡಿರಾಂಪುರ, ಕಾಮಲಾಪುರ, ನಲ್ಲಾಪುರ, ನಿಂಬಾಪುರ, ಬುಕ್ಕಸಾಗರ, ವೆಂಕಟಾಪುರ ಗ್ರಾಮಗಳಲ್ಲಿ ಲಭ್ಯವಾಗಿರುವ ಶಾಸನಗಳನ್ನು *ಈ* ಸಂಪುಟದಲ್ಲಿ ಸಂಕಲಿಸಲಾಗಿದೆ. ಶಾಸನ ಪಾಠದ ಜತೆಗೆ ರಾಜವಂಶೀಯ ಸೂಚಿ, ಶಾಸನಗಳ ಚಿತ್ರಗಳು *ಈ* ಸಂಪುಟದಲ್ಲಿವೆ. ಇಲ್ಲಿನ ಕನ್ನಡ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೬೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೪ : ತಮಿಳು ನಾಡಿನ ಕನ್ನಡ ಶಾಸನಗಳು**

ಸಂ: ಬಾ. ರಾ. ಗೋಪಾಲ್ ಮತ್ತು ಇತರರು

ಪುಟ: xxxxiv+೧೬೦, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ಸಂಕೇತ ಸೂಚಿ

೨. ಅಕ್ಷರ ಸೂಚಿ

೩. ಗ್ರಾಮವಾರು ಸೂಚಿ
೪. ರಾಜವಂಶೀಯ ಸೂಚಿ
೫. ಶಾಸನ ಪಾಠ
೬. ಪದಸೂಚಿ
೭. ಚಿತ್ರಗಳು

ತಮಿಳುನಾಡು ರಾಜ್ಯದ *ಈ*ರೋಡ್ ಜಿಲ್ಲೆ, ಕಡಲೂರು ಜಿಲ್ಲೆ, ಕಾಂಜೀವರಂ ಜಿಲ್ಲೆ, ತಿರುವಳ್ಳೂರು ಜಿಲ್ಲೆಯಲ್ಲಿ ಲಭ್ಯವಾಗಿರುವ ಕನ್ನಡ ಶಾಸನಗಳು *ಈ* ಸಂಪುಟದಲ್ಲಿ ಸಂಕಲಿತ ಗೊಂಡಿವೆ. ಇದರಲ್ಲಿ ಒಟ್ಟು ೭೮ ಅಪ್ರಕಟಿತ ಶಾಸನ ಹಾಗೂ ೬೭ ಪ್ರಕಟಿತ ಶಾಸನಗಳಿದ್ದು, ಗ್ರಾಮವಾರು ಸೂಚಿ, ರಾಜವಂಶೀಯ ಸೂಚಿ, ಪದಸೂಚಿ ಶಾಸನಗಳ ಚಿತ್ರಗಳು ಇಲ್ಲಿ ಸೇರಿದ್ದು ಕನ್ನಡ ಶಾಸನಗಳ ಸಾರಾಂಶವನ್ನು ಇಲ್ಲಿ ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೬೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫ : ಭಾಗ ೧ : ಆಂಧ್ರಪ್ರದೇಶದ ಕನ್ನಡ ಶಾಸನಗಳು**

ಸಂ: ಕೆ.ಆರ್.ಗಣೇಶ್ ಮತ್ತು ಶೇಷಶಾಸ್ತ್ರಿ

ಪುಟ: Vxxxviii+೪೫೨, ವರ್ಷ: ೨೦೦೧, ರೂ: ೭೦೦.೦೦

ಪರಿವಿಡಿ

೧. ಸಂಕೇತಾಕ್ಷರ ಸೂಚಿ
೨. ಅಕ್ಷರ ಸೂಚಿ
೩. ಗ್ರಾಮ ಮತ್ತು ಶಾಸನ ಸಂಖ್ಯಾ ಸೂಚಿ
೪. ರಾಜವಂಶೀಯ ಸೂಚಿ
೫. ಆಂಧ್ರಪ್ರದೇಶದ ನಕ್ಷೆ
೬. ಶಾಸನ ಪಾಠ
೭. ಪದಸೂಚಿ
೮. ಚಿತ್ರಗಳು

*ಈ* ಸಂಪುಟದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ, ಮಡಕಸಿರಾ ಗುತ್ತಿ, ಕಲ್ಯಾಣದುರ್ಗ, ಪೆನುಗೊಂಡ, ರಾಯದುರ್ಗ, ತಾಡಿಪತ್ರಿ, ಕದಿರಿ, ಧರ್ಮಾವರಂ ತಾಲೂಕು ಗಳನ್ನು ಹಾಗು ಚಿತ್ತೂರು ಜಿಲ್ಲೆಯ ವಾಯಲಪಾಡು, ಪಲಮನೇರ್, ಪುಂಗನೂರು, ಮದನಪಲ್ಲಿ, ಚಂದ್ರಗಿರಿ ತಾಲೂಕು ಹಾಗು ಕರ್ನೂಲು ಜಿಲ್ಲೆಯ ಆದೋನಿ, ಆಲೂರು, ನಂದ್ಯಾಲ, ನಂದಿಕೊಟ್ಕೂರು, ಮತ್ತು ಕೋಯಿಲ ಕುಂಟ್ಲಾ ತಾಲೂಕಿನಲ್ಲಿ ಲಭ್ಯವಾಗಿರುವ ಕನ್ನಡ ಶಾಸನಗಳು ಸೇರಲ್ಪಟ್ಟಿವೆ. ಶಾಸನ ಪಾಠಗಳ ಜತೆಗೆ ರಾಜವಂಶೀಯ ಸೂಚಿ, ಶಾಸನಗಳ ಚಿತ್ರಗಳೂ *ಈ* ಸಂಪುಟದಲ್ಲಿವೆ. ಕನ್ನಡ ಶಾಸನಗಳ ಸಾರಾಂಶವನ್ನು ಇಲ್ಲಿ ಇಂಗ್ಲಿಷ್‌ನಲ್ಲಿ ಅನುವಾದಿಸಿ ನೀಡಲಾಗಿದೆ.

**೬೬೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫ : ಭಾಗ ೨ : ಆಂಧ್ರ ಪ್ರದೇಶದ ಕನ್ನಡ ಶಾಸನಗಳು**

ಸಂ: ಕೆ.ಆರ್.ಗಣೇಶ್ ಮತ್ತು ಶೇಷಶಾಸ್ತ್ರಿ

ಪುಟ: xxxii+೩೬೮, ವರ್ಷ: ೨೦೦೧, ರೂ: ೭೦೦.೦೦

ಪರಿವಿಡಿ

೧. ಸಂಕೇತಾಕ್ಷರ ಸೂಚಿ
೨. ಅಕ್ಷರ ಸೂಚಿ
೩. ಗ್ರಾಮ ಮತ್ತು ಶಾಸನ ಸಂಖ್ಯಾ ಸೂಚಿ
೪. ರಾಜವಂಶೀಯ ಸೂಚಿ
೫. ಆಂಧ್ರಪ್ರದೇಶದ ನಕ್ಷೆ
೬. ಶಾಸನ ಪಾಠ
೭. ಪದಸೂಚಿ
೮. ಚಿತ್ರಗಳು

ಆಂಧ್ರಪ್ರದೇಶದ ಜಿಲ್ಲೆಗಳಾದ ಕಡಪ, ಕರೀಂನಗರ, ವಾರಂಗಲ್, ಮೆಹಬೂಬ್‌ನಗರ, ನಲ್ಗೊಂಡ, ಮೆದಕ್, ಗುಂಟೂರು, ವಿಜಯನಗರ, ನಿಜಾಮಾಬಾದ್, ಪೂರ್ವ ಗೋದಾವರಿ, ನೆಲ್ಲೂರು ಮತ್ತು ಅದಿಲಾಬಾದ್ ಜಿಲ್ಲೆಗಳಲ್ಲಿ ಲಭ್ಯವಾಗಿರುವ ಕನ್ನಡ ಶಾಸನಗಳು *ಈ* ಸಂಪುಟದಲ್ಲಿವೆ. ಶಾಸನ ಪಾಠಗಳ ಜತೆಗೆ ರಾಜವಂಶೀಯ ಸೂಚಿ ಹಾಗೂ ಶಾಸನಗಳ ಚಿತ್ರಗಳು ಇಲ್ಲಿ ಸೇರಿವೆ. ಇಲ್ಲಿನ ಪ್ರತೀ ಕನ್ನಡ ಶಾಸನಗಳ ಒಟ್ಟು ಸಾರಾಂಶದ ಇಂಗ್ಲಿಷ್ ಅನುವಾದವೂ *ಈ* ಸಂಪುಟದಲ್ಲಿದೆ.

**೬೬೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ : ಮಹಾರಾಷ್ಟ್ರದ ಕನ್ನಡ ಶಾಸನಗಳು**

ಸಂ: ಜಿ.ಎಸ್. ಉಪಾಧ್ಯ ಮತ್ತು ದೇವರಕೊಂಡಾರೆಡ್ಡಿ

ಪುಟ: vxxxviii+೩೦೨, ವರ್ಷ: ೨೦೦೧, ರೂ: ೩೫೦.೦೦

ಪರಿವಿಡಿ

೧. ಸಂಕೇತ ಸೂಚಿ
೨. ಅಕ್ಷರ ಸೂಚಿ

೩. ಗ್ರಾಮವಾರು ಸೂಚಿ
೪. ರಾಜವಂಶೀಯ ಸೂಚಿ
೫. ಶಾಸನ ಪಾಠ
೬. ಪದಸೂಚಿ
೭. ಚಿತ್ರಗಳು

ಮಹಾರಾಷ್ಟ್ರದ ಜಿಲ್ಲೆಗಳಾದ ಉಸ್ಮಾನಾಬಾದ್, ಔರಂಗಾಬಾದ್, ಕೊಲ್ಹಾಪುರ, ನಾಂದೇಡ್, ಪರಭಣಿ, ಬೀಡ್, ಮುಂಬಯಿ, ಲಾತೂರು, ಸಾಂಗ್ಲಿ, ಸೊಲ್ಲಾಪುರ ಜಿಲ್ಲೆಗಳಲ್ಲಿ ಲಭ್ಯವಾಗಿರುವ ಕನ್ನಡ ಶಾಸನಗಳು *ಈ* ಸಂಪುಟದಲ್ಲಿವೆ. ಇಲ್ಲಿ ಶಾಸನಪಾಠಗಳ ಜತೆಗೆ ಗ್ರಾಮಸೂಚಿ ಹಾಗೂ ಶಾಸನಗಳ ಚಿತ್ರಗಳಿದ್ದು, ಪ್ರತೀ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಿ *ಈ* ಸಂಪುಟದಲ್ಲಿ ನೀಡಲಾಗಿದೆ.

**೬೬೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೭ : ರಾಯಚೂರು ಜಿಲ್ಲೆ**

ಲೇ: ದೇವರಕೊಂಡಾರೆಡ್ಡಿ ಮತ್ತು ಇತರರು
ಪುಟ: LXXXVIII+XVI+೪೫೬, ವರ್ಷ: ೨೦೦೩, ರೂ: ೬೦೦.೦೦

ಪರಿವಿಡಿ
೧. ಸಂಕೇತ ಸೂಚಿ
೨. ಅಕ್ಷರ ಸೂಚಿ
೩. ಗ್ರಾಮವಾರು ಸೂಚಿ
೪. ರಾಜವಂಶೀಯ ಸೂಚಿ
೫. ಶಾಸನ ಪಾಠ
೬. ಪದಸೂಚಿ
೭. ಚಿತ್ರಗಳು

ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸುಗೂರು, ಮಾನ್ವಿ, ಸಿಂಧನೂರು ಹಾಗೂ ರಾಯಚೂರು ತಾಲೂಕುಗಳ ೪೧೮ ಶಾಸನಗಳು *ಈ* ಸಂಪುಟದಲ್ಲಿವೆ. ಶಾಸನ ಪಾಠದ ಜತೆಗೆ ಗ್ರಾಮವಾರು ಸೂಚಿ, ರಾಜವಂಶೀಯ ಸೂಚಿ, ಶಾಸನ ಸಂಖ್ಯಾ ಸೂಚಿಯನ್ನೂ ನೀಡಲಾಗಿದೆ. ಇಲ್ಲಿನ ಕನ್ನಡ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೬೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೮ : ಬೀದರ ಜಿಲ್ಲೆ**

ಸಂ : ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ
ಪುಟ: 46+205+೧೦, ವರ್ಷ: ೨೦೦೬, ರೂ: ೩೦೦.೦೦

ಪರಿವಿಡಿ
೧. ಸಂಕೇತ ಸೂಚಿ
೨. ಅಕ್ಷರ ಸೂಚಿ
೩. ಗ್ರಾಮವಾರು ಸೂಚಿ
೪. ರಾಜವಂಶೀಯ ಸೂಚಿ
೫. ಶಾಸನ ಪಾಠ
೬. ಪದಸೂಚಿ
೭. ಚಿತ್ರಗಳು

ಬೀದರ್ ಜಿಲ್ಲೆಯ ಬೀದರ, ಹುಮನಾಬಾದ್, ಬಸವಕಲ್ಯಾಣ, ಭಾಲ್ಕಿ, ಔರಾದ ತಾಲೂಕುಗಳ ಒಟ್ಟು ೧೬೪ ಶಾಸನಗಳು ಇಲ್ಲಿ ಸೇರ್ಪಡೆಗೊಂಡಿವೆ.

**೬೭೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟೆ ಜಿಲ್ಲೆ**

ಲೇ: ದೇವರಕೊಂಡಾರೆಡ್ಡಿ ಮತ್ತು ಇತರರು
ಪುಟ: CXII+9+೪೭೫, ವರ್ಷ: ೨೦೦೬, ರೂ: ೬೦೦.೦೦

ಪರಿವಿಡಿ
೧. ಸಂಕೇತ ಸೂಚಿ
೨. ಅಕ್ಷರ ಸೂಚಿ
೩. ಗ್ರಾಮವಾರು ಸೂಚಿ
೪. ರಾಜವಂಶೀಯ ಸೂಚಿ
೫. ಶಾಸನ ಪಾಠ
೬. ಪದಸೂಚಿ
೭. ಚಿತ್ರಗಳು

*ಈ* ಸಂಪುಟದಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬೀಳಗಿ, ಜಮಖಂಡಿ, ಮುಧೋಳ, ಬಾದಾಮಿ, ಹುನಗುಂದ ತಾಲ್ಲೂಕಿನಲ್ಲಿ ಲಭ್ಯವಾಗಿರುವ ಶಾಸನಗಳನ್ನು ಸೇರಿಸಲಾಗಿದೆ. ಶಾಸನ ಪಾಠದ ಜೊತೆಗೆ ಗ್ರಾಮವಾರು ಸೂಚಿ, ರಾಜವಂಶಿಯ ಸೂಚಿ, ಪದಸೂಚಿ ಹಾಗೂ ಜಾನಪದ ಚಿತ್ರಗಳು *ಈ* ಸಂಪುಟದಲ್ಲಿವೆ. ಇಲ್ಲಿನ ಕನ್ನಡ ಶಾಸನಗಳ ಸಾರಾಂಶವನ್ನು ಇಂಗ್ಲಿಷ್‌ನಲ್ಲೂ ಅನುವಾದಿಸಿ ನೀಡಲಾಗಿದೆ.

**೬೭೧. ಕನ್ನಡ ಶಾಸನಶಿಲ್ಪ**

ಲೇ: ಡಿ.ವಿ.ಪರಮಶಿವಮೂರ್ತಿ
ಪುಟ: xii+೨೮೮, ವರ್ಷ: ೧೯೯೯, ರೂ: ೧೫೦.೦೦




ಪರಿವಿಡಿ

೧. ಅಧ್ಯಯನದ ಅಗತ್ಯ ಮತ್ತು ಸ್ವರೂಪ

೨. ಶಾಸನ ಶಿಲ್ಪದ ಸ್ವರೂಪ ಮತ್ತು ಉದ್ದೇಶ

೩. ಶಾಸನ ಶಿಲ್ಪದ ಇತಿಹಾಸ ಮತ್ತು ವರ್ಗೀಕರಣ

೪. ದಾನಶಾಸನ ಶಿಲ್ಪ

೫. ವೀರಶಾಸನ ಶಿಲ್ಪ

೬. ಬಲಿದಾನಶಾಸನ ಶಿಲ್ಪ

೭. ಶಾಸನಶಿಲ್ಪದ ಸಾಂಸ್ಕೃತಿಕ ಅಧ್ಯಯನ

೮. ಶಾಸನ ಶಿಲ್ಪದಲ್ಲಿ ಸಂಕೇತಗಳು

ಶಾಸನಗಳ ಅಧ್ಯಯನವನ್ನು ಶಾಸನಪಠ್ಯಗಳಿಂದ ಮಾಡುವ ವಿಧಾನಕ್ಕೆ ಮಾತ್ರವೇ ಮೊರೆ ಹೋಗದೆ ನಮ್ಮಲ್ಲಿ ಲಭ್ಯವಿರುವ ಶಾಸನ ಶಿಲ್ಪಗಳನ್ನು ಪೂರಕವಾಗಿ ಬಳಸಿ ನಡೆಸಿದ ಅಧ್ಯಯನವು *ಈ* ಗ್ರಂಥದಲ್ಲಿದೆ.

**೬೭೨. ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು**

ಸಂ: ಯಾಸೀನ್ ಖುದ್ದೂಸಿ ಮತ್ತು ಸೀತಾರಾಮ ಜಾಗೀರ್‌ದಾರ್

ಪುಟ: xiv+೨೮೦, ವರ್ಷ: ೨೦೦೧, ರೂ: ೩೦೦.೦೦

ಪರಿವಿಡಿ

೧. ಬೆಂಗಳೂರು ಜಿಲ್ಲೆ; ಬೆಳಗಾವಿ ಜಿಲ್ಲೆ

೨. ಬಳ್ಳಾರಿ ಜಿಲ್ಲೆ; ಬೀದರ್ ಜಿಲ್ಲೆ

೩. ಬಿಜಾಪುರ ಜಿಲ್ಲೆ

೪. ಚಿಕ್ಕಮಗಳೂರು ಜಿಲ್ಲೆ; ಚಿತ್ರದುರ್ಗ ಜಿಲ್ಲೆ

೫. ಧಾರವಾಡ ಜಿಲ್ಲೆ; ಗುಲ್ಬರ್ಗಾ ಜಿಲ್ಲೆ

೬. ಕೊಡಗು ಜಿಲ್ಲೆ; ಕೋಲಾರ ಜಿಲ್ಲೆ

೭. ಮಂಡ್ಯ ಜಿಲ್ಲೆ; ಮೈಸೂರು ಜಿಲ್ಲೆ

೮. ರಾಯಚೂರು ಜಿಲ್ಲೆ

೯. ಶಿವಮೊಗ್ಗ ಜಿಲ್ಲೆ

೧೦. ತುಮಕೂರು ಜಿಲ್ಲೆ

ಕರ್ನಾಟಕದಲ್ಲಿ ದೊರೆತಿರುವ ಅರೇಬಿಕ್, ಉರ್ದು, ಪರ್ಶಿಯನ್ ಭಾಷೆಯ ಒಟ್ಟು ೪೨೯ ಶಾಸನಗಳು *ಈ* ಸಂಪುಟದಲ್ಲಿವೆ. ಪ್ರತಿಯೊಂದು ಶಾಸನದ ಸಾರಾಂಶವನ್ನು ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನೀಡಲಾಗಿದೆ. ಜತೆಗೆ ಶಾಸನಗಳ ಪಾಠಗಳನ್ನೂ ನೀಡಲಾಗಿದೆ.



**೬೭೩. ಕರ್ನಾಟಕದ ಪುರಾತತ್ತ್ವ ನೆಲೆಗಳು**

ಲೇ: ಕೆ.ಬಿ.ಶಿವತಾರಕ್

ಪುಟ: xvi+೭೫೪, ವರ್ಷ: ೨೦೦೧, ರೂ: ೨೫೦.೦೦

ಪರಿವಿಡಿ

೧. ಕರ್ನಾಟಕ ಪುರಾತತ್ವ ನೆಲೆಗಳು

೨. ಕರ್ನಾಟಕ ಶಿಲಾಯುಗ ಸಂಸ್ಕೃತಿ ನೆಲೆಗಳು

ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ ಶೋಧನೆಯನ್ನು *ಈ* ಕೃತಿ ಒಳಗೊಂಡಿದೆ. ಪುರಾತತ್ತ್ವ ನೆಲೆಗಳನ್ನು ದಾಖಲಿಸುವ ಮೂಲಕ ಶಂಬಾ ಅವರ 'ಕರ್ನಾಟಕ-ಕನ್ನಡ'ದ ಶೋಧನೆಯ ಪ್ರಮೇಯ ಸಿದ್ಧಾಂತಗಳನ್ನು ಮರುವಿವೇಚನೆಗೆ ಒಳಪಡಿಸುವ ಪ್ರಯತ್ನವನ್ನು *ಈ* ಕೃತಿಯಲ್ಲಿ ಸೂಚಿಸಲಾಗಿದೆ.

**೬೭೪. ಕೊಲ್ಹಾಪುರ ಜಿಲ್ಲೆಯ ಶಾಸನಗಳು**

ಸಂ: ಶ್ರೀನಿವಾಸ ರಿತ್ತಿ ಮತ್ತು ಅನಂತ ಬಿ.ಕರವೀರಕರ

ಪುಟ: xviii+೧೮೨+೧೮, ವರ್ಷ: ೨೦೦೦, ರೂ: ೩೦೦.೦೦

ಪರಿವಿಡಿ

೧. ಶಾಸನಗಳು ದೊರೆತ ಸ್ಥಳಗಳು

೨. ಅರಸು ಮನೆತನಗಳು ಮತ್ತು ಅರಸರು

೩. ಪೀಠಿಕೆ

೪. ಶಾಸನಗಳ ಪಾಠ

ಕೊಲ್ಹಾಪುರ ಜಿಲ್ಲೆಯಲ್ಲಿ ಲಭ್ಯವಾದ ಕನ್ನಡ ಶಾಸನಗಳು *ಈ* ಗ್ರಂಥದಲ್ಲಿ ದಾಖಲಾಗಿವೆ. ಶಾಸನದ ಪಾಠಗಳ ಜತೆಗೆ, ಶಾಸನಗಳ ಚಿತ್ರಗಳೂ *ಈ* ಸಂಪುಟದಲ್ಲಿದೆ. ಕನ್ನಡ ಶಾಸನಗಳ ಇಂಗ್ಲಿಷ್ ಅನುವಾದವೂ ಇಲ್ಲಿದೆ.

**೬೭೫. ತುಳುನಾಡಿನ ಜೈನ ಶಾಸನಗಳು**

ಸಂ: ದೇವರಕೊಂಡಾರೆಡ್ಡಿ ಮತ್ತು ಜಯಪ್ರಕಾಶ ಮಾವಿನಕುಳಿ

ಪುಟ: XII+೧೩೪, ವರ್ಷ: ೨೦೦೪, ರೂ: ೬೦.೦೦

ಪರಿವಿಡಿ

೧. ತುಳುನಾಡಿನ ಜೈನ ಇತಿಹಾಸದ ಆಕರಗಳ ಅಧ್ಯಯನ

೨. ತುಳುನಾಡಿನ ಶಾಸನಗಳ ಅಧ್ಯಯನ ಇತಿಹಾಸ

೩. ತುಳುನಾಡಿನ ಜೈನ ಶಾಸನಗಳ ವೈವಿಧ್ಯತೆ; ತುಳುನಾಡಿನ ಜೈನ ದಾನ ಶಾಸಸನಗಳು



೪. ತುಳುನಾಡಿನ ನಿಸಧಿ ಸ್ಮಾರಕಗಳು

೫. ತುಳುನಾಡಿನ ಜೈನ ಶಾಸನಗಳಲ್ಲಿ ಆರ್ಥಿಕ ವಿವರಗಳು

೬. ಮೂಡುಬಿದರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯ ಜೀರ್ಣೋದ್ಧಾರ ಚರಿತೆ; ಮೂಡುಬಿದರೆ ಜಿನಾಲಯಗಳು ಒಂದು ಅವಲೋಕನ

೭. ತುಳುನಾಡಿನ ಬಸದಿಗಳು ವಾಸ್ತುಶಿಲ್ಪದ ಕೆಲವು ವಿಶೇಷ ಅಂಶಗಳು

೮. ತುಳುನಾಡಿನ ಜೈನ ಸಾಹಿತ್ಯ; ತುಳುನಾಡಿನ ಜೈನ ಹಸ್ತಪ್ರತಿ ಭಂಡಾರಗಳು

೯. ತುಳುನಾಡಿನ ಜೈನ ಮಠಗಳು

೧೦. ಹೊಸಶೋಧ ರಾಷ್ಟ್ರಕೂಟರ ದೊರೆ ಪ್ರಭೂತವರ್ಷ

ತುಳುನಾಡಿನ ಜೈನ ಇತಿಹಾಸದ ಆಕರಗಳ ಅಧ್ಯಯನದಿಂದ ಹಿಡಿದು, ತುಳು ಜೈನ ಶಾಸನಗಳ ಅಧ್ಯಯನದ ಇತಿಹಾಸ, ತುಳುನಾಡಿನ ಶಾಸನಗಳ ವೈವಿಧ್ಯತೆ, ಆ ಶಾಸನಗಳಲ್ಲಿ ದೊರಕುವ ವಾಸ್ತುಶಿಲ್ಪ, ಸಂಸ್ಕೃತಿ, ಆರ್ಥಿಕ ಸಂಗತಿಗಳ ಅವಲೋಕನ ಮತ್ತು ಹಸ್ತಪ್ರತಿ ಭಂಡಾರ, ಜಿನಾಲಯ, ಜೈನಮಠಗಳ ಸೂಕ್ಷ್ಮಾವಲೋಕನದ ವಿವರಗಳು ಹಾಗೂ *ಈ* ವಿಷಯದ ಕುರಿತಂತೆ ನಡೆದ ಹೊಸಶೋಧ ಇವುಗಳನ್ನು ಕುರಿತು ಗಂಭೀರವಾದ ವ್ಯಾಖ್ಯಾನಶೀಲವಾದ ಬರಹಗಳು *ಈ* ಕೃತಿಯಲ್ಲಿವೆ.



**೬೭೬. ಕೃಷ್ಣದೇವರಾಯನ ಶಾಸನಗಳು : ಸಂಪುಟ ೧**

ಸಂ : ಡಿ.ವಿ. ಪರಮಶಿವಮೂರ್ತಿ

ಪುಟ : ೧೨೦+೭೫೨, ವರ್ಷ : ೨೦೧೦, ರೂ. ೪೦೦.೦೦

ಪರಿವಿಡಿ

೧. ತಾಲ್ಲೂಕು ಜಿಲ್ಲಾ ಸೂಚಿ

೨. ಸಂಕ್ಷೇಪ ಸೂಚಿ

೩. ಶಾಸನ ಪ್ರಕರಣ ನಕ್ಷೆ

೪. ಶಾಸನಪಾಠಗಳು ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ

*ಈ* ಸಂಪುಟದಲ್ಲಿರುವ ಶಾಸನಗಳು ಕೃಷ್ಣದೇವರಾಯನ ವ್ಯಕ್ತಿತ್ವ, ಆತನ ರಾಜ್ಯಾಡಳಿತದ ಮೇಲೆ ಮಹತ್ವದ ಮಾಹಿತಿಗಳನ್ನು ನೀಡುತ್ತದೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲಿ ದೊರೆಯುವ ೩೬೩ ಕನ್ನಡ ಮತ್ತು ಸಂಸ್ಕೃತಿ ಶಾಸನಗಳು *ಈ* ಸಂಪುಟದಲ್ಲಿದೆ.

**೬೭೭. ಕೃಷ್ಣ ಮೇಲ್ದಂಡೆ ಯೋಜನೆ : ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ**

ಸಂ : ದೇವರಕೊಂಡಾರೆಡ್ಡಿ

ಸ.ಸಂ : ಡಿ.ವಿ. ಪರಮಶಿವಮೂರ್ತಿ

ಪುಟ: x+೬೬, ವರ್ಷ: ೨೦೦೫, ರೂ: ೮೦.೦೦

ಪರಿವಿಡಿ

೧. ಮುದ್ದೇಬಿಹಾಳ ತಾಲೂಕು

೨. ಬಸವನ ಬಾಗೇವಾಡಿ ತಾಲೂಕು

೩. ಬಿಜಾಪುರ ತಾಲೂಕು

೪. ಜಮಖಂಡಿ ತಾಲೂಕು

೫. ಬೀಳಗಿ ತಾಲೂಕು

೬. ಬಾಗಲಕೋಟೆ ತಾಲೂಕು

೭. ಹುನುಗುಂದ ತಾಲೂಕು

೮. ಲಿಂಗಸೂಗೂರು ತಾಲೂಕು

ಕೃಷ್ಣಾ ಮೇಲ್ದಂಡೆ ಯೋಜನೆಯ ಜಲಾನಯನ ಪ್ರದೇಶದಲ್ಲಿ ಮುಳುಗಡೆಯಾದ ಗ್ರಾಮಗಳ ಸರ್ವೇಕ್ಷಣೆಯನ್ನು ಮಾಡಿ ಅಲ್ಲಿನ ಶಾಸನಗಳನ್ನು ಗುರುತಿಸಿ ಅಧ್ಯಯನ ಮಾಡಿ ಪ್ರಕಟಿಸಿರುವ *ಈ* ಸಂಪುಟವು ಸಾಂಸ್ಕೃತಿಕ ಉತ್ಖನನದ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದದ್ದು. ಮುದ್ದೇಬಿಹಾಳ, ಬಸವನ ಬಾಗೇವಾಡಿ, ಬಿಜಾಪುರ, ಜಮಖಂಡಿ, ಬೀಳಗಿ, ಬಾಗಲಕೋಟೆ, ಹುನಗುಂದ, ಲಿಂಗಸುಗೂರು ತಾಲೂಕುಗಳಲ್ಲಿ ಮುಳುಗಡೆ ಸಂದರ್ಭದಲ್ಲಿ ಲಭ್ಯವಾದ ಶಾಸನಗಳನ್ನು ಶೋಧಿಸಿ ಇಲ್ಲಿ ಸಂಪಾದನೆ ಮಾಡಿ ಕೊಡಲಾಗಿದೆ.

**೬೭೮. ರಾಷ್ಟ್ರಕೂಟರ ತಮಿಳು ಶಾಸನಗಳು**

ಲೇ: ಎಸ್.ಸ್ವಾಮಿನಾಥನ್

ಪುಟ: XLviii+೧೨೦, ವರ್ಷ: ೨೦೦೦, ರೂ: ೨೦೦.೦೦

Contents

1. A General list of Krishna III's inscriptions in chronological order and their provenance.
2. Topographical index
3. Summaries and Texts of inscriptions
4. List of geographical divisions
5. Index
6. List of plates

ಕನ್ನಡಿಗರ ಬಗೆಗಿನ ಕನ್ನಡೇತರ ಭಾಷೆಯಲ್ಲಿರುವ ಶಾಸನಗಳ ಸಂಪುಟವಿದು. ಕರ್ನಾಟಕದ ಅರಸರಲ್ಲಿ ಪ್ರಸಿದ್ಧಿ ಪಡೆದ ರಾಷ್ಟ್ರಕೂಟ ಅರಸ ಮೂರನೇಯ ಕೃಷ್ಣ ಕಂಚಿ ರಾಜಧಾನಿಯಿಂದ ತೊಂಡೈಮಂಡಲಿ ಪ್ರದೇಶವನ್ನು ಆಳಿದ್ದ ಸಂದರ್ಭದಲ್ಲಿ ಬರೆಯಿಸಿದ್ದ ೧೦೭ ತಮಿಳು ಹಾಗೂ ೨ ಕನ್ನಡ (ಒಟ್ಟು ೧೦೯) ಶಾಸನಗಳು *ಈ* ಸಂಪುಟದಲ್ಲಿವೆ. *ಈ* ಎಲ್ಲ ಶಾಸನಗಳು ತಮಿಳು ನಾಡಿನಲ್ಲಿ ದೊರೆತಿದ್ದು ಇವುಗಳಲ್ಲಿರುವ ತಮಿಳು ಶಾಸನಗಳಲ್ಲಿ ಕೆಲವು ತಮಿಳು ಭಾಷೆ ಮತ್ತು ಲಿಪಿಯಲ್ಲಿದ್ದರೆ ಮತ್ತೆ ಕೆಲವು ತಮಿಳು ಹಾಗೂ ಸಂಸ್ಕೃತ ಭಾಷೆಯಲ್ಲಿವೆ. ಎರಡು ಕನ್ನಡ ಶಾಸನಗಳು ಕನ್ನಡ ಲಿಪಿಯಲ್ಲಿವೆ.

*ಈ* ಸಂಪುಟದಲ್ಲಿರುವ ಶಾಸನಗಳನ್ನು ತಮಿಳು, ಕನ್ನಡ ಮತ್ತು ಇಂಗ್ಲಿಷ್ *ಈ* ಮೂರು ಭಾಷಿಕರಿಗೆ ಅನುಕೂಲವಾಗುವಂತೆ ಅನುವಾದಿಸಿ, ಸಂಕಲಿಸಲಾಗಿದೆ.



**೬೭೯. ಶಾಸನಗಳು : ಪ್ರಭುತ್ವ ಮತ್ತು ಜನತೆ**

ಲೇ: ಬಸವರಾಜ ಸಬರದ

ಪುಟ: ii+೨೯, ವರ್ಷ: ೧೯೯೯, ರೂ: ೫.೦೦

ನಮ್ಮಲ್ಲಿರುವ ಹೆಚ್ಚಿನ ಶಾಸನಗಳು ರಾಜಾಜ್ಞೆಗಳೇ ಆಗಿರುವುದರಿಂದ ಶಾಸನಗಳು ರಾಜಪ್ರಭುತ್ವದ ಪ್ರಮುಖ ಮಾಧ್ಯಮಗಳಾಗಿವೆ. ಹೀಗಾಗಿ ಶಾಸನಗಳಿಗೂ ಪ್ರಭುತ್ವಕ್ಕೂ ನೇರವಾದ ಸಂಬಂಧವಿದೆ. ಇದು ಜನತೆಯ ಮೇಲೆ ನಡೆಸುವ ಪ್ರಭುತ್ವವಾದುದರಿಂದ ಶಾಸನಗಳು-ಪ್ರಭುತ್ವ ಹಾಗು ಜನತೆ ಇವುಗಳಿಗೆ ಇರುವ ಪರಸ್ಪರ ಸಂಬಂಧಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.




**೬೮೦. Kannada Inscriptions of Andhra Pradesh**

Ed by : C.S.Vasudevan

Pp. 40+308, 1999, Rs. 300.00

Contents

1. Topographical List
2. Index to Dynasty
3. Index to Kings
4. Abbreviations

The book deals with the Kannda Inscriptions found in the state of Andhra Pradesh. In all, 948 Inscriptions so for noticed and published by various agencies have been included in this book. Place, location, dynasty, name of the king, date, summary of the inscription and publication details are provided. It also has introduction, topographical list, indices to dynasty and king and general Index.

## ೩೪

# ಶಿಕ್ಷಣ-ಶಿಕ್ಷಣ ಸಂಸ್ಥೆ-ಸಾಕ್ಷರತೆ

**೬೮೧. ಅರ್ಥಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯಪುಸ್ತಕ)
ಮುಖ್ಯ ಸಂ: ಟಿ.ಆರ್. ಚಂದ್ರಶೇಖರ್
ಪುಟ: xvi+೩೫೮, ವರ್ಷ: ೧೯೯೬, ರೂ: ೭೦.೦೦

ಪದವಿಪೂರ್ವ ಮೊದಲ ವರ್ಷದ ಪಠ್ಯಕ್ರಮಕ್ಕನುಗುಣವಾಗಿ, ಕನ್ನಡ ಭಾಷಾ ಮಾಧ್ಯಮದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದ ಕೊನೆಯಲ್ಲಿ ಸಂಕ್ಷಿಪ್ತ ಪದಕೋಶವೊಂದನ್ನು ನೀಡಲಾಗಿದೆ.




**೬೮೨. ಅರ್ಥಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ : ಸಿ.ಕೆ. ರೇಣುಕಾರ್ಯ
ಪುಟ: xii+೩೫೨, ವರ್ಷ: ೨೦೦೪, ರೂ: ೧೦೦.೦೦

ಪರಿವಿಡಿ
೧. ಅನುಭೋಗ
೨. ಉತ್ಪಾದನೆ
೩. ಉತ್ಪಾದನಾ ವೆಚ್ಚ
೪. ಯೋಗಕ್ಷೇಮ ಅರ್ಥಶಾಸ್ತ್ರದ ಮೂಲಾಂಶಗಳು
೫. ರಾಷ್ಟ್ರೀಯ ಆದಾಯ
೬. ಹಣದ ಸಿದ್ಧಾಂತ
೭. ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸು

ಪದವಿಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ, ೨೦೦೪-೦೫ರ ಶೈಕ್ಷಣಿಕ ವರ್ಷಕ್ಕಾಗಿ ಅನುಮೋದಿಸಿರುವ ಪಠ್ಯಕ್ರಮಕ್ಕನುಗುಣವಾಗಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ.




**೬೮೩. ಅರ್ಥಶಾಸ್ತ್ರ** (ಪದವಿಪೂರ್ವ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ : ರೇಣುಕಾರ್ಯ ಸಿ.ಕೆ.
ಪುಟ: xviii+೪೪೪, ವರ್ಷ: ೨೦೦೬, ರೂ: ೧೬೦.೦೦

ಪರಿವಿಡಿ
೧. ಮೂಲ ಪರಿಕಲ್ಪನೆಗಳು ಮತ್ತು ಅಭಿವೃದ್ಧಿ ಸೂಚಿಗಳು
೨. ಮಾನವ ಸಂಪನ್ಮೂಲ ಅಭಿವೃದ್ಧಿ
೩. ಭೂ ವ್ಯವಸಾಯ; ಕೈಗಾರಿಕಾ ಅಭಿವೃದ್ಧಿ
೪. ಕಾರ್ಮಿಕ ನೀತಿ; ಆರ್ಥಿಕ ಸಂಪನ್ಮೂಲ ಸೌಲಭ್ಯಗಳು
೫. ವಿದೇಶಿ ವ್ಯಾಪಾರ; ಸಾರ್ವಜನಿಕ ಹಣಕಾಸು
೬. ಆರ್ಥಿಕ ಯೋಜನೆ

ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ಪರಿಷ್ಕೃತ ಪಠ್ಯವನ್ನು ಸಿದ್ಧಪಡಿಸಲಾಗಿದೆ.

**೬೮೪. ಇತಿಹಾಸ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಎಸ್.ಚಂದ್ರಶೇಖರ್

ಪರಿವಿಡಿ
೧. ಇತಿಹಾಸದ ವ್ಯಾಖ್ಯಾನಗಳು
೨. ಪ್ರಾಚೀನ ಜಗತ್ತು
೩. ಮಧ್ಯಕಾಲೀನ ಜಗತ್ತು
೪. ಪ್ರಗತಿಯತ್ತ ಚಲನೆ ಭೌಗೋಳಿಕ ಅನ್ವೇಷಣೆಗಳು, ಪುನರುಜ್ಜೀವನ, ಕ್ರಾಂತಿಗಳು
೫. ಏಕೀಕರಣ ಚಳವಳಿ ಇಟಲಿ ಮತ್ತು ಜರ್ಮನಿಯಲ್ಲಿ; ರಷ್ಯಾದ ಕ್ರಾಂತಿ
೬. ಮಹಾಯುದ್ಧಗಳು ಮತ್ತು ಸಂಸ್ಥೆಗಳು
೭. ಸಮಕಾಲೀನ ಜಗತ್ತು-ನಿಶಸ್ತ್ರೀಕರಣ; ಆಗ್ನೇಯ ಏಷಿಯಾ ತೃತೀಯ ಜಗತ್ತು

ಪದವಿ ಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಜಗತ್ತಿನ ಇತಿಹಾಸವನ್ನು ಕನ್ನಡ ಭಾಷೆಯಲ್ಲಿ ಪರಿಚಯಿಸಲು ಪಠ್ಯಕ್ರಮಕ್ಕನುಗುಣವಾಗಿ *ಈ* ಪುಸ್ತಕವನ್ನು ರಚಿಸಲಾಗಿದೆ. ಜಗತ್ತಿನ ಇತಿಹಾಸದ ಬಗ್ಗೆ ವಿದ್ಯಾರ್ಥಿಗಳು ಅರ್ಥೈಸಿಕೊಳ್ಳುವಷ್ಟು ಸರಳವಾಗಿ ಇಲ್ಲಿವಿಷಯಗಳು ವಿವರಿಸಲ್ಪಟ್ಟಿವೆ.

**೬೮೫. ಇತಿಹಾಸ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಸಿ.ಆರ್. ಗೋವಿಂದರಾಜು
ಪುಟ: XII+೩೪೪, ವರ್ಷ: ೨೦೦೪, ರೂ: ೧೦೦.೦೦




ಪರಿವಿಡಿ

೧. ಪ್ರಾಚೀನ ಭಾರತ

೨. ಮಧ್ಯಕಾಲೀನ ಭಾರತ

೩. ಪ್ರಾಚೀನ ಕರ್ನಾಟಕ

೪. ಮಧ್ಯಕಾಲೀನ ಕರ್ನಾಟಕ

೫. ಭೂಪಟಗಳ ಅಧ್ಯಯನ

ಪದವಿಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗಾಗಿ, ಪದವಿ ಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. ಭಾರತ ಮತ್ತು ಕರ್ನಾಟಕದ ಇತಿಹಾಸದ ಬಗ್ಗೆ ವಿದ್ಯಾರ್ಥಿಗಳು ಅರ್ಥೈಸಿಕೊಳ್ಳುವಷ್ಟು ಸರಳವಾಗಿ ಇಲ್ಲಿ ವಿಷಯಗಳು ವಿವರಿಸಲ್ಪಟ್ಟಿವೆ.

**೬೮೬. ಇತಿಹಾಸ** (ಪಿಯುಸಿ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ : ಸಿ.ಆರ್. ಗೋವಿಂದರಾಜು

ಪುಟ: xii+೩೪೪, ವರ್ಷ: ೨೦೦೫, ರೂ: ೧೦೦.೦೦

ಪರಿವಿಡಿ

೧. ಕ್ರಾಂತಿಗಳ ಮತ್ತು ರಾಷ್ಟ್ರೀಯತೆ ಯುಗ

೨. ಜಗತ್ತಿನ ಮಹಾಯುದ್ಧಗಳು ಹಾಗೂ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳು

೩. ಭಾರತಕ್ಕೆ ಯುರೋಪಿಯನ್ನರ ಆಗಮನ

೪. ಆಧುನಿಕ ಕರ್ನಾಟಕ

ಪದವಿಪೂರ್ವ ಎರಡನೇ ವರ್ಷದ ವಿದ್ಯಾರ್ಥಿಗಳಿಗಾಗಿ, ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ನೇ ಶೈಕ್ಷಣಿಕ ವರ್ಷಕ್ಕಾಗಿ ಅನುಮೋದಿಸಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. *ಈ* ಪಠ್ಯಪುಸ್ತಕವು ಆಧುನಿಕ ಕಾಲಘಟ್ಟದ ಪ್ರಪಂಚ, ಭಾರತ ಹಾಗೂ ಕರ್ನಾಟಕಗಳಿಗೆ ಸಂಬಂಧಿಸಿದ ಅಧ್ಯಯನದ ಸ್ವರೂಪವನ್ನು ಹೊಂದಿದ್ದು, ಇತಿಹಾಸಕ್ಕೆ ಸಂಬಂಧಿಸಿದ ಹೊಸ ಅಂಶಗಳನ್ನು ವೈಜ್ಞಾನಿಕ ದೃಷ್ಟಿಕೋನದ ಒರೆಗೆ ಹಚ್ಚಿ ವಿಶ್ಲೇಷಿಸುವ ಪ್ರಯತ್ನವೂ ಇಲ್ಲಿ ನಡೆದಿದೆ.

**೬೮೭. *ಈಶಾನ್ಯ* ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸ್ವರೂಪ**

ಲೇ : ಎಚ್.ಡಿ. ಪ್ರಶಾಂತ್

ಪುಟ: xii+೧೫೦, ವರ್ಷ: ೨೦೦೫, ರೂ: ೧೦೦.೦೦




ಪರಿವಿಡಿ

೧. ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ

೨. ಸಾಕ್ಷರತೆಯಲ್ಲಿ ಪ್ರಾದೇಶಿಕ-ಸಾಮಾಜಿಕ ಅಸಮಾನತೆ

೩. ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ

೪. ಶಾಲೆಯಲ್ಲಿ ಇರುವ ಮೂಲ ಸೌಲಭ್ಯಗಳು

೫. ಶಾಲಾ ಬಿಸಿಯೂಟ

೬. ಸ್ಥಳೀಯ ಮಟ್ಟದಲ್ಲಿ ಶಿಕ್ಷಣದ ಆಡಳಿತ ವಿಸ್ತರಣೆಗೆ ಇರುವ ಕೆಲವು ಸವಾಲುಗಳು

*ಈಶಾನ್ಯ* ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿನ ಸಮಸ್ಯೆ ಮತ್ತು ಅವುಗಳ ಪರಿಹಾರಗಳ ಕುರಿತು *ಈ* ಕೃತಿಯಲ್ಲಿ ಚರ್ಚಿಸ ಲಾಗಿದೆ. *ಈಶಾನ್ಯ* ಕರ್ನಾಟಕದಲ್ಲಿನ ಸಾಕ್ಷರತೆ, ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನಸ್ಸು, ಶಾಲೆಯಲ್ಲಿ ಮಕ್ಕಳಿಗೆ ಒದಗಿಸುವ ಸೌಕರ್ಯ, ಸೌಲಭ್ಯಗಳ ಕುರಿತಾದ ವಿವರ, ಮಾಹಿತಿ *ಈ* ಕೃತಿಯಲ್ಲಿದೆ.




**೬೮೮. ಕನ್ನಡ ಕಲಿ**

(ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ತರಗತಿಯ ಕನ್ನಡೇತರ ವಿದ್ಯಾರ್ಥಿಗಳ ಪಠ್ಯಪುಸ್ತಕ)

ಲೇ: ಲಿಂಗದೇವರು ಹಳೆಮನೆ

ಪುಟ: xiv+೧೯೮, ವರ್ಷ: ೨೦೦೨, ರೂ: ೮೦.೦೦

ಪರಿವಿಡಿ

1. Kannada structure
2. Kannada alphabets
3. Conversation/narration
4. Structure pattern
5. Key to instruction

ಕರ್ನಾಟಕದ ತಾಂತ್ರಿಕ ಮತ್ತು ವೈದ್ಯಕೀಯ ಪದವಿ ಶಿಕ್ಷಣ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ರಚಿಸಲಾಗಿರುವ ಭಾಷಾ ಪಠ್ಯವಿದು. ಯಾವುದೇ ವಿಷಯ ಜ್ಞಾನದ ಜತೆಗೆ ಭಾಷಾಜ್ಞಾನವು ಸಂಗತವಾಗಿರುವುದರಿಂದ ಕನ್ನಡ ಭಾಷೆ ಮತ್ತು ಅದು ಅಭಿವ್ಯಕ್ತಿಸುವ ವಿಷಯ ಒಂದು ಹೊರೆಯಾಗದಂತೆ *ಈ* ಪಠ್ಯವನ್ನು ರೂಪಿಸಲಾಗಿದೆ.



**೬೮೯. ಕನ್ನಡ ಮನಸು** (ಇಂಜಿನಿಯರಿಂಗ್ ಪ್ರಥಮ ಪದವಿ ತರಗತಿಯ ಕನ್ನಡ ಪಠ್ಯ)
ಲೇ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪುಟ: viii+೧೨೪, ವರ್ಷ: ೨೦೦೨, ರೂ: ೫೦.೦೦

ಕರ್ನಾಟಕ ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಇಂಜಿನಿಯರಿಂಗ್ ಪ್ರಥಮ ತರಗತಿಗೆ ಸಾಂಸ್ಕೃತಿಕ ಪಠ್ಯವಾಗಿ *ಈ* ಪಠ್ಯಪುಸ್ತಕವನ್ನು ಹೊರತರಲಾಗಿದೆ. ಕನ್ನಡ ಮತ್ತು ಕನ್ನಡೇತರ ವಿದ್ಯಾರ್ಥಿಗಳು ಕನ್ನಡ ನಾಡಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅರಿವನ್ನು ತಮ್ಮ ವಿಷಯ ಪಠ್ಯಗಳ ಜೊತೆಯಲ್ಲಿಯೇ ಪಡೆಯಲು *ಈ* ಕೃತಿ ಸಹಕರಿಸುತ್ತದೆ. ಕಥೆ, ಕಾವ್ಯ, ಹಾಸ್ಯ, ಪ್ರಬಂಧ, ವ್ಯಕ್ತಿ, ಚಿತ್ರ, ಪ್ರವಾಸ, ಕಥನ, ಅಂಕಣ ಬರಹ, ಪರಿಸರ, ತಂತ್ರಜ್ಞಾನ, ವಿಜ್ಞಾನ *ಈ* ಎಲ್ಲ ಮುಖಗಳನ್ನು *ಈ* ಕೃತಿಯಲ್ಲಿ ಕುತೂಹಲ ಕರವಾಗಿ ಪರಿಚಯಿಸಲಾಗಿದೆ.

**೬೯೦. ಕನ್ನಡ ವಿಶ್ವವಿದ್ಯಾಲಯ ಹೆಜ್ಜೆ ಗುರುತು**
ಲೇ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪುಟ: iv+೨೮, ವರ್ಷ: ೧೯೯೩

ಕನ್ನಡ ವಿಶ್ವವಿದ್ಯಾಲಯವು ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ *ಈ* ಕಿರುಪುಸ್ತಕದಲ್ಲಿ ಮಾಹಿತಿಗಳಿವೆ.

**೬೯೧. ಕನ್ನಡ ಸಿರಿ**
ಸಂ: ಎ.ವಿ.ನಾವಡ ಮತ್ತು ಇತರರು
ಪುಟ: xii+೭೬, ವರ್ಷ: ೨೦೦೨, ರೂ: ೧೦೦.೦೦

ಪರಿವಿಡಿ
೧. ಕನ್ನಡ ವಿಶ್ವವಿದ್ಯಾಲಯದ ಲಾಂಛನ
೨. ಕನ್ನಡ ಹಿತ; ಕನ್ನಡದ ಕೆಲವು ಪ್ರಚಲಿತ ಸಮಸ್ಯೆಗಳು
೩. ಕನ್ನಡದಲ್ಲಿ ಸಂಶೋಧನೆ; ಕನ್ನಡ ಅಭಿವೃದ್ಧಿ
೪. ಕರ್ನಾಟಕ ಭಾಷಾನೀತಿ
೫. ಮಾಧ್ಯಮಗಳಲ್ಲಿ ಕನ್ನಡ ಭಾಷೆಯ ಆಧುನೀಕರಣ
೬. ಕನ್ನಡ ಅಭಿವೃದ್ಧಿಯಲ್ಲಿ ಹೊರನಾಡ ಕನ್ನಡಿಗರ ಪಾತ್ರ
೭. ಕರ್ನಾಟಕದ ಬಹುರೂಪಿ ಪರಂಪರೆ



೮. ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿಗಳು
೯. ಕರ್ನಾಟಕ ಕೃಷಿ ನೀತಿ-ಒಂದು ಅಧ್ಯಯನ
೧೦. ಕನ್ನಡ ಸಂಸ್ಕೃತಿ ಸೌರಭ; ಕನ್ನಡ ಅಭಿವೃದ್ಧಿ ವಿಶ್ವವಿದ್ಯಾಲಯಗಳಲ್ಲಿ

ಕನ್ನಡ ವಿಶ್ವವಿದ್ಯಾಲಯದ ಸಾಧನೆಯ ಹೆಜ್ಜೆ ಗುರುತುಗಳನ್ನು ನಿಕಟವಾಗಿ ಗಮನಿಸುತ್ತ, ಅದರೊಡನೆ ತೊಡಗಿಕೊಂಡು ಅದರ ಬಗ್ಗೆ ಪ್ರೀತಿ ಅಭಿಮಾನ ಗೌರವಗಳನ್ನು ಇರಿಸಿ ಕೊಂಡಿರುವ ಸಾಹಿತ್ಯಪ್ರಿಯ ಮತ್ತು ಶಿಕ್ಷಣಪ್ರಿಯ ಪರಿಣತರು ಕನ್ನಡ ವಿಶ್ವ ವಿದ್ಯಾಲಯದ ಬಗ್ಗೆ ವ್ಯಕ್ತಪಡಿಸಿರುವ ತಮ್ಮ ಅಭಿಪ್ರಾಯ ಅನಿಸಿಕೆ ಪ್ರತಿಕ್ರಿಯೆಗಳನ್ನು *ಈ* ಸಂಪುಟದಲ್ಲಿ ದಾಖಲಿಸಲಾಗಿದೆ. ಕನ್ನಡದಲ್ಲಿ ಕರ್ನಾಟಕದಲ್ಲಿ ಮತ್ತು ಕನ್ನಡ ವಿಶ್ವವಿದ್ಯಾಲಯದಲ್ಲಿ ಇರುವ ಅನನ್ಯತೆಗಳನ್ನು ಮತ್ತು ಇರಿಸಿಕೊಳ್ಳಬೇಕಾದ ಗುರಿಗಳನ್ನು, ಗುರಿ ತಲುಪಲು ಏರಬೇಕಾದ ಚಿಂತನೆಯ ಮೆಟ್ಟಲುಗಳನ್ನು *ಈ* ಕೃತಿಯಲ್ಲಿ ಚರ್ಚಿಸಲಾಗಿದೆ. ಇದು ನಮ್ಮ ನಾಡು ನುಡಿಯ ಬಗೆಗಿನ ಅರ್ಥಪೂರ್ಣ ಕೈಪಿಡಿಯೂ ಹೌದು.

**೬೯೨. ಕರ್ನಾಟಕ-ಕನ್ನಡ ವಿಶ್ವವಿದ್ಯಾಲಯ**
ಲೇ: ಹಿ.ಶಿ.ರಾಮಚಂದ್ರೇಗೌಡ
ಪುಟ: ii+೩೦, ವರ್ಷ: ೨೦೦೦, ರೂ: ೧೦.೦೦

ಇಂದಿನ ಜಾಗತೀಕರಣ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಷ್ಟ್ರೀಯತೆಯನ್ನು ಕಟ್ಟಿಕೊಳ್ಳುವ ನೆಲೆ ಬೆಲೆಗಳನ್ನು *ಈ* ಕೃತಿ ಚರ್ಚಿಸಿದೆ. ಕನ್ನಡಿಗರ ಕನಸು, ಕನ್ನಡ ವಿಶ್ವ ವಿದ್ಯಾಲಯ ಸಾಂಸ್ಕೃತಿಕ ರಾಜಧಾನಿಯಾಗುವ ಅಗತ್ಯತೆಯನ್ನು ಹಾಗು ಕನ್ನಡತನವನ್ನು ಅದು ಕಟ್ಟಿಕೊಡುವ ಬಗೆಯನ್ನು ಕೃತಿ ಸಂಕ್ಷಿಪ್ತವಾಗಿ ಚರ್ಚಿಸಿದೆ.

**೬೯೩. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ-ಗತಿ**
ಲೇ: ಟಿ.ಆರ್.ಚಂದ್ರಶೇಖರ್
ಪುಟ: iv+೪೦, ವರ್ಷ: ೨೦೦೮, ರೂ: ೧೦.೦೦

ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸಾಮಾಜಿಕ ಸ್ವರೂಪವನ್ನು ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸ ಲಾಗಿದೆ. ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಾಖಲಾತಿ ಹಾಗೂ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಇವರೆಡೂ ಸಂಗತಿಗಳ ಸಾಮಾಜಿಕ ಸ್ವರೂಪವನ್ನು ಪೃಥಕ್ಕರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

**೬೯೪. ಗಣಿತ ವಿಜ್ಞಾನ** (ಪಿಯುಸಿ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಎಸ್.ಬಾಲಚಂದ್ರರಾವ್
ಪುಟ: xx+೬೧೯, ವರ್ಷ: ೨೦೦೬, ರೂ: ೧೬೦.೦೦

ಪರಿವಿಡಿ

೧. ಸಂಖ್ಯಾಸಿದ್ಧಾಂತದ ಮೂಲಪರಿಕಲ್ಪನೆಗಳು ಮತ್ತು ಸಮಶೇಷಿಯತಾ ಸಂಬಂಧ

೨. ಕೋಶಗಳು ಮತ್ತು ನಿರ್ಧಾರಕಗಳು; ಸಂಕುಲಗಳು; ಸದಿಶಗಳು ೩. ವೃತ್ತಗಳು; ಶಂಕುಜಗಳು

೪. ತ್ರಿಕೋಣಮಿತೀಯ ಪ್ರತಿಲೋಮ ಉತ್ಪನ್ನಗಳು; ತ್ರಿಕೋಣ ಮಿತೀಯ ಸಮೀಕರಣಗಳ ಸಾಮಾನ್ಯ ಪರಿಹಾರಗಳು

೫. ಮಿಶ್ರ ಊಹ್ಯ ಸಂಖ್ಯೆಗಳು; ನಿಷ್ಪನ್ನ; ನಿಷ್ಪನ್ನದ ಅನ್ವಯಗಳು

೬. ಅನುಕಲನಶಾಸ್ತ್ರ; ಅವಕಲಿತ ಸಮೀಕರಣಗಳು

ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ಸಿದ್ಧಪಡಿಸಿರುವ ಪಠ್ಯ ಪುಸ್ತಕವಿದು. ಆಡುಭಾಷೆ ಕನ್ನಡದ ಮೂಲಕ ಗಣಿತಶಾಸ್ತ್ರವನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು ಎಂಬ ದೃಢ ವಿಶ್ವಾಸದಿಂದ ಗಣಿತದ ಪರಿಕಲ್ಪನೆಗಳನ್ನು ತತ್ತ್ವಗಳನ್ನು, ಪ್ರಮೇಯ ಸಾಧನೆಗಳನ್ನು ಹಾಗೆಯೇ ಉದಾಹರಣೆಗಳನ್ನು ಮತ್ತು ಅಭ್ಯಾಸಗಳನ್ನು ಆದಷ್ಟು ಸರಳ ಭಾಷೆಯಲ್ಲಿ ಇಲ್ಲಿ ವಿವರಿಸಲಾಗಿದೆ.




**೬೯೫. ಗಣಿತಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯಪುಸ್ತಕ)

ಸಂ: ಎಸ್.ಬಾಲಚಂದ್ರರಾವ್

ಪುಟ: xvi+೪೩೨, ವರ್ಷ: ೧೯೯೫, ರೂ: ೮೦.೦೦

ಪರಿವಿಡಿ

೧. ಘಾತಾಂಕಗಳು ಮತ್ತು ಪ್ರತಿಘಾತಕಗಳು

೨. ಶ್ರೇಢಿಗಳು

೩. ಗಣಿತಾನುಮಾನ

೪. ಸಮೀಕರಣಗಳ ಸಿದ್ಧಾಂತ

೫. ಕ್ರಮಯೋಜನೆಗಳು ಮತ್ತು ವಿಕಲ್ಪಗಳು

೬. ದ್ವಿಪದ ಪ್ರಮೇಯ; ಆಂಶಿಕ ಭಿನ್ನರಾಶಿಗಳು

೭. ಸಂಖ್ಯಾಸಿದ್ಧಾಂತದ ಮೂಲ ಪರಿಕಲ್ಪನೆಗಳು, ಸಮಶೇಷಿಯತಾ, ಸಂಬಂಧ; ನಿರ್ದೇಶಕ ರೇಖಾಗಣಿತ

೮. ಕಲನಶಾಸ್ತ್ರ; ತ್ರಿಕೋನಮಿತಿ

೯. ತ್ರಿಕೋನದ ಭುಜಗಳ ಮತ್ತು ಕೋನಗಳ ನಡುವಿನ ಸಂಬಂಧ

ಪದವಿಪೂರ್ವ ಮೊದಲ ವರ್ಷದ ಪಠ್ಯವಾಗಿರುವ *ಈ* ಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ಗಣಿತಶಾಸ್ತ್ರದ ವಿಷಯಗಳು ಕನ್ನಡ ಭಾಷೆಯಲ್ಲಿವೆ. ಪ್ರತಿಯೊಂದು ಪಠ್ಯದಲ್ಲಿಯೂ ಪಾರಿಭಾಷಿಕ ಶಬ್ದಗಳಿಗೆ ಅರ್ಥಕೋಶವೂ ಇದೆ.

**೬೯೬. ಗಣಿತಶಾಸ್ತ್ರ** (ಪದವಿಪೂರ್ವ ಎರಡನೇ ವರ್ಷದ ಪಠ್ಯಪುಸ್ತಕ)

ಸಂ: ಎಸ್.ಬಾಲಚಂದ್ರರಾವ್

ಪುಟ: xiv+೬೪೬, ವರ್ಷ: ೧೯೯೭, ರೂ: ೧೨೦.೦೦

ಪದವಿಪೂರ್ವ ದ್ವಿತೀಯ ವರ್ಷದ ಪಠ್ಯವಾಗಿರುವ *ಈ* ಗಣಿತ ಪಠ್ಯಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ಗಣಿತಶಾಸ್ತ್ರ ವಿಷಯಗಳು ಕನ್ನಡ ಭಾಷೆಯಲ್ಲಿವೆ. ಪಾರಿಭಾಷಿಕ ಶಬ್ದಗಳಿಗೆ ಅರ್ಥಕೋಶವೂ ಇದೆ.

**೬೯೭. ಗಣಿತ ವಿಜ್ಞಾನ** (ಪಿಯುಸಿ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ : ಎಸ್. ಬಾಲಚಂದ್ರರಾವ್

ಪುಟ: xvi+೪೮೮, ವರ್ಷ: ೨೦೦೪, ರೂ: ೧೬೦.೦೦

ಪರಿವಿಡಿ

೧. ಆಂಶಿಕ(ವಿಭಜಿತ)ಭಿನ್ನರಾಶಿಗಳು

೨. ಪ್ರತಿಘಾತುಗಳು

೩. ಗಣಿತಾನುಮಾನ

೪. ಸಾಂತ(ಪರಿಮಿತ)ಶ್ರೇಢಿಗಳ ಮೊತ್ತ

೫. ಸಮೀಕರಣಗಳ ಸಿದ್ಧಾಂತ

೬. ದ್ವಿಪದಿ ಪ್ರಮೇಯ

೭. ಗಣಿತ ತರ್ಕ

೮. ಗಣಗಳು, ಸಂಬಂಧಗಳು ಮತ್ತು ಉತ್ಪನ್ನಗಳು; ತ್ರಿಕೋಣಾ ಮಿತಿ; ನಿರ್ದೇಶಕರ ರೇಖಾಗಣಿತ

೯. ಮಿತಿಗಳು ಮತ್ತು ಅವಿಚ್ಛಿನ್ನತೆ

೧೦. ನಕ್ಷೆಯ ಸಿದ್ಧಾಂತ

ಪದವಿಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ತಂದಿರುವ ಪಠ್ಯಕ್ರಮಕ್ಕನುಗುಣವಾಗಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. ಗಣಿತದ ಪರಿಕಲ್ಪನೆಗಳನ್ನು, ತತ್ತ್ವಗಳನ್ನು, ಪ್ರಮೇಯ ಸಾಧನೆಗಳನ್ನು ಆದಷ್ಟು ಸರಳ ಭಾಷೆಯಲ್ಲಿ ಇಲ್ಲಿ ವಿವರಿಸಲಾಗಿದೆ.

**೬೯೮. ಗಣಿತಶಾಸ್ತ್ರ ಪುರವಣಿ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯ ಪುರವಣಿ)

ಸಂ: ಎಸ್.ಬಾಲಚಂದ್ರರಾವ್

ಪುಟ: ೪೦, ವರ್ಷ: ೧೯೯೫




**೧೯೯. ಜೀವಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯ)

ಸಂ: ಕತ್ರೆ ಶಕುಂತಲ ಮತ್ತು ಎ.ಎಚ್.ರಾಜಾಸಾಬ್

ಪುಟ: xvi+೪೭೦, ವರ್ಷ: ೧೯೯೫, ರೂ: ೩೦.೦೦

ಪರಿವಿಡಿ

೧. ಸಸ್ಯಸಂಕುಲದ ವೈವಿಧ್ಯ
೨. ಮೊನೆರಾ ಸಾಮ್ರಾಜ್ಯ
೩. ಪ್ರೊಟಿಸ್ಟಾ ಸಾಮ್ರಾಜ್ಯ
೪. ಸಸ್ಯ ಸಾಮ್ರಾಜ್ಯ
೫. ಆವೃತ್ತ ಬೀಜಕಾರಿ ಸಸ್ಯಗಳ ವರ್ಗೀಕರಣ
೬. ಜೀವಶಾಸ್ತ್ರ ಪರಿಚಯ
೭. ಜೀವಿಗಳಲ್ಲಿ ಏಕತೆ
೮. ಕೋಶವಿಭಜನೆ
೯. ಪ್ರಾಣಿಜೀವನದ ವೈವಿಧ್ಯತೆ
೧೦. ಒಂದು ಮಾದರಿ ಪ್ರಾಣಿಯ ಅಧ್ಯಯನ

ಪದವಿಪೂರ್ವ ಮೊದಲ ವರ್ಷದ ಪಠ್ಯವಾಗಿರುವ *ಈ* ಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ಜೀವಶಾಸ್ತ್ರದ ವಿಷಯಗಳು ಕನ್ನಡ ಭಾಷೆಯಲ್ಲಿವೆ. *ಈ* ಪಠ್ಯದಲ್ಲಿ ಪಾರಿಭಾಷಿಕ ಶಬ್ದಗಳಿಗೆ ಅರ್ಥಕೋಶವೂ ಇದೆ.

**೨೦೦. ಜೀವಶಾಸ್ತ್ರ ಪುರವಣಿ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯದ ಪುರವಣಿ)

ಸಂ: ಕತ್ರೆ ಶಕುಂತಲ ಮತ್ತು ಎ.ಎಚ್.ರಾಜಾಸಾಬ್

ಪುಟ: ೭೫, ವರ್ಷ: ೧೯೯೫

**೨೦೧. ಜೀವಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ: ಟಿ.ಎ. ಬಾಲಕೃಷ್ಣ ಅಡಿಗ ಮತ್ತು ಎ.ಎಚ್. ರಾಜಾಸಾಬ್

ಪುಟ: XX+೪೦೦, ವರ್ಷ: ೨೦೦೪, ರೂ: ೧೨೦.೦೦

ಪರಿವಿಡಿ

೧. ಜೀವ ವರ್ಗೀಕರಣ ಶಾಸ್ತ್ರ
೨. ಜೀವಿಕೋಶ ಅಧ್ಯಯನ
೩. ಜೀವಿ ಸಂಕುಲದ ವೈವಿಧ್ಯ
೪. ಆವೃತ ಬೀಜಸಸ್ಯಗಳ ವರ್ಗೀಕರಣ
೫. ಸಸ್ಯರೋಗ ವಿಜ್ಞಾನದ ಮೂಲಪಾಠಗಳು
೬. ಜೀವವಿಜ್ಞಾನ ಪರಿಚಯ
೭. ಜೈವಿಕ ಅಣುಗಳು
೮. ಜೀವದ ಉಗಮ ಮತ್ತು ವಿಕಾಸ
೯. ಪ್ರಾಣಿ ಜೀವನದ ವೈವಿಧ್ಯತೆ
೧೦. ಪ್ರಾಣಿ ಸಂಪನ್ಮೂಲಗಳು

ಪದವಿಪೂರ್ವ ಶಿಕ್ಷಣ ಇಲಾಖೆ, ೨೦೦೪-೦೫ರ ಶೈಕ್ಷಣಿಕ ವರ್ಷದಿಂದ ಜಾರಿಗೆ ತಂದಿರುವ ಪ್ರಥಮ ವರ್ಷದ ಪಠ್ಯಕ್ರಮಕ್ಕೆ ಅನುಗುಣವಾಗಿ ಸಿದ್ಧಗೊಳಿಸಿರುವ ಪಠ್ಯಪುಸ್ತಕವಿದು.

**೨೦೨. ಜೀವಶಾಸ್ತ್ರ (ಪದವಿಪೂರ್ವ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)**

ಸಂ : ಶಕುಂತಲ ಕತ್ರೆ, ಎಸ್.ಎನ್. ಹೆಗಡೆ ಮತ್ತು ಇತರರು

ಪುಟ: xvi+೪೭೪, ವರ್ಷ: ೨೦೦೩, ರೂ: ೧೦೦.೦೦

ಪರಿವಿಡಿ

೧. ವರ್ಣತಂತುಗಳು; ನ್ಯೂಕ್ಲಿಕ್ ಆಮ್ಲಗಳು; ತಳಿ ಸಂಕೇತ ಮತ್ತು ಪ್ರೋಟಿನ್ ಜೈವಿಕ ಸಂಶ್ಲೇಷಣೆ; ತಳಿಶಾಸ್ತ್ರಕ್ಕೆ ಮೆಂಡಲನ ಕೊಡುಗೆ
೨. ಜೀವಿಗಳಲ್ಲಿ ಲಿಂಗ ನಿರ್ಧಾರ; ಲಿಂಗ ಸಂಲಗ್ನ; ಜೈವಿಕ ತಂತ್ರಜ್ಞಾನ
೩. ಸಸ್ಯದ ಅಂಗಾಂಶಗಳು; ಅಂಗರಚನಾಶಾಸ್ತ್ರ
೪. ಸಸ್ಯ ಜಲ ಸಂಬಂಧಗಳು; ನೀರು ಮತ್ತು ಲವಣಗಳ ಚೂಷಣೆ; ಸಸ್ಯಗಳಲ್ಲಿ ರಸದ ಏರಿಕೆ; ಸಾವಯವ ದ್ರವ್ಯಗಳ ಸ್ಥಾನಾಂತರಣ
೫. ಸಸ್ಯಗಳಲ್ಲಿ ನೀರು ನಷ್ಟವಾಗುವಿಕೆ; ದ್ಯುತಿ ಸಂಶ್ಲೇಷಣೆ; ಸಸ್ಯಗಳಲ್ಲಿ ಉಸಿರಾಟ; ಸಸ್ಯಗಳಲ್ಲಿ ಬೆಳವಣಿಗೆ
೬. ಪರಿಸರಶಾಸ್ತ್ರ ಪರಿಚಯ; ಪರಿಸರ ವ್ಯವಸ್ಥೆಗಳು; ಪರಿಸರ ವ್ಯವಸ್ಥೆಯಲ್ಲಿ ಶಕ್ತಿ ಮತ್ತು ವಸ್ತುಸಂಚಾರ; ಪರಿಸರದ ಸಮಸ್ಯೆಗಳು; ಪರಿಸರದ ಅಭಿವೃದ್ಧಿ ಮತ್ತು ಸಂರಕ್ಷಣೆ
೭. ಮಾನವ ಅಂಗಾಂಶ ಶಾಸ್ತ್ರ; ಪಚನ ಕ್ರಿಯೆ; ಉಸಿರಾಟ; ರಕ್ತಪರಿಚಲನಾ ಕ್ರಿಯೆ; ವಿಸರ್ಜನೆ; ನರಮಂಡಲ ವ್ಯವಸ್ಥೆ
೮. ಅಭಿವರ್ಧನ ಜೀವಶಾಸ್ತ್ರ; ಮಾನವನಲ್ಲಿ ಪ್ರಜನನ
೯. ಜೀವದ ಉಗಮ; ಜೀವದ ವಿಕಾಸ
೧೦. ಹೈನುಗಾರಿಕೆ; ಕೋಳಿ ಸಾಕಾಣಿಕೆ; ರೇಷ್ಮೆ ಕೃಷಿ; ಮೀನುಗಾರಿಕೆ

ಪದವಿಪೂರ್ವ ದ್ವಿತೀಯ ವರ್ಷದ ಜೀವಶಾಸ್ತ್ರದ ವಿದ್ಯಾರ್ಥಿಗಳಿಗೆ, ಪಠ್ಯಕ್ರಮಕ್ಕನುಗುಣವಾಗಿ ೨೦೦೪-೦೫ರ ಶೈಕ್ಷಣಿಕ ವರ್ಷದಿಂದ ಜಾರಿಗೆ ತಂದಿರುವ ಪಠ್ಯಪುಸ್ತಕವಿದು.




**೭೦೩. ನುಡಿದೀಪ-೧**

ಸಂ: ಕರೀಗೌಡ ಬೀಚನಹಳ್ಳಿ ಮತ್ತು ಅಮರೇಶ ನುಗಡೋಣಿ

ಪುಟ: XII+೧೧೦, ವರ್ಷ: ೨೦೦೪, ರೂ: ೫೦.೦೦

ಪರಿವಿಡಿ

೧. ಕಾವ್ಯ
೨. ಕಥೆ
೩. ಪ್ರಬಂಧ
೪. ಪ್ರವಾಸ
೫. ವೈಚಾರಿಕ
೬. ಆತ್ಮಚರಿತ್ರೆ

ಕನ್ನಡ ವಿಶ್ವವಿದ್ಯಾಲಯದ ಆಡಳಿತ ಸುಪರ್ದಿಗೆ ಬರುವ, ಕರ್ನಾಟಕ ರಾಜ್ಯದ ಕಲಾಶಾಲೆಯ ವಿದ್ಯಾರ್ಥಿಗಳಿಗಾಗಿ *ಈ* ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. *ಈ* ಕೃತಿಯಲ್ಲಿನ ಬರಹಗಳು ಕನ್ನಡ ಸಂಸ್ಕೃತಿ ಸಾಹಿತ್ಯದೊಳಗಿನ ವಿಶಿಷ್ಟ ನೋಟಗಳನ್ನು ಓದುಗರಿಗೆ ಪರಿಚಯಿಸುತ್ತದೆ.




**೭೦೪. ನುಡಿದೀಪ-೨**

ಸಂ: ಕರೀಗೌಡ ಬೀಚನಹಳ್ಳಿ ಮತ್ತು ಅಮರೇಶ ನುಗಡೋಣಿ

ಪುಟ: XII+೧೨೮, ವರ್ಷ: ೨೦೦೪, ರೂ: ೫೦.೦೦

ಪರಿವಿಡಿ

೧. ಕಾವ್ಯ
೨. ಕಥೆ
೩. ಪ್ರಬಂಧ
೪. ಪ್ರವಾಸ
೫. ವೈಚಾರಿಕ
೬. ವ್ಯಕ್ತಿ ಚಿತ್ರ

ಕರ್ನಾಟಕದ ದೃಶ್ಯಕಲಾ ವಿದ್ಯಾಲಯದ ಕಲಾಮೂಲ ಎರಡನೇ ವರ್ಷದ ಪದವಿ ತರಗತಿಗಾಗಿ ಸಿದ್ಧಪಡಿಸಿರುವ *ಈ* ಪಠ್ಯಪುಸ್ತಕದಲ್ಲಿ ಆಧುನಿಕ ಸಾಹಿತ್ಯದಲ್ಲಿನ ಆಯ್ದ ಕಾವ್ಯ, ಕಥೆ, ಪ್ರಬಂಧ, ಪ್ರವಾಸದ ತುಣುಕು, ವೈಚಾರಿಕ, ವ್ಯಕ್ತಿಚಿತ್ರಗಳನ್ನು ಸಂಕಲಿಸಲಾಗಿದೆ.




**೭೦೫. ಭಾರತದ ಆರ್ಥಿಕತೆಯ ಮೂಲಾಂಶಗಳು**

(ಪದವಿಪೂರ್ವ ಎರಡನೇ ವರ್ಷದ ಪಠ್ಯಪುಸ್ತಕ)

ಸಂ: ಟಿ.ಆರ್. ಚಂದ್ರಶೇಖರ್

ಪುಟ: xvi+೩೭೬, ವರ್ಷ: ೧೯೯೬, ರೂ: ೭೦.೦೦

ಪದವಿಪೂರ್ವ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಅರ್ಥಶಾಸ್ತ್ರವನ್ನು ಕನ್ನಡ ಭಾಷಾ ಮಾಧ್ಯಮದಲ್ಲಿ ಪರಿಚಯಿಸಲು ಪಠ್ಯಕ್ರಮಕ್ಕನುಗುಣವಾಗಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದ ಅಂತ್ಯದಲ್ಲಿ ಪಾರಿಭಾಷಿಕ ಶಬ್ದಗಳಿಗೆ ಅರ್ಥಕೋಶವೂ ಇದೆ.

**೭೦೬. ಭೌತಶಾಸ್ತ್ರ** (ಪದವಿಪೂರ್ವ ಮೊದಲ ವರ್ಷದ ಪಠ್ಯ)

ಸಂ: ಎಚ್.ಆರ್.ರಾಮಕೃಷ್ಣರಾವ್

ಪುಟ: xiv+೨೭೪, ವರ್ಷ: ೧೯೯೫, ರೂ: ೭೫.೦೦

ಪರಿವಿಡಿ

೧. ಚಲನೆ ಪ್ರಕರಣ
೨. ಸ್ಥಾಯಿ ಪ್ರಕರಣ
೩. ಪ್ರವಾಹಿಗಳ ಸಮಸ್ಥಿತಿ
೪. ಶಾಖ ಪ್ರಕರಣ
೫. ಜ್ಯಾಮಿತೀಯ ದ್ಯುತಿ ಪ್ರಕರಣ

ಪದವಿಪೂರ್ವ ಮೊದಲ ವರ್ಷದ ಪಠ್ಯವಾಗಿರುವ *ಈ* ಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ಭೌತಶಾಸ್ತ್ರದ ವಿಷಯಗಳು ಕನ್ನಡ ಭಾಷೆಯಲ್ಲಿವೆ. ಪಠ್ಯದಲ್ಲಿ ಪಾರಿಭಾಷಿಕ ಪದಗಳಿಗೆ ಅರ್ಥಕೋಶವನ್ನು ನೀಡಲಾಗಿದೆ.

**೭೦೭. ಭೌತಶಾಸ್ತ್ರ** (ಪದವಿಪೂರ್ವ ದ್ವಿತೀಯ ವರ್ಷದ ಪಠ್ಯ)

ಸಂ: ಎಚ್.ಆರ್.ರಾಮಕೃಷ್ಣರಾವ್

ಪುಟ: xiv+೫೨೪, ವರ್ಷ: ೧೯೯೬, ರೂ: ೮೦.೦೦

ಪರಿವಿಡಿ

೧. ಅಲೆಗಳು ಮತ್ತು ಶಬ್ದಪ್ರಕರಣ
೨. ಭೌತದ್ಯುತಿಪ್ರಕರಣ
೩. ಸ್ಥಾಯಿವಿದ್ಯುತ್ ಪ್ರಕರಣ

೪. ಪ್ರವಾಹಿವಿದ್ಯುತ್ ಪ್ರಕರಣ

೫. ಆಧುನಿಕ ಭೌತಶಾಸ್ತ್ರ ಪ್ರಕರಣ

ಪದವಿಪೂರ್ವ ದ್ವಿತೀಯ ವರ್ಷದ ಪಠ್ಯವಾಗಿರುವ *ಈ* ಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ಭೌತವಿಜ್ಞಾನದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ಹೇಳಲಾಗಿದೆ. *ಈ* ಪಠ್ಯದಲ್ಲಿ ಪಾರಿಭಾಷಿಕ ಶಬ್ದಗಳಿಗೆ ಅರ್ಥಕೋಶವನ್ನು ನೀಡಲಾಗಿದೆ.

**೭೦೮. ಭೌತಶಾಸ್ತ್ರ ಪುರವಣಿ** (ಪದವಿಪೂರ್ವ ಮೊದಲ ವರ್ಷದ ಪಠ್ಯದ ಪುರವಣಿ)

ಮುಖ್ಯ ಸಂ: ಎಚ್.ಆರ್. ರಾಮಕೃಷ್ಣರಾವ್

ಪುಟ: ೬೦, ವರ್ಷ: ೧೯೯೫

**೭೦೯. ಭೌತವಿಜ್ಞಾನ** (ಪಿಯುಸಿ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ : ಎಚ್.ಆರ್. ರಾಮಕೃಷ್ಣರಾವ್

ಪುಟ: xviii+೩೬೬, ವರ್ಷ: ೨೦೦೪, ರೂ: ೧೨೦.೦೦

ಪರಿವಿಡಿ

೧. ಅಳತೆಗಳು

೨. ಗತಿವಿಜ್ಞಾನ

೩. ಸ್ಥಿತಿವಿಜ್ಞಾನ

೪. ಪ್ರವಾಹಿಗಳ ಬಲವಿಜ್ಞಾನ

೫. ಶಾಖ ಮತ್ತು ಉಷ್ಣಗತಿ ವಿಜ್ಞಾನ

೬. ಆಂದೋಲನಗಳು ತರಂಗಗಳು ಮತ್ತು ಶಬ್ದ

೭. ಭೂ ವಾಯುಮಂಡಲ ಮತ್ತು ಖಭೌತ ವಿಜ್ಞಾನ

ಪದವಿಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗಾಗಿ ಪದವಿಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ರಚಿಸಿರುವ ಪಠ್ಯಪುಸ್ತಕ ವಿದು.

**೭೧೦. ಭೌತವಿಜ್ಞಾನ**

(ಪಿಯುಸಿ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ : ಎಚ್.ಆರ್. ರಾಮಕೃಷ್ಣರಾವ್

ಪುಟ: xvi+೫೧೬, ವರ್ಷ: ೨೦೦೬, ರೂ: ೧೬೦.೦೦




ಪರಿವಿಡಿ

೧. ಜ್ಯಾಮಿತಿಯ ದ್ಯುತಿ ಪ್ರಕರಣ

೨. ಭೌತದ್ಯುತಿ ಪ್ರಕರಣ

೩. ಸ್ಥಾಯಿ ವಿದ್ಯುತ್ತು

೪. ವಿದ್ಯುತ್ ಪ್ರವಾಹ

ಪದವಿಪೂರ್ವ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ರಚಿಸಿರುವ ಪಠ್ಯಪುಸ್ತಕವಿದು.




**೭೧೧. ರಸಾಯನವಿಜ್ಞಾನ** (ಪಿಯುಸಿ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)

ಸಂ : ಯು. ಶಾಂತಮೂರ್ತಿ ಐತಾಳ

ಪುಟ: xviii+೩೯೦, ವರ್ಷ: ೨೦೦೫, ರೂ: ೧೨೦.೦೦

ಪರಿವಿಡಿ

೧. ಲೋಹವಿದ್ಯೆ

೨. ಪರಮಾಣು ರಚನೆ

೩. ಆಧುನಿಕ ಆವರ್ತಕೋಷ್ಟಕದಲ್ಲಿ ಆವರ್ತ ಲಕ್ಷಣಗಳು

೪. ಉತ್ಕರ್ಷಣ ಸಂಖ್ಯೆ

೫. S ಮತ್ತು P ಬ್ಲಾಕ್ ಧಾತುಗಳು

೬. ರಾಸಾಯನಿಕ ಬಂಧಗಳು

೭. ದ್ರವ್ಯದ ಸ್ಥಿತಿಗಳು-ಅನಿಲದ ಸ್ಥಿತಿ

೮. ರಾಸಾಯನಿಕ ಉಷ್ಣಚಲನಾ ಶಾಸ್ತ್ರ; ರಾಸಾಯನಿಕ ಸಮಸ್ಥಿತಿ

೯. ಮೇಲ್ಮೈರಸಾಯನ ಶಾಸ್ತ್ರ

೧೦. ಕಾರ್ಬನಿಕ್ ಸಂಯುಕ್ತಗಳ ಸಂಯೋಜನೆ; ಹೈಡ್ರೋ ಕಾರ್ಬನ್‌ಗಳು; ಆಕ್ಸಿಜನ್‌ಯುಕ್ತ ಕಾರ್ಬನಿಕ್ ಸಂಯುಕ್ತಗಳು

ಪದವಿಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ತಂದಿರುವ ಪ್ರಥಮ ವರ್ಷದ ಪಠ್ಯಕ್ರಮಕ್ಕೆ ಅನುಗುಣವಾಗಿ *ಈ* ಪಠ್ಯಪುಸ್ತಕವನ್ನು ಸಿದ್ಧ ಗೊಳಿಸಲಾಗಿದೆ.

**೭೧೨. ರಾಜ್ಯಶಾಸ್ತ್ರ** (ಪದವಿಪೂರ್ವ ದ್ವಿತೀಯ ವರ್ಷದ ಪಠ್ಯಪುಸ್ತಕ)
ಮು. ಸಂ: ಜೆ.ಎಸ್. ಸದಾನಂದ
ಪುಟ: x+೨೩೨, ವರ್ಷ: ೧೯೯೬, ರೂ: ೬೦.೦೦

ಪದವಿಪೂರ್ವ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಪಠ್ಯಕ್ರಮಕ್ಕನುಗುಣವಾಗಿ ಕನ್ನಡ ಭಾಷಾ ಮಾಧ್ಯಮದಲ್ಲಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಅಧ್ಯಾಯದ ಮುಖ್ಯಾಂಶಗಳನ್ನು ನೀಡಲಾಗಿದೆ. ಪಠ್ಯದ ಪಾರಿಭಾಷಿಕ ಪದಗಳಿಗೂ ಪದಕೋಶವೊಂದನ್ನು ನೀಡಲಾಗಿದೆ.

**೭೧೩. ರಾಜ್ಯಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯಪುಸ್ತಕ)
ಮುಖ್ಯ ಸಂ: ಜೆ.ಎಸ್. ಸದಾನಂದ
ಪುಟ: ix+೨೩೨, ವರ್ಷ: ೧೯೯೬, ರೂ: ೬೦.೦೦

ಪದವಿಪೂರ್ವ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ರಾಜ್ಯಶಾಸ್ತ್ರವನ್ನು ಕನ್ನಡ ಭಾಷೆಯಲ್ಲಿ ಪರಿಚಯಿಸಲು, ಪಠ್ಯಕ್ರಮಕ್ಕನುಗುಣವಾಗಿ *ಈ* ಪುಸ್ತಕವನ್ನು ರಚಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಅಧ್ಯಾಯದ ಮುಖ್ಯಾಂಶಗಳನ್ನು ನೀಡಲಾಗಿದೆ. ಪಠ್ಯದ ಅಂತದಲ್ಲಿ ಪಾರಿಭಾಷಿಕ ಪದಗಳಿಗೂ ಪದಕೋಶವೊಂದನ್ನು ನೀಡಲಾಗಿದೆ.




**೭೧೪. ರಾಜ್ಯಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ : ಹರೀಶ್ ರಾಮಸ್ವಾಮಿ
ಪುಟ: xii+೩೧೦, ವರ್ಷ: ೨೦೦೫, ರೂ: ೧೦೦.೦೦

ಪರಿವಿಡಿ
೧. ರಾಜ್ಯಶಾಸ್ತ್ರ ಒಂದು ಸಮಗ್ರ ದೃಷ್ಟಿ
೨. ರಾಜ್ಯ ಸಮಾಜ ಮತ್ತು ನಾಗರೀಕ
೩. ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳು
೪. ಸಂವಿಧಾನ ಮತ್ತು ಸರಕಾರ
೫. ಭಾರತೀಯ ಸಂವಿಧಾನ
೬. ಶಾಸಕಾಂಗ
೭. ಕಾರ್ಯಾಂಗ
೮. ನ್ಯಾಯಾಂಗ
೯. ಭಾರತದಲ್ಲಿ ಸ್ಥಳೀಯ ಸರ್ಕಾರ

ಪದವಿಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ರ ಸಾಲಿನಲ್ಲಿ ಪದವಿಪೂರ್ವ ಎರಡನೇ ವರ್ಷದ ವಿದ್ಯಾರ್ಥಿಗಳಿಗಾಗಿ ಅನುಮೋದಿಸಿರುವ ಹೊಸಪಠ್ಯಕ್ರಮ ವನ್ನು ಆಧರಿಸಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ.

**೭೧೫. ರಾಜ್ಯಶಾಸ್ತ್ರ** (ಪದವಿಪೂರ್ವ ದ್ವಿತೀಯ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಜೆ.ಎಸ್.ಸದಾನಂದ
ಪುಟ: xvi+೨೦೪, ವರ್ಷ: ೨೦೦೬, ರೂ: ೧೦೦.೦೦

ಪರಿವಿಡಿ
೧. ಪ್ರಮುಖ ರಾಜಕೀಯ ಚಿಂತಕರು ಭಾಗ ೧
೨. ಪ್ರಮುಖ ರಾಜಕೀಯ ಚಿಂತಕರು ಭಾಗ ೨
೩. ಸಮಕಾಲೀನ ರಾಜಕೀಯ ವಿದ್ಯಮಾನಗಳು
೪. ಭಾರತದಲ್ಲಿ ಚುನಾವಣಾ ಪದ್ಧತಿ
೫. ಭಾರತದಲ್ಲಿ ರಾಜಕೀಯ ಪಕ್ಷ ಪದ್ಧತಿ
೬. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯ ಮತ್ತು ಒತ್ತಡ ಗುಂಪುಗಳು
೭. ಭಾರತದಲ್ಲಿ ಆಡಳಿತಯಂತ್ರ
೮. ಭಾರತದ ಪ್ರಜಾಪ್ರಭುತ್ವದ ಮುಂದಿರುವ ಸವಾಲುಗಳು
೯. ಭಾರತ ಮತ್ತು ವಿಶ್ವ

ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ *ಈ* ಪರಿಷ್ಕೃತ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ.

**೭೧೬. ಸಮಾಜಶಾಸ್ತ್ರ** (ಪದವಿಪೂರ್ವ ಮೊದಲ ವರ್ಷದ ಪಠ್ಯಪುಸ್ತಕ)
ಮುಖ್ಯ ಸಂ: ಆರ್. ಇಂದಿರಾ
ಪುಟ: viii+೨೩೦, ವರ್ಷ: ೧೯೯೬, ರೂ: ೬೦.೦೦

ಸಮಾಜಶಾಸ್ತ್ರ ಪಠ್ಯಕ್ರಮವನ್ನು ಆಧರಿಸಿದ *ಈ* ಪುಸ್ತಕ ಸಮಾಜಶಾಸ್ತ್ರವನ್ನು ಪ್ರಾರಂಭಿಕ ಹಂತದಲ್ಲಿ ಅಭ್ಯಾಸ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿಗೆ ಒಂದು ಉಪಯುಕ್ತ ಮಾರ್ಗಸೂಚಿ. ಕನ್ನಡ ಮಾಧ್ಯಮದ ಮೂಲಕ ಸಮಾಜಶಾಸ್ತ್ರವನ್ನು ಕಲಿಯಬಯಸುವ ವಿದ್ಯಾರ್ಥಿಗಳ ಬಯಕೆಯನ್ನು *ಈ* ಪಠ್ಯಪುಸ್ತಕ *ಈ*ಡೇರಿಸಬಲ್ಲದು. ಪಠ್ಯಪುಸ್ತಕದ ಕೊನೆಯಲ್ಲಿ ಪಠ್ಯದಲ್ಲಿನ ಪಾರಿಭಾಷಿಕ ಶಬ್ದಗಳಿಗೆ ಪುಟ್ಟ ಅರ್ಥಕೋಶವೂ ಇದೆ.

**೭೧೭. ಸಮಾಜಶಾಸ್ತ್ರ** (ಪದವಿಪೂರ್ವ ದ್ವಿತೀಯ ವರ್ಷದ ಪಠ್ಯಪುಸ್ತಕ)
ಮುಖ್ಯ ಸಂ: ಆರ್. ಇಂದಿರಾ
ಪುಟ: vii+೨೪೦, ವರ್ಷ: ೧೯೯೬, ರೂ: ೬೦.೦೦

ಪದವಿಪೂರ್ವ ದ್ವಿತೀಯ ವರ್ಷದ ಪಠ್ಯಕ್ರಮಕ್ಕನುಗುಣವಾಗಿರುವ ಸಮಾಜಶಾಸ್ತ್ರವನ್ನು ಕನ್ನಡ ಮಾಧ್ಯಮದ ಮೂಲಕ ಕಲಿಯಬಯಸುವ ಪದವಿಪೂರ್ವ ದ್ವಿತೀಯ ವರ್ಷದ ಸಮಾಜಶಾಸ್ತ್ರ ವಿದ್ಯಾರ್ಥಿಗಳಿಗೆ *ಈ* ಪಠ್ಯಪುಸ್ತಕವು ಸಹಕಾರಿಯಾಗಬಲ್ಲದು. *ಈ* ಪಠ್ಯಪುಸ್ತಕದ ಅಂತ್ಯದಲ್ಲಿ ಪಠ್ಯದ ಪಾರಿಭಾಷಿಕ ಪದಗಳಿಗೆ ಅರ್ಥಕೋಶವೊಂದನ್ನು ನೀಡಲಾಗಿದೆ.

**೭೧೮. ಸಮಾಜಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಚಂದ್ರಶೇಖರ ದಾಮ್ಲೆ ಮತ್ತು ಪಿ.ಜಿ. ನಾಗೂರಿ
ಪುಟ: XVI+೨೫೨, ವರ್ಷ: ೨೦೦೪, ರೂ: ೧೦೦.೦೦

ಪದವಿಪೂರ್ವ ಮೊದಲ ವರ್ಷದಲ್ಲಿ ಸಮಾಜಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡ ವಿದ್ಯಾರ್ಥಿಗಳಿಗಾಗಿ ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಪಠ್ಯಕ್ರಮಕ್ಕನುಗುಣವಾಗಿ *ಈ* ಪಠ್ಯಪುಸ್ತಕವನ್ನು ರಚಿಸಲಾಗಿದೆ.

**೭೧೯. ಸಮಾಜಶಾಸ್ತ್ರ** (ಪದವಿಪೂರ್ವ ಎರಡನೇ ವರ್ಷದ ಪರಿಷ್ಕೃತ ಪಠ್ಯಪುಸ್ತಕ)
ಸಂ: ಚಂದ್ರಶೇಖರ ದಾಮ್ಲೆ
ಪುಟ: xvi+೨೫೪, ವರ್ಷ: ೨೦೦೬, ರೂ: ೧೦೦.೦೦

ಪದವಿಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮ ವನ್ನು ಆಧರಿಸಿ *ಈ* ಪರಿಷ್ಕೃತ ಪಠ್ಯಪುಸ್ತಕವನ್ನು ಪ್ರಕಟಿಸಲಾಗಿದೆ.

## ನವಸಾಕ್ಷರ ಮಾಲೆ

ನವಸಾಕ್ಷರ ಮಾಲೆಯ ಒಟ್ಟು ೧೧೦ ಪುಸ್ತಕಗಳು-ಅಕ್ಷರ ದಲಿತ, ಅನಕ್ಷರಸ್ಥ ಸಮುದಾಯಕ್ಕೆ ಅಕ್ಷರ ಕಲಿಸುವಂತಹ ಪುಸ್ತಕಗಳು. ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಅಕ್ಷರ ಕಲಿತವರು ಓದಬಲ್ಲಂತಹ ಉತ್ತಮ ಗುಣಮಟ್ಟದ *ಈ* ಪುಸ್ತಕಗಳು, ನವಸಾಕ್ಷರರು ಅಕ್ಷರ ಮರೆಯ ದಂತೆ ಹಾಗು ಕಲಿಕೆ ಮುಂದುವರಿಸುವಂತೆ, ನಮ್ಮ ಬದುಕಿನ-ನಮ್ಮ ಅರಿವಿನ ಸುತ್ತಮುತ್ತಲ ವಸ್ತು-ವಿಷಯ-ವ್ಯಕ್ತಿ-ಪರಿಸರ, ಕತೆ-ಕಾವ್ಯ, ಪುರಾಣ, ಜನಪದ ಇತ್ಯಾದಿಗಳ ಕುರಿತದ್ದಾಗಿವೆ. *ಈ* ಮಾಲೆಯಲ್ಲಿರುವ ಎಲ್ಲ ಪುಸ್ತಕಗಳು ೧೯೯೪ರಲ್ಲಿ ಪ್ರಕಟಗೊಂಡಿದ್ದು, ಪ್ರತಿಯೊಂದು ಪುಸ್ತಕವೂ ಒಟ್ಟು ೨೮ ಪುಟಗಳನ್ನು ಹೊಂದಿದ್ದು ಪ್ರತಿಯೊಂದರ ಬೆಲೆ ೮ ರೂ ಆಗಿರುತ್ತದೆ.

## ನವಸಾಕ್ಷರ ಮಾಲೆಯ ೧೧೦ ಪುಸ್ತಕಗಳ ಶೀರ್ಷಿಕೆಗಳು ಹೀಗಿವೆ



**೭೨೦. ಬಿಜಾಪುರ**
ಲೇ: ಬಿ.ಎಂ.ಹನೀಫ್

**೭೨೧. ಟಿಪ್ಪುಸುಲ್ತಾನ್**
ಲೇ: ಎಂ.ರಾಜು

**೭೨೨. ಕೋಳಿಸಾಕಣೆ**
ಲೇ: ಎಚ್.ಎಂ.ಪರಮೇಶ್ವರಯ್ಯ

**೭೨೩. ಉಬ್ಬಸ**
ಲೇ: ಕಿರುಗಾವಲು ರಮೇಶ

**೭೨೪. ಕಾಲರಾ**
ಲೇ: ಕರವೀರ ಪ್ರಭು ಕ್ಯಾಲಕೊಂಡ

**೭೨೫. ಕಡಲು**
ಲೇ: ಎಚ್.ನಾಗವೇಣಿ

**೭೨೬. ವೀರಮಹಿಳೆ ಅಬ್ಬಕ್ಕ**
ಲೇ: ಪುರುಷೋತ್ತಮ ಬಿಳಿಮಲೆ

**೭೨೭. ರೈತನ ಮಿತ್ರ ಎರೆಹುಳು**
ಲೇ: ಪಿ.ಶಿವರಾಮ ರೈ

**೭೨೮. ವೀರಗಾಸೆ**
ಲೇ: ರಾಜಶೇಖರ ಹನುಮಲಿ

**೭೨೯. ಕಾಗದ**
ಲೇ: ಎಂ.ಚಂದ್ರಶೇಖರಯ್ಯ

**೭೩೦. ಅಗ್ನಿ ಪರ್ವತಗಳು**
ಲೇ ಪುರುಷೋತ್ತಮ ರೆಡ್ಡಿ

**೭೩೧. ಶಿಶುನಾಳ ಶರೀಫ**
ಬಿದರಹಳ್ಳಿ ನರಸಿಂಹಮೂರ್ತಿ

**೭೩೨. ಬೆಂಕಿಕಡ್ಡಿಯ ಕಥೆ**
ಲೇ: ಕೆ.ವಿ.ಘನಶ್ಯಾಮ

**೭೩೩. ಊರಮ್ಮ ಮಾರಮ್ಮ**
ಲೇ: ಬಿ.ಎಸ್.ನಾಗರತ್ನಕುಮಾರಿ

**೭೩೪. ಉಪಗ್ರಹ ಸಂಪರ್ಕ**
ಲೇ: ಬೆ.ಗೋ.ರಮೇಶ

**೭೩೫. ಶ್ರೀ ರಾಮಕೃಷ್ಣ ಪರಮಹಂಸ**
ಲೇ: ಎಚ್.ಎನ್.ಮುರಳೀಧರ

**೭೩೬. ಕರಕುಶಲ ವಸ್ತುಗಳು**
ಲೇ: ನಾ.ಡಿಸೋಜ

**೭೩೭. ಮಾನಸಿಕ ಕಾಯಿಲೆಗಳು**
ಲೇ: ಸಿ.ಆರ್.ಚಂದ್ರಶೇಖರ್

**೭೩೮. ಹಳ್ಳಿಯ ಹಾಡುಗಳು**
ಲೇ: ಕೆ.ಆರ್.ಸಂಧ್ಯಾರೆಡ್ಡಿ

**೭೩೯. ಕೀರ್ತಿಕಿರಣ**
ಲೇ: ಎ.ಎಚ್.ಕೃಷ್ಣಕುಮಾರಿ

**೭೪೦. ಈಸೋಪನ ಕಥೆಗಳು**
ಲೇ: ಸಿ.ಎಚ್.ಭಾಗ್ಯ

**೭೪೧. ಯೇಸು ಕ್ರಿಸ್ತ**
ಲೇ: ಬಿ.ಎಸ್.ತಲ್ವಾಡಿ

**೭೪೨. ಬ್ಯಾಂಕುಗಳು**
ಲೇ: ಎಸ್.ಮಹಾಬಲೇಶ್ವರ

**೭೪೩. ಕಂಪ್ಯೂಟರ್**
ಲೇ: ಸುಧಾಮೂರ್ತಿ

**೭೪೪. ಮಣ್ಣು**
ಲೇ: ಮೋಹನ ಕುಂಟಾರ್

**೭೪೫. ಚರ್ಮರೋಗಗಳು**
ಲೇ: ಡಿ.ಪಿ.ಜಯರಾಂ

**೭೪೬. ಉತ್ಸವಗಳು**
ಲೇ: ಅಮೃತ ಸೋಮೇಶ್ವರ

**೭೪೭. ಬೆಟ್ಟಗುಡ್ಡಗಳು**
ಲೇ: ಜಿ.ಎನ್.ಅಶೋಕವರ್ಧನ

**೭೪೮. ಬೇಲೂರು ಹಳೇಬೀಡು**
ಲೇ: ಜ.ಹೋ.ನಾರಾಯಣ ಸ್ವಾಮಿ

**೭೪೯. ಬೆಂಗಳೂರು**
ಲೇ: ಕೆ.ಪುಟ್ಟಸ್ವಾಮಿ

**೭೫೦. ಕಿರುಗತೆಗಳು**
ಲೇ: ಕರೀಗೌಡ ಬೀಚನಹಳ್ಳಿ

**೭೫೧. ಕನಸುಗಳು**
ಲೇ: ಎ.ಆರ್.ನಿರೂಪಮಾ

**೭೫೨. ತುಕ್ಕು ಮತ್ತು ಪರಿಸರ**
ಲೇ: ಬಿ.ವಿ.ಸಾವಿತ್ರಿ

**೭೫೩. ಗಾದೆಗಳು**
ವಿಶ್ವನಾಥ ಬದಿಕಾನ

**೭೫೪. ಮಳೆ**
ಲೇ: ಟಿ.ಆರ್.ಅನಂತರಾಮು

**೭೫೫. ಪತ್ರಿಕೆಗಳು**
ಲೇ: ಜಿ.ಪಿ.ಬಸವರಾಜು

**೭೫೬. ಕನ್ನಡ ಗೀತೆಗಳು**
ಲೇ: ಚಿ.ಶ್ರೀನಿವಾಸರಾಜು

**೭೫೭. ಒಗಟುಗಳು ಒಡಪುಗಳು**
ಮೀರಾಸಾಬಿಹಳ್ಳಿ ಶಿವಣ್ಣ

**೭೫೮. ಯಕ್ಷಪ್ರಶ್ನೆ ಏಕಲವ್ಯ**
ಮಹಾಬಲೇಶ್ವರರಾವ್

**೭೫೯. ಬೆಪ್ಪುತಕ್ಕಡಿ ಭೋಳೇಶಂಕರ**
ಜಿ.ಎಸ್.ಭಟ್

**೭೬೦. ಮೈಸೂರು**
ಲೇ: ನೊ.ಸಂ.ತಿಮ್ಮೇಗೌಡ

**೭೬೧. ಕೃಷಿ ಮಾರುಕಟ್ಟೆ**
ಲೇ: ದಾಕ್ಷಾಯಿಣಿ

**೭೬೨. ನೀಲಕುಮಾರನ ಕಥೆ**
ಲೇ: ಎಚ್.ಬಾಲರಾಜು

**೭೬೩. ಜೇನುಸಾಕಣೆ**
ಲೇ: ಕಿಶೋರಕುಮಾರ್ ಶೇಣಿ

**೭೬೪. ಜೆನ್ ಕಥೆಗಳು**
ಲೇ: ಕೆ.ವಿ.ನಾರಾಯಣ

**೭೬೫. ಚುನಾವಣೆಗಳು**
ಲೇ: ಡಿ.ಆರ್.ನಾಗಪ್ಪ

**೭೬೬. ಡಾ. ಬಿ.ಆರ್.ಅಂಬೇಡ್ಕರ್**
ಲೇ: ಎಚ್.ಎನ್.ಶುಭದಾ

**೭೬೭. ಗೊಬ್ಬರಗಳು**
ಲೇ: ಎಚ್.ಶ್ರೀನಿವಾಸ್

**೭೬೮. ಕ್ಯಾನ್ಸರ್**
ಲೇ: ಎಸ್.ಜೆ.ನಾಗಲೋಟಿಮಠ

**೭೬೯. ರಾಮಾಯಣ**
ಲೇ: ಮಲ್ಲೇಪುರಂ ಜಿ.ವೆಂಕಟೇಶ

**೭೭೦. ಕುಟುಂಬ**
ಲೇ: ಎಂ.ಎಂ.ಶಿವಪ್ರಕಾಶ್

**೭೭೧. ಕಾಡುಗಿಳಿಗೊಂದು ಪಾಠಶಾಲೆ**
ತಿರುಮಲ ಮಾವಿನಕುಳಿ

**೭೭೨. ಜಾತಕ ಕಥೆಗಳು**
ಲೇ: ಜೆ. ಶ್ರೀನಿವಾಸಮೂರ್ತಿ

**೭೭೩. ಸಾಮಾನ್ಯ ಮಾರುಕಟ್ಟೆ**
ಲೇ: ಟಿ.ಆರ್.ಚಂದ್ರಶೇಖರ್

**೭೭೪. ಮದರ್ ಥೆರೆಸಾ**
ಲೇ: ಎಸ್.ವಿದ್ಯಾಶಂಕರ್

**೭೭೫. ಸರ್ವಜ್ಞನ ವಚನಗಳು**
ಲೇ: ಲಿಂಗರಾಜು

**೭೭೬. ನಾವು ಮತ್ತು ಸರಕಾರ**
ಲೇ: ಎಚ್.ಎಂ.ಮರುಳಸಿದ್ಧಯ್ಯ

**೭೭೭. ಮೃಗಾಲಯ**
ಲೇ: ಕುಂ. ವೀರಭದ್ರಪ್ಪ

**೭೭೮. ಹಂದಿ ಸಾಕಣೆ**
ಲೇ: ಹೆಚ್.ಕೆ.ರಾಘವೇಂದ್ರರಾವ್

**೭೭೯. ಬೀರಬಲ್**
ಲೇ: ಎನ್.ಪ್ರಭಾ

**೭೮೦. ಭೂತಾರಾಧನೆ**
ಲೇ: ಕೆ.ಕೆ.ಮಾಧವ

**೭೮೧. ರಂಗೋಲಿ**
ಲೇ: ಶಾಂತಿನಾಯಕ

**೭೮೨. ಕರ್ನಾಟಕ ಚರಿತ್ರೆ**
ಲೇ: ದೇವರಕೊಂಡಾರೆಡ್ಡಿ

**೭೮೩. ಸಿರಿಕತೆ**
ಲೇ: ಗಾಯಿತ್ರಿ ನಾವಡ

**೭೮೪. ಸಾಮಾನ್ಯ ರೋಗಗಳು**
ಲೇ: ಪ್ರದೀಪ್‌ಕುಮಾರ್ ಹೆಬ್ರಿ

**೭೮೫. ಅಕ್ಕಮಹಾದೇವಿ**
ಲೇ: ವಸುಂಧರಾ ಶ್ರೀಧರ್

**೭೮೬. ನಿಸರ್ಗ ಜಲಪಾತಗಳು**
ಲೇ: ಶ್ರೀಪಾದಶೆಟ್ಟಿ

**೭೮೭. ಯೋಜನೆಗಳು**
ಲೇ: ಟಿ.ಸಿ.ಪೂರ್ಣಿಮಾ

**೭೮೮. ಮೈಲಾರನ ಜಾತ್ರೆ**
ಲೇ: ಎಸ್.ಎಸ್.ಹಿರೇಮಠ

**೭೮೯. ವಿವಾಹ ಕಾನೂನು**
ಲೇ: ಗೀತಾ ಕೃಷ್ಣಮೂರ್ತಿ

**೭೯೦. ಎರಡು ಕಥೆಗಳು**
ಲೇ: ಅಭಿನವ

**೭೯೧. ಧೂಮಕೇತು**
ಲೇ: ಟಿ.ಬಿ.ಶ್ರೀನಾಥ ಶಾಸ್ತ್ರಿ

**೭೯೨. ಚೆನ್ನಿ ಶಾಲೆಗೆ ಸೇರಿದ್ದು**
ಲೇ: ಎಸ್.ಸಂಧ್ಯಾ

**೭೯೩. ಎರಡು ಪ್ರಸಂಗಗಳು**
ಲೇ: ಬಿ.ಎಸ್.ಭಾಸ್ಕರ್ ಮತ್ತು ಎಂ.ಬಿ.ಆಶಾ.

**೭೯೪. ಗ್ರಾಮ ನೈರ್ಮಲ್ಯ**
ಲೇ: ಸ.ರಾ.ಸುಳಿಕೊಡೆ

**೭೯೫. ಕುವೆಂಪು ವಿಚಾರಗಳು**
ಲೇ: ರಹಮತ್ ತರೀಕೆರೆ

**೭೯೬. ಮೋತಿಯ ಸಾಹಸಗಳು**
ಲೇ: ಕೆ. ಪ್ರಫುಲ್ಲ ಪೈ

**೭೯೭. ಇಂದಿರಾ ಗಾಂಧಿ**
ಲೇ: ಭಾಗೀರಥಿ ಹೆಗಡೆ

**೭೯೮. ವಿಶ್ವ ಮತ್ತು ನಮ್ಮ ಭೂಮಿ**
ಲೇ: ಕೆ. ನಟರಾಜ

**೭೯೯. ಆಮದು ರಫ್ತು**
ಲೇ: ಪ್ರಭಾಕರ ಶಿಶಿಲ

**೮೦೦. ಅರಿವು**
ಲೇ: ಎನ್.ಅಮರೇಶ

**೮೦೧. ತುಷಾರ ಕುಮಾರ**
ಲೇ: ಎ.ವಿ.ನಾವಡ

**೮೦೨. ಕಾಡ್ಯನಾಟದ ಕತೆಗಳು**
ಲೇ: ಎ.ವಿ.ನಾವಡ

**೮೦೩. ಪುಷ್ಪರಾಣಿ**
ಲೇ: ಸಿ.ವಿ.ಪ್ರಭುಸ್ವಾಮಿಮಠ

**೮೦೪. ಹೆರಿಗೆ**
ಲೇ: ಲೀಲಾವತಿ ದೇವದಾಸ

**೮೦೫. ವಚನಗಳು**
ಲೇ: ಓ.ಎಲ್.ನಾಗಭೂಷಣಸ್ವಾಮಿ

**೮೦೬. ಮಕ್ಕಳ ಮನಸ್ಸು**
ಲೇ: ಕೆ.ಎ.ಅಶೋಕ ಪೈ

**೮೦೭. ಆವಂತಿ ಕಥೆಗಳು**
ಲೇ: ವರುಣ

**೮೦೮. ಬೆಳಕಿನ ಕಡೆಗೆ**
ಲೇ: ವರ್ಷಾ

**೮೦೯. ಸಣ್ಣಾಟ**
ಲೇ: ಶ್ರೀರಾಮ ಇಟ್ಟಣ್ಣವರ

**೮೧೦. ನೀರಾವರಿ**
ಲೇ: ಅಶೋಕಕುಮಾರ ರೆಂಜೇರೆ

**೮೧೧. ಜಾದು**
ಲೇ: ಲಕ್ಷ್ಮೀ

**೮೧೨. ಕಳೆದ ಮಕ್ಕಳು**
ಲೇ: ಅನ್ನಪೂರ್ಣ

**೮೧೩. ಬದುಕಿನ ದಾರಿಗಳು**
ಲೇ: ಎ.ಕೆ.ಮೋಹನ್

**೮೧೪. ದೈತ್ಯ ಪಾಂಡಾ**
ಲೇ: ಚಂದ್ರಶೇಖರಯ್ಯ

**೮೧೫. ಮಹಿಳೆ ಮತ್ತು ಕಾನೂನು**
ಲೇ: ಕೆ.ಎಸ್.ಗೀತಾ

**೮೧೬. ನನ್ನ ಹಳ್ಳಿಯ ಪಾರ್ವತಿ**
ಲೇ: ಹೇಮಂತ್ ಕೃಷ್ಣಾ

**೮೧೭. ಬಾಹುಬಲಿ**
ಲೇ: ಚಂದ್ರ ಎನ್.ಸ್ವಾಮಿ

**೮೧೮. ಪದವುಂಟು ನನ್ನ ಎದೆಯಲ್ಲಿ**
ಲೇ: ಕೆ.ಕೆ.ಮಕಾಳಿ

**೮೧೯. ನಾಸಿರುದ್ದೀನನ ಕಥೆಗಳು**
ಲೇ: ಪ್ರಕಾಶ್ ಕಂಬತ್ತಳ್ಳಿ

**೮೨೦. ಪುಣ್ಯಕೋಟಿ**
ಲೇ: ಟಿ.ಪಿ.ಅಶೋಕ

**೮೨೧. ಅಜ್ಜಿಕಥೆಗಳು**
ಲೇ: ಚಕ್ಕೆರೆ ಶಿವಶಂಕರ್

**೮೨೨. ತೆನಾಲಿರಾಮನ ಕಥೆಗಳು**
ಲೇ: ವಿಠಲರಾವ್ ಗಾಯಕ್ವಾಡ್

**೮೨೩. ನಮ್ಮ ರಾಷ್ಟ್ರೀಯ ಚಿಹ್ನೆಗಳು**
ಪಾರಿಜಾತ ಎಸ್.ಮೂರ್ತಿ

**೮೨೪. ಕರ್ನಾಟಕದ ಜಿಲ್ಲೆಗಳು**
ಲೇ: ಎನ್.ಲಕ್ಷ್ಮೀದೇವಿ

**೮೨೫. ಗಿರಿಜನರು**
ಲೇ: ಹಿ.ಚಿ.ಬೋರಲಿಂಗಯ್ಯ

**೮೨೬. ಚೌಡಮ್ಮನ ಜಾತ್ರೆ**
ಲೇ: ಜಿ.ಗಿರಿಜ

**೮೨೭. ಹುಡುಕಾಟ**
ಲೇ: ಎಚ್.ಎಸ್.ರಾಘವೇಂದ್ರರಾವ್

**೮೨೮. ಮೂರು ಕಥೆಗಳು**
ಲೇ: ಎಂ.ಆರ್.ಹೇಮಲತಾ

**೮೨೯. ಲೀಲಾ ಟಿ ವಿ ಕೊಂಡಳು**
ಲೇ: ವಿ.ಕೆ. ಆಶಾ

**೮೩೦. ನೆಲದ ಮರೆಯ ನಿದಾನ**

ಲೇ: ಚಂದ್ರಶೇಖರ ಕಂಬಾರ

ಪುಟ: ೩೨, ವರ್ಷ: ೧೯೯೩, ರೂ: ೧.೦೦ ಮ.ಮಾ

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯವರು ಕನ್ನಡ ವಿಶ್ವವಿದ್ಯಾಲಯದ ಸ್ವರೂಪ, ಉದ್ದೇಶ, ಸಂರಚನೆಗಳ ಬಗ್ಗೆ ಹಾಗೂ ಇಲ್ಲಿನ ಸಂಶೋಧನೆಗಳ ಶಾಸ್ತ್ರವಿಧಾನಗಳ ಬಗ್ಗೆ, ಅವು ಕನ್ನಡ ಭಾಷೆಯಲ್ಲೇ ನಡೆಯಬೇಕಾದ ಅಗತ್ಯದ ಬಗ್ಗೆ *ಈ* ಕಿರುಪುಸ್ತಕದಲ್ಲಿ ಸಂಕ್ಷಿಪ್ತವಾಗಿ ದಾಖಲಿಸಿದ್ದಾರೆ. ಒಟ್ಟಿನಲ್ಲಿ ಪ್ರಥಮ ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಹಾಗೂ ಇಂದಿನ ಕನ್ನಡ ಸಂಸ್ಕೃತಿ ಕುರಿತಾಗಿ ನಡೆಸಿದ ಚಿಂತನೆಗಳು *ಈ* ಕಿರುಕೃತಿಯಲ್ಲಿವೆ.




**೮೩೧. ರಸಾಯನಶಾಸ್ತ್ರ** (ಪದವಿಪೂರ್ವ ಮೊದಲನೇ ವರ್ಷದ ಪಠ್ಯಪುಸ್ತಕ)

ಸಂ: ಕೆ.ವಿ.ರಘುನಾಥನ್

ಪುಟ: xvi+೩೩೭, ವರ್ಷ: ೧೯೯೫, ರೂ: ೭೫.೦೦

ಪರಿವಿಡಿ

೧. ರಸಾಯನ ಶಾಸ್ತ್ರದ ಪರಿಚಯ

೨. ಅನಿಲಗಳ ಚಲನ ಸಿದ್ಧಾಂತ

೩. ರಸಗಣಿತ

೪. ಪರಮಾಣು ರಚನೆ

೫. ದೀರ್ಘ ಆವರ್ತಕೋಷ್ಟಕ

೬. ರಸಾಯನಿಕ ಬಂಧಗಳು

೭. ನಿರವಯವ ರಸಾಯನಶಾಸ್ತ್ರ

೮. ಕಾರ್ಬನಿಕ್ ರಸಾಯನಶಾಸ್ತ್ರ

೯. ಪರಿಸರ ಮಲಿನತೆ

ಪದವಿಪೂರ್ವ ಮೊದಲ ವರ್ಷದ ಪಠ್ಯವಾಗಿರುವ *ಈ* ರಸಾಯನಶಾಸ್ತ್ರ ಪಠ್ಯಪುಸ್ತಕದಲ್ಲಿ ಪಠ್ಯಕ್ರಮಕ್ಕನುಗುಣವಾಗಿ ರಸಾಯನಶಾಸ್ತ್ರದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ನೀಡಲಾಗಿದೆ. ಪಠ್ಯದಲ್ಲಿ ಪಾರಿಭಾಷಿಕ ಪದಗಳಿಗೆ ಅರ್ಥಕೋಶವನ್ನು ನೀಡಲಾಗಿದೆ.

**೮೩೨. ರಸಾಯನಶಾಸ್ತ್ರ** (ಪದವಿಪೂರ್ವ ಎರಡನೇ ವರ್ಷದ ಪಠ್ಯಪುಸ್ತಕ)

ಸಂ: ಕೆ.ವಿ.ರಘುನಾಥನ್

ಪುಟ: xii+೬೩೭, ವರ್ಷ: ೧೯೯೬, ರೂ: ೧೦೦.೦೦

ಪರಿವಿಡಿ

೧. ಉಷ್ಣಚಲನ ಶಾಸ್ತ್ರ ಮತ್ತು ಉಷ್ಣರಸಾಯನಶಾಸ್ತ್ರ

೨. ರಸಾಯನಿಕ ಸಮಸ್ಥಿತಿ; ರಸಾಯನಿಕ ಕ್ರಿಯಾಚಲನಶಾಸ್ತ್ರ

೩. ಮೇಲ್ಮೈ ರಸಾಯನಶಾಸ್ತ್ರ ಅಧಿಶೋಷಣ; ವಿದ್ಯುತ್ ರಸಾಯನಶಾಸ್ತ್ರ

೪. ಘನವಸ್ತುಗಳು; ವಿಕಿರಣ ಶೀಲತೆ; ಲೋಹವಿದ್ಯೆ

೫. ಸಮನ್ವಯೀ ಸಂಯುಕ್ತಗಳು

೬. ಸೋಡಿಯಂ ಹೈಡ್ರಾಕ್ಸೈಡ್

೭. ಪಾಲಿಮಾರ್‌ಗಳು

೮. ಕಾರ್ಬೋಹೈಡ್ರೆಟ್ಸ್‌ಗಳು

೯. ತೈಲ ಮತ್ತು ಕೊಬ್ಬು; ಪ್ರೋಟಿನ್‌ಗಳು

೧೦. ನ್ಯೂಕ್ಲಿಯಿಕ್ ಆಮ್ಲಗಳು; ರಸಚಿಕಿತ್ಸೆ

ಪದವಿಪೂರ್ವ ದ್ವಿತೀಯ ವರ್ಷದ ಪಠ್ಯವಾಗಿರುವ *ಈ* ರಸಾಯನಶಾಸ್ತ್ರ ಪಠ್ಯಕ್ರಮಕ್ಕನುಗುಣವಾಗಿ ರಸಾಯನಶಾಸ್ತ್ರದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ನೀಡಲಾಗಿದೆ. ಪಠ್ಯದಲ್ಲಿ ಪಾರಿಭಾಷಿಕ ಪದಗಳಿಗೆ ಅರ್ಥಕೋಶವನ್ನು ನೀಡಲಾಗಿದೆ.

**೮೩೩. ರಸಾಯನಶಾಸ್ತ್ರ ಪುರವಣಿ**

(ಪದವಿಪೂರ್ವ ಮೊದಲನೇ ವರ್ಷದ ಪಠ್ಯ ಪುಸ್ತಕದ ಪುರವಣಿ)

ಸಂ: ಕೆ.ವಿ.ರಘುನಾಥನ್

ಪುಟ: ೪೦, ವರ್ಷ: ೧೯೯೫




**೮೩೪. ಶಾಲಾ ಶಿಕ್ಷಣದ ವಿಕೇಂದ್ರಿಕರಣ : ಎಸ್.ಡಿ.ಎಂ.ಸಿ ಕಾರ್ಯಕ್ಷಮತೆ**

ಲೇ: ಎಚ್.ಡಿ.ಪ್ರಶಾಂತ

ಪುಟ: x+೯೨, ವರ್ಷ: ೨೦೦೬, ರೂ: ೬೦.೦೦

ಪರಿವಿಡಿ

೧. ಅಧ್ಯಯನದ ವಿಧಾನ

೨. ಶಾಲಾ ಶಿಕ್ಷಣದಲ್ಲಿ ವಿಕೇಂದ್ರಿಕರಣ ನಡೆದು ಬಂದ ದಾರಿ

೩. ಶಾಲಾ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ. ಪಾತ್ರ

ಸ್ಥಳೀಯ ಸಮುದಾಯಗಳು ತಮ್ಮ ಪರಿಸರದಲ್ಲಿ ಶಿಕ್ಷಣಕ್ಕಾಗಿ ರೂಪಿಸಿಕೊಂಡ ಸಂಸ್ಥೆಗಳ ಮಹತ್ವ ಮತ್ತು ಅವುಗಳ ಕಾರ್ಯನಿರ್ವ ಹಣೆಯನ್ನು ಹಾಗೂ ವಿಕೇಂದ್ರೀಕರಣ ತತ್ವದ

ಅನುಷ್ಠಾನದ ಫಲವಾಗಿ ಎಸ್‌ಡಿಎಂಸಿ ಸಮಿತಿಗಳು ಭಾಗವಹಿಸುವ ಮತ್ತು ಕಾರ್ಯವೆಸಗುವ ಭಿನ್ನ ವಿನ್ಯಾಸಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. *ಈ* ಗ್ರಂಥವು ಪ್ರಸ್ತುತ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಎಸ್‌ಡಿಎಂಸಿಗಳ ಪಾತ್ರವನ್ನು ಪರಿಶೀಲನೆ ಮಾಡುವ ಕೆಲಸವನ್ನಷ್ಟೇ ಮಾಡದೆ *ಈ*ಗಿರುವ ವಿವರಗಳನ್ನು ನ್ಯೂನತೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಸೂಕ್ತ ಸಲಹೆಗಳನ್ನು ಕೂಡ ಕೊಡುತ್ತದೆ.




**೮೩೫. Kaleidoscope**
**English 1 & 2 for Visual Arts**
Ed : Tharakeshwar V.B. & Nikhila H.
Page : XVII + 160, Year : 2009, Rs. 100.00

**Contents**

1. Popular English
2. Painted English
3. Artistic English
4. Kaleidoscope English
5. Advertising English
6. Social English
7. Colouring English

The main objective of this book as a text for the students of fine arts and music is to take care of making the text more nearer to them by selecting the content of the lessons more familiar to them. The text aims at preparing the students conversable in English with regard to their expertise, their expression through the art pieces they have prepared, made known to other language speakers. So it intends to train the students in listening, speaking, reading and writing skills. The content of the lessons are not alien but the one which the students are experiencing in his profession, interest and appreciation. The course in English through this text will enhance the condfidence level and working knowledge in English.





## ೩೫

## ಸಂಚಾರ-ಸಂಪರ್ಕ-ವಲಸೆ




**೮೩೬. ಕನ್ನಡ ನಾಡಿನ ಸಂಚಾರ ಮತ್ತು ಸಂಪರ್ಕ**
ಮೂಲ ಲೇ: ಕೃಷ್ಣಕುಮಾರ ಕಲ್ಲೂರ
ಸಂ: ಟಿ.ಆರ್.ಚಂದ್ರಶೇಖರ
ಪುಟ: XVIII+೫೨, ವರ್ಷ: ೨೦೦೧, ರೂ: ೪೦.೦೦

ಪರಿವಿಡಿ

೧. ಎಂಟು ಅಡಿಗಲ್ಲುಗಳು
೨. ಹೆದ್ದಾರಿಗಳು ಹಿನ್ನೆಲೆ
೩. ಅಭಿವೃದ್ಧಿ ಚತುರ್ಮುಖಗಳು
೪. ಮಿಕ್ಕ ಸಂಪರ್ಕ ಸಾಧನಗಳು

ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಬಗ್ಗೆ ನಿರ್ದಿಷ್ಟವಾದ ಕಲ್ಪನೆ ಮತ್ತು ಚಿಂತನೆಗಳನ್ನು ಆಧಾರಭೂತವಾಗಿರಿಸಿ ಕರ್ನಾಟಕ ಏಕೀಕರಣವಾದ ಐತಿಹಾಸಿಕ ಸಂದರ್ಭದಲ್ಲಿ *ಈ* ಕೃತಿಯನ್ನು ರಚಿಸಲಾಗಿದೆ. ನಮ್ಮ ನಾಡು, ನುಡಿ, ಶಿಕ್ಷಣ, ಕೈಗಾರಿಕೆ, ಭೌಗೋಳಿಕ ಪರಿವೇಷ, ವ್ಯಾಪಾರ, ವಾಣಿಜ್ಯ, ಉದ್ಯೋಗ, ಅಂತರರಾಜ್ಯ ಸಂಬಂಧಗಳು, ಸಾಂಸ್ಕೃತಿಕ ಆಶಯಗಳು, ಗಡಿಚಿಂತನೆಗಳು, ಯೋಜನೆಗಳು ಮುಂತಾದ ಹಲವು ಮುಖಗಳ ಸೂಕ್ಷ್ಮ ಚಿಂತನೆಗಳೂ *ಈ* ಕೃತಿಯಲ್ಲಿ ದಾಖಲಾಗಿವೆ.

**೮೩೭. ಕನ್ನಡಿಗರ ಗೋವೆ ವಲಸೆ**
ಲೇ: ಹರಿಶ್ಚಂದ್ರ ದಿಗ್ಸಂಗೀಕರ್
ಪುಟ: xiv+೭೪, ವರ್ಷ: ೧೯೯೩, ರೂ: ೩೬.೦೦

ಪರಿವಿಡಿ

೧. ಗೋವೆ ಕರ್ನಾಟಕ ಐತಿಹಾಸಿಕ ಸಂಬಂಧ
೨. ಗೋವೆಯ ಸಂಕ್ಷಿಪ್ತ ಪರಿಚಯ

೩. ಗೋವೆ ವಲಸೆ ಒಂದು ವಿವೇಚನೆ

೪. ವಲಸೆಯಿಂದಾಗುವ ಪರಿಣಾಮಗಳು

೫. ವಲಸೆ

೬. ಗೋವೆ ಕನ್ನಡದ ಕಾರ್ಯಚಟುವಟಿಕೆ ನಡೆದುಬಂದ ದಾರಿ

ಸಮಾಜದ ಅನಿವಾರ್ಯ ಪ್ರಕ್ರಿಯೆಯಾದ ಹೊರವಲಸೆಯ ಬಗ್ಗೆ *ಈ* ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದ್ದು, ಗೋವೆ ರಾಜ್ಯಕ್ಕೆ ವಲಸೆ ಹೋದ ಕನ್ನಡಿಗರ ಬಗ್ಗೆ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ನಡೆಸಿದ ಅಧ್ಯಯನದ ಫಲ *ಈ* ಪುಸ್ತಕ.

**೮೩೮. ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ**

ಲೇ: ಪಿ. ಮಹಾದೇವಯ್ಯ

ಪುಟ: x+೪೮, ವರ್ಷ: ೧೯೯೯, ರೂ: ೩೦.೦೦

ಪರಿವಿಡಿ

೧. ಅಧ್ಯಯನದ ನೆಲೆಗಳು

೨. ಬಳ್ಳಾರಿ ಜಿಲ್ಲೆಯ ಸ್ಥೂಲ ಪರಿಚಯ

೩. ವಲಸೆಯ ಪರಿಭಾಷೆ-ತೆಲುಗರ ವಲಸೆಗೆ ಕಾರಣಗಳು

೪. ತೆಲುಗು ವಲಸಿಗರ ಸ್ಥಿತಿ ಗತಿ

೫. ತಿರುವಲಸೆ

ತೆಲುಗರು, ಆಂಧ್ರದಿಂದ ಬಳ್ಳಾರಿಗೆ ಯಾವ ಕಾರಣಕ್ಕಾಗಿ ವಲಸೆ ಬಂದಿದ್ದಾರೆ, ಬಳ್ಳಾರಿಯ ಯಾವ ತಾಲೂಕು, ಯಾವ ಗ್ರಾಮಕ್ಕೆ, ಆಂಧ್ರದ ಯಾವ ಜಿಲ್ಲೆ ತಾಲೂಕು ಗ್ರಾಮಗಳಿಂದ ಅವರು ವಲಸೆ ಬಂದಿದ್ದಾರೆ ಎಂಬುದನ್ನು ಸ್ಥೂಲವಾಗಿ *ಈ* ಕೃತಿಯಲ್ಲಿ ಅಧ್ಯಯನ ಮಾಡಲಾಗಿದೆ.

## ೩೬

## ಸಂಶೋಧನೆ

**೮೩೯. ಸಂಶೋಧನ ಪ್ರಸ್ತಾವ**

ಲೇ: ಎಂ. ಚಂದ್ರಪೂಜಾರಿ

ಪುಟ: iv+೨೨, ವರ್ಷ: ೨೦೦೮, ರೂ: ೧೦.೦೦

*ಈ* ಪುಸ್ತಕದಲ್ಲಿ ಸಂಶೋಧನ ಪ್ರಸ್ತಾವ ರಚನೆ ಕುರಿತು ಚರ್ಚಿಸಲಾಗಿದೆ. ಸಂಶೋಧನ ಪ್ರಸ್ತಾವ ಎಲ್ಲ ಸಂಶೋಧನೆಗಳಲ್ಲೂ ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಇದೊಂದು ರೀತಿಯಲ್ಲಿ ಸಂಶೋಧನೆಗೆ ಅಡಿಪಾಯವಿದ್ದಂತೆ. *ಈ* ಕೃತಿಯಲ್ಲಿ ಸಂಶೋಧನ ಪ್ರಸ್ತಾವದ ವಿವಿಧ ಹಂತಗಳನ್ನು ಪರಿಚಯಿಸುವುದರ ಜತೆಗೆ ಸಂಶೋಧನ ವಿದ್ಯಾರ್ಥಿಗಳನ್ನು ಸಾಮಾನ್ಯವಾಗಿ ಕಾಡುವ ಮತ್ತೊಂದು ಸಮಸ್ಯೆಯಾದ ಸಂಶೋಧನ ವಿಷಯದ ಆಯ್ಕೆಯ ಸಮಸ್ಯೆಗಳನ್ನು ಚರ್ಚಿಸಲಾಗಿದೆ.

**೮೪೦. ಸಂಶೋಧನೆ ಏನು? ಏಕೆ? ಹೇಗೆ?**

ಸಂ : ಎಂ. ಚಂದ್ರಪೂಜಾರಿ

ಪುಟ : viii + ೨೬೨, ವರ್ಷ : ೨೦೦೯, ರೂ. ೧೨೦.೦೦

ಪರಿವಿಡಿ

೧. ಸಂಶೋಧನೆ ಅಂದರೇನು?

೨. ಯಾಕೆ ಸಂಶೋಧನೆ?

೩. ಹೇಗೆ ಸಂಶೋಧನೆ?

೪. ವಿಷಯ ಆಯ್ಕೆ

೫. ಸಮಸ್ಯೀಕರಿಸುವುದು

೬. ಸಂಶೋಧನ ಪ್ರಸ್ತಾವ

೭. ಸಾಕ್ಷಿ ಪುರಾವೆಗಳ ಸಂಗ್ರಹ

೮. ವಾದ ಮಂಡನೆ

ಈ ಕೃತಿ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನ ಮತ್ತು ಸಂಶೋಧನೆಯ ದೃಷ್ಟಿಕೋನಗಳನ್ನು ಬದಲಾಯಿಸಲು ಪೂರಕವಾಗುವ ಸಾಕಷ್ಟು ನೆಲೆಗಳನ್ನು ನೀಡಿರುವುದು ವಿಶೇಷವಾಗಿದೆ. ಸ್ಥಾಪಿತ ವಾದಗಳೊಂದಿಗೆ ಸಂವಾದ ನಡೆಸಿ ಹೊಸ ವಾದವನ್ನು ಪ್ರತಿಪಾದನೆ ಮಾಡುವುದು ಮತ್ತು ಈಗಾಗಲೆ ಸ್ಥಾಪಿತವಾದ ವಾದಗಳೊಂದಿಗೆ ಸಂವಾದ ನಡೆಸುವುದು ಈ ಕೃತಿಯ ವಿಶೇಷ. ಸಂಪನ್ಮೂಲಗಳ ಸ್ಥಾನಮಾನಗಳ ಅಸಮಾನ ಹಂಚುವಿಕೆಗೆ ಕಾರಣವಾಗಿರುವ ಸತ್ಯವಾದಗಳನ್ನು ಅಲ್ಲಗಳೆದು ಹೊಸ ಸತ್ಯವಾದಗಳನ್ನು ಮುಂಚೂಣಿಗೆ ತರುವುದು ಸಂಶೋಧನೆಯ ಬಹುದೊಡ್ಡ ಜವಾಬ್ದಾರಿ ಎನ್ನುವುದು ಕೂಡ ಈ ಬರಹದ ಬಹುಮುಖ್ಯವಾದ.

**೮೪೧. ಸಂಶೋಧಕರು ಮತ್ತು ಕ್ಷೇತ್ರಕಾರ್ಯ**

ಲೇ : ಎಂ. ಚಂದ್ರಪೂಜಾರಿ

ಪುಟ: vi+೪೪, ವರ್ಷ: ೨೦೦೫, ರೂ: ೧೦.೦೦

ಈ ಪುಸ್ತಕದಲ್ಲಿ ಮಾಹಿತಿ ಸಂಗ್ರಹಿಸುವ ವಿಧಾನಗಳಿಗೆ ಸಂಬಂಧಿಸಿದ ಪ್ರಮುಖ ಮೂರು ಸಂಗತಿಗಳನ್ನು ಚರ್ಚಿಸಲಾಗಿದೆ. ಮಾಹಿತಿ ಸಂಗ್ರಹ ವಿಧಾನಗಳ ತಾತ್ವಿಕ ಹಿನ್ನೆಲೆ, ಮಾಹಿತಿ ಸಂಗ್ರಹ ಕೆಲಸದಲ್ಲಿ ಸಂಶೋಧಕರು ಎದುರಿಸಬೇಕಾದ ಸಮಸ್ಯೆಗಳು ಹಾಗೂ ವಿಧಾನಗಳ ಅನುಕೂಲತೆಗಳು ಮತ್ತು ಅನಾನುಕೂಲತೆಗಳ ಕುರಿತ ಚರ್ಚೆ ಈ ಕೃತಿಯ ಮುಖ್ಯವಸ್ತು.



**೮೪೨. ಸಮಾಜ ಸಂಶೋಧನೆ**

ಲೇ : ಚಂದ್ರಪೂಜಾರಿ

ಪುಟ: xii+೨೧೬, ವರ್ಷ: ೨೦೦೫, ರೂ: ೮೦.೦೦

ಪರಿವಿಡಿ

೧. ಸಮಾಜ ಥಿಯರಿಗಳು ಮತ್ತು ಸಂಶೋಧನೆ

೨. ಸಂಶೋಧನಾ ಸಂಗತಿಗಳು

೩. ಸಂಶೋಧಕರು ಮತ್ತು ಸಾಮಾಜಿಕ ಪರಿವರ್ತನೆ

೪. ಸಮಸ್ಯೆ ಮತ್ತು ಸಮಸ್ಯೀಕರಣ

೫. ಮಾಹಿತಿ ಸಂಗ್ರಹ-ಅನುಷಂಗಿಕ ದಾಖಲೆಗಳು

೬. ಪ್ರಾಥಮಿಕ ಮಾಹಿತಿ ಸಂಗ್ರಹ ವಿಧಾನಗಳು

೭. ಸಂಶೋಧನಾ ಮಾಹಿತಿ ವಿಶ್ಲೇಷಣೆ

ಸಾಮಾಜಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನಾ ವೈಧಾನಿಕತೆಯನ್ನು ಕುರಿತು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ಅಧ್ಯಯನಕ್ಕೆ ಕುರಿತಂತೆ ಇರುವ ಸಿದ್ಧಾಂತಗಳು ಮತ್ತು ವಾಗ್ವಾದಗಳನ್ನು ಗಮನಿಸಿಕೊಂಡು ಹಾಗೂ ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳನ್ನು ಬಳಸಿಕೊಂಡು ವೈಧಾನಿಕತೆಯ ಸ್ವರೂಪದ ಸಾಧ್ಯತೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ಸಂಶೋಧನೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕಲೆಹಾಕುವ ಮತ್ತು ವಿಶ್ಲೇಷಿಸುವ ಕುರಿತು ಇಲ್ಲಿ ಚರ್ಚಿಸಲಾಗಿದೆ.

**೮೪೩. ಸಂಶೋಧನೆಯ ಎರಡು ಹೆಜ್ಜೆಗಳು**

ಲೇ: ಎಚ್.ಎಂ.ಮರುಳಸಿದ್ದಯ್ಯ

ಪುಟ: ೨೮, ವರ್ಷ: ೧೯೯೩, ರೂ: ೧.೦೦

ಸೈದ್ಧಾಂತಿಕ ಸಂಶೋಧನೆ ಮತ್ತು ಅನ್ವಯಿಕ ಸಂಶೋಧನೆಗಳನ್ನು ಪಾರಸ್ಪರಿಕ ಸಂಬಂಧದ ಹಿನ್ನೆಲೆಯಲ್ಲಿ ಈ ಬರಹ ಗ್ರಹಿಸುತ್ತದೆ. ಸಂಶೋಧನಾ ಜಗತ್ತು, ಮಜಲು, ವಿಷಯ, ವಿನ್ಯಾಸ, ಪೂರ್ವ ಸಿದ್ಧಾಂತ ಪ್ರಮೇಯ, ಪರಿಕಲ್ಪನೆ, ಕ್ಷೇತ್ರಕಾರ್ಯ, ವಿಶ್ಲೇಷಣೆ, ವ್ಯಾಖ್ಯಾನ, ನೈತಿಕ ಪ್ರಶ್ನೆ ಹೀಗೆ ಹತ್ತು ಹಲವು ಅಂಶಗಳನ್ನು ಇದು ಸಾದರಪಡಿಸುತ್ತದೆ.



**೮೪೪. ಸಮಾಜವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು**

ಲೇ: ಬಿ.ಎಸ್.ಚಂದ್ರಶೇಖರ್

ಪುಟ: xvi+೧೭೬, ವರ್ಷ: ೨೦೦೧, ರೂ: ೭೫.೦೦

ಪರಿವಿಡಿ

೧. ವಿಜ್ಞಾನ-ಸಂಶೋಧನೆ

೨. ಸಂಶೋಧನಾ ವಿನ್ಯಾಸ - ಸಂಪ್ರತ್ಯಗಳು, ಪ್ರಾಕಲ್ಪನೆ

೩. ಸಂಶೋಧನಾ ತಂತ್ರಗಳು

೪. ದತ್ತಾಂಶ ಸಂಗ್ರಹಣೆ

೫. ಅವಲೋಕನ

೬. ಪ್ರಶ್ನಾವಳಿ, ಸಂದರ್ಶನ, ನಮುನಾ ವಿಧಾನ

೭. ಶ್ರೇಣೀಕರಣ ವಿಧಾನಗಳು

೮. ವಿಶ್ಲೇಷಣೆ-ವರದಿ

ಸಾಮಾಜಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನಾ ಕ್ರಮದಲ್ಲಿ ಅನುಸರಿಸಬೇಕಾದ ವಿಧಿವಿಧಾನಗಳನ್ನು ಅತ್ಯಂತ ಸಕ್ರಮವಾಗಿ, ಸೂಕ್ಷ್ಮವಾಗಿ ಮತ್ತು ವೈಜ್ಞಾನಿಕವಾಗಿ ವರ್ಗೀಕೃತಗೊಳಿಸಿ ಉಚಿತ ನಿದರ್ಶನಗಳೊಡನೆ ಔಚಿತ್ಯಪೂರ್ಣವಾಗಿ ಈ ಗ್ರಂಥದಲ್ಲಿ ವಿವರಿಸಲಾಗಿದೆ. ಸಮಾಜವಿಜ್ಞಾನದ ಬಗ್ಗೆ ಸಂಶೋಧನೆ ಮಾಡಬಯಸುವವರು ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಇಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ.

## ೮೪೫. ಸಾಂಸ್ಕೃತಿಕ ಸಂಶೋಧನೆ : ಒಂದು ಮುನ್ನೋಟ

ಲೇ: ತಾಳ್ತಜೆ ವಸಂತಕುಮಾರ

ಪುಟ: iv+೨೪, ವರ್ಷ: ೧೯೯೮, ರೂ: ೫.೦೦

ಸಂಸ್ಕೃತಿಯೊಂದರ ಅಧ್ಯಯನದ ಹೊಸ ಸಾಧ್ಯತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸಮಾಜವೊಂದರ ಸಾಂಸ್ಕೃತಿಕ ಅಧ್ಯಯನವು ಸಾಂಸ್ಕೃತಿಕ ಘಟಕಗಳು ಮತ್ತು ಪರಿಕಲ್ಪನೆಗಳ ನಿರ್ವಚನ, ವಿಶ್ಲೇಷಣೆ, ಸಾಂಸ್ಕೃತಿಕ ಸಂಬಂಧಗಳ ನಿಷ್ಕರ್ಷ, ಸಾಂಸ್ಕೃತಿಕ ಸಂವಾದಗಳ ಸಾಧ್ಯತೆ, ಮುಂತಾದ ಒಳಹೊರ ವಲಯಗಳಿಗೆ ವ್ಯಾಪಿಸಿಕೊಳ್ಳುತ್ತದೆ. *ಈ* ದೃಷ್ಟಿಯಿಂದ ನಮ್ಮ ಸಾಂಸ್ಕೃತಿಕ ಸಂಶೋಧನೆಯು ಸಾಗಬಹುದಾದ ದಿಕ್ಕುಗಳ ಸೂಚಿಯನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.





# ೩೭

# ಸಮಾಜಶಾಸ್ತ್ರ-ಸಮಾಜವಾದಿ ಚಿಂತನೆ




## ೮೪೬. ರಾಮಮನೋಹರ ಲೋಹಿಯಾ ಚಿಂತನೆ

ಸಂ: ನಟರಾಜ್ ಹುಳಿಯಾರ್

ಪುಟ: xvi+೩೩೬, ವರ್ಷ: ೨೦೦೮, ರೂ: ೧೨೦.೦೦

ಪರಿವಿಡಿ

೧. ಜಾತಿ, ಮತ, ವರ್ಗ, ಮಹಿಳೆ

೨. ಮಾರ್ಕ್ಸ್‌ವಾದಿ, ಗಾಂಧೀವಾದ ಮತ್ತು ಸಮಾಜವಾದ

೩. ಚರಿತ್ರೆ, ಸಂಶೋಧನೆ, ಬರವಣಿಗೆ

೪. ಸಂಸ್ಕೃತಿ, ಪುರಾಣ

೫. ಭಾಷೆ

೬. ಸಮಾಜವಾದ, ಸಂಘಟನೆ, ಪುನರ್ ನಿರ್ಮಾಣ

ಆಧುನಿಕ ಕನ್ನಡ ಚಿಂತನೆಯ ಮೇಲೆ ಹಾಗೂ ಕನ್ನಡನಾಡಿನ ಚಳುವಳಿಗಳು ಹಾಗೂ ರಾಜಕಾರಣಿಗಳ ಮೇಲೆ ವಿಶಿಷ್ಟ ಪ್ರಬಾವ ಬೀರಿರುವ ಲೋಹಿಯಾ ಚಿಂತನೆಗಳ ಸಮಸ್ತಮುಖಗಳನ್ನು ಪ್ರತಿನಿಧಿಸುವ ಬರಹಗಳು *ಈ* ಸಂಪುಟದಲ್ಲಿವೆ.

## ೮೪೭. ವಿವಾಹ ಮತ್ತು ಕುಟುಂಬ

ಲೇ: ಕವಿತಾ ರೈ

ಪುಟ: iv+೪೪, ವರ್ಷ: ೨೦೦೭, ರೂ: ೧೦.೦೦

ಪ್ರಾಚೀನ ಸಮಾಜದ ಲೈಂಗಿಕ ಸಂಬಂಧಗಳು ಆಧುನಿಕ ಸಮಾಜದ ಲೈಂಗಿಕ ಸಂಬಂಧಗಳಿಗಿಂತ ಹೇಗೆ ಭಿನ್ನ ಹಾಗೂ ವ್ಯತಿರಿಕ್ತ ಮತ್ತು ವಿವಾಹ ವ್ಯವಸ್ಥೆ ಎಂದು ಮತ್ತು ಯಾಕೆ ಹುಟ್ಟಿತು ಎಂಬ ಅಧ್ಯಯನಾತ್ಮಕ ವಿಶ್ಲೇಷಣೆ *ಈ* ಕಿರುಗ್ರಂಥದಲ್ಲಿದೆ.

**೮೪೮. ವೃದ್ಧರ ಪರಿಕಲ್ಪನೆ**

ಸಂ: ಡಾ. ಎಚ್.ಡಿ. ಪ್ರಶಾಂತ್

ಪುಟ: X+೧೧೪, ವರ್ಷ: ೨೦೦೩, ರೂ: ೪೦.೦೦

ಪರಿವಿಡಿ

೧. ವೃದ್ಧರ ಪರಿಕಲ್ಪನೆ
೨. ವೃದ್ಧರ ಸಂಖ್ಯೆ : ಒಂದು ಅವಲೋಕನ
೩. ಭಾರತದಲ್ಲಿ ವೃದ್ಧರು : ವಿಷಯ ಪ್ರವೇಶ
೪. ವೃದ್ಧರ ಸಮಸ್ಯೆಗಳ ಸ್ವರೂಪ
೫. ಕುಟುಂಬ: ವೃದ್ಧರ ಆರೈಕೆ
೬. ಕೆಲವು ವಿವಾದಾಂಶಗಳ ಬಗ್ಗೆ ವೃದ್ಧರ ಮನೋಪ್ರವೃತ್ತಿ: ಒಂದು ವಿಶ್ಲೇಷಣೆ

ಕನ್ನಡ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಭಾರತದಲ್ಲಿ ವೃದ್ಧರು' ಎಂಬ ವಿಚಾರಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಇಲ್ಲಿ ಸಂಕಲಿಸಲಾಗಿದೆ. ಪಕ್ವ ಅನುಭವಗಳು ಹಾಗೂ ಪ್ರಾಚೀನ ಸಂಸ್ಕೃತಿಯ ಜೀವಂತ ನಿಧಿಗಳಂತಿರುವ ವೃದ್ಧರ ಸಮಸ್ಯೆಗಳ ಸಂಕೀರ್ಣ ಸ್ವರೂಪ ವನ್ನು *ಈ* ಕೃತಿ ವಿಶ್ಲೇಷಿಸುತ್ತದೆ.

**೮೪೯. ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ**

ಸಂ: ಚಂದ್ರಶೇಖರ ದಾಮ್ಲೆ

ಪುಟ: XVI+೫೨೬, ವರ್ಷ: ೨೦೦೩, ರೂ: ೨೦೦.೦೦

ಸಮಾಜ ವಿಜ್ಞಾನಗಳಲ್ಲಿರುವ ಮೂಲ ಪದಗಳಿಗೆ ಸರ್ವಸಮ್ಮತವಾದ ಸಮರ್ಪಕ ಪರ್ಯಾಯ ಪದಗಳು *ಈ* ಪದಕೋಶದಲ್ಲಿವೆ.

**೮೫೦. ಸಮಾಜವಾದಿ ಹೋರಾಟಗಾರರ ಸಂದರ್ಶನ : ಸಂಪುಟ ೧**

ಲೇ: ಬಿ. ಪೀರ್ ಬಾಷ

ಪುಟ: xiv+೩೨೬, ವರ್ಷ: ೨೦೦೭, ರೂ: ೧೨೦

ಪರಿವಿಡಿ

೧. ಆ ಒಂದು ದೃಢ ಹೆಜ್ಜೆ ಸಾಕು ನನಗೆ
೨. ಸಾವರ್ಕರ್ ತಲೆಗೆ ರೆಡ್‌ಕ್ಯಾಪ್ ಹಾಕಿದ್ದೆ
೩. ಮತ ಅಂದ್ರೆ ಸೋಷಲಿಸ್ಟ್ ಪಾರ್ಟೀನೆ
೪. ಕಿಸೇರೊಕ್ಕ ರೊಟ್ಟಿಭಿಕ್ಷಾ....
೫. ಒಂಟಿ ಕಂಬದ ಡೇರೆ
೬. ಸಮಾಜವಾದಿಗಳು ವಿದೇಶಿ ಕಾರುಗಳಲ್ಲಿ
೭. ಪಾರ್ಲಿಮೆಂಟರಿಗಿನ ಬೆಟರ್ ಸಿಸ್ಟಂ ಇಲ್ಲ
೮. ಗಾಂಧೀ ಸತ್ತಾಗ ಅವ್ರು ಪೇಡೆ ತಿಂದ್ರು
೯. ಸಂಘರ್ಷ ಯಾಕೆ ಬೇಕು ಅಂದ್ರೆ...

ರಾಮಮನೋಹರ ಲೋಹಿಯ ಅವರ ನೇರ ಸಂಪರ್ಕವಿದ್ದ ಸಮಾಜವಾದಿ ಚಳವಳಿಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದ ಮತ್ತು *ಈ*ಗಲೂ ಲೋಹಿಯಾ ಚಿಂತನೆಗಳನ್ನು ತಮ್ಮ ಬದುಕಿನಲ್ಲಿ ಜೀವಂತವಾಗಿ ಇಟ್ಟುಕೊಂಡಿರುವ, ಲೌಕಿಕ ಆಸೆಗಳಿಂದ ದೂರವಿರುವ ೮ ಮಂದಿ ಹಿರಿಯರನ್ನು ಸಂದರ್ಶಿಸಿ *ಈ* ಸಂಪುಟವನ್ನು ಸಿದ್ಧಪಡಿಸಲಾಗಿದೆ. ಇಲ್ಲಿನ ಸಂದರ್ಶನಗಳ ವಿಶಿಷ್ಟತೆಯೆಂದರೆ, ಇಲ್ಲಿ ಬರುವ ನಿರ್ದಿಷ್ಟ ವ್ಯಕ್ತಿಯ ಅಥವಾ ಪಕ್ಷದ ಕತೆಯು ಹಲವು ವ್ಯಕ್ತಿಗಳ ಹಲವು ಪಕ್ಷಗಳ ಕಥೆಯಾಗಿ ಸಂಕೀರ್ಣವಾಗಿ ಹೆಣೆದುಕೊಳ್ಳುವುದು. *ಈ* ಅರ್ಥದಲ್ಲಿ ಇದು ಭಾರತದ ರಾಜಕಾರಣ, ಚಳುವಳಿ ಹೋರಾಟಗಾರ ಪರಿಮಿತಿ ಹಾಗೂ ಸಾಧನೆಗಳನ್ನು ಸಾದರಪಡಿಸುವ ಕೃತಿಯಾಗಿದೆ.

# ೩೮

# ಸಾಮಾಜಿಕ ಸಮಸ್ಯೆ




**೮೫೧. ಕರಾವಳಿ ಕರ್ನಾಟಕದ ಕೋಮುವಾದ**

ಲೇ: ಎಂ. ಚಂದ್ರ ಪೂಜಾರಿ, ನಿತ್ಯಾನಂದ ಬಿ.ಶೆಟ್ಟಿ

ಪುಟ: vi+೫೦, ವರ್ಷ: ೨೦೦೮, ರೂ: ೧೦.೦೦

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಒಂದಾಗಿರುವ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಅತ್ಯಂತ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಕೋಮುವಾದದ ಸ್ವರೂಪವನ್ನು ವಿಶ್ಲೇಷಿಸುವುದು *ಈ* ಅಧ್ಯಯನದ ಮುಖ್ಯ ಉದ್ದೇಶ. ಒಂದು ಪ್ರಾದೇಶಿಕ ಬೆಳವಣಿಗೆಗೆ ಮಾದರಿಯಾಗ ಬಹುದಾದ ಎಲ್ಲ ಗುಣಲಕ್ಷಣಗಳು ಉಳ್ಳ *ಈ* ಜಿಲ್ಲೆ ಕೋಮು ವಾದದ ಬೆಳವಣಿಗೆಗೂ ಹೇಗೆ ಮಾದರಿಯಾಗು ತ್ತಿದೆ. ಎಂಬುದನ್ನು *ಈ* ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.




**೮೫೨. ಮತೀಯ ಭಯಾವತಾರ**

ಸಂ : ಮೊಗಳ್ಳಿ ಗಣೇಶ

ಪುಟ : xii + ೧೦೦, ವರ್ಷ, ೨೦೦೯, ರೂ. ೮೦.೦೦

ಪರಿವಿಡಿ

೧. ಮತ ಮೌಢ್ಯಗಳ ಅಂಧಶ್ರದ್ಧೆ

೨. ಹಿಂಸೆಯ ಪಶುತ್ವ ಧರ್ಮವಲ್ಲ

೩. ವಿಕೃತ ಮತಾಚರಣೆ ಮಹಾ ಅಪರಾಧ

೪. ಭಯೋತ್ಪಾದನೆಯ ಸಾಮ್ರಾಜ್ಯಶಾಹಿ ರಾಜಕಾರಣ

೫. ಮತೀಯ ಭಯೋತ್ಪಾದನೆ ಧರ್ಮ ಸಮ್ಮತವಲ್ಲ

೬. ದೇವರ ಹೆಸರಿನ ಹಿಂಸೆ

೭. 'ಮನುಷ್ಯ ಜಾತಿ ತಾನೊಂದೆವಲಂ'

೮. ಜಾತ್ಯತೀತ ಸಂವೇದನೆಯ ನಿಜ ಸೃಜನೆ

೯. ಸೃಜಶೀಲತೆಗೆ ಜಾತಿಯ ಹಂಗೇಕೆ

೧೦. ಸರ್ವೋದಯವೆ ಸಾಹಿತ್ಯದ ಬುನಾದಿ

ಮತೀಯ ಭಯೋತ್ಪಾದನೆ ಇಂದು ನಮ್ಮ ಸಮಾಜ ಎದುರಿಸುತ್ತಿರುವ ಒಂದು ಗಂಭೀರ ಸಮಸ್ಯೆ. *ಈ* ಸಮಸ್ಯೆಗೆ ನಮ್ಮ ವಿದ್ಯಾರ್ಥಿವೃಂದ ಹೇಗೆ ಪ್ರತಿಕ್ರಿಯಿಸುತ್ತದೆ ಮತ್ತು ಅವರೊಳ ಗಿರುವ ವೈಚಾರಿಕ ಜಾಗೃತಿಯ ಆಳವನ್ನು ಅರಿಯಲು ವಿಶ್ವವಿದ್ಯಾಲಯ ಸಂಯೋಜಿಸಿರುವ 'ಕುವೆಂಪು ವೈಚಾರಿಕ ಸ್ಪರ್ಧೆ'ಯಲ್ಲಿ ಸಲ್ಲಿಸಲ್ಪಟ್ಟ ಲೇಖನಗಳ ಸಂಕಲನವಿದು. ವೈಚಾರಿಕ ಜಾಗೃತಿಯ ಅರಿವನ್ನು ಮೈದುಂಬಿಕೊಂಡು ವಿದ್ಯಾರ್ಥಿಗಳು ಬರೆದಿರುವ *ಈ* ಲೇಖನಗಳು ಕನ್ನಡದ ವೈಚಾರಿಕ ಗದ್ಯಕ್ಕೆ ತಕ್ಕಂತಿವೆ.

೩೯

# ಸಾರ್ವಜನಿಕ ಆಡಳಿತ-ಆಡಳಿತ ವಿಕೇಂದ್ರೀಕರಣ

**೮೫೩. ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಕಾಯ್ದೆಗಳು**

ಲೇ: ಎ. ಶ್ರೀಧರ

ಪುಟ: ii+೪೫, ವರ್ಷ: ೨೦೦೦, ರೂ: ೧೦.೦೦

ಕರ್ನಾಟಕದಲ್ಲಿನ ವಿವಿಧ ಪಂಚಾಯತ್‌ರಾಜ್ ಕಾಯ್ದೆಗಳನ್ನು *ಈ* ಕಿರುಪುಸ್ತಕದಲ್ಲಿ ವಿವರಿಸಲಾಗಿದೆ.

**೮೫೪. ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ**

ಲೇ: ಎಂ.ಚಂದ್ರಪೂಜಾರಿ

ಪುಟ: x+೨೭೪, ವರ್ಷ: ೨೦೦೧, ರೂ: ೧೦೦.೦೦

ವಿಕೇಂದ್ರಿತ ಅಭಿವೃದ್ಧಿ ಇಂದಿನ ಬಹುಮುಖ್ಯ ಧೋರಣೆ. *ಈ* ಧೋರಣೆಯನ್ನು ದೇಶೀಯತೆಯ ನೆರಳಿನಲ್ಲಿ ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಯ ವಿವಿಧ ನೆಲೆಗಳನ್ನು ಆಧುನೀಕರಣ ಹಾಗೂ ಸಾಂಪ್ರದಾಯಿಕಗಳ ನೆರಳಿನಲ್ಲಿ ಚರ್ಚಿಸಲಾಗಿದೆ. ನಮ್ಮ ಗ್ರಾಮಗಳಲ್ಲಿ ಅಧಿಕಾರವೆನ್ನುವುದು ಕ್ರಿಯಾಶೀಲವಾಗುವ ಬಗೆ ಹೇಗೆ, ಅಧಿಕಾರದ ಆಧುನಿಕ ಕೇಂದ್ರ ಹಾಗೂ ಅಧಿಕಾರದ ಸಾಂಪ್ರದಾಯಿಕ ಕೇಂದ್ರಗಳ ನಡುವಿನ ಸಂಬಂಧ ಯಾವ ಬಗೆಯದು? ಅಧಿಕಾರದ ಸಾಂಪ್ರದಾಯಿಕ ಅಧಿಕಾರ ಕೇಂದ್ರವು ಆಧುನಿಕ ಅಧಿಕಾರದ ಕೇಂದ್ರದ ಹುಟ್ಟಿಗೆ ಹೇಗೆ ತೊಡಕಾಗಿದೆ ಇತ್ಯಾದಿ ಸಂಗತಿಗಳನ್ನು ಇಲ್ಲಿ ಸೈದ್ಧಾಂತಿಕವಾಗಿ ಚರ್ಚಿಸಲಾಗಿದೆ.

**೮೫೫. ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು**

ಲೇ: ಎ. ಶ್ರೀಧರ

ಪುಟ: iv+೩೬, ವರ್ಷ: ೨೦೦೬, ರೂ: ೧೦.೦೦



ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯತಿ ಸದಸ್ಯರ ಕಾರ್ಯಕ್ಷಮತೆ ಅವರ ಸಾಮಾಜಿಕ, ಆರ್ಥಿಕ ಗುಣಲಕ್ಷಣಗಳ ನಡುವಿನ ಸಂಬಂಧವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಗ್ರಾಮಪಂಚಾಯತಿ ಸದಸ್ಯರ ಸಾಮಾಜಿಕ ಸ್ವರೂಪವು ಅವರ ಕಾರ್ಯಕ್ಷಮತೆಯನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು *ಈ* ಕಿರುಗ್ರಂಥ ಪರಿಶೀಲಿಸುತ್ತದೆ.




**೮೫೬. ವಿಕೇಂದ್ರೀಕರಣ ತತ್ತ್ವ-ಆಚರಣೆ**

ಸಂ: ಟಿ.ಆರ್.ಚಂದ್ರಶೇಖರ

ಪುಟ: viii+೫೪, ವರ್ಷ: ೨೦೦೦, ರೂ: ೩೦.೦೦

ಪರಿವಿಡಿ

೧. ವಿಕೇಂದ್ರಿಕರಣ ಪ್ರಯೋಗ : ಒಂದು ಪ್ರಸ್ತಾವನೆ
೨. ವಿಕೇಂದ್ರಿಕರಣ ತತ್ವ ಮತ್ತು ಆಚರಣೆ
೩. ಗ್ರಾಮಸಭೆ : ತತ್ವ ಮತ್ತು ಆಚರಣೆ

ಭಾರತದ ಒಕ್ಕೂಟ ವ್ಯವಸ್ಥೆಯ ಕೊನೆಯ ಸ್ತರ/ಘಟಕವಾದ ಗ್ರಾಮ ಪಂಚಾಯತ್ ಮಟ್ಟದಲ್ಲಿ, ವಿಕೇಂದ್ರೀಕರಣವನ್ನು ಪ್ರತಿಯೊಂದು ಗ್ರಾಮ ಹಾಗೂ ಕುಟುಂಬ ಘಟಕಕ್ಕೆ ಒಯ್ಯುವ ಗ್ರಾಮಸಭೆ ಎಂಬ ವ್ಯವಸ್ಥೆಯ ಸುತ್ತುಮುತ್ತಲೇ ಅಧ್ಯಯನಾತ್ಮಕವಾಗಿ ಬರೆದಿರುವ ಎರಡು ಲೇಖನಗಳು *ಈ* ಕೃತಿಯಲ್ಲಿವೆ.




**೮೫೭. ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್**

ಲೇ: ಎ. ಶ್ರೀಧರ್

ಪುಟ: viii+೭೨, ವರ್ಷ: ೨೦೦೨, ರೂ: ೪೦.೦೦

ಪರಿವಿಡಿ

೧. ಗ್ರಾಮಪಂಚಾಯತ್ ಮತ್ತು ಜನಜೀವನ
೨. ಗ್ರಾಮಸಭೆ
೩. ಸಾಂಸ್ಕೃತಿಕ ಬದುಕು
೪. ಅಧ್ಯಯನದ ತಥ್ಯಗಳು

ಆಡಳಿತ ವಿಕೇಂದ್ರೀಕರಣ ಪ್ರಜಾಪ್ರಭುತ್ವದ ಗುಣಾತ್ಮಕ ಕಾರ್ಯ ವಿಧಾನ. ಕೇಂದ್ರೀಕರಣದಂತಹ ಅಸಮರ್ಪಕ ಆಡಳಿತ ವ್ಯವಸ್ಥೆಗೆ ವಿಕೇಂದ್ರೀಕರಣ ಪ್ರಕ್ರಿಯೆ ಸಮರ್ಥ ಸಾಧ್ಯತೆಯಾಗಿ ಹೊರಹೊಮ್ಮಿದೆ. ಅಶಿಕ್ಷಿತ ಸಮುದಾಯದಿಂದ ಜನ ಸಮಾಜದ ಮುಖ್ಯವಾಹಿನಿಗೆ *ಈ*

ವ್ಯವಸ್ಥೆಯ ಮೂಲಕ ಸಾಗಿ ಬರುವ ಪ್ರಜಾಸತ್ತೆಯ ಉತ್ತಮ ಫಲಿತತೆ ಇಲ್ಲಿ ಚರ್ಚಿತವಾಗಿದೆ. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೊರತೆಗಳಿದ್ದರೂ *ಈ* ವ್ಯವಸ್ಥೆ ಇತ್ಯಾತ್ಮಕ ಫಲಗಳನ್ನು ನಿಧಾನವಾಗಿಯಾದರೂ ನೀಡುತ್ತದೆ ಎಂಬುದು *ಈ* ಕೃತಿಯಲ್ಲಿ ರೂಪಿತಗೊಂಡಿದೆ.

# ೪೦

# ಸ್ಥಳ ವಿಶೇಷ-ಕರ್ನಾಟಕ-ಕರ್ನಾಟಕೇತರ

**೮೫೮. ಕದ್ರಿ**

ಲೇ: ಸುಬ್ಬಣ್ಣ ರೈ

ಪುಟ: iii+೩೧, ವರ್ಷ: ೧೯೯೯ ರೂ: ೧೦.೦೦

ಮಧ್ಯಕಾಲೀನ ಭಾರತದ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿಯ ಸ್ಥಳನಾಮದ ಬಗ್ಗೆ ಹಾಗೂ ಅದು ಬೌದ್ಧ ಸಂಸ್ಕೃತಿ ಮತ್ತು ನಾಥ ಪಂಥಕ್ಕೆ ನೆಲೆಯಾಗಿದ್ದ ಬಗ್ಗೆ *ಈ* ಕಿರುಕೃತಿಯಲ್ಲಿ ಸಂಕ್ಷಿಪ್ತ ಮಾಹಿತಿಗಳನ್ನು ನೀಡಲಾಗಿದೆ.

**೮೫೯. ಮೂಡುಬಿದಿರೆಯ ವೈಶಿಷ್ಟ್ಯ**

ಲೇ: ಎಸ್.ಪಿ.ಅಜಿತ ಪ್ರಸಾದ್

ಪುಟ: iv+೨೭, ವರ್ಷ: ೨೦೦೨, ರೂ: ೧೦.೦೦

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಸಾಂಸ್ಕೃತಿಕ ಮಹತ್ತ್ವದ ಊರಾದ ಮೂಡುಬಿದರೆಯ ಇತಿಹಾಸ, ಇತಿಹಾಸದಲ್ಲಿ ರಾಜಕೀಯವಾಗಿ ಕಂಡ ಏರಿಳಿತಗಳು, ಆ ಕಾಲದ ಸಾಮಾಜಿಕ ಸಾಂಸ್ಕೃತಿಕ ವೈಶಿಷ್ಟ್ಯತೆ, ಅಂದಿನ ಆರ್ಥಿಕ ಸ್ಥಿತಿಗತಿ ಧಾರ್ಮಿಕ ಸ್ಥಿತಿಗತಿ ಬಗ್ಗೆ *ಈ* ಕಿರುಕೃತಿ ಸಾಕಷ್ಟು ಮಾಹಿತಿಗಳನ್ನು ಬಿಚ್ಚಿಡುತ್ತದೆ.




**೮೬೦. ಹೊಸಪೇಟೆ ತಾಲೂಕು ದರ್ಶನ**

ಲೇ: ಸಿ. ಮಹದೇವ ಮತ್ತು ಇತರರು

ಪುಟ: xiv+೪೫೬, ವರ್ಷ: ೨೦೦೨, ರೂ: ೨೦೦.೦೦

ಹೊಸಪೇಟೆ ತಾಲೂಕಿನ ಎಲ್ಲ ಒಳಹೊರ ವಿವರಗಳನ್ನು ಕೂಲಂಕಷವಾಗಿ ಪರಿಚಯಿಸುವ ವಿಷಯ ಸಂಪುಷ್ಟವಾದ ಮಾಹಿತಿ ಗ್ರಂಥವಿದು. ಹೊಸಪೇಟೆ ತಾಲೂಕಿನ ಪುರಾತತ್ವ, ಚರಿತ್ರೆ,

ಆಡಳಿತ, ಶಿಕ್ಷಣ, ಆರೋಗ್ಯ, ನ್ಯಾಯ ಮತ್ತು ರಕ್ಷಣೆ, ಕೈಗಾರಿಕೆ, ಸಾರಿಗೆ, ಸಂಪರ್ಕ, ಜಾನಪದ, ಸಾಹಿತ್ಯ, ಕೃಷಿ ಮತ್ತು ನೀರಾವರಿ ಮುಂತಾದ ಕ್ಷೇತ್ರಗಳ ಬಗ್ಗೆ ಇಲ್ಲಿ ಸಮೀಕ್ಷೆ ನಡೆಸಲಾಗಿದೆ.



# ೪೧

# ಹಸ್ತಪ್ರತಿಶಾಸ್ತ್ರ

**೮೬೧. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ : ಸಂಪುಟ ೧**

ಸಂ: ಎಫ್.ಟಿ.ಹಳ್ಳಿಕೇರಿ ಮತ್ತು ಕೆ.ರವೀಂದ್ರನಾಥ

ಪುಟ: xii+೫೧೨, ವರ್ಷ: ೨೦೦೦, ರೂ: ೧೫೦.೦೦

ಪರಿವಿಡಿ

೧. ೧ ರಿಂದ ೭೨೩ ಕನ್ನಡ ಕೃತಿಗಳ ಸೂಚಿ

*ಈ* ಗ್ರಂಥ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದ ೧ ರಿಂದ ೪೦೦ ಕಟ್ಟುಗಳಲ್ಲಿ ಅಡಕವಾಗಿರುವ ೭೨೩ ಕನ್ನಡ ಕೃತಿಗಳ ವಿವರಣಾತ್ಮಕ ಸೂಚಿಗಳನ್ನು ಒಳಗೊಂಡಿದೆ. ಕೃತಿ ಪರಿಚಯ, ಪ್ರತಿ ಪರಿಚಯವೆಂಬ ಎರಡು ಭಾಗಗಳಲ್ಲಿ ಹಸ್ತಪ್ರತಿಗಳನ್ನು ಪರಿಚಯಿಸಲಾಗಿದೆ. ಹೊಸಕುಮಾರರಾಮನ ಸಾಂಗತ್ಯ, ಕೊಟ್ಟೂರು ಬಸವೇಶ್ವರ ತಾರಾವಳಿ, ಎಳಮಲೆ ಗುರುಶಾಂತ ದೇವನ ಬಸವಸ್ತೋತ್ರದ ವಚನಗಳು, ಗುಂಡಬ್ರಹ್ಮಯ್ಯನ ದಾಖಲೆ ಮೊದಲಾದ ಹೊಸ ಕೃತಿಗಳ ಮಾಹಿತಿ ಇಲ್ಲಿದೆ. ಅನುಬಂಧದಲ್ಲಿ ಕವಿಸೂಚಿ, ಲಿಪಿಕಾರರ ಸೂಚಿ, ಸ್ಥಳನಾಮಸೂಚಿ ಹಾಗೂ ಹಸ್ತಪ್ರತಿ ದಾನಿಗಳ ವಿವರಗಳಿವೆ.



**೮೬೨. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ : ಸಂಪುಟ ೨**

ಸಂ: ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪ

ಪುಟ: xii+೪೫೪, ವರ್ಷ: ೨೦೦೦, ರೂ: ೨೦೦.೦೦

ಪರಿವಿಡಿ

೧. ೧ರಿಂದ ೫೪೫ರವರೆಗಿನ ಕನ್ನಡ ಕೃತಿಗಳ ಸೂಚಿ

ಪುಸ್ತಕ ಸಂಸ್ಕೃತಿ ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಹಸ್ತಪ್ರತಿ ಸಂಸ್ಕೃತಿಯ ಸಾಂಸ್ಕೃತಿಕತೆಯನ್ನು ಮನಗಾಣಿಸಿ ಕೊಡಬೇಕಾದ ಅನಿವಾರ್ಯತೆ ಇರುವುದನ್ನು *ಈ* ಕೃತಿ ತಿಳಿಸಿಕೊಡುತ್ತದೆ. ವೈದ್ಯ, ಜ್ಯೋತಿಷ್ಯ, ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ, ಅಶ್ವಶಾಸ್ತ್ರ,

ಗಜಶಾಸ್ತ್ರ, ಪಶುವೈದ್ಯ ಇವೇ ಮೊದಲಾದ ವಿಷಯಗಳನ್ನು ಗರ್ಭೀಕರಿಸಿಕೊಂಡಿರುವ ಹಸ್ತಪ್ರತಿಗಳ ಕುರಿತಾದ ಸೂಚಿ ಸಂಪುಟ ಇದಾಗಿದೆ. ಸಂಪುಟದ ಅನುಬಂಧದಲ್ಲಿ ಕವಿ, ಸ್ಥಳನಾಮ, ಲಿಪಿಕಾರರು, ಬರೆಸಿದವರು, ಹಸ್ತಪ್ರತಿ ನೀಡಿದ ದಾನಿಗಳ ಕುರಿತ ವಿವರಗಳನ್ನು ನೀಡಲಾಗಿದೆ.



**೮೬೩. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ : ಸಂಪುಟ-೩**

ಸಂ: ಎಫ್.ಟಿ. ಹಳ್ಳಿಕೇರಿ, ಕೆ.ರವೀಂದ್ರನಾಥ

ಪುಟ: xx+೫೦೬, ವರ್ಷ: ೨೦೦೬ ರೂ: ೨೦೦.೦೦

ಪರಿವಿಡಿ

೧ ರಿಂದ ೫೯೫ರವರೆಗಿನ ಕನ್ನಡ ಕೃತಿಗಳ ಸೂಚಿ

*ಈ* ಸೂಚಿ ಸಂಪುಟವು ಸಾಹಿತ್ಯ, ಧರ್ಮ, ಪುರಾಣ, ಶಾಸ್ತ್ರ, ನಿಘಂಟು, ವೈದ್ಯ ಹೀಗೆ ಹಲವಾರು ಕ್ಷೇತ್ರಗಳ ೪೦೦ ಹಸ್ತಪ್ರತಿಗಳ ಸೂಚಿಯನ್ನು ಒಳಗೊಂಡಿದೆ. *ಈ* ಹಸ್ತಪ್ರತಿಗಳ ಅವಲೋಕನದಿಂದ ವಿಸ್ತೃತ ಮತ್ತು ತೌಲನಿಕ ಅಧ್ಯಯನಕ್ಕೆ ಅವಕಾಶ ದೊರೆಯುತ್ತದೆ. *ಈ* ಸಂಪುಟದಲ್ಲಿ ೪೦೦ ಕಟ್ಟುಗಳ ೫೯೫ ಕೃತಿಗಳ ವಿವರಣಾತ್ಮಕ ಸೂಚಿಗಳಿವೆ. ಕನ್ನಡ ಪ್ರಾಚೀನ ಕಾವ್ಯ ರೂಪಗಳಲ್ಲದೆ ಬಯಲಾಟ, ಯಕ್ಷಗಾನ, ದೊಡ್ಡಾಟಗಳಂತಹ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳ ವಿವರಗಳು ಸಂಶೋಧಕರ ಅಧ್ಯಯನಕ್ಕೆ ಪೂರಕ ಆಕರಗಳಾಗಿ ನೆರವಾಗುತ್ತವೆ.

**೮೬೪. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ : ಸಂಪುಟ-೪**

ಸಂ: ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪ

ಪುಟ: xx+೪೫೪, ವರ್ಷ: ೨೦೦೬, ರೂ: ೨೦೦

ಪರಿವಿಡಿ

೧. ೧ ರಿಂದ ೫೭೫ರವರೆಗಿನ ಸೂಚಿ ಕನ್ನಡ ಕೃತಿಗಳು

*ಈ* ಸೂಚಿ ಸಂಪುಟವು ಸಾಹಿತ್ಯ, ಧರ್ಮ, ಶಾಸ್ತ್ರ, ಪುರಾಣ, ನಿಘಂಟು, ವೈದ್ಯ ಹೀಗೆ ಹಲವಾರು ಕ್ಷೇತ್ರಗಳ ನಾಲ್ಕುನೂರು ಹಸ್ತಪ್ರತಿಗಳ ಸೂಚಿಯನ್ನು ಒಳಗೊಂಡಿದೆ. ಕನ್ನಡ ಪ್ರಾಚೀನ ಕಾವ್ಯರೂಪಗಳಲ್ಲದೆ ಬಯಲಾಟ ಯಕ್ಷಗಾನ, ದೊಡ್ಡಾಟಗಳಂಥ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳ ವಿವರಗಳು *ಈ* ಗ್ರಂಥದಲ್ಲಿದ್ದು ಸಂಶೋಧಕರ ಅಧ್ಯಯನಕ್ಕೆ ಪೂರಕ ಆಕರಗಳಾಗಿ ನೆರವಾಗುತ್ತವೆ.

**೮೬೫. ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು**

ಲೇ: ವೀರೇಶ ಬಡಿಗೇರ

ಪುಟ: xx+೧೭೬, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಧರ್ಮ

೨. ಅರ್ಥ

೩. ಕಾಮ

೪. ಮೋಕ್ಷ

*ಈ* ಕೃತಿಯಲ್ಲಿ ಕನ್ನಡ ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಶಾಸ್ತ್ರದ ಪರಂಪರಾಗತ ಅಧ್ಯಯನ ನೆಲೆಗಳನ್ನು ಪ್ರಶ್ನಿಸುತ್ತಲೇ ಹೊಸ ಸಂಶೋಧನ ವಿನ್ಯಾಸಗಳನ್ನು ರೂಪಿಸುವ ಅಧ್ಯಯನವಿದೆ. ಮಾತೃಕೆಯ ಮೂಲಕ ರೂಪು ತಾಳುವ ವಂಶ ವೃಕ್ಷದ ಮಾದರಿಯನ್ನು ನಿರಾಕರಿಸಿ ಸಾಂಸ್ಕೃತಿಕ ಮಹತ್ವದ ನಿರ್ಮಾಣಗಳಾಗಿ ಬಹುಪಠ್ಯೀಯ ನೆಲೆಗಳು ಕಾಣಿಸಿಕೊಳ್ಳುವ ಬಗೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಬರಹ ಎನ್ನುವುದು ಸಾಂಸ್ಕೃತಿಕ ಯಾಜಮಾನ್ಯದ ನಿರ್ಮಾಣವಾಗಿ ಅನೇಕ ಬಾರಿ ಪ್ರಭುತ್ವದ ಆಶ್ರಯದಲ್ಲಿಯೇ ಅವಕಾಶ ಪಡೆದ ಮಿತಿಗಳನ್ನು ಇಲ್ಲಿ ವಿವೇಚಿಸಲಾಗಿದೆ.

**೮೬೬. ಕನ್ನಡ ಹಸ್ತಪ್ರತಿ ರಚನೆ : ಭಾಷಿಕ ವಿವೇಚನೆ**

ಲೇ: ಎಸ್.ಎಸ್.ಅಂಗಡಿ

ಪುಟ: xii+೯೦, ವರ್ಷ: ೨೦೦೬, ರೂ: ೫೦.೦೦

ಪರಿವಿಡಿ

೧. ಹಸ್ತಪ್ರತಿಗಳು: ಭಾಷೆ ಮತ್ತು ಸಂಸ್ಕೃತಿ

೨. ಮಾತು ಬರೆಹ ಸಂಪಾದನೆ

೩. ಒಪ್ಪಿತ ಪಾಠ, ಭಿನ್ನಪಾಠ - ಕೆಲವು ಆಲೋಚನೆಗಳು

೪. ಪಠ್ಯ ಮತ್ತು ಭಾಷೆಯ ಚಲನಶೀಲತೆ

೫. ಹಸ್ತಪ್ರತಿ ಅಧ್ಯಯನ ಮತ್ತು ಭಾಷೆಯ ಆಧುನೀಕರಣ

೬. ಹಸ್ತಪ್ರತಿ ಮತ್ತು ಅರ್ಥಗ್ರಹಣ ಸಾಮರ್ಥ್ಯ

೭. ಪಾಠಪರಿಷ್ಕರಣ ವ್ಯಾಕರಣ; ಛಂದಸ್ಸು; ನಿಘಂಟು

೮. ಹಸ್ತಪ್ರತಿ ಪ್ರಶಸ್ತಿಗಳಲ್ಲಿ ವಿಶೇಷಣಗಳು

೯. ಭಾಷೆ ಮತ್ತು ಲಿಪಿ

೧೦. ವಚನಸಾಹಿತ್ಯ ಸಂಪಾದನೆ; ದಾಸಸಾಹಿತ್ಯ ಸಂಪಾದನೆ

*ಈ* ಕೃತಿಯು ಹಸ್ತಪ್ರತಿಗಳ ಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದ ಮೊದಲನೆಯ ಕೃತಿ. ಶಾಸನಗಳ ಭಾಷೆಯನ್ನು ಕುರಿತು ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ ಹಸ್ತಪ್ರತಿಗಳಲ್ಲಿ ಕಾಣಿಸಿಕೊಳ್ಳುವ ಪ್ರಶಸ್ತಿ, ಸ್ವವಿವರ, ಮಂಗಳದಂತಹ ವಿವರಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಕೇವಲ ಭಾಷೆಯ ಸ್ವರೂಪ ಅಷ್ಟೇ ಅಲ್ಲದೆ ವಸ್ತು ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕ ವಿಶಿಷ್ಟ ಸಂಗತಿಗಳು *ಈ* ಕೃತಿಯಲ್ಲಿ ಕಾಣಿಸುತ್ತವೆ. ಮೌಖಿಕ ಭಾಷೆಗಳಿಗೆ ಮತ್ತು ಬರಹದ ಭಾಷೆಗೆ ಸಂಬಂಧಿಸಿದಂತೆ ಚರ್ಚಿಸಿರುವುದು *ಈ* ಕೃತಿಯ ಇನ್ನೊಂದು ವೈಶಿಷ್ಟ್ಯ. ಭಾಷೆಯ ಚಲನಶೀಲತೆಯು ಪಠ್ಯವೊಂದರ ನಿರ್ಮಾಣದಲ್ಲಿ ಕಾಣಿಸಿಕೊಳ್ಳುವ ರೀತಿಗಳನ್ನು ಕೂಡ ಇಲ್ಲಿ ವಿವರಿಸಲಾಗಿದೆ. ಪಾಠ ಪರಿಷ್ಕಣ ವಿನ್ಯಾಸದಲ್ಲಿ ಕಾಣಿಸಿಕೊಳ್ಳುವ ವ್ಯಾಕರಣ, ಛಂದಸ್ಸು, ನಿಘಂಟು ಇವುಗಳ ನೆಲೆಗಳನ್ನು ಗಮನಿಸಿ ಇಲ್ಲೆಲ್ಲ ಭಾಷೆ ವಹಿಸುವ ಪಾತ್ರವನ್ನು ವಿಶೇಷವಾಗಿ ಚರ್ಚಿಸಲಾಗಿದೆ.

### ೮೬೭. ಕನ್ನಡದ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ

ಲೇ: ವೀರೇಶ ಬಡಿಗೇರ

ಪುಟ: xii+೮೨, ವರ್ಷ: ೨೦೦೦, ರೂ: ೬೦.೦೦

ಪರಿವಿಡಿ

೧. ಅಧ್ಯಯನದ ತಾತ್ವಿಕ ಚೌಕಟ್ಟು ಮತ್ತು ಉದ್ದೇಶ
೨. ಹಳೆಯ ಅಧ್ಯಯನ ವಿಧಾನಗಳ ಸಂಕ್ಷಿಪ್ತ ಸಮೀಕ್ಷೆ
೩. ಸಾಫ್ಟ್‌ವೇರ್ ಅಭಿವೃದ್ಧಿಯ ಹಿಂದಿನ ಉದ್ದೇಶಗಳು
೪. ಕಂಪ್ಯೂಟರಿನಲ್ಲಿ ಕನ್ನಡ ವರ್ಣಮಾಲೆಯ ವಿನ್ಯಾಸ ಮತ್ತು ಅದರ ವಿವಿಧ ಸಾಧ್ಯತೆಗಳು ಹಾಗೂ ಮಾದರಿಗಳು
೫. ಬರಹ-ಓದು
೬. ಕನ್ನಡ ಹಸ್ತಪ್ರತಿಗಳು ಮಾಹಿತ ತಂತ್ರಜ್ಞಾನ
೭. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಸಾಫ್ಟ್‌ವೇರ್ ಬೆಳವಣಿಗೆಯ ಪರಿಣಾಮಗಳು

ಹಸ್ತಪ್ರತಿಗಳ ದಾಖಲೀಕರಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬಹುದು ಹಾಗು ಕಂಪ್ಯೂಟರ್ ಸಾಫ್ಟ್‌ವೇರ್‌ನಲ್ಲಿ ಸೃಷ್ಟಿಸಿಕೊಳ್ಳಬಹುದಾದ ಕನ್ನಡದ ವಿವಿಧ ಸಾಧ್ಯತೆಗಳ ಬಗ್ಗೆ *ಈ* ಪುಸ್ತಕದಲ್ಲಿ ವಿವರವಾದ ಮಾಹಿತಿಗಳಿವೆ.

### ೮೬೮. ಪ್ರಾಚೀನ ಲೇಖನ ಸಾಮಗ್ರಿಗಳು

ಲೇ: ಅಲ್ಬರ್ಟಿನ್ ಗೌರ್

ಅನು: ಶ್ರೀನಿವಾಸ ಹಾವನೂರು ಮತ್ತು ಲಕ್ಷ್ಮೀನಾರಾಯಣ ಆರೋರಾ

ಪುಟ: VIII+೪೦, ವರ್ಷ: ೨೦೦೩, ರೂ: ೩೦.೦೦

ಜಗತ್ತಿನ ಹಸ್ತಪ್ರತಿಗಳ ಸ್ವರೂಪ, ಬರವಣಿಗೆಯ ಪರಿಕರಗಳು, ಲಿಪಿಕಾರರ ಅನೇಕ ರೀತಿಯ ಬರವಣಿಗೆಯ ಸಾಂಸ್ಕೃತಿಕ ನೆಲೆಗಳನ್ನು *ಈ* ಪುಟ್ಟ ಕೃತಿ ಹೊತ್ತು ನಿಂತಿದೆ.

### ೮೬೯. ಹಸ್ತಪ್ರತಿ ಕ್ಷೇತ್ರಕಾರ್ಯ

ಲೇ: ಎಫ್.ಟಿ.ಹಳ್ಳಿಕೇರಿ

ಪುಟ: ೨೯, ವರ್ಷ: ೨೦೦೦, ರೂ: ೧೦.೦೦

*ಈ* ಕೃತಿಯಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯದ ವೈಧಾನಿಕತೆಯನ್ನು ಕುರಿತು ಚರ್ಚಿಸಲಾಗಿದೆ. ಹಸ್ತಪ್ರತಿಗಳ ಶೋಧದಲ್ಲಿ ಪ್ರತ್ಯಕ್ಷ ಕ್ಷೇತ್ರಕಾರ್ಯ ಹಾಗೂ ಪರೋಕ್ಷ ಕ್ಷೇತ್ರಕಾರ್ಯದ ವಿಧಾನಗಳು ಹಾಗು ಆ ಸಂದರ್ಭದಲ್ಲಿ ಸಂಶೋಧಕ ವಹಿಸುವ ಎಚ್ಚರ ಇತ್ಯಾದಿ ವಿಷಯಗಳನ್ನು ಇಲ್ಲಿ ವಿವೇಚಿಸಲಾಗಿದೆ. ಹಸ್ತಪ್ರತಿ ಕ್ಷೇತ್ರಕಾರ್ಯ ವಿಧಾನಗಳ ಕುರಿತ ಮೊದಲ ಕೃತಿ ಇದಾಗಿದೆ.




### ೮೭೦. ಹಸ್ತಪ್ರತಿ ವ್ಯಾಸಂಗ-೧ : ಗ್ರಂಥಸಂಪಾದನೆಯ ವಿಧಿವಿಧಾನಗಳು

ಸಂ: ಎ.ವಿ.ನಾವಡ ಮತ್ತು ಎಸ್.ಎಸ್.ಅಂಗಡಿ

ಪುಟ: xii+೧೨೦, ವರ್ಷ: ೨೦೦೨, ರೂ: ೬೦.೦೦

ಪರಿವಿಡಿ

೧. ಮೌಖಿಕ ಸಾಹಿತ್ಯ ಸಂಪಾದನೆ
೨. ದೇಶಿ ಸಾಹಿತ್ಯ ಸಂಪಾದನೆ
೩. ಮಾರ್ಗ ಸಾಹಿತ್ಯ ಸಂಪಾದನೆ
೪. ಶಾಸನಪಾಠ ಸಂಪಾದನೆ
೫. ಪಾಠ ಪರಿಷ್ಕರಣ ಮತ್ತು ವ್ಯಾಕರಣ
೬. ಸಚಿತ್ರ ಹಸ್ತಪ್ರತಿಗಳು ಸ್ವರೂಪ ಮತ್ತು ಸಂಪಾದನೆ
೭. ದಕ್ಷಿಣ ಕರ್ನಾಟಕ : ಹಸ್ತಪ್ರತಿ ನೆಲೆಗಳು
೮. ಕರಾವಳಿ ಕರ್ನಾಟಕ : ಹಸ್ತಪ್ರತಿ ನೆಲೆಗಳು
೯. ಉತ್ತರ ಕರ್ನಾಟಕ : ಹಸ್ತಪ್ರತಿ ನೆಲೆಗಳು

ಹಸ್ತಪ್ರತಿಶಾಸ್ತ್ರದ ಒಂದು ಭಾಗವಾಗಿರುವ ಗ್ರಂಥಸಂಪಾದನಾ ಶಾಸ್ತ್ರ ಬದಲಾಗುತ್ತಿರುವ ಕಾಲಮಾನದಲ್ಲಿ ತನ್ನ ಗತಿಯನ್ನು ಬದಲಾಯಿಸಿಕೊಂಡು ಬರುತ್ತಿದೆ. *ಈ* ಕೃತಿಯಲ್ಲಿರುವ ಬರಹಗಳು ಗ್ರಂಥಸಂಪಾದನೆಯನ್ನು ಕುರಿತಂತೆ ಸೈದ್ಧಾಂತಿಕ ಚರ್ಚೆಯನ್ನು ಬೆಳೆಸಿದವು ಹಾಗು ಕೆಲವು ಲೇಖನಗಳು ಗ್ರಂಥಸಂಪಾದನಾಶಾಸ್ತ್ರಕ್ಕೆ ಪೂರಕವಾಗುವ ಹಸ್ತಪ್ರತಿಗಳ ಆಕರ, ಸ್ವರೂಪಗಳನ್ನು ಕುರಿತವು. ಗ್ರಂಥಸಂಪಾದನೆಯ ತಾತ್ವಿಕತೆಯ ಬಗ್ಗೆ ಹಾಗು ಹಸ್ತಪ್ರತಿ

ಸರ್ವೇಕ್ಷಣೆ, ಸಂಗ್ರಹ, ಸಂರಕ್ಷಣೆ ದೃಷ್ಟಿಯಿಂದ ನಾಡಿನ ಉತ್ತರ, ದಕ್ಷಿಣ ಮತ್ತು ಕರಾವಳಿ ಕರ್ನಾಟಕದಲ್ಲಿ ಲಭ್ಯವಿರುವ ಹಸ್ತಪ್ರತಿಗಳ ಕುರಿತು ಇಲ್ಲಿ ಲೇಖನಗಳಿವೆ.




**೮೭೧. ಹಸ್ತಪ್ರತಿ ವ್ಯಾಸಂಗ-೨ : ಕನ್ನಡ ಹಸ್ತಪ್ರತಿ ಭಂಡಾರಗಳು**

ಸಂ: ಎಫ್.ಟಿ.ಹಳ್ಳಿಕೇರಿ ಮತ್ತು ಕೆ.ರವೀಂದ್ರನಾಥ

ಪುಟ: xii+೧೨೬, ವರ್ಷ: ೨೦೦೨, ರೂ: ೬೦.೦೦

ಪರಿವಿಡಿ

೧. ಹಸ್ತಪ್ರತಿ ಭಂಡಾರಗಳ ಸ್ವರೂಪ
೨. ಕನ್ನಡ ಹಸ್ತಪ್ರತಿ ಭಂಡಾರಗಳ ನವೀಕರಣ
೩. ಹಸ್ತಪ್ರತಿ ಭಂಡಾರಗಳ ಅಪೂರ್ವತೆ
೪. ಸಂಸ್ಕೃತ ಹಸ್ತಪ್ರತಿಗಳನ್ನೊಳಗೊಂಡ ಭಂಡಾರಗಳು
೫. ಸರ್ಕಾರಿ ಹಸ್ತಪ್ರತಿ ಭಂಡಾರಗಳು
೬. ಸಾರ್ವಜನಿಕ ಹಸ್ತಪ್ರತಿ ಭಂಡಾರಗಳು
೭. ಮಠ ಮಾನ್ಯಗಳ ಹಸ್ತಪ್ರತಿ ಭಂಡಾರಗಳು
೮. ಕನ್ನಡ ಹಸ್ತಪ್ರತಿಗಳು : ಹೊರನಾಡು ಮತ್ತು ವಿದೇಶಗಳಲ್ಲಿ
೯. ಕೇಂದ್ರ ಹಸ್ತಪ್ರತಿ ಭಂಡಾರದ ಅವಶ್ಯಕತೆ

ಹಸ್ತಪ್ರತಿ ಭಂಡಾರಗಳ ಸ್ವರೂಪ, ನವೀಕರಣ ಹಾಗು ಅಪೂರ್ವತೆಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ನಮ್ಮಲ್ಲಿ ಸರಕಾರಿ, ಸಾರ್ವಜನಿಕ, ಮಠಮಾನ್ಯ ಹಾಗು ಹೊರನಾಡು-ವಿದೇಶಗಳಲ್ಲಿರುವ ಹಸ್ತಪ್ರತಿ ಭಂಡಾರಗಳ ಬಗ್ಗೆಯೂ ಇಲ್ಲಿ ಲೇಖನಗಳಿವೆ. ಕೇಂದ್ರ ಹಸ್ತಪ್ರತಿ ಭಂಡಾರದ ಅವಶ್ಯಕತೆಯ ಬಗ್ಗೆ ಇಲ್ಲಿ ಚಿಂತನೆ ನಡೆಸಲಾಗಿದೆ.




**೮೭೨. ಹಸ್ತಪ್ರತಿ ವ್ಯಾಸಂಗ-೩ : ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ**

ಸಂ: ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪ

ಪುಟ: xvi+೧೧೨, ವರ್ಷ: ೨೦೦೨, ರೂ: ೬೦.೦೦

ಪರಿವಿಡಿ

೧. ಕಂಪ್ಯೂಟರ್ ಮತ್ತು ಕನ್ನಡಾಭಿವೃದ್ಧಿ
೨. ಕನ್ನಡ ಭಾಷೆಯ ಕಂಪ್ಯೂಟರ್ ಸಂಸ್ಕರಣ
೩. ಕನ್ನಡದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿ; ಕಂಪ್ಯೂಟರ್‌ನಲ್ಲಿ ಕನ್ನಡ ಕ್ರಾಂತಿ
೪. ಕಂಪ್ಯೂಟರ್ ಮೂಲಕ ಕನ್ನಡ ಹಸ್ತಪ್ರತಿಗಳ ಪುನಾರಚನೆ ಮತ್ತು ಪ್ರಸರಣ
೫. ಕನ್ನಡ ಡಾಟಬೇಸ್‌ಗಳಲ್ಲಿ ಮಾಹಿತಿಯ ಅಳವಡಿಕೆ
೬. ಕಾವ್ಯಾಭ್ಯಾಸಕ್ಕೆ ಕಂಪ್ಯೂಟರ್ ಸಹಾಯ
೭. ಕನ್ನಡ ಜಾನಪದ ಅಧ್ಯಯನದಲ್ಲಿ ಕಂಪ್ಯೂಟರ್ ಬಳಕೆ
೮. ಕನ್ನಡದಲ್ಲಿ ಗಣಕ ಕ್ರಿಯೆ
೯. ಕಂಪ್ಯೂಟರ್‌ಗಳೂ; ಕನ್ನಡ ಅಭಿವೃದ್ಧಿಯೂ
೧೦. ಕಂಪ್ಯೂಟರ್ ಕೈಬರಹವನ್ನು ಅರ್ಥೈಸಬಲ್ಲದೆ

ಸಮಕಾಲೀನ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಸವಾಲುಗಳೊಂದಿಗೆ ಹಸ್ತಪ್ರತಿಗಳು ನಡೆಸುವ ಮುಖಾಮುಖಿ ಹಾಗೂ ಆ ಮುಖಾಮುಖಿ ಸ್ಫುರಿಸುವ ಹೊಸ ಅಧ್ಯಯನ ಸಾಧ್ಯತೆಯನ್ನು ಇಲ್ಲಿ ಚರ್ಚಿಸಲಾಗಿದೆ. ಹೊಸ ಕಾಲದ ಸಂವೇದನೆಗೆ ಪೂರಕವಾಗಿ ಹಸ್ತಪ್ರತಿ ಶಾಸ್ತ್ರವನ್ನು ಒಳಪಡಿಸುವುದು ಹಾಗೂ ಕಂಪ್ಯೂಟರ್ ಬಳಕೆಯ ಸಾಧ್ಯಾಸಾಧ್ಯತೆಯನ್ನು ಇಲ್ಲಿನ ಪ್ರಬಂಧಗಳು ವಿವೇಚಿಸುತ್ತವೆ.

**೮೭೩. ಹಸ್ತಪ್ರತಿ ವ್ಯಾಸಂಗ-೪ : ಅಧ್ಯಯನದ ಹೊಸ ಸಾಧ್ಯತೆಗಳು**

ಸಂ: ವೀರೇಶ ಬಡಿಗೇರ ಮತ್ತು ಎಸ್.ಆರ್. ಚನ್ನವೀರಪ್ಪ

ಪುಟ: XIV+೧೯೮, ವರ್ಷ: ೨೦೦೩, ರೂ: ೭೫.೦೦

ಪರಿವಿಡಿ

೧. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಮಹತ್ವ
೨. ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ, ವ್ಯಾಖ್ಯಾನದ ಮಾದರಿಗಳು
೩. ಚರಿತ್ರೆಯ ಋಣಭಾರದಿಂದ ಬಿಡುಗಡೆ
೪. ಹೊರನಾಡಿನ ಕನ್ನಡ ಹಸ್ತಪ್ರತಿಗಳ ಸಂಗ್ರಹ ಮತ್ತು ಸ್ವರೂಪ
೫. ಹಸ್ತಪ್ರತಿ ಸಂಗ್ರಹ, ಸಂಪಾದನೆ-ವ್ಯಾಖ್ಯಾನ-ಅಧ್ಯಯನದ ಮಾದರಿಗಳು: ಒಂದು ಟಿಪ್ಪಣಿ
೬. ಹಸ್ತಪ್ರತಿ ಅಧ್ಯಯನದ ಸಾಂಸ್ಕೃತಿಕ ಸವಾಲುಗಳು; ಹಸ್ತಪ್ರತಿ ಅಧ್ಯಯನಕ್ಕಿರಬೇಕಾದ ತಿಳುವಳಿಕೆಗಳು
೭. ಪ್ರತಿಲಿಪಿಕರಣ: ಕನ್ನಡ ಸಂಸ್ಕೃತಿ ಮತ್ತು ಸಾಮಾಜಿಕ ಸಂದರ್ಭ
೮. ಹಸ್ತಪ್ರತಿಶಾಸ್ತ್ರ ಸಮಕಾಲೀನ ನಿರೀಕ್ಷೆ; ಹಸ್ತಪ್ರತಿಕಾರರ ಭಾಷಿಕ ನೆಲೆ; ಹಸ್ತಪ್ರತಿಗಳ ಸಾಂಸ್ಕೃತಿಕ ಮಹತ್ವ; ಹಸ್ತಪ್ರತಿಗಳ ವಿಷಯಗಳ ಅಭಿಸರಣ
೯. ಹಸ್ತಪ್ರತಿಗಳ ಅಧ್ಯಯನದಲ್ಲಿ ಕಂಪ್ಯೂಟರ್ ಬಳಕೆ; ಕಾಗದರಹಿತ ಸಮಾಜದತ್ತ; ಕನ್ನಡ ಹಸ್ತಪ್ರತಿಗಳ ಗಣಕೀಕರಣ; ಹಸ್ತಪ್ರತಿ ಅಧ್ಯಯನದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ
೧೦. ಹಸ್ತಪ್ರತಿಗಳು : ನಿರ್ಜೀವ ವಸ್ತುಗಳಲ್ಲ

ಹಸ್ತಪ್ರತಿ ಸಂಗ್ರಹ, ಸಂಪಾದನೆ ಹಾಗೂ ವ್ಯಾಖ್ಯಾನದ ಮಾದರಿಗಳು, ಹಸ್ತಪ್ರತಿಗಳ ಅಧ್ಯಯನದ ಸಾಂಸ್ಕೃತಿಕ ಮಹತ್ವ, ಕನ್ನಡ ಹಸ್ತಪ್ರತಿಗಳ ಮತ್ತು ಆಧುನೀಕರಣದ ನೆಲೆಗಳು ಹೀಗೆ ಮೂರು ರೀತಿಯ ಚೌಕಟ್ಟಿನೊಳಗೆ, ನಾಡಿನ ವಿವಿಧ ಅಧ್ಯಯನ ಕ್ಷೇತ್ರದ ವಿದ್ವಾಂಸರಿಂದ ಪರಿಣತರಿಂದ ಮಂಡಿತವಾದ ಪ್ರಬಂಧ ಚರ್ಚೆಗಳು *ಈ* ಸಂಕಲನದಲ್ಲಿ ಅಡಕಗೊಂಡಿವೆ.

**೮೭೪. ಹಸ್ತಪ್ರತಿ ವ್ಯಾಸಂಗ : ಸಂಪುಟ ೫**

ಸಂ: ವೀರೇಶ ಬಡಿಗೇರ

ಪುಟ: ೧೮+೧೯೬, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಶಬ್ದದ ಅರ್ಥದ ಕುರಿತು ತಪಸ್ಸು ಮುಖ್ಯ
೨. ಹಸ್ತಪ್ರತಿಗಳ ಅಧ್ಯಯನದ ಅವಶ್ಯಕತೆ ಮತ್ತು ಮಹತ್ವ
೩. ಗ್ರಂಥಸಂಪಾದನೆ ಮತ್ತು ಮೋಗ್ಲಿಂಗ್
೪. ಕೊಡಗಿನ ಸಾಂಸ್ಕೃತಿಕ ಚರಿತ್ರೆ ಮತ್ತು ಮೋಗ್ಲಿಂಗ್
೫. ಮೌಖಿಕ ಸಾಹಿತ್ಯ ಸಂಪಾದನೆ ಮತ್ತು ಮೋಗ್ಲಿಂಗ್
೬. ಕನ್ನಡ ಗ್ರಂಥಸಂಪಾದನೆ, ಕನ್ನಡ ಪತ್ರಿಕೋದ್ಯಮ ಮತ್ತು ಮೋಗ್ಲಿಂಗ್
೭. ಅಖಂಡ ಕರ್ನಾಟಕದ ಮೊದಲ ಕಲ್ಪನೆ : ಮೋಗ್ಲಿಂಗ್
೮. ಕರ್ನಾಟಕದಲ್ಲಿ ಬಾಸೆಲ್ ಮಿಷನ್ ಸಾಧನೆ
೯. ಪಠ್ಯದ ಚಲನಶೀಲತೆ
೧೦. ಗ್ರಂಥಸಂಪಾದನೆ ಹಿಂದಿನ ಮನೋಧರ್ಮಗಳು

ಕನ್ನಡ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ದೃಷ್ಟಿಯಿಂದ ಆರಂಭದ ಪ್ರವರ್ತಕರಲ್ಲಿ ಮುಖ್ಯರಾದ ಹೆರ್ಮನ್ ಮೋಗ್ಲಿಂಗ್ ಬಗ್ಗೆ ವಿಶೇಷವಾದ ಮತ್ತು ಅಧ್ಯಯನಶೀಲವಾದ ಪ್ರಬಂಧಗಳು ಇಲ್ಲಿ ಸಂಕಲನಗೊಂಡಿವೆ. ಮೋಗ್ಲಿಂಗ್ ಅವರ ಸಂಪಾದನೆಯ ಸ್ವರೂಪ ಮತ್ತು ಮಾದರಿಗಳನ್ನು ಇಲ್ಲಿ ವಿಶೇಷವಾಗಿ ಚರ್ಚಿಸಿದ್ದು, ಗ್ರಂಥಸಂಪಾದನೆಯ ಹಿಂದಿನ ಮನೋಧರ್ಮ ಕುರಿತ ವಿಶಿಷ್ಟ ಸಂವಾದ ಕೂಡಾ ಇಲ್ಲಿದೆ. ಹೀಗಾಗಿ ಒಂದೆಡೆ ಹಸ್ತಪ್ರತಿ ಪರಂಪರೆ ಮತ್ತು ಮೋಗ್ಲಿಂಗ್ ಕುರಿತ ಚರ್ಚೆ, ಮತ್ತೊಂದೆಡೆ ಗ್ರಂಥಸಂಪಾದನೆಯನ್ನು ಹೊಸದಾಗಿ ಪುನರ್ ನಿರ್ಮಿಸುವ ಆಧುನಿಕ ದೃಷ್ಟಿಕೋನ ಇವರೆಡೂ *ಈ* ಗ್ರಂಥದಲ್ಲಿ ಪ್ರತಿಫಲನಗೊಂಡಿರುವುದು *ಈ* ಕೃತಿಯ ವಿಶೇಷ.

**೮೭೫. ಹಸ್ತಪ್ರತಿ ವ್ಯಾಸಂಗ : ಸಂಪುಟ ೬**

ಸಂ: ಎಸ್.ಆರ್.ಚನ್ನವೀರಪ್ಪ

ಪುಟ: ೧೬+೧೩೬, ವರ್ಷ: ೨೦೦೬, ರೂ: ೬೦




ಪರಿವಿಡಿ

೧. ಹಸ್ತಪ್ರತಿ ಅಧ್ಯಯನ: ವಸಾಹತುಶಾಹಿ ಧೋರಣೆ
೨. ಕರ್ನಾಟಕದಲ್ಲಿ ಹಸ್ತಪ್ರತಿ ಸಂಗ್ರಹ ಮತ್ತು ಸಂರಕ್ಷಣೆ
೩. ಹಸ್ತಪ್ರತಿ ಅಧ್ಯಯನ: ಪ್ರಸ್ತುತತೆ, ಮಹತ್ವ
೪. ಕೆ.ಜಿ.ಕುಂದಣಗಾರ: ಪರಂಪರೆ ನಿರ್ಮಾಣ ಮತ್ತು ಸಂಸ್ಕೃತಿ ಮುಖಿ ಸಂಕಥನ
೫. ಕೆ.ಜಿ.ಕುಂದಣಗಾರ: ಪ್ರಾಚ್ಯಶೋಧಗಳ ಬಹುಮುಖಿ ಆಯಾಮ
೬. ಕೆ.ಜಿ.ಕುಂದಣಗಾರ: ಸೃಜನ ವಿಮರ್ಶೆಯ ನೆಲೆಗಳು
೭. ಕೆ.ಜಿ.ಕುಂದಣಗಾರ: ಬೋಧನೆ-ಗ್ರಂಥಸಂಪಾದನೆ-ಸಾಧನೆ
೮. ಎನ್.ಬಸವರಾಧ್ಯ ಕೊಡುಗೆ-ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಕ್ಷೇತ್ರಕ್ಕೆ ಸಂಸ್ಕೃತಿಮುಖಿ, ಚಾರಿತ್ರಿಕ, ಭಾಷಿಕ
೯. ಕನ್ನಡ ಹಸ್ತಪ್ರತಿಗಳು: ಸಂಸ್ಕೃತಿಮುಖಿ, ಚಾರಿತ್ರಿಕ, ಭಾಷಿಕ ಸಂಕಥನ
೧೦. ಬೆಳಗಾವಿ ಜಿಲ್ಲೆಯ ಹಸ್ತಪ್ರತಿ ಸಂಪತ್ತು

ಕನ್ನಡದ ಪ್ರಮುಖ ಸಂಶೋಧಕ ಪ್ರೊ.ಕೆ.ಜಿ.ಕುಂದಣಗಾರರ ಸಮಗ್ರ ಸಾಹಿತ್ಯವನ್ನು ಮೊದಲ ಬಾರಿಗೆ ಚರ್ಚೆಗೊಳಪಡಿಸಿರುವುದು *ಈ* ಸಂಕಲನದ ವಿಶೇಷತೆ. ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಭಾಷಿಕ ಸಂಕಥನದ ಅನನ್ಯತೆಯನ್ನು ತಿಳಿಸುವ ಇಲ್ಲಿನ ಲೇಖನಗಳು ಅಧ್ಯಯನಕಾರರಿಗೆ ದಿಕ್ಸೂಚಿಯಂತಿವೆ.

**೮೭೬. ಹಸ್ತಪ್ರತಿ ವ್ಯಾಸಂಗ : ಸಂಪುಟ ೭**

ಸಂ: ಎಫ್.ಟಿ. ಹಳ್ಳಿಕೇರಿ

ಪುಟ: xii+೨೧೪, ವರ್ಷ: ೨೦೦೬, ರೂ: ೮೦

ಪರಿವಿಡಿ

೧. ಫ.ಗು.ಹಳಕಟ್ಟಿ ಸಾಹಿತ್ಯ ಸಂರಕ್ಷಣೆ
೨. ಲೌಕಿಕ ಶಾಸ್ತ್ರ ಸಾಹಿತ್ಯ ಹಸ್ತಪ್ರತಿಗಳು
೩. ಬಿಜಾಪುರ ಜಿಲ್ಲೆಯ ಹಸ್ತಪ್ರತಿ ಸಂಪತ್ತು
೪. ಹಸ್ತಪ್ರತಿ ಗ್ರಂಥಸಂಪಾದನಾಶಾಸ್ತ್ರಗಳಿಗೆ : ಡಾ. ಎಂ.ಎಂ. ಕಲಬುರ್ಗಿ ಅವರ ಸಾಧನೆ

**೮೭೭. ಹಸ್ತಪ್ರತಿ ವ್ಯಾಸಂಗ : ಸಂಪುಟ ೮**

ಸಂ: ಎಫ್.ಟಿ. ಹಳ್ಳಿಕೇರಿ

ಪುಟ: xii+೨೩೨, ವರ್ಷ: ೨೦೦೮, ರೂ: ೧೦೦




ಪರಿವಿಡಿ

೧. ಆರ್.ನರಸಿಂಹಚಾರ್ ಸಾಹಿತ್ಯ ಸಂಸ್ಮರಣೆ

೨. ಲೌಕಿಕಶಾಸ್ತ್ರ ಹಸ್ತಪ್ರತಿಗಳು

೩. ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು

ಆರ್. ನರಸಿಂಹಾಚಾರ್ ಸಾಹಿತ್ಯ ಸಂಸ್ಮರಣೆ, ಲೌಕಿಕಶಾಸ್ತ್ರ ಹಸ್ತಪ್ರತಿಗಳು, ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಶ್ರೀ ಬಿ.ಎಸ್.ಸಣ್ಣಯ್ಯನವರ ಸಾಧನೆ ಕುರಿತು ವಿಶೇಷ ಉಪನ್ಯಾಸ ಹಾಗೂ ಹಿರಿಯ ವಿದ್ವಾಂಸರಾದ ಪ್ರೊ. ಸಿ.ಮಹಾದೇವಪ್ಪನವರ ಸಮಾರೋಪ ಭಾಷಣ ಹೀಗೆ ಐದು ಭಾಗಗಳನ್ನು *ಈ* ಸಂಪುಟವು ಒಳಗೊಂಡಿದೆ. ಕನ್ನಡ ಕವಿಚರಿತೆಕಾರರಾದ ಡಾ. ಆರ್. ನರಸಿಂಹಾಚಾರ್ ಅವರ ಸಮಗ್ರ ಸಾಹಿತ್ಯವನ್ನು ಹೊಸದೃಷ್ಟಿ ಕೋನದಿಂದ ಇಲ್ಲಿ ಚರ್ಚಿಸಲಾಗಿದೆ. ಗಜಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಕಾಮಶಾಸ್ತ್ರ ಹಾಗೂ ರಟ್ಟಮತಶಾಸ್ತ್ರಗಳ ಕುರಿತ ಸಂಪ್ರಬಂಧಗಳು *ಈ* ಗ್ರಂಥದಲ್ಲಿವೆ. *ಈ* ಸಂಪುಟವು ಹಸ್ತಪ್ರತಿ ಶಾಸ್ತ್ರದ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಸಹಾಯಕಾರಿಯಾಗಿದೆ.

**ಕ**ನ್ನಡ ವಿಶ್ವವಿದ್ಯಾಲಯ ತನ್ನ ಅಸ್ತಿತ್ವದ ೧೩ ವರ್ಷಗಳಲ್ಲಿ ಕನ್ನಡ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಕಣ್ಣುಕುಕ್ಕುವ ಸಾಧನೆಯನ್ನು ಮಾಡಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಒಟ್ಟು ಸಂಶೋಧನೆಗಳ ಸ್ವರೂಪ, ವಿಸ್ತಾರ, ಗಾಂಭೀರ್ಯ ಮತ್ತು ಔನ್ನತ್ಯಗಳಲ್ಲಿ ಮಹತ್ವದ ಸ್ಥಾನವನ್ನು *ಈ*ಗಾಗಲೇ ಪಡೆದಿದೆ. ಆಧುನಿಕ ಜಗತ್ತಿನ ಎಲ್ಲ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಭಿವ್ಯಕ್ತಿಸಲು ಅತ್ಯಂತ ಸಮರ್ಥವೂ ಮತ್ತು ಅರ್ಥಪೂರ್ಣವೂ ಆದ ಮಾಧ್ಯಮನ್ನಾಗಿ ಕನ್ನಡ ಭಾಷೆಯನ್ನು ರೂಪಿಸಲು, ಹೊಸ ಜ್ಞಾನ ವಿಜ್ಞಾನ ಭಾಷೆಯನ್ನು ಎರಕ ಹೊಯ್ಯಲು ಅತ್ಯಂತ ಗಂಭೀರವಾಗಿ ಇಲ್ಲಿನ ವಿದ್ವಾಂಸರು ತೊಡಗಿಕೊಂಡಿದ್ದಾರೆ. ಇವುಗಳ ಫಲರೂಪವಾಗಿ ವಿವಿಧ ಜ್ಞಾನ, ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು ೮೦೦ ಕೃತಿಗಳನ್ನು ವಿಶ್ವ ವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದೆ.

ನಮ್ಮ ವಿಶ್ವವಿದ್ಯಾಲಯದ ಸಹಾಯಕ ಗ್ರಂಥಪಾಲಕರಾಗಿರುವ ಡಾ. ಎಚ್. ನಾಗವೇಣಿ ಅವರು "ತಿರುಳು ತೋರಣ" ಎಂಬ ಹೆಸರಿನ *ಈ* ಪುಟ್ಟ ಕೃತಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ೧೦ ವರ್ಷಗಳಲ್ಲಿ ಪ್ರಕಟಿಸಿದ ಪುಸ್ತಕಗಳ ಮಾಹಿತಿಯನ್ನು ತುಂಬ ಪರಿಶ್ರಮದಿಂದ ಇಲ್ಲಿ ಒದಗಿಸಿಕೊಟ್ಟಿದ್ದಾರೆ. ೩೭ ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಪುಸ್ತಕಗಳ ಕಿರುಪರಿಚಯ *ಈ* ಪುಸ್ತಕಾಭ್ಯಾಸಿಗಳಿಗೆ ಆಕರ್ಷಕವಾದ ಪ್ರವೇಶದ್ವಾರವಾಗಿದೆ. *ಈ* ಗ್ರಂಥಸೂಚಿ ನಮ್ಮ ವಿಶ್ವವಿದ್ಯಾಲಯದ ಪ್ರಕಟಣೆಗಳ ಒಂದು ವಿಹಂಗಮ ನೋಟವನ್ನು ನಮ್ಮೆದುರು ವಿಸ್ಮಯಕಾರಿಯಾಗಿ ತೆರೆದಿಡುತ್ತದೆ. ಲೇಖಕರ ವಿಸ್ತಾರವಾದ ಓದನ್ನು, ಕೃತಿಗಳ ಸಾರವನ್ನು ಕೆಲವೇ ವಾಕ್ಯಗಳಲ್ಲಿ ಹಿಡಿದಿಡುವ ಗ್ರಹಿಕಾ ಕೌಶಲವನ್ನು, ಕಿರಿದರಲ್ಲಿ ಹಿರಿದರ್ಥವನ್ನು ವ್ಯಂಜಿಸುವ ಭಾಷಾ ಕೌಶಲವನ್ನು, ಸೂಕ್ಷ್ಮ ವಿಮರ್ಶಾ ಪ್ರಜ್ಞೆಯನ್ನು ಮತ್ತು ಗ್ರಂಥ ವಿಜ್ಞಾನದ ಅರಿವಿನ ಆಳವನ್ನು *ಈ* ಕೃತಿ ಬಿಂಬಿಸುತ್ತದೆ. ಇಂಥ ಕೃತಿಯನ್ನು ವಿನ್ಯಾಸಗೊಳಿಸುವ ಮೂಲಕ ಕನ್ನಡ ವಿಶ್ವವಿದ್ಯಾಲಯದ ಪ್ರಕಟಣ ಪ್ರಪಂಚಕ್ಕೆ ಒಂದು ಅರ್ಥಪೂರ್ಣ ಕಿಟಕಿಯನ್ನು ತೆರೆದಿರುವ ಡಾ. ಎಚ್. ನಾಗವೇಣಿ ಅವರ ಸದುದ್ದೇಶ, ಶ್ರಮಶೀಲತೆ ಮತ್ತು ಸದಭಿರುಚಿಗಳನ್ನು ನಾನು ಅಭಿನಂದಿಸುತ್ತೇನೆ.

**ಡಾ.ಎಚ್.ಜೆ. ಲಕ್ಕಪ್ಪಗೌಡ**

ಕುಲಪತಿಯವರು



# ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆ(೧೯೯೨-೨೦೦೨)ಗಳ ವಿವರಣಾತ್ಮಕ ಗ್ರಂಥಸೂಚಿ

**ಡಾ. ಎಚ್. ನಾಗವೇಣಿ**

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ